ಶ್ರೀಯುತ ಎಸ್. ವಿಠ್ಠಲಶಾಸ್ತ್ರಿ ವಿರಚಿತ

# ವೇದಾಂತಲೇಖನಮಾಲೆ



ವೇದಾಂತಶಿರೋಮಣಿ ಆಸ್ಥಾನವಿದ್ವಾನ್

ಶ್ರೀಯುತ ಎಸ್. ವಿಠ್ಠಲಶಾಸ್ತ್ರಿಗಳು

(ಶ್ರೀ ಶ್ರೀ ಜ್ಞಾನಾನಂದೇಂದ್ರಸರಸ್ವತೀ ಸ್ವಾಮಿಗಳು)

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯದಿಂದ ಶ್ರೀ ಶಂಕರ ಭಗವತ್ಪಾದರು ಸರ್ವದಾ ಸ್ಮರಣೀಯರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು- ವೈ. ಸುಬ್ಬರಾಯರು, ಜನನ 5.1.1880) ಶ್ರೀಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ-ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದಧೂಳನ್ನು ತೊಡೆದು ಶಾಂಕರ ವೇದಾಂತದ ನೈಜತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಅಭಿನವಶಂಕರರಾದರು.

‘ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು’ ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು ‘ಪುರುಷ ಸರಸ್ವತೀ’ ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರಕರಾದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮದ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿ ಮಹಾಸ್ವಾಮಿಗಳವರಿಂದ ಕಾಲಟಿಯಲ್ಲಿಯೇ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ. ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ. ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹೀ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥
'' ಓಂ ನಮೋ ಭಗವತೇ ಸಚ್ಚಿದಾನಂದಾಯ ''

ಶ್ರೀಯುತ ವಿಠ್ಠಲಶಾಸ್ತ್ರೀ ವಿರಚಿತ

# ವೇದಾಂತ ಲೇಖನಮಾಲೆ

ಕ್ರಮಾಂಕ : ............

Price List Catalog Sl.No. ...........


**ಅಧ್ಯಾತ್ಮಪ್ರಕಾಶಕಾರ್ಯಾಲಯ**

**ಹೊಳೆನರಸೀಪುರ-573211**

**ದೂರವಾಣಿ : 08175-273820**

www.adhyatmaprakasha.org

email: secretary@adhyatmaprakasha.org

**ಬೆಂಗಳೂರು ಶಾಖೆ**

**ನಂ. 68, (ಹೊಸ ನಂ.6), 6ನೇ ಮುಖ್ಯ ರಸ್ತೆ ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,**

**ತ್ಯಾಗರಾಜನಗರ, ಬೆಂಗಳೂರು - 560 028. ದೂರವಾಣಿ : 26765548**

email: shankara.bhaskara@gmail.com

**2021**

.......................... Written by ..........................................

Printed & Published by **Adhyatma Prakasha Karyalaya,**
Holenarasipura - 573211, India.

Phone : **08175-273820**
website : www.adhyatmaprakasha.org
email : secretary@adhyatmaprakasha.org

**ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು**

All Rights Reserved

**ಮೊದಲನೆಯ ಮುದ್ರಣ : 2020 - 500 ಪ್ರತಿಗಳು**

**ಮುದ್ರಣ ಕಾಗದ : 70 GSM NS Maplitho**

**ಪುಟಗಳು** : VIII + 394 = 402

**ಬೆಲೆ : ರೂ. .........**

***ಪ್ರತಿಗಳು ದೊರೆಯುವ ಸ್ಥಳ :***
**ಅಧ್ಯಾತ್ಮಪ್ರಕಾಶಕಾರ್ಯಾಲಯ**
**ಹೊಳೆನರಸೀಪುರ-573211**
**ದೂರವಾಣಿ : 08175-273820**
**ಬೆಂಗಳೂರು ಶಾಖೆ :**
ತ್ಯಾಗರಾಜನಗರ, ಬೆಂಗಳೂರು-560 028.
ದೂರವಾಣಿ : 080-26765548

***ಅಕ್ಷರ ಜೋಡಣೆ :***
**ಜ್ಯೋತಿ ಸುನೀಲ್,**
**ಮೊ : 9845321029, ಬೆಂಗಳೂರು-78**

***ಮುದ್ರಣ ಸ್ಥಾನ :***
**ಶ್ರೀರಾಮ ಪ್ರಿಂಟರ್ಸ್,**
ನಂ. 25, 15ನೇ ಕ್ರಾಸ್, 5ನೇ ಮೇನ್, ಶ್ರೀನಿಧಿ ಲೇಔಟ್,
ಬೆಂಗಳೂರು-2. **ಮೊಬೈಲ್ : 98453 46197**

# ವಿಷಯಾನುಕ್ರಮಣಿಕೆ


| | ವಿಷಯ | ಸಂ-ಸಂ-ವ | ಪುಟ |
|---|---|---|---|
| 1. | ವೇದಾಂತದರ್ಶನದ ಹೆಚ್ಚುಗಾರಿಕೆ | 4-12-1933 | 01 |
| 2. | ಗೀತೆಯ ಉಪದೇಶ | 4-7-1933 | 02 |
| 3. | ಗೀತೋಪದೇಶವು ಯಾರಿಗೆ ಒಗ್ಗುವದಿಲ್ಲ? | 4-9/10-1933 | 04 |
| 4. | ಗೀತೋಪದೇಶವು ಯಾರಿಗೆ ರುಚಿಸುವದು | 5-4-1933 | 07 |
| 5. | ಭಗವದ್ಗೀತೆಯಲ್ಲಿ ಸರ್ವಶ್ರೇಷ್ಠಶ್ಲೋಕ | 3-4-1931 | 09 |
| 6. | ಭಗವದ್ಗೀತೆಯ ಕೇಂದ್ರ | 5-7-1934 | 12 |
| 7. | ಗೀತೋಕ್ತಯೋಗವಿಭಾಗ | 5-9-1934 | 14 |
| 8. | ಕರ್ಮಯೋಗದ ಮೆಟ್ಟಿಲುಗಳು | 5-10/11-1934 | 15 |
| 9. | ಕರ್ಮಯೋಗದ ರಹಸ್ಯ | 6-1-1975 | 17 |
| 10. | ಕರ್ಮವನ್ನು ಮಾಡುವದರಲ್ಲಿ ನಿಯಮಗಳು | 6-3-1934 | 19 |
| 11. | ಕರ್ಮವನ್ನು ಮಾಡುವದು ಮೇಲೊ? ಬಿಡುವದು ಮೇಲೊ? | 6-3-1934 | 21 |
| 12. | ಕರ್ಮವನ್ನು ಬಿಡುವರೀತಿ | 6-5-1935 | 23 |
| 13. | ಧ್ಯಾನಯೋಗ | 6-7-1935 | 24 |
| 14. | ಅಭ್ಯಾಸಯೋಗ | 43-4-1935 | 27 |
| 15. | ಪರಮಾತ್ಮನ ವಿಶ್ವರೂಪಧ್ಯಾನ | 43-6-1974 | 28 |
| 16. | ಭಕ್ತಿಯೋಗ | 6-8-1935 | 29 |
| 17. | ಭಕ್ತಿಯೋಗದ ಮಹಿಮೆ | 6-10/11-1935 | 31 |
| 18. | ಜ್ಞಾನಯೋಗ | 7-2-1935 | 34 |
| 19. | ಜ್ಞಾನಯೋಗದ ಪರಮಾವಧಿ | 7-4-1935 | 37 |
| 20. | ಜ್ಞಾನಿಯ ವ್ಯವಹಾರ | 7-5-1936 | 39 |
| 21. | ಗೀತೋಪದೇಶದ ಸಂಕ್ಷೇಪ | 7-6-1936 | 41 |

| | | | |
|---|---|---|---|
| 22. | ಭಗವದ್ಗೀತೆಯ ಮಹತ್ವ | 14-6-1946 | 44 |
| 23. | ಅಧ್ಯಾತ್ಮವಿದ್ಯೆಗೆ ಅಕರ್ಮಣ್ಯತೆ ಗುರುತಲ್ಲ | 32-5-1962 | 46 |
| 24. | ಅದ್ವೈತದರ್ಶನದ ಹೆಚ್ಚುಗಾರಿಕೆ | 7-10-1936 | 49 |
| 25. | ಅದ್ವೈತವಿಷಯದಲ್ಲಿ ಪ್ರಶ್ನೋತ್ತರಗಳು | 7-7/8-1936 | 55 |
| 26. | ಬ್ರಹ್ಮವಿದ್ಯೆಯ ಹೆಚ್ಚುಗಾರಿಕೆ | 16-1-1946 | 64 |
| 27. | ಬ್ರಹ್ಮವಿದ್ಯೆಯೂ ಅವಿದ್ಯೆಯೂ | 16-2-1946 | 69 |
| 28. | ಅವಿದ್ಯೆಯಿಂದಾಗುವ ಅನರ್ಥಗಳು | 16-7-1947 | 74 |
| 29. | ಬ್ರಹ್ಮಜ್ಞಾನ | 16-7-1947 | 77 |
| 30. | ಬ್ರಹ್ಮಜ್ಞಾನದ ಪ್ರಯೋಜನ | 16-8-1947 | 81 |
| 31. | ಬ್ರಹ್ಮಜ್ಞಾನಕ್ಕೆ ಸಾಧನಗಳು | 16-9-1947 | 86 |
| 32. | ಬ್ರಹ್ಮದ ಲಕ್ಷಣ | 18-2-1948 | 91 |
| 33. | ಬ್ರಹ್ಮವು ನಮ್ಮೆಲ್ಲರ ಆತ್ಮನು | 18-3-1948 | 94 |
| 34. | ಬ್ರಹ್ಮವೊಂದೇ ಸತ್ಯ | 18-6-1949 | 98 |
| 35. | ಮಿಥ್ಯೆ ಎಂದರೇನು? | 18-8-1949 | 102 |
| 36. | ಶಾಸ್ತ್ರದೃಷ್ಟಿ | 18-9-1949 | 106 |
| 37. | ಶಾಸ್ತ್ರದೃಷ್ಟಿಯ ಅವಲಂಬನೆ | 18-11-1949 | 109 |
| 38. | ಶಾಸ್ತ್ರದೃಷ್ಟಿಯಿಂದಾಗುವ ಬ್ರಹ್ಮಜ್ಞಾನ | 20-1-1950 | 113 |
| 39. | ಪರಮಾತ್ಮ | 19-5-1950 | 118 |
| 40. | ಸಾಕ್ಷಿ | 21-4-1951 | 122 |
| 41. | ಬ್ರಹ್ಮಜ್ಞಾನವಿಧಿ | 22-8-1952 | 127 |
| 42. | ವಿದ್ಯೆಯಿಂದ ಅವಿದ್ಯಾನಿವೃತ್ತಿ | 37-3-1967 | 130 |
| 43. | ಜ್ಞಾನಸಾಧನಗಳು | 37-4-1967 | 136 |
| 44. | ವಿದ್ಯಾವಿದ್ಯೆಗಳೂ ಸತ್ಯಾನೃತಗಳೂ | 17-9-1968 | 140 |
| 45. | ಶಾಂಕರಾದ್ವೈತದಲ್ಲಿ ಅವಿದ್ಯೆ ಎಂದರೇನು? | 42-3-1972 | 142 |
| 46. | ಅಭಿನವಶಂಕರಾಲಯದಲ್ಲಿ ಉಪನ್ಯಾಸಗಳು | 11-2/3-1939 | 144 |

| | | | |
|---|---|---|---|
| 47. | ಶಂಕರಾಚಾರ್ಯರೂ ಅವರ ವ್ಯಾಖ್ಯಾನಗಳು | 12-7-1941 | 155 |
| 48. | ಈ ನಮ್ಮೆಲ್ಲರ ಆತ್ಮನೇ ಬ್ರಹ್ಮವು | 45-12-1976 | 161 |
| 49. | ಮೋಕ್ಷದ ಸ್ವರೂಪ | 73-9-2004 | 164 |
| 50. | ವಿಶಿಷ್ಟಾದ್ವೈತಸಿದ್ಧಾಂತ | 3-2-1931 | 168 |
| 51. | ಯಾಮುನಮುನಿಕೃತ ಗೀತಾರ್ಥಸಂಗ್ರಹ | 12-1-1940 | 174 |
| 1. | ಗೀತೆಯ ಪೂರ್ವಷಟ್ಕ | 12-2-1940 | 178 |
| 2. | ಗೀತೆಯ ಮಧ್ಯಮಷಟ್ಕ | 12-3-940 | 179 |
| 3. | ಗೀತೆಯ ಅಂತಿಮಷಟ್ಕ | 12-4-940 | 180 |
| 4. | ಗೀತಾಶಾಸ್ತ್ರದ ಅವತರಣಿಕೆ | 12-5-1941 | 181 |
| 5. | ಎರಡನೆಯ ಅಧ್ಯಾಯ | 12-6-1941 | 183 |
| 6. | ಮೂರನೆಯ ಅಧ್ಯಾಯ | 12-7-1941 | 184 |
| 7. | ನಾಲ್ಕನೆಯ ಅಧ್ಯಾಯ | 12-8-1941 | 185 |
| 8. | ಐದನೆಯ ಅಧ್ಯಾಯ | 12-9-1941 | 187 |
| 9. | ಆರನೆಯ ಅಧ್ಯಾಯ | 12-10-1941 | 189 |
| 10. | ಏಳನೆಯ ಅಧ್ಯಾಯ | 12-11-1941 | 190 |
| 11. | ಎಂಟನೆಯ ಅಧ್ಯಾಯ | 12-12-1941 | 191 |
| 12. | ಒಂಬತ್ತನೆಯ ಅಧ್ಯಾಯ | 13-2-1941 | 192 |
| 13. | ಹತ್ತು-ಹನ್ನೊಂದನೆಯ ಅಧ್ಯಾಯ | 13-3-1941 | 193 |
| 14. | ಹನ್ನೆರಡನೆಯ ಅಧ್ಯಾಯ | 13-4-1941 | 194 |
| 15. | ಹದಿಮೂರನೆಯ ಅಧ್ಯಾಯ | 13-5-1942 | 195 |
| 16. | ಹದಿನಾಲ್ಕನೆಯ ಅಧ್ಯಾಯ | 13-8-1942 | 196 |
| 17. | ಹದಿನೈದು-ಹದಿನಾರನೆಯ ಅಧ್ಯಾಯ | 13-9-1942 | 198 |
| 18. | ಹದಿನೇಳನೆಯ ಅಧ್ಯಾಯ | 13-10-1942 | 199 |
| 19. | ಹದಿನೆಂಟನೆಯ ಅಧ್ಯಾಯ | 13-12-1942 | 199 |
| 20. | ಯೋಗತ್ರಯ | 14-1-1942 | 200 |

| | | | |
|---|---|---|---|
| 21. | ಯೋಗತ್ರಯವೂ ಆತ್ಮದರ್ಶನವೂ | 14-2-1942 | 202 |
| 22. | ಯೋಗತ್ರಯಕ್ಕೆ ಫಲ | 14-3-1942 | 203 |
| 23. | ಗೀತೆಯ ಪ್ರಧಾನೋಪದೇಶ | 14-4-1942 | 204 |
| 52. | ಶ್ರೀಮನ್ಮಧ್ವಾಚಾರ್ಯರ ಸಿದ್ಧಾಂತ | 3-5-1932 | 206 |
| 53. | ಶ್ರೀಮನ್ಮಧ್ವಾಚಾರ್ಯರ ಭಾಷ್ಯ ಸಮೇತ ಈಶಾವಾಸ್ಯೋಪನಿಷತ್ತು | 14-5-1943 ರಿಂದ 15-4-1943 | 212 |
| 54. | ವೇದಾಂತದಲ್ಲಿ ಯೋಗದ ಸ್ಥಾನ | 21-8-1952 | 231 |
| 55. | ಯೋಗಸಮಾಧಿ | 21-11-1952 | 233 |
| 56. | ಸಮಾಧಿ | 21-12-1952 | 235 |
| 57. | ಸಂರಾಧನ | 21-12-1952 | 236 |
| 58. | ವೇದಾಂತಸಮಾಧಿ | 22-3-1952 | 237 |
| 59. | ವೇದಾಂತಿ | 8-4-1936 | 238 |
| 60. | ಸರ್ವಂ ತ್ಯಜ ದೇವಂ ಭಜ | 7-12-1936 | 239 |
| 61. | ಒಂದು ಸಲ ಬಿತ್ತಿದರೆ ಎಂದೆಂದಿಗೂ ಪೈರು | 8-8-1937 | 244 |
| 62. | ಸದ್ಗತಿತ್ರಯ | 9-3-1937 | 245 |
| 63. | ವೇದೋಕ್ತಕರ್ಮ | 9-5-1938 | 247 |
| 64. | ಸಂಪೂರ್ಣ ಜೀವನ | 10-4-1938 | 249 |
| 65. | ಭಗವತ್ಪ್ರಾಪ್ತಿಗೆ ಉಪಾಯಗಳು | 10-3-1938 | 250 |
| 66. | ಅಂಜಿಕೆಯ ಮೂಲ | 11-1-1939 | 252 |
| 67. | ಭಗವನ್ನಾಮದ ಮಹಿಮೆ | 14-8-1943 | 254 |
| 68. | ಜ್ಞಾನಬಂಧು | 15-8-1944 | 257 |
| 69. | ಯಾರನ್ನು ನಮಸ್ಕರಿಸಬೇಕು | 15-9-1944 | 258 |
| 70. | ವೇದ ಋಷಿ | 16-6-1947 | 260 |
| 71. | ಅಹಂಮತಿ | 17-2-1947 | 261 |
| 72. | ಬಾಲಕರಿಗೆ ವಿದ್ಯಾಭ್ಯಾಸ | 17-11-1947 | 262 |

| | | | |
|---|---|---|---|
| 73. | ಕುಟುಂಬದಲ್ಲಿ ಧಾರ್ಮಿಕವಿದ್ಯಾಭ್ಯಾಸ | 17-12-1948 | 267 |
| 74. | ಶುಚಿಯಾಗುವದು ಹೇಗೆ? | 33-1-1963 | 270 |
| 75. | ಮಡಿ ಮೈಲಿಗೆ | 15-10-1944 | 272 |
| 76. | ಅನುಷ್ಠಾನದ ತಿರುಳು | 16-3-1946 | 274 |
| 77. | ಸಾರ್ವಜನಿಕರಹಿತಕ್ಕಾಗಿ ಅನುಷ್ಠಾನ | 33-4-1963 | 278 |
| 78. | ವಾಗಿಂದ್ರಿಯ ಜಯ | 34-7-1965 | 280 |
| 79. | ಎಚ್ಚರಿಕೆಯಿಂದಿರು | 41-4-1972 | 282 |
| 80. | ಮನುಷ್ಯನ ಅಧೋಗತಿಗೂ ಉತ್ತಮಗತಿಗೂ ಕಾರಣ | 43-2-1973 | 283 |
| 81. | ಅಭ್ಯುದಯ ಸಾಧನ | 43-3-1973 | 286 |
| 82. | ಭಗವದ್ಭಕ್ತಿ | 43-9-1974 | 288 |
| 83. | ಪರಮಾತ್ಮನ ನಾಮಸ್ಮರಣೆಯ ಮಹಿಮೆ | 43-11-1974 | 289 |
| 84. | ಉಪಾಸನೆ - 1 | 44-1-1974 | 290 |
| 85. | ಉಪಾಸನೆ - 2 | 44-2-1974 | 292 |
| 86. | ತ್ವಮೇವ ಸರ್ವಂ ಮಮ ದೇವದೇವ | 44-9-1975 | 293 |
| 87. | ಕರ್ತವ್ಯೋ ಧರ್ಮಸಂಗ್ರಹಃ | 44-12-1975 | 296 |
| 88. | ಕಲ್ಪಸೂತ್ರಗಳು | 17-3-1947 | 298 |
| 89. | ಆಶ್ರಮವಿಷಯಕ್ಕೆ ಆಪಸ್ತಂಬರ ಅಭಿಪ್ರಾಯ | 17-4-1947 | 302 |
| 90. | ಆಪಸ್ತಂಬಸೂತ್ರದಲ್ಲಿ ಅಧ್ಯಾತ್ಮವಿದ್ಯೆ | 17-5-1947 | 305 |
| 91. | ಶ್ರೀಶ್ರೀಗಳವರ ಕಾಲಡಿಯಾತ್ರೆ | 29-7/8/9-1960 | 310 |
| 92. | ಶ್ರೀಶ್ರೀಗಳವರ ದಕ್ಷಿಣದೇಶ ಪ್ರವಾಸ | 35-4/5/6-1966 | 319 |
| 93. | ಶ್ರೀಶ್ರೀಗಳವರ ವಿಶ್ವಭಾರತಪ್ರವಾಸ | 36-6/7/8/9/ 10-1967 | 329 |
| 94. | ಕೆಲವು ವ್ರತಗಳೂ ಅನುಷ್ಠಾನಗಳೂ | 35-1-1965 | 343 |
| 95. | ಶ್ರೀಕೃಷ್ಣಜನ್ಮಾಷ್ಟಮಿ | 3-1-1931 | 345 |

| | | | |
|---|---|---|---|
| 96. | ಭೀಷ್ಮಾಚಾರ್ಯರು | 3-6-1932 | 349 |
| 97. | ಶಿವರಾತ್ರಿ | 3-7-1932 | 351 |
| 98. | ಅನಂತನವ್ರತ | 4-1-1932 | 353 |
| 99. | ಉಪಾಕರ್ಮ | 7-1-1935 | 357 |
| 100. | ವಾಮನಜಯಂತಿ | 19-1-1937 | 360 |
| 101. | ಆಯುರ್ವೇದ | 3-3-1931 | 361 |
| 102. | ಸಾವಿನ ಅಂಜಿಕೆಯನ್ನು ತೊಲಗಿಸುವ ವಿಜ್ಞಾನ | 12-8-1941 | 364 |
| 104. | ಸಾಧನದ ಅವಶ್ಯಕತೆ | 13-7-1942 | 366 |
| 102. | ನಲಂದದ ವಿಶ್ವವಿದ್ಯಾನಿಲಯ | 18-7-1949 | 370 |
| 103. | ಹೊಸಮೈಸೂರಿಗೆ ಸ್ವಾಗತ | 26-2-1956 | 374 |
| 104. | ಕನ್ನಡದಲ್ಲಿ ಧಾರ್ಮಿಕಸಾಹಿತ್ಯ | 10-4-1938 | 375 |
| 105. | ಕಾಂತಮಹಾಶಯನ ಸಿದ್ಧಾಂತ | 1-3-1923 | 379 |
| 106. | ಪ್ರದೋಷ ಮಹಿಮೆ | 44-7-1975 | 383 |
| 107. | ಶಿವತಾಂಡವಲೀಲೆ | 44-8-1975 | 385 |
| 108. | ಗ್ರಂಥಪರಿಚಯ | ---------- | 387 |


ಖಖಖಖಖ

ಶ್ರೀಯುತ ಎಸ್. ವಿಠ್ಠಲಶಾಸ್ತ್ರಿ ವಿರಚಿತ

# ವೇದಾಂತ ಲೇಖನಮಾಲೆ

ಐಐಐಐಐ

## ವೇದಾಂತದರ್ಶನದ ಹೆಚ್ಚುಗಾರಿಕೆ

ವೇದಾಂತವು ಉಪನಿಷತ್ತುಗಳೆಂಬ ಪ್ರಾಚೀನಗ್ರಂಥಗಳಲ್ಲಿ ಅಡಕವಾಗಿರುವ ಒಂದು ದರ್ಶನವು. ಆದರೆ ಆ ಗ್ರಂಥಗಳು ಪ್ರಾಚೀನವೆಂಬುದನ್ನಾಗಲಿ, ಅವು ನಮ್ಮ ಅಪ್ಪ, ಅಜ್ಜ ಮುತ್ತಜ್ಜ ಮೊದಲಾದವರು ಪರಂಪರೆಯಿಂದ ಓದಿರುವ ಗ್ರಂಥಗಳೆಂಬುದನ್ನಾಗಲಿ, ಲೆಕ್ಕಕ್ಕಿಟ್ಟುಕೊಂಡು ನಾವು ವೇದಾಂತವನ್ನು ನಂಬಬೇಕಾಗಿರುವದಿಲ್ಲ.

ವೇದಾಂತದಲ್ಲಿರುವ ತತ್ತ್ವವನ್ನು ಯಾರುಬೇಕಾದರೂ ಯಾವಾಗ ಬೇಕಾದರೂ ಎಲ್ಲಿ ಬೇಕಾದರೂ ಪರೀಕ್ಷಿಸಿ ಮನಗಾಣಬಹುದು. ಇದು ಸಾರ್ವತ್ರಿಕ ಯುಕ್ತ್ಯನುಭವಗಳಿಗೆ ಹೊಂದಿಕೆಯಾಗಿರುವದು. ಆದ್ದರಿಂದ ಇದು ನಿಜವಾದ **ದರ್ಶನವು.**

ವೇದಾಂತವು ನಮ್ಮೆಲ್ಲರ ಆತ್ಮನಾಗಿರುವ ಪರಮಾತ್ಮನೊಬ್ಬನಿರುವನೆಂದು ಹೇಳುವದು; ಅವನೇ ಮತಗಳೆಲ್ಲವೂ ಹೇಳುವ ಪರಮೇಶ್ವರನೆಂದೂ ಹೇಳುವದು. ಯಾವನಾದರೂ ಇಂಥ ಈ ಪರಮೇಶ್ವರನು ಇಲ್ಲವೆಂದರೆ, ತಾನೇ ಇಲ್ಲವೆಂದಂತೆ ಆಗುವದು. ಈ ಪರಮೇಶ್ವರನನ್ನು ಅರಿತುಕೊಂಡವರು ಮತ್ತೊಬ್ಬರ ಹಿಂಸೆಗೆ ಮನಸ್ಸು ಮಾಡುವದೇ ಆಗುವ ಹಾಗಿಲ್ಲ; ಏಕೆಂದರೆ ಆಗ ಆ ಮತ್ತೊಬ್ಬರ ಆತ್ಮನೂ ತಾನೇ ಆಗಿರುವನು.

ವೇದಾಂತವು ಪರಮೇಶ್ವರನ ಪ್ರಾರ್ಥನೆಯಿಂದ ಸ್ವಭಾವನಿಯಮವನ್ನು ಹೆಚ್ಚು ಕಡಿಮೆಮಾಡಬಹುದೆಂದು ಹೇಳುವದಿಲ್ಲ; ಮನುಷ್ಯನು ಕೃಷಿ, ವ್ಯಾಪಾರ - ಮುಂತಾದ ಕರ್ಮಗಳಿಂದ ಸ್ವಭಾವನಿಯಮಕ್ಕೆ ಅನುಗುಣವಾಗಿ ಪ್ರಯತ್ನಮಾಡಿ ಫಲವನ್ನು ಹೊಂದುವಂತೆ, ಪ್ರಾರ್ಥನೆಯಿಂದಲೂ ಫಲವನ್ನು ಹೊಂದಬಹುದೆಂದು ಹೇಳುತ್ತದೆ. ಪ್ರಾರ್ಥನೆಯಿಂದ ಪರಮೇಶ್ವರನಿಗೆ ಆಗಬೇಕಾದದ್ದೇನೂ ಇರುವದಿಲ್ಲ; ಆದರೆ ಪ್ರಾರ್ಥನೆಯನ್ನು ಮಾಡುವವರಿಗೆ ಆಗಬೇಕಾದದ್ದು ಬಹಳವಿದೆ. ಚಿತ್ತ ಶುದ್ಧಿ, ವಿವೇಕ ಪ್ರಾಪ್ತಿ, ವಿಚಾರಪ್ರಾಬಲ್ಯ, ತತ್ತ್ವಜ್ಞಾನ - ಇಷ್ಟೂ ಸರಿಯಾಗಿ ನಡೆಯಿಸಿದ ಪ್ರಾರ್ಥನೆಯಿಂದ ಒಂದರ ಹಿಂದೊಂದು ಆಗುವ ಫಲಗಳು.

ವೇದಾಂತವು ಮನುಷ್ಯನ ಪೌರುಷಕ್ಕೆ ಇಷ್ಟೆಂಬ ಅಳತೆಯನ್ನು ಹೇಳುವದಿಲ್ಲ; ಮನುಷ್ಯನು ಪೌರುಷದಿಂದ ಮುಂದುಮುಂದಕ್ಕೆ ಹೋಗಿ ತಾನೂ ಸುಖವನ್ನು ಹೊಂದಿ

ಪರರಿಗೂ ಉಪಕಾರವನ್ನು ಮಾಡಬಹುದು. ಸರಿಯಾದ ವಿಚಾರದಿಂದ ತಾನು ಪರಮಾತ್ಮನೇ ಎಂಬ ಅಮೋಘತತ್ತ್ವವನ್ನು ಕಂಡುಕೊಂಡು ಮತ್ತೊಬ್ಬರಿಗೂ ತಿಳಿಸಿ, ಸರ್ವ ದಿಕ್ಕುಗಳನ್ನೂ ಸುಖಮಯವಾಗಿ ಮಾಡಿಬಿಡಬಹುದು – ಎಂಬುದು ಅದರ ಹೇಳಿಕೆ.

ಎಲ್ಲರ ಅನುಭವಕ್ಕೆ ಹೊಂದುವ ತತ್ತ್ವಶಾಸ್ತ್ರವೆಂದರೆ ವೇದಾಂತವೇ; ಎಲ್ಲಾ ಮತನೀತಿಗಳಿಗೂ ಆಧಾರವನ್ನೊದಗಿಸುವ ತತ್ತ್ವಶಾಸ್ತ್ರವೆಂದರೆ ವೇದಾಂತವೇ; ಜನರಿಗೆ ಜೀವನದಲ್ಲಿ ಒದಗುವ ಎಲ್ಲಾ ಬಗೆಯ ತೊಡಕನ್ನೂ ಬಿಡಿಸುವ ಮಹಾಮಂತ್ರವೆಂದರೆ ವೇದಾಂತವೇ. ಆದ್ದರಿಂದ ಇದನ್ನು ನಿಷ್ಪಕ್ಷಪಾತವಾದ ಕಣ್ಣಿನಿಂದ ನೋಡಬಲ್ಲವರಿಂದ ಕೇಳಿ ತಿಳಿದುಕೊಂಡು ಅದರಲ್ಲಿಯೇ ಮನಸ್ಸಿಟ್ಟು ಯೋಚಿಸಿ ತತ್ತ್ವವನ್ನು ಮನಗಂಡು ಕೃತಾರ್ಥರಾಗುವದು ನಮ್ಮೆಲ್ಲರ ಕರ್ತವ್ಯವು.

# ಗೀತೆಯ ಉಪದೇಶ

ಅಧ್ಯಾತ್ಮ ವಿಚಾರವು ಈಗಿನ ಕಾಲದವರಾದ ನಮ್ಮಗಳ ಜೀವನದಲ್ಲಿ ಕಾಣ ಬರುವ ತೊಡಕುಗಳನ್ನು ಬಿಚ್ಚಲಾರದೆಂದೂ ಅಧ್ಯಾತ್ಮಯೋಗವೆಂಬುದು ಕಣ್ಣುಮುಚ್ಚಿ ಕೊಂಡು ಕೂತು ಆತ್ಮಚಿಂತನೆಯಲ್ಲಿ ಮುಳುಗುವ ಸಂನ್ಯಾಸಿಗಳನ್ನೇ ಹೆಚ್ಚಿಸುವದೆಂದೂ ಜನರು ಆಗಾಗ್ಗೆ ಆಡಿಕೊಳ್ಳುವದುಂಟು. ಆದರೆ ಹೀಗೆನ್ನುವ ಆಕ್ಷೇಪಕರು ಅಧ್ಯಾತ್ಮ ವಿದ್ಯೆಯ ಭಂಡಾರವಾಗಿರುವ ಭಗವದ್ಗೀತೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆಯೇ ಮಾತನಾಡುತ್ತಿರುವರೆಂಬುದನ್ನು ನೆನಪಿನಲ್ಲಿಟ್ಟರೆ, ಈ ಅಭಿಪ್ರಾಯಕ್ಕೆ ಎಷ್ಟರಮಟ್ಟಿಗೆ ಬೆಲೆಯನ್ನು ಕೊಡಬೇಕೆಂಬುದನ್ನು ನಾವೆಲ್ಲರೂ ಕೂಡಲೆ ಗೊತ್ತುಪಡಿಸಿಕೊಳ್ಳಬಹುದು.

ವಿದ್ಯೆಗಳಲ್ಲೆಲ್ಲ ಅಧ್ಯಾತ್ಮವಿದ್ಯೆಯೇ ಶ್ರೇಷ್ಠವೆಂಬುದು ಗೀತಾಚಾರ್ಯನಾದ ಶ್ರೀಕೃಷ್ಣನ ಉಪದೇಶವು; ಭಗವದ್ಗೀತೆಯು ಅಧ್ಯಾತ್ಮವಿದ್ಯೆಯನ್ನು ಮಾತ್ರ ಹೇಳುವದಲ್ಲದೆ ಯೋಗ ಗಳನ್ನು ಹೇಳುವ ಶಾಸ್ತ್ರವೆಂದೂ ಪ್ರಸಿದ್ಧವಾಗಿದೆ. ಹೀಗಿದ್ದರೂ ಭಗವದ್ಗೀತೆಯ ಉಪದೇಶವು ಸತ್ತಮೇಲೆ ದೊರಕಬೇಕಾದ ಯಾವದೋ ಒಂದು ಲೋಕದ ಚಿಂತೆಯನ್ನು ಹತ್ತಿಸುವದ ಕ್ಕೆಂದು ಹೊರಟಿದ್ದಲ್ಲ; ಮೂರು ಲೋಕದ ವೀರನೆನಿಸಿಕೊಂಡಿದ್ದ ಅರ್ಜುನನಿಗೆ "ಈಗ ನಾನೇನು ಮಾಡುವದು ಯುಕ್ತವು?" ಎಂಬ ವ್ಯವಹಾರದ ತೊಡಕೊಂದು ಗಂಟು ಬಿದ್ದಾಗ, ಆ ತೊಡಕನ್ನು ಬಗೆಹರಿಸುವದಕ್ಕೆ ಹೊರಟಿದ್ದು. ಭಗವದ್ಗೀತೆಯ ಒಂದೊಂದು ಅಧ್ಯಾಯದಲ್ಲಿಯೂ ಒಂದೊಂದು 'ಯೋಗ' ವಿದೆ; ಆದರೂ ಈ ಯೋಗವನ್ನು

ಉಪದೇಶಿಸಿದ ಶ್ರೀಕೃಷ್ಣನಾಗಲಿ ಅದನ್ನು ಕೇಳಿ ಅನುಸರಿಸಿದ ಅರ್ಜುನನಾಗಲಿ ಸಂನ್ಯಾಸಿಗಳಾಗಿರಲಿಲ್ಲ; ಅವರಿಬ್ಬರೂ ರಾಜ್ಯಭಾರದ ನೀತಿಯನ್ನು ಚಿಂತಿಸುತ್ತಿದ್ದ ವೀರಕ್ಷತ್ರಿಯ ಗೃಹಸ್ಥರಾಗಿದ್ದರು. ಇದನ್ನು ನೋಡಿದರೆ ಅಧ್ಯಾತ್ಮವಿದ್ಯೆಯು ಜನಜೀವನಕ್ಕೆ ಸಂಬಂಧಪಟ್ಟಿದ್ದಲ್ಲವೆಂದೂ ಅಧ್ಯಾತ್ಮಯೋಗವೆಂದರೆ, ಜನರ ಕೆಲಸಗಳನ್ನೆಲ್ಲ ಬಿಡಿಸಿ ಅವರಿಗೆ ಕಾವಿಯ ಬಟ್ಟೆಯನ್ನು ಉಡಿಸಿ ಮೂಲೆಗೆ ಕೂರಿಸುವ ಒಂದು ಸಾಧನವೆಂದೂ ಅಭಿಪ್ರಾಯಪಡುವವರು ಯಾವದೋ ಒಂದು ದೊಡ್ಡ ಭ್ರಾಂತಿಗೆ ಒಳಗಾಗಿರುವರೆಂದು ಹೇಳಬೇಕಲ್ಲವೆ?

ಈಗ ಇನ್ನೊಂದು ಪ್ರಶ್ನೆ : ಗೀತೆಯನ್ನು ವೇದವ್ಯಾಸರು ಬರೆದು ಈಗ್ಗೆ ಎಷ್ಟೋ ಶತಮಾನಗಳಾದವು. ಅರ್ಜುನನಿಗೆ ಶ್ರೀಕೃಷ್ಣನು ಉಪದೇಶಮಾಡಿದ ಕಾಲದಲ್ಲಿ ಈಗಿನಷ್ಟು ಭೌತಿಕವಿದ್ಯೆಯು ವಿಸ್ತರಿಸಿರಲಿಲ್ಲ, ಈಗಿನ ಹಾಗೆ ಜನರು ಭೂಲೋಕವನ್ನೆಲ್ಲ ಭೂಮಾರ್ಗಜಲಮಾರ್ಗವಾಯುಮಾರ್ಗಗಳಿಂದ ಅತ್ಯಲ್ಪಕಾಲದಲ್ಲಿ ಸಂಚರಿಸುವ ಸಾಧನಗಳನ್ನು ಕಂಡುಹಿಡಿದುಕೊಂಡಿರಲಿಲ್ಲ; ಈಗಿನಷ್ಟು ಭೋಗಸಾಮಗ್ರಿಗಳನ್ನೂ ದೊರಕಿಸಿಕೊಂಡಿರಲಿಲ್ಲ, ಈಗಿನ ಜನರ ಪ್ರಪಂಚವು ಬಲು ದೊಡ್ಡದಾಗಿರುವದು. ನಮ್ಮೀ ಭೂಲೋಕವು ಅನೇಕ ಗ್ರಹಗಳಿಂದೊಡಗೂಡಿದ ಸೌರವ್ಯೂಹಕ್ಕೆ ಸೇರಿರುವದೆಂದೂ ಇಂಥ ವ್ಯೂಹಗಳೇ ಈ ಬ್ರಹ್ಮಾಂಡದಲ್ಲಿ ಅನೇಕವಿರಬೇಕೆಂದೂ ಈಗಿನ ವಿಜ್ಞಾನಶಾಸ್ತ್ರವು ತಿಳಿಯಪಡಿಸುತ್ತಿರುವದು. ಇಂಥ ಕಾಲಕ್ಕೆ ನಮಗೆ ಗೀತೆಯಿಂದ ಆಗಬೇಕಾದದ್ದೇನು?

ಈ ಪ್ರಶ್ನೆಗೆ ಒಂದೇ ಸಲಕ್ಕೆ ಉತ್ತರಕೊಡುವದಕ್ಕಾಗುವದಿಲ್ಲ, ಆದರೂ ಇಷ್ಟು ಮಾತ್ರ ಇಲ್ಲಿ ಹೇಳಬಹುದು. ಮನುಷ್ಯನು ಹೊರಗಿನ ಪ್ರಪಂಚದ ಜ್ಞಾನವನ್ನು ಹೆಚ್ಚಿಸಿಕೊಂಡಷ್ಟೂ ಇಂದ್ರಿಯಗಳಿಗೆ ಅಡಿಯಾಳಾಗುತ್ತಾನೆ. ಇಂದ್ರಿಯಗಳು ನಮಗೆ ಆ ಭೋಗ ಬೇಕು, ಈ ಭೋಗ ಬೇಕು – ಎಂದು ಅವನನ್ನು ಹೊರಕ್ಕೆ ತಳ್ಳುತ್ತವೆ. ಇದರಿಂದ ಮನುಷ್ಯನ ಜೀವನದ ತೊಡಕು ಹೆಚ್ಚುತ್ತಲೇ ಹೋಗುತ್ತದೆ. ಮನುಷ್ಯನಿಗೆ ಕಾಮವು ಹೆಚ್ಚಿದಂತೆ ಅದು ಪೂರ್ತಿಯಾಗುವದು ಹೆಚ್ಚು ಹೆಚ್ಚು ಕಷ್ಟವಾಗುತ್ತಾ ಬರುತ್ತದೆ; ಆಗ ಅವನು ಸ್ವಾರ್ಥಪರನಾಗುತ್ತಾನೆ. ತನ್ನ ನೆರೆಯವನ ಸ್ವತ್ತನ್ನು ಕಸಿದುಕೊಳ್ಳುವದಕ್ಕೆ ಹೋಗುತ್ತಾನೆ. ಅದು ಸಿಕ್ಕದಿದ್ದರೆ ಸಿಟ್ಟಾಗುತ್ತಾನೆ. ಸಿಕ್ಕರೆ ಮತ್ತೊಬ್ಬರಿಗೆ ಅದು ಕಣ್ಣಿಗೆ ಬೀಳದ ಹಾಗೆ ಅದನ್ನು ಮುಚ್ಚಿಡಬೇಕೆಂದು ಹವಣಿಸುತ್ತಾನೆ. ಈಗಿನ ಲೋಕದಲ್ಲಿ ಈ ಕಾಮಕ್ರೋಧಲೋಭಗಳ ಹಾವಳಿಯು ಹೆಚ್ಚಾಗುತ್ತಿರುವದು. ಇವುಗಳ ಉಪಟಳವನ್ನು ಅಡಗಿಸುವ ಬಗೆ ಯಾವದೆಂಬುದನ್ನು ತಿಳಿದುಕೊಳ್ಳುವದು ಗೀತೆಯಿಂದ ನಮಗೆ ಆಗಬೇಕಾಗಿರುವ ಒಂದು ಪರಮಪ್ರಯೋಜನವು.

ಭಗವದ್ಗೀತೆಯಲ್ಲಿ ಅಧ್ಯಾತ್ಮವಿದ್ಯೆಯ ಸ್ವರೂಪವನ್ನೂ ಅದರ ತಳಹದಿಯ ಮೇಲೆ ಕಟ್ಟಿರುವ ಯೋಗಗಳನ್ನೂ ಹೇಳಿರುತ್ತದೆ. ಮನುಷ್ಯನಿಗೆ ವ್ಯವಹಾರದಲ್ಲಿ ಅಡ್ಡ ಬರುವ ತೊಡಕುಗಳನ್ನು ಗೆದ್ದುಕೊಂಡು ಪರಮಾನಂದದಿಂದಿರುವ ಹಾದಿ ಯಾವ ದೆಂಬುದನ್ನು ಮನದಟ್ಟುವ ಹಾಗೆ ತಿಳಿಸಿಕೊಡುತ್ತದೆ. ಭೂತಗನ್ನಡಿಯಿಂದ ನೋಡಿದಾಗ ತೀರ ಸಣ್ಣವಸ್ತುಗಳೂ ದೊಡ್ಡವಾಗುವಂತೆಯೂ ಬಹಳ ದೂರವಿರುವ ವಸ್ತುಗಳೂ ಹತ್ತಿರ ಕಾಣುವಂತೆಯೂ ಗೀತೆಯಲ್ಲಿ ಹೇಳಿರುವ ಅಧ್ಯಾತ್ಮವಿದ್ಯೆಯ ಕಣ್ಣಿನಿಂದ ನೋಡಿದ ವನಿಗೆ ಪ್ರಪಂಚದ ಸೂಕ್ಷ್ಮತತ್ತ್ವಗಳೆಲ್ಲ ಕಣ್ಣಿಗೆ ಕಟ್ಟಿದ ಹಾಗೆ ಕಾಣಿಸಿಕೊಳ್ಳುವವು. ಯೋಗ್ಯ ನಾದ ಔಷಧಸೇವೆಯನ್ನು ಮಾಡಿ ಪಥ್ಯವಾದ ಆಹಾರವನ್ನು ಸೇವಿಸುತ್ತಾ ಆರೋಗ್ಯದ ನಿಯಮಗಳನ್ನು ಅನುಸರಿಸಿದರೆ ಅಶಕ್ತನಾದವನು ಕೂಡ ಶಕ್ತಿವಂತನಾಗುವ ಹಾಗೆ ಗೀತೋಕ್ತಯೋಗಗಳ ಸಾಧನೆಯಿಂದ ನಮಗೆ ವ್ಯವಹಾರದಲ್ಲಿ ಅತ್ಯವಶ್ಯವಾದ ಒಂದು ಹೊಸ ಬಗೆಯ ಶಕ್ತಿಯು ಮೈದೋರಿಕೊಳ್ಳುವದು. ಇದೇ ಗೀತೋಪದೇಶದಿಂದ ನಮಗೆ ಆಗಬೇಕಾಗಿರುವ ಪರಮ ಪ್ರಯೋಜನವು.

# ಗೀತೋಪದೇಶವು ಯಾರಿಗೆ ಒಗ್ಗುವದಿಲ್ಲ?

**ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।**
**ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್ ॥**

ಈ ಲೋಕದಲ್ಲಿರುವ ಜನರನ್ನು ಅವರ ಮನಃಸ್ಥಿತಿಯ ಮೇಲಿನಿಂದ ಎರಡು ದೊಡ್ಡ ಪಂಗಡಗಳಾಗಿ ವಿಂಗಡಿಸಬಹುದು. ಒಂದು ಬಗೆಯ ಜನರಿಗೆ ಇಂದ್ರಿಯ ಭೋಗವೇ ಹೆಚ್ಚೆನಿಸಿರುವದು. ಮತ್ತೊಂದು ಬಗೆಯ ಜನರಿಗೆ ಇಂದ್ರಿಯಗಳನ್ನು ಮೀರಿದ ಸ್ಥಾನವೊಂದಿದೆಯೆಂಬ ನಂಬಿಕೆಯು ಗಟ್ಟಿಯಾಗಿ ಬಿಟ್ಟಿರುವದು. ಇಂದ್ರಿಯ ಭೋಗದ ಜನರನ್ನು ಪ್ರಾಪಂಚಿಕರೆಂದೂ ಅತೀಂದ್ರಿಯತತ್ತ್ವಕ್ಕಾಗಿ ಹೊಡೆದಾಡುವವರನ್ನು ಪಾರಮಾರ್ಥಿಕರೆಂದೂ ಕರೆಯಬಹುದಾಗಿದೆ. ಭಗವದ್ಗೀತೆಯಲ್ಲಿ ಮೊದಲನೆಯ ಪಂಗಡದವರನ್ನು ಅಸುರಸಂಪತ್ತಿನವರೆಂದೂ ಎರಡನೆಯ ಪಂಗಡದವರನ್ನು ದೈವ ಸಂಪತ್ತಿನವರೆಂದೂ ಕರೆದಿದೆ. ಈ ಹೆಸರುಗಳು ಉಪನಿಷತ್ತುಗಳಲ್ಲಿಯೂ* ಬಂದಿರುತ್ತವೆ;

* ಉದಾಹರಣೆಗೆ ಬೃಹದಾರಣ್ಯಕ(1-3-1)ವನ್ನು ನೋಡಿ.

ಉಪನಿಷತ್ತಿನ ತಿರುಳನ್ನು ತೆಗೆದುತೋರಿಸುವದಕ್ಕೆ ಹೊರಟಿರುವ ಗೀತೆಯಲ್ಲಿ ಈ ಹೆಸರು ಗಳನ್ನುಪಯೋಗಿಸಿರುವದು ಸ್ವಾಭಾವಿಕವೇ ಆಗಿದೆ.

ಈ ಎರಡು ಪಂಗಡಗಳೂ ನಿತ್ಯವಿಭಾಗದ ಮೇಲೆ ಏರ್ಪಟ್ಟಿರುವದೆಂದು ತಿಳಿಯಬಾರದು. ಕೆಲವು ಜನರು ಎಂದೆಂದಿಗೂ ಅಸುರಸಂಪತ್ತಿನವರೇ, ಅವರು ಎಂದಿಗೂ ದೈವಸಂಪತ್ತನ್ನು ಪಡೆಯಲಾರರು –ಎಂದಾಗಲಿ ಮತ್ತೆ ಕೆಲವರು ಎಂದೆಂದಿಗೂ ದೈವ ಸಂಪತ್ತಿನವರೇ, ಅವರು ಎಂದಿಗೂ ಅಲ್ಲಿಂದ ಕೆಳಕ್ಕೆಜಾರಿ ಅಸುರಸಂಪತ್ತಿಗೆ ಬೀಳಲಾರರು – ಎಂದಾಗಲಿ ಹೇಳುವದಕ್ಕೆ ಬರುವದಿಲ್ಲ. ಜಾತಿ, ಕುಲ, ವರ್ಣ, ದೇಶ – ಮುಂತಾದ ಉಪಾಧಿಗಳಿಂದ ಈ ವಿಂಗಡವನ್ನು ಮಾಡಿರುವದೂ ಇಲ್ಲ; ಒಂದು ಬಗೆಯ ಸನ್ನಿವೇಶ ದಿಂದ ಮತ್ತು ಒಂದು ಬಗೆಯ ಮನಸ್ಸಂಸ್ಕಾರದಿಂದ ಈಗ ಅಸುರ ಸಂಪತ್ತಿನವನಾಗಿ ರುವಾತನೇ ಇನ್ನೊಂದು ಬಗೆಯ ಸನ್ನಿವೇಶದಿಂದ ಮತ್ತು ಸಂಸ್ಕಾರದಿಂದ ದೇವಸಂಪತ್ತಿ ನವನಾಗಬಹುದು. ಆದ್ದರಿಂದ ಗೀತೆಯಲ್ಲಿ ದೈವಾಸುರ ಸಂಪತ್ತೆಂಬ ವಿಂಗಡವನ್ನು ಮಾಡಿರುವದು. ಒಬ್ಬರನ್ನೊಬ್ಬರು 'ಇವರು ದೈತ್ಯರು, ಇವರು ಅಸುರರು' ಎಂದು ಬಯ್ದಾಡುವದಕ್ಕಲ್ಲ. ತಮ್ಮ ತಮ್ಮ ಮನಃಸ್ಥಿತಿಯನ್ನು ನೋಡಿಕೊಂಡು ಆಸುರ ಸಂಪತ್ತನ್ನು ಕಳೆದುಕೊಂಡು ಉತ್ತಮವಾದ ದೈವಸಂಪತ್ತನ್ನು ಸಂಪಾದಿಸಿಕೊಳ್ಳುವದಕ್ಕೆ. ಭಗವದ್ಗೀತೆಯ ಉಪದೇಶದ ಪ್ರಯೋಜನವನ್ನು ಹೊಂದಬೇಕೆಂಬ ನಿಜವಾದ ಇಚ್ಛೆಯುಳ್ಳವರು ಈ ಕಡೆಗೆ ತಪ್ಪದೆ ಲಕ್ಷ್ಯವಿಡಬೇಕು.

ಇಂದ್ರಿಯಗಳು ಹೊರಗಿನ ವಿಷಯಗಳ ಅರಿವನ್ನು ನಮಗೆ ಕೊಡುವದಕ್ಕೂ ಅವುಗಳಿಂದಾಗುವ ಸುಖದುಃಖಭೋಗವನ್ನುಂಟುಮಾಡುವದಕ್ಕೂ ನಮಗೆಲ್ಲರಿಗೂ ಸಾಧನವಾಗಿರುತ್ತವೆ. ಇದು ದೇವಸಂಪತ್ತಿನವರಿಗೂ ಅಸುರಸಂಪತ್ತಿನವರಿಗೂ ಸಮಾನ ವಾಗಿರುವದು. ಆದರೆ ಅಸುರ ಸಂಪತ್ತಿನವರು ಇಂದ್ರಿಯ ಭೋಗದಲ್ಲಿಯೇ ಮುಳುಗಿ ರುವರು; ಅವರಿಗೆ ಈ ಭೋಗವನ್ನು ಬಿಟ್ಟರೆ ಹೆಚ್ಚಿನದೇನೂ ಇಲ್ಲವೇ ಇಲ್ಲ; ಇದಕ್ಕಾಗಿಯೇ ತಮ್ಮ ಸರ್ವಪ್ರಯತ್ನವನ್ನೂ ಅವರು ವಿನಿಯೋಗಿಸುವರು. ದೇವ ಸಂಪತ್ತಿನವರು ಹಾಗಲ್ಲ. ಮಕ್ಕಳಾಗಿದ್ದಾಗ ಗೋಲಿ ಗಜ್ಜುಗ ಮುಂತಾದವುಗಳಲ್ಲಿ ಪ್ರೀತಿ ಯುಳ್ಳವರೇ ದೊಡ್ಡವರಾಗುತ್ತಲೂ ಅವುಗಳಲ್ಲಿ ಉದಾಸೀನರಾಗಿ ಅವಕ್ಕಿಂತ ಹೆಚ್ಚಿನ ಬೆಲೆ ಯುಳ್ಳ ವಿದ್ಯೆ, ಹಣ, ಕೀರ್ತಿ – ಮುಂತಾದವುಗಳನ್ನು ಸಂಪಾದಿಸುವದಕ್ಕೆ ತೊಡಗುವ ಹಾಗೆ ಮೊದಮೊದಲು ಇಂದ್ರಿಯಗಳಲ್ಲಿ ನಿಂತಿದ್ದ ಜನರೇ ದೇವಸಂಪತ್ತಿನ ಮೊಳಕೆಯು ಮನಸ್ಸಿನಲ್ಲಿ ತೋರಿಕೊಳ್ಳುತ್ತಲೂ ಅತೀಂದ್ರಿಯವಾದ ಸುಖವೇನಾದರೂ ಉಂಟೆ? –

ಎಂದು ನೋಡುವದಕ್ಕೆ ಹೊರಡುತ್ತಾರೆ. ಆಮೇಲೆ ಅವರಿಗೆ ಇಂದ್ರಿಯ ಭೋಗವೇ ಇಲ್ಲವೆಂದರ್ಥವಲ್ಲ, ಅದರಲ್ಲಿ ಅವರಿಗೆ ಮೊದಲಿಗಿದ್ದ ಹೆಚ್ಚಿನ ಆಸಕ್ತಿ ಯಿರುವದಿಲ್ಲ, ಇಂದ್ರಿಯಭೋಗವೇ ಪುರುಷಾರ್ಥವೆಂಬ ಜೀವನ ಸೂತ್ರವನ್ನು ಅವರು ಇನ್ನು ಮೇಲೆ ಅವಲಂಬಿಸುವದಿಲ್ಲ, ಅಷ್ಟೆ.

ಅಸುರ ಸಂಪತ್ತಿನವರ ದೃಷ್ಟಿಯು ಹೇಗಿರುವದು? ಅವರಿಗೆ ಯಾವದಾದ ರೊಂದು ಹೆಚ್ಚಿನ ಪುರುಷಾರ್ಥವನ್ನು ಸಾಧಿಸಿಕೊಳ್ಳುವದಕ್ಕಾಗಿ ಸಾಧನವನ್ನು ಕೈಕೊಳ್ಳ ಬೇಕೆಂಬ ಹವಣಿಕೆಯಿರುವದಿಲ್ಲ; ತಾವು ನಡೆಯುತ್ತಿರುವ ಮಾರ್ಗವು ಅನರ್ಥಕ್ಕೆ ಕಾರಣವಾದ್ದರಿಂದ ಅದನ್ನು ಬಿಡಿಸಿಕೊಳ್ಳಬೇಕೆಂಬ ಹಂಬಲಿಕೆಯಿರುವದಿಲ್ಲ. "ಈ ಜಗತ್ತು ಮೂರು ದಿನದ ಬಾಳು, ಇಂದು ನಾವು ಇಲ್ಲಿ ಉಂಡದ್ದೇ ನಮ್ಮದು, ಕಾಮ ದಿಂದಲೇ ಜಗತ್ತೆಲ್ಲವೂ ಬೆಳೆಯುತ್ತಿರುವದು; ಧರ್ಮಾಧರ್ಮವೆಂದೂ ಈಶ್ವರನೆಂದೂ ನಂಬಿ ಮರುಳಾಗಿರುವವರು ಪ್ರಪಂಚದ ಸುಖವನ್ನನುಭವಿಸಲಾರದ ಹೇಡಿಗಳು, ಮೂರ್ಖರು" – ಎಂಬುದೇ ಅವರ ನಂಬಿಕೆ.

ಅವರ ಆಸೆಗೆ ಕೊನೆಯಿಲ್ಲ, ಅವರ ಆಲೋಚನೆಗಳಿಗೆ ಮಿತಿಯಿಲ್ಲ. "ಇದನ್ನು ಸಂಪಾದಿಸಿದ್ದಾಯಿತು. ಇದನ್ನು ಸಂಪಾದಿಸಬೇಕು; ನನ್ನ ಸುಖಕ್ಕೆ ನೆರವಾದವರೇ ನಮ್ಮವರು. ಅಡ್ಡಬಂದವರೆಲ್ಲ ಹಗೆಗಳು. ಇವರನ್ನೆಲ್ಲ ಸದೆಬಡಿದು ನನ್ನ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳಬೇಕು" ಎಂಬುದು ಅವರ ಸ್ವಭಾವ. ಅಹಂಕಾರವೆಂಬುದು ಅವರಲ್ಲಿ ನೆಲೆಸಿರುವದು; ತಮ್ಮ ಸಮಾನವಿಲ್ಲವೆಂದು ಅವರ ಎಣಿಕೆಯಿರುವದು. ವಿದ್ಯೆಯಿಂದಲೂ ಹಣದಿಂದಲೂ ಸ್ವಜನಸಂಪತ್ತಿನಿಂದಲೂ ಅವರು ಉಬ್ಬಿಹೋಗಿರುವರು. ಅವರು ಏನಾದರೂ ಒಳ್ಳೆಯ ಕೆಲಸವನ್ನು ಮಾಡಿದರೂ ಜಂಭಕೊಚ್ಚಿಕೊಳ್ಳುವದಕ್ಕೆ ಅನುಕೂಲ ವಾಗಿರುವಂತೆ ಮತ್ತೊಬ್ಬರು ಕಾಣುವ ಹಾಗೆ ಮಾಡುವರು. ಹಿಂಸೆಯೆಂಬುದು ಅವರಿಗೆ ಲೆಕ್ಕವಿಲ್ಲ; ಜಗತ್ತೇ ಪ್ರಲಯವಾಗಲಿ, ತಮ್ಮ ಆಸೆಯೊಂದು ಪೂರ್ತಿಯಾದರೆ ಅವರಿಗೆ ಸಾಕಾಗಿರುವದು.

ಕಾಮ, ಕ್ರೋಧ, ಲೋಭ – ಈ ಮೂರೂ ಅಸುರಸಂಪತ್ತಿನ ಪರಮಮಿತ್ರರು. ದುರ್ಯೋಧನನ ಬಳಿಯಲ್ಲಿ ಅವನ ಮೆಚ್ಚಿನ ಗೆಳೆಯರೆನಿಸಿಕೊಂಡು ಯಾವಾಗಲೂ ಅವನನ್ನು ಕೆಟ್ಟ ಮಾರ್ಗಕ್ಕೆ ಎಳೆಯುತ್ತಿದ್ದ ಶಕುನಿಯೇ ಮುಂತಾದ ಹಿತಶತ್ರುಗಳಂತೆ ಈ ಮೂರೂ ಅಸುರಸಂಪತ್ತಿನವರಲ್ಲಿ ಸೇರಿಕೊಂಡು ಅವರ ಬಾಳನ್ನೆಲ್ಲ ನರಕವಾಗಿ ಮಾಡಿ ಬಿಡುತ್ತವೆ. ಯಾವನು ಇವೇ ತನಗೆ ಬೇಕಾದವುಗಳೆಂದು ಇವುಗಳನ್ನೇ ಅವಲಂಬಿಸಿ

ರುವನೋ ಅವನೇ ಅಸುರಸಂಪತ್ತಿನವನು; ಅವನಿಗೆ ಭಗವದ್ಗೀತೆಯಲ್ಲಿ ಹೇಳಿರುವ ಉಪದೇಶವು ಯಾವದೂ ಸರಿಯೆನಿಸುವದಿಲ್ಲ. ಯಾವನು ಇವುಗಳು ನರಕದ ಹೆಬ್ಬಾಗಿಲುಗಳೆಂದು ಅರಿತು ಇವುಗಳ ಕಡೆಗೆ ಹೋಗಬಾರದೆಂದು ಸಂಕಲ್ಪಿಸಿಕೊಂಡಿರುವನೋ ಅವನಲ್ಲಿ ದೈವಸಂಪತ್ತು ಮೊಳಕೆಯಾದಂತಾಯಿತು; ಅಂಥವನು ಗೀತೋಕ್ತವಾದ ಉಪದೇಶಗಳನ್ನು ಕೇಳಿ ಅವುಗಳ ಪ್ರಯೋಜನವನ್ನು ಪಡೆದುಕೊಳ್ಳುವ ಅಧಿಕಾರಿಯಾದನು. ದೈವಸಂಪತ್ತಿನ ಸ್ವರೂಪವಿವರಣೆಯನ್ನೂ ಅದನ್ನು ಬೆಳೆಯಿಸಿಕೊಳ್ಳುವ ಬಗೆ ಯಾವದೆಂಬುದನ್ನೂ ಇನ್ನೊಂದು ಸಲ ಆಲೋಚಿಸೋಣ.

ஐஐஐஐஐ

# ಗೀತೋಪದೇಶವು ಯಾರಿಗೆ ರುಚಿಸುವದು?

**ದೈವೀಸಮ್ಪದ್ವಿಮೋಕ್ಷಾಯ ನಿಬನ್ಧಾಯಾಸುರೀ ಮತಾ ॥**

ಗೀತೆಯ ಲಕ್ಷಾಂತರ ಪ್ರತಿಗಳು ಈಗ ಅಚ್ಚಾಗಿ ಮಾರಾಟವಾಗುತ್ತಿವೆ; ಅದನ್ನು ಪಾರಾಯಣಮಾಡುವವರ ಸಂಖ್ಯೆಯೂ ಹೆಚ್ಚುತ್ತಿದೆ. ಆದರೆ ಅದರಲ್ಲಿರುವ ಉಪದೇಶವು ಯಾರಿಗಾಗಿ ಮಾಡಿದ್ದು? ಈ ಪ್ರಶ್ನೆಗೆ ನಾವೆಲ್ಲರೂ ಉತ್ತರವನ್ನು ಮೊದಲು ಕಂಡುಹಿಡಿದುಕೊಳ್ಳಬೇಕು. ಗೀತೆಯು ನಮ್ಮ ದೇಶದ ಗ್ರಂಥವೆಂಬ ಅಭಿಮಾನದಿಂದ ಓದುವವರಿಗೂ ಅದರಿಂದ ಅಲ್ಪಸ್ವಲ್ಪ ಪ್ರಯೋಜನವಾಗುವದು; ಉಪನ್ಯಾಸಗಳಲ್ಲಿಯೂ ವಾಕ್ಯಾರ್ಥಗಳಲ್ಲಿಯೂ ನಡುನಡುವೆ ಶ್ಲೋಕಗಳನ್ನು ಚಿಮುಕಿಸಿದರೆ ಒಳ್ಳೆಯದೆಂಬ ನೀತಿಗಾಗಿ ಇದನ್ನು ಓದಿದವರಿಗೂ ಒಂದಿಷ್ಟು ಪ್ರಯೋಜನವಾಗುವದು. ಆದರೆ ಭಗವಂತನು ಗೀತೆಯನ್ನು ತಾನು ಯಾರಿಗಾಗಿ ಉಪದೇಶಮಾಡಿರುತ್ತಾನೆ? ಇದಕ್ಕೆ ಗೀತೆಯ ಹದಿನಾರನೆಯ ಅಧ್ಯಾಯದಲ್ಲಿ ಉತ್ತರವಿರುವದು. ಅದರಿಂದಲೇ ನಾವು ಮೇಲಿನ ಶ್ಲೋಕಾರ್ಧವನ್ನು ತೆಗೆದುಹಾಕಿರುವದು.

ಅಸುರಸಂಪತ್ತಿನಿಂದ ಕೂಡಿದವರು ಬದ್ಧರಾಗುವರು, ದೈವಸಂಪತ್ತಿನಿಂದ ಕೂಡಿದವರು ಮುಕ್ತರಾಗುವರು ಎಂಬುದು ಈ ವಾಕ್ಯದ ಸರಳಾರ್ಥವು. ಮನುಷ್ಯನು ಸರಿಯಾದ ತತ್ತ್ವೋಪದೇಶವಿಲ್ಲದೆ ಹೇಗೋ ಅಸುರಸಂಪತ್ತಿನ ಗುಣಗಳ ಬಲೆಗೆ ಬಿದ್ದು ಈ ಸಂಸಾರದಲ್ಲಿ ಓಡಾಡುತ್ತಿರುವನು. ಆದರೆ ಜನ್ಮಜನ್ಮಾಂತರಗಳಲ್ಲಿ ಮಾಡಿದ ಪುಣ್ಯದಿಂದ ಅವನಲ್ಲಿ ದೈವಸಂಪತ್ತು ಅಂಕುರಿಸುವದು. ಆ ಸಮಯಕ್ಕೆ ಗೀತೆಯಂಥ ಸದುಪದೇಶವು ಕಿವಿಗೆ ಬಿದ್ದರೆ ಅವನ ವರ್ತನವೇ ಸಂಪೂರ್ಣವಾಗಿ ಮಾರ್ಪಟ್ಟು ತನ್ನನ್ನು ಸುತ್ತುಗಟ್ಟಿ

ರುವ ಬಂಧನಗಳನ್ನು ಅವನು ಕಡಿದುಹಾಕುವನು. ಅಸುರಸಂಪತ್ತೆಂದರೆ ಹೇಗಿರುವದೆಂಬುದನ್ನು ಸ್ವಲ್ಪಮಟ್ಟಿಗೆ ಹಿಂದೆ ತಿಳಿಯಿಸಿರುವೆನು. ಈಗ ದೈವಸಂಪತ್ತಿನ ಸಂಕ್ಷೇಪ ವರ್ಣನೆಯನ್ನು ಕೊಡುವೆನು. ಗೀತೆಯನ್ನು ಓದಿ ತಿಳಿದುಕೊಳ್ಳುವವರ ಮನಸ್ಸಿನ ಒಲವು ಹೇಗಿರಬೇಕು, ಗೀತೆಯ ಪ್ರಯೋಜನವು ಸಂಪೂರ್ಣವಾಗಿ ಯಾರಿಗೆ ಆಗಿರುವದೋ ಅವರಲ್ಲಿ ಯಾವ ಗುಣಗಳು ಚೆನ್ನಾಗಿ ಕಳೆಗೂಡುವವು? - ಎಂಬುದು ಇದರಿಂದ ತಿಳಿದುಬರುತ್ತವೆ.

ದೈವಸಂಪತ್ತಿನವರ ಗುಣಗಳನ್ನು ಮೂರು ಶ್ಲೋಕಗಳಲ್ಲಿ ಗೀತೆಯು ವರ್ಣಿಸಿರುತ್ತದೆ. ಈ ಗುಣಗಳಲ್ಲಿ ಮೊಟ್ಟಮೊದಲನೆಯದು ''**ಅಭಯವು**''. ಈಗ ಲೋಕದಲ್ಲಿ ಎಲ್ಲೆಲ್ಲಿಯೂ ಅಂಜಿಕೆಯು ತುಂಬಿತುಳುಕುತ್ತಿರುವದು. ಬಡವರಿಗೆ ಹಣವಂತರ ಭಯ, ಹಣವಂತರಿಗೆ ಕಳ್ಳರ ಭಯ, ರಾಜರಿಗೆ ಪ್ರಜೆಗಳ ಭಯ, ಪ್ರಜೆಗಳಿಗೆ ರಾಜರ ಭಯ, ಒಂದು ಜನಾಂಗಕ್ಕೆ ಮತ್ತೊಂದು ಜನಾಂಗದ ಭಯ, ಹೊಟ್ಟೆಯ ಭಯ, ಬಟ್ಟೆಯ ಭಯ, ಹಣದ ಭಯ, ಕ್ಷಾಮ ಭಯ, ರೋಗ ಭಯ, ಯುದ್ಧಭಯ - ಇವೆಲ್ಲ ಆಸುರಸಂಪತ್ತಿಯ ಹೆಗ್ಗುರುತುಗಳು. ಇವುಗಳ ಮೂಲವೇ ಹೋಗಬೇಕು. ಎಲ್ಲರೂ ನಿರ್ಭೀತಿಯಿಂದಿರಬೇಕು - ಎಂಬ ಮನಸ್ಸ್ವಭಾವದಿಂದಿರುವಾತನೇ ದೈವಸಂಪತ್ತಿನವನು.

''**ಸತ್ತ್ವಸಂಶುದ್ಧಿ**'' ಯೆಂಬುದು ಎರಡನೆಯ ಗುಣವು. ಮತ್ತೊಬ್ಬನಿಗೆ ಏನಾದರೂ ಕೇಡುಮಾಡಬೇಕೆಂಬ ಬುದ್ಧಿಯು ಅಸುರಸಂಪತ್ತಿನ ಹೆಗ್ಗುರುತು; ಯಾರೊಬ್ಬರಿಗೂ ಯಾರಿಂದಲೂ ಭಯವಿರಬಾರದೆಂಬ ಅಭಿಪ್ರಾಯವಿರುವವರಲ್ಲಿ ಆ ಬುದ್ಧಿಯು ಎಂದಿಗೂ ಮೊಳೆಯಲಾರದು. ಆದ್ದರಿಂದ ಮೋಸ, ಸುಳ್ಳು, ಠಕ್ಕು ಮುಂತಾದವುಗಳಾವುವೂ ಅವರ ಹತ್ತಿರಕ್ಕೆ ಬರುವಹಾಗಿಲ್ಲ. ಈ ಬಗೆಯ ದೋಷಗಳು ಯಾವವೂ ಇಲ್ಲದೆ ಮನಸ್ಸನ್ನು ಶುದ್ಧವಾಗಿಟ್ಟುಕೊಂಡಿರುವದಕ್ಕೆ ಸತ್ತ್ವಸಂಶುದ್ಧಿಯೆನ್ನುತ್ತಾರೆ. ಈ ಗುಣವಿರುವವರನ್ನೇ ಜನರು 'ಸಾತ್ತ್ವಿಕರು' ಎಂದು ಕರೆಯುತ್ತಾರೆ.

''**ಜ್ಞಾನಯೋಗ ವ್ಯವಸ್ಥಿತಿ**'' ಯೆಂಬುದು ಮೂರನೆಯ ಗುಣವು. ಜ್ಞಾನವೆಂದರೆ ಗ್ರಂಥಗಳನ್ನೋದುವದರಿಂದಲೂ ದೊಡ್ಡವರ ಉಪದೇಶವನ್ನು ಹೊಂದುವದರಿಂದಲೂ ಸಂಪಾದಿಸುವ ತಿಳಿವಳಿಕೆಯು; ಯೋಗವೆಂದರೆ ಹಾಗೆ ತಿಳಿದುಕೊಂಡ ತತ್ತ್ವದಲ್ಲಿಯೇ ಮನಸ್ಸನ್ನು ಹಾಕಿ ಅದನ್ನು ತನ್ನದನ್ನಾಗಿ ಮಾಡಿಕೊಂಡು ಬಿಡುವದು. ಅಸುರ

ಸಂಪತ್ತಿನವರಿಗೆ ಅಜ್ಞಾನವೆಂದರೆ ಬಲುಮೆಚ್ಚು. ಅವರಿಗೆ ತಾವು ತಿಳಿದುಕೊಂಡದ್ದೇ ಸರಿಯೆಂಬ ಹೆಮ್ಮೆಯಿರುವದರಿಂದ ಶಾಸ್ತ್ರವನ್ನೂ ಗುರುಗಳನ್ನೂ ಅವರು ಕಡೆಗಣಿಸುತ್ತಿರುವರು; ತಮಗೆ ತಿಳಿದ ಅಲ್ಪಸ್ವಲ್ಪವನ್ನೂ ರಹಸ್ಯವಾಗಿಟ್ಟುಕೊಂಡು ಮತ್ತೊಬ್ಬರಿಗೆ ತಿಳಿಯದೆ ಇರಲೆಂದೇ ಪ್ರಯತ್ನಿಸುತ್ತಿರುವರು. ಕಳ್ಳರಿಗೆ ಕಗ್ಗತ್ತಲೆಯು ಹೇಗೆ ಪ್ರಿಯವೋ, ಹಾಗೆ ಅಸುರರಿಗೆ ಅಜ್ಞಾನದ ಹರಡಿಕೆಯೇ ಪ್ರಿಯವು. ದೈವಸಂಪತ್ತಿನವರಿಗೆ ಹಾಗಲ್ಲ, ಅವರಿಗೆ ಜ್ಞಾನಯೋಗದ ಬೆಳಕು ಬೇಕು. ಅವರು ತಾವೂ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕಲ್ಲದೆ, ಮಿಕ್ಕವರನ್ನೂ ಆ ಬೆಳಕಿನ ಪ್ರದೇಶಕ್ಕೆ ಕರೆತರಬೇಕೆಂದು ಪ್ರಯತ್ನಪಡುತ್ತಿರುವರು.

ಗೀತೆಯ ಉಪದೇಶವು ಅನುಷ್ಠಾನದಲ್ಲಿ ಬಂದಂತೆಲ್ಲ ಈ ಗುಣಗಳು ಲೋಕದಲ್ಲಿ ಹೆಚ್ಚುಹೆಚ್ಚಾಗಿ ಹರಡುವವು. ಚಾಪಲ್ಯ, ವಿಷಯದಲ್ಲಿ ಮುಳುಗಿರುವದು, ಸಿಟ್ಟು, ಚಾಡಿ, ಹಿಂಸೆ – ಮುಂತಾದ ದೋಷಗಳನ್ನು ತೊಲಗಿಸಿಕೊಂಡು ಇಂದ್ರಿಯಗಳನ್ನು ಗೆದ್ದುಕೊಂಡು ಮನಸ್ಸನ್ನು ಸ್ವಾಧೀನದಲ್ಲಿ ನಿಲ್ಲಿಸಿಕೊಳ್ಳುವದು, ಯಜ್ಞ, ದಾನ, ತಪಸ್ಸು– ಮುಂತಾದವುಗಳನ್ನು ಆಚರಿಸುತ್ತಾ ಸರ್ವಭೂತಗಳಲ್ಲಿಯೂ ದಯಾವಂತರಾಗಿ ಸರ್ವದಿಕ್ಕುಗಳನ್ನೂ ಸುಖಮಯವಾಗಿ ಮಾಡುವದು – ಇದೇ ಈ ಲೋಕದಲ್ಲಿ ಹುಟ್ಟಿದ್ದರ ಸಾರ್ಥಕ್ಯವೆಂದು ನಂಬುವವರ ಗುಂಪು ಹೆಚ್ಚುವದು. ಪ್ರಪಂಚದ ಈಗಿನ ತೊಡಕುಗಳಿಗೆ ಈ ಗುಣಗಳನ್ನು ಹೆಚ್ಚಿಸಿಕೊಳ್ಳುವದರಿಂದ ಏನಾದರೂ ಪರಿಹಾರವುಂಟಾಗಬಹುದೆಂದು ಹಾರೈಸುವವರೆಲ್ಲರೂ ಗೀತೆಯ ಉಪದೇಶವನ್ನು ಕೇಳಿದರೆ ಅವಶ್ಯವಾಗಿ ಹಿಗ್ಗುವರು; ಅಂಥವರಿಗೆ ಮಾತ್ರ ಈ ಚಿಕ್ಕಗ್ರಂಥದ ಮಹಿಮೆಯು ನಿರುಪಮಾನವಾದದ್ದೆಂದು ತೋರುವದು.

# ಭಗವದ್ಗೀತೆಯಲ್ಲಿ ಸರ್ವಶ್ರೇಷ್ಠಶ್ಲೋಕ

ಭಗವದ್ಗೀತೆಯಲ್ಲಿರುವ ಏಳುನೂರು ಶ್ಲೋಕಗಳಲ್ಲಿ ಯಾವದನ್ನು ಸರ್ವಶ್ರೇಷ್ಠವೆನ್ನಬೇಕು? – ಎಂಬ ಪ್ರಶ್ನೆಗೆ ಒಬ್ಬೊಬ್ಬರು ಒಂದೊಂದು ಉತ್ತರವನ್ನು ಕೊಟ್ಟಿರುವರು. ಗೀತೆಯಲ್ಲಿ ಕರ್ಮ, ಭಕ್ತಿ, ಜ್ಞಾನ – ಮುಂತಾದವುಗಳಲ್ಲಿ ಯಾವದೋ ಒಂದನ್ನು ತಾತ್ಪರ್ಯದಿಂದ ಬೋಧಿಸಿದೆಯೆಂದು ಮೊದಲೇ ಇಟ್ಟುಕೊಂಡಿರುವದೇ ಈ ಮತಭೇದಕ್ಕೆ ಕಾರಣವು. ಗೀತೆಯ ಪ್ರತಿಯೊಂದು ಶ್ಲೋಕವೂ ಒಂದೊಂದು ದೃಷ್ಟಿಯಿಂದ

ಬಹು ಮಹತ್ವದ್ದಾಗಿ ಕಾಣಿಸುವದರಲ್ಲಿ ಸಂದೇಹವೇ ಇಲ್ಲ. ಆದರೆ ಭಗವಂತನು ಅರ್ಜುನನಿಗೆ ಮಾಡಿರುವ ಉಪದೇಶಗಳನ್ನೆಲ್ಲ ಹೊಂದುಗಡೆಮಾಡುವ ತಿರುಳಿನ ಶ್ಲೋಕವು ಯಾವದಾದರೂ ಉಂಟೆ? ಈ ಪ್ರಶ್ನೆಗೆ ಉತ್ತರವಾಗಿ ನನ್ನ ಬುದ್ಧಿಗೆ ಹೊಳೆದಿರುವ ಒಂದು ಶ್ಲೋಕವನ್ನು ವಾಚಕರ ಮುಂದೆ ಇಡುತ್ತೇನೆ;

**ಯತಃ ಪ್ರವೃತ್ತಿ ರ್ಭೂತಾನಾಂ ಯೇನ ಸರ್ವಮಿದಂ ತತಮ್ ।**
**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥ (ಗೀ.18-46)**

ಯಾವಾತನಿಂದ ಪ್ರಾಣಿಗಳೆಲ್ಲವೂ ಹುಟ್ಟಿ ಕೆಲಸಮಾಡುತ್ತಿರುವವೋ, ಯಾವಾತನಿಂದ ಇದೆಲ್ಲವೂ ವ್ಯಾಪ್ತವಾಗಿರುವದೋ, ಆತನನ್ನು ತನ್ನ ತನ್ನ ಕರ್ಮದಿಂದ ಅರ್ಚನೆ ಮಾಡಿದರೆ ಮನುಷ್ಯನು ಸಿದ್ಧಿಯನ್ನು ಹೊಂದುವನು.

ಮನಸ್ಸು ಕೊಟ್ಟು ನೋಡಿದರೆ ಈ ಒಂದೇ ಒಂದು ಶ್ಲೋಕದಲ್ಲಿ ಭಗವಂತನ ಉಪದೇಶದ ಸಾರವೆಲ್ಲ ಅಡಗಿರುವದೆಂದು ಕಂಡುಬರುತ್ತದೆ. **'ತನ್ನ ತನ್ನ ಕರ್ಮದಿಂದ'** ಎಂಬಲ್ಲಿ ಕರ್ಮಯೋಗವು ಸೂಚಿತವಾಗಿರುವದು; **'ಆತನನ್ನು ಅರ್ಚನೆಮಾಡಿದರೆ'** ಎಂಬಲ್ಲಿ ಭಕ್ತಿಯೋಗವಿರುವದು; **'ಯಾವಾತನಿಂದ ಪ್ರಾಣಿಗಳು ಹುಟ್ಟಿ ಕೆಲಸ ಮಾಡುತ್ತಿರುವವೋ, ಯಾವಾತನಿಂದ ಇದೆಲ್ಲವೂ ವ್ಯಾಪ್ತವಾಗಿರುವದೋ'** ಎಂಬ ವಾಕ್ಯದಲ್ಲಿ ಜ್ಞಾನಯೋಗವಿರುವದು; **'ಸಿದ್ಧಿಯನ್ನು ಹೊಂದುವನು'** ಎಂಬ ವಾಕ್ಯದಲ್ಲಿ ಈ ಯೋಗಗಳ ಫಲದ ವಿಚಾರವಿರುವದು. ಆದ್ದರಿಂದ ಈ ಶ್ಲೋಕದಲ್ಲಿ ಒಂದೊಂದು ವಾಕ್ಯದ ಪೂರ್ಣಾಭಿಪ್ರಾಯವನ್ನೂ ಮನಸ್ಸಿನಲ್ಲಿ ಚೆನ್ನಾಗಿ ಅಗಿದು ಮೆಲುಕುಹಾಕಿ ನುಂಗಿ ಅರಗಿಸಿಕೊಳ್ಳುವದರಿಂದ ತುಷ್ಟಿಯೂ ಪುಷ್ಟಿಯೂ ಉಂಟಾಗುವದರಲ್ಲಿ ಒಂದಿಷ್ಟೂ ಸಂಶಯವಿಲ್ಲ.

**ಯತಃ ಪ್ರವೃತ್ತಿರ್ಭೂತಾನಾಂ** 'ಯಾವಾತನಿಂದ ಭೂತಗಳ ಪ್ರವೃತ್ತಿಯುಂಟಾಗುವದೋ' ಈ ವಾಕ್ಯಕ್ಕೆ ಪರಮಾತ್ಮನಿಂದಲೇ ಎಲ್ಲವೂ ಹುಟ್ಟಿರುವದು, ಸಕಲ ಪ್ರಾಣಿಗಳಲ್ಲಿಯೂ ಕಾಣಬರುವ ಸಣ್ಣಪುಟ್ಟ ವ್ಯಾಪಾರಗಳಿಗೆಲ್ಲ ಪರಮಾತ್ಮನೇ ತಾಯಿ ಬೇರು - ಎಂದಭಿಪ್ರಾಯವು. ನಮ್ಮೆದುರಲ್ಲಿ ಕಾಣಬರುವ ಚೇತನಾಚೇತನ ರೂಪವಾದ ಜಗತ್ತು ಒಬ್ಬರ ಹಂಗಿಲ್ಲದೆ ಹೀಗೆಯೇ ಬಹುಹಿಂದಿನಿಂದಲೂ ಇದ್ದುಕೊಂಡಿರುತ್ತದೆಯೆಂದೂ ಇದರಲ್ಲಿ ತೋರುವ ಪ್ರಾಣಿಗಳು ಮಾಡುವ ಬಗೆಬಗೆಯ ವ್ಯಾಪಾರಗಳನ್ನು ಆಯಾ ಪ್ರಾಣಿಗಳೇ ತಮ್ಮಷ್ಟಕ್ಕೆ ತಾವೇ ಮಾಡುತ್ತಿರುವವೆಂದೂ ನಮ್ಮ ಅಜ್ಞಾನದ ನೋಟದಿಂದ

ನೋಡಿದಾಗ ತೋರುವದು. ಆದರೆ ನಿಜವಾಗಿ ನೋಡಿದರೆ ಪರಮಾತ್ಮನನ್ನು ಬಿಟ್ಟರೆ ಯಾವದೊಂದಕ್ಕೂ ಸ್ವತಂತ್ರವಾದ ಇರವು ಇಲ್ಲ; ಇವುಗಳು ಹುಟ್ಟುವದು, ಇರುವದು, ವೃಗರೆಯುವದು – ಎಲ್ಲವೂ ಆ ಪರಮಾತ್ಮನಲ್ಲಿಯೇ, ಇರುವಷ್ಟು ಕಾಲದಲ್ಲಿಯೂ ಒಂದೊಂದು ಪ್ರಾಣಿಯ ವ್ಯಾಪಾರಕ್ಕೂ ಆ ಪರಮಾತ್ಮನೇ ಸೂತ್ರಧಾರಿಯು; ಅದರ ಬುದ್ಧಿಯನ್ನು ಆತನೇ ಪ್ರೇರಿಸುವವನು, ಆ ಪ್ರೇರಣೆಯಿಂದಲೇ ಪ್ರಾಣಿಗಳು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗುತ್ತಿರುವವು. ಇದು ಜ್ಞಾನದ ದೃಷ್ಟಿಯಿಂದ ತಿಳಿಯ ಬೇಕಾಗಿರುವ ವಿಷಯವು.

**ಯೇನ ಸರ್ವಮಿದಂ ತತಮ್** – 'ಯಾವಾತನಿಂದ ಇದೆಲ್ಲವೂ ವ್ಯಾಪ್ತವಾಗಿ ರುವದೋ' ಎಂದರೆ ಯಾವಾತನು ಈ ಜಗತ್ತನ್ನು ಹುಟ್ಟಿಸುವದಕ್ಕೂ ವ್ಯಾಪಾರಕ್ಕೂ ಕಾರಣ ನಾಗಿರುವನೋ, ಹೊರಗೆ ನಿಂತಿರುವ ತಟಸ್ಥ ಕಾರಣಮಾತ್ರನಾಗಿರುವದಿಲ್ಲವೋ, ಯಾವಾತನು ಇದರಲ್ಲೆಲ್ಲ ಹಾಸುಹೊಕ್ಕಾಗಿ ಸೇರಿಕೊಂಡಿರುವನೋ – ಎಂದರ್ಥ. ಯಂತ್ರ ವನ್ನು ಮಾಡುವಾತನು ಯಂತ್ರವನ್ನು ತನ್ನ ಬುದ್ಧಿಕುಶಲತೆಯಿಂದ ಏರ್ಪಡಿಸಿರುವನು; ಆದರೆ ವ್ಯಾಪಾರವೆಲ್ಲ ಅವನ ಜಾಣತನದ ಫಲವೇ ಆಗಿರುವದು. ಆದರೆ ಜಗತ್ತನ್ನು ಭಗವಂತನು ನಿರ್ಮಿಸಿರುವದೂ ಅದರಲ್ಲಿರುವ ಪ್ರಾಣಿಗಳ ವ್ಯಾಪಾರಕ್ಕೆ ಕಾರಣನಾಗಿರು ವದೂ ಹೀಗಲ್ಲ. ಗಡಿಯಾರವನ್ನು ಜೋಡಿಸಿ ಕೀಲುಕೊಟ್ಟು ಮಾರಾಟಕ್ಕೆ ಕಳುಹಿಸು ವಂತೆ ಆತನು ಜಗತ್ತನ್ನು ಸೃಷ್ಟಿಸಿ ಕೆಲಸಕ್ಕೆ ಹಚ್ಚಿರುವ ಶಿಲ್ಪಿಯಲ್ಲ; ಆತನು ಜಗತ್ತಿನ ಒಂದೊಂದು ಭಾಗದಲ್ಲಿಯೂ ವ್ಯಾಪಿಸಿರುತ್ತಾನೆ. ಅಥವಾ ಅದನ್ನು ವ್ಯಾಪಿಸಿಕೊಂಡಿರು ತ್ತಾನೆಂದು ಹೇಳುವದೇನು, ತಾನೇ ಈ ಜಗತ್ತಿನ ರೂಪದಲ್ಲಿ ತೋರಿಕೊಳ್ಳುತ್ತಾನೆ. ಇದೂ ಜ್ಞಾನಯೋಗದಿಂದಲೇ ತಿಳಿಯತಕ್ಕದ್ದು.

**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ** – ಮನುಷ್ಯರು ಹುಟ್ಟಿದ್ದು ಸಾರ್ಥಕವಾಗಬೇಕಾದರೆ ಮಾಡತಕ್ಕದ್ದೇನೆಂದರೆ, ತಮ್ಮ ತಮ್ಮ ಹುಟ್ಟುಗುಣಕ್ಕೆ ತಕ್ಕ ಕೆಲಸವನ್ನು ಮಾಡಬೇಕು; ಅದರ ಫಲವನ್ನು ಕೋರುತ್ತ ಮನಸ್ಸನ್ನು ನೋಯಿಸಿ ಕೊಳ್ಳಬಾರದು. ಪರಮಾತ್ಮನು ಕೊಟ್ಟಿರುವ ಶಕ್ತಿಯನ್ನುಪಯೋಗಿಸಿ ತಮ್ಮ ತಮ್ಮ ಕಾರ್ಯಗಳನ್ನು ನೆರವೇರಿಸಬೇಕು. ಇದು ಕರ್ಮಯೋಗವು. ಮನಸ್ಸು ಫಲದ ಕಡೆಗೆ ಜಗ್ಗದಿರುವದಕ್ಕೆ ಬೇರೊಂದು ಕಡೆಯಲ್ಲಿ ನಿಲ್ಲಿಸಿಕೊಳ್ಳಬೇಕಷ್ಟೆ; ಅದನ್ನು ಆ ಪರಮಾತ್ಮನ ಸ್ವರೂಪದಲ್ಲಿಯೇ ನಿಲ್ಲಿಸಿಕೊಂಡು, ತಾನು ಮಾಡಿದ ಕರ್ಮವನ್ನು ಆತನಿಗೇ ಒಪ್ಪಿಸ ಬೇಕು. ಅದೇ ಭಗವಂತನ ಅರ್ಚನೆಯು. ಹೀಗೆ ತಮ್ಮ ತಮ್ಮ ಕರ್ಮವನ್ನು ಸಾವಧಾನ

ವಾಗಿ ಮಾಡಿ ಭಗವಂತನಿಗೆ ಅರ್ಪಿಸುವದೇ ಧ್ಯಾನಯೋಗವು. ಅದೇ ಭಕ್ತಿಯೋಗದ ಕರ್ಮಫಲಕ್ಕಾಗಿ ಹೊಯ್ದಾಡದಂತೆ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವದು. ಧ್ಯಾನ ಯೋಗವು; ಆ ಮನಸ್ಸನ್ನು ಪರಮಾತ್ಮನಲ್ಲಿಯೇ ಪ್ರೇಮದಿಂದ ನಿಲ್ಲಿಸಿಕೊಳ್ಳುವದು ಭಕ್ತಿಯೋಗವು.

ಇದರಿಂದ ಮನುಷ್ಯನಿಗೆ ಆಗುವ ಸಿದ್ಧಿಯೇನೆಂದರೆ ಮನಸ್ಸು ಶುದ್ಧವಾಗುವದು; ಬುದ್ಧಿಯು ವಿಚಾರದಲ್ಲಿ ಹೊಗುವದು; ಜ್ಞಾನಕ್ಕೆ ತಕ್ಕ ಯೋಗ್ಯತೆಯು ಬರುವದು; ಈ ಜ್ಞಾನದಿಂದ ಎಲ್ಲೆಲ್ಲಿಯೂ ವ್ಯಾಪಿಸಿರುವ ಭಗವಂತನ ನಿಜವಾದ ಸ್ವರೂಪವನ್ನು ಕಂಡುಕೊಂಡು ಶಾಂತಿಯನ್ನೂ ಪರಮಾನಂದವನ್ನೂ ಹೊಂದುವನು. ಆ ಸಿದ್ಧಿಯು ಬಂದಾತನು ನೋಡುವದೆಲ್ಲ ಪರಮಾತ್ಮನೇ ಮಾಡುವದೆಲ್ಲ ಪರಮಾತ್ಮನ ಅರ್ಚನೆಯೆ. ಆತನು ತನಗಾಗಿ ಮಾಡಿಕೊಳ್ಳಬೇಕಾದದ್ದೇನೂ ಇರುವದೇ ಇಲ್ಲ.

# ಭಗವದ್ಗೀತೆಯ ಕೇಂದ್ರ

**ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।**
**ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ ॥**

ಗೀತೆಯ ಉಪದೇಶಕ್ಕೆಲ್ಲ ಒಂದು ಕೇಂದ್ರವಿರುವದು, ಆ ಕೇಂದ್ರದ ಸುತ್ತಲೇ ಗೀತೋಪದೇಶವೆಲ್ಲ ಸುತ್ತುತ್ತಿರುವದು. ಸೌರವ್ಯೂಹದಲ್ಲಿ ಸೂರ್ಯನು ಹೇಗೆ ಮುಖ್ಯವೋ ಹಾಗೆ ಗೀತೋಪದೇಶಗಳ ವ್ಯೂಹಕ್ಕೆ ಒಂದು ಕೇಂದ್ರವಿರುವದು. ಆ ಕೇಂದ್ರವು ಭಗವದ್ಗೀತೆಯೆಂಬ ಹೆಸರಿನಲ್ಲಿಯೇ ಅಡಕವಾಗಿರುತ್ತದೆ. ಭಗವಂತನೇ ಆ ಕೇಂದ್ರವು.

ಯಾವನಿಗೆ ಭಗವಂತನೊಬ್ಬನು ನಿಜವಾಗಿಯೂ ಇರುವನೆಂದು ನಂಬಿಕೆಯಿಲ್ಲವೋ ಯಾವನು ಭಗವದ್ವಿಚಾರವೆಂದರೆ ಬೇಸರಪಡುವನೋ, ಅವನಿಗೆ ಭಗವದ್ಗೀತೆಯಲ್ಲಿ ಆದರ ಹುಟ್ಟುವದು ಶಕ್ಯವಿಲ್ಲ, ಭಗವದ್ಗೀತೆಯೆಂಬ ಕಟ್ಟಡಕ್ಕೆ ಭಗವಂತನೇ ತಳಹದಿ; ಭಗವದ್ಗೀತೆಯೆಂಬ ರತ್ನಾಭರಣಗಳ ಪೆಟ್ಟಿಗೆಗೆ ಭಗವಂತನೇ ಬೀಗದ ಕೈ; ಭಗವದ್ಗೀತೆಯೆಂಬ ಅಮೃತತರಂಗಿಣಿಗೆ ಭಗವಂತನೇ ಉದ್ಗಮಸ್ಥಾನವು; ಭಗವದ್ಗೀತೆಯೆಂಬ ಕುಸುಮಕ್ಕೆ ಭಗವಂತನೇ ಸಕಲ ಸೌಂದರ್ಯವು ಮತ್ತು ಸುವಾಸನೆಯು.

ಆದ್ದರಿಂದ ಯಾವನು ಭಗವಂತನಲ್ಲಿ ಪ್ರೇಮವುಳ್ಳಾತನೋ ಅಂಥವನು ಗೀತೋಪದೇಶದ ರಹಸ್ಯವನ್ನು ಕಂಡುಕೊಳ್ಳಬಲ್ಲನು. ಅದರ ಆನಂದವನ್ನು ಅನುಭವಿಸಬಲ್ಲನು. ಮತ್ತೊಬ್ಬರಿಗೂ ತಿಳಿಯಪಡಿಸಬಲ್ಲನು.

ಭಗವದ್ಗೀತೆಯ ಉಪದೇಶವನ್ನೆಲ್ಲ ಭಟ್ಟಿಯಿಳಿಸಿದರೆ ಕೊನೆಗೆ ಒಂದು ತತ್ತ್ವವು ಉಳಿದುಕೊಳ್ಳುವದು. ಭಗವಂತನು ನಿಜವಾಗಿ ನಮ್ಮೆಲ್ಲರ ಹೃದಯದಲ್ಲಿಯೂ ಇರುತ್ತಿರುವನು. ಆದರೆ ನಾವು ಒಳಗೆ ಇಣಿಕಿಯೂ ನೋಡುವದಿಲ್ಲ, ಶರೀರವೆಂಬ ಮಾಯಾಮಯವಾದ ರಾಟೆಯ ಕುದುರೆಯನ್ನು ಹತ್ತಿಕೊಂಡು ಅದನ್ನು ದೌಡು ಬಿಡುತ್ತಾ ಸಂಸಾರದಲ್ಲಿ ತೊಳಲುತ್ತಿರುವೆವು. ಇದೇ ನಮ್ಮ ಕಷ್ಟಕ್ಕೆಲ್ಲ ಮೂಲಕಾರಣವಾಗಿ ರುವದು. ಆದರೆ ಈ ಸವಾರಿಯ ವೇಗವನ್ನು ಸ್ವಲ್ಪ ಕಡಿಮೆಮಾಡಿಕೊಂಡು ನಮ್ಮ ಹೃದಯದೊಳಕ್ಕೆ ನಾವು ಒಂದಿಷ್ಟು ಇಣುಕಿ ನೋಡಿದರೆ ಸಾಕು, ಅಂದಿನಿಂದ ನಮ್ಮ ಕ್ಲೇಶಗಳು ಸಡಿಲವಾಗುವವು. ಜೀವನ ಪಥವು ಸಲೀಸಾಗಿ ಸಾಗುವದು. ಜಗತ್ತು ಸುಖಮಯವಾಗಿ ಕಾಣುವದಕ್ಕೆ ಮೊದಲಾಗುವದು.

ನಾವು ಪ್ರಯತ್ನಪಟ್ಟರೆ ಭಗವಂತನ ಅನುಗ್ರಹದಿಂದ ನಮ್ಮ ಸಂಕಟಗಳನ್ನೆಲ್ಲ ಪರಿಹರಿಸಿಕೊಳ್ಳಬಹುದೆಂದು ಯಾವನು ನಂಬಿರುವನೋ, ಈಗಿನ ಸ್ಥಿತಿಗಿಂತ ಹೆಚ್ಚಿನ ಅಂತಸ್ತಿನಲ್ಲಿ ಆನಂದದಿಂದ ನಾವು ಇರುವದು ಸಾಧ್ಯವೆಂದು ಯಾವಾತನು ಅದಕ್ಕಾಗಿ ಹವಣಿಸುತ್ತಿರುವನೋ, ಅಂಥವನಿಗಾಗಿಯೇ ಭಗವದ್ಗೀತೆಯು ಹುಟ್ಟಿರುವದು. ಭಗವದ್ಗೀತೆಯಲ್ಲಿ ಉಪದೇಶಿಸಿರುವ ಕರ್ಮಯೋಗ, ಧ್ಯಾನಯೋಗ, ಭಕ್ತಿಯೋಗ, ಜ್ಞಾನಯೋಗ – ಎಂಬ ಸಾಧನಗಳೆಲ್ಲ ಈ ನಂಬಿಕೆಯನ್ನು ಆಧಾರವಾಗಿಟ್ಟುಕೊಂಡೇ ಹೊರಟಿರುವವು. ಇವುಗಳನ್ನು ಮಾಡುವದಕ್ಕೆ ಹೊರಡುವ ಮೊದಲೇ ಭಗವಂತನ ಅಸ್ತಿತ್ವದಲ್ಲಿ ನಂಬಿಕೆಯಿರಬೇಕು. ಎಂದರೆ ನಮ್ಮ ಹೃದಯದಲ್ಲಿದ್ದುಕೊಂಡು ನಮ್ಮನ್ನು ಸರಿಯಾದ ದಾರಿಗೆ ಹಚ್ಚುವ ದೈವಿಕಶಕ್ತಿಯ ಕಡೆಗೆ ಲಕ್ಷ್ಯವಿಟ್ಟವರಾಗಿರಬೇಕು; ಇವುಗಳನ್ನು ಭಗವಂತನಿಗೆ ಸಂಬಂಧಿಸಿಯೇ ಸಾಧನಮಾಡಬೇಕು. ಹೀಗೆ ಮನಃಪೂರ್ವಕವಾಗಿ ಯಾವಾತನು ಮಾಡುವನೋ ಅವನು ತಾನು ನಿಜವಾಗಿ ಭಗವಂತನಿಂದಲೇ ಬಂದು ಭಗವಂತನಲ್ಲಿಯೇ ಜೀವಿಸಿಕೊಂಡಿರುವೆನೆಂಬುದನ್ನು ಕಂಡುಕೊಂಡು ಭಗವನ್ಮಯನಾಗುವನು.

ಐಐಐಐಐ

# ಗೀತೋಕ್ತಯೋಗದ ವಿಭಾಗ

**ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾನಘ ।**
**ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇಣ ಯೋಗಿನಾಮ್ ॥**

ಗೀತೆಯ ಉಪದೇಶವನ್ನು ಎರಡು ದೊಡ್ಡ ವಿಭಾಗವಾಗಿ ವಿಂಗಡಿಸಬಹುದಾಗಿರುವದು. ಮೊದಲನೆಯದು ಕರ್ಮಯೋಗ, ಎರಡನೆಯದು ಜ್ಞಾನಯೋಗ. ಈ ಎರಡರ ಉದ್ದೇಶವೂ ಒಂದೇ. ಸಂಸಾರದಲ್ಲಿ ಮನುಷ್ಯನಿಗುಂಟಾಗುತ್ತಿರುವ ಶೋಕ ಮೋಹಗಳನ್ನು ತೊಲಗಿಸಿಕೊಂಡು ಆನಂದದಿಂದ ವ್ಯವಹಾರಮಾಡುವದಕ್ಕೆ ಸಹಾಯ ಮಾಡುವದೇ ಇವುಗಳ ಉದ್ದೇಶವು.

ಅತಿಪ್ರಾಕೃತರ ಮನಸ್ಸಿನಲ್ಲಿ ಈ ಎರಡು ದೋಷಗಳೂ ತುಂಬಿತುಳುಕುತ್ತಿರುವವು. ಮಿಕ್ಕವರ ಮನಸ್ಸಿನಲ್ಲಿ ಇವು ಅವರ ಸಂಸ್ಕಾರಕ್ಕೆ ತಕ್ಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಿರುವವು. ಶೋಕಮೋಹಗಳ ಹೊಡೆತಕ್ಕೆ ಸಿಕ್ಕಿರುವ ಮನುಷ್ಯನಿಗೆ ತಾನು ಯಾರು, ತನ್ನ ಕರ್ತವ್ಯವೇನು –ಎಂಬ ಜ್ಞಾನವು ಇರುವದಿಲ್ಲ, ಮಾಡಬೇಕಾದದ್ದನ್ನು ಬಿಡುವದು, ಮಾಡಬಾರದ್ದನ್ನು ಮಾಡುವದು, ಈ ಎರಡು ಬಗೆಯ ಕರ್ಮಗಳಿಂದ ಸಾಲುಸಾಲಾಗಿ ಅನರ್ಥಗಳನ್ನು ಪಡೆದು ದುಃಖಿಸುತ್ತಿರುವದು – ಇದೇ ಅವನ ಜೀವನಚರಿತ್ರೆಯಾಗಿರುವದು.

ಜನಜೀವನದ ಸ್ಥಿತಿಯಲ್ಲಿ ಎಷ್ಟು ಏರುಪೇರುಗಳಾದರೂ, ಸಮಾಜದಲ್ಲಿ ಎಷ್ಟು ಸುಧಾರಣೆಗಳಾದರೂ ಈ ಶೋಕಮೋಹಗಳ ಉಪಟಳವನ್ನು ಅಡಗಿಸಿಕೊಂಡಲ್ಲದೆ ಯಾರೊಬ್ಬರಿಗೂ ಉಳಿಗಾಲವಿಲ್ಲ; ಯಾರೊಬ್ಬರಿಗೂ ದುಃಖದಿಂದ ಪಾರಾಗುವ ಆಶೆಯಿಲ್ಲ, ಈ ಘನವಾದ ತತ್ತ್ವವನ್ನು ತಿಳಿಯಪಡಿಸಲೋಸುಗವಾಗಿಯೇ ಕೃಷ್ಣಾರ್ಜುನರ ಸಂವಾದರೂಪವಾದ ಗೀತೆಯು ಶ್ರೀವ್ಯಾಸದೇವರಿಂದ ನಿರ್ಮಿತವಾಯಿತು. ಆದ್ದರಿಂದಲೇ ಅರ್ಜುನನಂಥ ಕ್ಷತ್ರಿಯೋತ್ತಮನೂ ಈ ಶೋಕಮೋಹಗಳಿಗೆ ತುತ್ತಾದನೆಂಬ ಕಥೆಯ ಸಂವಿಧಾನದಲ್ಲಿ ಆತನ ನೆಪದಿಂದ ನಮಗೆಲ್ಲರಿಗೂ ಗೀತೋಪದೇಶವನ್ನು ಮಾಡಿರುತ್ತದೆ.

ಭಗವದ್ಗೀತೆಯಲ್ಲಿ ಧ್ಯಾನಯೋಗ, ಭಕ್ತಿಯೋಗ – ಮುಂತಾಗಿ ಇನ್ನೂ ಎಷ್ಟೋ ಯೋಗಗಳನ್ನು ಹೇಳಿರುತ್ತದೆ; ಆದರೆ ಅವೆಲ್ಲವೂ ಈ ಎರಡು ಯೋಗಗಳಲ್ಲಿಯೇ

ಅಡಕವಾಗಿವೆ. ಯೋಗವೆಂದರೆ ಉಪಾಯವು, ಸಾಧನವು; ಭಗವಂತನೆಂಬ ಕೇಂದ್ರ ವನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ಎರಡು ಯೋಗಗಳನ್ನು ಅನುಷ್ಠಾನದಲ್ಲಿಟ್ಟುಕೊಂಡ ವರಿಗೆ ಶೋಕಮೋಹಗಳ ಹುಟ್ಟಡಗುವದು, ಸರ್ವದಿಕ್ಕುಗಳೂ ಸುಖಮಯವಾಗುವವು - ಎಂಬುದೇ ಗೀತೋಪದೇಶದ ಸಾರವು.

ಗೀತೆಯಲ್ಲಿರುವ ಒಂದೊಂದು ಅಧ್ಯಾಯದ ವಿಷಯಕ್ಕೂ ಒಂದೊಂದು ಯೋಗವೆಂಬ ಹೆಸರನ್ನು ಕೊಟ್ಟಿರುತ್ತದೆಯೆಂಬುದು ಆಯಾ ಅಧ್ಯಾಯದ ಕೊನೆಯಲ್ಲಿ ವಚನರೂಪವಾದ ಉಪಸಂಹಾರವಾಕ್ಯದಲ್ಲಿ ಕಂಡುಬರುವದು. ಅವೆಲ್ಲ ಗೀತೋಕ್ತವಾದ ಪರಮತತ್ತ್ವವನ್ನು ಮನಗಾಣುವದಕ್ಕೆ ಯೋಗಗಳೇ, ಅಂದರೆ ಸಾಧನಗಳೆ? ಆ ಯೋಗ ಗಳಿಗೆ ಒಂದಕ್ಕೊಂದಕ್ಕೆ ಸಂಬಂಧವೇನು? ಅಷ್ಟು ಯೋಗಗಳೂ ಮೇಲೆ ಹೇಳಿದ ಎರಡೇ ಯೋಗಗಳಲ್ಲಿ ಹೇಗೆ ಅಡಗಿರುತ್ತವೆ? ಈ ಎರಡು ಯೋಗಗಳಿಗೂ ಇರುವ ಸಂಬಂಧವೇನು? ಈ ಪ್ರಶ್ನೆಗಳಿಗೆಲ್ಲ ಉತ್ತರವನ್ನು ಕಂಡುಕೊಳ್ಳಬೇಕಾದರೆ ಗೀತಾ ಗ್ರಂಥದ ವಿಭಾಗಕ್ರಮವನ್ನು ಇನ್ನಿಷ್ಟು ಒಳಹೊಕ್ಕು ನೋಡಬೇಕು.

# ಕರ್ಮಯೋಗದ ಮೆಟ್ಟಿಲುಗಳು

**ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।**
**ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥**

ಮನುಷ್ಯನು ಸ್ವಭಾವವಾಗಿಯೇ ಕರ್ಮಪರನಾಗಿರುವನು. ಕರ್ಮವೆಂದರೆ ಕೆಲಸ. ಯಾವ ಕೆಲಸವನ್ನೂ ಮಾಡದೆ ಒಂದು ಗಳಿಗೆಯೂ ಸುಮ್ಮನೆ ಇರುವದು ದೇಹ ವನ್ನು ಧರಿಸಿರುವ ಪ್ರಾಣಿಮಾತ್ರಕ್ಕೆ ಸಾಧ್ಯವಿಲ್ಲ; ಕರ್ಮಗಳಿಂದ ಆಗುವ ಸುಖ ದುಃಖ ಗಳನ್ನು ಕುರಿತು ಆಲೋಚಿಸಬಲ್ಲ ಮನುಷ್ಯನಿಗಂತೂ ಕರ್ಮವನ್ನು ಮಾಡದೆ ಇರು ವದು ಶಕ್ಯವೇ ಇಲ್ಲ. ಆದ್ದರಿಂದ ಕರ್ಮಯೋಗದಲ್ಲಿ ಕರ್ಮವನ್ನು ಮಾಡಬೇಕೆಂಬು ದನ್ನೇನೂ ಹೊಸದಾಗಿ ಹೇಳಿಕೊಡಬೇಕಾಗಿಲ್ಲ; **ಕರ್ಮವನ್ನು ಹೇಗೆ ಮಾಡಬೇಕೆಂಬು ದನ್ನು ತಿಳಿಸಿಕೊಡುವದೇ** ಈ ಯೋಗದ ಗುರಿಯು.

ಜನರು ಕರ್ಮವನ್ನು ಮಾಡುತ್ತಿರುವ ರೀತಿಯು ಅವರಿಗೆ ಇಲ್ಲದ ಸಂಕಟ ಗಳನ್ನು ತಂದೊಡ್ಡುತ್ತಿರುವದು. ಅವರಿಗೆ ಕರ್ಮದ ಉದ್ದೇಶವೇ ತಿಳಿಯದು. ಕಾಮ

ಕ್ರೋಧಲೋಭಗಳ ಹೊಡೆತಕ್ಕೆ ಸಿಕ್ಕಿ ಅವರು ಕರ್ಮದ ಅಡಿಯಾಳುಗಳಾಗಿ ಕೆಲಸ ಮಾಡುತ್ತಿರುವವರು; ಉಪ್ಪು ನೀರನ್ನು ಕುಡಿಯುವವರಿಗೆ ಮತ್ತಷ್ಟು ನೀರಡಿಕೆಯುಂಟಾಗುವಂತೆ, ಅವರು ಮಾಡುತ್ತಿರುವ ಕರ್ಮವು ಮತ್ತೆ ಮತ್ತೆ ಕರ್ಮದ ಆಯಾಸಕ್ಕೆ ಪಕ್ಕಾಗುವಂತೆಯೂ ಶೋಕಮೋಹಗಳ ಬಲೆಯಾದ ಸಂಸಾರದಲ್ಲಿ ತೊಳಲುತ್ತಿರುವಂತೆಯೂ ಅವರನ್ನು ಮುಂದಕ್ಕೆ ದೂಡುತ್ತಿರುವದು. ಕರ್ಮವನ್ನು ಮಾಡಿ ಕರ್ಮದ ಕಟ್ಟಿಗೆ ಸಿಕ್ಕಿಕೊಳ್ಳದ ಹಾಗೂ ಕರ್ಮವು ಕರ್ಮವಲ್ಲದಂತೆ ಅದನ್ನು ಮಾರ್ಪಡಿಸಿಕೊಂಡು ನಿತ್ಯಶಾಂತಿಯನ್ನು ಪಡೆದುಕೊಳ್ಳುವಂತೆಯೂ ಮಾಡುವ ದಾರಿಯನ್ನು ತೋರಿಸುವದೇ ಕರ್ಮಯೋಗದ ಕೆಲಸವು.

ಈ ಕಾರಣದಿಂದ ಕರ್ಮಯೋಗದಲ್ಲಿ - ಕರ್ಮಗಳನ್ನು ಮಾಡುವ ಬಗೆ (= ಕರ್ಮಯೋಗ), ಕರ್ಮಗಳನ್ನು ಮಾಡುವ ಬಗೆ (= ಕರ್ಮ ಸಂನ್ಯಾಸ) - ಎಂದು ಮುಖ್ಯವಾಗಿ ಎರಡು ಅಂತಸ್ತುಗಳು ಇರುತ್ತವೆ. ಎರಡನೆಯ ಅಂತಸ್ತಿನಲ್ಲಿ ಕರ್ಮಗಳನ್ನು ಮೀರುವ ಸಾಧನ (= ಧ್ಯಾನಯೋಗ), ಆ ಸಾಧನವನ್ನು ಅಳವಡಿಸಿಕೊಳ್ಳುವದಕ್ಕೆ ಮಾಡಬೇಕಾದ ಅವಲಂಬನ (= ಭಕ್ತಿಯೋಗ) - ಎಂಬ ಎರಡು ಮೆಟ್ಟಿಲುಗಳಿರುವವು. ಹೀಗೆ ನೋಡಿದರೆ ಕರ್ಮಯೋಗ, ಧ್ಯಾನಯೋಗ, ಭಕ್ತಿಯೋಗ - ಎಂಬೀ ಮೂರು ಮೆಟ್ಟಿಲುಗಳೂ ಭಗವದ್ಗೀತೆಯಲ್ಲಿ ಕರ್ಮಯೋಗವೆಂಬ ಹೆಸರಿನಲ್ಲಿ ಅಡಕವಾಗಿರುವವು. ಇವುಗಳನ್ನು ಏರಿದಾತನೇ ಜ್ಞಾನಯೋಗವೆಂಬ ಮಹಡಿಯಲ್ಲಿ ಸುಖದಿಂದ ವಿಹರಿಸಬಲ್ಲವನಾಗುವನು. ಆದ್ದರಿಂದ ಸಾಧಕನಾದವನು ಈ ಮೂರು ಮೆಟ್ಟಿಲುಗಳ ಸ್ವರೂಪವನ್ನು ಅರಿತುಕೊಂಡು ಕ್ರಮಕ್ರಮವಾಗಿ ಜ್ಞಾನದ ಮೇಲುಮಹಡಿಯನ್ನು ಕಂಡುಕೊಳ್ಳಬೇಕಾಗಿರುವದು.

ಕರ್ಮವನ್ನು ಮಾಡುವದರಿಂದಲೇ ಕರ್ಮವನ್ನು ಮೀರುವದೆಂಬುದು ಹೇಗೆ? ಕರ್ಮವನ್ನು ಮೀರುವದರಿಂದ ಜ್ಞಾನವು ಹೇಗೆ ದಕ್ಕುವದು? ಜ್ಞಾನವು ದಕ್ಕಿದ ಮಾತ್ರದಿಂದ ಸಕಲ ಪುರುಷಾರ್ಥವೂ ಹೇಗೆ ಕೈಸೇರುವದು? - ಈ ಪ್ರಶ್ನೆಗಳಿಗೆ ಒಂದೊಂದಾಗಿ ಉತ್ತರವನ್ನು ಹೇಳುವದಕ್ಕೆ ಪ್ರಯತ್ನಿಸುವೆನು.

# ಕರ್ಮಯೋಗರಹಸ್ಯ

**ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।**
**ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥ ಗೀ.5-10**

"ಯಾವನು ತನ್ನ ಕರ್ಮಗಳನ್ನು ಬ್ರಹ್ಮದಲ್ಲಿಟ್ಟು ಸಂಗವನ್ನು ಬಿಟ್ಟವನಾಗಿ ಮಾಡುವನೋ ಅವನು ಕಮಲದ ಎಲೆಯು ನೀರಿನಿಂದ ಅಂಟಿಕೊಳ್ಳದಿರುವಂತೆ, ಪಾಪದ ಅಂಟಿಲ್ಲದವನಾಗಿರುತ್ತಾನೆ" - ಎಂಬುದು ಮೇಲಿನ ಶ್ಲೋಕದ ಅಕ್ಷರಾರ್ಥ ಇದರ ಅಭಿಪ್ರಾಯವನ್ನು ಈಗ ಮನನ ಮಾಡೋಣ.

ಕರ್ಮವನ್ನು ಭಗವಂತನಲ್ಲಿಡುವದೆಂದರೇನು? ಕರ್ಮವೆಂದ ಮೇಲೆ ಕರ್ತೃ (ಮಾಡುವವ) ನಿರಲೇಬೇಕು. ಕರ್ತೃವಾದವನು ಕರ್ಮದಲ್ಲಿ ಮನಸ್ಸಿಟ್ಟು ಮಾಡಿದರೆ ಆ ಕರ್ಮವು ಚೆನ್ನಾಗಿ ಆಗುವದು ಅನುಭವದಲ್ಲಿದೆ. ಹೀಗಿರುವಾಗ ಪರಮೇಶ್ವರನಲ್ಲಿ ಕರ್ಮವನ್ನಿಡುವದು ಹೇಗೆ? ಎಂದು ಕೇಳಬಹುದು. ಇದಕ್ಕೆ ಉತ್ತರವೇನೆಂದರೆ: ಕರ್ಮವನ್ನು ಮಾಡುವಾಗ ಸೇವಕನು ಯಜಮಾನನಿಗಾಗಿ ಮಾಡುವಂತೆ ನಾನು ಪರಮೇಶ್ವರನಿಗಾಗಿ ಮಾಡುತ್ತಿದ್ದೇನೆ ಎಂಬ ಭಾವನೆಯಿರಬೇಕು ಎಂದಿಷ್ಟೇ ಅಭಿಪ್ರಾಯ. ಒಬ್ಬ ನಿಷ್ಠಾವಂತನಾದ ಸೇವಕನು ತಾನು ಮಾಡುತ್ತಿರುವ ಕೆಲಸವು ತನಗಾಗಿ ಅಲ್ಲವೆಂದು ತಿಳಿದೇ ಮಾಡುತ್ತಾನೆ. ಆದರೆ ಅವನು ತನ್ನ ಕೆಲಸವು ಯಜಮಾನ ನಿಗೆ ಮೆಚ್ಚುಗೆಯಾಗಬೇಕು ಎಂದೇ ಚೆನ್ನಾಗಿಯೇ ಮಾಡುತ್ತಾನೆ. ಹಾಗೆಯೇ ಸಾಧಕನೂ ತನ್ನ ಕರ್ತವ್ಯಕರ್ಮವನ್ನು ಪರಮೇಶ್ವರನಿಗೆ ಮೆಚ್ಚುಗೆಯಾಗಲಿ! ಎಂಬ ಭಾವನೆಯಿಂದ ಮನಸ್ಸನ್ನು ಪರಮೇಶ್ವರನಲ್ಲಿಟ್ಟು ನಿಷ್ಠೆಯಿಂದ ಕರ್ಮವನ್ನು ಮಾಡಬೇಕು.

ಇಲ್ಲಿ ಕರ್ಮವೆಂಬ ಶಬ್ದವನ್ನು ಸಾಮಾನ್ಯವಾಗಿ ಉಪಯೋಗಿಸಿರುವದರಿಂದ ಲೌಕಿಕ ವೈದಿಕಕರ್ಮಗಳೆಲ್ಲವನ್ನೂ ತೆಗೆದುಕೊಳ್ಳಬೇಕು. ಈಗ್ಗೆ ಶಾಸ್ತ್ರೀಯ ಕರ್ಮಾನುಷ್ಠಾನವು ಜನರಲ್ಲಿ ವಿರಳವಾಗಿರುವದರಿಂದ ಲೌಕಿಕ ಕರ್ಮಗಳನ್ನೇ ಭಗವದರ್ಪಣ ಬುದ್ಧಿಯಿಂದ ಮಾಡಿದರೂ ಕರ್ಮಯೋಗವೆನಿಸುತ್ತದೆ. ಉದಾಹರಣೆಗೆ ಒಬ್ಬ ವೈದ್ಯನು ರೋಗಿಗೆ ಔಷಧವನ್ನು ಕೊಡುವಾಗ 'ನಾನು ಭಗವಂತನ ಸ್ವರೂಪನಾದ ರೋಗಿಗೆ ಚಿಕಿತ್ಸೆಮಾಡುತ್ತಿದ್ದೇನೆ. ನನ್ನ ಈ ಸೇವೆಯಿಂದ ಭಗವಂತನು ಸುಪ್ರೀತನಾಗಲಿ!' ಎಂದು ಮಾಡಿದಲ್ಲಿ ಅದು ಕರ್ಮಯೋಗವೇ ಆದೀತು. ಎಲ್ಲರಲ್ಲಿಯೂ ಇರುವ ಭಗವಂತನು ರೋಗಿಯಲ್ಲಿಯೂ ಇದ್ದಾನಷ್ಟೆ! ಇದೇ ರೀತಿಯಾಗಿ ಪ್ರತಿಯೊಂದು ಕಸುಬುಮಾಡು

ವವನೂ ಆಯಾ ಕಾಲಕ್ಕೆ ತಾನು ವ್ಯವಹರಿಸುವವರನ್ನು ದೇವರೆಂಬ ಬುದ್ಧಿಯಿಂದ ನೋಡುತ್ತಾ ಕರ್ಮಯೋಗವನ್ನು ಮಾಡಬಹುದಾಗಿದೆ.

ಇಲ್ಲಿ ಒಂದು ಶಂಕೆಯುಂಟಾಗಬಹುದಾಗಿದೆ. ಏನೆಂದರೆ : ಶಾಸ್ತ್ರದಲ್ಲಿ ವಿಧಿಸಿರುವ ಅಗ್ನಿಹೋತ್ರಾದಿಕರ್ಮಗಳೂ ಸಂಧ್ಯಾವಂದನಾದಿಸ್ಮಾರ್ತಕರ್ಮಗಳೂ ಪುಣ್ಯಕರವಾದವುಗಳೇ ಅಲ್ಲವೆ? ಅವುಗಳಲ್ಲಿ ಹೇಗೆ ಪಾಪದ ಸಂಪರ್ಕವಾದೀತು? ಆದ್ದರಿಂದ ಅವರಿಗೆ ಪಾಪಗಳು ಅಂಟುವದಿಲ್ಲ – ಎಂದು ಹೇಳಿದ್ದು ಸರಿಯೆ? ಇದಕ್ಕುತ್ತರವೇನೆಂದರೆ: ಪುಣ್ಯವಾಗಲಿ ಪಾಪವಾಗಲಿ ಎರಡೂ ಮೋಕ್ಷಕ್ಕೆ ಪ್ರತಿಬಂಧಕಗಳೇ ಆಗಿವೆ. ಏಕೆಂದರೆ ಪುಣ್ಯಮಾಡಿದವನೂ ಕಡ್ಡಾಯವಾಗಿ ಸ್ವರ್ಗಾದಿಗಳಲ್ಲಿ ಸುಖವನ್ನನುಭವಿಸಿ ಅನಂತರ ಮತ್ತೆ ಹುಟ್ಟಬೇಕಾಗುವದು. ಇದೂ ಸಂಸಾರಗೋಚರವಾದ ಫಲವೇ ಆಯಿತು. ಆದ್ದರಿಂದ ಮೋಕ್ಷವನ್ನು ಪಡೆಯಲಿಚ್ಛಿಸುವವರು ಪಾಪಪುಣ್ಯಗಳೆರಡನ್ನೂ ಮೀರಿದವರಾಗಬೇಕು. ಹೀಗೆ ಕರ್ಮಬಂಧವನ್ನು ಕಳೆದುಕೊಳ್ಳಬೇಕಾದರೆ ಅವನು ತನ್ನ ಕರ್ಮಗಳನ್ನು ಭಗವಂತನಿಗೆ ಅರ್ಪಿಸಿಯೇ ಮಾಡಬೇಕಾದದ್ದು ಅನಿವಾರ್ಯವಾಗಿರುತ್ತದೆ. ಆಗ ಮಾತ್ರವೇ ಅವನಿಗೆ ಕರ್ಮಬಂಧದಿಂದ ಬಿಡುಗಡೆಯಾದೀತು.

ಇನ್ನು '**ಸಂಗಂ ತ್ಯಕ್ತ್ವಾ**' ಎಂಬುದರ ಅರ್ಥವನ್ನು ವಿಚಾರಮಾಡೋಣ. ಸಂಗವೆಂಬುದು ಮೂರು ವಿಧವಾಗಿವೆ. ನಾನು ಮಾಡುವವನು ಎಂಬುದೊಂದು ಇಲ್ಲಿ 'ನಾನು' ಎಂಬ ಅಹಂಕಾರವೇ ಬಂಧಕವು. ಯಾವದೇ ಕೆಲಸವನ್ನು ಮಾಡುವಾಗ 'ನಾನು' ಎಂದುಕೊಳ್ಳದೆ ಮಾಡಲಾಗುವದಿಲ್ಲವಾದರೂ ನಿಜವಾಗಿ 'ನಾನು' ಎಂಬುದು ಏನನ್ನೂ ಮಾಡುವದಿಲ್ಲ, ಎಲ್ಲವೂ ಭಗವಂತನ ಇಚ್ಛೆಯಂತೆಯೇ ನಡೆಯುವದು. 'ನಾನೇ' ಮಾಡುವದಾಗಿದ್ದರೆ ಎಲ್ಲಾ ಕರ್ಮಗಳೂ ನಮ್ಮಂತೆಯೇ ಅನುಕೂಲಕರವಾಗಿ ಆಗಬೇಕಾಗಿತ್ತು. ಆದರೆ ಹಾಗಿಲ್ಲ, ಎಷ್ಟೋ ಸಂದರ್ಭಗಳಲ್ಲಿ ಅವು ನಮ್ಮ ಇಚ್ಛೆಗೆ ವಿರುದ್ಧವಾಗಿಯೇ ಆಗಿಬಿಡುತ್ತವೆ. ಹೀಗಿರುವಲ್ಲಿ 'ನಾನು ಮಾಡುತ್ತೇನೆ' ಎಂಬುದು ವೃಥಾಭಿಮಾನವಲ್ಲದೆ ಮತ್ತೇನು? ಇದನ್ನು ಮೊದಲು ತ್ಯಾಗಮಾಡಬೇಕು. ಎರಡನೆಯ ದಾಗಿ 'ಇಂಥ ದೊಡ್ಡ ಕೆಲಸವನ್ನು ಮಾಡಿದ್ದೇನೆ. ಇದರ ಮುಖ್ಯ ಕರ್ತೃ ನಾನೇ; ನನ್ನಷ್ಟು ಚೆನ್ನಾಗಿ ಇದನ್ನು ಯಾವನೂ ಮಾಡಲಾರನು' – ಎಂಬ ಕರ್ಮಸಂಗ. ಕೆಲವು ವೇಳೆ ಅಡಿಗೆಮಾಡಿದರೂ ಪಂಕ್ತಿಯ ಮೇಲೆ ಬಂದು 'ಅಡಿಗೆ ಹೇಗಿದೆ? ರುಚಿಯಾಗಿದೆಯೆ?' ಎಂದು ಕೇಳುತ್ತಾರೆ. 'ಇದು ನಾನು ಮಾಡಿದ್ದು' ಎಂಬ ಅಭಿಮಾನವೇ ಅವನ ಈ ನಡತೆಗೆ ಕಾರಣವಾಗಿದೆ. ಇದೇ ಕರ್ಮಸಂಗ. ಇದನ್ನೂ ಬಿಡಬೇಕು. ಇನ್ನು ಇಂಥ ಫಲ

ಕ್ಕಾಗಿ ಮಾಡುತ್ತೇನೆ ಎಂಬ ಫಲಸಂಗ. ಇದಂತೂ ಸರ್ವಸಾಮಾನ್ಯವಾಗಿದೆ. 'ಪ್ರಯೋಜನ **ಮನುದ್ದಿಶ್ಯ ನ ಮನ್ದೋऽಪಿ ಪ್ರವರ್ತತೇ'** ಎಂಬ ನ್ಯಾಯದಂತೆ ಪ್ರಯೋಜನಬುದ್ಧಿ ಯಿಲ್ಲದೆ ಯಾವನೂ ಏನೂಮಾಡಲಾರನು. ಇದನ್ನು ತಪ್ಪು ಎಂದು ಹೇಗೆ ಹೇಳುವದು? ಎಂತಲೂ ಕೆಲವರ ಪ್ರಶ್ನೆ. ಆದರೆ ಹೆಚ್ಚಿನ ಪ್ರಯೋಜನಕ್ಕಾಗಿ ಅಲ್ಪಪ್ರಯೋಜನವನ್ನು ಬಿಡುವದು ಎಲ್ಲರಿಗೂ ತಿಳಿದಿದೆ. ಹಾಗೆಯೇ ಇಲ್ಲಿಯೂ ಮೋಕ್ಷವೆಂಬ ಹೆಚ್ಚಿನ ಪ್ರಯೋಜನಕ್ಕಾಗಿ ಕರ್ಮಫಲವೆಂಬ ಅಲ್ಪಪ್ರಯೋಜನವನ್ನು ಬಿಡಬೇಕು. ಹೀಗೆ ಸಂಗ ತ್ಯಾಗಫಲತ್ಯಾಗಪೂರ್ವಕವಾಗಿ ಈಶ್ವರನು ಸುಪ್ರೀತನಾಗಲೆಂದು ಕರ್ಮಾನುಷ್ಠಾನವನ್ನು ಮಾಡುವದೇ ಕರ್ಮಯೋಗವು.

ಖಖಖಖಖ

# ಕರ್ಮವನ್ನು ಮಾಡುವದರಲ್ಲಿ ನಿಯಮಗಳು

**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।**
**ಮಾ ಕರ್ಮಫಲಹೇತುರ್ಭೂರ್ಮಾತೇ ಸಙ್ಗೋऽಸ್ತ್ವಕರ್ಮಣಿ ॥**

ಗೀತೋಕ್ತ ಕರ್ಮಯೋಗದಲ್ಲಿ ಕರ್ಮಯೋಗವನ್ನು ಮಾಡುವ ಬಗೆ, ಅದನ್ನು ಬಿಡುವ ಬಗೆ - ಎಂಬ ಎರಡು ಮುಖ್ಯವಾದ ಮೆಟ್ಟಿಲುಗಳಿರುವವು; ಮೊದಲನೆಯ ಮೆಟ್ಟಿಲನ್ನೇ ಕರ್ಮಯೋಗವೆಂದು ಕರೆಯುವ ರೂಢಿ ಬಹಳವಾಗಿದೆ - ಎಂದು ಹಿಂದೆ ಸೂಚಿಸಿದ್ದೇನಷ್ಟೆ. ಈಗ ಕರ್ಮಯೋಗದ ಮೊದಲನೆಯ ಮೆಟ್ಟಿಲಿನ ನಿಯಮ ಗಳನ್ನು ಇಲ್ಲಿ ಸಂಗ್ರಹವಾಗಿ ತೋರಿಸಿಕೊಡುವೆನು.

ಈ ಕರ್ಮಯೋಗದಲ್ಲಿರುವಾತನು ಮನಸ್ಸಿನಲ್ಲಿಡಬೇಕಾದ ಮೊದಲನೆಯ ನಿಯಮವೇನೆಂದರೆ, 'ಕರ್ಮವನ್ನು ಮಾಡುತ್ತಲೇ ಇರಬೇಕು', ಸ್ವಭಾವದಿಂದ ಉಸಿರಾಡುವದು, ಏಳುವದು, ಕೂರುವದು, ನೋಡುವದು, ಕೇಳುವದು- ಮುಂತಾದ ಕರ್ಮಗಳನ್ನು ಮಾಡದವರೇ ಇಲ್ಲ, ಆದ್ದರಿಂದ ಇವನ್ನೆಲ್ಲ ಕರ್ಮಗಳೆಂದು ಇಲ್ಲಿ ನಾವು ಕರೆಯುವದಿಲ್ಲ, ಶಾಸ್ತ್ರದಲ್ಲಿ ಮಾಡೆಂದು ಹೇಳಿರುವದನ್ನು ಮಾಡುವದು. ಬೇಡ ವೆಂದಿರುವದನ್ನು ಬಿಡುವದು - ಇದೇ ಇಲ್ಲಿ ಕರ್ಮ ಶಬ್ದಕ್ಕೆ ಅರ್ಥವು. ಶಾಸ್ತ್ರದಲ್ಲಿ ಮಾಡ ಬೇಕೆಂದು ಹೇಳಿರುವ ಕರ್ಮವನ್ನು ಯಜ್ಞ, ದಾನ, ತಪಸ್ಸು - ಎಂದು ಮೂರು ವಿಧವಾಗಿ ವಿಂಗಡಿಸಬಹುದು. ಇವುಗಳನ್ನು ಸಾತ್ತ್ವಿಕವಾದ ರೀತಿಯಲ್ಲಿ ಮಾಡುತ್ತಿರುವದೇ ನನ್ನ ಕರ್ತವ್ಯವು - ಎಂದು ತಿಳಿದಿರುವದು **ಕರ್ಮಯೋಗದ**

**ಮೊದಲನೆಯ ನಿಯಮವು.** ಬಾಯಿವೇದಾಂತವನ್ನು ಹೇಳಿಕೊಂಡು ಯಾವ ಸಾಧನವನ್ನೂ ಮಾಡದೆ ಇರುವವರು ಕೆಲವರುಂಟು; ಅಂಥವರ ಕಡೆಗೆ ಕಣ್ಣೆತ್ತಿಯೂ ನೋಡಬಾರದು, ಯಜ್ಞವೇ ಮುಂತಾದವುಗಳನ್ನು ತನ್ನ ಯೋಗ್ಯತೆಯಿದ್ದಷ್ಟು ಮಟ್ಟಿಗೆ ಶ್ರದ್ಧೆಯಿಂದ ಮಾಡುತ್ತಲೇ ಇರಬೇಕು.

ಮಾಡಿದ ಕರ್ಮದ ಫಲವನ್ನು ಚಿಂತಿಸುತ್ತಿರಬಾರದೆಂಬುದು ಈ ಯೋಗದ **ಎರಡನೆಯ ನಿಯಮವು.** ಮಾಡಿದ ಕರ್ಮಕ್ಕೆಲ್ಲ ಫಲವು ಇದ್ದೇ ಇರುವದು, ಆದರೆ ಈ ಕರ್ಮವನ್ನು ಇಂಥ ಫಲಕ್ಕೆ ಮಾಡುತ್ತೇನೆಂದು ಮಾಡುವದು ಬಹುಕ್ಷುದ್ರತನವು. ಕರ್ಮಗಳನ್ನು ಕರ್ತವ್ಯಬುದ್ಧಿಯಿಂದಲೇ ಮಾಡುವದರಿಂದ ಅವುಗಳ ಫಲವೇನೂ ಕಡಿಮೆಯಾಗುವದಿಲ್ಲ, ಅದು ಇನ್ನೂ ಹಿಗ್ಗುತ್ತದೆ. ಕರ್ಮಗಳಿಂದ ಆಗುವ ಉತ್ತಮಫಲ ವೆಂದರೆ ಅಂತಃಕರಣಶುದ್ಧಿಯು; ಈ ಉತ್ತಮಫಲವನ್ನು ಬಿಟ್ಟು ಸಣ್ಣಪುಟ್ಟ ಫಲಗಳಿಗೆ ಕೈನೀಡುವದು ತಿಳಿವಳಿಕೆಗಾಗಿ ವಿದ್ಯಾಭ್ಯಾಸವೆಂಬುದನ್ನರಿಯದೆ ಉಪಾಧ್ಯಾಯರು ಕೊಡುವ ಗುಣಸಂಖ್ಯೆ (Marks) ಗಾಗಿ ಓದುವ ಹುಡುಗರ ಸ್ಥಾನಕ್ಕೆ ಇಳಿದಂತೆ ಆಗುವದು.

ನಾನು ಇಂಥ ಹೆಚ್ಚಿನ ಕರ್ಮವನ್ನು ಮಾಡುತ್ತೇನೆಂದು ಹೆಮ್ಮೆಪಡಬಾರ ದೆಂಬುದು ಈ ಯೋಗದ **ಮೂರನೆಯ ನಿಯಮವು.** ಈ ಹೆಮ್ಮೆಗೆ ಸಂಗವೆಂದು ಹೆಸರು. ಇದರಿಂದ ಕರ್ಮದ ಫಲವನ್ನು ಪಡೆಯುವದಕ್ಕೂ ಸಿದ್ಧನಾದಂತೆಯೆ ಆಗು ವದು. ಸಂಗ, ಫಲಾಸಕ್ತಿ - ಇವೇ ಕರ್ತೃತ್ವಭೋಕ್ತೃತ್ವಗಳೆನಿಸುವವು. ಇದನ್ನು ಮಾಡಿ ಇದನ್ನು ಪಡೆಯುವೆನು - ಎಂಬ ಬುದ್ಧಿಯೇ ನಮ್ಮನ್ನು ಕರ್ಮಕ್ಕೆ ಅಡಿಯಾಳಾಗಿ ಮಾಡುವದು; ಇದರಿಂದಲೇ ನಾವು ಸಂಸಾರದಲ್ಲಿ ತೊಳಲುತ್ತಿರುವದು. ಆದ್ದರಿಂದ ಸಾತ್ತ್ವಿಕರೀತಿಯಿಂದ ಕರ್ಮವನ್ನು ಮಾಡುವ ಬಗೆಯನ್ನು ಕಲಿತುಕೊಂಡು ಕರ್ಮದ ಸಂಗದ ಮತ್ತು ಕ್ಷುದ್ರಫಲದ ಕಣ್ಣಿಯನ್ನು ಕಳೆದುಕೊಳ್ಳಬೇಕು. ಆಗಲೇ ಕರ್ಮದ ನಿಜವಾದ ಉತ್ತಮಪ್ರಯೋಜನವಾದ ಚಿತ್ತಶುದ್ಧಿಯು ನಮಗೆ ದಕ್ಕುವದು.

ಕರ್ಮವು ಬಂಧಕವಾದ್ದರಿಂದ ಅದನ್ನೇ ಕೈಬಿಟ್ಟುಬಿಡೋಣ - ಎಂದು ತಪ್ಪು ಹಾದಿಯನ್ನು ತುಳಿಯದೆ ಇರುವದು ಕರ್ಮಯೋಗದ **ನಾಲ್ಕನೆಯ ನಿಯಮವು.** ಕರ್ಮವನ್ನು ಫಲಕ್ಕಾಗಿ ಮಾಡುವದು, ಇಲ್ಲದಿದ್ದರೆ ಏನನ್ನೂ ಮಾಡದ ಸೋಮಾರಿ ಗಳಾಗಿರುವದು - ಇವೆರಡೇ ಅಜ್ಞರಿಗೆ ಹೊಳೆಯುವ ಯೋಚನೆಗಳು. ಆದರೆ ಇವೆರಡೂ ಕರ್ಮದ ಗಂಟನ್ನು ಕಗ್ಗಂಟುಮಾಡಿಕೊಳ್ಳುವ ಯೋಚನೆಗಳೇ. ಏಕೆಂದರೆ

ಕರ್ಮವನ್ನು ಫಲಕ್ಕಾಗಿ ಮಾಡುವದರಲ್ಲಿ ರಜೋಗುಣವು ಹೆಚ್ಚಾಗುವದು, ಸುಮ್ಮನೆ ಕೂತರೆ ತಮೋಗುಣವು ಹೆಚ್ಚುವದು. ಆದ್ದರಿಂದ ಕರ್ಮಬಂಧವನ್ನು ಕಳೆಯುವದಕ್ಕೆ ಇವೆರಡೂ ಮಾರ್ಗವಲ್ಲ, ಸಂಗವಿಲ್ಲದೆ, ಫಲಾಭಿಮಾನವಿಲ್ಲದೆ, ಸಾತ್ತ್ವಿಕರೀತಿಯಿಂದ ಕರ್ಮವನ್ನು ಮಾಡುತ್ತಿದ್ದರೆ ಮಾತ್ರ ಕರ್ಮದ ಕಟ್ಟನ್ನು ಸಡಿಲಿಸಿಕೊಳ್ಳಬಹುದು.

# ಕರ್ಮವನ್ನು ಮಾಡುವದು ಮೇಲೊ, ಬಿಡುವದು ಮೇಲೊ?

**ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾ ವುಭೌ ।**
**ತಯೋಸ್ತು ಕರ್ಮಸಂನ್ಯಾಸಾತ್ಕರ್ಮಯೋಗೋ ವಿಶಿಷ್ಯತೇ ॥**

ಪರಮಾರ್ಥಸಾಧನೆಗೆ ವೇದದಲ್ಲಿ ಎರಡು ಮಾರ್ಗಗಳನ್ನು ಹೇಳಿರುತ್ತದೆ. ಶಾಸ್ತ್ರದಲ್ಲಿ ವಿಧಿಸಿರುವ ಕರ್ಮಗಳನ್ನು ಕೈಬಿಟ್ಟು ಸಂನ್ಯಾಸಿಯಾಗಿ ಪರಮಾರ್ಥವನ್ನು ಸಾಧಿಸುವದು ಒಂದು ಮಾರ್ಗ; ಶಾಸ್ತ್ರದಲ್ಲಿ ಹೇಳಿರುವಂತೆ ಕರ್ಮಗಳನ್ನು ಮಾಡಿಕೊಂಡೇ ಪರಮಾರ್ಥವನ್ನು ಸಾಧಿಸುವದು ಮತ್ತೊಂದು ಮಾರ್ಗ. ಇವೆರಡರಲ್ಲಿ ಯಾವದು ಮೇಲೆಂದು ಅರ್ಜುನನು ಕೇಳಿದ್ದಕ್ಕೆ ಭಗವಂತನು ಗೀತೆಯಲ್ಲಿ ಕೊಟ್ಟಿರುವ ಉತ್ತರವನ್ನು ಮೇಲಿನ ಶ್ಲೋಕದಲ್ಲಿ ಕೊಟ್ಟಿರುತ್ತದೆ. ಇದರ ಆಶಯವನ್ನು ಇಲ್ಲಿ ಸ್ವಲ್ಪ ಬಿಡಿಸಿ ನೋಡೋಣ.

"ಕರ್ಮವನ್ನು ಮಾಡದೆ ಇದ್ದ ಮಾತ್ರದಿಂದ ನೈಷ್ಕರ್ಮ್ಯವು ಬರುವದಿಲ್ಲ; ಬರಿಯ ಸಂನ್ಯಾಸದಿಂದ ಸಿದ್ಧಿಯು ಬರುವದೂ ಇಲ್ಲ" (ಗೀ. 3-4) - ಎಂದು ಭಗವಂತನು ಮೊದಲು ಹೇಳಿರುತ್ತಾನೆ. ಸಂನ್ಯಾಸ, ಕರ್ಮಯೋಗ - ಇವೆರಡೂ ಮುಕ್ತಿಗೇ ಕಾರಣವಾಗಿರುತ್ತವೆ; ಆದರೆ "ಇವೆರಡರಲ್ಲಿ ಸಂನ್ಯಾಸಕ್ಕಿಂತ ಕರ್ಮಯೋಗವು ಮೇಲು"(5-2) - ಎಂದು ಆಮೇಲೆ ಹೇಳಿರುತ್ತಾನೆ. ಈ ಎರಡು ಉತ್ತರಗಳನ್ನೂ ಒಟ್ಟುಗೂಡಿಸಿದರೆ ಏನು ಫಲಿತಾಂಶವಾಗುವದು? ಕರ್ಮವನ್ನು ಸಂನ್ಯಾಸ ಮಾಡುವ ವಿಧಾನವನ್ನು ಅರಿತು ಮಾಡಿದವರಿಗೆ ಅದರಿಂದ ಮುಕ್ತಿಯೇ ದೊರೆಯುವದು. ಅದನ್ನು ಅರಿಯದೆ ಮಾಡಿದರೆ ಕರ್ಮಸಂನ್ಯಾಸವೂ ದಕ್ಕುವದಿಲ್ಲ, ಅದರ

ಫಲವಾದ ಮುಕ್ತಿಯಂತು ದಕ್ಕುವದೇ ಇಲ್ಲ. ಕರ್ಮವನ್ನು ಸರಿಯಾಗಿ ಬಿಡುವದನ್ನು ಕಲಿತುಕೊಳ್ಳದೆ ಇರುವವರು ತಟ್ಟನೆ ಶಾಸ್ತ್ರೋಕ್ತಕರ್ಮಗಳನ್ನು ಬಿಟ್ಟು ಸಂನ್ಯಾಸಾಶ್ರಮ ವನ್ನು ವಹಿಸುವದಕ್ಕಿಂತ ಕರ್ಮವನ್ನು ಮಾಡುವದೇಮೇಲು. ಅವರು ಕರ್ಮ ಯೋಗದ ನಿಯಮಗಳನ್ನು ಅನುಸರಿಸಿ ಕರ್ಮವನ್ನು ಮಾಡುತ್ತಿದ್ದರೆ ಮುಂದೆ ಸರಿ ಯಾದ ಕರ್ಮ ಸಂನ್ಯಾಸಕ್ಕೂ ಅದರ ಫಲಕ್ಕೂ ಯೋಗ್ಯರಾಗಿಯೇ ಆಗುತ್ತಾರೆ. ಇದಿಷ್ಟು ಭಗವಂತನ ಉತ್ತರದ ಸಾರಾಂಶವು.

ಹಿಂದಿನ ಕಾಲದಲ್ಲಿ ಶಾಸ್ತ್ರದಲ್ಲಿ ವಿಧಿಸಿದಂತೆ ಕರ್ಮವನ್ನು ಮಾಡುವ ಶ್ರದ್ಧಾ ವಂತರೂ ಹೆಚ್ಚಾಗಿದ್ದರು; ಅವುಗಳನ್ನು ವಿಧಿವತ್ತಾಗಿ ಸಂನ್ಯಾಸಮಾಡಿ ಪರಮಾರ್ಥ ಸಾಧನೆಗೇ ಹೆಣಗಾಡುವ ಧೀರರೂ ಇದ್ದರು. ಆದ್ದರಿಂದ ಆ ಕಾಲಕ್ಕೆ ಶಾಸ್ತ್ರದಲ್ಲಿ ಹೇಳಿ ರುವ ಕರ್ಮವನ್ನು ಮಾಡುತ್ತಿರುವದು ಮೇಲೊ, ಅಥವಾ ಅದನ್ನು ಬಿಟ್ಟು ಅದಕ್ಕಿಂತ ಅಂತರಂಗವಾದ ಸಾಧನವನ್ನು ಮಾಡುವದು ಮೇಲೊ?- ಎಂಬ ಪ್ರಶ್ನೆಯೂ ಅದಕ್ಕೆ ಸಮಾಧಾನವೂ ಬೇಕಾಗಿದ್ದವು. ಈಗ ಶಾಸ್ತ್ರದಲ್ಲಿ ಹೇಳಿರುವಂತೆ ಕರ್ಮವನ್ನು ಮಾಡು ವದೂ ಆಗುವಂತಿಲ್ಲ, ಅದನ್ನು ಬಿಟ್ಟು ಇನ್ನೂ ಮೇಲಿನ ಮೆಟ್ಟಿಲನ್ನು ಹತ್ತುವ ಆಸೆಯು ಹುಟ್ಟುವದಂತೂ ಕಡುಕಷ್ಟವಾಗಿದೆ. ಆದರೂ ಪ್ರಪಂಚವ್ಯವಹಾರದಲ್ಲಿ ತೊಡಗಿ ಲೋಕೋಪಕಾರವೇ ಮುಂತಾದವುಗಳನ್ನು ಮಾಡುತ್ತಿರುವದು ಒಳ್ಳೆಯದೊ, ಅಥವಾ ಎಲ್ಲವನ್ನೂ ಬಿಟ್ಟು ಏಕಾಂತವಾಸದಲ್ಲಿದ್ದುಕೊಂಡು ಭಗವಂತನನ್ನು ಶರಣುಹೋಗು ವದು ಒಳ್ಳೆಯದೊ? - ಎಂಬ ಸಂಶಯವು ಒಬ್ಬಿಬ್ಬರನ್ನು ಈಗಲೂ ಬಾಧಿಸುತ್ತಿರು ವದುಂಟು. ಅಂಥವರಿಗೆ ಮೇಲಿನ ಪ್ರಶ್ನೋತ್ತರಗಳು ಉಪಯೋಗವಾಗುವವು.

ಕರ್ಮವನ್ನು ಮಾಡುವದು, ಬಿಡುವದು - ಇವುಗಳ ಮೇಲಿಂದ ನಮ್ಮ ಸ್ಥಾನಕ್ಕೆ ಹೆಚ್ಚುಗಾರಿಕೆ ಬರುವದಿಲ್ಲ; ಕರ್ಮದಲ್ಲಿದ್ದರೆ ಅದರಲ್ಲಿ ಹೇಗೆ ತೊಡಗಿರುವೆವು? ಕರ್ಮವನ್ನು ಬಿಟ್ಟರೆ ಹೇಗೆ ಬಿಡುವೆವು? ಎಂಬುದರ ಮೇಲಿಂದ ನಮ್ಮ ಸಾಧನಕ್ಕೆ ಕಳೆಯು ಬರುತ್ತದೆ. ಕರ್ಮವನ್ನು ಹೇಗೆ ಮಾಡಬೇಕು? - ಎಂಬ ಪ್ರಶ್ನೆಗೆ ಹಿಂದಿನ ಲೇಖನದಲ್ಲಿಯೇ ಉತ್ತರವು ದೊರಕಿದೆ. ಸಂಗವನ್ನೂ ಫಲದ ಅಭಿಮಾನವನ್ನೂ ಬಿಟ್ಟು ಕರ್ಮವನ್ನು ಮಾಡಬೇಕು, ಆಗಲೇ ಕರ್ಮಕ್ಕೆ ಹೆಚ್ಚಿನ ಬೆಲೆ.

ಹಾಗಾದರೆ ಕರ್ಮವನ್ನು ಬಿಡುವದು ಹೇಗೆ? ಕರ್ಮವನ್ನು ಬಿಡುವದಕ್ಕೆ ಹವಣಿಸಲೇಬಾರದೆಂದೂ ಅಲ್ಲಿ ಹೇಳಿತ್ತಲ್ಲವೆ? ಕರ್ಮವನ್ನು ಮಾಡುವದು, ಬಿಡುವದು

– ಎರಡೂ ಮುಕ್ತಿಗೆ ಕಾರಣವೆಂದು ಹೇಳುವದು ಅಕರ್ಮದಲ್ಲಿ ಸಂಗವಿರಬಾರದೆಂಬ ಮಾತಿಗೆ ವಿರುದ್ಧವಲ್ಲವೆ? – ಎಂದು ಯಾರಾದರೂ ಕೇಳಬಹುದು. ಈ ಪ್ರಶ್ನೆಗಳಿಗೆ ಮುಂದಿನ ಲೇಖನದಲ್ಲಿ ಉತ್ತರವನ್ನು ಕೊಡುವದಕ್ಕೆ ಯತ್ನಿಸುವೆನು.

**ಕರ್ಮದಿಂದಲಾಗಲಿ, ಪ್ರಜಾಸಂತತಿಯಿಂದಾಗಲಿ, ಧನಸಂಪಾದನೆಯಿಂದಾಗಲಿ ಮುಕ್ತಿಯಾಗಲಾರದು, ತ್ಯಾಗದಿಂದಲೇ ಅಮೃತತ್ವವು ದೊರಯುವದು.**

**– ಉಪನಿಷತ್ತು**

ಉಉಉಉಉ

# ಕರ್ಮವನ್ನು ಬಿಡುವ ರೀತಿ

**ಯದಾ ಹಿ ನೇನ್ದ್ರಿಯಾರ್ಥೇಷು ನ ಕರ್ಮಸ್ವನುಷಜ್ಜತೇ ।**
**ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಸ್ತದೋಚ್ಯತೇ ॥**

ಕರ್ಮಯೋಗದಲ್ಲಿ ಕರ್ಮವನ್ನು ಮಾಡುವದು, ಕರ್ಮವನ್ನು ಬಿಡುವದು ಎಂಬ ಎರಡು ಮೆಟ್ಟಿಲುಗಳಿರುವವೆಂದು ಹಿಂದೆ ತಿಳಿಸಿರುತ್ತೇನೆ. ಕರ್ಮವನ್ನು ಮಾಡುವ ರೀತಿ ಯಾವದೆಂಬುದನ್ನೂ ಸ್ವಲ್ಪಮಟ್ಟಿಗೆ ವಿವರಿಸಿರುತ್ತೇನೆ. ಈಗ ಕರ್ಮವನ್ನು ಬಿಡುವದು ಹೇಗೆಂಬುದನ್ನು ತಿಳಿದುಕೊಳ್ಳುವದಕ್ಕೆ ಹೊರಡೋಣ.

ಕರ್ಮವನ್ನು ಬಿಡುವದೆಂಬುದು ಎರಡನೆಯ ಮೆಟ್ಟಿಲು. ಕರ್ಮವನ್ನು ಮಾಡುವದೆಂಬ ಮೊದಲನೆಯ ಮೆಟ್ಟಿಲನ್ನು ಯಾವನು ಏರಿಲ್ಲವೋ, ಅವನಿಗೆ ಈ ಮೆಟ್ಟಿಲು ಗೋಚರವಾಗುವದೇ ಇಲ್ಲವೆಂಬುದು ಸ್ವಾಭಾವಿಕವಾಗಿದೆ. ಯಾವನು ಹಣವನ್ನು ಸಂಪಾದಿಸಿಯೇ ಇಲ್ಲವೋ ಅವನಿಗೆ ಹಣದ ಮೇಲಿನ ಅಭಿಮಾನವನ್ನು ಬಿಡುವದೆಂಬ ಮಾತಿಗೆ ಅರ್ಥವಾಗಲಾರದು; ಯಾವನಿಗೆ ಶತ್ರುಗಳನ್ನು ನಿಗ್ರಹಿಸುವ ಶಕ್ತಿಯೇ ಇಲ್ಲವೋ ಅವನಿಗೆ ಕ್ಷಮಾಗುಣದ ಉಪದೇಶದಿಂದ ಯಾವ ಪ್ರಯೋಜನವೂ ಇಲ್ಲ. ಅದರಂತೆ ಕರ್ಮವನ್ನು ಮಾಡಬಲ್ಲವನಿಗೇ ಕರ್ಮಸಂನ್ಯಾಸದಲ್ಲಿ ಅಧಿಕಾರವಿರುತ್ತದೆ.

ಕರ್ಮಯೋಗದ ಮೊದಲನೆಯ ಮೆಟ್ಟಿಲನ್ನು ಹತ್ತಲೇಬೇಕೆಂಬುವನು ಕರ್ಮವನ್ನು ತೊರೆಯುವ ಯೋಚನೆಯನ್ನು ಎಂದಿಗೂ ಮಾಡಬಾರದು; ಕರ್ಮವನ್ನು ಮಾಡದಿರುವದು ಸೋಮಾರಿಗಳ ಹೆಗ್ಗುರುತೆಂಬುದನ್ನೂ ಅಕರ್ಮಕ್ಕೂ ಒಂದು ಫಲವಿರುವದೆಂಬುದನ್ನೂ ಅವನು ಲಕ್ಷ್ಯದಲ್ಲಿಟ್ಟುಕೊಂಡಿರಬೇಕು. ಹೀಗೆ ಕರ್ಮವನ್ನೇ

ಮಾಡುತ್ತಾ, ಫಲದಾಸೆಯಿಲ್ಲದೆ, ಸಂಗವನ್ನು ಬಿಟ್ಟು ಆಕರ್ಮದಲ್ಲಿ ರತನಾಗದೆ ಇರುವದನ್ನು ಯಾವನು ಕಲಿತುಕೊಳ್ಳುವನೋ, ಅವನು ಎರಡನೆಯ ಮೆಟ್ಟಿಲಿಗೆ ಬಂದನು. ಈಗ ಅವನು ಕರ್ಮವನ್ನು ಬಿಡುವದನ್ನು ಅಭ್ಯಾಸಮಾಡಬಹುದು. ಈ ಎರಡನೆಯ ಮೆಟ್ಟಿಲಿಗೆ ಭಗವಂತನು' 'ಶಮ'' ಎಂಬ ಹೆಸರನ್ನು ಕೊಟ್ಟಿರುತ್ತಾನೆ.

ಕರ್ಮಗಳಿಗೆಲ್ಲ ಕಾಮವೇ ಕಾರಣವು, ಕಾಮಕ್ಕೆ ಸಂಕಲ್ಪವೇ ಕಾರಣ. ಆದ್ದರಿಂದ ಯಾವನು ಕಾಮವಿಲ್ಲದೆ ಕರ್ಮಗಳನ್ನು ಮಾಡಬಲ್ಲನೋ ಅವನೇ ಯೋಗದ ಮೊದಲನೆಯ ಮೆಟ್ಟಿಲನ್ನು ಏರಿದವನು. ಅವನಿಗೆ ಯೋಗಾರೂಢನೆಂದು ಹೆಸರು. ಅವನೇ ಕರ್ಮವನ್ನು ಬಿಡುವದೆಂಬ ಸಾಧನೆಗೆ ತಕ್ಕವನು. **ನಿಷ್ಕಾಮಕರ್ಮದ ಅನುಭವವಿಲ್ಲದಾತನು** ಕರ್ಮಗಳನ್ನು ಬಿಡುವದಕ್ಕೆ ಹೋದರೆ ಕೈಯಲ್ಲಿ ಕುರುಡು ಕವಡೆಯು ಕೂಡ ಇಲ್ಲದೆ ಕುಬೇರನಿಗೆ ಸಾಲವನ್ನು ಕೊಡುವದಕ್ಕೆ ಹವಣಿಸುವ ದಟ್ಟ ದರಿದ್ರನಂತೆ ನಗೆಗೀಡಾಗುವನು. ಅಂಥವನು ತನ್ನ ಏಳಿಗೆಯನ್ನು ತಾನೇ ಕೆಡಿಸಿಕೊಳ್ಳುವನು.

ಯೋಗಾರೂಢನಾಗಿ ಕರ್ಮವನ್ನು ಮೀರುವದಕ್ಕೆ ಪ್ರಯತ್ನಿಸುವವನು ಧ್ಯಾನಯೋಗ, ಭಕ್ತಿಯೋಗ – ಎಂಬ ಎರಡು ಮೆಟ್ಟಿಲುಗಳನ್ನು ಹತ್ತಬೇಕಾಗುವದು. ಕೆಳಕ್ಕೆ ಬೀಳದಂತೆ ಇವೆರಡನ್ನೂ ಏರುವ ಬಗೆ ಯಾವದೆಂಬುದನ್ನು ಮುಂದೆ ವಿಚಾರಕ್ಕೆ ತೆಗೆದುಕೊಳ್ಳುವೆನು.

# ಧ್ಯಾನಯೋಗ

**ತಪಸ್ವಿಭ್ಯೋऽಧಿಕೋ ಯೋಗೀ ಜ್ಞಾನಿಭ್ಯೋऽಪಿ ಮತೋऽಧಿಕಃ ।**
**ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ಯೋಗೀ ಭವಾರ್ಜುನ ॥**

ಕರ್ಮವನ್ನು ಬಿಡುವದಕ್ಕೆ ಕ್ರಮಕ್ರಮವಾಗಿ ಎರಡು ಮೆಟ್ಟಿಲುಗಳನ್ನು ಏರಬೇಕಾಗಿರುವದೆಂದು ಹಿಂದಿನ ಲೇಖನದಲ್ಲಿ ಹೇಳಿದ್ದೆನಷ್ಟೆ. ಈಗ ಆ ಮೆಟ್ಟಿಲುಗಳಲ್ಲಿ ಮೊದಲನೆಯದಾದ ಧ್ಯಾನಯೋಗವನ್ನು ಕುರಿತು ಒಂದೆರಡು ವಿಚಾರಗಳನ್ನು ವಾಚಕರ ಮುಂದಿಡುವೆನು.

ಕರ್ಮಯೋಗದಲ್ಲಿ ಮೊದಲನೆಯ ನಿಯಮವು ಕರ್ಮವನ್ನು ಮಾಡುತ್ತಲೇ

ಇರಬೇಕೆಂಬುದು. ಇದರ ವಿವರವನ್ನು ಈಗಾಗಲೇ ತಿಳಿಸಿದ್ದಾಗಿರುತ್ತದೆ. ಈ ಕರ್ಮ ಯೋಗದಲ್ಲಿಯೇ ಒಂದು ಅಂಗವಾಗಿರುವ ಧ್ಯಾನಯೋಗದಲ್ಲಿ ಕರ್ಮವನ್ನು ಬಿಡುವ ರೀತಿಯನ್ನು ವರ್ಣಿಸಿರುತ್ತದೆ ಎಂಬುದು ಪೂರ್ವಾಪರವಿರುದ್ಧವಲ್ಲವೆ?- ಎಂದು ಯಾರಾದರೂ ಕೇಳಬಹುದು. ನಿಜ, ಧ್ಯಾನಯೋಗದಲ್ಲಿ ಹೇಳಿರುವ ಕರ್ಮ ಸಂನ್ಯಾಸವು ಕರ್ಮವನ್ನೆಲ್ಲ ಬಿಡುವದನ್ನು ಹೇಳುವದಿಲ್ಲ, ಶರೀರದಿಂದ ಮಾಡುವ ಕರ್ಮವನ್ನು ಮೀರಿ ಅದಕ್ಕಿಂತಲೂ ಒಳಗಿನ ಸೂಕ್ಷ್ಮವಾದ ಮನಸ್ಸಿನ ಸೂಕ್ಷ್ಮ ಕರ್ಮವನ್ನು ಮಾತ್ರ ಇಲ್ಲಿ ತಿಳಿಸಿರುತ್ತದೆ. ಆದ್ದರಿಂದ ಕರ್ಮವನ್ನು ಬಿಡುವದನ್ನು ಇಲ್ಲಿ ಹೇಳಿದೆ ಎನ್ನುವದಕ್ಕಿಂತ ಕರ್ಮವನ್ನು ಮೀರುವ ಬಗೆಯನ್ನು ಹೇಳಿದೆಯೆಂಬುದೇ ಹೆಚ್ಚು ಒಪ್ಪುತ್ತದೆ.

ಧ್ಯಾನಯೋಗದಲ್ಲಿ ಮಾಡುವ ಮಾನವ ಕರ್ಮಕ್ಕೆ ಚಿಂತನೆ, ಉಪಾಸನ ಮುಂತಾದ ಬೇರೆ ಹೆಸರುಗಳೂ ಉಂಟು. ನಾವು ನಮಗೆ ಬೇಕಾದ ಹೊರಗಿನ ವಿಷಯಗಳ ಚಿಂತನೆಯಲ್ಲಿಯೇ ತೊಡಗಿರುವಾಗ ಅವುಗಳಲ್ಲಿ ಸಂಗ, ಆಮೇಲೆ ಅವುಗಳಲ್ಲಿ ಕಾಮ, ಕಾಮವು ಪರಿಪೂರ್ತಿಯಾಗದಿದ್ದರೆ ಕ್ರೋಧ; ಕ್ರೋಧದಿಂದಾಗಿ 'ಇದನ್ನು ಮಾಡಬಹುದು ಇದನ್ನು ಮಾಡಬಾರದು' – ಎಂಬ ವಿವೇಕವು ತಪ್ಪುವಿಕೆ; ಈ ಸಮ್ಮೋಹದಿಂದ ಶಾಸ್ತ್ರವೂ, ದೊಡ್ಡವರೂ ಮಾಡುವ ಉಪದೇಶದ ನೆನಹು ಉಂಟಾಗದೆ ಇರುವದು; ಇದರಿಂದ ಸರಿಯಾದ ಬುದ್ಧಿಯೂ ಹಾಳಾಗಿ ಸರ್ವನಾಶವಾಗುವಿಕೆ – ಹೀಗೆ ಒಂದರ ಹಿಂದೊಂದು ಅನರ್ಥವು ಬರುತ್ತಿರುವದಲ್ಲವೆ? ಈ ವಿಷಯಧ್ಯಾನ ವನ್ನು ಬಿಡುವದಕ್ಕಾಗಿ ಶ್ರೋತ್ರಾದಿಸಕಲೇಂದ್ರಿಯಗಳನ್ನೂ ಆಯಾ ವಿಷಯಗಳಿಂದ ಜಗ್ಗಬೇಕು. ಅವುಗಳನ್ನು ಮನಸ್ಸಿನಲ್ಲಿಯೇ ನಿಲ್ಲಿಸಿಕೊಳ್ಳಬೇಕು. ಮನಸ್ಸನ್ನು ಅದಕ್ಕೆ ಸಾಕ್ಷಿಯಾಗಿರುವ ಆತ್ಮನಲ್ಲಿ ನಿಲ್ಲಿಸಿಕೊಳ್ಳಬೇಕು. ಸಮುದ್ರದ ಕಡೆಗೆ ಹರಿಯುತ್ತಿರುವ ಗಂಗಾನದಿಯನ್ನು ತನ್ನ ಮೂಲದ ಕಡೆಗೆ ಹರಿಯುವಂತೆ ಮಾಡುವದು ಎಷ್ಟು ಕಷ್ಟವೋ ಮನೋವೃತ್ತಿಯನ್ನು ಇಂದ್ರಿಯಗಳ ಮೂಲಕ ಹೊರಸೂಸದಂತೆ ಮಾಡಿ ಹಿಮ್ಮೆಟ್ಟಿಸು ವದೂ ಆತ್ಮನ ಕಡೆಗೇ ಪ್ರವಾಹರೂಪದಿಂದ ಹರಿಯುವಂತೆ ಮಾಡುವದೂ ಅಷ್ಟೇ ಕಷ್ಟವು. ಅಥವಾ ಅದಕ್ಕಿಂತಲೂ ಇದೇ ಕಷ್ಟವಾಗಿರುವದೆಂದರೂ ಅಡ್ಡಿಯಿಲ್ಲ, ಗಾಳಿಯ ನ್ನಾದರೂ ಮೂಟೆಕಟ್ಟಬಹುದು, ಮನಸ್ಸನ್ನು ಹಿಡಿಯುವದು ಕಡುಕಷ್ಟ. ಆದರೂ ಇದು ಅಭ್ಯಾಸದಿಂದ ಸಾಧಕನಿಗೆ ದಕ್ಕುವದು. ಹೀಗೆ ಎಡೆಬಿಡದೆ ಆತ್ಮಚಿಂತನೆ ಯಲ್ಲಿ ತೊಡಗುವಂತೆ ಮಾಡುವದೇ **ಧ್ಯಾನಯೋಗವು.**

ಯಾವಾತನು ಈ ಧ್ಯಾನಯೋಗದಲ್ಲಿ ಜಯಶೀಲನಾಗುವನೋ ಅವನಿಗೆ ಹಿಂದೆ ಹೇಳಿದ **ಕರ್ಮಯೋಗ**ವೆಂಬುದು ಮಕ್ಕಳಾಟಿಕೆಯಾಗಿಬಿಡುವದು; ಏಕೆಂದರೆ

ಹೊರಗಿನ ವಿಷಯಗಳಲ್ಲಿ ಮನಸ್ಸು ಹರಿದಾಡುವದಕ್ಕೆ ಕಾಮವೇ ಕಾರಣವಷ್ಟೆ. ಆ ಕಾಮಕ್ಕೆ ಕಾರಣವಾದ ಸಂಗವು ಧ್ಯಾನಯೋಗಿಗೆ ಇರುವದೇ ಇಲ್ಲ. ಅವನ ಎಲ್ಲಾ ಇಂದ್ರಿಯವೃತ್ತಿಗಳೂ ಮನಸ್ಸಿನಲ್ಲಿ ಶಾಂತವಾಗಿರುತ್ತವಲ್ಲದೆ, ಮನಸ್ಸೂ ಆತ್ಮನಲ್ಲಿ ಶಾಂತವಾಗಿರುತ್ತದೆ. ಕರ್ಮಯೋಗಕ್ಕೆ ಬೇಕಾಗಿರುವದೆಲ್ಲ ಮನಸ್ಸಿನ ಏರುಪೇರಿಲ್ಲದಂತೆ ನೋಡಿಕೊಳ್ಳುವದು; ಆದರೆ ಸುಮ್ಮನೆ ಬಿಟ್ಟರೆ ಮನಸ್ಸು ಹರಿದಾಡದೆ ಬಿಡುವದೇ ಇಲ್ಲ. ಇದಕ್ಕಾಗಿಯೇ ಮನಸ್ಸಿಗೆ ಒಳಗೆ ಒಂದು ಉತ್ತಮವಿಷಯವನ್ನು - ಎಂದರೆ ನಮ್ಮ ಆತ್ಮನನ್ನು - ಚಿಂತನೆಗಾಗಿ ಕೊಟ್ಟು ಅದನ್ನು ನಿಲ್ಲಿಸಿಕೊಳ್ಳುವ ಅಭ್ಯಾಸವನ್ನು ಮಾಡಬೇಕಾಗಿರುತ್ತದೆ.

ಧ್ಯಾನಯೋಗವು ಯಾರಿಗೂ ಬಹು ಸುಲಭವಾಗಿ ದಕ್ಕುವದಿಲ್ಲ. ಆಹಾರ ವಿಹಾರಗಳಲ್ಲಿಯೂ ಮಾಡತಕ್ಕ ಕರ್ಮಗಳಲ್ಲಿಯೂ ನಿದ್ರೆ, ಎಚ್ಚರ - ಇವುಗಳಲ್ಲಿಯೂ ಮಿತದಿಂದ ವರ್ತಿಸುತ್ತಿರಬೇಕು; ಆಸನವನ್ನು ಅಳವಡಿಸಿಕೊಳ್ಳಬೇಕು; ಆಮೇಲೆ ಇಂದ್ರಿಯಗಳನ್ನೂ ಮನಸ್ಸನ್ನೂ ಎಡೆಬಿಡದೆ ಒಳಸರಿಸುವದಕ್ಕೆ ಪ್ರಯತ್ನಮಾಡುತ್ತಿರಬೇಕು. ಹೀಗೆ ಮಾಡುತ್ತಿದ್ದರೆ, ಕಾಲಾನುಕಾಲಕ್ಕೆ ಹಣ್ಣು ಕಳಿಯುವಂತೆ ಮನಸ್ಸು ಯೋಗ ಸಂಸ್ಕಾರದಿಂದ ಪಕ್ವವಾಗುತ್ತದೆ. ಇಂಥ ಯೋಗಿಯು ಕರ್ಮದ ಕಟ್ಟನ್ನು ಸುಖವಾಗಿ ಕಳಚಿಕೊಳ್ಳುತ್ತಾನೆ.

ಸುಮ್ಮನೆ ದೇಹವನ್ನೂ ಇಂದ್ರಿಯಗಳನ್ನೂ ದಮನಮಾಡುವವರು **ತಪಸ್ವಿಗಳೆ**ನಿಸುವರು. ಅಂಥ ತಪಸ್ವಿಗಳಿಗಿಂತಲೂ **ಧ್ಯಾನಯೋಗಿ**ಯು ಮೇಲಿನ ಅಂತಸ್ತಿನವನು, ಏಕೆಂದರೆ ಅವನು ತಪಸ್ಸಿನ ಕೀಲನ್ನು ಕಂಡುಕೊಂಡಿರುವನು. ಶಾಸ್ತ್ರದ ಅರ್ಥವನ್ನೆಲ್ಲ ಬಿಡಿಸಿ ತಿಳಿದುಕೊಂಡವರು **ಜ್ಞಾನಿ**ಗಳೆನಿಸುವರು. ಅಂಥ ಜ್ಞಾನಿಗಳಿಗಿಂತಲೂ **ಧ್ಯಾನಯೋಗಿಯು** ಹೆಚ್ಚಿನವನು. ಏಕೆಂದರೆ ಶಾಸ್ತ್ರಗಳ ಪರಮಪ್ರಯೋಜನವಾದ ಉಪಶಾಂತಿಯು ಇವನಿಗೆ ಕೈವಶವಾಗಿರುವದು. ಶಾಸ್ತ್ರದಲ್ಲಿ ಹೇಳಿರುವ ಸಂಧ್ಯಾವಂದನೆ, ಅಗ್ನಿಹೋತ್ರ - ಮುಂತಾದವುಗಳನ್ನು ಮಾಡುವರು **ಕರ್ಮಿ**ಗಳೆನಿಸುವರು. ಅಂಥ ಕರ್ಮಿಗಳಿಗಿಂತಲೂ ಧ್ಯಾನಯೋಗಿಯು ಹೆಚ್ಚಿನವನು. ಏಕೆಂದರೆ ಕರ್ಮವನ್ನು ಮಾಡುವದು ಅಂತಃಕರಣದ ಸಂಸ್ಕಾರಕ್ಕೆ. ಆ ಸಂಸ್ಕಾರದ ಫಲವಾದ ಶಾಂತಿಯೇ ಇವನ ಕೈವಶವಾಗಿರುತ್ತದೆ. ಹೀಗಿರುವದರಿಂದ ಯಾರು ಈ ಧ್ಯಾನಯೋಗವನ್ನು ಅಳವಡಿಸಿಕೊಂಡಿರುವರೋ ಅವರು ಕರ್ಮವನ್ನು ಮೀರಿರುವರೆಂಬುದು ಸಹಜವೇ ಆಗಿರುತ್ತದೆ.

# ಅಭ್ಯಾಸಯೋಗ

ಯಾವಾತನು ತಾನು ಮಾಡಿದ, ಮಾಡುತ್ತಿರುವ ಕರ್ಮಗಳನ್ನೆಲ್ಲ ಭಗವದರ್ಪಣೆ ಮಾಡುತ್ತಿರುತ್ತಾನೋ ಅವನು ಕಾಮರಹಿತನಾಗಿರುವದರಿಂದ ಪುಣ್ಯಕರ್ಮಗಳನ್ನೇ ಮಾಡುತ್ತಾನೆಯೇ ಹೊರತು ಪಾಪಕರ್ಮಗಳ ಗೋಜಿಗೇ ಹೋಗುವದಿಲ್ಲ. ಭಗವತ್ಸಂಬಂಧವಾದ ಕೂಡಲೇ ಭಗವತ್ಸಂಬಂಧದ ರುಚಿಯು ಮನಸ್ಸನ್ನು ಭಗವಂತನ ಕಡೆಗೇ ಸೆಳೆಯುತ್ತದೆ. ಭಗವಂತನಾದರೋ ನಾನಾರೂಪದಿಂದ ನಾನಾನಾಮಗಳಿಂದ ಪ್ರಕಾಶಿಸುತ್ತಿರುತ್ತಾನೆ. ಈ ಅಭ್ಯಾಸಯೋಗಿಯು ತನಗೆ ಇಷ್ಟವಾದ ರೂಪವನ್ನೂ ನಾಮವನ್ನೂ ಆರಿಸಿಕೊಂಡು ಧ್ಯಾನಮಾಡುವದಕ್ಕೆ ಆರಂಭಿಸಬೇಕು. ಹೀಗೆ ಆರಂಭಿಸಿದರೆ ಒಂದೆರಡು ನಿಮಿಷಗಳಲ್ಲಿಯೇ ಇಷ್ಟದೇವತಾಧ್ಯಾನವನ್ನು ತನಗೆ ಗೊತ್ತಿಲ್ಲದಂತೆಯೇ ಬಿಟ್ಟು ಮನೆ, ಮಠ - ಮುಂತಾದ ವಿಷಯಧ್ಯಾನದಲ್ಲಿ ತೊಡಗಿರುತ್ತಾನೆ. ಇದು ಗಾಯತ್ರೀ ಜಪವನ್ನು ಮಾಡುವ ಸರ್ವರಿಗೂ ಅನುಭವದಲ್ಲಿರುವ ವಿಷಯವಾಗಿದೆ. ಗಾಯತ್ರೀ ಜಪವನ್ನು ಅರ್ಥಾನುಸಂಧಾನಪೂರ್ವಕವಾಗಿ ಉಪಕ್ರಮಿಸಿ ನಾಲ್ಕೆಂಟು ಜಪಗಳನ್ನು ಮಾಡುವಷ್ಟರಲ್ಲಿಯೇ ಆತನ ಮನಸ್ಸು ಬೇರೆ ವಿಷಯವನ್ನು ಧ್ಯಾನ ಮಾಡುತ್ತಿರುತ್ತದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಆಗ ಕೂಡಲೇ ಆತನು 'ನನಗೆ ಇದೇಕೆ ಮನಸ್ಸಿಗೆ ಬಂದಿತು? ಗಾಯತ್ರೀ ಜಪವನ್ನಲ್ಲವೆ, ನಾನು ಪ್ರಾರಂಭಿಸಿದ್ದುದು?'- ಎಂದು ವಿಚಾರಮಾಡಿಕೊಂಡು ಮತ್ತೆ ಗಾಯತ್ರೀ ಜಪವನ್ನೇ ಹೇಗೆ ಪ್ರಾರಂಭಿಸುತ್ತಾನೆಯೋ? ಹಾಗೆಯೇ ಪರಮೇಶ್ವರನ ಧ್ಯಾನವನ್ನು ಮಾಡುವವನು, ಪರಮೇಶ್ವರನು ಜಗತ್ತಿನ ಉತ್ಪತ್ತಿನಾಶಗಳಿಗೆ ಕಾರಣನು; ತಾನು ಉತ್ಪತ್ತಿನಾಶಗಳನ್ನು ಹೊಂದದವನು, ಸಕಲೈಶ್ವರ್ಯಪ್ರದನಾಗಿದ್ದರೂ ತಾನು ಭಿಕ್ಷಾಟನೆಯನ್ನು ಮಾಡುವವನು; ಸರ್ವಸಂಪತ್ಪ್ರದನಾಗಿದ್ದರೂ ತಾನು ದಿಗಂಬರನು. ಸರ್ವಸೌಖ್ಯಪ್ರದನಾಗಿದ್ದರೂ ತಾನು ಭಸ್ಮಧಾರಿಯು - ಎಂದು ಮುಂತಾಗಿ ಧ್ಯಾನಮಾಡುವದಕ್ಕೆ ಪ್ರಾರಂಭಿಸಿದ ಸ್ವಲ್ಪ ಹೊತ್ತಿನಲ್ಲಿಯೇ ಮನೆಯೊ, ಮಕ್ಕಳೊ, ಹಣವೊ - ಮುಂತಾದ ವಿಷಯಧ್ಯಾನಗಳಲ್ಲಿ ನಿಂತಿರಬಹುದು. ಅಂಥವನು ವಿಚಾರದಿಂದ ಮನಸ್ಸನ್ನು ವಿಷಯಧ್ಯಾನದಿಂದ ಹಿಂತಿರುಗಿಸಿ ಪುನಃ ಪರಮೇಶ್ವರನ ಧ್ಯಾನವನ್ನೇ ಮಾಡಲು ಪ್ರಯತ್ನಪಡಬೇಕು. ಹೀಗೆ ಎಷ್ಟು ಬಾರಿ ವಿಷಯದ ಕಡೆಗೆ ಹೋದರೂ ಆ ಮನಸ್ಸನ್ನು ವಿಚಾರಪೂರ್ವಕವಾಗಿ ಹಿಂತಿರುಗಿಸಿ ಪರಮೇಶ್ವರನನ್ನೇ ಧ್ಯಾನಮಾಡುವಂತೆ ಮಾಡುವ ಪ್ರಯತ್ನಕ್ಕೆ **ಅಭ್ಯಾಸ**

ಯೋಗವೆಂದು ಹೆಸರು. ಹೀಗೆಯೇ ಪುನಃ ಪುನಃ ಭಗವದ್ಧ್ಯಾನವನ್ನು ಅಭ್ಯಾಸ ಮಾಡಿದರೆ ಆಗ ಭಗವಂತನನ್ನೇ ಸದಾ ಧ್ಯಾನಮಾಡುವ ಶಕ್ತಿಯು ಎದ್ದುಕೊಳ್ಳುತ್ತದೆ.

ಭಗವದ್ಗೀತೆಯ ಆರನೆಯ ಅಧ್ಯಾಯದ ಇಪ್ಪತ್ತಾರನೆಯ ಶ್ಲೋಕದಲ್ಲಿಯೂ ಚಂಚಲವೂ ಅಸ್ಥಿರವೂ ಆದ ಮನಸ್ಸು ಯಾವ ಯಾವ ಕಾರಣದಿಂದ ವಿಷಯದ ಕಡೆಗೆ ಹೋಗುತ್ತದೆಯೋ ಅದರಿಂದ ಅದನ್ನು ಹಿಂದಕ್ಕೆಳೆದು ವಿಚಾರದಿಂದ ನಿಯಮನ ಮಾಡಿ ಆತ್ಮನಲ್ಲಿಯೇ ನಿಲ್ಲಿಸಬೇಕು – ಎಂದು ಹೇಳಿರುತ್ತದೆ. ಮತ್ತು ಅರ್ಜುನನು 'ಮನಸ್ಸು ಚಂಚಲವಾದದ್ದು ವಿಷಯದ ಕಡೆಗೆ ಸೆಳೆಯುವಂತಹದು ಬಲವಾದದ್ದು; ಇದನ್ನು ತಡೆಗಟ್ಟುವದು ವಾಯುವನ್ನು ತಡೆಗಟ್ಟುವಂತೆ ಕಷ್ಟ' ಎಂದು ಹೇಳಿದ್ದಕ್ಕೆ ಶ್ರೀಭಗವಂತನು 'ನಿಜ, ಮನಸ್ಸು ಚಂಚಲವಾದದ್ದು ಕಷ್ಟಪಟ್ಟು ನಿಗ್ರಹಿಸತಕ್ಕದ್ದು ಆದರೂ ಅಭ್ಯಾಸ ಮಾಡುತ್ತಾ ಮಾಡುತ್ತಾ ಸ್ವಾಧೀನಕ್ಕೆ ಬರುತ್ತದೆ; ಮತ್ತು ವಿಷಯಗಳ ಹುಸಿತನವನ್ನು ಕಂಡುಕೊಳ್ಳುವದರಿಂದಲೂ ವಿಷಯಗಳಿಂದ ಹಿಂತಿರುಗಿಸಿ ಆತ್ಮನಲ್ಲಿ ನಿಲ್ಲಿಸುವದಕ್ಕೆ ಸಾಧ್ಯವಾಗುತ್ತದೆ' – ಎಂದು ಹೇಳಿರುತ್ತಾನೆ.

# ಪರಮಾತ್ಮನ ವಿಶ್ವರೂಪಧ್ಯಾನ

**ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।**
**ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥ ಗೀ. 12-8**

ಎಂದು ಭಗವದುಕ್ತಿ. ಅಂತಃಕರಣವು ಮನಸ್ಸು ಬುದ್ಧಿ ಚಿತ್ತ ಅಹಂಕಾರ- ಎಂದು ನಾಲ್ಕು ವಿಧವಾದ ವೃತ್ತಿಯುಳ್ಳದ್ದಾಗಿದೆ. ವಿಷಯಗಳನ್ನು ಮನಸ್ಸಿನಲ್ಲಿ 'ಹಾಗೆ ಹೀಗೆ' ಎಂದು ಚಿಂತಿಸುತ್ತಿದ್ದರೆ ಮನಸ್ಸು – ಎಂದು ಹೆಸರು. ಆ ಮನಸ್ಸನ್ನು ವಿವಿಧ ವಿಷಯ ಕಲ್ಪನೆಗೆ ಹೋಗದಂತೆ ಪರಮಾತ್ಮನನ್ನೇ ಧ್ಯಾನಮಾಡುವಂತೆ ತಯಾರು ಮಾಡಿ ಕೊಳ್ಳಬೇಕು. ಒಬ್ಬ ಮನುಷ್ಯನು ಮನೆಯಲ್ಲಿ ಪೆಟ್ಟಿಗೆಯ ಬೀಗದ ಕೈಯನ್ನು ಮರೆತು ಇಟ್ಟು ದೇವಸ್ಥಾನಕ್ಕೆ ಬಂದು ಪುರಾಣವನ್ನು ಕೇಳುತ್ತಿದ್ದನಂತೆ. ಆಗ ಪುರಾಣವನ್ನು ಕೇಳುತ್ತಿದ್ದರೂ ಅವನ ಮನಸ್ಸು ಬೀಗದ ಕೈಯನ್ನೇ ಧ್ಯಾನಿಸುತ್ತಿದ್ದಿತಂತೆ. ಹಾಗೆಯೇ ಮನಸ್ಸನ್ನು ಮಾತ್ರ ಪರಮಾತ್ಮನ ಕಡೆಗೆ ತಿರುಗಿಸಿ ಬುದ್ಧಿಯನ್ನು ವಿಷಯದ ಕಡೆಗೆ ಹರಿಯಬಿಟ್ಟರೆ ಅದು ಧ್ಯಾನವಾಗುವದಿಲ್ಲ, ಮನಸ್ಸನ್ನೂ ನಿಶ್ಚಯರೂಪವಾದ ಬುದ್ಧಿ

ಯನ್ನೂ ಸಾಮಾನ್ಯವೃತ್ತಿರೂಪವಾದ ಚಿತ್ತವನ್ನೂ ಎಲ್ಲ ವೃತ್ತಿಗಳಿಂದ ಕೂಡಿದ ಅಂತಃಕರಣ ವನ್ನೂ ವಿಷಯವಿಮುಖತೆಯಿಂದ ಪರಮಾತ್ಮನನ್ನೇ ಧ್ಯಾನಮಾಡುವಂತೆ ಮಾಡಿದರೆ ಅದು **ಧ್ಯಾನಯೋಗ**ವಾಗುತ್ತದೆ.

ಅವನು ಭಗವಂತನನ್ನು ಹೇಗೆ ಧ್ಯಾನಮಾಡಬೇಕೆಂದರೆ: ಯಾವಾತನಿಗೆ ಭೂಮಿಯೇ ಪಾದಗಳಾಗಿವೆಯೋ, ಆಕಾಶವೇ ಹೊಕ್ಕಳಾಗಿದೆಯೋ, ವಾಯುವೇ ಪ್ರಾಣವಾಯುವಾಗಿದೆಯೋ, ಚಂದ್ರಸೂರ್ಯರೇ ಯಾವಾತನ ಕಣ್ಣುಗಳಾಗಿವೆಯೋ, ದಿಕ್ಕೇ ಯಾವಾತನ ಕಿವಿಗಳಾಗಿವೆಯೋ, ಅಂತರಿಕ್ಷವೇ ಶಿರಸ್ಸಾಗಿದೆಯೋ, ಯಜ್ಞೇಶ್ವರನೇ ಯಾವಾತನ ಮುಖವಾಗಿದೆಯೋ, ಸಮುದ್ರವೇ ಯಾವಾತನ ಮೂತ್ರವಾಗಿದೆಯೋ, ದೇವತೆಗಳೂ, ಮನುಷ್ಯನೂ, ಗಂಧರ್ವರೂ, ಅಪ್ಸರರೂ, ಕಿನ್ನರರೂ, ಕಿಂಪುರುಷರೂ, ದೈತ್ಯರೂ, ದಾನವರೂ, ಗೋವುಗಳೂ, ಇತರ ಪ್ರಾಣಿಗಳೂ, ಸ್ಥಾವರವಾದವೂ – ಎಂಬ ಇಡಿಯ ಪ್ರಪಂಚವೇ ಯಾವಾತನ ಹೃದಯದೊಳಗೇ ಅಡಗಿರುತ್ತದೆಯೋ ಮತ್ತು ಭೂಲೋಕವೇ ಅಲ್ಲದೆ ಮೂರು ಲೋಕಗಳೂ ಯಾವಾತನ ರೂಪದಲ್ಲಿಯೇ ಅಡಗಿ ರುತ್ತವೆಯೋ ಅಂತಹ ಸರ್ವವ್ಯಾಪಕನಾದ ಸರ್ವೇಶ್ವರನಾದ ಭಗವಂತನನ್ನು ಧ್ಯಾನ ಮಾಡುತ್ತೇನೆ – ಎಂದು ತಿಳಿದು ಭಗವಂತನನ್ನೇ ಧ್ಯಾನಮಾಡುತ್ತಿರಬೇಕು.

ಹೀಗೆ ಭಗವದ್ಧ್ಯಾನಪರನಾದವನಿಗೆ ಶರೀರಸ್ಥಿತಿಗೆ ಅವಶ್ಯಕವಾದ ಊಟಪಾನ – ಮುಂತಾದವುಗಳಲ್ಲಿ ಕೂಡ ಮನಸ್ಸು ಹರಿಯುವದಿಲ್ಲ, ಅವನು ಪರಮಾತ್ಮನ ಧ್ಯಾನ ದಲ್ಲಿಯೇ ಮುಳುಗಿರುತ್ತಾನೆ.

ಉಉಉಉಉ

# ಭಕ್ತಿಯೋಗ

**ಯೋಗಿನಾಮಪಿ ಸರ್ವೇಷಾಂ ಮದ್ಗತೇನಾನ್ತರಾತ್ಮನಾ ।**
**ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ ॥**

ಕರ್ಮಯೋಗದಲ್ಲಿ ಕರ್ಮ, ಧ್ಯಾನ – ಎಂಬ ಎರಡು ಅಂತಸ್ತುಗಳನ್ನು ಹತ್ತಿದ ಮೇಲೆ **ಮೂರನೆಯ ಅಂತಸ್ತು** ಒಂದು ಉಳಿದುಕೊಳ್ಳುವದು. ಇದೇ ಭಕ್ತಿಯು.

ಬೆಣ್ಣೆಯನ್ನು ಕರಗಿಸುವದಕ್ಕೆ ಮೊದಲು ಒಲೆಯನ್ನು ಹೊತ್ತಿಡುವೆವು, ಆಮೇಲೆ ಬಹುಜೋರಾಗಿಯೂ ಬಹು ಕಡಿಮೆಯಾಗಿಯೂ ಇಲ್ಲದೆ ಒಂದೇ ಸಮನೆ ಶಾಖವು

ತಗಲುವ ಹಾಗೆ ಉರಿಯನ್ನು ಇಟ್ಟುಕೊಳ್ಳುವೆವು; ಆಮೇಲೆ ಕಮ್ಮಗೆ ವಾಸನೆಬಂದ ಹದವನ್ನು ನೋಡಿ ಕೂಡಲೆ ಇಳಿಸಿಕೊಳ್ಳುವೆವು. ಈಗ ಬೆಣ್ಣೆ ತುಪ್ಪವಾಗಿರುತ್ತದೆ. ಅಲ್ಲವೆ? ಯೋಗದ ಸಾಧನೆಯಲ್ಲಿಯೂ ಹಾಗೆಯೇ ಇಲ್ಲಿ ಮೊದಮೊದಲು ಕರ್ಮವನ್ನು ಮಾಡುವೆವು; ಇದು ದೃಷ್ಟಾಂತದಲ್ಲಿ ಒಲೆಯನ್ನು ಹೊತ್ತಿಡುವ ಸಾಧನದ ಸ್ಥಾನವು. ಮನಸ್ಸನ್ನು ಹೊರಕ್ಕೆ ಹರಿದಾಡಗೊಡದೆ ನಿದ್ರೆಯೇ ಮುಂತಾದ ರೂಪದಲ್ಲಿ ಒಳಗೂ ಅಡಗುವದಕ್ಕೆ ಅವಕಾಶಕೊಡದೆ ಧ್ಯಾನದಿಂದ ಏಕಾಗ್ರವಾಗಿಸಿಕೊಳ್ಳುವವು; ಇದು ದೃಷ್ಟಾಂತದಲ್ಲಿ ಕ್ಲಿಪ್ತಕಾಲದ ಉರಿಯನ್ನು ಇಟ್ಟುಕೊಳ್ಳುವ ಸಾಧನದ ಸ್ಥಾನದಲ್ಲಿರುವದು. ಈಗ ಮನಸ್ಸನ್ನು ಎಲ್ಲಿಯಾದರೂ ಏಕಾಗ್ರಮಾಡುವದಕ್ಕಿಂತ ನಮ್ಮೊಳಗಿನ ಪರಮಾತ್ಮ ನಲ್ಲಿಯೇ ನಿಲ್ಲಿಸುವ ಭಕ್ತಿಗೆ ಕೈ ಹಾಕುವದು, ಇಗೋ ಈಗಲೇ ಯೋಗದ ಕಮ್ಮನೆಯ ವಾಸನೆಯು ನಮಗೆ ತೋರ ಹತ್ತುವದು.

ಹೊರಗೇ ದೃಷ್ಟಿಯುಳ್ಳ ರಾಜಸಪ್ರಕೃತಿಯ ಜನರು ಮೊದಮೊದಲು ನಿಷ್ಕಾ ಕರ್ಮವನ್ನು ಮಾಡುವದಕ್ಕೆ ಕೈಹಾಕಬೇಕು. ಯಾವ ಕರ್ಮವನ್ನು ಮಾಡಿದರೂ ನನಗೆ ಏನಾದರೊಂದು ಫಲವು ಕೂಡಲೇ ಆಗಬೇಕೆಂಬ ಮನಸ್ಸಿನ ಚಟವನ್ನು ತಪ್ಪಿಸುವದಕ್ಕೆ ಪ್ರಯತ್ನಮಾಡಬೇಕು. ಇದು ಬಹು ಸುಲಭವಾಗಿ ದಕ್ಕುವ ಮಾತಲ್ಲ, ಎಡವುತ್ತಾ ಮುಗ್ಗರಿಸುತ್ತಾ, ಫಲಾಸಕ್ತಿಯನ್ನು ತಪ್ಪಿಸಿಕೊಳ್ಳಲು ಕೆಲವು ಕಾಲ ಪ್ರಯತ್ನಮಾಡಿ ಸ್ವಲ್ಪಮಟ್ಟಿಗಾದರೂ ಆ ಸಾಧನವು ಜಯವಾದ ಮೇಲೆ ಕರ್ಮಗಳನ್ನು ಭಗವಂತನ ಪ್ರೀತಿಗಾಗಿಯೇ ಮಾಡುತ್ತೇನೆಂಬ ಸಂಕಲ್ಪವನ್ನು ಇಟ್ಟುಕೊಳ್ಳಬೇಕು. ಈ ಎರಡು ಮೆಟ್ಟಿಲುಗಳಿಂದ ಕರ್ಮದ ಉಪಟಳವನ್ನು ತಕ್ಕಮಟ್ಟಿಗೆ ಅಳವಡಿಸಿಕೊಂಡರೆ ಕರ್ಮ ಯೋಗದ ಮೊದಲನೆಯ ಅಂಗವಾದ **ಕರ್ಮ**ವೆಂಬ ಸಾಧನವು ವಶವಾ ದಂತಾಯಿತು, ಯೋಗಾರೂಢನಾದಂತಾಯಿತು.

ಈಗ ಇನ್ನೂ ಒಳಗಿನ ಸಾಧನವಾದ **ಶಮಕ್ಕೆ** ಕೈಹಾಕಬಹುದು. ಇಂದ್ರಿಯ ಗಳನ್ನೂ ಮನಸ್ಸನ್ನೂ ಬಿಗಿಹಿಡಿದು ಒಳಕ್ಕೆ ಎಳೆದುಕೊಳ್ಳುವ ಪ್ರಯತ್ನವನ್ನು ಈಗ ಮಾಡಬಹುದಾಗುವದು. ಆದರೆ ಒಳಗೆ ಒಕ್ಕಡೆಗೆ ಮನಸ್ಸನ್ನು ನಿಲ್ಲಿಸುವ ಪ್ರಯತ್ನದಲ್ಲಿ ಬೇಸರವಾಗಿ ಮನಸ್ಸು ಒಳಗೇ ನಿದ್ರೆಯಲ್ಲಡಗುವ ಹೆದರಿಕೆಯೊಂದು ಈಗ ಇರುತ್ತದೆ. ಈ ತಮೋಗುಣವು ಹಬ್ಬಿಕೊಳ್ಳದಂತೆ ನೋಡಿಕೊಳ್ಳಬೇಕಾದರೆ ನಮ್ಮ ಚಿತ್ತವೃತ್ತಿಯನ್ನೆಲ್ಲ ಒಂದೇ ಅವಲಂಬನೆಯಲ್ಲಿರಿಸಬೇಕು. ಕರ್ಮಕ್ಕೆ ಹೇಗೆ ಭಗವಂತನನ್ನೇ ಅವಲಂಬನೆ ಯಾಗಿ ಮಾಡಿಕೊಂಡಿದ್ದೇವೋ ಹಾಗೆಯೇ ಮನಸ್ಸಿನ ಶಾಂತಿಗೆ ಬೇಕಾದ ಚಿತ್ತವೃತ್ತಿ

ನಿರೋಧಕ್ಕೆ ಆತನನ್ನೇ ಅವಲಂಬನೆಯಾಗಿ ಮಾಡಿಕೊಳ್ಳಬೇಕು. ತಮೋಗುಣವಾಗಲಿ, ರಜೋಗುಣವಾಗಲಿ, ಸತ್ತ್ವಗುಣದ ಬೆಳೆವಣಿಗೆಯಿಂದಲೇ ಕುಗ್ಗಬೇಕಾಗಿರುತ್ತದೆ. ಈ ಸತ್ತ್ವಗುಣದ ಏರಿಕೆಗೆ ಪರಮಾತ್ಮನನ್ನೇ ಆಶ್ರಯನಾಗಿ ಮಾಡಿಕೊಂಡರೆ ನಮ್ಮ ಯೋಗದ ಅಭ್ಯಾಸವು ಸರಾಗವಾಗಿ ಸಾಗುತ್ತದೆ.

ಯಾವಾತನಿಗೆ ಭಗವಂತನ ಅಸ್ತಿತ್ವದಲ್ಲಿ ಉತ್ಕಟವಾದ ಶ್ರದ್ಧೆಯಿರುವದೋ ಯಾವಾತನು ಮೇಲೆ ಹೇಳಿದಂತೆ ಕ್ರಮಕ್ರಮವಾಗಿ ಭಗವಂತನನ್ನೇ ಆಶ್ರಯಿಸಿ ತನ್ನ ಹೊರಗಿನ ಕರ್ಮಗಳನ್ನೂ ಒಳಗಿನ ಚಿಂತನವನ್ನೂ ಮುಂದುವರಿಸುವನೋ ಅವನು ಅಭ್ಯಾಸಬಲದಿಂದ ಪರಮಾತ್ಮನಲ್ಲಿಯೇ ತನ್ನ ಮನಸ್ಸನ್ನೂ ಬುದ್ಧಿಯನ್ನೂ ಇಟ್ಟುಬಿಡುವದಕ್ಕೆ ಸಮರ್ಥನಾಗುವನು. ಅಂಥಭಕ್ತಿಯೋಗಿಯ ಇಹಲೋಕದ ವ್ಯಾಪಾರವೆಲ್ಲವೂ ಭಗವನ್ಮಯವಾಗಿರುವದರಿಂದ ಅವನಿಗೆ ಪರಲೋಕದಲ್ಲಿಯೂ ಭಗವಂತನ ಸಾಯುಜ್ಯವೆಂಬ ಉತ್ತಮಫಲವು ಕಟ್ಟಿಟ್ಟಬುತ್ತಿಯಾಗಿರುವದು.

ಖಖಖಖ

# ಭಕ್ತಿಯೋಗದ ಮಹಿಮೆ

**ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।**
**ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ ॥**

ಗೀತೋಕ್ತವಾದ ಕರ್ಮಯೋಗದಲ್ಲಿ ಕರ್ಮ, ಧ್ಯಾನ, ಭಕ್ತಿ – ಎಂಬೀ ಮೂರೂ ಅಡಗಿರುವವೆಂದು ಹಿಂದೆ ಹೇಳಿರುತ್ತೇನೆ. ಕರ್ಮಯೋಗ, ಧ್ಯಾನಯೋಗ, ಭಕ್ತಿಯೋಗ – ಎಂಬ ಮೂರೂ ಮೆಟ್ಟಿಲುಗಳು ಈ ಕರ್ಮಯೋಗದಲ್ಲಿಯೇ ಅಡಕವಾಗಿರುವವೆಂಬುದನ್ನು ನಾವು ಅರಿತುಕೊಂಡದ್ದಾಗಿದೆ. ಕರ್ಮಯೋಗದಲ್ಲಿ ಕರ್ಮವನ್ನು ಮಾಡುವ ರೀತಿಯನ್ನೂ ಧ್ಯಾನಯೋಗಭಕ್ತಿಯೋಗಗಳಲ್ಲಿ ಕರ್ಮವನ್ನು ಬಿಡುವ – ಎಂದರೆ ಕರ್ಮದ ಕಟ್ಟಿನಿಂದ ಪಾರಾಗುವ – ರೀತಿಯನ್ನೂ ಹೇಳಿದೆಯೆಂಬುದನ್ನು ಗೊತ್ತುಪಡಿಸಿಕೊಂಡದ್ದಾಯಿತು. ಈಗ ಕರ್ಮಯೋಗದಲ್ಲಿ ಅಡಕವಾಗಿರುವ ಭಕ್ತಿಯೋಗದ ಹೆಚ್ಚುಗಾರಿಕೆಯನ್ನು ಇಲ್ಲಿ ಪ್ರಸ್ತಾಪಿಸಬೇಕಾಗಿದೆ.

ಕರ್ಮವು ಇಂಥಿಂಥ ಫಲವನ್ನು ಕೊಡುವದೆಂದು ಇಹಪರಫಲಗಳಿಗೆ ನಾಲಗೆಯು ನೀರು ಕರೆಯುವ ಜನರು ಕಾಮ್ಯಕರ್ಮಗಳನ್ನು ಮಾಡಿ ಆಯಾ ಫಲ

ಗಳನ್ನು ಪಡೆಯುವರು. ಪುಣ್ಯಕ್ಕೆ ತಕ್ಕಷ್ಟು ಕಾಲ ಆಯಾ ಫಲವನ್ನು ಅನುಭವಿಸಿದ ಮೇಲೆ ಮತ್ತೆ ಮೊದಲನೆಯ ಸ್ಥಿತಿಗೇ ಇಳಿದುಬರುತ್ತಾರೆ. ಹೀಗೆ ಕರ್ಮವನ್ನು ಮಾಡುವದು, ಸ್ವರ್ಗಗಳ ಫಲಗಳನ್ನು ಪಡೆಯುವದು, ಮತ್ತೆ ಹಿಂತಿರುಗುವದು – ಈ ಅಲೆದಾಟದ ಹಾದಿಯನ್ನು ತಪ್ಪಿಸಿಕೊಳ್ಳಬೇಕಾದವರು ಕರ್ಮಕ್ಕಾಗಿ ಕರ್ಮವನ್ನು ಮಾಡುತ್ತಾ ಕರ್ಮದ ಸಂಗವಾಗಲಿ ಅದರ ಫಲದಲ್ಲಿ ಅಭಿಲಾಷೆಯಾಗಲಿ ಇಲ್ಲದಂತೆ ನೋಡಿಕೊಳ್ಳಬೇಕಾಗುವದು. ಇದೇ ಕರ್ಮಯೋಗವು. ಈ ಕರ್ಮಯೋಗವು ನಿರಾಂತಕವಾಗಿ ಕೈವಶವಾಗುವದಕ್ಕೆ ಉಪಾಯವೇನು? ಮಾಡಿದ ಕರ್ಮವನ್ನೆಲ್ಲ ಈಶ್ವರಾರ್ಪಣೆಮಾಡುವದೇ. ಯಾವನು ತಾನು ಮಾಡುವ ಕರ್ಮವನ್ನೆಲ್ಲ ಭಗವಂತ ನಿಗೆ ಅರ್ಪಿಸುತ್ತಬರುವನೋ ಅವನಿಗೆ ಅಶುಭಕರ್ಮಗಳಲ್ಲಿ ಮನಸ್ಸು ಒಲಿಯುವುದು ನಿಂತುಹೋಗುವದು; ಶುಭಕರ್ಮಗಳು ಲೋಕಾಂತರಕ್ಕೆ ಒಯ್ಯುವ ಸೀಳುಹಾದಿಯು ಕಟ್ಟಾಗುವದು. ಹೀಗೆ ಮಾಡಿದರೆ ಕರ್ಮವನ್ನು ಮಾಡುತ್ತಲೇ ಕರ್ಮದ ಕಟ್ಟನ್ನು ಕಳಚಿಕೊಳ್ಳುವದಕ್ಕೆ ಭಗವಂತನೇ ಸಾಧನವಾಗಿರುತ್ತಾನೆ.

ಕರ್ಮವನ್ನು ಮಾಡುವದರಲ್ಲಿ ನಾನು ನನ್ನದೆಂಬ ಬುದ್ಧಿಯೇ ಬಂಧನವಾಗು ವದರಿಂದ ಕರ್ಮವನ್ನು ಭಗವಂತನಿಗೆ ಅರ್ಪಣೆಮಾಡಬೇಕೆನ್ನುವಾತನು ತನ್ನ ಬುದ್ಧಿಯು ಅತ್ತಿತ್ತ ಹರಿದಾಡದಂತೆಯೂ ಭಗವಂತನಲ್ಲಿಯೇ ನಿಲ್ಲುವಂತೆಯೂ ನೋಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಹೊರಗಿನ ಇಂದ್ರಿಯಗಳನ್ನು ಬಿಗಿಹಿಡಿದು ಒಳಗಿನ ವಿಷಯಸಂಕಲ್ಪಗಳನ್ನು ಅಡಗಿಸಿ, ಮನಸ್ಸನ್ನು ಏಕಾಗ್ರವಾಗಿ ಮಾಡಿಟ್ಟುಕೊಂಡು ಭಗವಂತನ ಚಿಂತನೆಯಲ್ಲಿಯೇ ಮುಳುಗಬೇಕು. ಯಾವನು ಭಗವಂತನನ್ನೇ ಚಿಂತಿ ಸುವ ಪ್ರಯತ್ನವನ್ನು ಮಾಡುವನೋ ಅವನಿಗೆ ಮಾತ್ರ ಹೊರಗಿನ ವಿಷಯಗಳಲ್ಲಿ ವೈರಾಗ್ಯವೂ ಮನಸ್ಸನ್ನು ಒಕ್ಕಡೆಗೆ ನಿಲ್ಲಿಸುವ ಅಭ್ಯಾಸದ ಮರ್ಮವೂ ಸ್ವಾಧೀನ ವಾಗುವವು. ಆದ್ದರಿಂದ ಚಿತ್ತವೃತ್ತಿಗಳನ್ನೆಲ್ಲ ತಡೆಗಟ್ಟುವ ಧ್ಯಾನಯೋಗಕ್ಕೂ ಭಗವಂತನೇ ಸಾಧನವಾಗಿರುತ್ತಾನೆ.

ಭಗವಂತನ ಚಿಂತನೆಯು ಸಾಧಕನಿಗೆ ಅಳವಡಬೇಕಾದರೆ ದ್ವಿಜರು ಆಹ್ನಿಕ ವನ್ನು ಮಾಡುವಂತೆ ಯಾವದಾದರೊಂದು ಗೊತ್ತಾದ ಕಾಲದಲ್ಲಿ ಧ್ಯಾನಯೋಗವನ್ನು ಮಾಡಿ ಮಿಕ್ಕ ಕಾಲದಲ್ಲಿ ವ್ಯವಹಾರವನ್ನು ಎಂದಿನಂತೆ ಸಾಗಿಸಿದರೆ ಸಾಲದು. ವ್ಯವಹಾರದಲ್ಲಿ ಕರ್ಮಯೋಗವನ್ನೂ ಬಿಡದೆ ಅನುಸರಿಸಬೇಕು, ಏಕಾಂತವಾಸದಲ್ಲಿ ಆಗಾಗ್ಗೆ ಧ್ಯಾನ ಯೋಗವನ್ನೂ ಅಭ್ಯಾಸಮಾಡುತ್ತಿರಬೇಕು. ಆದರೆ ಇಷ್ಟೇ ಸಾಲದು. ಯಾವ ಭಗವಂತನ ಅವಲಂಬನೆಯಿಂದ ಈ ಎರಡು ಯೋಗಗಳೂ ಸಿದ್ಧಿಯಾಗಬೇಕಾಗಿರುವದೋ ಆತನ

ಮಹಿಮೆಯನ್ನು ಕೇಳುತ್ತಿರಬೇಕು, ಮತ್ತೊಬ್ಬರಿಗೆ ಹೇಳುತ್ತಿರಬೇಕು; ತನ್ನ ಹೃದಯದಲ್ಲಿ ಹೇಗೋ ಹಾಗೆ ಹೊರಗೆ ಕಾಣುವ ಸಕಲ ಪ್ರಾಣಿಗಳಲ್ಲಿಯೂ ಆತನು ನೆಲಸಿರುವನೆಂಬ ಭರವಸೆಯನ್ನು ಬೆಳೆಯಿಸಿಕೊಳ್ಳುತ್ತಿರಬೇಕು; ಪ್ರಪಂಚದಲ್ಲಿ ಯಾವಯಾವದು ವಿಭವ ದಿಂದ ಕೂಡಿರುವದೋ, ಯಾವ ಯಾವದು ಕಾಂತಿಯಿಂದಲೂ ಸೌಂದರ್ಯದಿಂದಲೂ ಗುಣಸಂಪತ್ತಿನಿಂದಲೂ ಕೂಡಿರುವದೋ ಯಾವಯಾವದು ಉತ್ಸಾಹ ಶಕ್ತಿಯಿಂದ ಕೂಡಿರುವದೋ ಅದೆಲ್ಲವೂ ಭಗವಂತನ ತೇಜಸ್ಸಿನ ಅಂಶವೇ, ಅದೆಲ್ಲ ಭಗವಂತನ ಒಂದೊಂದು ವಿಭೂತಿಯೇ, ಎಂದು ಭಾವಿಸುತ್ತಿರಬೇಕು. ಈ ಭಾವನೆಯು ಬೆಳೆಯುತ್ತ ಬೆಳೆಯುತ್ತ ನಮ್ಮ ಎದುರಿಗೆ ಕಾಣಬರುವ ಇಡಿಯ ಜಗತ್ತೇ ಪರಮಾತ್ಮನ ಒಂದಂಶವೆಂದೂ ಆತನ ಮಹಿಮೆಯು ಇನ್ನೂ ಹೆಚ್ಚಿನದಾಗಿರುವದೆಂದೂ ಶ್ರದ್ಧಾ ವಿಶ್ವಾಸಗಳಿಂದ ಭಾವಿಸುವಂತಾಗಬೇಕು. ಇದೇ ಗೀತೋಕ್ತಕರ್ಮಯೋಗದ ಮೂರನೇ ಮೆಟ್ಟಿಲಾದ ಭಕ್ತಿ ಯೋಗವು. ಈ ಯೋಗದಲ್ಲಿ ಭಗವಂತನೇ ಮೊದಲು, ನಡುವೆ, ಕೊನೆ; ಆತನೇ ಇದರ ಸರ್ವಸ್ವ - ಎಂಬುದನ್ನು ಹೇಳಬೇಕಾದದ್ದೇ ಇಲ್ಲ.

ಮೇಲಿನ ವಿಚಾರಗಳಿಂದ ಏನು ಸಿದ್ಧವಾಗುವದೆಂದರೆ ಕರ್ಮಯೋಗವೆಂಬುದು ನಮ್ಮ ಲೌಕಿಕವ್ಯವಹಾರದಲ್ಲಿರುವ ಒಂದಾನೊಂದು ದೊಡ್ಡ ಕೊರತೆಯನ್ನು ನೇರ್ಪಡಿಸಿ ಕೊಟ್ಟು ಈಗ ನಮಗೆ ಸಂಸಾರದಲ್ಲಿ ತೋರುವ ಕಿರಿಕಿರಿಯನ್ನು ತಪ್ಪಿಸಿ ನಮ್ಮ ವ್ಯವಹಾರವೆಲ್ಲ ಆನಂದಮಯವಾಗುವಂತೆ ಮಾರ್ಪಡಿಸುವದು. ಈಗಿನ ನಮ್ಮ ವ್ಯವಹಾರದಲ್ಲಿ ನಮಗಿರುವ ಕೊರತೆಯೆಂದರೆ ಭಗವಂತನ ಚಿಂತನೆಯ ಅಭಾವ. ಭಗವಂತನೇ ನಮ್ಮಗಳ ಕೇಂದ್ರವಾಗಿರುತ್ತಿದ್ದರೂ, ಭಗವಂತನೇ ಈ ಜಗತ್ತಿನ ಕೇಂದ್ರ ವಾಗಿರುತ್ತಿದ್ದರೂ, ನಾವು ವಿಷಯಗಳನ್ನೇ ಚಿಂತಿಸುತ್ತಾ, ವಿಷಯಗಳಲ್ಲಿಯೇ ಪ್ರೇಮ ವಿಟ್ಟು, ವಿಷಯಗಳಿಗೆ ದಾಸರಾಗಿ, ವಿಷಯತಾದಾತ್ಮ್ಯವನ್ನು ಹೊಂದಿ, ಅಸುರ ಪ್ರಕೃತಿಯ ವ್ಯವಹಾರವನ್ನು ಕೈಕೊಂಡು, ನಾವೂ ದುಃಖಿಸುತ್ತ ನಮ್ಮ ಸುತ್ತಮುತ್ತಲಿನ ಪ್ರಾಣಿಗಳನ್ನೂ ದುಃಖಕ್ಕೀಡುಮಾಡುತ್ತಿರುವೆವು. ಈ ಮಾರ್ಗವನ್ನು ಬಿಟ್ಟು ಭಗವಂತ ನನ್ನೇ ಚಿಂತಿಸುತ್ತಾ, ಭಗವಂತನಲ್ಲಿಯೇ ಪ್ರೇಮವಿಟ್ಟು ಭಗವಂತನ ಆರಾಧನೆಯೆಂದೇ ಸಕಲಕರ್ಮಗಳನ್ನೂ ಮಾಡುತ್ತಾ, ಭಗವಂತನ ನಿತ್ಯದಾಸ್ಯವನ್ನು ಸ್ವೀಕರಿಸಿದರೆ ನಮ್ಮ ಜೀವನವೆಲ್ಲವೂ ಭಗವನ್ಮಯವಾಗುವದು. ಭಗವಂತನು ನಿತ್ಯಾನಂದಸ್ವರೂಪನಾಗಿರು ವದರಿಂದ ಭಗವತ್ಪರಾಯಣರಾದ ನಾವೂ ಭಗವತ್ಸ್ವರೂಪರಾಗಿ ಆನಂದಪಡುತ್ತಾ ನಮ್ಮ ಸುತ್ತಮುತ್ತಿನವರನ್ನೂ ಆನಂದಸಾಗರದಲ್ಲಿ ಹಾಯಾಗಿ ಈಜಾಡುತ್ತಿರುವಂತೆ ವ್ಯವಹಾರಮಾಡುವ ಉಪಾಯವು ನಮ್ಮ ಕೈವಶವಾಗುವದು. ಈ ಉಪಾಯವೇ

ಭಗವದ್ಗೀತೆಯಲ್ಲಿ ಹೇಳಿರುವ ಕರ್ಮಯೋಗದ ತಿರುಳು. ಈ ಯೋಗವನ್ನು ನಾವು ಸಾಧನೆಮಾಡಿಯೇ ಪಡೆಯಬೇಕಾಗಿರುವದರಿಂದ, ಇದನ್ನು ಕರ್ಮಯೋಗವೆಂದೂ ಕರೆಯಬಹುದಾದರೂ ಇದಕ್ಕೆ ಭಗವಂತನೇ ಸರ್ವವಿಧದಲ್ಲಿಯೂ ಆಶ್ರಯನಾಗಿ ರುವದರಿಂದ ಇದನ್ನು ಭಗವದ್ಭಕ್ತಿಯೋಗವೆಂದು ಕರೆಯುವದು ಇನ್ನೂ ಹೆಚ್ಚಾಗಿ ಒಪ್ಪುತ್ತದೆ.

# ಜ್ಞಾನಯೋಗ

**ನಾನ್ಯಂ ಗುಣೇಭ್ಯಃ ಕರ್ತಾರಂ ಯದಾ ದ್ರಷ್ಟಾನುಪಶ್ಯತಿ ।**
**ಗುಣೇಭ್ಯಶ್ಚ ಪರಂ ವೇತ್ತಿ ಮದ್ಭಾವಂ ಸೋಽಧಿಗಚ್ಛತಿ ॥**

ಭಗವದ್ಗೀತೆಯಲ್ಲಿ ಹೇಳಿರುವ ಕರ್ಮಯೋಗ, ಜ್ಞಾನಯೋಗ – ಎಂಬ ಎರಡು ಯೋಗಗಳಲ್ಲಿ ಕರ್ಮಯೋಗವನ್ನು ಸ್ವಲ್ಪಮಟ್ಟಿಗೆ ವಿವರಿಸಿದ್ದಾಯಿತು. ಈಗ ಎರಡನೆಯದಾದ ಜ್ಞಾನಯೋಗವನ್ನು ಕುರಿತು ಮಾತನಾಡಬಹುದಾಗಿರುತ್ತದೆ. ಕರ್ಮ ಯೋಗವನ್ನು ಮೊದಲು ವಿವರಿಸಿಯೇ ಈ ಜ್ಞಾನಯೋಗದ ವಿಚಾರಕ್ಕೆ ಕೈಹಾಕಿರುವದಕ್ಕೆ ಕಾರಣವೇನೆಂದರೆ, ಯಾರು ಕರ್ಮಯೋಗದಲ್ಲಿ ಪಾರಂಗತರಾಗಿರುವರೋ ಅವರಿಗೇ ಈ ಯೋಗದ ರಹಸ್ಯವೂ ಸವಿಯೂ ಮನದಟ್ಟಾಗುತ್ತವೆ. ಕರ್ಮಯೋಗದಲ್ಲಿ ಕರ್ಮ, ಧ್ಯಾನ, ಭಕ್ತಿ – ಎಂಬ ಅಂತಸ್ತುಗಳಿರುವವೆಂದೂ ಅವುಗಳೆಲ್ಲ ಭಗವಂತನ ಪ್ರಾಸಾದಕ್ಕೆ ಹತ್ತುವ ಒಂದೊಂದು ಭೂಮಿಕೆಗಳೆಂದೂ ಹಿಂದೆಯೇ ಹೇಳಿದ್ದಾಗಿದೆ. ಕರ್ಮವೆಂದರೆ ಭಗವಂತನಿಗಾಗಿ ಮಾಡುವ ಕರ್ಮ; ಧ್ಯಾನವೆಂದರೆ, ಭಗವಂತನ ಚಿಂತೆ, ಭಕ್ತಿ ಯೆಂದರೆ ಭಗವಂತನ ಭಜನೆ; ಯಾರು ಭಗವಂತನ ಭಜನೆಯನ್ನು ಪ್ರೀತಿಪೂರ್ವಕ ವಾಗಿ ಎಡೆ ಬಿಡದೆ ಮಾಡುತ್ತಿರುವರೋ ಅವರಿಗೆ ಭಗವಂತನೇ ಅವರನ್ನು ತನ್ನ ಬಳಿಗೆ ತಂದು ಮುಟ್ಟಿಸುವ ಜ್ಞಾನಯೋಗವನ್ನು ಅನುಗ್ರಹಿಸುತ್ತಾನೆ. ಆದ್ದರಿಂದ ಮೊದಲು ಕರ್ಮಯೋಗವನ್ನು ಆಚರಿಸಿದವರೇ ಜ್ಞಾನಯೋಗವನ್ನು ಸುಖವಾಗಿ ಸೇರುತ್ತಾ ರೆಂಬುದು ಯುಕ್ತವಾಗಿರುತ್ತದೆ.

ಕರ್ಮಯೋಗಕ್ಕೂ ಜ್ಞಾನಯೋಗಕ್ಕೂ ಒಂದು ಬಹು ಮಹತ್ತ್ವದ ತಾರತಮ್ಯ ವಿರುತ್ತದೆ. ಕರ್ಮಯೋಗದಲ್ಲಿ ಮಾಡುವ ಕೆಲಸವಿರುತ್ತದೆ. ಜ್ಞಾನಯೋಗದಲ್ಲಿ ಚೆನ್ನಾಗಿ

ಮೂಸಮುಟ್ಟಿ ನೋಡುವದೊಂದಲ್ಲದೆ ಮತ್ತೇನೂ ಕೆಲಸವಿರುವದಿಲ್ಲ. ತನ್ನ ಕಂಠದ ರತ್ನಹಾರವನ್ನು ಮತ್ತೊಬ್ಬರ ಮನೆಯಲ್ಲಿ ಬಿಟ್ಟು ಬಂದಿದೇನೆಂದು ಮನಸ್ಸಿನಲ್ಲಿ ತಳಮಳ ಗೊಂಡು, ಓಡುತ್ತಿರುವ ಹುಡುಗಿಯೊಬ್ಬಳಿಗೆ ದಾರಿಯಲ್ಲಿ ಅದು ತನ್ನ ಕೊರಳಿನಲ್ಲಿಯೇ ಇರುವದೆಂಬ ಅರಿವು ಥಟ್ಟನೆ ಉಂಟಾದರೆ ಅವಳ ಮನಸ್ಸು ಹೇಗಾಗುವದು? ಅದರಲ್ಲಿದ್ದ ತಲ್ಲಣವೆಲ್ಲ ನಿಂತು ಶಾಂತಿಯು ಮೂಡುವದು. ಹಿಂದಿನ ಅವಿವೇಕಕ್ಕೆ ನಾಚಿಕೆಯುಂಟಾಗುವದು; ಮುಂದೆ ದಾರಿಯನ್ನು ನಡೆಯುವದಕ್ಕೆ ಬದಲು ಅವಳಿಗೆ ಆನಂದದಿಂದ ಹಿಂತಿರುಗುವ ಬುದ್ಧಿಯುಂಟಾಗುವದು, ಅಲ್ಲವೆ? ಇದರಂತೆ ಜ್ಞಾನ ಯೋಗವು ನಮ್ಮ ವ್ಯವಹಾರದ ತಳಮಳವನ್ನು ತಗ್ಗಿಸುತ್ತದೆ. ಇದ್ದಲ್ಲಿಯೇ ತತ್ತ್ವದ ಅರಿವನ್ನುಂಟುಮಾಡಿಕೊಟ್ಟು ಪರಮ ಶಾಂತಿಯನ್ನು ಕೊಡುತ್ತದೆ.

ನಾವು ಬಗೆಬಗೆಯ ಕರ್ಮಗಳನ್ನು ಮಾಡಿ ಅವುಗಳ ಫಲವನ್ನು ಅನುಭವಿ ಸುತ್ತಾ ಇರುವೆವೆಂದು ಇಟ್ಟುಕೊಂಡೇ ಅಲ್ಲವೆ, ನಾವು ಕರ್ಮದ ಕಟ್ಟನ್ನು ಬಿಚ್ಚಿಕೊಳ್ಳು ವದಕ್ಕೆ ಪ್ರಯತ್ನವನ್ನು ಮಾಡುತ್ತಿರುವದು? ಕರ್ಮಯೋಗ, ಧ್ಯಾನಯೋಗ, ಭಕ್ತಿ ಯೋಗ - ಇವುಗಳೆಲ್ಲವೂ ನಾವು ಕರ್ಮವನ್ನು ಮಾಡುವ ಸ್ವಭಾವದರೆಂಬ ಅಡಿಗಲ್ಲಿನ ಮೇಲೆಯೇ ಕಟ್ಟಿದ ಕಟ್ಟಡಗಳಾಗಿರುತ್ತವೆ. ಆದರೆ ನಾವು ಪರಮಾರ್ಥವಾಗಿಯೂ ಕರ್ತೃ ಸ್ವಭಾವದವರೆ? ನಿಜವಾಗಿ ಇದು ನಮ್ಮ ಸ್ವಭಾವವೇ ಆದರೆ ಸ್ವಭಾವವು ಹೋಗುವದುಂಟೆ? ಇಲ್ಲ. ಕರ್ಮಯೋಗಾದಿಗಳು ನಮ್ಮ ಕರ್ತೃತ್ವವನ್ನು ಒಪ್ಪಿಕೊಂಡು ಅದರಿಂದಾಗುವ ಅನರ್ಥಗಳನ್ನು ಕಡಿಮೆಮಾಡುವ ಹಾದಿಯನ್ನು ತಿಳಿಸುವದೇ ಹೊರತು ಕರ್ತೃತ್ವದಿಂದಲೇ ಪಾರಾಗುವ ದಾರಿಯೊಂದುಂಟೆ? - ಎಂಬ ವಿಚಾರ ವನ್ನೇನೂ ಚಿಂತಿಸುವದಿಲ್ಲ. ಜ್ಞಾನಯೋಗದಲ್ಲಿ ಇದರ ವಿಚಾರವೇ ಮುಖ್ಯ. ಸತ್ತ್ವ, ರಜಸ್ಸು, ತಮಸ್ಸು - ಎಂಬ ಮೂರು ಗುಣಗಳಿಂದಲೇ ಈ ಇಡಿಯ ಜಗತ್ತೆಲ್ಲವೂ ಆಗಿರುವದು. ಹೊರಗೆ ಕಾಣುವ ಭೌತಿಕಜಗತ್ತು ಮಾತ್ರವೇ ಅಲ್ಲ; ನಮ್ಮ ದೇಹ, ಇಂದ್ರಿಯ, ಮನಸ್ಸು, ಬುದ್ಧಿ - ಇವೂ ಈ ಮೂರು ಗುಣಗಳ ಕಾರ್ಯಗಳೇ. ಗುಣ ಗಳಿಂದಾಗಿರುವ ಇಂದ್ರಿಯಗಳು **ವಿಷಯಿ**ಯಾಗಿರುತ್ತವೆ. ಗುಣಗಳಿಂದಾಗಿರುವ ಹೊರ ಗಿನ **ವಿಷಯ**ವಾಗಿರುತ್ತದೆ. ವಿಷಯಿಯಾಗಿರುವ ಗುಣಗಳಿಗಿಂತ ಬೇರೆಯಾಗಿರುವ ಕರ್ತೃ ಇರುವದೇ ಇಲ್ಲ. ಏಕೆಂದರೆ ದೇಹಾದಿಗಳ ಸಂಬಂಧವಿಲ್ಲದೆ ನಮ್ಮಲ್ಲಿ ಕರ್ತೃತ್ವವು ಕಂಡುಬಂದದ್ದೇ ಇಲ್ಲ - ಹೀಗೆಂಬುದು ಜ್ಞಾನಯೋಗದ ತೀರ್ಪಾಗಿರುತ್ತದೆ. ಈ ತೀರ್ಪನ್ನು ಮನದಟ್ಟುಮಾಡಿಕೊಳ್ಳುವದಕ್ಕೆ ದೃಗ್ದೃಶ್ಯವಿವೇಕವನ್ನು ಮಾಡಿಕೊಳ್ಳಬೇಕು.

ಕಣ್ಣು ದೃಕ್ಕು, ನೋಡತಕ್ಕದ್ದು; ರೂಪವು ದೃಶ್ಯವು, ನೋಡಲ್ಪಡತಕ್ಕದ್ದು. ಇದರಂತೆ ಮನಸ್ಸು ದೃಕ್ಕು, ಅದಕ್ಕೆ ಕಣ್ಣು ದೃಶ್ಯವಾಗುವದು; ಇದರಂತೆ ಮನಸ್ಸೂ ದೃಶ್ಯವೇ ಅದನ್ನು ನಾವು ನಮ್ಮ ಆತ್ಮಚೈತನ್ಯದಿಂದ ನೋಡುವ ದೃಕ್ಕೇ ಆಗಿರುತ್ತೇವೆ. ಹೀಗೆ ಆತ್ಮನು ಎಂದರೆ ನಮ್ಮಗಳ ಸ್ವರೂಪವು ತನಗಿಂತ ಹೊರಗಿನ ಮನಸ್ಸೇ ಮುಂತಾದವುಗಳೆಲ್ಲವನ್ನೂ ಕಾಣುತ್ತಿರುವದರಿಂದ ದ್ರಷ್ಟ್ರುವೇ ಹೊರತು ದೃಶ್ಯವಲ್ಲ – ಎಂಬುದನ್ನು ಮೊದಲು ಮನದಟ್ಟುಮಾಡಿಕೊಂಡರೆ ಆತ್ಮನಲ್ಲಿ ಕರ್ತೃತ್ವವಿಲ್ಲವೆಂಬುದರ ನಿಜವು ಗೊತ್ತಾಗುತ್ತದೆ.

ಜ್ಞಾನಯೋಗದ ವಿಚಾರದಲ್ಲಿ ಗುಣಗಳೇ ಕರ್ತೃತ್ವಕ್ಕೆ ಕಾರಣವಾಗಿರುವವೆಂಬುದೊಂದಲ್ಲವೆ ಗುಣಗಳಿಗಿಂತ ಬೇರೆಯಾದ ಸಾಕ್ಷಿಯೊಬ್ಬನು ಇದ್ದಾನೆಂಬುದು ಸಿದ್ಧವಾಗುತ್ತದೆ. ಇಷ್ಟೇ ಅಲ್ಲ, ಸುಷುಪ್ತಿಯೇ ಮುಂತಾದ ಅವಸ್ಥೆಗಳಲ್ಲಿ ಈ ಗುಣಗಳ ಸಂಬಂಧವೇ ಇಲ್ಲದೆ ಆತ್ಮನು ನಿಷ್ಕ್ರಿಯನಾಗಿರುವದೂ ನಮ್ಮ ಅನುಭವದಲ್ಲಿರುವದರಿಂದ ಆತ್ಮನು ಗುಣಗಳನ್ನೂ ಮೀರಿದ ಶುದ್ಧಚೈತನ್ಯರೂಪನು ಎಂಬ ಮಹಾತತ್ತ್ವವೂ ಇದರಲ್ಲಿ ಅಡಗಿರುತ್ತದೆ.

ಮೇಲೆ ಹೇಳಿರುವ ತತ್ತ್ವಗಳು ಒಂದು ಐದು ನಿಮಿಷಗಳು ಕುತೂಹಲದಿಂದ ಚರ್ಚೆಮಾಡಿ ತಿಳಿದುಕೊಳ್ಳುವ ಹಾಗಿರುವದಿಲ್ಲ, ಅವುಗಳನ್ನು ಶ್ರದ್ಧೆಯಿಂದ ಬಿಡದೆ ವಿಚಾರಮಾಡಬೇಕು; ಈ ತತ್ತ್ವವನ್ನು ಮನಗಂಡಿರುವವರ ಶುಶ್ರೂಷೆಯನ್ನು ಮಾಡಿ ಅವರಲ್ಲಿ ನಮ್ಮ ಸಂಶಯಗಳೆಲ್ಲವನ್ನೂ ಪರಿಹರಿಸಿಕೊಳ್ಳಬೇಕು; ಹಿಂದೆ ಹೇಳಿರುವಂತೆ ಕರ್ಮಯೋಗವೇ ಮುಂತಾದ ಸಾಧನಗಳಿಂದ ಮನಸ್ಸಿಗೆ ತಕ್ಕ ಸಂಸ್ಕಾರವನ್ನು ತಂದುಕೊಂಡಿರಬೇಕು. ಯಾವನು ಇಂದ್ರಿಯಗಳ ಉಪಟಳಕ್ಕೆ ವಶನಾಗದೆ, ತತ್ತ್ವದಲ್ಲಿಯೇ ಮಹಾತಾತ್ಪರ್ಯದಿಂದ ಜ್ಞಾನಿಗಳ ಮೂಲಕ ಈ ವಿಷಯದಲ್ಲಿ ವಿಚಾರಮಾಡುತ್ತಿರುವನೋ ಅವನಿಗೇ ಭಗವಂತನ ಅನುಗ್ರಹದಿಂದ ಜ್ಞಾನದ ಮಹಾಫಲವು ದೊರಕುತ್ತದೆ. ಅಂಥವನು ಕೇವಲ ಭಾವನೆಯಿಂದಲೇ ಅಲ್ಲದೆ, ಪರಮಾರ್ಥವಾಗಿಯೂ ಭಗವತ್ಸ್ವರೂಪವೇ ತಾನಾಗಿರುವೆನೆಂಬ ಘನತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವನು. ಇದು ಬಹು ದೊಡ್ಡ ವಿಚಾರವಾದ್ದರಿಂದ ಇದನ್ನು ಮತ್ತೊಂದು ಲೇಖನದಲ್ಲಿ ಸ್ವಲ್ಪಮಟ್ಟಿಗೆ ವಿಸ್ತರಿಸುವೆನು.

# ಜ್ಞಾನದ ಪರಮಾವಧಿ

**ಯದಾಭೂತಪೃಥಗ್ಭಾವಮೇಕಸ್ಥಮನುಪಶ್ಯತಿ ।**

**ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ ॥**

ಮೂರು ಗುಣಗಳನ್ನೂ ಮೀರಿದ ಆತ್ಮಸ್ವರೂಪವನ್ನು ಕಂಡುಕೊಳ್ಳುವದೇ ಗೀತೋಕ್ತಯೋಗಗಳ ಹೆಗ್ಗುರಿಯೆಂದು ಹಿಂದೆಯೇ ತಿಳಿಸಿರುತ್ತೇನೆ. ಸತ್ತ್ವ, ರಜಸ್ಸು ತಮಸ್ಸು – ಎಂಬ ಮೂರು ಗುಣಗಳಲ್ಲಿ ಒಂದೊಂದು ನಮ್ಮನ್ನು ಒಂದೊಂದು ಕಾಲ ದಲ್ಲಿ ವಶಪಡಿಸಿಕೊಂಡಿರುತ್ತದೆ. ಲೋಕದಲ್ಲಿರುವ ಜನರ ತಿಳಿವಳಿಕೆಯು ಬೇರೆಬೇರೆ ಯಾಗಿರುವದಕ್ಕೆ ಅವರಲ್ಲಿರುವ ಈ ಗುಣಗಳ ವ್ಯಾಪಾರವೇ ಕಾರಣವು; ಒಬ್ಬನಿಗೇ ಬೇರೆಬೇರೆ ಕಾಲದಲ್ಲಿ ಬೇರೆಬೇರೆಯ ಬಗೆಯ ಜ್ಞಾನವುಂಟಾಗಿರುವದಕ್ಕೂ ಆಯಾ ಕಾಲದಲ್ಲಿ ಬಲವಾಗಿರುವ ಗುಣದ ಕೆಲಸವೇ ಕಾರಣವು. ತಮೋಗುಣವು ಉಲ್ಬಣ ವಾದಾಗ 'ನನ್ನ ಶರೀರವೇ ಎಲ್ಲಕ್ಕಿಂತಲೂ ಹೆಚ್ಚಿನದು, ಶರೀರಕ್ಕಿಂತ ವ್ಯಾಪಕವಾದ ಆತ್ಮನೆಂಬುದಿಲ್ಲ' ಎಂಬ ಸಣ್ಣ ಅಳತೆಯ ಜ್ಞಾನವು ಆಗುತ್ತದೆ; ರಜೋಗುಣವು ಉಲ್ಬಣ ವಾದಾಗ 'ಒಂದೊಂದು ಶರೀರದಲ್ಲಿ ಒಬ್ಬೊಬ್ಬ ಆತ್ಮನಿರುತ್ತಾನೆ. ಅವನವನ ಸುಖ ದುಃಖಕ್ಕೆ ಅವನವನೇ ಕಾರಣನು. ಆದ್ದರಿಂದ ನನ್ನ ಸುಖವನ್ನು ನಾನು ಸಂಪಾದಿಸಿ ಕೊಳ್ಳಬೇಕು' ಎಂಬ ಜ್ಞಾನವುಂಟಾಗುವದು. ಆದರೆ ಯಾವಾಗ ಈ ರಜಸ್ತಮೋಗುಣ ಗಳನ್ನು ಹಿಮ್ಮೆಟ್ಟಿ ಸತ್ತ್ವಗುಣವು ಮೇಲಕ್ಕೇರುವದೋ ಆಗ 'ಲೋಕದಲ್ಲಿರುವ ಶರೀರ ಗಳೆಲ್ಲಲ್ಲ ಒಬ್ಬನೇ ಆತ್ಮನಿರುವನು, ಸಕಲ ಪ್ರಾಣಿಗಳಲ್ಲಿರುವ ಆತ್ಮನಿಗೂ ನನ್ನ ಆತ್ಮನಿಗೂ ಯಾವ ಭೇದವೂ ಇಲ್ಲ' ಎಂಬ ಉತ್ತಮ ಜ್ಞಾನವು ಉಂಟಾಗುವದು.

ಜ್ಞಾನಯೋಗದಲ್ಲಿ ಮೂರು ಮೆಟ್ಟಿಲುಗಳಿರುವವು. ಮೂರುಗುಣಗಳು, ಹೇಗೆ ಹೊರಗೆ ವಿಷಯಾಕಾರವಾಗಿರುವವೋ ಹಾಗೆಯೇ ಒಳಗೆ ನಮ್ಮ ಶರೀರೇಂದ್ರಿಯ ರೂಪದಲ್ಲಿಯೂ ಪರಿಣಮಿಸಿರುತ್ತವೆ. 'ಗುಣಗಳು ಒಂದಕ್ಕೊಂದು ವಿಷಯವಾಗಿರು ವದರಿಂದ ನನಗೇನು ಬಾಧಕ?' ಗುಣಮಯವಾದ ಶರೀರದ ಸ್ವಭಾವವನ್ನು ನನ್ನ ಮೈ ಮೇಲೆ ಏತಕ್ಕೆ ಹಾಕಿಕೊಳ್ಳಲಿ?ಎಂದು ವಿವೇಕವನ್ನು ಮಾಡಿಕೊಳ್ಳುವದು **ಮೊದಲನೆಯ ಮೆಟ್ಟಿಲು.** ಗೀತೆಯ ಭಾಷೆಯಲ್ಲಿ ಇದನ್ನು ಕ್ಷೇತ್ರಕ್ಷೇತ್ರಜ್ಞವಿವೇಕವೆಂದು ಕರೆಯಬಹುದು. ಕ್ಷೇತ್ರವೆಂದರೆ ಶರೀರವು, ಇದರಲ್ಲಿ ಸೂಕ್ಷ್ಮರೂಪವಾಗಿ ಪಂಚಭೂತಗಳು, ಅವುಗಳಿಗೆ

ಕಾರಣವೆಂದು ಸಾಂಖ್ಯರು ಹೇಳುವ ಅಹಂಕಾರ, ಬುದ್ಧಿ, ಅವ್ಯಕ್ತ - ಈ ಎಂಟು ಬಗೆ ಯಾಗಿರುವ ಪ್ರಕೃತಿಯೇ ಅಲ್ಲದೆ ಗುಣಮಯವಾಗಿರುವ ಇಂದ್ರಿಯಗಳು, ಅವುಗಳ ವಿಷಯಗಳು - ಈ ಎಲ್ಲವೂ ಸೇರಿರುತ್ತವೆ. ಇಷ್ಟೇ ಅಲ್ಲ, ರಾಗದ್ವೇಷ ಸುಖ ದುಃಖ ಗಳಿಂದೊಡಗೂಡಿದ ಅಂತಃಕರಣವೂ ಇದರಲ್ಲಿಯೇ ಸೇರಿರುತ್ತದೆ. ಈ ಕ್ಷೇತ್ರವನ್ನು ತನ್ನ ಜ್ಞಾನಪ್ರಕಾಶದಿಂದ ಬೆಳಗುವ ಚೈತನ್ಯರೂಪನಾದ ಆತ್ಮನೇ ಕ್ಷೇತ್ರಜ್ಞನು. ಹೀಗೆ ಆತ್ಮಾ ನಾತ್ಮಗಳನ್ನು ವಿಂಗಡಿಸಿ ತಿಳಿದುಕೊಂಡರೆ ಕ್ಷೇತ್ರಧರ್ಮಗಳಿಂದ ತನಗೆ ಯಾವ ಏರು ಪೇರುಗಳೂ ಇಲ್ಲವೆಂಬುದು ಸ್ಪಷ್ಟವಾಗುತ್ತದೆ.

'ನನ್ನ ಶರೀರದಲ್ಲಿರುವಂತೆ ತೋರುವ ಕ್ಷೇತ್ರಜ್ಞನೇ ಎಲ್ಲಾ ಶರೀರಗಳಲ್ಲಿಯೂ ಇರುವವನು. ಈ ಕ್ಷೇತ್ರಜ್ಞನಿಗೆ ಯಾವದೊಂದು ಶರೀರದ ಕಟ್ಟೂ ನಿಜವಾಗಿ ಇರುವ ದಿಲ್ಲ, ಆದ್ದರಿಂದ ಇವನು ಪರಮಾತ್ಮನೇ' - ಎಂದು ತಿಳಿದುಕೊಳ್ಳುವದು **ಎರಡನೆಯ ಮೆಟ್ಟಿಲು.** ಮೇಲೆ ವಿವರಿಸಿರುವಂತೆ ಸತ್ತ್ವಗುಣವು ಹೆಚ್ಚಾಗಿ ಬೆಳೆದಿರುವವರಿಗೆ ಮಾತ್ರ ಈ ಜ್ಞಾನವುಂಟಾಗುತ್ತದೆ. ಗೀತೆಯು ಕ್ಷೇತ್ರವೆಂದು ಕರೆಯುವ ದೇಹಗಳೆಲ್ಲ ಗುಣ ಮಯವಾದ ಪ್ರಕೃತಿಯ ವಿಕಾರಗಳೇ, ಇದನ್ನರಿಯುವ ಕ್ಷೇತ್ರಜ್ಞನೆಂಬ ಪುರುಷನು ತನ್ನ ಸ್ವರೂಪವನ್ನರಿಯದೆ ಪ್ರಕೃತಿಯ ಗುಣಗಳ ಕಾರ್ಯದಲ್ಲಿ ಅಭಿಮಾನ ವನ್ನಿಟ್ಟುಕೊಂಡು ಆಸಕ್ತಿಯಿಂದ ವಿಷಯೋಪಭೋಗಕ್ಕೆಂದು ಬಗೆಬಗೆಯ ಕರ್ಮಗಳನ್ನು ಮಾಡುತ್ತಿರು ವದೇ ಅವನಿಗೆ ಸಂಸಾರವನ್ನು ತಂದೊಡ್ಡುತ್ತಿರುವದು. ಯಾವಾಗ ಸಂಗತ್ಯಾಗಫಲತ್ಯಾಗ ಗಳನ್ನು ಮಾಡಿ ಕರ್ಮಯೋಗವನ್ನು ಆಶ್ರಯಿಸಿ ಪರಮೇಶ್ವರನಲ್ಲಿಯೇ ಭಕ್ತಿಯನ್ನು ಸಂಪಾದಿಸಿಕೊಳ್ಳುವನೋ ಆಗ ಕ್ಷೇತ್ರಜ್ಞನ ಶುದ್ಧ ಸ್ವರೂಪವು ಮನವರಿಕೆಯಾಗಿ ತಾನು ನಿಜವಾಗಿ ಸಕಲಕ್ಷೇತ್ರಗಳಲ್ಲಿಯೂ ಇರುವ ಪರಮಾತ್ಮನೇ ಎಂಬ ಜ್ಞಾನವೂ ಉದಯಿಸುತ್ತದೆ.

ಇನ್ನು ಆತ್ಮನ ಅದ್ವಿತೀಯತ್ವವನ್ನು ಕಂಡುಕೊಳ್ಳುವ **ಮೂರನೆಯ ಮೆಟ್ಟಲಿಗೆ** ಏರುವದು ಅತ್ಯಂತ ಸುಲಭವಾಗಿರುವದು. ಬೇರೆಬೇರೆಯಾಗಿ ಕಾಣುತ್ತಿರುವ ಬ್ರಹ್ಮಾದಿ ಸ್ತಂಭಪರ್ಯಂತವಾಗಿರುವ ಸಕಲಪ್ರಾಣಿಗಳ ಶರೀರಗಳೂ ನಿಜವಾಗಿ ಮೇಲೆ ಹೇಳಿ ದಂತೆ ಪ್ರಕೃತಿಯ ಕಾರ್ಯಗಳೇ, 'ಈ ಬೇರೆಬೇರೆಯಾಗಿ ಕಾಣುವ ಭೂತಗಳೆಲ್ಲವೂ ಒಬ್ಬ ಆತ್ಮನಲ್ಲಿಯೇ ಆತನ ಸ್ವರೂಪದಲ್ಲಿಯೇ ಇದ್ದುಕೊಂಡಿರುತ್ತವೆ, ಆತನಿಂದಲೇ ಈಚೆಗೆ ಬಂದಂತೆ ಹೊರತೋರಿಕೊಳ್ಳುತ್ತವೆ. ಪರಮಾರ್ಥವಾಗಿ ಆತ್ಮನಿಗಿಂತ ಬೇರೆ ಯಾಗಿರುವ ಮತ್ತೊಂದು ಯಾವದೂ ಇಲ್ಲವೇ ಇಲ್ಲ, ಈ ಸಕಲವೂ ವಾಸುದೇವನೇ.

ಆತನೇ ನನ್ನ ಪರಮಾತ್ಮನು' - ಎಂಬ ಜ್ಞಾನವು ಯಾವಾಗ ಮನದಟ್ಟಾಗುವದೋ ಆಗ ಜ್ಞಾನಿಯು ಪರಮಾರ್ಥಜ್ಞಾನನಿಷ್ಠೆಯನ್ನು ಎಂದರೆ ಜ್ಞಾನದ ಪರಮಾವಧಿಯನ್ನು ಮುಟ್ಟಿದಂತಾಯಿತು. ಅವನಿಗೂ ಪರಬ್ರಹ್ಮಸ್ವರೂಪನಾದ ವಾಸುದೇವನಿಗೂ ಯಾವ ಭೇದವೂ ಇರುವದೇ ಇಲ್ಲ. ಬ್ರಹ್ಮವನ್ನರಿತವನು ಬ್ರಹ್ಮವೇ ಆಗುವನೆಂದು ಸಾರುವ ಉಪನಿಷದ್ವಾಕ್ಯಕ್ಕೆ ಇದೇ ತಾತ್ಪರ್ಯ.

# ಜ್ಞಾನಿಯ ವ್ಯವಹಾರ

**ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ ।**
**ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಮ್ ॥**

**ಭಕ್ತ್ಯಾ ಮಾಮಭಿಜಾನಾತಿ ಯಾವಾನ್ಯಶ್ಚಾಸ್ಮಿ ತತ್ತ್ವತಃ ।**
**ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನನ್ತರಮ್ ॥**

ಗೀತೆಯ ಉಪದೇಶವನ್ನು ಪೂರ್ಣವಾಗಿ ಪರಾಮರ್ಶೆಮಾಡಿ ಅದರಲ್ಲಿರುವ ಸಾಧನಗಳನ್ನು ಶ್ರದ್ಧೆಯಿಂದಲೂ ನಡೆಸಿ ಜ್ಞಾನವನ್ನು ಸಂಪಾದಿಸಿಕೊಂಡ ಮಹಾತ್ಮನು ಈ ಲೋಕದಲ್ಲಿ ಹೇಗೆ ವ್ಯವಹಾರಮಾಡುವನು? - ಎಂಬ ಪ್ರಶ್ನೆಯು ಬಹುಮುಖ್ಯ ವಾದದ್ದು. ಏಕೆಂದರೆ ಫಲದಿಂದ ಮರದ ಬೆಲೆಯನ್ನು ಕಟ್ಟುವದು ನ್ಯಾಯವಾಗಿ ರುತ್ತದೆ. ಆದ್ದರಿಂದ ಗೀತೋಪದೇಶದ ಫಲವು ವ್ಯವಹಾರದಲ್ಲಿ ಹೇಗಿರುವದೆಂಬು ದನ್ನು ತಿಳಿದೇ ಅದಕ್ಕೆ ಎಷ್ಟರಮಟ್ಟಿಗೆ ಬೆಲೆಯನ್ನು ಕಟ್ಟಬೇಕೆಂಬುದನ್ನು ನಿರ್ಣಯಿಸ ಬೇಕಾಗಿರುತ್ತದೆ.

ಗೀತೋಪದೇಶದಂತೆ ಜ್ಞಾನಿಯಾದವನು ಕರ್ಮಯೋಗದ ತುಟ್ಟತುದಿಯ ನ್ನೇರಿರುವನು. ತನ್ನ ಯಾವದಾದರೊಂದು ಪದಾರ್ಥವು ಹೋಯಿತು. ಅಥವಾ ತನಗೆ ಯಾವದಾದರೊಂದು ಬಗೆಯಲ್ಲಿ ಕೊರತೆಯುಂಟಾಯಿತು - ಎಂಬ ಶೋಕವು ಅವನಿಗೆ ಆಗುವಂತಿರುವದಿಲ್ಲ; ಅಥವಾ ಇಂಥದ್ದೊಂದು ತನಗೆ ಬೇಕಾಗಿತ್ತು - ಎಂದು ಅದಕ್ಕಾಗಿ ತಹತಹಪಡುವದೂ ಇಲ್ಲ. ಲಾಭ ನಷ್ಟ ಜಯ ಅಪಜಯ - ಮುಂತಾದ ವುಗಳಿಂದಾಗುವ ಸುಖದುಃಖಗಳಿಂದ ಅವನ ಅಂತಃಕರಣದಲ್ಲಿ ಒಂದಿಷ್ಟೂ ಉಬ್ಬರ ವಿಳಿತವಾಗುವದಿಲ್ಲ. ಅವನಿಗೆ ಕರ್ಮವನ್ನು ನೋಡುವದರಿಂದಾಗಬೇಕಾದ ಫಲವಿರು

ವದಿಲ್ಲ, ಕರ್ಮವನ್ನು ಬಿಟ್ಟು ಪಡೆಯಬೇಕಾದ ಫಲವೂ ಇರುವದಿಲ್ಲ; ಅವನು ಕೃತ ಕೃತ್ಯನು; ಮಾಡಬೇಕಾದ ಎಲ್ಲಾ ಕರ್ಮಗಳನ್ನೂ ಮಾಡಿದವನು. ಅವನು ಸೋಮಾರಿ ಯಾಗಿರುವನೆಂದೇನೂ ಇದಕ್ಕೆ ಅರ್ಥವಲ್ಲ; ಯಾವ ಕರ್ಮವನ್ನು ಮಾಡಿದರೂ ಅವನು ತನಗಾಗಿ ಮಾಡತಕ್ಕದ್ದೇನೂ ಇರುವದಿಲ್ಲ. ಅಷ್ಟೆ ಕರ್ಮದ ಫಲದಿಂದಲಾಗಲಿ, ಕರ್ಮಸಂಗದಿಂದಲಾಗಲಿ **ಏರುಪೇರಾಗದ ಪ್ರಜ್ಞೆಯು** ಅವನಲ್ಲಿರುವದು, ಅವನು **ಸ್ಥಿತಪ್ರಜ್ಞನಾ**ಗಿರುವನು.

ಈ ಜ್ಞಾನಿಯ ಅಂತಃಕರಣವು ಪ್ರಸನ್ನವಾಗಿ, ನಿರ್ಮಲವಾಗಿ ಇರುವದು. ಅವನು ತನ್ನಂತೆ ಪರರೆಂಬ ಭಾವದಿಂದ ಎಲ್ಲಾ ಪ್ರಾಣಿಗಳಲ್ಲಿಯೂ ಮೈತ್ರಿಯಿಂದಲೂ ಕರುಣೆಯಿಂದಲೂ ವರ್ತಿಸುವನು. ಅವುಗಳಲ್ಲಿರುವ ದೋಷವಿಷಯಕ್ಕೆ ಉಪೇಕ್ಷೆ ಯಿಂದಿರುವನು. ಯಾವಾಗಲೂ ತನ್ನೊಳಗೂ ಮಿಕ್ಕವರಲ್ಲಿಯೂ ಇರುವ ಆತ್ಮನ ಚಿಂತನೆಯಿಂದಲೇ ಕಾಲವನ್ನು ಕಳೆಯುತ್ತಿರುವನು. ಹೀಗೆ ಅವನ ಮನಸ್ಸು ಬಾಹ್ಯ ವಿಷಯವಿರಕ್ತನಾದ ಪರಮಾತ್ಮನಲ್ಲಿಯೇ ಯಾವಾಗಲೂ ಸೇರಿಕೊಂಡು ಅತೀಂದ್ರಿಯ ವಾದ ಒಂದಾನೊಂದು ವಿಲಕ್ಷಣಾನಂದವನ್ನು ಅನುಭವಿಸುತ್ತಿರುವದರಿಂದ ಅವನನ್ನು **'ಯುಕ್ತನು'** ಎನ್ನುತ್ತಾರೆ.

ಇಂಥ ಜ್ಞಾನಿಯು ಪರಮಾತ್ಮಚಿಂತನೆಯಲ್ಲಿರುವದಕ್ಕೂ ಸಕಲಭೂತಗಳ ಹಿತ ವನ್ನೇ ಆಚರಿಸುತ್ತಿರುವದಕ್ಕೂ ಅವನಿಗೆ ಆಗಬೇಕಾದ ಯಾವದಾದರೊಂದು ಪುರುಷಾರ್ಥವು ನಿಮಿತ್ತವಾಗಿರುವದಿಲ್ಲ. ತನಗೆ ಒದಗಿರುವ ಸಂಕಟವು ಪರಿಹಾರ ವಾಗಲೆಂದಾಗಲಿ, ತನಗೆ ಇಂಥ ಯಾವದಾದರೊಂದು ಸಂಪತ್ತು ಉಂಟಾಗಲೆಂದಾ ಗಲಿ, ಅವನು ಈ ನಡತೆಯನ್ನು ಅನುಸರಿಸಿರುವದಿಲ್ಲ; ಏಕೆಂದರೆ ಅವನಿಗೆ ಆಗ ಬೇಕಾದದ್ದಾಗಲಿ ಹೋಗಬೇಕಾದದ್ದಾಗಲಿ ಯಾವದೂ ಇರುವದಿಲ್ಲ. ಇಂಥ ಆಚರಣೆ ಯಿಂದ ಯಾವದಾದರೊಂದು ಹೊಸ ಬಗೆಯ ಅನುಭವವನ್ನು ತಂದುಕೊಳ್ಳಬೇಕೆಂಬ ಕುತೂಹಲವು ಕೂಡ ಅವನಿಗಿರುವದಿಲ್ಲ; ಏಕೆಂದರೆ ಅವನು ಅರಿತುಕೊಳ್ಳಬೇಕಾಗಿರುವ ರಹಸ್ಯತತ್ತ್ವವು ಯಾವದೂ ಇರುವದೇ ಇಲ್ಲ. 'ಈ ಸಮಸ್ತ ವಿಶ್ವವೂ ಭಗವಂತನ ವಿಭೂತಿಯೇ; ಆ ಪರಮಾತ್ಮನು ತನ್ನ ಪರಮಸ್ವರೂಪದಿಂದ ನಿತ್ಯಶುದ್ಧಬುದ್ಧಮುಕ್ತ ಸ್ವರೂಪನಾದ ಸಚ್ಚಿದಾನಂದಾದ್ವಯನು. ಆತನೇ ನಮ್ಮಗಳೆಲ್ಲರ ಆತ್ಮನು' ಎಂಬ ಪರಮಜ್ಞಾನವನ್ನು ಪಡೆದು ಪರಮಾತ್ಮನೊಡನೆ ಬೆರೆತು ತನ್ನಿಷ್ಠೆಯಲ್ಲಿರುವದು ಅವನ ಸ್ವಭಾವವಾಗಿಬಿಟ್ಟಿರುವದು. ಆದ್ದರಿಂದ ಅವನು **'ಪರಭಕ್ತ'**ನೆನಿಸಿರುವನು.

ಹೆಚ್ಚೇಕೆ? ಸತ್ತ್ವರಜಸ್ತಮಗಳೆಂಬ ಪ್ರಕೃತಿಯನ್ನು ದಾಟಿರುವದರಿಂದ ಆತನು '**ಗುಣಾತೀತ**'ನೆನಿಸಿರುವನು. ಭಗವಂತನು ಹೇಗೆ ತನ್ನ ತ್ರಿಗುಣಾತ್ಮಕವಾದ ವೈಷ್ಣವ ಮಾಯೆಯನ್ನು ವಶಮಾಡಿಕೊಂಡು ಲೀಲೆಯಿಂದ ಆಗಾಗ್ಗೆ ಅವತಾರಮಾಡಿ ಲೋಕವನ್ನುದ್ಧರಿಸುವನೋ ಹಾಗೆಯೇ ಈ ಭಗವದ್ಭಕ್ತನೂ ವ್ಯವಹಾರಮಾಡುತ್ತಾ ಸಾತ್ತ್ವಿಕರಾದವರಿಗೆ ಧರ್ಮದ ನೆಲೆಯನ್ನು ತಿಳಿಸುವಕ್ಕೆ ಆದರ್ಶರೂಪವಾದ ಜೀವನವನ್ನು ತೋರಿಸುತ್ತಿರುವನು. ಯಾವ ಅವತಾರದಲ್ಲಿ ಯಾವ ವ್ಯವಹಾರವನ್ನು ಕೈಕೊಂಡರೂ ಹೇಗೆ ಪರಮೇಶ್ವರನಿಗೆ ಆ ವ್ಯವಹಾರದ ಸುಕೃತದುಷ್ಕೃತಗಳ ಅಂಟು ಇರುವದಿಲ್ಲವೋ ಅದರಂತೆಯೇ ಈ ಜ್ಞಾನಿಯೂ ಯಾವ ದೇಶಕಾಲಗಳಲ್ಲಿ ಯಾವ ಜಾತಿಕುಲರೂಪ ಧನಾದಿಗಳ ಉಪಾಧಿಯಿಂದೊಡಗೂಡಿ ವ್ಯವಹಾರಮಾಡಿದರೂ ಅಜ್ಞರು ತನ್ನಲ್ಲಿ ಆರೋಪಿಸುವ ವ್ಯವಹಾರದ ಅಂಟಿಲ್ಲದೆ ತನ್ನ ಆತ್ಮನಾದ ಪರಬ್ರಹ್ಮದಲ್ಲಿಯೇ ಎಂದೆಂದಿಗೂ ನೆಲಸಿಬಿಟ್ಟಿರುತ್ತಾನೆ. ಹೀಗೆ ಪರಭಕ್ತನಾದ ಜ್ಞಾನಿಗೂ ಭಜನೀಯನಾದ ಭಗವಂತನಿಗೂ ಯಾವದೊಂದೂ ಭೇದವೂ ಇರುವದೇ ಇಲ್ಲವೆಂದುತೋರಿಸುವದಕ್ಕೆಂದೇ ಗೀತೆಯು ಜ್ಞಾನಿಯನ್ನು "**ಬ್ರಹ್ಮಭೂತನು**" ಎಂದು ಕರೆದಿರುತ್ತದೆ.

ಈ ದೃಷ್ಟಿಯಿಂದ ನೋಡಿದರೆ, ಜ್ಞಾನಿಯು ಸಕಲ ಕರ್ಮಗಳನ್ನೂ ಮಾಡಿದರೂ ಕರ್ಮಿಯಲ್ಲ, ಯಾವಾಗಲೂ ಇಂದ್ರಿಯನಿಗ್ರಹವನ್ನೂ ಚಿತ್ತನಿರೋಧವನ್ನೂ ಆಚರಿಸುತ್ತಿದ್ದರೂ ಯೋಗಿಯಲ್ಲ, ಎಂದೆಂದಿಗೂ ಪ್ರೇಮದಿಂದ ಭಜನೆಯನ್ನೇ ಮಾಡುತ್ತಿದ್ದರೂ ಭಕ್ತನಲ್ಲ; ಆತನು ನಿಜವಾಗಿಯೂ ಸರ್ವಾತ್ಮನಾದ ಶ್ರೀವಾಸುದೇವಭಗವಂತನ ಆತ್ಮನೇ, ಆತನೇ ಸಾಧಕರಾದ ನಮ್ಮಗಳ ಪಾಲಿಗೆ ಶ್ರೀವಾಸುದೇವನು. ಆ ವಾಸುದೇವನ ಚರಣಸೇವೆಯಿಂದ ಕೃತಾರ್ಥರಾಗುವವರೇ ಧನ್ಯರು.

# ಗೀತೋಪದೇಶದ ಸಂಕ್ಷೇಪ

**ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।**
**ಭ್ರಾಮಯನ್ ಸರ್ವಭೂತಾನಿ ಯನ್ತ್ರಾರೂಢಾನಿ ಮಾಯಯಾ ॥**
**ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।**
**ತತ್ಪ್ರಸಾದಾತ್ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥**

ಭಗವದ್ಗೀತೆಯಲ್ಲಿ ಹೇಳಿರುವದನ್ನೆಲ್ಲ ಸ್ವಲ್ಪದರಲ್ಲಿಟ್ಟರೆ ಇಷ್ಟರಲ್ಲಿ ಅಡಕವಾಗುವದು; ಮನುಷ್ಯನು ಭಗವಂತನ ಕಡೆಗೆ ಬೆನ್ನು ತಿರುಗಿಸಿ ಪ್ರಪಂಚದ ಕಡೆ ಹರಿಯುತ್ತಿರುತ್ತಾನೆ; ಅದರಿಂದ ಅವನಿಗೆ ಅಶಾಂತಿಯೂ ಅಸುಖವೂ ಆಗಿರುವವು. ಭಗವಂತನನ್ನು ಶರಣುಹೊಕ್ಕರೆ ಅವನಿಗೆ ಕೂಡಲೆ ಶಾಂತಿಯೂ ಸುಖವೂ ಸಿಕ್ಕುವವು.

ಪ್ರಪಂಚವೆಲ್ಲ ನಿಜವಾಗಿ ಪರಮಾತ್ಮನ ವಿಸ್ತಾರವೇ, ಆದರೂ ಎಲ್ಲೆಲ್ಲಿಯೂ ಹರಡಿರುವ ಬೆಳಂದಿಗಳನ್ನು ಕಂಡು ಆಕಾಶದಲ್ಲಿ ಮೇಲ್ಗಡೆ ಇರುವ ಚಂದ್ರನೇ ಅದಕ್ಕೆ ಮೂಲವೆಂದು ಅರಿಯದಿರುವ ಮೂಢರಂತೆ ಜನರು ಪ್ರಪಂಚವನ್ನು ಪರಮಾತ್ಮನಾದ ವಾಸುದೇವನ ವಿಭೂತಿಯೆಂದು ಅರಿಯದೆ ಅದೇ ಒಂದು **ಸ್ವತಂತ್ರವಸ್ತುವೆಂದು ಭಾವಿಸಿರುವರು.** ಅವರ ಕಣ್ಣಿಗೆ ಸತ್ತ್ವರಜಸ್ತಮೋಗುಣಗಳ ವಿಲಾಸವಾದ ಮಾಯೆಯೇ ಹೆಚ್ಚಿನದಾಗಿ ಕಾಣುತ್ತಿರುವದು. ಈ ಮಾಯೆಯ ಬಲೆಗೆ ಬಿದ್ದು ಎಲ್ಲಾ ಪ್ರಾಣಿಗಳೂ ಕಾಮಕ್ರೋಧಲೋಭಗಳ ವಶರಾಗಿ ಹುಚ್ಚು ಹಿಡಿದವರಂತೆ ಅಲೆದಾಡುತ್ತಿರುವರು. ಇದೇ ಅಶಾಂತಿಗೂ ಅಸುಖಕ್ಕೂ ಮೂಲವು, ಇದೇ ಸಂಸಾರವು.

ಜೀವರು ಸಂಸಾರದಲ್ಲಿ ಅಂಡಲೆಯುತ್ತಿರುವಾಗಲೂ ಅವರ ಹೃದಯದಲ್ಲಿ ಪರಮೇಶ್ವರನು ಇದ್ದೇ ಇರುವನು. ಆತನೇ ಅವರೆಲ್ಲರಿಗೂ ಆತ್ಮನಾಗಿರುವನು ಯಾವಾಗ ಅಸುರಸ್ವಭಾವವನ್ನು ಒತ್ತಲಿಸಿ ಶಾಸ್ತ್ರಸದ್ಗುರುಗಳ ಉಪದೇಶಕ್ಕೆ ಕಿವಿಗೊಟ್ಟು ದೈವಸಂಪತ್ತನ್ನು ಸಂಪಾದಿಸುವದಕ್ಕೆ ಜನರು ಪ್ರಯತ್ನಿಸುವರೋ ಆಗ ಶಾಂತಿಸುಖಗಳ ನೆಲೆಯಾದ ಪರಮಾತ್ಮನು ತಮ್ಮ ಹೃದಯದಲ್ಲಿಯೇ ಇರುವನೆಂಬ ಶುಭಸಂದೇಶವು ಕಿವಿಗೆ ಬೀಳುವದು. ಅವರು ಆಗ ಆತನ ಕಡೆಗೆ ತಿರುಗುವರು. ಇದೆ ಈ **ಅಧ್ಯಾತ್ಮ ಸಾಧನವು.**

ಸಾಧಕರು ಯಾವಾಗ ಕಾಮ್ಯನಿಷಿದ್ಧಕರ್ಮಗಳನ್ನು ಕೈಬಿಟ್ಟು ಶಾಸ್ತ್ರೋಕ್ತ ರೀತಿಯಿಂದ ತಮ್ಮ ತಮ್ಮ ಸ್ಥಾನಕ್ಕೆ ಉಚಿತವಾದ ಕರ್ಮವನ್ನು ಈಶ್ವರಾರ್ಪಣಬುದ್ಧಿಯಿಂದ ಮಾಡುವರೋ ಆಗ ಅವರಿಗೆ ಚಿತ್ತದ ಕಲ್ಮಷವು ಹೋಗಿ ಅದು ಶುದ್ಧಿಯಾಗುವದು. ಯಾವಾಗ ಅವರು ಆ ಈಶ್ವರನನ್ನೇ ಚಿಂತಿಸುವದಕ್ಕೆ ಮೊದಲು ಮಾಡುವರೋ ಆಗ ಅವರ ಮನಸ್ಸಿನ ತಳಮಳವು ನೀಗಿ ಶಾಂತಿಯು ಸಿಕ್ಕುವದು. ಯಾವಾಗ ಅವರು ಹೊರಗೆ ಕಾಣುವದೆಲ್ಲ ಆ ಪರಮಾತ್ಮನ ವಿಭೂತಿಯೆಂದೇ ಶ್ರದ್ಧೆಯಿಂದಲೂ ಪೂಜ್ಯಬುದ್ಧಿಯಿಂದಲೂ ಆರಾಧನೆಮಾಡುವದಕ್ಕೆ ಮೊದಲುಮಾಡುವರೋ ಆಗ ಅವರ

ಹೃದಯದಲ್ಲಿ ಆನಂದದಾಯಕವಾದ ಪ್ರೇಮವು ಒಡೆದುಮೂಡುವದು. ಇವೇ ಕರ್ಮಯೋಗ, ಧ್ಯಾನಯೋಗ, ಭಕ್ತಿಯೋಗ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಅಂಗಗಳಿಂದೊಡಗೂಡಿದ ಗೀತೋಕ್ತಯೋಗವು. ಈ ಯೋಗವನ್ನು **ಕರ್ಮಯೋಗ** ವೆಂದೇ ಗೀತೆಯಲ್ಲಿ ಕರೆದಿದೆ.

ಕರ್ಮಯೋಗದ ಮೊದಲನೆಯ ಎರಡು ಮೆಟ್ಟಿಲುಗಳನ್ನು ದಾಟಿ ತೀರ ಮೇಲಿನ ಮೆಟ್ಟಿಲಾದ ಭಕ್ತಿಯೋಗದಲ್ಲಿ ಯಾವನು ನಿಂತಿರುವನೋ ಅವನು ಭಗವಂತ ನನ್ನು ಪೂರ್ಣವಾಗಿ ಶರಣುಹೊಕ್ಕವನಾಗಿರುವನು. ಅವನು ರಜಸ್ತಮೋ ಗುಣಗಳನ್ನು ಮೀರಿದ ಶುದ್ಧಸತ್ತ್ವಗುಣದಿಂದೊಡಗೂಡಿದ ಅಂತಃಕರಣವುಳ್ಳವನಾಗಿರುವನು. ಆ ಅಂತಃಕರಣವು ಅತಿ ಸ್ವಚ್ಛವಾಗಿರುತ್ತದೆ. ಕಾಲಕ್ರಮದಲ್ಲಿ ಪರಮಾತ್ಮನ ಪ್ರಸಾದದಿಂದ ಅದರಲ್ಲಿ ಜ್ಞಾನಯೋಗಕ್ಕೆ ತಕ್ಕ ಯೋಗ್ಯತೆಯು ಬಂದೊದಗುತ್ತದೆ.

ಯಾವ ಮಹನೀಯನು ಪರಮಾತ್ಮನ ಜ್ಞಾನವನ್ನು ಸಂಪಾದಿಸಿಕೊಳ್ಳುವನೋ, ಅವನು ಗುಣಗಳ ಸಂಗವನ್ನು ಸಂಪೂರ್ಣವಾಗಿ ದಾಟಿಬಿಡುತ್ತಾನೆ. ಗುಣಗಳೆಲ್ಲ ತಮ್ಮ ರೂಪದಿಂದ ಕೇವಲ ಮಾಯೆಯೆಂದೂ ಅವುಗಳ ಪರಮಾರ್ಥ ಸ್ವರೂಪವು ತ್ರಿಗುಣಾ ತೀತನಾದ ಪರಮಾತ್ಮನೇ ಎಂದೂ ಆ ಪರಮಾತ್ಮನಾದ ವಾಸುದೇವನೇ ಸಕಲರ ಆತ್ಮ ನೆಂದೂ ಆತನು ಕಂಡುಕೊಳ್ಳುತ್ತಾನೆ. ಆಗ ಅವನು '**ಸಾಂಖ್ಯನು**' ಅಥವಾ '**ಜ್ಞಾನ ಯೋಗಿ**' ಎನಿಸಿಕೊಳ್ಳುತ್ತಾನೆ.

ಜ್ಞಾನಿಯು ಆ ಪರಮಾತ್ಮನಲ್ಲಿಯೇ ಬುದ್ಧಿಯನ್ನಿಟ್ಟುಕೊಂಡು, ಆ ಪರಮಾತ್ಮ ನಿಗೂ ತನಗೂ ಯಾವದೊಂದು ಭೇದವನ್ನೂ ಕಾಣದೆ ತನಿಷ್ಠೆಯೆಂಬ **ಪರಭಕ್ತಿಯನ್ನು** ಹೊಂದಿರುತ್ತಾನೆ. ಅವನಿಗೆ ಇದಕ್ಕಿಂತ ಇನ್ನು ಯಾವ ಹೆಚ್ಚಿನ ಗತಿಯೂ ಆಗಬೇಕಾದದ್ದು ಇರುವದೇ ಇಲ್ಲ. ಆಗಲೇ ಅವನಿಗೆ ಪರಮಶಾಂತಿರೂಪವಾಗಿಯೂ ನಿತ್ಯಾನಂದರೂಪ ವಾಗಿಯೂ ಇರುವ ಮೋಕ್ಷವು ದೊರೆಯುವದು.

# ಭಗವದ್ಗೀತೆಯ ಮಹತ್ತ್ವ

ಭಗವದ್ಗೀತೆಯು ತನ್ನ ಮಹತ್ತ್ವದಿಂದಲೇ ಈಗ ನಾಗರಿಕಪ್ರಪಂಚವನ್ನೆಲ್ಲ ವ್ಯಾಪಿಸಿಕೊಂಡು ಅನೇಕ ಜನರ ಚಿತ್ತವನ್ನು ತನ್ನ ಕಡೆಗೆ ಸೆಳೆದುಕೊಂಡಿರುತ್ತದೆ. ಜನ ಸಾಮಾನ್ಯಕ್ಕೆ ತಿಳಿಯಬೇಕಾದ ಜೀವನರಹಸ್ಯವನ್ನು ಉಪದೇಶಿಸುವದೇ ಈ ವ್ಯಾಪನೆಗೆ ಮುಖ್ಯಕಾರಣವಾಗಿದೆ. ಜೀವನವು ಸರಳವಾಗಿ, ಸುಖವಾಗಿ, ಸಾಗುವದಕ್ಕೆ ಬೇಕಾದ ಮೂಲ ಸೂತ್ರಗಳನ್ನು ಎಲ್ಲರಿಗೂ ತಿಳಿಯುವಂತೆ ಇಲ್ಲಿ ಗೀತಾಚಾರ್ಯನು ಉಪದೇಶಿಸಿರುತ್ತಾನೆ.

ಇದು ಹುಟ್ಟಿದ್ದು ಈಗ ಐದುಸಾವಿರದ ವರ್ಷಗಳ ಕೆಳಗೆ ನಡೆದ ಭಾರತ ಯುದ್ಧದ ಕಾಲದಲ್ಲಿ, ಈಗ ನಡೆಯುತ್ತಿರುವ ಘೋರವಾದ ವಿಶ್ವಯುದ್ಧದ ಕಾಲ ದಲ್ಲಿಯೂ ಇದರ ಉಪದೇಶಗಳು ಅತ್ಯಾವಶ್ಯವಾಗಿರುತ್ತವೆ. ಹೊರಗಿನ ಯುದ್ಧದಲ್ಲಿ ತೊಡಗಬೇಕೆ, ಬಾರದೆ? - ಎಂಬುದನ್ನು ತಿಳಿಸುವದು ಗೀತೆಯ ಉದ್ದೇಶವಲ್ಲ, ಮಾನವನ ಹೃದಯದಲ್ಲಿರುವ ಶೋಕಮೋಹಗಳನ್ನು ಕಳೆಯುವ ಉಪಾಯವನ್ನು ಬೋಧಿಸುವದೇ ಅದಕ್ಕೆ ಗುರಿ. ಆಗ ಅರ್ಜುನನಿಗೆ ಹೃದಯದಲ್ಲಿ ಉಂಟಾಗಿದ್ದ ಮೋಹವಿವೇಕದ ದ್ವಂದ್ವಯುದ್ಧವೇ ಈವರೆವಿಗೂ ನಮ್ಮೆಲ್ಲರ ಹೃದಯದಲ್ಲಿಯೂ ನಡೆಯುತ್ತಿದೆ. ಕ್ರೋಧ, ಲೋಭ, ದಂಭ, ದರ್ಪ, ಅಭಿಮಾನ - ಮುಂತಾದವುಗಳೇ ಮೋಹದ ಕಾರ್ಯಗಳು; ದಮ, ದಾನ, ದಯೆ - ಮುಂತಾದವುಗಳೇ ವಿವೇಕದ ಫಲಗಳು. ನಮ್ಮ ಹೃದಯದಲ್ಲಿ ನಿತ್ಯವಾಗಿ ಸಾಗಿರುವ ಮೋಹವಿವೇಕದ ಯುದ್ಧದಲ್ಲಿ ಮೋಹವನ್ನು ಸೋಲಿಸಿ ವಿವೇಕದ ಹಾದಿಯನ್ನು ಹಿಡಿಯುವದೇ ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳುವದಕ್ಕೆ ಮುಖ್ಯವಾದ ಉಪಾಯವು-ಎಂಬುದು ಗೀತೆಯ ಮುಖ್ಯೋಪದೇಶವು.

ವಿವೇಕದ ಹಾದಿಯನ್ನು ಹಿಡಿಯುವದಕ್ಕೆ ಒಂದು ಕ್ರಮವನ್ನು ಅನುಸರಿಸ ಬೇಕೆಂದು ಗೀತೆಯಲ್ಲಿ ಉಪದೇಶಿಸಿದೆ. ನಾವು ಯಾವಾಗ ಯಾವ ಕೆಲಸವನ್ನು ಮಾಡ ಬೇಕಾಗಿ ಬಂದರೂ ಅದು ಭಗವಂತನಿಗೇ ಅರ್ಪಣವಾಗಬೇಕು. ನಮ್ಮ ಜೀವನದ ಗುರಿಯೆಲ್ಲ ಭಗವಂತನೇ ಆಗಿರಬೇಕು. ಹೀಗೆ ನಡೆದುಕೊಂಡರೆ ನಾವು ವಿವೇಕದ ಹಾದಿಯಲ್ಲಿರುವೆವು. ಈ ಉಪಾಯಕ್ಕೆ **ಯೋಗವೆಂದು** ಹೆಸರು. ಈ ಯೋಗದ ಕವಲುಗಳು ಕರ್ಮಯೋಗ, ಧ್ಯಾನಯೋಗ, ಭಕ್ತಿಯೋಗ - ಎಂದು ಬೇರೆ ಬೇರೆ

ಯಾಗಿರುವವು. ಭಗವಂತನನ್ನೇ ಗುರಿಯಾಗಿಟ್ಟುಕೊಂಡು ನಡೆಯುವವನಿಗೆ ದೈವೀ ಸಂಪತ್ತಿನ ಬಲವಿರಬೇಕು. ಹಾಗಿಲ್ಲದೆ ಸ್ವಾರ್ಥಬುದ್ಧಿಯಿಂದ ನಡೆಯುವವದು ಅಸುರ ಸಂಪತ್ತಿನವರು, ಅಸುರಸಂಪತ್ತಿನ ಕೆಟ್ಟಗುಣಗಳೆಲ್ಲ ದುಃಖಬಂಧಕ್ಕೆ ಕಾರಣವಾಗಿರುತ್ತವೆ. ದೈವೀಸಂಪತ್ತಿನ ಸಾಧನಗಳು ವಿವೇಕದ ಮೂಲಕ ಆನಂದರೂಪವಾದ ಮೋಕ್ಷವನ್ನು ಕೊಡುವದಕ್ಕೆ ಉಪಾಯಗಳಾಗುತ್ತವೆ.

ನಮ್ಮ ಗುರಿಯು ಭಗವಂತನೇ ಆಗಿರುವನೆಂಬುದಕ್ಕೆ ನಮಗೆ ಸರ್ವತ್ರಸಮ ಬುದ್ಧಿಯಿರುವದೇ ಗುರುತು. ಭಗವಂತನು ಎಲ್ಲರಲ್ಲಿಯೂ ಒಂದೇ ಸಮನಾಗಿದ್ದು ಕೊಂಡಿರುತ್ತಾನೆ. ಆದ್ದರಿಂದ ಜನರ ಸಂತೋಷವನ್ನು ಹೆಚ್ಚಿಸುವದು ಆತನ ಆರಾಧನೆ ಯಾಗುತ್ತದೆ, ಅವರಿಗೆ ದುಃಖವನ್ನು ಕೊಡುವದು ಆತನಿಗೆ ಅಪಚಾರವನ್ನು ಮಾಡಿ ದಂತೆ ಆಗುತ್ತದೆ. ಮತ್ತೊಬ್ಬರಿಗೆ ಯಾವದು ಸುಖಕಾರಕವೋ ಯಾವದು ದುಃಖ ಕಾರಕವೋ ಹೇಗೆ ಗೊತ್ತುಮಾಡಿಕೊಳ್ಳಬೇಕೆಂದು ನಾವು ಪೇಚಾಡುವದಕ್ಕೆಕಾರಣವಿಲ್ಲ. ನಮಗೆ ದುಃಖಕಾರಕವಾದದ್ದು ಎಲ್ಲರಿಗೂ ದುಃಖಕಾರಕವೇ. ನಮ್ಮನ್ನು ಮಿಕ್ಕವರು ಹೇಗೆ ನಡೆಯಿಸಿಕೊಳ್ಳಬಾರದೆಂದು ನಾವು ಬಯಸುವೆವೋ ನಾವೂ ಅವರನ್ನು ಹಾಗೆ ನಡೆಯಿಸಿಕೊಳ್ಳಬಾರದು. ಇದರಿಂದ ಮತ್ತೊಬ್ಬರಿಗೆ ನಮ್ಮಿಂದ ದುಃಖವುಂಟಾಗುವದು ನಿಂತುಹೋಗುವದು. ನನ್ನ ವಿಷಯದಲ್ಲಿ ಮಿಕ್ಕವರು ಹೇಗೆ ನಡೆದುಕೊಳ್ಳಬೇಕೆಂದು ನಾವು ನಿರೀಕ್ಷಿಸುವೆವೋ ಹಾಗೆಯೇ ನಾವೂ ಅವರ ವಿಷಯದಲ್ಲಿ ನಡೆದುಕೊಳ್ಳಬೇಕು. ಇದರಿಂದ ಎಲ್ಲರಿಗೂ ನಮ್ಮಿಂದ ಸುಖವೇ ಆಗುವದು. ಸುಖದುಃಖಗಳ ವಿಷಯದಲ್ಲಿ ತನ್ನಂತೆ ಮತ್ತೊಬ್ಬರು - ಎಂಬುದನ್ನು ನೆನಪಿಟ್ಟವನು ಪರಮಯೋಗಿಯು.

ಗೀತೆಯ ಉಪದೇಶವು ಮೊಟ್ಟ ಮೊದಲು ಆದದ್ದು ಮಾರ್ಗಶೀರ್ಷ ಶುದ್ಧ ಏಕಾದಶಿಯ ದಿನ. ಆದ್ದರಿಂದ ನಾವುಗಳು ಆ ದಿನವನ್ನು **ಗೀತಾಜಯಂತಿಯ** ಉತ್ಸವ ದಿನವಾಗಿ ಭಾವಿಸುತ್ತಿರುವೆವು. ಗೀತಾಜಯಂತಿಯ ಉತ್ಸವವು ಭರತಖಂಡದಲ್ಲೆಲ್ಲ ನಡೆಯುವದು. ಗೀತಾಪುಸ್ತಕದ ಪೂಜೆ, ಅದನ್ನುಪದೇಶಿಸಿದ ಶ್ರೀಕೃಷ್ಣ ಭಗವಂತನ ಪೂಜೆ, ಗೀತೆಯನ್ನು ಶ್ಲೋಕರೂಪವಾಗಿ ಬರೆದಿರುವ ವೇದವ್ಯಾಸರ ಪೂಜೆ, ಗೀತಾ ಪಾರಾಯಣ, ಗೀತೆಯ ಉಪದೇಶವನ್ನು ಜನರಿಗೆ ಬೋಧಿಸುವದು, ಗೀತಾ ಪರೀಕ್ಷೆ ಗಳನ್ನು ನಡೆಯಿಸಿ ವಿದ್ಯಾರ್ಥಿಗಳಿಗೆ ಬಹುಮಾನವನ್ನೇರ್ಪಡಿಸುವದು, ಗೀತಾ ಪುಸ್ತಕದ ಮೆರವಣಿಗೆ, ಗೀತಾವಿಷಯಗಳನ್ನು ಬರೆಯುವವರಿಗೆ ಸಂಭಾವನೆಯನ್ನು ಕೊಡುವದು - ಇವೆಲ್ಲ ಗೀತಾಜಯಂತಿಯ ಉತ್ಸವವನ್ನು ಮಾಡುವ ವಿವಿಧ ರೀತಿಗಳು. ಎಲ್ಲಕ್ಕೂ

ಮುಖ್ಯವಾಗಿ ಅಸುರಸಂಪತ್ತಿಯನ್ನು ಬಿಟ್ಟು ದೈವಸಂಪತ್ತಿಯನ್ನು ಸಂಪಾದಿಸುವ ಪ್ರಯತ್ನವನ್ನು ಮಾಡುವೆನೆಂದು ಹೃದಯಪೂರ್ವಕವಾಗಿ ಸಂಕಲ್ಪ ಮಾಡುವದೂ ಅದಕ್ಕೆ ನೆರವಾಗಬೇಕೆಂದು ಭಗವಂತನನ್ನು ಪ್ರಾರ್ಥಿಸುವದೂ ಈ ಉತ್ಸವಕ್ಕೆ ಮುಖ್ಯವಾದ ಅಂಗವಾಗಿರುತ್ತದೆ.

# ಅಧ್ಯಾತ್ಮವಿದ್ಯೆಗೆ ಅಕರ್ಮಣ್ಯತೆ ಗುರುತಲ್ಲ

'ಸ್ಥಾವರಪ್ರಾಣಿಗಳು ಮಾತ್ರ ಯಾವ ಕರ್ಮವನ್ನೂ ಮಾಡದೆ ಇರುವವು, ಮಿಕ್ಕವರು ಯಾರೂ ಸುಮ್ಮನೆ ಕುತಿಳಿತಿರುವದಿಲ್ಲ' ಎಂದು ದ್ರೌಪದಿಯು ಹೇಳಿದಂತೆ ಒಂದು ಉಕ್ತಿಯು ಮಹಾಭಾರತದಲ್ಲಿದೆ. ಸ್ಥಾವರಪ್ರಾಣಿಗಳಲ್ಲಿಯೂ ಬೆಳವಣಿಗೆ ಮುಂತಾದ ಮಾರ್ಪಾಡುಗಳೂ ಆಗುತ್ತಲೇ ಇರುತ್ತವೆಯಾದರೂ ಜಂಗಮಪ್ರಾಣಿಗಳಂತೆ ಅವು ಒಂದು ಸ್ಥಲದಿಂದ ಮತ್ತೊಂದು ಸ್ಥಲಕ್ಕೆ ಹೋಗುವದಿಲ್ಲ; ಮನಸ್ಸಿನಲ್ಲುಂಟಾಗುವ ಇಚ್ಛಾದ್ವೇಷಗಳಿಗೆ ಒಳಗಾಗಿ ಅವು ಮಿಕ್ಕ ಪ್ರಾಣಿಗಳಂತೆ ಯಾವ ಕೆಲಸವನ್ನೂ ಪ್ರಯತ್ನಪೂರ್ವಕವಾಗಿ ಮಾಡುತ್ತಿರುವದಿಲ್ಲ. ಕರ್ಮವನ್ನು ಮಾಡುವ ಮಿಕ್ಕ ಪ್ರಾಣಿಗಳಿಗೂ ಮನುಷ್ಯನಿಗೂ ಇರುವ ಸಾಮ್ಯವೆಂದರೆ ಯಾವದು ಇಷ್ಟವೆಂದು ತೋರುವದೋ ಅದರ ಕಡೆಗೆ ಪ್ರವರ್ತಿಸುವದು; ಅನಿಷ್ಟವಾದದ್ದನ್ನು ತಪ್ಪಿಸಿಕೊಳ್ಳುವದಕ್ಕೆ ಆ ಕಡೆಯಿಂದ ಹಿಮ್ಮೆಟ್ಟುವದು, ಅಥವಾ ಅದನ್ನೇ ಅತ್ತ ಸರಿಯಿಸುವದು. ಆದರೆ ಮಿಕ್ಕ ಪ್ರಾಣಿಗಳಿಗೂ ಮನುಷ್ಯನಿಗೂ ಒಂದು ಮುಖ್ಯ ವೈಷಮ್ಯವುಂಟು. ಅದೇನೆಂದರೆ ಮಿಕ್ಕ ಪ್ರಾಣಿಗಳಿಗೆ 'ನಮ್ಮನ್ನು ಇಚ್ಛಾದ್ವೇಷಗಳು ಹೀಗೆ ಕರ್ಮದಲ್ಲಿ ತೊಡಗುವಂತೆ ಮಾಡುತ್ತಿವೆ' ಎಂಬ ಅರಿವು ಇರುವದಿಲ್ಲ. ಮನುಷ್ಯನಿಗೆ ಆ ಅರಿವು ಇರುತ್ತದೆ. ಅರಿವಿದ್ದರೂ ಇಚ್ಛಾದ್ವೇಷಗಳ ವಶಕ್ಕೇ ಸಿಕ್ಕಿಬಿದ್ದು ಮತ್ತೆ ಮತ್ತೆ ಪ್ರವೃತ್ತಿ ನಿವೃತ್ತಿಗಳಲ್ಲಿ ತೊಡಗುವವರು ಬಹಳ ಜನ; ಕೆಲವು ಜನ ಮಾತ್ರ ಆ ವೇದನೆಗಳನ್ನು ವಶಕ್ಕೆ ಇಟ್ಟುಕೊಂಡು ಆಯಾ ಕಾರ್ಯವನ್ನು ವಿಚಾರಪೂರ್ವಕವಾಗಿ ಮಾಡುವರು. ಅಥವಾ ಬಿಡುವರು. ಈ ಎರಡನೆಯ ಬಗೆಯ ಜನರಿಗೇ ಶಾಸ್ತ್ರವು ಉಪದೇಶವನ್ನು ಮಾಡುತ್ತದೆ.

ಶಾಸ್ತ್ರದೃಷ್ಟಿಯುಳ್ಳ ಮನುಷ್ಯನು ತನ್ನಲ್ಲಿ ಆಗಾಗ್ಗೆ ಎದ್ದುಕೊಳ್ಳುವ ವೇದನೆಗಳನ್ನು ತಡೆದುಕೊಂಡು ದೀರ್ಘದೃಷ್ಟಿಯಿಂದ ವಿಚಾರಮಾಡಿ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ತನಗೆ ಸುಖವೇ ಆಗಬೇಕು. ದುಃಖವು ಆದಷ್ಟು ಕಡಿಮೆಯಾಗ

ಬೇಕು ಎಂದು ಅಂಥ ಸತ್ಕರ್ಮಗಳನ್ನೇ ಆರಿಸಿಕೊಳ್ಳುತ್ತಾನೆ. ಶಾಸ್ತ್ರದಲ್ಲಿ ಹೇಳಿರುವ ಯಜ್ಞ, ದಾನ, ತಪಸ್ಸು ಎಂಬ ಮೂರು ವಿಧವಾದ ಕರ್ಮಗಳನ್ನೂ ಮಾಡಿ ತನಗೆ ಶ್ರೇಯಸ್ಸೇ ಆಗುವಂತೆ ಮಾಡಿಕೊಳ್ಳುವದಕ್ಕೆ ಹೊರಟವರು ಶಾಸ್ತ್ರದೃಷ್ಟಿಯ ಮೆಟ್ಟಿಲಿನಲ್ಲಿರುವ ಸಾಧಕರು.

ಈ ತರಗತಿಯವರಿಗಿಂತಲೂ ಮೇಲಿನ ಅಂತಸ್ತನ್ನು ಮುಟ್ಟಿದ ಶಾಸ್ತ್ರದೃಷ್ಟಿಯ ಸಾಧಕರೂ ಉಂಟು. ಅವರಿಗೆ 'ಹೇಗೆ ಇಲ್ಲಿ ಲೌಕಿಕಕರ್ಮಗಳನ್ನು ಮಾಡಿದ್ದರಿಂದ ದೊರೆತ ಫಲವು ಕ್ಷಯವಾಗುವದೋ ಹಾಗೆಯೇ ಪುಣ್ಯಕರ್ಮವನ್ನು ಮಾಡಿದ್ದರಿಂದ ದೊರೆಯುವ ಪರಲೋಕದ ಫಲವೂ ಕ್ಷಯವಾಗುವದು ಎಂದು ಹೇಳಿದ ಶಾಸ್ತ್ರೋಕ್ತಿಯ ನಿಜವು ಮನದಟ್ಟಾಗಿರುತ್ತದೆ. ಕೃತಕವಾದದ್ದು ಹೇಗೆ ನಿತ್ಯವಾಗಿ ಇದ್ದೀತು? ನಾವು ಕರ್ಮಸಾಧ್ಯವಾಗಿರುವ ಅನಿತ್ಯಫಲವನ್ನು ಅನುಭವಿಸುವದಕ್ಕೆ ಎಂದಿಗೂ ಪ್ರಯತ್ನಿಸುವದಿಲ್ಲ; ಇವುಗಳಿಂದಾಗುವ ಅನಿತ್ಯವಾದ ಸುಖಕ್ಕಿಂತ ಬೇರೆಯಾಗಿರುವ ನಿತ್ಯ ಸುಖವೇ ನನಗೆ ಬೇಕು ಎಂಬ ವಿವೇಕವೈರಾಗ್ಯಗಳು ಯಾರಿಗೆ ಉಂಟಾಗಿರುವವೋ ಅವರಿಗೆ **ಮುಮುಕ್ಷು**ಗಳೆಂದು ಹೆಸರು.

**ಸಾಮಾನ್ಯಜನರಾಗಲಿ, ಶಾಸ್ತ್ರದೃಷ್ಟಿಯುಳ್ಳ ಜನರಾಗಲಿ ಸುಮ್ಮನೆ ಕುಳಿತಿರುವದು ಆಗುವಂತೆಯೇ ಇಲ್ಲ.** ಅವರಿಗೆಲ್ಲ ಯಾವದೋ ಒಂದು ಪ್ರಯೋಜನವು ಆಗ ಬೇಕಾಗಿರುತ್ತದೆ; ಆದ್ದರಿಂದ ಅವರು ಆಯಾ ಫಲವನ್ನು ಪಡೆದುಕೊಳ್ಳುವದಕ್ಕಾಗಿ ನಿರಂತರವಾಗಿ ಪ್ರಯತ್ನವನ್ನು ಮಾಡುತ್ತಲೇ ಇರುವರು. ಯಾರು ಕೇವಲ ದೇಹಾತ್ಮವಾದಿಗಳಾಗಿರುವರೋ ಅವರು ದೇಹಕ್ಕೆ ತೃಪ್ತಿಯನ್ನುಂಟುಮಾಡುವ ಭೋಗಗಳಿಗಾಗಿ ದುಡಿಯುತ್ತಿರುತ್ತಾರೆ. ಪರಲೋಕದ ಮತ್ತು ಮುಂದಿನ ಜನ್ಮಾಂತರದ ದೇಹಕ್ಕೂ ಸುಖವು ಬೇಕೆನ್ನುವವರು ಆ ಸುಖಕ್ಕಾಗಿ ಧರ್ಮವನ್ನು ಮಾಡುತ್ತಿರುತ್ತಾರೆ. ಈ ಎರಡು ಬಗೆಯ ಸುಖಗಳೂ ಅನಿತ್ಯವೆಂದು ತಿಳಿದವರೋ, ಎಂದರೆ ಅವುಗಳಲ್ಲಿ ವಿರಕ್ತರಾಗಿ ನಿತ್ಯ ಸುಖವಾದ ಮೋಕ್ಷಕ್ಕಾಗಿ ಪ್ರಯತ್ನಿಸುತ್ತಾರೆ. ಇದಿಷ್ಟೇ ಭೇದವೇ ಹೊರತು ಅಧ್ಯಾತ್ಮವಿದ್ಯೆಯಲ್ಲಿ ತೊಡಗುವವರು ಕರ್ಮವನ್ನೆಲ್ಲ ಬಿಟ್ಟು ಸೋಮಾರಿಗಳಾಗಿರುತ್ತಾರೆ ಎಂದು ತಿಳಿಯುವದು ಭ್ರಾಂತಿಯಾಗಿರುತ್ತದೆ.

ನಿತ್ಯಸುಖವಾದ ಮೋಕ್ಷವು ಹೇಗೆ ದೊರಕುತ್ತದೆ? ಎಂಬುದನ್ನು ಬೋಧಿಸುವದಕ್ಕೆ ಶಾಸ್ತ್ರವು ಮೊದಲನೆಯ ಮೆಟ್ಟಿಲಾಗಿ **ಕರ್ಮಯೋಗ**ವನ್ನು ಉಪದೇಶಿಸುತ್ತದೆ. ಈ ದೃಷ್ಟಿಯಿಂದಲೇ ಭಗವಂತನು ಅರ್ಜುನನಿಗೆ –

ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ।
ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥೩೩॥

ಎಂದು ಬೋಧಿಸಿರುತ್ತಾನೆ; **ನಿತ್ಯಸುಖವನ್ನು ಬಯಸುವ ಮುಮುಕ್ಷುಗಳೂ ಅದಕ್ಕಾಗಿ ಕರ್ಮವನ್ನು ಮಾಡಬೇಕು.** ಆದರೆ ಅವರಿಗೆ ಒಂದು ಬಗೆಯ **ಅಧ್ಯಾತ್ಮ ಬುದ್ಧಿಯು** ಬೇಕಾಗುವದು. ನಾನು ಈಶ್ವರನ ಭೃತ್ಯನು; ಅವನಿಗೆ ಸಂತೋಷವಾಗಲೆಂದೇ ಈ ಕರ್ಮವನ್ನು ಮಾಡುವೆನು ಎಂಬ ಅರಿವು ಅವರಲ್ಲಿರಬೇಕು. ಇದಲ್ಲದೆ ಅವರು **ನಿರ್ಮಮ**ರಾಗಿರಬೇಕು, ಎಂದರೆ ಈ ಕರ್ಮವು ನನ್ನದು ಎಂಬ ಸಂಗವು ಇರಬಾರದು ಮತ್ತು ಅವರು **ನಿರಾಶಿಷ**ರಾಗಿರಬೇಕು, ಎಂದರೆ ಈ ಕರ್ಮದ ಫಲವನ್ನು ನಾನು ಅನುಭವಿಸಬೇಕಾಗಿದೆ ಎಂಬ ಫಲೇಚ್ಛೆಯೂ ಇರಬಾರದು. ಈ ಕರ್ಮವನ್ನು ನಾನು ಈಶ್ವರನ ಆಜ್ಞೆಯಾಗಿರುತ್ತದೆ. ಅವನ ಆಜ್ಞೆಯಂತೆ ಶಾಸ್ತ್ರದಲ್ಲಿ ಹೇಳಿರುವ ಕರ್ಮವನ್ನು ಮಾಡುವದು ನನ್ನ ಕರ್ತವ್ಯವು ಎಂಬ ಭಾವದಿಂದ ಆ ಮುಮುಕ್ಷುಗಳು ಕರ್ಮವನ್ನು ಮಾಡಬೇಕಾಗಿರುತ್ತದೆ. ಇದೂ ಅಲ್ಲದೆ, ಅವರು **ವಿಗತಜ್ವರ**ರಾಗಿ ಕರ್ಮವನ್ನು ಮಾಡಬೇಕು. ಮಾಡುವ ಕರ್ಮದಿಂದ ತನಗೆ ಜಯವಾಗಲಿ ಅಪಜಯವಾಗಲಿ, ಲಾಭವಾಗಲಿ ನಷ್ಟವಾಗಲಿ, ಸುಖವಾಗಲಿ ದುಃಖವಾಗಲಿ – ಆದರೆ ಉಬ್ಬದೆ ತಗ್ಗದೆ ಮನಸ್ಸನ್ನು **ಸಮತ್ವ**ದಲ್ಲಿಟ್ಟುಕೊಂಡು ತಮ್ಮ ಸ್ವಧರ್ಮವನ್ನು ನೆರವೇರಿಸುತ್ತಿರಬೇಕಾಗುವದು. ಹೀಗೆ ನೋಡಿದರೆ ಹೆಚ್ಚಿನ ವಿವೇಕವಿಲ್ಲದ ಸಾಮಾನ್ಯ ಜನರಿಗಿಂತಲೂ, ಶಾಸ್ತ್ರ ದೃಷ್ಟಿಯುಳ್ಳವರಾಗಿ ಪರಲೋಕಸುಖಕ್ಕಾಗಿ ಧರ್ಮವನ್ನಾಚರಿಸುವ ವಿವೇಕಿಗಳಿಗಿಂತಲೂ, ಹೆಚ್ಚಿನ ಮಟ್ಟದ ವಿವೇಕದಿಂದ ಭಗವಂತ ನನ್ನೊಬ್ಬನನ್ನೇ ಮನಸ್ಸಿನಲ್ಲಿಟ್ಟುಕೊಂಡು ಕರ್ಮವನ್ನು ಮಾಡುವ ಹೊಣೆಗಾರಿಕೆಯೂ ಈ ಮುಮುಕ್ಷುಗಳಿಗೆ ಇರುತ್ತದೆ ಎನ್ನಬೇಕು. ಈ ಮುಮುಕ್ಷುಗಳಿಗಿಂತಲೂ ಮೇಲಿನ ಹಂತಕ್ಕೆ ಸೇರಿರುವ ಜ್ಞಾನಿಗಳು ಯಾವದಾದರೂ ಕರ್ಮವನ್ನು ಮಾಡುವರೊ? ಅವರಿಗೆ ಯಾವ ಕರ್ಮದಿಂದ ಯಾವ ಫಲವೂ ಆಗಬೇಕಾದದ್ದಿಲ್ಲವಷ್ಟೆ? ಎಂದು ಯಾರಾದರೂ ಕೇಳಬಹುದು. ನಿಜ, ಅವರಿಗೆ ಯಾವ ಕರ್ಮದಿಂದ ಯಾವದೊಂದು ಫಲವು ಆಗ ಬೇಕಾದದ್ದಿರುವದಿಲ್ಲ, ಆದರೂ ಅವರು ಕರ್ಮವನ್ನು ಮಾಡದೆ ಇರುವದಿಲ್ಲ, ಭಗವಂತನಿಗೆ ಯಾವ ಭೋಗವಾಗಲಿ, ಯಾವ ಮೋಕ್ಷವಾಗಲಿ, ದೊರೆಯಬೇಕಾದದ್ದಿರುವದಿಲ್ಲವಷ್ಟೆ? ಆದರೂ ನಿತ್ಯಶುದ್ಧ ಬುದ್ಧಮುಕ್ತನಾದ ಭಗವಂತನೂ ಹೇಗೆ ಜನರಿಗೆ ಒಳ್ಳೆಯದಾಗಲೆಂದು ಸೃಷ್ಟಿಸ್ಥಿತಿಪ್ರಲಯಗಳನ್ನು ಮಾಡುವದು ಮತ್ತು ಜನರಿಗೆ ಒಳ್ಳೆಯ ಮಾರ್ಗವನ್ನು ತೋರಿಸುವದಕ್ಕಾಗಿ

ತಾನು ಅವತರಿಸಿದ ಸ್ಥಾನಕ್ಕೆ ತಕ್ಕ ಕರ್ಮವನ್ನು ಮಾಡುವದು ಇವುಗಳಲ್ಲಿ ಸಂತತವೂ ನಿರತನಾಗಿರುವನೋ ಹಾಗೆ ಮುಕ್ತರಾದ **ಜ್ಞಾನಿಗಳು ಕೂಡ ಲೋಕಸಂಗ್ರಹಕ್ಕಾಗಿ** ಜನರು **ತಪ್ಪುಹಾದಿಯಲ್ಲಿ ನಡೆಯದೆ ಇರಲೆಂದು ಉತ್ತಮಕರ್ಮಗಳನ್ನೇ ಮಾಡುತ್ತಾ ಎಲ್ಲರಿಗೂ ಆದರ್ಶಪ್ರಾಯರಾಗಿರುತ್ತಾರೆ.** ಎಲ್ಲಾ ವ್ಯವಹಾರಗಳನ್ನೂ ಬಿಟ್ಟು ಬ್ರಹ್ಮ ನಿಷ್ಠರೇ ಆಗಿರುವ ಜ್ಞಾನಿಗಳು ಕೂಡ ನಮಗೆ ಗೊತ್ತಾಗದಂತೆ ಉತ್ತಮಕರ್ಮವನ್ನು ಮಾಡುತ್ತಿರುತ್ತಾರೆ. ಅವರು ಮಾಡುವ ಜ್ಞಾನಯಜ್ಞವು ಮಿಕ್ಕವರನ್ನೆಲ್ಲ ಸ್ವಕರ್ಮ ನಿರತ ರಾಗುವಂತೆ ಮಾಡುತ್ತಿರುತ್ತದೆ.

ಹೀಗಿರುವದರಿಂದ ಅಧ್ಯಾತ್ಮವಿದ್ಯೆಯಲ್ಲಿ ನಿರತರಾಗಿರುವ ಸಾಧಕರೂ ಸಿದ್ಧರೂ ಎಂದಿಗೂ ಕರ್ಮವನ್ನು ಮಾಡದೆ ಇರುವದಿಲ್ಲ, ಅವರು ಮುಕ್ತಸಂಗರಾಗಿರುತ್ತಾರೆ, ನಿಷ್ಕಾಮರಾಗಿರುತ್ತಾರೆ; ಆದರೂ ಲೋಕಕಲ್ಯಾಣಕ್ಕಾಗಿ ಯಾವದಾದರೊಂದು ಸತ್ಕರ್ಮ ವನ್ನು ಮಾಡುತ್ತಲೇ ಇರುತ್ತಾರೆ. ಅಧ್ಯಾತ್ಮವಿದ್ಯೆಯು ಜನರನ್ನು ಅಲಸರನ್ನಾಗಿ ಮಾಡು ವದೆಂಬ ಭಾವನೆಯು ಎಂಥ ದೊಡ್ಡ ತಪ್ಪೆಂಬುದು ಇದರಿಂದ ಗೊತ್ತಾಗುತ್ತದೆ.

ಖಖಖಖ

# ಅದ್ವೈತದರ್ಶನದ ಹೆಚ್ಚುಗಾರಿಕೆ *

ಅದ್ವೈತದರ್ಶನವನ್ನು ಕುರಿತು ಕೆಲವು ವಿಷಯಗಳನ್ನು ಇಂದು ತಮ್ಮ ಮುಂದೆ ಇಡಬೇಕೆಂದಿರುವೆನು. ಅದ್ವೈತದರ್ಶನದಿಂದ ಮಹಾವಾದಗಳನ್ನು ಪ್ರತಿಪಾದನೆಮಾಡು ವದಕ್ಕಾಗಲಿ, ಮಿಕ್ಕ ದರ್ಶನಗಳಲ್ಲಿ ಬಹಳವಾಗಿ ಕಂಡುಬರುವ ಪ್ರತಿವಾದಗಳನ್ನು ಖಂಡಿ ಸುವದಕ್ಕಾಗಲಿ, ನಾನು ಹೋಗುವದಿಲ್ಲ. ಅದ್ವೈತದರ್ಶನದ ಮಹಿಮೆಯು ಎಂಥದ್ದು? ಇದನ್ನು ಆದರದಿಂದ ಕಂಡರೆ ಈಗಿನ ಜನರಿಗೆ ಎಷ್ಟುಮಟ್ಟಿಗೆ ಉಪಕಾರವಾದೀತು! - ಎಂಬುದಿಷ್ಟನ್ನೇ ತಮಗೆ ಅರಿಕೆ ಮಾಡಿಕೊಳ್ಳುವೆನು.

---

* ಅಖಿಲಭಾರತೀಯ ಪ್ರಾಚ್ಯವಿದ್ವತ್ಸಮ್ಮೇಳನದ ಎಂಟನೆಯ ಅಧಿವೇಶನದ ತತ್ತ್ವಶಾಸ್ತ್ರ ಮತ್ತು ಧರ್ಮ- ಎಂಬ ವಿಭಾಗಕ್ಕೆ ಸಂಬಂಧಪಟ್ಟು ಸೇರಿದ ಪಂಡಿತ ಪರಿಷತ್ತಿನಲ್ಲಿ ಮಾಡಿದ ಸಂಸ್ಕೃತ ಭಾಷಣದ ಸಾರವಿದು.

ಈ ದರ್ಶನದಲ್ಲಿ ಹೇಳಿರುವ ಪರಮಾರ್ಥತತ್ತ್ವವು ಹೇಗೆ ಎಲ್ಲಾ ಬಗೆಯಿಂದಲೂ ಅದ್ವಿತೀಯವೇ ಆಗಿರುವದೆಂದು ಸುಪ್ರಸಿದ್ಧವಾಗಿರುವದೋ ಅದರಂತೆ ಈ ದರ್ಶನವು ಕೂಡ ಪೂರ್ವದೇಶದ ಅಥವಾ ಪಾಶ್ಚಾತ್ತ್ಯದೇಶದ ದರ್ಶನಗಳಲ್ಲೆಲ್ಲ ಅನ್ವರ್ಥವಾಗಿಯೂ ಅದ್ವಿತೀಯವೇ ಆಗಿರುತ್ತದೆ. ಇದೊಂದು ದರ್ಶನಕ್ಕೇ ಎಲ್ಲಾ ಬಗೆಯಿಂದಲೂ ದರ್ಶನ ವೆಂಬ ಹೆಸರು ಸಲ್ಲುವದೆಂದು ನನ್ನ ಅಭಿಪ್ರಾಯವಿರುವದು. ಏಕೆಂದರೆ ಮಿಕ್ಕ ದರ್ಶನ ಗಳಲ್ಲಿ ಕೆಲವು ತರ್ಕವನ್ನು ಮರೆಹೊಕ್ಕಿರುತ್ತವೆ, ಮತ್ತೆ ಕೆಲವು ಬರಿಯ ಶಬ್ದಪ್ರಮಾಣ ವನ್ನೇ ಆಶ್ರಯಿಸಿರುತ್ತವೆ; ಆದರೆ ಅದ್ವೈತದರ್ಶನವು ಮಾತ್ರ ಹಾಗಲ್ಲ. ಇದು ಶಾಸ್ತ್ರ ವನ್ನೂ ತರ್ಕವನ್ನೂ ಹೊಂದಿಸಿಕೊಂಡು ಸಾರ್ವತ್ರಿಕವಾದ ಅನುಭವದಿಂದ ತಿಳಿಯ ಬರುವ ವಸ್ತುವನ್ನೇ ತಿಳಿಸುತ್ತದೆ.

ಈ ದರ್ಶನದಲ್ಲಿರುವ ಒಂದು ಹೆಚ್ಚಿಗೆಯ ವಿಶೇಷವೇನೆಂದರೆ, ಇದರಲ್ಲಿ ಈಗಿನ ವಿಜ್ಞಾನಶಾಸ್ತ್ರದ ವಿಚಾರಕ್ರಮವನ್ನು ಅನುಸರಿಸಿಯೇ ವಿಷಯವನ್ನು ಪರಿಶೀಲನಮಾಡಿ ರುತ್ತದೆ. ವಿಜ್ಞಾನಶಾಸ್ತ್ರದಲ್ಲಿ ಹೇಗೆ ವಸ್ತುನಿರೀಕ್ಷಣ (Observation), ಪರೀಕ್ಷಣ (experiment), ಸಂವಾದೀಕರಣ (verification) - ಎಂಬ ಕ್ರಮವನ್ನು ಅನುಸರಿಸಿರು ತ್ತದೆಯೋ, ಹೇಗೆ ಆ ಶಾಸ್ತ್ರದಲ್ಲಿ ಆಯಾ ವಿಚಾರಕ್ಕೆ ಸಂಬಂಧಪಟ್ಟ ವಿಷಯಗಳೆಲ್ಲವನ್ನೂ ನಿರೀಕ್ಷಣಾದಿಗಳಿಂದ ನೋಡಿದ ಮೇಲೆಯೇ ಆ ವಿಷಯದಲ್ಲಿ ಯಾವದಾದರೊಂದು ಸಾಮಾನ್ಯನಿಯಮವನ್ನು ಸಿದ್ಧಾಂತವೆಂದು ಏರ್ಪಡಿಸಲಾಗುತ್ತದೆಯೋ, ಅದರಂತೆ ಈ ದರ್ಶನದಲ್ಲಿಯೂ ಎಲ್ಲರೂ ವಿಚಾರಮಾಡತಕ್ಕದ್ದೆಂದು ಒಪ್ಪಿರುವ, ಬೇರೆಬೇರೆ ವಾದಿಗಳು ಹೇಳುವ ಎಲ್ಲಾ ಪದಾರ್ಥಗಳನ್ನೂ ತನ್ನೊಳಗೇ ಅಡಕಮಾಡಿಕೊಂಡಿರುವ, ಅವಸ್ಥಾ ತ್ರಯವನ್ನೇ ಪರೀಕ್ಷೆಮಾಡಿ ಈ ಅನುಭವವನ್ನು ಸಮರಸಮಾಡಿಕೊಂಡೇ ಪರಮಾರ್ಥ ವಾದ ಅದ್ವೈತತತ್ತ್ವವನ್ನು ಸ್ಥಾಪಿಸಲಾಗಿರುತ್ತದೆ. ಹೀಗಿರುವದರಿಂದ ತತ್ತ್ವಜಿಜ್ಞಾಸುಗಳಿಗೆ ಈ ದರ್ಶನದಲ್ಲಿ ಎಲ್ಲಕ್ಕೂ ಹೆಚ್ಚಿನ ವಿಶ್ವಾಸವುಂಟಾಗುವದಕ್ಕೆ ಇದೊಂದು ದೊಡ್ಡ ಕಾರಣವಾಗಿರುತ್ತದೆ.

ಇದರಲ್ಲಿರುವ ಮತ್ತೊಂದು ಹೆಚ್ಚುಗಾರಿಕೆಯನ್ನು ತಾವುಗಳು ಈಗ ಮನಸ್ಸಿಗೆ ತಂದುಕೊಳ್ಳಬೇಕು. ಅದೇನೆಂದರೆ ಈ ದರ್ಶನದಲ್ಲಿ ಹೇಳಿರುವ ತತ್ತ್ವಗಳನ್ನು ಗೊತ್ತುಪಡಿಸು ವದಕ್ಕೆ ಶೈವ, ವೈಷ್ಣವ, ಶಾಕ್ತೇಯ, ಕ್ರೈಸ್ತ, ಮಹಮ್ಮದೀಯ – ಮುಂತಾದ ಯಾವ ಮತ ವನ್ನು ಅವಲಂಬಿಸಿರುವದಾಗಲಿ ಅವಲಂಬಿಸದೆ ಇರುವದಾಗಲಿ ಅಡಚಣೆಯಾಗುವ ದಿಲ್ಲ. ಶೈವರು ಶಿವನೆಂದೂ ವೈಷ್ಣವರು ವಿಷ್ಣುವೆಂದೂ ಶಾಕ್ತೇಯರು ಶಕ್ತಿಯೆಂದೂ

ಕ್ರಿಸ್ತಿಯನರು ಪರಲೋಕದಲ್ಲಿರುವ ತಂದೆಯೆಂದೂ ಮಹಮ್ಮದೀಯರು ಅಲ್ಲಾಹನೆಂದೂ ಯಾವ ಪರಮೇಶ್ವರನನ್ನು ಕರೆಯುವರೋ ಯಾವಾತನನ್ನು ಜಗತ್ಕಾರಣನೆಂದೂ ಸರ್ವ ಸ್ವತಂತ್ರನೆಂದೂ ಹೇಳುವರೋ ಆತನ ಪರಮಾರ್ಥಸ್ವರೂಪವೇ ನಮ್ಮೆಲ್ಲರ ಆತ್ಮನೆಂದು ಈ ದರ್ಶನದಲ್ಲಿ ಹೇಳಿರುತ್ತದೆ. ಆದ್ದರಿಂದ ಇಲ್ಲಿ ತತ್ತ್ವವನ್ನು ಪರೀಕ್ಷೆ ಮಾಡಬೇಕೆನ್ನುವವರು ತಮ್ಮ ಮತವನ್ನು ಬಿಟ್ಟು ಮತಾಂತರಕ್ಕೆ ಬರಬೇಕಾದ ಕಾರಣವೇನೂ ಇರುವದಿಲ್ಲ. ಇಷ್ಟೇ ಅಲ್ಲ, ಪರಮೇಶ್ವರನು ಸರ್ವಸ್ವತಂತ್ರನೆಂದೂ ಸರ್ವಜ್ಞನೆಂದೂ ಸದಾನಂದಘನನೆಂದು ಜೀವರು ಪರಮೇಶ್ವರನ ಅಂಶಗಳೆಂದೂ ಪರಮೇಶ್ವರನ ಭಕ್ತಿಯಿಂದ ಆತನ ಸನ್ನಿಧಿಯನ್ನು ಸೇರಿ ಪರಮಾನಂದಮಯವಾದ ಉತ್ತಮಗತಿಯನ್ನು ಹೊಂದುವರೆಂದೂ ಈ ಬ್ರಹ್ಮಾಂಡವೆಲ್ಲವೂ ಪರಮೇಶ್ವರನಿಂದಲೇ ಸೃಷ್ಟಿಸ್ಥಿತಿಲಯಗಳನ್ನು ಹೊಂದುತ್ತಿರುವದೆಂದೂ ಈಶ್ವರವಾದಿಗಳೆಲ್ಲರೂ ಸಮಾನವಾಗಿ ಒಪ್ಪಿರುವರಷ್ಟೆ; ಈ ಒಪ್ಪಿಗೆಗೆ ಈ ದರ್ಶನವೇ ಪುಷ್ಟಿಯನ್ನು ಕೊಡುತ್ತದೆ; ಏಕೆಂದರೆ ಈ ಜಗತ್ತೆಲ್ಲವೂ ಬ್ರಹ್ಮವೇ ಎಂದೂ ಜ್ಞಾನಿಯು ಈ ಆನಂದಮಯನಾದ ಪರಮಾತ್ಮನನ್ನು ಸೇರುತ್ತಾನೆಂದೂ ಇಲ್ಲಿ ಮನಗಾಣಿಸಿಕೊಟ್ಟಿರುತ್ತದೆ. ಇನ್ನೂ ಒಂದು ಮಾತು; ಆಸ್ತಿಕರೇ ಅಲ್ಲದೆ ನಾಸ್ತಿಕರಿಗೂ ಇದರಲ್ಲಿ ಅವಕಾಶವಿದೆ. ಹೇಗೆಂದರೆ ಎಂಥ ನಾಸ್ತಿಕವಾದರೂ ತನ್ನ ಸ್ವರೂಪವನ್ನೇ ಇಲ್ಲವೆಂದು ಹೇಳುವದಕ್ಕೆ ಆಗಲಾರದು. ಈ ದರ್ಶನದಲ್ಲಿ ಆತ್ಮವಿಚಾರವನ್ನೇ ಹೇಳಿರುವದರಿಂದ ಅದನ್ನು ಒಂದಿಷ್ಟು ಮನಸ್ಸು ಕೊಟ್ಟು ವಿಚಾರಮಾಡಿದರೂ ಸಾಕು, ಅಂಥ ನಾಸ್ತಿಕರಿಗೂ ದೈವಸಂಪತ್ತುಂಟಾಗಿ ಕೊನೆಗೆ ಅವರೂ ಸರ್ವಾತ್ಮನಾದ ಪರಮಾತ್ಮನ ಸಾಕ್ಷಾತ್ಕಾರವನ್ನು ಹೊಂದಬಹುದಾಗಿರುತ್ತದೆ. ಹೀಗಿರುವಲ್ಲಿ ಈ ದರ್ಶನದ ವೈಭವವನ್ನು ಎಷ್ಟೆಂದು ಹೇಳಬೇಕು!

ಇನ್ನು ಮೂರನೆಯದೊಂದು ವಿಶೇಷವನ್ನು ಈ ದರ್ಶನದಲ್ಲಿ ತೋರಿಸುತ್ತೇನೆ. ಸಾವಧಾನರಾಗಿ ಕೇಳಿರಿ. ಆಯಾ ಕಾಲದಲ್ಲಿ ನೂರಾರು ದರ್ಶನಗಳು ತಲೆದೋರಿ ಆಯಾಕಾಲದವರು ಇವೇ ನಮಗೆ ಮೋಕ್ಷಸಾಧನವೆಂದು ನಂಬಿ ಅವುಗಳ ಕೀರ್ತಿಧ್ವಜವನ್ನು ಮೇಲಕ್ಕೆತ್ತಿದ್ದರೂ ಅವು ಈಗ ಹೆಸರಿಗೆ ಮಾತ್ರ ಉಳಿದುಕೊಂಡು ಇತಿಹಾಸದಲ್ಲಿ ಮಾತ್ರವೇ ಕಂಡುಬರುವಂತಾಗಿವೆ - ಎಂಬುದು ಇಡಿಯ ಭೂಮಂಡಲದ ಇತಿಹಾಸವನ್ನು ಕೇಳಿದವರಿಗೆ ತಿಳಿದೇ ಇದೆ. ಕರಾಲಕಾಲನ ಬಾಯಿಗೆ ತುತ್ತಾಗಿ ಅವುಗಳೆಲ್ಲವೂ ಮೃತ್ಯುವನ್ನು ಕಂಡದ್ದು ಆಶ್ಚರ್ಯಕರವೂ ಅಲ್ಲ. ಇದಲ್ಲದೆ ಯಾವಯಾವ ದರ್ಶನಗಳ ಯುಕ್ತಿಗಳು ಆಯಾ ಕಾಲದಲ್ಲಿ ಎಲ್ಲಕ್ಕೂ ಪ್ರಬಲತರವೆಂದು ಕಂಡು

ಬಂದವೋ ಅವುಗಳ ಯುಕ್ತಿಗಳನ್ನೇ ಈಗಿನ ಜನರು ಬಾಲಿಶವೆಂದು ಎಣಿಸುತ್ತಿದ್ದಾರೆ. ನಿಲುಗಡೆಯಿಲ್ಲದ ತರ್ಕವೊಂದನ್ನೇ ಆಶ್ರಯಿಸಿದ್ದ ಆ ದರ್ಶನಾಭಾಸಗಳಿಗೆ ಇದು ತಕ್ಕ ಗತಿಯೇ ಆಗಿರುತ್ತದೆ. ಆದರೆ ಈ ಅದ್ವೈತದರ್ಶನವು ಅಂಥದ್ದಲ್ಲ; ಏಕೆಂದರೆ ದೇಶ ಕಾಲನಿಮಿತ್ತಗಳನ್ನು ದಾಟಿ ದೇಶಕಾಲಗಳಿಗೂ ಉತ್ಪತ್ತಿಗೆ ಕಾರಣವಾಗಿರುವ ಅನುಭವೈಕ ಗಮ್ಯವಾದ ಪರಮಾದ್ವಿತೀಯತತ್ತ್ವವನ್ನೇ ಈ ದರ್ಶನದಲ್ಲಿ ಹೇಳಿರುತ್ತದೆ.

ಈಗ ಈ ದರ್ಶನದ ನಾಲ್ಕನೆಯದೊಂದು ಹೆಚ್ಚುಗಾರಿಕೆಯನ್ನು ಬಯಲಿಗೆ ತರುತ್ತೇನೆ. ಅದೇನೆಂದರೆ ಈಗಿನ ಕಾಲದಲ್ಲಿ ಎಲ್ಲೆಲ್ಲಿಯೂ ಹಬ್ಬಿರುವ ಅಶಾಂತಿಯನ್ನು ಒಂದಿಷ್ಟೂ ಉಳಿಯದಂತೆ ತೊಲಗಿಸುವದಕ್ಕೂ ಶಾಶ್ವತ ಸುಖಕ್ಕೆ ಸಾಧನವೇನೆಂಬುದನ್ನು ತೋರಿಸಿಕೊಡುವದಕ್ಕೂ ಈ ದರ್ಶನವೊಂದೇ ಸಮರ್ಥವಾಗಿರುತ್ತದೆ. ಎಂದೆಂದಿಗೂ ಇರುವ ಶಾಂತಿಯನ್ನೂ ನಿರ್ಬಾಧಕವಾದ ಸುಖವನ್ನೂ ನಾವೆಲ್ಲರೂ ಬಯಸಿಯೇ ವ್ಯವಹಾರದಲ್ಲಿ ತೊಡಗಿರುತ್ತೇವೆ. ನಮ್ಮ ವ್ಯವಹಾರವೆಲ್ಲವೂ ಶಾಂತಿಸುಖಗಳಿಗಾಗಿಯೇ – ಎಂಬೀ ವಿಷಯದಲ್ಲಿ ಯಾರೂ ಬೇರೆ ಹೇಳುವಂತಿಲ್ಲ. ಹೀಗಿದ್ದರೂ ಈ ಲೋಕದಲ್ಲಿ ಶಾಂತಿಯು ಅತ್ಯಂತ ದುರ್ಲಭವಾಗಿ ತೋರುತ್ತಿರುವದು; ಸುಖವು ಕೂಡ, ಎಷ್ಟೆಷ್ಟು ಅದರ ಪ್ರಾಪ್ತಿಗಾಗಿ ಪ್ರಯತ್ನವು ಸಾಗುವದೋ ಅಷ್ಟಷ್ಟು ದೂರಕ್ಕೆ ಸರಿಯುತ್ತಿರುವಂತೆ ತೋರುತ್ತಿರುವದು. ಇದು ನಮ್ಮೆಲ್ಲರಿಗೂ ಪ್ರತ್ಯಕ್ಷವಾಗಿರುತ್ತದೆ. ಅಶಾಂತಿಗೂ ದುಃಖಕ್ಕೂ ಕಾರಣವಾಗಿರುವ ದೋಷಗಳೆಲ್ಲವೂ ಅಹಂಕಾರವನ್ನಾಶ್ರಯಿಸಿಕೊಂಡೇ ತಲೆದೋರುವ ವೆಂಬುದೂ ನಮ್ಮಗಳಿಗೆ ತಿಳಿಯದ ವಿಷಯವೇನೂ ಅಲ್ಲ. ಈ ಅಹಂಕಾರವನ್ನು ನಿಂದಿಸದೆ ಇರುವ, ಇದೇ ಸರ್ವಾನರ್ಥಗಳಿಗೂ ಮೂಲವಾದದ್ದರಿಂದ ಇದನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕೆಂದು ಹೇಳದ – ವೈದಿಕಧರ್ಮವಾಗಲಿ ಅವೈದಿಕ ಧರ್ಮವಾಗಲಿ ಲೋಕದಲ್ಲಿರುವದಿಲ್ಲ. ಜನರು ಅಹಂಕಾರವನ್ನಾಶ್ರಯಿಸಿ ಕಾಮವಶ ರಾಗಿ ಇದು ಧರ್ಮ, ಇದು ಅಧರ್ಮ – ಎಂಬ ವಿಂಗಡವನ್ನೂ ಲೆಕ್ಕಿಸದೆ ಭೋಗ್ಯ ವಸ್ತುಗಳನ್ನು ರಾಶಿ ಹಾಕುವದರಲ್ಲಿಯೇ ನಿರತರಾಗಿರುತ್ತಾರೆ; ತಮ್ಮ ಆಸೆಗೆ ಏನಾದರೂ ಅಡ್ಡಿಯಾದರೆ ಸಿಟ್ಟಿನಿಂದ ಮೈಮರೆತು, ದಂಭದರ್ಪಾದಿದೋಷಗಳಿಂದೊಡಗೂಡಿ ದವರಾಗಿ ಶಾಂತಿಸುಖಗಳ ಸ್ಥಾನವನ್ನು ಕಾಣದೆ ಅಲೆದಾಡುತ್ತಿರುತ್ತಾರೆ – ಹೀಗೆಂಬುದು ಸುಪ್ರಸಿದ್ಧವಾಗಿರುತ್ತದೆ. ಈಗ ಭೂಮಂಡಲದಲ್ಲಿ ಬಹುವಾಗಿ ಕಂಡುಬರುತ್ತಿರುವ ಬಾಂಧವದ್ವೇಷ, ಜಾತಿದ್ವೇಷ, ರಾಷ್ಟ್ರದ್ವೇಷವೇ ಮುಂತಾದವುಗಳ ಈ ಕೆಟ್ಟ ಅಹಂಕಾರದ ವಿಲಾಸಗಳೇ ಎಂಬುದಿಷ್ಟೇ ಅಲ್ಲ; ಎಲ್ಲಿ ನಿರಪರಾಧಿಗಳಾದ ಜನರು ಕೋಟಿಗಟ್ಟಲೆ

ಯಾಗಿ ಪಶುಗಳಂತೆ ಕೊಲೆಯಾಗುತ್ತಿರುವರೋ, ಯಾವದರ ನಿಮಿತ್ತದಿಂದ, ಬಡವರು ಕಷ್ಟದಿಂದ ಸಂಪಾದಿಸಿದ ಹಣವನ್ನು ಲೆಕ್ಕವಿಲ್ಲದಂತೆ ಕನಿಕರವಿಷ್ಟೂಇಲ್ಲದೆ ವೆಚ್ಚಮಾಡುತ್ತಿರುವರೋ, ಏತರ ಫಲವಾಗಿ ಎಷ್ಟೋ ಕಾಲದವರೆಗೆ ಕ್ಷಾಮವೂ ಸಾಂಕ್ರಾಮಿಕ ರೋಗಾದಿಗಳೂ ಉಂಟಾಗಿ ವಿದ್ಯಾವಿನಯಾದಿಗಳಿಗೆ ಬಾರಿಯ ಧಕ್ಕೆಯು ತಗಲುವದೋ ಅಂಥ ವಿಶ್ವಭೀಕರವಾದ ಘೋರಯುದ್ಧಗಳು ಕೂಡ ಈ ಅಹಂಕಾರ ರಾಕ್ಷಸರನ ಬೀಭತ್ಸನರ್ತನಗಳೇ ಎಂಬುದನ್ನು ವಿವೇಕಿಗಳಿಗೆ ನೆನಪುಮಾಡಬೇಕಾದದ್ದಿರುವದಿಲ್ಲ. ಎಲ್ಲಾ ದರ್ಶನಗಳಲ್ಲಿಯೂ ಈ ಅಹಂಕಾರವನ್ನು ಬಿಡತಕ್ಕದ್ದೆಂದು ತಿಳಿಸಿಯೇ ಇರುತ್ತದೆಯಾದರೂ ಅದರ ಶಕ್ತಿಯನ್ನು ಕುಂದಿಸುವದಕ್ಕೆ ಯಾವಾಗಲೂ ವಿಜಯದಪ್ರದವಾಗುವ ಮಾರ್ಗವನ್ನು ಅದ್ವೈತದರ್ಶನದಂತೆ ಮತ್ತೆಲ್ಲಿಯೂ ಬೆಟ್ಟಿಟ್ಟು ತೋರಿಸಿರುವದಿಲ್ಲ. ಈ ಸಿದ್ಧಾಂತದಲ್ಲಿ ಅಹಂಕಾರಕ್ಕೆ ಅಜ್ಞಾನವೇ, ಎಂದರೆ ಸರ್ವರ ಆತ್ಮನಾಗಿರುವ ಪರಮಾತ್ಮನನ್ನು ಅರಿಯದಿರುವದೇ, ಕಾರಣವೆಂಬುದನ್ನು ಅನುಭವಕ್ಕೆ ಹತ್ತುವಂತೆ ಮಾಡಿರುತ್ತದೆ. ಎಲ್ಲರ ಹೃದಯದಲ್ಲಿಯೂ ಇರುವ ಪರಮಾತ್ಮನನ್ನು ತಿಳಿಯದೆ ಅಂತಃಕರಣದಲ್ಲಿ ಪ್ರತಿಬಿಂಬಿತವಾದ ಚಿದಾಭಾಸವನ್ನೇ ತಾವೆಂದು ಅವಿವೇಕಿಗಳು ತಿಳಿದುಕೊಂಡಿರುತ್ತಾರೆ; ಇದರ ಫಲವಾಗಿ ಹೀಗೆ ಅಹಂಕಾರಬಲದರ್ಪಕಾಮಕ್ರೋಧವೇ ಮುಂತಾದ ಆಸುರಸಂಪತ್ತನ್ನು ಅವರು ಆಶ್ರಯಿಸಿರುತ್ತಾರೆ. ಈ ಸರ್ವಾನರ್ಥಕಾರಣವಾದ ಅಜ್ಞಾನದ ಭೇದವನ್ನು ಕಿತ್ತುಹಾಕುವದಕ್ಕೇ ಅದ್ವೈತದರ್ಶನದ ಪ್ರಯತ್ನವೆಲ್ಲವೂ ನಡೆದಿರುತ್ತದೆ. ಪರಮಾನಂದಘನನೂ ಸರ್ವಸಾಕ್ಷಿಯೂ ಸರ್ವರ ಆತ್ಮನೂ ಆಗಿರುವ ಪರಮಾತ್ಮನ ಸಾಕ್ಷಾತ್ಕಾರವನ್ನುಂಟುಮಾಡಿಕೊಡುವ ಮೂಲಕ ಅದನ್ನು ಗೆದ್ದು ಜಯಭೇರಿಯನ್ನು ಹೊಡೆಯಿಸುವದೇ ಈ ದರ್ಶನದ ಮುಖ್ಯವಾದ ಹೆಚ್ಚುಗಾರಿಕೆಯಾಗಿರುತ್ತದೆ. ಶಾಂತಿ-ಸುಖಗಳನ್ನೇ ಹುಡುಕುತ್ತಿರುವ ನಮ್ಮಗಳಿಗೆಲ್ಲ ಇದೊಂದು ಮಹಾಸಂತೋಷಕ್ಕೆ ಕಾರಣವಲ್ಲವೇನು?

ಇದಲ್ಲದೆ ಅದ್ವೈತದರ್ಶನದಲ್ಲಿ ನಿಂತರೆ ಮನುಷ್ಯರಲ್ಲಿ ಪರಸ್ಪರವಾಗಿ ಪ್ರೇಮವು ಹೆಚ್ಚುವದೆಂಬುದಿಷ್ಟೇ ಅಲ್ಲ, ಆಗ ಸರ್ವಭೂತಗಳಲ್ಲಿಯೂ ದಯೆಯು ತಾನಾಗಿಯೇ ಮೂಡುವದು. ಏಕೆಂದರೆ ಈ ದರ್ಶನದಲ್ಲಿ ಮನುಷ್ಯರ ಆತ್ಮನು ಮಾತ್ರ ಪರಮಾನಂದಘನವಾದ ಪರಮೇಶ್ವರನಾಗಿರುವದಿಲ್ಲ; ಆ ದೇವನೊಬ್ಬನೇ ಸಮಸ್ತ ಸ್ಥಾವರ ಜಂಗಮಪ್ರಾಣಿಗಳಲ್ಲಿಯೂ ಇದ್ದುಕೊಂಡಿರುವನು. ಬ್ರಹ್ಮನಿಂದ ಹಿಡಿದು ಮೋಟುಮರದವರೆಗಿನ ಪ್ರಾಣಿಗಳಿಗೆಲ್ಲ ಆ ಒಬ್ಬನೇ ನಿಜವಾದ ಆತ್ಮನಾಗಿರುವನು. ಅವನೇ ನನ್ನ

ಆತ್ಮನೂ ಆಗಿರುತ್ತಾನೆ - ಎಂದೀ ಪರಿಯಲ್ಲಿ ಯಾವ ಮಹಾತ್ಮನ ತಿಳಿವಳಿಕೆಯಿರುವದೋ ಅಂಥವನು ತನ್ನನ್ನು ತಾನೇ ಹೇಗೆ ಹಿಂಸಿಸುವದಕ್ಕೆ ಹೋದಾನು?

ಹೀಗಿರುವದರಿಂದಲೇ ಬೇರೆಬೇರೆಯ ಮತಗಳಲ್ಲಿ ಬರಿಯ ಆಜ್ಞಾರೂಪವಾಗಿ ಉಪದಿಷ್ಟವಾಗಿರುವ ಕರ್ಮಯೋಗ, ಭಕ್ತಿಯೋಗ - ಮುಂತಾದವುಗಳಿಗೂ ಈ ದರ್ಶನದಲ್ಲಿ ಶಾಸ್ತ್ರೀಯವಾಗಿ ಪ್ರಯೋಜನವು ತೋರಿಬರುತ್ತದೆಯೆಂಬ ಮತ್ತೊಂದು ಹೆಚ್ಚುಗಾರಿಕೆಯೂ ಈ ದರ್ಶನದಲ್ಲಿ ಬೆಳಗುತ್ತಿರುವದು. ಏಕೆಂದರೆ ಯೋಗಮಾರ್ಗಗಳನ್ನು ಸಾಧಿಸಿದರೆ ದೇಹಾದಿಗಳು ತಾನಲ್ಲವೆಂಬ ತಿಳಿವಳಿಕೆಯೂ ಅವುಗಳ ಸಾಕ್ಷಿಯೇ ತಾನೆಂಬ ಬುದ್ಧಿಯೂ ಸ್ಪಷ್ಟವಾಗಿ ತೋರುಬರುತ್ತದೆಯೆಂಬುದನ್ನು ಈ ದರ್ಶನದ ಯುಕ್ತಿಯಿಂದ ತೋರಿಸಿಕೊಡಬಹುದಾಗಿದೆ. ಹಾಗಿಲ್ಲದೆ ಜೀವನಿಗಿಂತ ಬೇರೆಯಾಗಿ ನಿಂತಿರುವ ಪರಮೇಶ್ವರನನ್ನು ಒಪ್ಪಿದರೆ ಅವನು ಯಾವದೊಂದು ಕಾರಣವೂ ಇಲ್ಲದೆ ಬಹಳ ಆಯಾಸದಿಂದ ಮಾತ್ರ ವಶವಾಗುವ ಸಾಧನಗಳ ಹೊರೆಯನ್ನು ಜೀವರ ತಲೆಯ ಮೇಲೆ ಹೊರಿಸಿ ಆಮೇಲೆ ಎಷ್ಟೋ ದೀರ್ಘವಾದ ಕಾಲವಾದ ಮೇಲೆ ಹೇಗೋ ತನ್ನನ್ನು ಶರಣು ಹೊಕ್ಕರೆ ಅವರ ಮೇಲೆ ಅನುಗ್ರಹ ಮಾಡುತ್ತಾನಾದ್ದರಿಂದ **'ಈಶ್ವರನು ನಿರ್ದಯನು'** - ಎಂದು ಮುಂತಾಗಿಯೂ ಆಕ್ಷೇಪವು ಹುಟ್ಟಬಹುದಾಗುವದು; ಆ ಪಕ್ಷದಲ್ಲಿ ಈ ಪರಮೇಶ್ವರಾನುಗ್ರಹವೆಂಬುದು ಕೂಡ ಬೇರೊಂದು ಲೋಕದಲ್ಲಿ ಬೇರೊಂದು ಕಾಲದಲ್ಲಿಯೇ ಆಗುವದಾದ್ದರಿಂದ ಅದನ್ನು ಕೇವಲ ಶ್ರದ್ಧೆಯಿಂದಲೇ ನಂಬಬೇಕಾಗಿ ಬರುವದು. ಅಂತೂ ಇಲ್ಲಿ ಇಷ್ಟನ್ನು ಲಕ್ಷ್ಯವಿಟ್ಟು ತಿಳಿಯಬೇಕಾಗಿರುವದು: ವಿವೇಕಿಗಳಾದ ಮನುಷ್ಯರೆಲ್ಲರೂ ದೇಹಾದಿಗಳಲ್ಲಿ ನಾನು, ನನ್ನದು - ಎಂಬ ಅಭಿಮಾನವನ್ನು ಪರಿಹರಿಸಿಕೊಳ್ಳುವದಕ್ಕೇ ಪ್ರಯತ್ನಿಸುತ್ತಿರುವರಷ್ಟೆ. ಈ ಪ್ರವೃತ್ತಿಯನ್ನು ವಿಂಗಡಿಸಿ ಆಯಾ ದೇಶದ ಪೂರ್ವಾಚಾರ್ಯರುಗಳು ಕರ್ಮಯೋಗ, ಭಕ್ತಿಯೋಗ - ಮುಂತಾದ ರೂಪವನ್ನು ಅದಕ್ಕೆ ಕೊಟ್ಟು ತೋರಿಸಿ ಕೊಟ್ಟಿರುತ್ತಾರೆ; ವೈದಿಕದರ್ಶನಗಳಲ್ಲಿ ಈ ಸಾಧನಗಳಿಗೆ ಕರ್ಮಪ್ರಧಾನವಾಗಿಯೋ ಭಕ್ತಿಪ್ರಧಾನವಾಗಿಯೋ ವಿವೇಕಜ್ಞಾನಪ್ರಧಾನವಾಗಿಯೋ ಅಂಗಾಂಗಿಭಾವವನ್ನು ಸ್ವೀಕರಿಸಿರುತ್ತದೆ; ಇನ್ನು ಅದ್ವೈತದರ್ಶನದಲ್ಲಿಯೋ ಎಂದರೆ ಯಾವ ಸಾಧನವೇ ಆಗಲಿ, ಆತ್ಮೈಕ್ಯದರ್ಶನದಲ್ಲಿಯೇ ಕೊನೆಗಾಣುವದೆಂದು ತೋರಿಸಿಕೊಟ್ಟು ಸಾಧನಗಳನ್ನೆಲ್ಲ ಅನುಭವಾನುಸಾರವಾಗಿಯೇ ಸಾಮರಸ್ಯವನ್ನುಂಟುಮಾಡಿರುತ್ತದೆ. ಹೀಗೆ ಸಾಧನ ಸಾಮರಸ್ಯದಲ್ಲಿಯೂ ಈ ದರ್ಶನದಲ್ಲಿ ಒಂದು ಹೆಚ್ಚಿನ ವಿಶೇಷವಿರುತ್ತದೆ.

ಈ ರೀತಿಯಲ್ಲಿ ಈ ದರ್ಶನವು ಮಹಾಮಹಿಮೆಯುಳ್ಳದ್ದಾಗಿ ಇದರ ಫಲವು ಮೇಲೆ ತೋರಿಸಿರುವಂತೆ ಪ್ರತ್ಯಕ್ಷದಿಂದಲೇ ತಿಳಿಯಬರುವದಾಗಿಯೂ ಧರ್ಮಕ್ಕೆ ಹೊಂದಿಕೊಂಡಿರುವದಾಗಿಯೂ ಇರುತ್ತದೆಯಾದರೂ ಇದು ಎಲ್ಲರಿಗೂ ಸುಲಭವಾಗಿ ದೊರೆಯಲಾರದೋ ಏನೋ ಎಂದು ಯಾರೂ ಯೋಚಿಸಬಾರದು. ಈ ದರ್ಶನವನ್ನು ಕುರಿತ ಗ್ರಂಥಗಳಲ್ಲಿ ಪ್ರತಿಪಾದಿಸಿರುವ ಅನೇಕ ಸೂಕ್ಷ್ಮವಿಚಾರಗಳು ಶಾಸ್ತ್ರಾಭ್ಯಾಸ ದಿಂದಾಗಿರುವ ಸಂಸ್ಕಾರವಿರುವವರಿಗೆ ಮಾತ್ರವೇ ಅಳವಡುವವೆಂಬುದು ನಿಜವಾದರೂ ಇದಕ್ಕೆ ಕೇಂದ್ರದಂತಿರುವ ಶುದ್ಧಚೈತನ್ಯಸ್ವರೂಪದ ಅನುಭವವು ಮಾತ್ರ ಸಾಮಾನ್ಯವಾದ ತಿಳಿವಳಿಕೆಯಿರುವ, ಪಂಡಿತರಲ್ಲದ, ಹುಡುಗರಿಗೂ ಸ್ತ್ರೀಯರಿಗೂ ಮಿಕ್ಕವರಿಗೂ ಎಲ್ಲರಿಗೂ ಸುಲಭವಾಗಿಯೇ ಸಿಕ್ಕುವಂತಿದೆಯೆಂಬುದೂ ಒಂದು ಈ ದರ್ಶನದಲ್ಲಿ ವಿಶೇಷವಾಗಿರುತ್ತದೆ. ಈ ಅನುಭವಕ್ಕೆ ಜಾತಿ, ಕುಲ, ಸಂಪತ್ತು, ವಿದ್ಯಾ, ವಯಸ್ಸು- ಮುಂತಾದವುಗಳು ಯಾವವೂ ಮುಖ್ಯ ಕಾರಣವಾಗಿರುವದಿಲ್ಲ; ಮತ್ತೇನೆಂದರೆ ದೇಹ, ಇಂದ್ರಿಯ, ಮನಸ್ಸು ಬುದ್ಧಿ, ಅಹಂಕಾರ - ಎಂಬಿವುಗಳಲ್ಲಿ ಅಭಿಮಾನವನ್ನು ತೊರೆದು ಇವುಗಳ ಸಾಕ್ಷಿಯಲ್ಲಿಯೇ ನಿಲುಗಡೆಯನ್ನು ಹೊಂದುವದಕ್ಕೆ ತಕ್ಕ ಅಂತ ರ್ಮುಖತ್ವ ವೊಂದೇ ಅದಕ್ಕೆ ಅಸಾಧಾರಣಕಾರಣವಾಗಿರುತ್ತದೆ. ಯಾವನಿಗೆ ಈ ಜನ್ಮದಲ್ಲಿಯಾಗಲಿ ಬೇರೊಂದು ಜನ್ಮದಲ್ಲಿಯಾಗಲಿ ತಾನು ಮಾಡಿದ ಸ್ವಕರ್ಮವನ್ನು ಪರಮೇಶ್ವರನಿಗೆ ಅರ್ಪಿಸಿ ಆತನ ಪ್ರಸಾದದಿಂದ ಇಂಥ ದೃಷ್ಟಿಯು ಹುಟ್ಟಿರುವದೋ ಅವನು ಯಾರೇ ಆಗಿರಲಿ, ಈ ಅದ್ವೈತತತ್ತ್ವವನ್ನು ಅಂಗೈನಲ್ಲಿಯಂತೆ ಅನುಭವಿಸುವದಕ್ಕೆ ತಕ್ಕವನೇ ಆಗುವನು; ಅವನೇ ಧನ್ಯನು, ಎಲ್ಲರಿಗೂ ಶಿವಂಕರನಾಗಿರುವದರಿಂದ ಅವನೇ ಮಾನ್ಯನು.

# ಅದ್ವೈತವಿಷಯದಲ್ಲಿ ಪ್ರಶ್ನೋತ್ತರಗಳು

ಅದ್ವೈತವು ಅಪರೋಕ್ಷಾನುಭವಗಮ್ಯವಾಗಿಯೂ ಧರ್ಮಕ್ಕೆ ನೆರವಾಗಿಯೂ ವಿಚಾರಪರರಾದ ಉತ್ತಮಾಧಿಕಾರಿಗಳಿಗೆ ಬಹು ಸುಲಭವಾಗಿ ದೊರಕುವದಾಗಿಯೂ ಇದ್ದರೂ ಈ ವಿಚಾರದಲ್ಲಿ ಸರಿಯಾದ ಪ್ರವೇಶವಿಲ್ಲದವರಿಗೆ ಇದರಲ್ಲಿ ಅನೇಕ ಸಂದೇಹ ಗಳು ತೋರಿಕೊಳ್ಳುವದು ಸ್ವಾಭಾವಿಕವಾಗಿದೆ. ನಾನು ಇಂಥ ಕೆಲವು ಸಂದೇಹಗಳನ್ನು ಪ್ರಶ್ನೋತ್ತರ ರೂಪದಲ್ಲಿ ಇಲ್ಲಿ ನಿರೂಪಿಸಿರುವೆನು.

1. ಪ್ರಶ್ನೆ - ಈಶ್ವರನು ಸ್ವಯಂಪ್ರಕಾಶನು, ಅದ್ವಿತೀಯನು, ನಿಸ್ಸಂಗನು - ಹೀಗೆಂಬುದು ನಿಮ್ಮ ಸಿದ್ಧಾಂತವು. ಅಂಥವನಿಗೆ ಮಾಯೆ ಬಂದದ್ದು ಹೇಗೆ? ಅಂಥವನಿಗೆ ಮಾಯೆ ಮುಸುಕುವದುಂಟೆ? ಹೀಗಿದ್ದರೂ ಈಶ್ವರನು ಬೇರೆ - ಎಂಬ ಜ್ಞಾನವುಂಟಾದದ್ದು ಹೇಗೆ?

ಉತ್ತರ - ಇದು ತರ್ಕದ ಬಲದಿಂದ ಮಾಡಿರುವ ಪ್ರಶ್ನೆ. ಆದರೆ ತರ್ಕವು ಅನುಭವದ ಮುಂದೆ ನಿಲ್ಲಲಾರದು. ಉದಾಹರಣೆಗೆ ನೋಡಿ - ದಾವಣಗೆರೆಯ ಪಂಡಿತರು ನಮ್ಮ ಜೊತೆಯಲ್ಲಿ ರೈಲಿನಲ್ಲಿ ಬರಲಿಲ್ಲ, ಅವರಲ್ಲಿ ಬೇರೆಯ ಸಾಧನವೂ ಇಲ್ಲ; ಆದ್ದರಿಂದ ಅವರು ಹರಿಹರಕ್ಕೆ ಬಂದಿಲ್ಲ- ಎಂದು ತರ್ಕದಿಂದ ಒಬ್ಬರು ಹೇಳಿದರೆಂದು ಇಟ್ಟುಕೊಳ್ಳಿ. ಆಗ ಪಂಡಿತರು ಎದುರಿಗೆ ಕುಳಿತಿರುವದನ್ನೇ ತೋರಿಸಿದರೆ ಆಮೇಲೂ ಅವರು ಬರಲಿಲ್ಲವೆಂದು ಸಾಧಿಸುವ ತರ್ಕವು ನಿಲ್ಲುತ್ತದೆಯೇ; ಇಲ್ಲ. ಹಾಗೆಯೇ ಆತ್ಮನು ಸ್ವಯಂಪ್ರಕಾಶನಾಗಿದ್ದರೂ ಅದ್ವಿತೀಯನಾಗಿದ್ದರೂ ಅವನನ್ನು ದೇಹಾದಿಗಳುಳ್ಳವನೆಂದೂ ಅನೇಕವಾಗಿರುವನೆಂದೂ ಜನರು ವ್ಯವಹರಿಸುತ್ತಿದ್ದಾರೆ - ಎಂಬುದು ಅನುಭವ. ಹೀಗಿದ್ದರೂ ಇಂಥ ಬೇದಜ್ಞಾನವೇ ಆಗಿರುವದಿಲ್ಲ - ಎಂದು ತರ್ಕದಿಂದ ಸಾಧಿಸುವದಕ್ಕೆ ಆದೀತೆ? ಎಂದಿಗೂ ಆಗಲಾರದು. ಇಂಥ ಸಂದರ್ಭಗಳಲ್ಲಿ ತರ್ಕದಲ್ಲಿಯೇ ದೋಷವಿರುತ್ತದೆ. ದೃಷ್ಟಾಂತದಲ್ಲಿ ಪಂಡಿತರು ಮ್ಯಾನೇಜರವರ ಮೋಟಾರಿನಲ್ಲಿ ಬಂದಿರುತ್ತಾರೆ; ಆದ್ದರಿಂದ ಅವರು ಹರಿಹರಕ್ಕೆ ಬಂದಿಲ್ಲವೆಂಬ ತರ್ಕವು ಅನುಭವವಿರುದ್ಧವಾಗಿದೆಯಾಗಿ ಅದನ್ನು ತಳ್ಳಿ ಹಾಕಬೇಕಾಗಿದೆ. ತರ್ಕಕ್ಕೆ ಪ್ರತಿ ತರ್ಕವಿದ್ದರೆ ಅಥವಾ ಸಂಶಯಾದಿಗಳು ಇದ್ದರೆ ಸಾಕು. ಅದು ಹಾರಿಹೋಗುತ್ತದೆ; ಹೀಗಿರುವಲ್ಲಿ ವಿರುದ್ಧಾನುಭವವೇ ಇದ್ದ ಮೇಲೆ ಹೇಳುವದೇನಿದೆ?

ಈಶ್ವರನಿಗೆ ಒಂದು ಆವರಣ ಬಂದಿದೆಯೆಂದಾಗಲಿ, ಅದರಿಂದಲೇ ಜೀವೇಶ್ವರರು ಬೇರೆಯಾಗಿದ್ದಾರೆಂದಾಗಲಿ, ಅದು ಹೋದ ಮೇಲೆ ಇಬ್ಬರೂ ಒಂದಾಗುತ್ತಾರೆಂದಾಗಲಿ ನಮ್ಮ ಸಿದ್ಧಾಂತವಲ್ಲ, ಆತ್ಮನು ಒಬ್ಬನೇ; ಆ ಒಬ್ಬ ಆತ್ಮನನ್ನೇ ಜನರು ಅನೇಕರೂಪದಿಂದ ವ್ಯವಹರಿಸುತ್ತಿದ್ದಾರೆ - ಎಂಬುದು ನಮ್ಮ ಸಿದ್ಧಾಂತವು. ಆಕಾಶವು ಒಂದೇ ಆದರೂ ಘಟಾಕಾಶ (ಗಡಿಗೆಯ ಪೊಳ್ಳು) ಮಠಾಕಾಶ (ಮಠದೊಳಗಿನ

ಬಯಲು) - ಎಂದು ಬೇರೆಬೇರೆಯಾಗಿ ವ್ಯವಹರಿಸುವದಿಲ್ಲವೆ? ಅದರಂತೆಯೇ ನಾನು ಬೇರೆ, ಈಶ್ವರನು ಬೇರೆ - ಎಂಬ ವ್ಯವಹಾರವನ್ನೂ ತಿಳಿಯಬೇಕು.

**2. ಪ್ರಶ್ನೆ -** ಆತ್ಮನು ಒಬ್ಬನೇ ಆದರೆ ಇಬ್ಬರು ಆತ್ಮರೆಂಬ ವ್ಯವಹಾರವು ತಾನೇ ಹೇಗೆ ಬಂತು? ದೇಹದೃಷ್ಟಿ ತಾನೆ ಹೇಗೆ ಬಂತು?

**ಉತ್ತರ -** ತರ್ಕದಿಂದ ನೋಡಿದರೆ ಈ ಆಕ್ಷೇಪವೇ ತೋರುವದು ನಿಜ. ಆದರೆ ವಿವೇಕವಿಲ್ಲದವರಿಗೆ ಇಂಥ ವ್ಯವಹಾರವಾಗುವದು ಸಹಜವಾಗಿದೆ. ಅನುಭವ ದಿಂದ ನೋಡಿದಾಗ ಎರಡನೆಯ ಆತ್ಮನನ್ನು ಒಪ್ಪುವದು ಸರ್ವಥಾ ಸಾಧ್ಯವಿಲ್ಲ.

**3. ಪ್ರಶ್ನೆ -** ಎರಡನೆಯವನಾದ ಈಶ್ವರನೂ ಸತ್ಯನೇ ಎಂದು ನಾವು ಹೇಳುತ್ತೇವೆ. ಅದೇಕೆ ಆಗದು?

**ಉತ್ತರ -** ಹೇಳಬಹುದು. ಆದರೆ ಹೇಳಿದ ಮಾತ್ರಕ್ಕೆ ವಸ್ತುಸಿದ್ಧಿಯಾಗುವದೆ? ನಮ್ಮ ಆತ್ಮನಿಗಿಂತ ಬೇರೆಯವನಾದ ಆ ಈಶ್ವರನೆಂಬುವನು ಅಜ್ಞಾತನಾದರೆ - ಯಾರ ಜ್ಞಾನಕ್ಕೂ ವಿಷಯನಲ್ಲದೆ ಹೋದರೆ - ಅವನೇ ಇಲ್ಲವೆಂದಾಗು ವದು. ಜ್ಞಾತನಾದರೆ, ಎಂದರೆ ಜ್ಞಾನಕ್ಕೆ ವಿಷಯನಾದರೆ, ಅವನು ಜಡ, ವಿಕಾರಿ, ಅನಿತ್ಯ ಎಂದಾಗುತ್ತದೆ.

**4. ಪ್ರಶ್ನೆ -** ಹಾಗಾದರೆ ನಾವೆಲ್ಲರೂ ದೇವರೆಂದು ಒಪ್ಪಿರುವ ರಾಮಕೃಷ್ಣಾದಿಗಳೂ ಜಡರೆ? ಅವರು ವಿಕಾರಿಗಳೆ ಅನಿತ್ಯರೆ?

**ಉತ್ತರ -** ಯಾರ ಮತದಲ್ಲಿ ರಾಮಕೃಷ್ಣಾದಿಗಳು ಆತ್ಮನಿಗಿಂತ ಬೇರೆಯಾಗಿರುವರೋ ಅವರ ಪಕ್ಷದಲ್ಲಿ ಅವರೆಲ್ಲರೂ ಜ್ಞಾನಕ್ಕೆ ವಿಷಯರಾಗುವದರಿಂದ ಜಡರೂ ವಿಕಾರಿಗಳೂ ಅನಿತ್ಯರೂ ಆಗಲೇಬೇಕಾಗುತ್ತದೆ. ಇದನ್ನು ಯಾರು ತಾನೆ ತಪ್ಪಿಸಿಕೊಳ್ಳುವದಕ್ಕೆ ಆದೀತು?ನ್ಯಾಯದಿಂದ ಬಂದದ್ದನ್ನು ಎಲ್ಲರೂ ಒಪ್ಪಲೇ ಬೇಕು. ಆದಕಾರಣ ದೇವರಲ್ಲಿ ದೇವತ್ವವೂ ಮಹತ್ತ್ವವೂ ಉಳಿಯಬೇಕೆ ನ್ನುವವರು ಆತನನ್ನು ಆತ್ಮನಿಗಿಂತ ಭಿನ್ನನನ್ನಾಗಿ ಎಣಿಸಬಾರದು. ನಮ್ಮ ಸಿದ್ಧಾಂತದಲ್ಲಿ ರಾಮಕೃಷ್ಣಾದಿಗಳೆಲ್ಲ ಆತ್ಮಸ್ವರೂಪರೇ ಆಗಿರುವದರಿಂದ ಪ್ರಶ್ನೆ ಯಲ್ಲಿ ಹೇಳಿರುವ ದೋಷವಿರುವದಿಲ್ಲ. ಆತ್ಮನಲ್ಲಿ ಭೇದವಿದೆಯೆಂಬುದೂ

ಯುಕ್ತವಲ್ಲ; ಏಕೆಂದರೆ ಭೇದವಿದ್ದರೆ, ಎಂದರೆ ಆತ್ಮನಲ್ಲಿ ಸಂಖ್ಯೆಯಿದ್ದರೆ, ಆ ಸಂಖ್ಯೆಯು ಕೂಡ ವಿಷಯವೂ ಜಡವೂ ಆಗಿರುತ್ತದೆಯಾದ್ದರಿಂದ ಆತ್ಮನಲ್ಲಿಯೂ ಈ ದೋಷವು ಬರುತ್ತದೆ. ಆಗ ಆತ್ಮನು ಆತ್ಮನಲ್ಲದೆ ಹೋಗುತ್ತಾನೆ.

**5. ಪ್ರಶ್ನೆ** - ಇದು ಹೋಗಲಿ. ಪ್ರತ್ಯಕ್ಷವಾಗಿ ನೀವೂ ನಾವೂ ಎಲ್ಲರೂ ಅನುಭವಿಸುವ ಜಗತ್ತೂ ಇಲ್ಲವೆ?

**ಉತ್ತರ** - ಇದೆಯೆಂದರೇನು, ಅನುಭವಿಸುವದೆಂದರೇನು - ಎಂಬುದನ್ನು ತಿಳಿದುಕೊಂಡಮೇಲಲ್ಲವೇ, ಈ ಪ್ರಶ್ನೆಗೆ ಉತ್ತರ ದೊರೆಯುವದು? ಇಂದ್ರಿಯಾನುಭವವೇ ಅನುಭವವೆಂದರೆ ಅದು ಯಾವಾಗಲೂ ನಂಬತಕ್ಕದ್ದಾಗಿರುವದಿಲ್ಲ. ಸ್ಕೂಲಿನಲ್ಲಿ ಹುಡುಗರು ಆಡುವ ಚೀಲದ ಆಟದಲ್ಲಿ* ಬಣ್ಣಗಳ ಚೀಲಗಳೊಳಗಿಂದ ಹೊರಕ್ಕೆ ಬಂದರೆ ಬಗೆಬಗೆಯ ಬಣ್ಣದವರಾಗಿ ಕಾಣುತ್ತಾರೆ. ಆದರೆ ನಿಜವಾಗಿಯೂ ಹುಡುಗರೂ ಆಯಾ ಬಣ್ಣದವರೇ ಆಗಿರುತ್ತಾರೆಯೇನು? ಇಲ್ಲ. ಹಗ್ಗವನ್ನು ನೋಡಿ ಹಾವೆಂದೂ ಆ ಕಾಲಕ್ಕೆ ಆ ಹಾವೇ ಸತ್ಯವಾದದ್ದೆಂದೂ ಜನರು ತಿಳಿಯುವದುಂಟಷ್ಟೆ. ಅಲ್ಲಿ ನಿಜವಾಗಿಯೂ ಹಾವಿರುತ್ತದೆಯೇ? ಇಲ್ಲ. ಆದ್ದರಿಂದ ಇಂದ್ರಿಯಗಳ ಮೂಲಕ ಆಗುವ ಅನುಭವವು ಸತ್ಯವೆಂದು ಹಠಹಿಡಿದರೆ ಮೋಸ ಹೋಗುತ್ತೇವೆ. ಸೈನ್ಸಿನವರು ಕೂಡ ಯಾವ ವಸ್ತುವನ್ನೂ ಇಂದ್ರಿಯದಿಂದ ಪೂರ್ಣವಾಗಿ ನೋಡಲಾಗುವದಿಲ್ಲವೆಂದೂ ವಸ್ತುವಿನ ಒಂದು ಭಾಗವನ್ನು ಮಾತ್ರ ನೋಡಿ ಪೂರ್ಣವಾದ ಅನುಭವವಾದಂತೆ ಜನರು ವ್ಯವಹರಿಸುತ್ತಿದಾರೆಂದೂ ಹೇಳುತ್ತಿದಾರೆ. ಆದ್ದರಿಂದ ಜಗತ್ತನ್ನು ಇಂದ್ರಿಯಗಳಿಂದ ಅನುಭವಿಸುತ್ತಿದ್ದೇವೆಂಬುದರಿಂದಲೇ ಅದು ಸತ್ಯವೆನ್ನುವದು ಅಪೂರ್ಣ ಪ್ರಜ್ಞರ ಮಾತು.

**6. ಪ್ರಶ್ನೆ** - ಇಂದ್ರಿಯಗಳ ಅನುಭವಕ್ಕಿಂತಲೂ ಬೇರೆಯಾದ ಅನುಭವವೊಂದುಂಟೆ? ಹಾಗಾದರೆ ಪ್ರಮಾಣಗಳನ್ನೆಲ್ಲ ಆಚೆಗೆ ಕಿತ್ತೊಗೆಯಬೇಕೇನು?

---

* ಅಡಚಣೆಗಳ ಜೂಜು (Obstacle Race) ಎಂಬ ಆಟದಲ್ಲಿ ಹುಡುಗರು ದಾರಿಯಲ್ಲಿಟ್ಟಿರುವ ಚೀಲಗಳನ್ನು ನುಸುಳಿಕೊಂಡು ಓಡಿಹೋಗಿ ನಿರ್ದಿಷ್ಟ ಸ್ಥಳವನ್ನು ಸೇರಬೇಕಾಗಿರುತ್ತದೆ; ಆ ಚೀಲಗಳಲ್ಲಿ ಬಗೆಬಗೆಯ ಬಣ್ಣಗಳನ್ನಿಟ್ಟಿರುತ್ತಾರೆ.

**ಉತ್ತರ -** ಪ್ರಮಾಣಗಳನ್ನು ಕಿತ್ತೊಗೆಯಬೇಕಾದ ಸಂದರ್ಭವೇನೂ ಇದರಲ್ಲಿಲ್ಲ. ವ್ಯವಹಾರದಲ್ಲಿ ಪ್ರಮಾಣಗಳಿಗೆ ಇರುವ ಬೆಲೆ ಇದ್ದೇ ಇದೆ. ಪ್ರಮಾಣ ಪ್ರಮೇಯಗಳ ಒಟ್ಟೇ ಅಲ್ಲದೆ ಜಗತ್ತೆನ್ನುವದು? ಇಂಥ ಒಟ್ಟು ಜಗತ್ತಿನ ತತ್ತ್ವವನ್ನು ಅನುಭವಾನುಸಾರವಾಗಿ ನಿರ್ಣಯಿಸುವದನ್ನು ಬಿಟ್ಟು ಈ ಸಂದರ್ಭದಲ್ಲಿಯೂ ಪ್ರಮಾಣಗಳ ಕಾಲನ್ನೇ ಹಿಡಿಯುವದಕ್ಕೆ ಹೋದರೆ ನಾವು ಕೊಡುವ ಸಾಕ್ಷ್ಯವು ಓತಿಕೇತಗೆ ಬೇಲಿಯ ಸಾಕ್ಷಿಯೆಂದಂತೆ ಅನ್ಯೋನ್ಯಾಶ್ರಯಾದಿದೋಷಗಳಿಗೆ ಈಡಾಗುವದು. ಇದರಿಂದ ಜಗತ್ತಿಗೆ ಸತ್ಯತ್ವವೇನೂ ಸಿದ್ಧಿಸುವದಿಲ್ಲ.

**7. ಪ್ರಶ್ನೆ -** ಪೂರ್ಣ ಜಗತ್ತಿನ ಅನುಭವ ಯಾರಿಗಿದೆ? ಸತ್ಯವೆಂದರೆ ಹೇಗಿರಬೇಕು?

**ಉತ್ತರ-** ಯಾವ ಆತ್ಮನು **'ಭೂತಾದಿ ವಿಷ್ಣುರ್ಭುವನಾನಿ ವಿಷ್ಣುಃ'** ಎಂಬಂತೆ ತಾನೇ ಜಗತ್ತಾಗಿರುವನೋ ಜಗತ್ತನ್ನು ವಿಷಯಮಾಡಿಕೊಳ್ಳುತ್ತಿರುವನೋ, ಆ ಸ್ವರೂಪದಲ್ಲಿ ನಿಂತಾತನಿಗೆ ಮಾತ್ರ ಪೂರ್ಣಜಗತ್ತಿನ ಅನುಭವವಿರುತ್ತದೆ. ಆಗ ತನ್ನನ್ನು ಬಿಟ್ಟು ಜಗತ್ತೆಂಬುದು ಇಲ್ಲವೇ ಇಲ್ಲವೆಂದು ಸಿದ್ಧಿಸುವದು. ಯಾವದು ಯಾವ ಕಾಲದಲ್ಲಿಯೂ ಯಾವ ದೇಶದಲ್ಲಿಯೂ ಯಾವ ದೊಂದು ಕಾರಣದಿಂದಲೂ ಇಲ್ಲವೆಂದು ಹೇಳಿಸಿಕೊಳ್ಳದೆ ಇರುವದೋ ಅದೇ ಪರಮಾರ್ಥವಾಗಿ ಸತ್ಯವಾಗಿರುವದು. ಕನಸಿನಲ್ಲಿ ತೋರುವ ಪ್ರಪಂಚವು ಇಂದ್ರಿಯಾದಿಗಳಿಗೆ ಗೋಚರವಾಗಿಯೂ ಆಯಾಪ್ರಯೋಜನ ವನ್ನುಂಟುಮಾಡುತ್ತಿರುವದಾಗಿಯೂ ಎಂದಿಗೂ ಬಾಧಿತವಾಗಿರುವದಿಲ್ಲ ವೆನ್ನುವ ಸ್ವಭಾವವುಳ್ಳದ್ದಾಗಿಯೂ ಇರುವದೆಂಬ ಭಾವನೆಯನ್ನುಂಟು ಮಾಡುತ್ತಾ ಆ ಕಾಲಕ್ಕೆ ಸತ್ಯವೆಂದೇ ತೋರುತ್ತಿದ್ದರೂ ಅಲ್ಲಿರುವ ಎಲ್ಲರೂ ಅದನ್ನು ಅನುಭವಿಸುತ್ತಿದ್ದಾರೆಂಬ ದೃಢವಿಶ್ವಾಸವು ನಮಗೆ ಆಗ ಇದ್ದರೂ ಎಚ್ಚರವಾದೊಡನೆಯೇ ಅದೆಲ್ಲ ಬರಿಯ ತೋರಿಕೆಯೇ ಎಂದು ನಿಶ್ಚಯ ವಾಗಿಬಿಡುತ್ತದೆಯಲ್ಲವೆ? ಎಚ್ಚರದಲ್ಲಿ ಆ ಕಾಲಕ್ಕೆ ಮಾತ್ರ ಸತ್ಯವೆಂದೂ ಎಲ್ಲರೂ ಅನುಭವಿಸುತ್ತಾರೆಂದೂ ತೋರುವ ಪ್ರಪಂಚದ ಯೋಗ್ಯತೆಯೂ ಇಷ್ಟೇ. ಇದು ಎಂದಿಗೂ ಪರಮಾರ್ಥವಾಗಿ ಸತ್ಯವಾಗಲಾರದು.

**8. ಪ್ರಶ್ನೆ -** ಸ್ವಪ್ನವು ತಾನೆ ಸುಳ್ಳೆಂದು ಹೇಳುವದಕ್ಕಾದೀತೆ? ಅದು ಜಾಗ್ರದ್ವಾಸನೆ ಯಿಂದಾಗಿರುವದೆಂದೂ ನಿಜವಾಗಿಯೂ ಆಗುವದೆಂದೂ ಜನರೆಲ್ಲರೂ

ನಂಬಿರುತ್ತಾರೆ. ಸ್ವಪ್ನವು ಆ ಕಾಲದಲ್ಲಿ ಎಚ್ಚರದಂತೆ ತೋರುವದು ಭ್ರಾಂತಿಯಾಗಲಿ; ಸ್ವಪ್ನವೆಂಬ ಅವಸ್ಥೆಯೇ ಇಲ್ಲವೆಂದು ಹೇಗೆತಾನೆ ಹೇಳಲಾದೀತು? ಹೇಗೇ ಆಗಲಿ, ಬಾಧಿತವಾಗದೆ ಇರುವ ಎಚ್ಚರವು ಕನಸಿಗೆ ಸಮಾನವಾದದ್ದೆಂದಾದೀತೆ?

ಉತ್ತರ - ಸ್ವಪ್ನವಾಗುವದು ಸುಳ್ಳೆಂದು ಯಾರು ಹೇಳಿದರು? ಸ್ವಪ್ನವು ಎಚ್ಚರದಂತೆಯೇ ಕಾಣುವದು; ಅದರಲ್ಲಿ ಕಾಲದೇಶಾದಿಗಳೂ ತೋರಿಕೊಳ್ಳುವವು; ಇದು ಪರಮಾರ್ಥಸತ್ಯವೆಂಬ ಬುದ್ಧಿಯೂ ಅಲ್ಲಿ ತೋರುವ ಜಗತ್ತಿನಲ್ಲಿ ಹುಟ್ಟಿಯೇ ಹುಟ್ಟುವದು. ಹೇಗಿದ್ದರೂ 'ಇದೆಲ್ಲ ಕನಸೇ, ನಿಜವಲ್ಲ, ಅಲ್ಲಿ ನಿಜವಾಗಿಯೂ ನನಗೆ ರಾಮರಾಯರು ಸಾಲಕೊಡಲಿಲ್ಲ' ಎಂದು ಮುಂತಾಗಿ ಎಚ್ಚರವಾದ ಕೂಡಲೆ ಎಲ್ಲರಿಗೂ ನಿಶ್ಚಯವಾಗುತ್ತದೆ. 'ನಿನ್ನೆಯ ಕನಸಿನಲ್ಲಿ ನಿನಗೆ ನಾನು ಸಾಲಕೊಟ್ಟಿದ್ದೆನಲ್ಲ, ಅದನ್ನು ತಿರುಗಿ ಕೊಡು' ಎಂದು ಯಾರೂ ಕೇಳುವದಿಲ್ಲ; ಕೇಳಿದರೆ ನಗೆಗೀಡಾಗುತ್ತಾರೆ. ಕನಸನ್ನು ಎಚ್ಚರವೆಂದು ಭಾವಿಸುವದು ಭ್ರಾಂತಿಯೆಂದು ಈಗ ನಾವು ಒಪ್ಪಿಕೊಂಡರೂ ಕನಸಿನಲ್ಲಿ 'ಇದು ಎಚ್ಚರವಲ್ಲ' ಎಂಬ ಬುದ್ಧಿಯು ಎಂದಿಗೂ ಉತ್ಪನ್ನವಾಗುವದಿಲ್ಲ, ಕನಸಿನೊಳಗೆ ಮತ್ತೊಂದು ಕನಸಾಗುವದೂ ಉಂಟು. 'ಇಂಥ ಕನಸನ್ನು ಕಂಡು ನಾನು ಎಚ್ಚೆತ್ತೆನು' ಎಂಬ ಬುದ್ಧಿಯು ಆಗ ಉತ್ಪನ್ನವಾದರೂ ಎಚ್ಚರದಂತೆ ತೋರುವ ಆ ಕನಸು ನಿಜವಾಗಿ ಎಚ್ಚರವೆಂದಾಗಲಿ ಅದರ ಹಿಂದಿನ ಕನಸು ಅದರ ವಾಸನೆಯಿಂದ ಆಯಿತೆಂದಾಗಲಿ ಸಿದ್ಧವಾಗುವದಿಲ್ಲ, ಎಚ್ಚರವಾಗಿ ತೋರುವ ಆ ಕನಸು ಅಬಾಧಿತವಾಗಿ ಹಾಗೆಯೇ ಇದ್ದು ಕೊಂಡಿರುವದೆಂದೂ ಸಿದ್ಧವಾಗುವದಿಲ್ಲ, ಅಂತೂ ಈ ವಿಷಯದಲ್ಲಿ ಕನಸಿಗಿಂತ ಯಾವ ಹೆಚ್ಚಿಗೆಯ ಸತ್ಯತ್ವವೂ ಎಚ್ಚರಕ್ಕೆ ಬಂದಂತಾಗುವದಿಲ್ಲ, ಇಷ್ಟನ್ನರಿತೂ ಖಂಡಿತವಾಗಿ ಹೇಳಬಹುದಾಗಿರುತ್ತದೆ.

9. ಪ್ರಶ್ನೆ - ಹೆಚ್ಚಿಗೆಯ ಸತ್ಯತ್ವವು ಬಾರದೆ ಇದ್ದರೆ ಹೋಗಲಿ, ಕನಸೂ ಎಚ್ಚರವೂ ಎರಡೂ ಸತ್ಯವೆಂದೇ ಏರ್ಪಡುವದಷ್ಟೆ?

ಉತ್ತರ - ಸತ್ಯವೆಂದರೇನೆಂಬುದನ್ನು ನಾನು ಮೊದಲೇ ಹೇಳಿರುತ್ತೇನೆ. ಕನಸು ಎಚ್ಚರದಲ್ಲಿಲ್ಲ, ಎಚ್ಚರವು ಕನಸಿನಲ್ಲಿಲ್ಲ; ಈ ಅವಸ್ಥೆಗಳ ಪ್ರಪಂಚಗಳು ಅಲ್ಲಲ್ಲಿಯೇ

ತೋರಿಹಾರುತ್ತಿರುವವು. ಹೀಗಿರುವಲ್ಲಿ ಅವು ಪರಮಾರ್ಥವಾಗಿ ಸತ್ಯವಾದಾವೆ?

**10. ಪ್ರಶ್ನೆ -** ಅಷ್ಟಷ್ಟು ಮಟ್ಟಿಗಾದರೂ ಈ ಜಗತ್ತುಗಳು ಸತ್ಯವಷ್ಟೆ? ಸರ್ವವೂ ಶೂನ್ಯವೆನ್ನುವ ಅದ್ವೈತಿಗಳನ್ನು ಬಿಟ್ಟರೆ ಮಿಕ್ಕ ಯಾರಿಗೆ ತಾನೆ ಇವುಗಳನ್ನು ಶೂನ್ಯವೆಂದು ಹೇಳುವದಕ್ಕೆ ಎದೆ ಬರುವದು? ಎಲ್ಲವೂ ಶೂನ್ಯವಾದರೆ ಆಗ ಉಳಿಯುವ ಪುರುಷಾರ್ಥವಾದರೂ ಯಾವದು?

**ಉತ್ತರ -** ಜಗತ್ತು ಶೂನ್ಯವೆಂದರೆ ಅದು ತೋರುವದಿಲ್ಲವೆಂದೇನೂ ಅರ್ಥವಲ್ಲ! ಆದ್ದರಿಂದ ಅಂಜಬೇಡಿ. ನಿಜವಾಗಿ ನೋಡಿದರೆ ಯಾವಾಗಲೂ ತೋರಿಕೊಳ್ಳುವದಕ್ಕೆ ಕೂಡ ಜಗತ್ತಿಗೆ ಸಾಮರ್ಥ್ಯವಿಲ್ಲ. ಉದಾಹರಣೆಗೆ ಸುಷುಪ್ತಿಯನ್ನು ನೋಡಿ; ಅಲ್ಲಿ ಜಗತ್ತು ನಿಜವಾಗಿಯೂ ಶೂನ್ಯವಾಗಿಯೇ ಇರುತ್ತದೆ. ಹೀಗಿದ್ದರೂ ಅಲ್ಲಿ ನಿಜವಾಗಿ ಸರ್ವವೂ ಶೂನ್ಯವಾಗುವದಿಲ್ಲ; ಒಂದು ವೇಳೆ ಸರ್ವವನ್ನೂ ಶೂನ್ಯವೆಂದರೂ ಅದರ ಶೂನ್ಯತ್ವವನ್ನನುಭವಿಸುವ ಆತ್ಮನನ್ನು ಇಲ್ಲವೆನ್ನುವದಕ್ಕೆ ಯಾರಿಂದಲೂ ಆಗಲಾರದು. ಜಗತ್ತು ಸತ್ಯವಲ್ಲವೆಂದರೆ ತೋರುವ ಜಗತ್ತಿಗೆ ಆತ್ಮನಂತೆ ಪರಮಾರ್ಥವಾದ ಸತ್ಯತ್ವವಿಲ್ಲವೆಂದೇ ನಮ್ಮ ಅಭಿಪ್ರಾಯ. ಮೇಲೆ ಹೇಳಿದಂತೆ ಜಗತ್ತು ಒಂದಾ ನೊಂದು ಅವಸ್ಥೆಯಲ್ಲಿ ಮಾತ್ರವೇ ತೋರಿ ಆಮೇಲೆ ಇಲ್ಲವಾಗುವದು. ಆತ್ಮನು ಮಾತ್ರ ಹೀಗೆ ಯಾವದಾದರೊಂದು ಕಾಲದಲ್ಲಿ ಮಾತ್ರ ಸತ್ಯವೆಂದು ತೋರಿ ಆಮೇಲೆ ಇಲ್ಲವಾಗುವದಿಲ್ಲ. ಆತ್ಮನೆಂದರೆ ನಮ್ಮಗಳ ಸ್ವರೂಪವೇ ಆಗಿರುವದರಿಂದ ಅವನು ಇಲ್ಲವೆಂದು ತೋರಿಸುವದಕ್ಕೆ ಯಾರಿಂದಲೂ ಆಗಲಾರದು.

**11. ಪ್ರಶ್ನೆ -** ಎಲ್ಲಾ ತತ್ತ್ವಗಳನ್ನೂ ಅನುಭವದಿಂದಲೇ ತಿಳಿಯುವದಕ್ಕೆ ಸಾಧ್ಯವೆ? ಅನುಭವಕ್ಕೆ ವಿಷಯವಲ್ಲದ ತತ್ತ್ವಗಳು ಎಷ್ಟೋ ಇವೆಯಲ್ಲವೆ?

**ಉತ್ತರ -** ಈಗ ನಾವು ಮಾತನಾಡುತ್ತಿರುವದು ಬೇರೆಯ ತತ್ತ್ವಗಳ ವಿಚಾರವಲ್ಲ, ಆತ್ಮಸ್ವರೂಪದ ವಿಚಾರ ಆತ್ಮಸ್ವರೂಪವೂ ಅನುಭವಕ್ಕೆ ಅತೀತವಾದರೆ ವಾಕ್ಯದಿಂದ ತಾನೆ ಅದನ್ನು ಹೇಗೆ ಸಿದ್ಧಪಡಿಸುವದಕ್ಕೆ ಆದೀತು? ಇಂಥ ಸಂದರ್ಭದಲ್ಲಿ ಬರಿಯ ವಾಕ್ಯವನ್ನೇ ಇಟ್ಟುಕೊಳ್ಳುವದಾದರೆ ಯಾರ ಮತವು ಸರಿಯೆಂಬುದನ್ನು ಹೇಗೆ ನಿರ್ಣಯಿಸಬೇಕು? ವಾಕ್ಯಪ್ರಮಾಣ

ದಿಂದಲೇ ಈಶ್ವರನನ್ನು ನಂಬುವ ಅವೈದಿಕಮತದವರ ಮಾತನ್ನು ನಾವು ಒಪ್ಪದೆ ಇರುವದಕ್ಕಾಗಲಿ, ನಮ್ಮ ವೇದವು ಹೇಳುವಂಥ ಈಶ್ವರನನ್ನೇ ಅವರೂ ನಂಬಬೇಕೆಂದು ನಿರ್ಬಂಧಪಡಿಸುವದಕ್ಕಾಗಲಿ ಸಾಧ್ಯವೆ? ನಾವು ಇದನ್ನು ಸಾವಧಾನವಾಗಿ ಆಲೋಚಿಸಬೇಕು. ಇಲ್ಲಿ ಪರಮಾರ್ಥವೇನೆಂದರೆ ಅದ್ವೈತಿಗಳು ಹೇಳುವ ಆತ್ಮನು ಅನುಭವಸ್ವರೂಪನೇ ಆಗಿರುತ್ತಾನೆ. ಈ ಆತ್ಮನ ಜ್ಞಾನವನ್ನು ಮಾಡಿಕೊಳ್ಳುವದಕ್ಕೆ ಎಲ್ಲರಿಗೂ ಸಾಧ್ಯ, ಎಲ್ಲ ಮತದವರಿಗೂ ಇದರಲ್ಲಿ ಸಮಾನವಾದ ಹಕ್ಕುಂಟು. ಈ ಅದ್ವೈತಾತ್ಮ ಜ್ಞಾನದಿಂದ ಕಾಮಕ್ರೋಧಗಳು ತೊಲಗಿ ಶಾಂತಿಸುಖಗಳು ದೊರೆಯುತ್ತವೆ. ಆದ್ದರಿಂದ ನಮ್ಮೆಲ್ಲರಿಗೂ ಈ ಅದ್ವೈತಾತ್ಮಜ್ಞಾನವನ್ನು ಪಡೆಯುವದರಲ್ಲಿ ಆದರವುಂಟಾಗಲಿ ಎಂಬುದೇ ನನ್ನ ಹಾರೈಕೆ.

12.ಪ್ರಶ್ನೆ - ಕಾಮಕ್ರೋಧಗಳು ತೊಲಗುವದೆಂದರೇನು? ಹಾಗಾದರೆ ಅವುಗಳು ನಿಮ್ಮ ಮತದಲ್ಲಿ ಸತ್ಯವೆ? ಜಗತ್ತೇ ಇಲ್ಲದಿರುವಾಗ ಶಾಂತಿ ಯಾರಿಗೆ?

ಉತ್ತರ - ಸತ್ಯವೆಂದರೇನೆಂಬುದನ್ನು ನೆನಪಿನಲ್ಲಿಟ್ಟರೆ ಈ ಪ್ರಶ್ನೆ ಹುಟ್ಟುವದಿಲ್ಲ. ಜಗತ್ತೂ ಜನರೂ ಕಾಮಕ್ರೋಧಗಳೂ ಇರುವವೆಂಬ ನಂಬಿಕೆಯು ನಮಗೆಲ್ಲ ಇದೆ; ಪರಮಾರ್ಥದೃಷ್ಟಿಯಿಂದ ನೋಡಿದಾಗ ಇವುಗಳು ತಮ್ಮ ತೋರಿಕೆಯ ರೂಪದಿಂದ ಅಪರಮಾರ್ಥವೆಂದೂ ಪರಮಾತ್ಮನ ರೂಪದಿಂದಲೇ ಇವೂ ಸತ್ಯವಾಗಿರುವವೆಂದೂ ಏರ್ಪಡುತ್ತದೆ. ಹೀಗೆ ಪರಮಾರ್ಥದಲ್ಲಿ ನಾವೂ ನೀವೂ ಸರ್ವವೂ ಬ್ರಹ್ಮವೇ ಆಗಿರುವೆವೆಂಬ ನಂಬಿಕೆ ಬಂದರೂ ಸಾಕು, ಮನಸ್ಸಿನಲ್ಲಿ ರಾಗದ್ವೇಷಾದಿಗಳು ತೊಲಗಿ ಶಾಂತಿಯಾಗುವವು. ಇನ್ನು ಜ್ಞಾನವೇ ಆದಾಗ ಅಶಾಂತಿಯ ಹುಟ್ಟೇ ಇರುವದಿಲ್ಲವೆಂದು ಹೇಳಬೇಕು?

13. ಪ್ರಶ್ನೆ - ಸಕಲ ಶ್ರುತಿಸ್ಮೃತಿಪುರಾಣಗಳೂ ಜೀವೇಶ್ವರಭೇದವನ್ನು ಸಮರ್ಥಿಸುತ್ತವೆ. ಮುಕ್ತಿಯಲ್ಲಿ ಕೂಡ ಜೀವನು ಈಶ್ವರನಿಗಿಂತ ಬೇರೆಯಾಗಿದ್ದು ಕೊಂಡು, ಆನಂದವನ್ನನುಭವಿಸುವನೆಂದು ಸಾರುತ್ತಿವೆ. ಇದನ್ನು ನೋಡಿದರೆ ಜೀವೇಶ್ವರೈಕ್ಯವು ಶಾಸ್ತ್ರಪ್ರಮಾಣವಿರುದ್ಧವೆಂದು ಕಾಣುವದಿಲ್ಲವೆ?

ಉತ್ತರ - ಶ್ರುತಿಸ್ಮೃತ್ಯಾದಿಗಳಲ್ಲಿ ಜೀವೇಶ್ವರೈಕ್ಯವನ್ನು ಹೇಳಿದೆಯೋ ಭೇದವನ್ನು ಹೇಳಿದೆಯೋ ಎಂಬುದು ಚರ್ಚೆಗೆ ಅವಕಾಶವನ್ನು ಕೊಡುವ ವಿಷಯ.

ಬೇರೆಬೇರೆ ಭಾಷ್ಯಕಾರರು ಬೇರೆಬೇರೆಯ ಬಗೆಯಲ್ಲಿ ಅವುಗಳಿಗೆ ಅರ್ಥ ಮಾಡಿರುತ್ತಾರೆ. ಅವರಲ್ಲಿ ಒಬ್ಬರ ಅರ್ಥವನ್ನು ಒಬ್ಬರು ಒಪ್ಪುವದಿಲ್ಲ. ಆದ್ದರಿಂದಲೇ ನಾನು ಈವರೆಗೂ ಶಾಸ್ತ್ರವಚನಗಳ ಗೋಜಿಗೆ ಹೋಗಲಿಲ್ಲ. ನಿಮಗೆ ವಚನಗಳು ಅವಶ್ಯವಿದ್ದರೆ **ಅಹಂ ಬ್ರಹ್ಮಾಸ್ಮಿ (ಬೃ); ತತ್ತ್ವಮಸಿ, ಸರ್ವಂ ಖಲ್ವಿದಂ ಬ್ರಹ್ಮ (ಛಾಂ); ಬ್ರಹ್ಮೈವೇದಂ ಸರ್ವಮ್ - (ಮುಂ) ಬ್ರಹ್ಮ ವೇದ ಬ್ರಹ್ಮೈವ ಭವತಿ (ಮುಂ)** - ಮುಂತಾದ ಶ್ರುತಿಗಳನ್ನೂ **ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು (ಗೀ) ಆತ್ಮೈವ ದೇವತಾಃ ಸರ್ವಾಃ (ಮನು),** - ಮುಂತಾದ ಸ್ಮೃತಿಗಳನ್ನೂ **ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ । ಯದನುಗ್ರಹತಃ ಸನ್ತಿ ನ ಸನ್ತಿ ಯದಪೇಕ್ಷಯಾ (ಭಾಗವತ), ಸೋऽಹಂ ಸ ಚ ತ್ವಂ ಸ ಚ ಸರ್ವಮೇತದಾತ್ಮ ಸ್ವರೂಪಂ ತ್ಯಜ ಭೇದಮೋಹಮ್ (ವಿಷ್ಣು), ಅಹಂ ಬ್ರಹ್ಮ ಪರಂಧಾಮ ಬ್ರಹ್ಮಾಹಂ ಪರಮಂ ಪದಮ್ (ಭಾಗವತ)** - ಮುಂತಾದ ಪುರಾಣಗಳನ್ನೂ ಉದಾಹರಿಸುವದಕ್ಕೆ ಸಿದ್ಧವಾಗಿರುತ್ತೇನೆ. ಭೇದವನ್ನು ನಿಂದಿಸಿರುವ ವಾಕ್ಯಗಳೂ ಇದ್ದೇ ಇವೆ. ಆದರೆ ಈ ವಚನಗಳಿಗೆ ನೀವು ಬೇರೆಯ ಅರ್ಥವನ್ನೇ ಕಲ್ಪಿಸಿದರೆ, ಆಗ ನನ್ನ ಯತ್ನವಿಲ್ಲ. ವಾಕ್ಯಗಳಿಗೆ ಅರ್ಥವನ್ನು ಮಾಡುವಾಗ ಅನುಭವಕ್ಕೆ ವಿರುದ್ಧ ವಾಗಬಾರದೆಂಬ ನಿಯಮವನ್ನು ಎಲ್ಲರೂ ಹಿಡಿಯಲೇಬೇಕಾಗುವದು. ಅನುಭವವನ್ನು ಬಿಟ್ಟು ಬರಿಯ ವಾಕ್ಯವನ್ನು ಅವಲಂಬಿಸಿದರೆ ಆಗುವ ಅನರ್ಥವನ್ನು ಮೊದಲೇ ವಿಜ್ಞಾಪಿಸಿಕೊಂಡಿದ್ದೇನೆ. ಆದ್ದರಿಂದ ಅನುಭವ ಸಮ್ಮತವಾಗಿರುವ ಅದ್ವೈತವು ಶಾಸ್ತ್ರಕ್ಕಾಗಲಿ ಮತ್ತೆ ಯಾವ ಪ್ರಮಾಣಕ್ಕಾಗಲಿ ವಿರುದ್ಧವೆಂದು ಹೇಳುವದು ಸರಿಯಲ್ಲ; ನಿಜವಾಗಿ ನೋಡಿದರೆ ಇದರಿಂದಲೇ ಸಕಲ ಪ್ರಮಾಣಗಳಿಗೂ ಜೀವಕಳೆಯು ಬರುತ್ತದೆ. ಇಂಥ ಶಿವಂಕರವಾದ ಅನುಭವವನ್ನು ಅನುಗ್ರಹಿಸುವಂತೆ ಶಾಂತಿಸಮೃದ್ಧನೂ ಅಮೃತನೂ ಆಗಿರುವ ಆ ಸರ್ವಾತ್ಮನನ್ನು ಪ್ರಾರ್ಥಿಸೋಣ.

ಖಖಖಖಖ

# ಬ್ರಹ್ಮವಿದ್ಯೆಯ ಹೆಚ್ಚುಗಾರಿಕೆ

"ಅದೇನು ಬ್ರಹ್ಮವಿದ್ಯೆಯೇ?" ಎಂಬ ವಾಕ್ಯವು ಆಗಾಗ ನಮ್ಮ ಸಂಭಾಷಣೆಯಲ್ಲಿ ಬರುತ್ತಿರುತ್ತದೆ. "ಬ್ರಹ್ಮವಿದ್ಯೆಯೆಂಬುದು ಬಹಳ ಕಷ್ಟಸಾಧ್ಯ; ಆದರೆ ಇದೇನೂ ಅಷ್ಟು ಕಷ್ಟವಲ್ಲ" ಎಂದು ಆ ವಾಕ್ಯದ ಅರ್ಥ. ಹಾಗಾದರೆ ಬ್ರಹ್ಮವಿದ್ಯೆಯಲ್ಲಿರುವ ಅಂಥ ಹೆಚ್ಚುಗಾರಿಕೆ ಯಾವದು? ಆ ವಿದ್ಯೆಯನ್ನು ಕಲಿಯುವದಕ್ಕೆ ಏನೇನು ಕಷ್ಟವನ್ನು ಅನುಭವಿಸಬೇಕಾಗುವದು? ಅಷ್ಟು ಕಷ್ಟಪಟ್ಟು ಆ ವಿದ್ಯೆಯನ್ನು ಕಲಿತುಕೊಂಡರೆ ಬರುವ ಭಾಗ್ಯವಾದರೂ ಯಾವದು? – ಎಂದು ಈ ವಾಕ್ಯವನ್ನು ವಿಮರ್ಶಿಸುವ ಕೆಲವರಿಗೆ **ಕುತೂಹಲ**ವುಂಟಾಗಬಹುದಷ್ಟೆ. ಅಂಥವರಿಗಾಗಿ ಇಲ್ಲಿ ನಾಲ್ಕು ಮಾತುಗಳನ್ನು ಬರೆಯುವೆನು. ಗಹನವಾದ ಬ್ರಹ್ಮವಿದ್ಯೆಯನ್ನು ತಾವೇ ಸ್ವಂತವಾಗಿ ವಿವೇಚಿಸಿಕೊಳ್ಳುವದು ನಮ್ಮಂಥ ಅಲ್ಪಪ್ರಜ್ಞರಿಗೆ ಕಷ್ಟ. ಆದ್ದರಿಂದ ತಳಮುಟ್ಟಿ ವಿಚಾರಮಾಡಿ ಈ ವಿದ್ಯೆಯ ಸ್ವರೂಪವನ್ನು ಗೊತ್ತಾಗಿ ತಿಳಿಸಿಕೊಟ್ಟಿರುವ ಶ್ರೀಬಾದರಾಯಣಾಚಾರ್ಯರ ನೆರವನ್ನು ತೆಗೆದುಕೊಂಡೇ ನಾವು ವಿಷಯಪ್ರವೇಶವನ್ನು ಮಾಡಬೇಕಾಗಿರುತ್ತದೆ.

ಶ್ರೀಬಾದಾರಾಯಣ ಮಹರ್ಷಿಗಳವರು ಅನುಗ್ರಹಿಸಿರುವ ವೇದಾಂತದರ್ಶನದ ಮೊಟ್ಟ ಮೊದಲನೆಯ ಸೂತ್ರವಿದು : "**ಅಥಾತೋ ಬ್ರಹ್ಮಜಿಜ್ಞಾಸಾ**" ಈ ಸೂತ್ರದಲ್ಲಿ ಅಥ, ಅತಃ, ಬ್ರಹ್ಮಜಿಜ್ಞಾಸಾ – ಎಂಬ ಮೂರು ಪದಗಳಿವೆ. ಇವುಗಳಲ್ಲಿ 'ಬ್ರಹ್ಮಜಿಜ್ಞಾಸಾ' ಎಂಬ ಪದವನ್ನು ಕುರಿತು ಮೊದಲು ಮನನಮಾಡುವದು ಅವಶ್ಯ.

'ಬ್ರಹ್ಮಜಿಜ್ಞಾಸಾ' ಎಂದರೆ ಬ್ರಹ್ಮದ ಜ್ಞಾನಕ್ಕಾಗಿ ಮಾಡುವ ಇಚ್ಛೆ. ಯಾವನು ಬ್ರಹ್ಮವನ್ನೇ ಅರಿತುಕೊಳ್ಳಬೇಕು ಎಂದು ಹಾತುವರಿಯುತ್ತಿರುವನೋ ಅವನು ಅದನ್ನು ಕುರಿತು ವಿಚಾರಮಾಡಬೇಕು. ಬ್ರಹ್ಮವೆಂದರೆ ಯಾವ ಪದಾರ್ಥವು? ಬ್ರಹ್ಮ ಎಂಬ ಮಾತಿಗೆ ದೊಡ್ಡದು ಎಂದರ್ಥವಾಗುತ್ತದೆ. ಲೋಕದಲ್ಲಿ ಒಂದಕ್ಕೆ ಹೋಲಿಸಿದರೆ ಮತ್ತೊಂದು ದೊಡ್ಡದಾಗಿ ಕಾಣುವದಷ್ಟೆ. ಎಲ್ಲಕ್ಕಿಂತಲೂ ದೊಡ್ಡದು ಯಾವದು? ದೊಡ್ಡದೆಂದರೆ ಗಾತ್ರದಿಂದ ಎಂದೇ ಅರ್ಥವನ್ನು ಮಾಡಬೇಕಾದದ್ದಿಲ್ಲ; ಎಲ್ಲಾ ಬಗೆಯಿಂದಲೂ ದೊಡ್ಡದು, ಇನ್ನಿಲ್ಲ ಎನ್ನಿಸುವಷ್ಟು ದೇಶದಿಂದಲೂ ಕಾಲದಿಂದಲೂ ವಸ್ತುವಿನಿಂದಲೂ ದೊಡ್ಡದು; ಇಂಥ ದೇಶದಲ್ಲಿದೆ, ಇಂಥಲ್ಲಿ ಇಲ್ಲ; ಇಂಥ ಕಾಲದಲ್ಲಿತ್ತು; ಈಗ ಇಲ್ಲ ಅಥವಾ ಮುಂದೆ ಇರುವದಿಲ್ಲ; ಇಂಥ ವಸ್ತುವಿನವರೆಗೆ ಇರುತ್ತದೆ; ಆ ಮತ್ತೊಂದು ವಸ್ತು ಇದಕ್ಕೆ ಎಲ್ಲೇ ಕಟ್ಟಾಗಿರುತ್ತದೆ ಎಂಬ ಪರಿಚ್ಛೇದವಿಲ್ಲದ, ತುಂಡಾಗದ, ಒಂದೇ

ಬಗೆಯಾಗಿರುವ ತತ್ತ್ವವನ್ನೇ ನಾವು ಬ್ರಹ್ಮವೆಂದು ಕರೆಯುವದು. ಇದನ್ನು ಅರಿಯುವ ವಿದ್ಯೆಯೇ ಬ್ರಹ್ಮವಿದ್ಯೆ. ಇದನ್ನೇ ಬ್ರಹ್ಮಜ್ಞಾನವೆಂದೂ ಕರೆಯುತ್ತಾರೆ. ''ಬ್ರಹ್ಮವೆಂಬುದು ದೇಶಕಾಲವಸ್ತುಗಳ ಪರಿಚ್ಛೇದವಿಲ್ಲದ ತತ್ತ್ವವಂತೆ'' ಎಂದು ಅರಿತುಕೊಂಡರೆ ಬ್ರಹ್ಮಜ್ಞಾನ ವಾದಂತೆ ಆಯಿತೆಂದು ಯಾರೂ ಭಾವಿಸಬಾರದು. ಬ್ರಹ್ಮವೆಂದರೆ ಇಂಥ ಪದಾರ್ಥವು ಎಂದು ನೇರಾಗಿ ಅದನ್ನು ಕಂಡುಕೊಳ್ಳಬೇಕು; ಆಗಲೇ ಬ್ರಹ್ಮಜ್ಞಾನವು ಬಂದಂತೆ. ಇದನ್ನು ತಿಳಿಸುವದಕ್ಕಾಗಿ ಈ ಜ್ಞಾನವನ್ನು **ಬ್ರಹ್ಮದರ್ಶನ** (ಬ್ರಹ್ಮನನ್ನು ಕಂಡುಕೊಳ್ಳು ವದು) ಎಂದು ಕರೆಯುವರು.

ಬ್ರಹ್ಮವೆಂಬ ಮಾತೇ ನಮ್ಮಗಳಿಗೆ ಹೊಸದು; ಆ ಹೆಸರಿನ ಪದಾರ್ಥವಂತೂ ಎಲ್ಲಿಯೂ ಇದ್ದಂತೆ ತಿಳಿದುಬಂದಿಲ್ಲ. ಯಾವ ಅಳತೆಯೂ ಇಲ್ಲದೆ ಎಲ್ಲಕ್ಕೂ ಮಿಗಿಲಾಗಿ ಎಲ್ಲವನ್ನೂ ವ್ಯಾಪಿಸಿಕೊಂಡಿರುವ ಪದಾರ್ಥಗಳೆಂದರೆ ನಮಗೆ ಆಕಾಶ, ಕಾಲ ಇವುಗಳಿ ರಬಹುದೆಂಬ ಕಲ್ಪನೆ ಬರುತ್ತದೆಯಷ್ಟೆ. ಅವುಗಳಿಗಿಂತಲೂ ದೊಡ್ಡದಾಗಿ ದೇಶಕಾಲಗಳ ವಸ್ತುಗಳ ಎಲ್ಲೆಕಟ್ಟೇ ಇಲ್ಲದ ವಸ್ತುವೆಂದೇ ಅದರ ಕಲ್ಪನೆಯೂ ನಮಗೆ ಬರುವಂತಿಲ್ಲ. ಹೀಗಿರುವಲ್ಲಿ ಅದರ ವಿಚಾರವನ್ನು ಮಾಡುವದಾದರೂ ಹೇಗೆ? ಎಂಬ ಶಂಕೆಯು ಸಹಜವಾಗಿ ಓದುಗರ ಮನಸ್ಸಿನಲ್ಲಿ ಮೂಡಿರಬೇಕು. ಆದರೆ ಬ್ರಹ್ಮವೆಂಬುದು ನಾವಾಗಲಿ ಬಾದರಾಯಣರಾಗಲಿ ಕಲ್ಪಿಸಿಕೊಂಡಿರುವ ವಸ್ತುವಲ್ಲ; ಅದು ಎಲ್ಲಿಯೋ ಒಂದು ಮೂಲೆಯಲ್ಲಿ ಅವಿತುಕೊಂಡಿರುವ ಪದಾರ್ಥವೂ ಅಲ್ಲ. ವೇದಾಂತವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಉಪನಿಷತ್ತುಗಳಲ್ಲಿ ಬ್ರಹ್ಮದ ವಿಷಯವನ್ನು ತಿಳಿಸಿರುತ್ತದೆ. ಆದ್ದರಿಂದ ಯಾರು ಉಪನಿಷತ್ತುಗಳನ್ನು ಅಧ್ಯಯನ ಮಾಡಿರುವರೋ ಅಥವಾ ಅಧ್ಯಯನ ಮಾಡಿ ಅದರ ವಿಷಯವನ್ನು ಮನನಮಾಡಿಕೊಂಡಿರುವವರ ಸಹವಾಸ ದಲ್ಲಿರುವರೋ ಅಂಥವರಿಗೆ ಈ ಮಾತೇನೂ ಹೊಸದಾಗುವದಿಲ್ಲ. ಇದಿರಲಿ, ಬ್ರಹ್ಮ ವೆಂಬ ಹೆಸರಿನ ಪದಾರ್ಥವು ಎಲ್ಲಿಯೂ ಇದ್ದಂತೆ ತಿಳಿಯಬರುವದಿಲ್ಲವೆಂಬ ಶಂಕೆಗೆ ಅವಕಾಶವೇ ಇಲ್ಲದಂತೆ ಬ್ರಹ್ಮವೆಂದರೆ ನಮ್ಮಗಳ ಆತ್ಮನೇ, ನಮ್ಮ ಸ್ವರೂಪವೇ ಎಂದು ವೇದಾಂತದಲ್ಲಿ ಹೇಳಿಬಿಟ್ಟಿರುವದರಿಂದ ಬ್ರಹ್ಮವೆಂಬ ವಸ್ತು ಇಲ್ಲವೆನ್ನುವದು ''ನಮ್ಮ ಸ್ವರೂಪವು ಇಲ್ಲ'', ''ನಾವಿಲ್ಲ'' ಎಂಬ ಮಾತಾಗುವದು. ಯಾವ ಮೂಢನಾದರೂ ನಾನಿಲ್ಲವೆಂದು ತಿಳಿದುಕೊಂಡಾನೆ? ತಾನು ಇಲ್ಲವೆಂದು ಕಲ್ಪಿಸಿಕೊಳ್ಳುವದಕ್ಕೆ ಯಾರಿಗೂ ಬರುವ ಹಾಗಿಲ್ಲವಾದ್ದರಿಂದ ಬ್ರಹ್ಮವು ಇದೆಯೊ, ಇಲ್ಲವೊ?- ಎಂಬ ಸಂದೇಹಕ್ಕೂ ಸ್ಥಲವಿಲ್ಲ.

ಆದರೆ ಇಲ್ಲಿ ಇನ್ನೊಂದು ಒಗಟಿನ ಪ್ರಶ್ನೆಯು ತಲೆ ಎತ್ತಿಕೊಳ್ಳುತ್ತದೆ. ಬ್ರಹ್ಮ ವೆಂದರೆ ನಾನೇ ಆದರೆ ಅದನ್ನು ತಿಳಿದುಕೊಳ್ಳಬೇಕಾದದ್ದೇನಿದೆ? ಅದನ್ನು ತಿಳಿದುಕೊಳ್ಳದ ಅವಿವೇಕಿಯೂ ಲೋಕದಲ್ಲಿ ಉಂಟೆ? ಇದಕ್ಕೆ 'ಬ್ರಹ್ಮವಿದ್ಯೆ' ಎಂಬ ಘನವಾದ ಹೆಸರಾದರೂ ಏತಕ್ಕೆ? ನಾನು ಎಂಬುದೇ ಪ್ರಪಂಚದಲ್ಲೆಲ್ಲ ದೊಡ್ಡದು ಎಂದು ತಿಳಿದುಕೊಳ್ಳುವದನ್ನು 'ವಿದ್ಯೆ' ಅನ್ನುವದಕ್ಕಿಂತ 'ಅವಿದ್ಯೆ' ಎಂದು ಕರೆಯುವದೇ ಚೆನ್ನಾಗಿ ಒಪ್ಪುತ್ತದೆ. ಏಕೆಂದರೆ ನಾನೇ ದೊಡ್ಡವನು, ನನಗೆ ಸಮಾನರಿಲ್ಲ ಎಂಬ ಹೆಮ್ಮೆಯಿಂದಲೇ ಮನುಷ್ಯನು ಕೆಡುವನು. ''ನಾನು ತಿಳಿದುಕೊಳ್ಳತಕ್ಕದ್ದು ಬಹಳ ಇದೆ; ಶಕ್ತಿಯಲ್ಲಿಯೂ ಯುಕ್ತಿಯಲ್ಲಿಯೂ ತಿಳಿವಳಿಕೆಯಲ್ಲಿಯೂ ನನ್ನನ್ನು ಮೀರಿಸಿರುವ ಮಹಾನುಭಾವರು ಎಷ್ಟೋ ಮಂದಿ ಇರುವದು. ಅವರನ್ನು ಸೇವಿಸಿ ವಿದ್ಯಾರ್ಜನೆಯನ್ನು ಮಾಡಿಕೊಳ್ಳಬೇಕು ಎಂಬ ತಿಳಿವಳಿಕೆಯಾದರೂ ಬಂದರೆ ಅಂಥ ಮನುಷ್ಯನನ್ನು ವಿವೇಕಿ ಎನ್ನಬಹುದು. ಏಕೆಂದರೆ ಅಂಥವನು ಇಂದಲ್ಲದಿದ್ದರೆ ನಾಳೆಯಾದರೂ ತಿಳಿವಳಿಕೆಯನ್ನು ಸಂಪಾದಿಸಿಯಾನು. ಹೀಗಿರುವಲ್ಲಿ '**ನಾನೇ ಬ್ರಹ್ಮವು**' ಎಂದುಕೊಳ್ಳುವ ಮೂರ್ಖನ ತಿಳಿವಳಿಕೆಯನ್ನು ಹೊಗಳುವದಕ್ಕೆ ಒಂದು ಶಾಸ್ತ್ರವೇತಕ್ಕೆ?

ಈ ಪ್ರಶ್ನೆಯು ಹೇಳಿದ ವಿಷಯವನ್ನು ಮನದಟ್ಟುಮಾಡಿಕೊಳ್ಳದೆ ಕೇಳಿದ್ದಾಗಿದೆ. ಏಕೆಂದರೆ ''ಬ್ರಹ್ಮವೆಂದರೆ ನಾನೇ'' ಎಂದೇನೂ ವೇದಾಂತದಲ್ಲಿ ಹೇಳಿಲ್ಲ. ಬ್ರಹ್ಮವು ನಿಜವಾಗಿಯೂ ಇರುವ, ದೇಶಕಾಲವಸ್ತುಗಳ ಪರಿಚ್ಛೇದವಿಲ್ಲದ, ಅಖಂಡವಾದ ಚೈತನ್ಯವು; ಅದು ನಮ್ಮ ಆತ್ಮನೇ ಎಂದರೆ ನಮ್ಮ ಸ್ವರೂಪವೇ ಆಗಿರುತ್ತದೆ. ನಾನು ಎಂದು ತಿಳಿದುಕೊಂಡಿರುವದು ನಮ್ಮ ನಿಜವಾದ ಸ್ವರೂಪವಲ್ಲ, ನಮ್ಮ ಸ್ವರೂಪವು ಬ್ರಹ್ಮವೇ – ಎಂಬುದು ವೇದಾಂತದ ಉಪದೇಶವು. ''ನನ್ನ ಸ್ವರೂಪವು ಅತ್ಯಲ್ಪವಾದ ಶರೀರಾದಿಗಳಿಂದ ಪರಿಚ್ಛಿನ್ನವಾಗಿದೆ. ನಾನು ಏನೂ ತಿಳಿಯದವನು, ದುಃಖಿಯು, ಯಾವಾಗಲೋ ಒಂದು ಕಡೆ ಹುಟ್ಟಿ ಮತ್ತೆ ಯಾವಾಗಲೋ ಒಂದು ಕಡೆ ಸಾಯುವ ಜಂತು'' ಎಂದು ಬಾವಿಸಿಕೊಂಡಿರುವದು ತಪ್ಪುತಿಳಿವಳಿಕೆಯಾಗಿರುತ್ತದೆ. ಈ ತಪ್ಪುತಿಳಿವಳಿಕೆ ಯನ್ನು ಕಳೆದು ಬ್ರಹ್ಮವಿದ್ಯೆಯು ನಮ್ಮ ನಿಜವಾದ ಸ್ವರೂಪವನ್ನು ತಿಳಿಸಿಕೊಡುತ್ತದೆ. ಆ ಸ್ವರೂಪವನ್ನು ನಾವು ಅರಿತುಕೊಂಡರೆ, ನೇರಾಗಿ ಅನುಭವಕ್ಕೆ ತಂದುಕೊಂಡರೆ, ನಾವು ದೇಶಕಾಲವಸ್ತುಪರಿಚ್ಛೇದವಿಲ್ಲದ, ಎಲ್ಲಕ್ಕೂ ಮಿಗಿಲೆನಿಸುವ ಬ್ರಹ್ಮವಾಗಿರುವೆವು ಎಂದು ಮನವರಿಕೆಯಾಗಿಬಿಡುತ್ತದೆ. ಇಷ್ಟೇ ಅಲ್ಲ, ಬ್ರಹ್ಮವೇ ನಿಜವಾಗಿ ಈ ಜಗತ್ತಿಗೆಲ್ಲಕ್ಕೂ ನಿಜವಾದ ಸ್ವರೂಪವು ಎಂದೂ ಮನದಲ್ಲಿ ಮಿಂಚಿಬಿಡುತ್ತದೆ ಎಂದು ವೇದಾಂತದಲ್ಲಿ ಸಾರಿರುತ್ತದೆ.

ಬ್ರಹ್ಮವಿದ್ಯೆಯ ಹೆಚ್ಚುಗಾರಿಕೆ ಏನು? - ಎಂಬುದು ಈಗ ವಾಚಕರಿಗೆ ಸ್ವಲ್ಪ ಮಟ್ಟಿಗೆ ಹೊಳೆದಿರಬೇಕು. ಬ್ರಹ್ಮವೆಂಬುದು ಇಡಿಯ ಜಗತ್ತಿನ ತಿರುಳು. ಈ ಜಗತ್ತಿನಲ್ಲಿ ಯಾವ ವಸ್ತುವಿನ ವಿಚಾರವನ್ನು ನಾವು ಮಾಡುವದಕ್ಕೆ ಹೊರಟರೂ ಅದು ಕೊನೆಯಲ್ಲಿ ಬ್ರಹ್ಮವಿದ್ಯೆಯಲ್ಲಿಯೇ ಸಮಾಪ್ತಿಯಾಗಬೇಕು. ಅಲ್ಲಿಯವರೆಗೆ ವಸ್ತುವಿನ ನಿಜವನ್ನು ನಾವು ತಿಳಿದಂತೆ ಆಗುವದಿಲ್ಲ. ಹೀಗೆ ನೋಡಿದರೆ ಲೋಕದಲ್ಲಿ ಎಷ್ಟು ವಿದ್ಯೆಗಳಿರುವವೋ ಅವೆಲ್ಲ ಬ್ರಹ್ಮವಿದ್ಯೆಯೆಂಬ ರಾಜಮಾರ್ಗಕ್ಕೆ ಹೋಗುವ ಕಾಲುದಾರಿಗಳಾಗಿರುತ್ತವೆ. ಇನ್ನೂ ಸರಿಯಾಗಿ ನೋಡಿದರೆ ಬ್ರಹ್ಮವಿದ್ಯೆಯೇ ಸರಿಯಾದ ವಿದ್ಯೆ. ಏಕೆಂದರೆ ಯಾವದೊಂದು ತಿಳಿವಳಿಕೆಯು ನಿಜವಾಗಿ ಇದ್ದ ವಸ್ತುವನ್ನು ತಿಳಿಸುವದೋ ಅದನ್ನೇ ವಿದ್ಯೆಯೆಂದು ಕರೆಯಬೇಕು. ಬರಿಯ ತೋರಿಕೆಯ ವಸ್ತುಗಳನ್ನು ತೋರಿಸುವ ವಿದ್ಯೆಗಳೂ ನಿಜವಾದ ವಿದ್ಯೆಯನ್ನು ನಾವು ಮುಟ್ಟುವದಕ್ಕೆ ಸಹಾಯಕವಾಗುವ ಮಟ್ಟಿಗೆ **ಅಪರವಿದ್ಯೆ**ಗಳು ಎಂದರೆ ಕೀಳುವಿದ್ಯೆಗಳು. ಅವು ನಿಜವಾದ ವಿದ್ಯೆಯನ್ನು ಪಡೆದುಕೊಳ್ಳುವದಕ್ಕೆ ಅಡ್ಡಿಯೂ ಆಗುವದಾದರೆ ಅವನ್ನು ವಿದ್ಯೆಯೆನ್ನುವದಕ್ಕಿಂತ 'ಅವಿದ್ಯೆ'ಗಳು ಎನ್ನುವದೇ ಸರಿಯಾಗಿರುತ್ತದೆ. ಈ ತತ್ತ್ವವನ್ನು ಮಹಾಗಂಡ ಒಬ್ಬ ಜ್ಞಾನಿಗಳು ಹಾಡಿರುವದನ್ನು ಕೇಳಿರಿ:

ರಾಗ- ಪಂತವರಾಳಿ ಏಕತಾಳ

ಕಾಕುಪೋಕು ವಿದ್ಯೆಗಳನೇಕವಿದ್ದರೇನು ಜನ್ಮ
ಶೋಕವನ್ನು ನೀಗಿ ಮೋಕ್ಷದೇಕಾನಂದವೀಯುವಿಂತೀ ॥ಪ॥

ವೇದಾಗಮ ಪುರಾಣಾದಿ ಗಾದೆ ಶಬ್ದ ಶಾಸ್ತ್ರಮಂತ್ರ ।
ಭೇದ ಕಾವ್ಯ ತರ್ಕ ಮೀಮಾಂಸಾದಿ ದಂಭವಿದ್ಯವ ॥
ಹಾದಿಹೋಕರಲ್ಲಿ ಇಲ್ಲಿ ಓದಿ ದೈನ್ಯ ತೋರಿ ತಮ್ಮ
ಕಾದ ಹೊಟ್ಟೆಗನ್ನವ ಸಂಪಾದಿಸುವರಲ್ಲದಿಂತೀ ॥೧॥

ಜ್ಯೋತಿಷ ಛಂದಸ್ಸು ವಾಸ್ತು ವೈದ್ಯ ಗಾರುಡ ಸಂ ।
ಗೀತ ನಾಟ್ಯ ಸಾಮುದ್ರಿಕ ಭೂತಾದ್ಯಲ್ಪವಿದ್ಯವ ।
ನೋತು ಕಲ್ತರೆಲ್ಲ ತೂತು ಮಾತ ಮುಂದುಮಾಡಿ ।
ದೃಶ್ಯಜಾತವನ್ನೆ ಹೇಳಿ ಮಾಯಾದೂತರಪ್ಪರಲ್ಲದಿಂತೀ ॥೨॥

ವಾದ ವಶ್ಯಾಕರ್ಷಣೋರ್ವಿಭೇದವಾಕಾಶಾಂಬುಯಾನು ।
ಪಾದುಕಾಂಜನಾದಿ ಕ್ಷುದ್ರಮೋದವಿದ್ಯಾವಂತರು ॥
ಕಾದಿ ಕಣ್ಣುಗೆಟ್ಟು ಕಲ್ಲಹಾದು ಸತ್ತು ಮುಂದೆ ಕಾಲ ।
ಬಾಧೆಯಲ್ಲಿ ನೊಂದು ಬೆಂದು ಬೂದಿಯಪ್ಪರಲ್ಲದಿಂತೀ ॥೩॥

ಬಂಧ ಲಕ್ಷ್ಯ ಮುದ್ರೆ ನಾಡೀ ಕಂದ ಚಕ್ರತಾರೆ ನಾದ ।
ಬಿಂದುಮಂಡಲಾದಿಯೋಗದಂಡವಿದ್ಯಾನಿಷ್ಠರು ॥
ಅಂದು ಇಂದು ತೋರಿತೆಂದಾನಂದಿಸುತ್ತ ಪೂರ್ಣಭಾವ ।
ದಂದಗೆಟ್ಟಜ್ಞಾನವನ್ನು ತಿಂದು ತೇಗುವರಲ್ಲದಿಂತೀ ॥೪॥

ವೇದಾಗಮ ಜ್ಯೋತಿಶ್ಛಂದೋವಾದವಶ್ಯ ಬಂಧ ಲಕ್ಷ್ಯ ।
ವಾದಿಯಾದ ವಿದ್ಯವೆಲ್ಲ ಭೇದಮಾರ್ಗವೆನ್ನುತ ॥
ಅನಾದಿ ಶ್ರೀ ಗುರುಸಿದ್ಧ ನಿನ್ನ ಬೋಧಿಸುತ್ತ ದ್ವೈತರೂಪ ।
ವಾದ ಮುಕ್ತಿಸೌಖ್ಯವೀವ ವೇದಾಂತವೊಂದಲ್ಲದಿಂತೀ ॥೫॥

ಈ ಲೇಖನದಲ್ಲಿ ಬ್ರಹ್ಮ ಮತ್ತು ಅದರ ವಿದ್ಯೆ – ಇವುಗಳ ಸ್ವರೂಪವನ್ನು ಸ್ವಲ್ಪ ಮಟ್ಟಿಗೆ ವಿವರಿಸುವದಕ್ಕೆ ಪ್ರಯತ್ನಮಾಡಿರುತ್ತೇನೆ. ಬ್ರಹ್ಮವಿದ್ಯೆಯಿಂದ ನಮ್ಮ ಸ್ವರೂಪವು ತಿಳಿದು ಅದನ್ನು ತಿಳಿಯದೆ ಇದ್ದದ್ದರಿಂದ ಆಗಿರುವ ಅನರ್ಥಪರಂಪರೆಯೆಲ್ಲ ನೀಗಿ ವಿಲಕ್ಷಣವಾದ ನಿತ್ಯಾನಂದವೊಂದು ತೋರಿಕೊಳ್ಳುವದೆಂಬುದನ್ನೂ ಸ್ವಲ್ಪ ಮಟ್ಟಿಗೆ ತಿಳಿಸಿಕೊಟ್ಟಿದ್ದೇನೆ. ಆದರೆ ಬ್ರಹ್ಮವಿದ್ಯೆಯನ್ನು ತಿಳಿಯುವ ಮುಂಚೆ ಅದಕ್ಕೆ ಅಡ್ಡಿಯಾಗಿರುವ 'ಅವಿದ್ಯೆ' ಎಂಬ ಅನರ್ಥದ ಮೂಲವನ್ನು ಇನ್ನಷ್ಟು ವಿವರವಾಗಿ ತಿಳಿದುಕೊಳ್ಳುವದು ಅವಶ್ಯ. ಈ ವಿಷಯವನ್ನು ತಿಳಿಸಿಕೊಟ್ಟು ಆ ಬಳಿಕ ಬ್ರಹ್ಮವಿದ್ಯೆಗೆ ಯಾರು ತಕ್ಕವರು? ಅವರಿಗೆ ಆಗುವ ಪೂರ್ಣಾನಂದದ ಸ್ವರೂಪವೇನು? – ಎಂಬುದನ್ನು ಹೇಳುವದಕ್ಕೆ ಹೊರಡುವೆನು.

# ಬ್ರಹ್ಮವಿದ್ಯೆಯೂ ಅವಿದ್ಯೆಯೂ

ಒಂದಾನೊಂದು ಮಿಗಿಲಿಲ್ಲದ ತತ್ತ್ವವಿದೆ; ಅದಕ್ಕೆ ಬ್ರಹ್ಮವೆಂದು ಹೆಸರು. ಬ್ರಹ್ಮವು ದೇಶಕಾಲವಸ್ತುಗಳ ಕಟ್ಟಿಗೆ ಸಿಕ್ಕುವ ತತ್ತ್ವವಲ್ಲ. ಅದು ಇಲ್ಲದ ದೇಶವಾಗಲಿ ಕಾಲವಾಗಲಿ ಇಲ್ಲ; ಅದಕ್ಕೆ ಎರಡನೆಯದಾಗಿ ಅದರ ಸರಿಜೋಡಿಯಾಗಿ ಅದರಷ್ಟೇ ಇರವಿನದಾಗಿರುವ ವಸ್ತುವೇ ಲೋಕದಲ್ಲಿಲ್ಲ. ಆದ್ದರಿಂದಲೇ ಅದಕ್ಕೆ ಬ್ರಹ್ಮ - ಎಲ್ಲಕ್ಕೂ ಮಿಗಿಲಾದದ್ದು, ತನಗಿಂತ ಮಿಗಿಲಿಲ್ಲದ್ದು- ಎಂಬ ಹೆಸರನ್ನು ಶಾಸ್ತ್ರದಲ್ಲಿ ಕೊಟ್ಟಿರುತ್ತದೆ. ಆ ಬ್ರಹ್ಮವೇ ಇಡಿಯ ಜಗತ್ತಿನ ತಿರುಳು. ಅದೇ ನಮ್ಮ ಆತ್ಮನು, ನಮ್ಮ ನಿಜವಾದ ಸ್ವರೂಪವು. ಆ ಸ್ವರೂಪವನ್ನು ಕಂಡುಕೊಳ್ಳುವದೇ **ಬ್ರಹ್ಮವಿದ್ಯೆ, ಅಧ್ಯಾತ್ಮವಿದ್ಯೆ.**

ಇದಿಷ್ಟನ್ನೂ ಹಿಂದಿನ ಲೇಖನದಲ್ಲಿ ಸ್ವಲ್ಪಮಟ್ಟಿಗೆ ತಿಳಿಸಿರುತ್ತೇನೆ. ಈ ಬ್ರಹ್ಮವನ್ನು ಇಡಿಯ ಜಗತ್ತಿನ ಮತ್ತು ನಮ್ಮಗಳ ತಿರುಳನ್ನು ನಮ್ಮ ನಿಜಸ್ವರೂಪವನ್ನು ತಿಳಿದುಕೊಳ್ಳುವದಕ್ಕೆ ಅಡ್ಡಿಯಾವದು? ಬ್ರಹ್ಮವೊಂದೇ ನಮ್ಮ ನಿಜವಾದ ಸ್ವರೂಪವಾದರೆ, ನಮ್ಮ ನಿಜವಾದ ಸ್ವರೂಪದಲ್ಲಿ ಯಾವದೊಂದು ಕೊರತೆಯೂ ಇರುವದಕ್ಕೆ ಕಾರಣವಿಲ್ಲ; ನಮಗೆ ಯಾವ ದೇಶದಲ್ಲಿಯೂ ಯಾವ ಕಾಲದಲ್ಲಿಯೂ ಯಾವದೊಂದು ಬೇರೆಯ ವಸ್ತುವಿನಿಂದಲೂ ಯಾವ ಅಡಚಣೆಯೂ ಆಗಬಾರದು. ಆದರೆ ಅನುಭವದಲ್ಲಿ ಹಾಗಿಲ್ಲ. ನಮಗೆ ಎಲ್ಲಾ ಬಗೆಯ ಅಡಚಣೆಗಳೂ ಇರುತ್ತವೆ. ನಮ್ಮ ಶರೀರದಲ್ಲಿ ಹಸಿವು ಬಾಯಾರಿಕೆಗಳು ನಿತ್ಯವಾಗಿರುತ್ತವೆ; ಅದಕ್ಕೆ ಆಗಾಗ್ಗೆ ಬಗೆಬಗೆಯ ದುಃಖಗಳು ಆಯಾ ದೇಶಕಾಲವಸ್ತುಗಳಿಂದ ಬಂದೊದಗುತ್ತಿರುವವು; ರೋಗರುಜಿನಗಳು ಅದನ್ನು ನರಳಿಸುತ್ತಿರುವವು, ಮುಪ್ಪು ಸಾವುಗಳು ಅದನ್ನು ಕಬಳಿಸುವದಕ್ಕೆ ಹೊಂಚುಹಾಕುತ್ತಿರುವವು. ಯಾವ ಅನರ್ಥವೂ ಇಲ್ಲದ ಬ್ರಹ್ಮವೇ ನಮ್ಮ ನಿಜಸ್ವರೂಪವಾದರೆ ಅದನ್ನು ನಾವು ಕಂಡುಕೊಳ್ಳದಂತೆ, ನಮ್ಮ ನಿಜವಾದ ಸ್ವರೂಪವಲ್ಲದ ಅನರ್ಥಪರಂಪರೆಗಳಿಗೆ ಆಕರವಾಗಿರುವ ಈಗಿನ ರೂಪವನ್ನು ನಮಗೆ ತಗಲುಹಾಕಿರುವ ನಮ್ಮ ಹಗೆ ಯಾರು? ಈ ಪ್ರಶ್ನೆಗೆ ಈಗ ಸಂಗ್ರಹವಾಗಿ ಉತ್ತರವನ್ನು ಹೇಳುವದಕ್ಕೆ ಪ್ರಯತ್ನಿಸುವೆನು.

ಬ್ರಹ್ಮವನ್ನು ಅರಿತುಕೊಳ್ಳದಂತೆ ಅಡ್ಡಿಯಾಗಿ, ನಮಗೆ ಒದಗುತ್ತಿರುವ ಅನರ್ಥಗಳಿಗೆಲ್ಲ ಮೂಲವಾಗಿರುವ ಅಡ್ಡಿಗೆ **ಅವಿದ್ಯೆ** ಎಂಬ ಹೆಸರನ್ನು ವೇದಾಂತದಲ್ಲಿ ಕೊಟ್ಟಿರುತ್ತಾರೆ. ಅವಿದ್ಯೆ ಎಂದರೆ ವಿದ್ಯೆಯ ಅಭಾವ, ತಿಳಿವಳಿಕೆಯಿಲ್ಲದ್ದು - ಎಂದಿಷ್ಟೇ ಅರ್ಥವಿಲ್ಲ; ವಿದ್ಯೆಯಲ್ಲದ್ದು, ವಿದ್ಯೆಗೆ ಅಡ್ಡಿಯಾಗಿರುವ ವಿರೋಧಿ - ಎಂದೂ ಅರ್ಥ. ಲೋಕ

ದಲ್ಲಿ ಯಾವ ತಿಳಿವಳಿಕೆಯಾದರೂ ಆಯಾ ವಿಷಯದ ಅವಿದ್ಯೆಯು ಅಡ್ಡಲಾಗಿರುತ್ತದೆ. ನಾವು ಆರೋಗ್ಯವಾಗಿರುವದಕ್ಕೆ ಹೇಗೆ ನಡೆದುಕೊಳ್ಳಬೇಕೆಂಬುದನ್ನು ತಿಳಿಯಬೇಕಾದರೆ ಶರೀರದ ರಚನೆಯನ್ನೂ ಸ್ವಭಾವವನ್ನೂ ಕಾರ್ಯವನ್ನೂ ತಿಳಿದುಕೊಳ್ಳುವದು ಅವಶ್ಯವಷ್ಟೆ. ಆ ತಿಳಿವಳಿಕೆಯನ್ನು 'ಶರೀರವಿದ್ಯೆ' ಎಂದು ಕರೆಯಬಹುದು. ಶರೀರವಿದ್ಯೆಗೆ ಅಡ್ಡಲಾಗಿರುವದು ಯಾವದು? ಶರೀರದ ತಿಳಿವಳಿಕೆಯಿಲ್ಲದಿರುವದು ಮಾತ್ರವಲ್ಲ, ಶರೀರದ ವಿಷಯಕ್ಕೆ ನಮಗೆ ಇರುವ ತಪ್ಪು ತಿಳಿವಳಿಕೆಯೂ ಅಡ್ಡಲಾಗಿದೆ; ಇವೆರಡರಲ್ಲಿ ತಿಳಿವಳಿಕೆಯಿಲ್ಲದೆಂಬುದಕ್ಕಿಂತ ತಪ್ಪುತಿಳಿವಳಿಕೆಯ ಹೊಣೆಗಾರಿಕೆಯೇ ಹೆಚ್ಚು. ಏಕೆಂದರೆ ತಪ್ಪುತಿಳಿವಳಿಕೆಯಿಂದ ನಮ್ಮ ಶರೀರಕ್ಕೆ ಒಗ್ಗದ ಆಹಾರವಿಹಾರಗಳನ್ನು ಅನುಸರಿಸುವದರಿಂದಲೇ ನಾವು ಇಲ್ಲದ ರೋಗಗಳನ್ನು ತಂದುಕೊಳ್ಳುತ್ತಿರುವೆವು. ಬ್ರಹ್ಮವಿದ್ಯೆಯ ವಿಷಯದಲ್ಲಿಯೂ ಹೀಗೆಯೇ. ಬ್ರಹ್ಮವನ್ನು, ನಮ್ಮ ಆತ್ಮನ ನಿಜವನ್ನು, ನಾವು ತಿಳಿದುಕೊಂಡಿಲ್ಲವೆಂಬುದು ಅಂಥ ಕೊರತೆಯಲ್ಲ; ಆದರೆ ಈ ತತ್ತ್ವದ ವಿಷಯದಲ್ಲಿ ನಮಗಿರುವ ತಪ್ಪುತಿಳಿವಳಿಕೆಯು ಸರ್ವಾನರ್ಥಗಳಿಗೂ ಮೂಲವಾಗಿರುತ್ತದೆ. ಈ ತಪ್ಪು ತಿಳಿವಳಿಕೆಯೇ **ಅವಿದ್ಯೆ.** ಅವಿದ್ಯೆಯ ಸ್ವಭಾವವೇನು? – ಅದು ಹೇಗೆ ನಮಗೆ ಅನರ್ಥಕ್ಕೆ ಕಾರಣವಾಗಿದೆ?– ಎಂಬುದನ್ನು ಒಂದಿಷ್ಟು ವಿವರಿಸಿ ನೋಡುವದು ಒಳ್ಳೆಯದು, ಏಕೆಂದರೆ ಶತ್ರುವಿನ ಬಲಾಬಲಗಳನ್ನು ತಿಳಿದಲ್ಲದೆ ಅವನನ್ನು ಕದನದಲ್ಲಿ ಎದುರಿಸಿ ಸೋಲಿಸುವದು ಆಗಲಾರದು. ಯಾವ ತಪ್ಪುತಿಳಿವಳಿಕೆಯಾಗಲಿ ತನ್ನ ಕಾಲದಲ್ಲಿ ತಾನು ತಪ್ಪುತಿಳಿವಳಿಕೆಯೆಂಬುದನ್ನು ನಮಗೆ ತಿಳಿಯಗೊಡುವದಿಲ್ಲ. "ಇದೇ ನಿಜವು, ನಾನು ತಿಳಿದಿರುವದೇ ಸರಿ" ಎಂಬ ನಿಶ್ಚಿತರೂಪದಿಂದ ಅದು ತೋರಿಕೊಳ್ಳುತ್ತಿರುತ್ತದೆ. ಪಶ್ಚಿಮದಿಕ್ಕನ್ನೇ ಪೂರ್ವವೆಂದು ತಿಳಿದುಕೊಂಡಿರುವವನು ಆ ಕಡೆಗೇ ಓಡುತ್ತಾ ತನ್ನ ಉದ್ದಿಷ್ಟಸ್ಥಳಕ್ಕೇ ಹೋಗುತ್ತಿರುವೆನೆಂದು ನೆರೆನಂಬಿ ತನ್ನ ಪ್ರಯತ್ನವನ್ನು ಮುಂದುವರಿಸುತ್ತಾ ಇರುತ್ತಾನೆ. ತನಗೆ ತಿಳಿವಳಿಕೆಯನ್ನು ಕೊಡುವದಕ್ಕಾಗಿ ಯಾರಾದರೂ ಸ್ವಲ್ಪ ನಿಲ್ಲೆಂದರೂ, ತನ್ನ ಉದ್ದೇಶಕ್ಕೆ ಭಂಗವನ್ನು ಮಾಡುವರಲ್ಲ ಎಂದು ಅವರ ಮೇಲೆಯೇ ರೇಗಿಬೀಳುತ್ತಾನೆ. ಅಲ್ಲವೆ? ಪ್ರಕೃತದಲ್ಲಿಯೂ ಹೀಗೆಯೇ. ನಾವು ನಮ್ಮ ಸ್ವರೂಪವನ್ನು ಅರಿಯೆವು; ಅದನ್ನು ತಪ್ಪಾಗಿಯೂ ತಿಳಿದುಕೊಂಡಿರುವೆವು. ಈ ತಪ್ಪು ತಿಳಿವಳಿಕೆಯನ್ನು ಸರಿಯಾದ ತಿಳಿವಳಿಕೆಯೆಂದೇ ನಾವು ಗಟ್ಟಿಯಾಗಿ ನಂಬಿ ಆ ನಂಬಿಕೆಯ ಮೇಲೆಯೇ ನಮ್ಮ ವ್ಯವಹಾರವನ್ನೆಲ್ಲ ಸಾಗಿಸುತ್ತಿರುವೆವು. ಇಷ್ಟೇ ಅಲ್ಲ, ಯಾರಾದರೂ ಇದೆಲ್ಲ ತಪ್ಪುತಿಳಿವಳಿಕೆಯ ಫಲವೆಂದು ತಿಳಿಸುವದಕ್ಕೆ ಮೊದಲು ಮಾಡಿದರೆ ವ್ಯವಹಾರಕ್ಕೆ ಅಡ್ಡಿಯಾಗುವರೆಂದು ಭಾವಿಸುತ್ತಿರುವೆವು.

ಆದರೆ ನಮ್ಮಲ್ಲಿ ಯಾರು ವ್ಯವಹಾರದಲ್ಲಿ ಉಸಿರುಬಿಡದೆ ಓಡುತ್ತಿಲ್ಲವೋ ಯಾರಿಗೆ ಸ್ವಲ್ಪ ತಾಳ್ಮೆಯಿಂದ ನಿಜವನ್ನು ಅರಿತುಕೊಳ್ಳೋಣವೆಂಬ ಒಲವೂ ಮನಸ್ಸಿಗೆ ಬಂದಿರುವದೋ, ಅಂಥವರಿಗೆ ನಮ್ಮ ಸ್ವಾಭಾವಿಕವ್ಯವಹಾರವೆಲ್ಲ ಅವಿದ್ಯೆಯ ತಳಹದಿಯ ಮೇಲೆಯೇ ನಿಂತಿರುವದೆಂದು, ನಮ್ಮ ಜೀವನದ ರೈಲು ತಪ್ಪುತಿಳಿವಳಿಕೆಯೆಂಬ ಕಂಬಿ ಗಳ ಮೇಲೆಯೇ ಧಾವಿಸುತ್ತಿದೆ ಎಂದು, ಗೊತ್ತಾಗುವದಕ್ಕೆ ಬೇಕಾದಷ್ಟು ಆಧಾರಗಳು ದೊರಕುತ್ತವೆ. ಮೊಟ್ಟಮೊದಲು ನಮ್ಮ ಸುತ್ತಮುತ್ತಲೂ ನೋಡಿದರೆ ಅದರಲ್ಲಿ ಎಲ್ಲೆಲ್ಲಿಯೂ ಎಲ್ಲವೂ ಮಾರ್ಪಡುತ್ತಲೇ ಇದೆ. ಒಂದು ಕಾಲದಲ್ಲಿ ಬಂದು ಕಾಣಿಸಿಕೊಳ್ಳುತ್ತಲೂ ಸ್ವಲ್ಪಕಾಲದ ಮೇಲೆ ಕಣ್ಮರೆಯಾಗುತ್ತಲೂ ಇದೆ ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ಈ ಪ್ರಪಂಚದಲ್ಲಿ ಯಾವದೊಂದೂ ಇದ್ದಂತೆ ಇರುವದಿಲ್ಲ, ಯಾವದೊಂದೂ ನಿತ್ಯವಾಗಿ ಇರುವದೆಂಬ ಭರವಸೆಯಿಲ್ಲ, ಈ ಭೂಮಿಯೇ ಒಂದೊಂದು ಋತುವಿನಲ್ಲಿ ಒಂದೊಂದು ರೂಪವನ್ನು ತೊಟ್ಟುಕೊಳ್ಳುತ್ತಿರುವದು. ಇಲ್ಲಿರುವ ಮರಗಿಡಗಳು, ಪ್ರಾಣಿ ಗಳು, ಮನುಷ್ಯರು, ನಮ್ಮ ನೆಂಟರು, ಇಷ್ಟರು, ಪರಿವಾರದವರು, ಹಿರಿಯರು, ಕಿರಿ ಯರು, ಹಣಕಾಸು, ಹೊಲ, ಮನೆ, ಅಧಿಕಾರ ಯಾವದೊಂದೂ ನೆಲೆಯಾಗಿರು ವಂತಿಲ್ಲ, ಹತ್ತು ವರ್ಷಗಳ ಹಿಂದೆ ಇದ್ದ ವಸ್ತುಗಳು ಈಗ ಎಷ್ಟೋ ಇಲ್ಲವೇ ಇಲ್ಲ; ಇನ್ನೂ ಕೆಲವು ರೂಪವನ್ನು ಮಾರ್ಪಡಿಸಿಕೊಂಡಿವೆ. ಇನ್ನು ನಮ್ಮ ಶರೀರ, ಮನಸ್ಸು ಮುಂತಾದ ವನ್ನು ನೋಡಿದರೆ ಅವಾದರೂ ಇದ್ದಂತೆ ಇರುವವೆ? ಹುಡುಗರಾಗಿದ್ದವರು ಹರೆಯ ದವರಾಗಿದ್ದೇವೆ, ಅಥವಾ ತರುಣರಾಗಿದ್ದವರು ಮುದುಕರಾಗಿದ್ದೇವೆ, ಇಲ್ಲಿ ಯಾವದು ತಾನೆ ನಿತ್ಯವಾಗಿದೆ? ಆದರೂ ನಾವು ನಮ್ಮ ಈಗಿನ ನಂಬಿಕೆಯಲ್ಲಿ ಈ ಶರೀರದ ರೂಪದಿಂದಲೇ ನಿತ್ಯವಾಗಿರುವೆವೆಂದು ಬಗೆಯುತ್ತಿರುವೆವು, ಇದು ಸರಿ ಯಾದ ತಿಳಿವಳಿಕೆಯಾದೀತೆ?

ಇನ್ನು ಸ್ವಲ್ಪವೇಗದಿಂದ ವಿಚಾರಧಾರೆಯನ್ನು ನಡೆಯಿಸೋಣ. ನಮ್ಮ ಶರೀರವು ಮಾರ್ಪಡುತ್ತಿದೆ, ಅನಿತ್ಯವಾಗಿದೆ, ಆದರೂ ಅದು ಇದ್ದಂತೆಯೇ ಇರುವದೆಂಬ, ನಿತ್ಯ ವಾಗಿಯೇ ಇರುವದೆಂಬ ಗಟ್ಟಿಯಾದ ನಂಬಿಕೆಯು ನಮ್ಮನ್ನು ಹಿಡಿದುಕೊಂಡಿದೆ. ನಮ್ಮ ಶರೀರವು ನಿಜವಾಗಿ ಅಶುಚಿಯಾಗಿದೆ, ಇದರಲ್ಲಿ ಬಗೆಬಗೆಯ ಕಶ್ಮಲಗಳು ತುಂಬಿರುವವು; ಆದರೂ ಅದು ರುಚಿಯಾಗಿರುವದೆಂದೂ ಕಾಂತಿಯುತವಾಗಿರು ವದೆಂದೂ ನಾವು ನೆರೆನಂಬಿರುತ್ತೇವೆ. ನಮ್ಮ ಶರೀರಕ್ಕೆ ಬಗೆಬಗೆಯ ದುಃಖಗಳು ಗಂಟುಬೀಳುತ್ತಿರುವವು. ದುಃಖಗಳ ಪರಂಪರೆಯಿಂದ ಪಾರಾಗುವದಕ್ಕೆ ಅದಕ್ಕೆ ಮಾರ್ಗವೇ

ಇಲ್ಲ; ಆದರೂ ಅದು ನಮಗೆ ಸುಖವನ್ನು ಕೊಡುವದೆಂದು ಆ ಸುಖಕ್ಕಾಗಿ ನಾವು ಹವಣಿಸುತ್ತಿರುವೆವು. ಇದೆಲ್ಲ ವಿದ್ಯೆಯೊ, ಅವಿದ್ಯೆಯೊ?

ಇನ್ನೊಂದು ಬಗೆಯಿಂದ ವಿಚಾರಮಾಡೋಣ. ನಮ್ಮ ಶರೀರವು ಇಷ್ಟು ಮಾರ್ಪಟ್ಟಿದ್ದರೂ ನಾವು ಮಾತ್ರ ಇದ್ದಂತೆಯೇ ಇರುವೆವು. ಶರೀರವು ಬೆಳೆದರೆ ನಾವು ಬೆಳೆಯಲಿಲ್ಲ, ಅದು ಸವೆದರೆ ನಾವು ಸವೆಯಲಿಲ್ಲ, ಅದು ಹೋದರೆ ನಾವು ಹೋಗುವದೂ ಇಲ್ಲವೆಂಬುದೇ ನ್ಯಾಯವಾಗಿರುತ್ತದೆ. ಇದರಂತೆ ನಮ್ಮ ಪ್ರಾಣ, ಮನಸ್ಸು ಬುದ್ಧಿ ಇವು ಯಾವವೂ ಇದ್ದಂತೆ ಇರುವದಿಲ್ಲ; ಇವುಗಳಲ್ಲಿ ಯಾವದೊಂದರಲ್ಲಿ ಆದ ಮಾರ್ಪಾಡಿನಿಂದಲೂ ನಾವು ಮಾರ್ಪಡುವ ಹಾಗಿಲ್ಲ. ಹೀಗಿದ್ದರೂ ಇವುಗಳೆಲ್ಲದರ ಧರ್ಮಗಳನ್ನೂ ನಮ್ಮದೆಂದೇ ಬಗೆಯುವೆವು. ಹುಟ್ಟಿದೆನು, ಬೆಳೆದೆನು, ಬಡವಾದೆನು; ಕಣ್ಣುಕ್ಕಾಣಿಸುತ್ತಿತ್ತು ಈಗ ಮಂಕಾಗಿದೆ; ನನಗೆ ಹಸಿವು ನೀರಡಿಕೆಗಳು ಆಗಾಗ್ಗೆ ಆಗುತ್ತಿರುವವು; ನನ್ನ ಮನಸ್ಸು ಚಂಚಲವಾಗಿದೆ, ನಾನು ಇಂಥಿಂಥ ನಿಶ್ಚಯವನ್ನು ಮಾಡಿಕೊಂಡಿರುವೆನು - ಎಂದು ಇವುಗಳಲ್ಲಿ ಒಂದೊಂದನ್ನು ಒಂದೊಂದು ಸಲ ನಮ್ಮ ಆತ್ಮವೆಂದು ಬಗೆಯುತ್ತಾ, ಇವುಗಳು ಚೆನ್ನಾಗಿದ್ದರೆ ನಾನೂ ಚೆನ್ನಾಗಿರುವೆನು ಎಂತಲೂ, ಇವು ಕೆಟ್ಟರೆ ನಾನೂ ಕೆಟ್ಟೆನು ಎಂತಲೂ ಹಿಗ್ಗುತ್ತಾ ಕುಗ್ಗುತ್ತಾ ಇರುವೆವು. ನಾನು, ಶರೀರ; ನಾನು, ಮನಸ್ಸು; ನಾನು, ಬುದ್ಧಿ - ಇವುಗಳನ್ನು ವಿಂಗಡಿಸಿಕೊಳ್ಳದೆ ನಾನೆಂದರೂ ಒಂದೇ, ಶರೀರಾದಿಗಳೆಂದರೂ ಒಂದೇ ಎಂದು ನಂಬಿಕೊಂಡು ಬಿಟ್ಟಿರುವೆವು. ಶರೀರವು ನಾನಲ್ಲ, ನಾನೂ ಶರೀರವಲ್ಲ - ಎಂದು ವಿಂಗಡಿಸಿ ತೋರಿಸುವಾಗಲೂ ಈ ಕಲೆ ಬೆರಕೆಯ ತಿಳಿವಳಿಕೆಯು ಅಚ್ಚಳಿದಿರುವದಿಲ್ಲ. ಇದೆಲ್ಲ ಅವಿದ್ಯೆಯ ಆಟವಲ್ಲದೆ ಮತ್ತೇನು?

ಈವರೆಗಿನ ವಿಚಾರದಿಂದ ಇಷ್ಟು ಗೊತ್ತಾಯಿತು. ನಮ್ಮೆಲ್ಲರಲ್ಲಿಯೂ ಎಂದೆಂದಿಗೂ ಮಾರ್ಪಡದ ಒಂದು ತತ್ತ್ವವಿದೆ; ನಾವು ಆ ತತ್ತ್ವಕ್ಕೆ ಸೇರಿದವರೇ ಹೊರತು ಅದಕ್ಕಿಂತ ಬೇರೆಯಾಗಿರತಕ್ಕವರಲ್ಲ. ಆದರೂ ಅದೇನು ಮಾಯೆಯೊ, ನಮಗೆ ಸಂಬಂಧಪಟ್ಟಿರುವಂತೆ ಕಾಣುತ್ತಿರುವ ಶರೀರ, ಪ್ರಾಣ, ಮನಸ್ಸು ಬುದ್ಧಿ ಎಂಬಿವುಗಳನ್ನೇ ನಾನು, ನನ್ನದು - ಎಂದು ಬಗೆದು, ಅವುಗಳು ಅನಿತ್ಯವಾಗಿದ್ದರೂ ನಿತ್ಯವೆಂದು ಬಗೆದು, ಅವುಗಳ ಮೂಲಕ ನಮಗೆ ತೋರುವ ಹೊರಗಿನ ನೋಟಗಳು ಅನಿತ್ಯವಾಗಿಯೇ ಇದ್ದರೂ ನಿತ್ಯವೆಂದು ಬಗೆದು, ನಮ್ಮ ಕೇಂದ್ರವಾದ ಪರಮಾರ್ಥ ತತ್ತ್ವವನ್ನು ಮರೆತು ನಮ್ಮ ತಪ್ಪುತಿಳಿವಳಿಕೆಯನ್ನೇ ಹೆಜ್ಜೆಹೆಜ್ಜೆಗೂ ಗಟ್ಟಿಗೊಳಿಸುವ

ಶರೀರಾದಿಗಳಲ್ಲಿ ಬೆರೆತು, ಅವುಗಳಿಗೆ ಅನುಕೂಲವಾದ ರೀತಿಯಿಂದಲೇ ವ್ಯವಹರಿಸುತ್ತಿರುವೆವು. ಮಾಡಬಾರದ್ದನ್ನು ಮಾಡಿದರೆ ಆಗಬಾರದ್ದು ಆಗುವದು ಸ್ವಾಭಾವಿಕ. ಆದ್ದರಿಂದಲೇ ನಮಗೆ ಶರೀರಾದಿಗಳಲ್ಲಿ ಆಗುವ ದುಃಖವೂ ನಮ್ಮದೆಂದೇ ತೋರುತ್ತಿರುವದು. ಇದೇ ಅವಿದ್ಯೆ, ಇದೇ ನಮ್ಮ ನಿಜವಾದ ಸ್ವರೂಪವಾದ, ನಮ್ಮ ಆತ್ಮನೇ ಆಗಿರುವ, ಬ್ರಹ್ಮವನ್ನು ತಿಳಿಸಿಕೊಡುವ ಬ್ರಹ್ಮವಿದ್ಯೆಗೆ ಅಡ್ಡಿಯು.

ಬ್ರಹ್ಮವಿದ್ಯೆಗೆ ಗುರಿಯೇನೆಂಬುದು ಈಗ ಸ್ವಲ್ಪ ವಿಚಾರಕರಿಗೆ ಹೊಳೆದಿರಬೇಕು. ಇರುವ ಪರಮಾರ್ಥವೆಲ್ಲ ಬ್ರಹ್ಮವೊಂದೇ; ಈ ಜಗತ್ತು ಅದರ ನೆರಳಿನಂತೆ ಇರುತ್ತದೆ. ಬ್ರಹ್ಮಕ್ಕೂ ಜಗತ್ತಿಗೂ ಇರುವ ತಾರತಮ್ಯವು ವಸ್ತುವಿಗೂ ನೆರಳಿಗೂ ಇರುವ ತಾರತಮ್ಯವೇ ಆಗಿರುತ್ತದೆ. ಈ ಬ್ರಹ್ಮವೇ ನಮ್ಮಲ್ಲಿ ಎಲ್ಲಕ್ಕೂ ಒಳಗಿರುವ ನಮ್ಮಗಳ ಆತ್ಮನು; ನಾವು ಹೊರಗೆ ಎಷ್ಟೇ ದುಃಖಿಗಳಾಗಿ ಅನರ್ಥಕ್ಕೆ ವಿಷಯವಾಗಿ ತೋರುತ್ತಿರಲಿ, ನಮ್ಮ ಮೂಲವಾದ ತತ್ತ್ವವು ನಿತ್ಯಾನಂದಮಯವಾಗಿರುತ್ತದೆ. ಉಪನಿಷತ್ತಿನಲ್ಲಿ ಈ ತತ್ತ್ವವನ್ನು ಮತ್ತೆಮತ್ತೆ ನೆನಪುಕೊಡುವದಕ್ಕಾಗಿ ಬ್ರಹ್ಮವನ್ನು ಆತ್ಮನೆಂದೇ ಕರೆದಿರುತ್ತದೆ, "ಅದೇ ನೀನು" "ಇದೆಲ್ಲವೂ ಬ್ರಹ್ಮವೇ" ಎಂದು ಸಾರಿಸಾರಿ ಹೇಳಿರುತ್ತದೆ. ಭಗವದ್ಗೀತೆಯಲ್ಲಿಯೂ "ನನ್ನ ಅಂಶವೇ ಜೀವನಾಗಿರುತ್ತದೆ", "ಕ್ಷೇತ್ರಜ್ಞನನ್ನು ನಾನೆಂದೇ ತಿಳಿ" ಎಂದು ಹೇಳಿರುತ್ತದೆ. ಬ್ರಹ್ಮವಿದ್ಯೆಯು ಅಥವಾ ಅಧ್ಯಾತ್ಮವಿದ್ಯೆಯು ಈ ತಿಳಿವಳಿಕೆಯನ್ನು ಕೊಡುತ್ತದೆ.

ಆದರೆ ಈ ತಿಳಿವಳಿಕೆಯು ನಮ್ಮದೇ ಆಗಬೇಕಾದರೆ ಇದಕ್ಕೆ ಅಡ್ಡಿಯಾಗಿರುವ ಅವಿದ್ಯೆಯು ಹೋಗುವದಕ್ಕೆ ನಾವು ಪ್ರಯತ್ನವನ್ನು ಮಾಡಬೇಕು, ಬ್ರಹ್ಮವಿದ್ಯೆಗೆ ತಕ್ಕ ಯೋಗ್ಯತೆಯನ್ನು ನಾವೇ ಸಂಪಾದಿಸಿಕೊಳ್ಳಬೇಕು. ಪರಮಾರ್ಥತತ್ತ್ವದಲ್ಲಿ ಯಾವ ಬದಲಾವಣೆಯೂ ಆಗುವದಿಲ್ಲ, ಉಪನಿಷತ್ತುಗಳಲ್ಲಿಯೂ ಗೀತೆಯಲ್ಲಿಯೂ ಸಾರಿರುವ ತತ್ತ್ವವು ಯಾವಾಗಲೂ ಎಲ್ಲರ ವಿಷಯಕ್ಕೂ ಒಂದೇ ಆಗಿರುತ್ತದೆ. ಆದರೆ ನಾವು ನಮ್ಮ ಅಂತಃಕರಣವನ್ನು ಈ ತಿಳಿವಳಿಕೆಯನ್ನು ಸಂಪಾದಿಸಿಕೊಳ್ಳುವ ಮಟ್ಟಕ್ಕೆ ಏರಿಸಿಕೊಳ್ಳಬೇಕು. ಸಂಗೀತಶಾಸ್ತ್ರವನ್ನು ಕಲಿಯುವವನಿಗೆ ತಕ್ಕ ಯೋಗ್ಯತೆಯೂ ಗುರೂಪದೇಶದ ಮೂಲಕವಾದ ಅಭ್ಯಾಸವೂ ಹೇಗೆ ಅವಶ್ಯಕವಾಗಿರುವವೋ ಆ ಅಭ್ಯಾಸವಿದ್ದವರಿಗೇ ಹೇಗೆ ಸಂಗೀತಪುಸ್ತಕಗಳು ಉಪಯೋಗಕ್ಕೆ ಬರುವವೋ ಹಾಗೆಯೇ ಇಲ್ಲಿಯೂ ಗುರೂಪದೇಶದಿಂದ ತಿಳಿದುಕೊಂಡ ಅಧ್ಯಾತ್ಮಸಾಧನಗಳ ಅಭ್ಯಾಸವೇ ವೇದಾಂತಶಾಸ್ತ್ರದ ಮರ್ಮವನ್ನು ಭೇದಿಸುವದಕ್ಕೆ ಸಾಧಕವಾಗುತ್ತದೆ.

# ಅವಿದ್ಯೆಯಿಂದಾಗುವ ಅನರ್ಥಗಳು

ಬ್ರಹ್ಮವಿದ್ಯೆಯ ಹೆಚ್ಚುಗಾರಿಕೆಯೇನು?ಎಂಬುದನ್ನು ಹಿಂದೆ ಸ್ವಲ್ಪಮಟ್ಟಿಗೆ ತಿಳಿಸಿರುತ್ತೇನೆ. ಬ್ರಹ್ಮವೆಂಬ ಪರಮಾರ್ಥತತ್ತ್ವವನ್ನು ತಿಳಿದರೆ ಇನ್ನು ತಿಳಿಯ ಬೇಕಾದದ್ದು ಏನೂ ಉಳಿಯುವದಿಲ್ಲ, ಆ ಮುಂದೆ ಮಾಡಬೇಕಾದದ್ದೂ ಏನೂ ಇರುವದಿಲ್ಲ. ಉಳಿದ ತಿಳಿವಳಿಕೆಗಳು ತಮ್ಮ ವಿಷಯವನ್ನು ಸ್ವಲ್ಪಮಟ್ಟಿಗೆ ತಿಳಿಸಿಕೊಡುತ್ತವೆ; ಅಥವಾ ಅದನ್ನು ಪೂರ ತಿಳಿಸಿಕೊಟ್ಟರೂ 'ನಮಗೆ ತಿಳಿಯಬೇಕಾದದ್ದು ಇನ್ನೇನೂ ಇರುವದಿಲ್ಲ ಎಂಬ ನಂಬಿಕೆಯನ್ನು ಎಂದಿಗೂ ತಂದು ಕೊಡುವ ಹಾಗಿಲ್ಲ. ಬ್ರಹ್ಮವಿದ್ಯೆಯಲ್ಲದ ಮಿಕ್ಕ ಯಾವ ತಿಳಿವಳಿಕೆಯಾದರೂ 'ಈ ತಿಳಿವಳಿಕೆಯನ್ನು ಇಂಥ ಕರ್ಮಕ್ಕೆ ಉಪಯೋಗಿಸಿಕೊಂಡು ಇಂಥ ಫಲವನ್ನು ಪಡೆಯ ಬೇಕು' ಎಂಬ ಹಂಬಲವನ್ನು ಉಂಟು ಮಾಡುತ್ತದೆ. ಆದರೆ ಬ್ರಹ್ಮವಿದ್ಯೆಯು ಹಾಗಲ್ಲ, ಅದನ್ನು ತಿಳಿದವರು ಕೃತಕೃತ್ಯರಾಗುವರು, ಅವರು ಮಾಡಬೇಕಾದದ್ದು ಏನೂ ಇರುವದಿಲ್ಲ.

ಆದರೆ ಈ ತಿಳಿವಳಿಕೆಯು ಬರದಂತೆ ಇದಕ್ಕೆ ಅಡ್ಡಗೋಡೆಯಾಗಿ ಒಂದು ತಪ್ಪು ತಿಳಿವಳಿಕೆಯು ನಮಗೆಲ್ಲರಿಗೂ ಸ್ವಾಭಾವಿಕವಾಗಿದ್ದುಕೊಂಡಿರುತ್ತದೆ. ಆ ತಪ್ಪು ತಿಳಿವಳಿಕೆಯಿರುವ ತನಕ ನಮಗೆ ಸಂಸಾರದ ಅನರ್ಥಗಳು ತಪ್ಪುವ ಹಾಗಿರುವದಿಲ್ಲ. ವ್ಯವಹಾರದಲ್ಲಿ ನಮಗೆ ಅಡ್ಡಬಂದವೆಂದು ನಾವು ಭಾವಿಸುತ್ತಿರುವ ಭ್ರಾಂತಿಗಳೆಲ್ಲ ಈ ಅವಿದ್ಯೆಯ ಮರಿಗಳು. ಕನಸಿನಲ್ಲಿ ಆಗುವ ಅನರ್ಥಗಳನ್ನು ಒಂದೊಂದಾಗಿ ದಾಟುವದಕ್ಕೆ ಪ್ರಯತ್ನವನ್ನು ಮಾಡಿದರೆ ಅನರ್ಥಗಳೆಲ್ಲ ಇಲ್ಲಿಗೆ ಮುಗಿದವು ಎಂದು ಹೇಳುವದಕ್ಕೆ ಆಗುವಂತಿರುವದಿಲ್ಲ. ಆದರೆ ಕನಸಿನಿಂದ ಎಚ್ಚೆತ್ತುಬಿಟ್ಟರೆ? ಕನಸಿನ ಭ್ರಾಂತಿಯು ಕಳೆಯಿತೊ ಇಲ್ಲವೊ, ಎಲ್ಲಾ ಅನರ್ಥಗಳೂ ಅತ್ಯಂತವಾಗಿ ನಾಶವಾಗಿಬಿಡುತ್ತವೆ, ಅಲ್ಲವೆ? ಇದರಂತೆ ನಮ್ಮ ವ್ಯವಹಾರದಲ್ಲಿ ಕಾಣಬರುತ್ತಿರುವ ಅನರ್ಥಗಳಿಗೆಲ್ಲ ಮೂಲವಾಗಿರುವದು ಅವಿದ್ಯೆ. ಅವಿದ್ಯೆ ಎಂದರೆ ಶರೀರ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ - ಇವುಗಳೇ ನಾವು ಎಂದು ಭ್ರಾಂತಿಯಿಂದ ನಂಬಿಕೊಂಡು ನಡೆಯುವಂತೆ ಮಾಡಿರುವ ತಪ್ಪು ತಿಳಿವಳಿಕೆ. ಈ ಅವಿದ್ಯೆಯ ಕನಸು ಬ್ರಹ್ಮಜ್ಞಾನವೆಂಬ ಎಚ್ಚರದಿಂದ ಕಳೆದುಹೋದರೆ ಕೂಡಲೆ ಎಲ್ಲಾ ಅನರ್ಥಗಳೂ ಹೇಳಹೆಸರಿಲ್ಲದಂತೆ ಮಾಯವಾಗಿಬಿಡುವವು.

ಹೀಗೆ ಅವಿದ್ಯೆಯೆಂಬುದೂ ಒಂದು ತಿಳಿವಳಿಕೆಯಾಗಿದ್ದು ಬ್ರಹ್ಮವಿದ್ಯೆಯೆಂಬುದೂ ಒಂದು ತಿಳಿವಳಿಕೆಯಾಗಿರುವದರಿಂದ ಇವುಗಳಲ್ಲಿ ಒಂದು ತಿಳಿವಳಿಕೆಯಿರುವಾಗ

ಮತ್ತೊಂದು ತಿಳಿವಳಿಕೆಯೂ ಒಬ್ಬರಿಗೇ ಇರಲಾರದೆಂಬುದು ಸ್ಪಷ್ಟವಾಗಿದೆ. ಈ ಎರಡು ತಿಳಿವಳಿಕೆಗಳು ಒಂದಕ್ಕಿಂತ ಒಂದು ಬೇರೆಯಾಗಿರುವವೆಂಬುದಿಷ್ಟೇ ಅಲ್ಲ, ಅವು ಒಂದಕ್ಕೊಂದು ತೀರ ವಿರುದ್ಧವೇ ಆಗಿರುತ್ತವೆ. ನಮ್ಮೆಲ್ಲರ ಕಣ್ಣಿನ ವ್ಯಾಪಾರಕ್ಕೆ ತಡೆಯಾಗುವ ಕತ್ತಲೆ, ಮತ್ತು ನಮ್ಮೆಲ್ಲರ ಕಣ್ಣಿನ ವ್ಯಾಪಾರಕ್ಕೆ ಸಹಾಯಕವಾಗಿರುವ ಬೆಳಕು - ಇವುಗಳು ಹೇಗೆ ಒಂದಕ್ಕೊಂದು ಅತ್ಯಂತ ವಿರುದ್ಧವಾಗಿರುವವೋ, ಹಾಗೆಯೇ ಇವುಗಳೂ ತಮತಮಗೆ ವಿರುದ್ಧವಾಗಿರುತ್ತವೆ. ಬೆಳಕು ಹರಿದರೆ ಕತ್ತಲೆಯು ನಿಲ್ಲದೆ ಓಡಿಹೋಗುತ್ತದೆ. ಕತ್ತಲೆಯೂ ಬೆಳಕೂ ಒಂದೇ ಕಡೆಯಲ್ಲಿರುವದೆಂಬುದು ಎಂದಿಗೂ ಆಗದ ಮಾತು. ಅದರಂತೆ ಎಲ್ಲಿಯವರೆಗೆ ವಿದ್ಯೆಯು ಹುಟ್ಟಿರುವದಿಲ್ಲವೋ ಅಲ್ಲಿಯವರೆಗೆ ಅವಿದ್ಯೆಯ ಅನರ್ಥಗಳು ತಪ್ಪಿದ್ದಲ್ಲ; ಅಲ್ಲಿಯವರೆಗೆ ಅವಿದ್ಯೆಯ ಅನರ್ಥಗಳು ನಮ್ಮನ್ನು ವ್ಯಥೆ ಗೊಳಿಸುತ್ತಿರುವವು. ಆಮೇಲೆ ಅವಕ್ಕೆ ಒಂದಿಷ್ಟೂ ಸತ್ತ್ವವಿರುವದಿಲ್ಲ - ಎಂಬುದೂ ಯುಕ್ತಿಸಿದ್ಧವಾಗುತ್ತದೆ. ಶ್ರುತಿಯೂ ಹಾಗೆಂದೇ ಹೇಳುತ್ತದೆ. (ಈ. 7; ಕೇ. 2-13, ಕೆ. 1-2-4; ಮುಂ. 2-1-10; ಪ್ರ. 6-8; ತೈ. 2-7; ಐ 5-4; ಛಾಂ. 7-2, 6-2; ಬೃ. 4-2-4)

ಅವಿದ್ಯೆಯಿಂದ ಆಗುವ ಅನರ್ಥಗಳನ್ನು ಸ್ವಲ್ಪಮಟ್ಟಿಗೆ ಹಿಂದೆಯೇ ತಿಳಿಸಿದೆಯಾದರೂ ಅವುಗಳನ್ನು ಇನ್ನಷ್ಟು ಬಿಚ್ಚಿ ತಿಳಿಯುವದು ಒಳ್ಳೆಯದು. ನಮ್ಮ ಪರಮಾರ್ಥ ರೂಪವಲ್ಲದ ರೂಪವೊಂದನ್ನು ಕಲ್ಪಿಸಿ ಅದಕ್ಕೆ 'ನಾನು' ಎಂಬ ಹೆಸರನ್ನಿಟ್ಟು ಅದಕ್ಕೇ ವ್ಯವಹಾರದ ರಾಜ್ಯಭಾರವೆಲ್ಲವನ್ನೂ ವಹಿಸಿರುವದು ಅವಿದ್ಯೆ. ಈ ರಾಜ್ಯದಲ್ಲಿ ಅನೇಕರು ಆತ್ಮರು ಇರುವಂತೆಯೂ ಅವರೆಲ್ಲರಿಗೂ ನಮ್ಮಂತೆಯೇ ನಿಜವಾದ ಶರೀರ, ಪ್ರಾಣ, ಮನಸ್ಸು ಬುದ್ಧಿ, ಅಹಂಕಾರ - ಇವೆಲ್ಲವೂ ಇರುವಂತೆಯೂ ನಮಗೆ ತೋರಿಸುತ್ತಿರುವದು ಅವಿದ್ಯೆ. ಈ ಸಂಸಾರಮಂಡಲದಲ್ಲಿ ಕಾಣಬರುವ ಪ್ರತಿಯೊಂದು ಜೀವರಾಶಿಯೂ ಮತ್ತೊಂದು ಜೀವರಾಶಿಗಿಂತ ಭಿನ್ನ ಸ್ವಭಾವದ್ದಾಗಿರುವದೆಂದೂ ಒಂದೊಂದು ಜೀವರಾಶಿಯಲ್ಲಿ ಅಡಕವಾಗಿರುವ ಅನಂತ ಜೀವವ್ಯಕ್ತಿಗಳಲ್ಲಿ ಪ್ರತಿಯೊಂದು ವ್ಯಕ್ತಿಯೂ ಒಂದೊಂದು ಅಸಾಧಾರಣಧರ್ಮವುಳ್ಳದ್ದೆಂದೂ ತಿಳಿಸುತ್ತಿರುವದು ಅವಿದ್ಯೆ. ನಮಗೆ ಕಾಣಬರುವ ಪ್ರಪಂಚವೆಲ್ಲವೂ ಗುಣದೋಷಗಳ ಮಿಶ್ರಣದಿಂದ ಕೂಡಿರುವ ಜೀವರುಗಳಿಂದ ತುಂಬಿದೆಯೆಂದು ನಂಬಿಸಿರುವದು ಅವಿದ್ಯೆ. ನನ್ನಲ್ಲಿರುವ ಅಸಾಧಾರಣ ಧರ್ಮವೆಲ್ಲ ಗುಣವೆಂದೂ ಮತ್ತೊಬ್ಬರಲ್ಲಿರುವ ಅಸಾಧಾರಣ ಧರ್ಮವೆಂಬುದು ಬರಿಯ ದೋಷವೆಂದೂ ಭಾವಿಸುವಂತೆ ಮಾಡಿರುವದು ಅವಿದ್ಯೆ. ನಮ್ಮಲ್ಲಿರುವ

ದೋಷಗಳೂ ಗುಣಗಳೆಂದೂ ಅನ್ಯರಲ್ಲಿರುವ ಗುಣಗಳೂ ದೋಷಗಳೆಂದೂ ಎಣಿಸುವಂತೆ ಮಾಡುವದು ಅವಿದ್ಯೆ. ದೋಷಯುಕ್ತವೆಂದು ನಾವು ಎಣಿಸಿರುವ ವಸ್ತುಗಳನ್ನೂ ಜೀವರನ್ನೂ ಹಗೆಮಾಡುವಂತೆಯೂ ಗುಣಯುಕ್ತವೆಂದು ನಾವು ತಿಳಿಯುವ ವಸ್ತುಗಳನ್ನೂ ಜೀವರನ್ನೂ ಪ್ರೀತಿಸುವಂತೆಯೂ ಪ್ರೇರಿಸುತ್ತಿರುವದು ಅವಿದ್ಯೆ. ಬೇಕಿಲ್ಲದ ವಸ್ತುಗಳನ್ನೂ ಜನರನ್ನೂ ಪರಿಹರಿಸಿಕೊಳ್ಳುವದಕ್ಕೂ ಬೇಕಾಗಿರುವ ವಸ್ತುಗಳನ್ನೂ ಜನರನ್ನೂ ಬರಮಾಡಿಕೊಳ್ಳುವದಕ್ಕೂ ಪ್ರಯತ್ನವನ್ನು ಮಾಡಿಸುವದು ಅವಿದ್ಯೆ. ಬೇಕಾದದ್ದು ಸಿಕ್ಕಿದರೆ ಸುಖವಾಯಿತೆಂದು ಸಿಕ್ಕದಿದ್ದರೆ ದುಃಖವಾಯಿತೆಂದೂ, ಹೀಗೆಯೇ ಬೇಡವಾದದ್ದು ಬಂದೊದಗಿದರೆ ದುಃಖವಾಯಿತೆಂದೂ ತೊಲಗಿದರೆ ಸುಖವಾಯಿತೆಂದೂ ನಮಗೆ ಭ್ರಮೆಯನ್ನುಂಟುಮಾಡುತ್ತಿರುವದೂ ಅವಿದ್ಯೆಯೇ! ಈ ಅವಿದ್ಯೆಗೂ ಇದರ ವಿಲಾಸವಾದ ಅನರ್ಥಗಳಿಗೂ ಮೊದಲಿಲ್ಲ, ತುದಿಯಿಲ್ಲ, ಹೀಗೆ ಒಂದೇ ಸಮನೆ ಹರಿಯುತ್ತಿರುವ ಅನರ್ಥ ಪ್ರವಾಹವೇ ನಾವು ವ್ಯವಹಾರವೆಂದು ಕರೆಯುತ್ತಿರುವದು!

ಅವಿದ್ಯೆಯಿಂದ ನಮಗೆ ಆಗಿರುವ ಈ ಅನರ್ಥಸಂತತಿಯನ್ನು ದೀರ್ಘಕಾಲದವರೆಗೆ ತೋರಿಕೊಳ್ಳುತ್ತಿರುವ ಒಂದು ಕನಸಿಗೆ ಹೋಲಿಸಬಹುದು. ಕನಸು ತೋರಿಕೊಳ್ಳುವಷ್ಟು ಕಾಲವೂ ತಾನು ಕನಸೆಂಬುದನ್ನು ಮನದಂದುಕೊಳ್ಳುವದಕ್ಕೆ ನಮಗೆ ಇಂಬುಗೊಡುವದಿಲ್ಲ, ಅದರಲ್ಲಿ ಕಾಣುವ ವಸ್ತುಗಳೂ ಜನರೂ ನಮಗೆ ತೋರುತ್ತಿರುವಂತೆಯೇ ನಿಜವಾಗಿ ಆಯಾ ಗುಣದೋಷಗಳಿಂದ ಕೂಡಿಕೊಂಡೇ ಇರುವಂತೆ, ಮತ್ತು ನಮ್ಮ ಸುಖದುಃಖಗಳಿಗೆ ಕಾರಣವಾಗಿಯೇ ಇರುವಂತೆ, ನಮಗೆ ದೃಢವಾದ ನಂಬಿಕೆಯನ್ನು ಉಂಟುಮಾಡುತ್ತಿರುವದು. ಆದರೆ ನಮಗೆ ಯಾವದಾದರೊಂದು ನಿಮಿತ್ತದಿಂದ ಎಚ್ಚರವಾಗುವದೇ ತಡ, ಕೂಡಲೆ ಅದೆಲ್ಲವೂ ಗಂಧರ್ವನಗರದಂತೆ ಮೈಗರೆದು ಬಿಡುತ್ತದೆ. ಅಲ್ಲವೆ? ಇದರಂತೆಯೇ ಮಾಯಾಮಯವಾದ ಅನಾದ್ಯನಂತವಾದ ಅನರ್ಥಮಯವಾದ ಈ ಸಂಸಾರವೂ ಬ್ರಹ್ಮವಿದ್ಯೆಯು ಉದಯವಾಗುತ್ತಲೂ ಸ್ವಲ್ಪವೂ ಉಳಿಯದಂತೆ ತನ್ನ ತೋರಿಕೆಯ ಶರೀರವನ್ನು ಉಪಸಂಹಾರಮಾಡಿಕೊಂಡು ಬಿಡುವದು. ಅಖಂಡಸಚ್ಚಿದಾನಂದಸ್ವರೂಪವಾದ ಪರಮಾತ್ಮವಸ್ತುವೊಂದೇ ಪರಮಾರ್ಥವಾಗಿ ಸತ್ಯವಾಗುವದೆಂದೂ ನಮ್ಮಲ್ಲಿ ಅವಿದ್ಯೆಯ ನಿದ್ರೆಯಾಗಲಿ ಆ ನಿದ್ರೆಯಲ್ಲಿ ಕಾಣುತ್ತಿದ್ದ ಅನರ್ಥರೂಪವಾದ ಸ್ವಪ್ನವಾಗಲಿ ಹಿಂದೆ ಇರಲಿಲ್ಲ, ಇಂದು ಇಲ್ಲ, ಮುಂದೆ ಎಂದಿಗಾದರೂ ಕಾಣಿಸುವ ಸಂಭವವೂ ಇಲ್ಲ– ಎಂದೂ ನಿಸ್ಸಂದಿಗ್ಧವಾಗಿ ಗೊತ್ತಾಗಿಬಿಡುವದು.

ಅವಿದ್ಯೆಯು ಎಷ್ಟೋ ಅನರ್ಥಗಳನ್ನು ಹಡೆಯುತ್ತಿರಲಿ, ಅದು ಪರಮಾರ್ಥವಾಗಿರುವದಿಲ್ಲವೆಂಬುದೇ ನಿಜವಾದ ವಿದ್ಯೆ. ನಾಶವಾಗದ ಅವಿದ್ಯೆಯಿಲ್ಲ, ಹುಟ್ಟದೆ ಇರುವ ವಿದ್ಯೆಯಿಲ್ಲ - ಎಂಬ ಪರಮಾರ್ಥವು ಬ್ರಹ್ಮವಿದ್ಯೆಯು ತಲೆದೋರಿದ ಕೂಡಲೆ ತಿಳಿದುಬಿಡುವದೆಂದು ದೊಡ್ಡವರೆನ್ನುತ್ತಾರೆ. ಇದು ಹೇಗೆಂಬುದನ್ನು ತಿಳಿಸುವದಕ್ಕೆ ಪ್ರಯತ್ನಿಸುವೆನು.

ಖಖಖಖಖ

# ಬ್ರಹ್ಮಜ್ಞಾನ

ಬ್ರಹ್ಮವಿದ್ಯೆಗೆ ಅಡ್ಡಿಯಾಗಿ ಇರುವ ಅವಿದ್ಯೆಯ ಸ್ವರೂಪವನ್ನೂ ಅದರಿಂದಾಗುತ್ತಿರುವ ಅನರ್ಥಗಳನ್ನೂ ಹಿಂದೆ ತಿಳಿಸಿರುತ್ತೇನೆ. ಈಗ ಬ್ರಹ್ಮವಿದ್ಯೆಯ ಸ್ವರೂಪವನ್ನೂ ಅದರಿಂದಾಗುವ ಪ್ರಯೋಜನವನ್ನೂ ತಿಳಿದುಕೊಳ್ಳುವದಕ್ಕೆ ಸಮಯವಾಗಿರುತ್ತದೆ.

ಬ್ರಹ್ಮವಿದ್ಯೆ, ಬ್ರಹ್ಮಜ್ಞಾನ - ಈ ಎರಡೂ ಒಂದೇ ಅರ್ಥದ ಮಾತುಗಳು. ಬ್ರಹ್ಮದ ವಿಷಯಕ್ಕೆ ಪುಸ್ತಕಗಳಲ್ಲಿ ಹೇಳಿರುವ ಮಾತುಗಳನ್ನು ತಿಳಿದುಕೊಂಡರೆ, ಅಥವಾ ಅಲ್ಲಿ ಹೇಳಿರುವ ವಾಕ್ಯಗಳ ತಾತ್ಪರ್ಯವನ್ನು - ಪುಸ್ತಕದಲ್ಲಿ ಹೀಗೆಂದು ಹೇಳಿದೆ - ಎಂದು ಗೊತ್ತುಪಡಿಸಿಕೊಂಡರೆ ಅಷ್ಟು ಮಾತ್ರದಿಂದ ಬ್ರಹ್ಮಜ್ಞಾನವಾದಂತಲ್ಲ, ಇದು ಬ್ರಹ್ಮಜ್ಞಾನ ವಾಕ್ಯಗಳ ಜ್ಞಾನ. ಬ್ರಹ್ಮವೆಂಬುದು ನಮ್ಮಗಳೆಲ್ಲರ ಆತ್ಮನೇ ಎಂದು ಈ ಮೊದಲೇ ತಿಳಿಸಿರುತ್ತೇನೆ. ನಮ್ಮಗಳೆಲ್ಲರಿಗೂ ಒಬ್ಬನೇ ಆತ್ಮನೇ ಇರುತ್ತಾನೆ ಎಂಬುದನ್ನು, ನಮ್ಮ ದೇಹವನ್ನು ನಾನು ಎಂದುಕೊಂಡಿರುವಂತೆ ಈ ಆತ್ಮನೇ ನಾನು ಎಂಬುದನ್ನು, ಕಂಡುಕೊಂಡರೆ ಬ್ರಹ್ಮಜ್ಞಾನವಾಯಿತು.

**"ಅಥಾತೋ ಬ್ರಹ್ಮಜಿಜ್ಞಾಸಾ"** ಎಂಬ ಬ್ರಹ್ಮಸೂತ್ರದಲ್ಲಿ ಜಿಜ್ಞಾಸಾ ಎಂದರೆ ಜ್ಞಾನಕ್ಕಾಗಿ ಇಚ್ಛೆಯೆಂದು ಶಬ್ದಾರ್ಥವಾಗುತ್ತದೆ. ಈ ಮಾತಿನ ಅಭಿಪ್ರಾಯವನ್ನು ವಿವರಿಸುವಾಗ ಶಂಕರಾಚಾರ್ಯರವರು ಹೇಳಿರುವದೇನೆಂದರೆ; "ಅವಗತಿಯಲ್ಲಿ ಕೊನೆಗಾಣುವ ಜ್ಞಾನವು ಇಚ್ಛೆಗೆ ವಿಷಯವಾಗಿರುತ್ತದೆಯೇ ಹೊರತು ಬರಿಯ ಜ್ಞಾನವಲ್ಲ; ಏಕೆಂದರೆ ಇಚ್ಛೆಗೆ ಫಲವೇ ವಿಷಯವು. ಜ್ಞಾನವೆಂಬ ಪ್ರಮಾಣದಿಂದ ಬ್ರಹ್ಮದ ಅವಗತಿಯನ್ನು ಮಾಡಿಕೊಳ್ಳಬೇಕೆಂಬುದೇ ನಮಗೆ ಬೇಕಾದದ್ದು. ಏಕೆಂದರೆ ಬ್ರಹ್ಮದ ಅವಗತಿಯೇ ಪುರುಷಾರ್ಥವು, ಅದೇ ನಿಶ್ಶೇಷವಾಗಿ ಅವಿದ್ಯೆಯೇ ಮುಂತಾದ ಅನರ್ಥ

ಬೀಜಗಳನ್ನು ಹುರಿದು ಹಾಕುತ್ತದೆ' ಆ ಆಚಾರ್ಯರ ಈ ವಾಕ್ಯದ ಅಭಿಪ್ರಾಯವನ್ನು ಬಿಡಿಸಿ ತಿಳಿದುಕೊಳ್ಳುವದು ಅವಶ್ಯವು. ಏಕೆಂದರೆ ಬ್ರಹ್ಮಜ್ಞಾನವೆಂದರೇನೆಂಬುದು ನಮಗೆ ಅದರಿಂದ ಮನದಟ್ಟಾಗುತ್ತದೆ. ಜ್ಞಾನ ಎಂಬುದು ಪ್ರಮಾಣವು, ಅವಗತಿ ಎಂಬುದು ಅದರ ಫಲವು, ಉದಾಹರಣೆಗೆ ಕಿವಿಯಿಂದ ನಮಗೆ ಯಾವದೋ ಧ್ವನಿಯುಂಟಾಗುತ್ತಿದೆ ಎಂಬ ಅರಿವಾಯಿತೆಂದು ಇಟ್ಟುಕೊಳ್ಳಿ. ಇಲ್ಲಿ ಕಿವಿಯು ಪ್ರಮಾಣವು; ಈ ಪ್ರಮಾಣ ದಿಂದ ನಮಗೆ ಧ್ವನಿಯ ಅರಿವು ಆಗುತ್ತದೆ. ಆ ಅರಿವು ಫಲವು. ಒಂದು ವೇಳೆ ಇದು ದೇವಾಲಯದಲ್ಲಿರುವ ನಗಾರಿಯ ಶಬ್ದವು; ಇದು ಅಲ್ಲಿ ದೇವರಿಗೆ ಮಂಗಳಾರತಿ ಯಾಗುವದೆಂಬುದನ್ನು ಸೂಚಿಸುತ್ತದೆ' ಎಂಬ ತಿಳಿವಳಿಕೆಯು ನಮಗೆ ಈ ಜ್ಞಾನದಿಂದ ಆಯಿತೆಂದು ಇಟ್ಟುಕೊಳ್ಳಿ. ಆಗ ಜ್ಞಾನವೇ ಪ್ರಮಾಣವು. 'ಮಂಗಳಾರತಿಯ ನಗಾರಿಯ ಧ್ವನಿಯದು' ಎಂಬ ಅರಿವು ಫಲವು ಆ ಫಲದಿಂದಲೇ ನಮಗೆ ಪ್ರಯೋಜನವಾಗು ವದೇ ಹೊರತು ಬರಿಯ ಧ್ವನಿಯ ಜ್ಞಾನದಿಂದ ನಮಗೆ ಇಷ್ಟವಾದ ಪ್ರಯೋಜನವಾಗು ವದಿಲ್ಲ, ಏಕೆಂದರೆ ದೇವಾಲಯಕ್ಕೆ ಹೋಗಿ ದೇವರ ಮಂಗಳಾರತಿಯನ್ನು ನೋಡುವ ದೆಂಬ ಪ್ರಯೋಜನವು. 'ಇದು ಮಂಗಳಾರತಿಯ ನಗಾರಿಯ ಧ್ವನಿ' ಎಂಬ ಅರಿವಿ ನಿಂದಲೇ ಆಗುತ್ತದೆ. ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಿ; ನಮಗೆ ಬಹಳ ಹಸಿವಾಗಿರುವಾಗ, ಅನ್ನವನ್ನುಂಡರೆ ಹಸಿವು ಅಡಗುವದು' ಎಂಬ ವಾಕ್ಯವನ್ನು ಓದಿದರೆ ಆ ವಾಕ್ಯಜ್ಞಾನದಿಂದ ಹಸಿವು ಇಂಗಲಾರದು, ಆದರೆ ಆ ಜ್ಞಾನವನ್ನು ಸಾಧನವಾಗಿ ಮಾಡಿಕೊಂಡರೆ, ನಾವು ಕೂಡಲೆ ಅನ್ನವನ್ನುಂಡರೆ, ಹಸಿವು ಅಡಗುವದು. ಇಲ್ಲಿ ವಾಕ್ಯ ಜ್ಞಾನವು ಸಾದನವಾದರೂ ನಮಗೆ ಬೇಕಾದದ್ದು ಬರಿಯ ಜ್ಞಾನವಲ್ಲ, ಅನ್ನದ ಊಟ; ಅದರಿಂದಲೇ ನಮಗೆ ಪ್ರಯೋಜನವಾಗುತ್ತದೆ. ಅಲ್ಲವೆ? ಇದರಂತೆ ಉಪನಿಷತ್ತುಗಳಲ್ಲಿ ನಮ್ಮಗಳೆಲ್ಲರ ಆತ್ಮನೇ ಬ್ರಹ್ಮವೆಂದು ಹೇಳಿರುವ ವಾಕ್ಯದ ಅಭಿಪ್ರಾಯವು ನಮಗೆ ಗೊತ್ತಾಗುವದಿಷ್ಟೇ ಸಾಲದು. ಆ ಜ್ಞಾನದಿಂದ ನಮಗೆ "ಇಗೋ, ಇದೇ ನಮ್ಮಗಳೆಲ್ಲರ ಆತ್ಮನು" ಎಂದು ನೇರಾಗಿ ಅನುಭವವಾಗಿಬಿಡಬೇಕು. ಆಗಲೇ ನಮಗೆ ಅವಿದ್ಯೆಯಿಂದಾ ಗಿರುವ ಅನರ್ಥಗಳೆಲ್ಲವೂ ತೊಲಗಿ ನಮ್ಮ ಪರಮಾರ್ಥಸ್ವರೂಪದಲ್ಲಿ ನಿಲ್ಲುವದೆಂಬ ಪರಮಪುರುಷಾರ್ಥವು ದೊರಕುವದು. ಈ ನೇರಾದ ಅನುಭವವನ್ನೇ ಬ್ರಹ್ಮದ ಅವಗತಿ ಎಂದು ಶಂಕರಾಚಾರ್ಯರವರು ಕರೆದಿರುವರು. ಈ ಸಾಕ್ಷಾತ್ಕಾರಜ್ಞಾನವನ್ನು ಬಯಸಿ, ಅದಕ್ಕಾಗಿ ವಿಚಾರವನ್ನು ಮಾಡುವದೇ ಬ್ರಹ್ಮಜಿಜ್ಞಾಸೆಯು.

ಈ ಬ್ರಹ್ಮಜ್ಞಾನವೆಂಬುದು ಅಂತಃಕರಣದ ಒಂದಾನೊಂದು ಸ್ಥಿತಿಯು ಬಂದಾಗ

ಮಾತ್ರವೇ ದೊರಕುತ್ತದೆ. ಈಗ ನಮ್ಮ ಅಂತಃಕರಣದಲ್ಲಿರುವ ದೋಷಗಳಿಂದ ಮಸಿ ಹಚ್ಚಿರುವ ಮಬ್ಬುಗನ್ನಡಿಯಿಂದ ನೋಡಿದ ವಸ್ತು ಇದ್ದಂತೆ ಕಾಣುವದಕ್ಕೆ ಅಡ್ಡಿಯಾಗಿರುವಂತೆ, ಅಥವಾ ಉಬ್ಬುಗನ್ನಡಿಯಿಂದಲಾಗಲಿ ಗುಂಡಿಗನ್ನಡಿಯಿಂದಲಾಗಲಿ ನೋಡಿದಾಗ ವಸ್ತು ತಾನಿರುವದಕ್ಕೆ ವಿಪರೀತವಾಗಿಯೇ ಕಾಣುವಂತೆ ಬ್ರಹ್ಮದ ವಿಷಯದಲ್ಲಿ ನಮಗೆ ಸರಿಯಾದ ತಿಳಿವಳಿಕೆಯಾಗಿರುವದಿಲ್ಲ; ಅದು ಹಾಗೆ ಇರುವದೊ, ಹೀಗೆ ಇರುವದೋ? ಎಂಬ ಸಂಶಯವು ನಮ್ಮನ್ನು ತೂಗಾಡಿಸುತ್ತಿರುವದು; ಅಷ್ಟೇ ಅಲ್ಲ, ಅದು ನಮ್ಮ ಆತ್ಮನೇ ಆದರೂ ಅದರಲ್ಲಿಲ್ಲದ ಸಂಸಾರಾನರ್ಥಗಳು ಅದಕ್ಕೆ ಗಂಟು ಬಿದ್ದಿರುವಂತೆ ತೋರುತ್ತಿರುತ್ತದೆ. ಇದನ್ನೇ ನಾವು **ಅವಿದ್ಯೆ** ಎಂದು ಕರೆದಿರುವದು. ಒಂದೇ ಪಾತ್ರೆಯು ಒಂದು ಕಾಲದಲ್ಲಿ ಕಿಲುಬು ಹಿಡಿದಿದ್ದರೆ ಮತ್ತೊಂದು ಕಾಲದಲ್ಲಿ ತೊಳೆದಾಗ ಥಳಗುಟ್ಟುವಂತೆ, ಅಥವಾ ಪುಟಕ್ಕಿಟ್ಟ ಚಿನ್ನವು ಕಲ್ಮಷವನ್ನು ತೊಳೆದು ಚೊಕ್ಕ ಬಂಗಾರವಾಗುವಂತೆ, ಅಥವಾ ಹಗಲು ಸೂರ್ಯನ ಬೆಳಕಿಗೆ ಮಂಕಾಗಿದ್ದ ನಕ್ಷತ್ರಗಳು ರಾತ್ರಿಯಾಗುತ್ತಲೂ ಅಡ್ಡಿಯಾವದೂ ಇಲ್ಲದೆ ಹೊಳೆಯುವಂತೆ, ಇದೇ ಅಂತಃಕರಣವು ಅವಿದ್ಯೆಯ ಸ್ಥಿತಿಯಿಂದ ವಿದ್ಯೆಯ ಸ್ಥಿತಿಗೆ ಬರುತ್ತದೆ. ಈ ದೃಷ್ಟಾಂತಗಳಲ್ಲಿ ಹೇಳಿರುವ ವಸ್ತುಗಳೆಲ್ಲವೂ ಸ್ಥೂಲವಾಗಿದ್ದು ಸಾವಯವವಾಗಿರುವದರಿಂದ, ಒಂದು ಪಾತ್ರೆಯು ಅರ್ಧಕಿಲುಬು ಹಿಡಿದು ಅರ್ಧ ಹೊಳೆಯಬಹುದು. ಚಿನ್ನವು ಕಲ್ಮಷವೂ ಸ್ವಲ್ಪ ಉಳಿದುಕೊಂಡು ಮೊದಲಿಗಿಂತ ಎರಡು ಬಣ್ಣ ಹೆಚ್ಚಾಗಿರುವಂತಾಗಬಹುದು; ನಕ್ಷತ್ರವು ಸ್ವಲ್ಪವೂ ತೋರದೆ ಇದ್ದ ಸ್ಥಿತಿಯಿಂದ ಸ್ವಲ್ಪ ಸ್ವಲ್ಪ ಮಿನುಗುಟ್ಟುವ ಅವಸ್ಥೆಗೂ ಬರಬಹುದು. ಆದರೆ ಸೂಕ್ಷ್ಮವಾಗಿರುವ ಅಂತಃಕರಣವು ಒಂದೊಂದು ಕಾಲದಲ್ಲಿ ಒಂದೊಂದೇ ವೃತ್ತಿಯನ್ನು ಪಡೆದು ಪೂರ್ಣವಾಗಿ ಮಾರ್ಪಡುವದ್ದರಿಂದ ಅದಕ್ಕೆ ಅರ್ಧ ಅಜ್ಞಾನ, ಅರ್ಧ ಜ್ಞಾನ – ಹೀಗೆ ಇರುವ ಸಂಭವವೇ ಇಲ್ಲ, ಬ್ರಹ್ಮವಿದ್ಯೆಯು ಬಂದ ಕೂಡಲೆ ಅವಿದ್ಯೆಯು ಒಂದಿಷ್ಟೂ ಉಳಿಯದಂತೆ ಹೇಳಹೆಸರಿಲ್ಲವಾಗಿಬಿಡುವದು.

ಬ್ರಹ್ಮವೆಂಬುದು ನಮ್ಮಗಳ ಆತ್ಮನೇ ಆದರೆ, ನಿಜವಾದ ನಮ್ಮ ಸ್ವರೂಪವೇ ಆದರೆ, ಅದನ್ನು ಅರಿತುಕೊಳ್ಳುವದು ಹೇಗೆ ಸಾಧ್ಯ? ಅರಿತುಕೊಳ್ಳುವವನು ಯಾವನೇ ಆಗಿರಲಿ, ತನಗಿಂತ ಬೇರೆಯಾದ ವಸ್ತುವನ್ನು ತನ್ನ ಅರಿವಿಗೆ ವಿಷಯವಾಗಿರಿಸಿಕೊಳ್ಳಬಹುದೇ ಹೊರತು ತನ್ನನ್ನು ತಾನು ಅರಿಯುವದೆಂದರೇನು? ಒಂದು ನಾಯಿ ತನ್ನ ಮೋಟು ಬಾಲವನ್ನು ತಾನೇ ಕಚ್ಚಬೇಕೆಂದು ಗರಗರನೆ ಎಷ್ಟು ಸಲ ಸುತ್ತಿದರೆ ತಾನೆ ಬಾಲವು ಅದಕ್ಕೆ ಸಿಕ್ಕೀತೆ? ಹೀಗೆಂದು ಕೆಲವರಿಗೆ ಶಂಕೆಯುಂಟಾಗಬಹುದು. ಇದಕ್ಕೆ

ಪರಿಹಾರವೇನೆಂದರೆ; ಇಲ್ಲ, ನಮ್ಮನ್ನು ನಾವೇ ಅರಿಯುವದೆಂಬುದು ಸಾಧ್ಯವಿಲ್ಲ; ಆದರೆ ತನ್ನನ್ನು ತಾನು ಅರಿಯಬೇಕಾದ ಅವಶ್ಯಕತೆಯೂ ಇಲ್ಲ. ಏಕೆಂದರೆ ತಾನು ಮೊದಲು ಸಿದ್ಧವಾಗಿದ್ದರಲ್ಲವೆ, ಅರಿಯತಕ್ಕ ವಸ್ತುಗಳನ್ನು ಅರಿಯುವದಕ್ಕೆ ಹೊರಡುವದು? ಮತ್ತೆ ಯಾವ ಅನಾತ್ಮ ವಸ್ತುವನ್ನಾದರೂ ಅರಿಯದೆ ಇರಬಹುದು, ಅರಿಯುವದಕ್ಕೆ ಹೊರಡಬಹುದು; ಅದರ ವಿಷಯದಲ್ಲಿ ಅದು ಇದೆಯೊ, ಇಲ್ಲವೊ – ಎಂದು ಸಂಶಯ ಪಡಬಹುದು, ಅಥವಾ ಚೆನ್ನಾಗಿ ವಿಚಾರಮಾಡಿ ಅದು ಇದೆಯೆಂದಾಗಲಿ, ಇಲ್ಲವೆಂದಾಗಲಿ ನಿಶ್ಚಿಯಿಸಲೂಬಹುದು. ಆದರೆ ನಮ್ಮಗಳ ಸ್ವರೂಪವೇ ಆಗಿರುವ ಬ್ರಹ್ಮದ ವಿಷಯದಲ್ಲಿ ಹಾಗಲ್ಲ. ಅದು ತಾನೇ ತನ್ನಿಂದಲೇ, ಮತ್ತೊಂದು ಸಾಧನವನ್ನು ಬಯಸದೆಯೇ ಸಿದ್ಧವಾಗಿರುತ್ತದೆ. ಆದರೂ "ಆತ್ಮವನ್ನು ನಾವು ಅರಿಯೆವು. ಆತ್ಮ ಸ್ವರೂಪದ ವಿಷಯಕ್ಕೆ ನನಗೆ ಸಂಶಯವುಂಟಾಗಿದೆ" ಎಂದು ಜನರು ಹೇಳುತ್ತಿರುವರು. ಇಂಥ ಅಜ್ಞರ ದೃಷ್ಟಿಯನ್ನೇ ಇಟ್ಟುಕೊಂಡು "ನಿಜ, ಈಗ ನೀವು ಅರಿತಿಲ್ಲ; ಆದರೆ ಚೆನ್ನಾಗಿ ವಿಚಾರವನ್ನು ಮಾಡಿನೋಡಿರಿ, ಆಗ ನಿಮ್ಮ ಸ್ವರೂಪದ ಅರಿವು ನಿಮಗೆ ಸ್ಪಷ್ಟವಾಗಿ ಆಗುವದು'' ಎಂದು ಶಾಸ್ತ್ರವೂ ಗುರುಗಳೂ ಹೇಳುವರು. ಅಜ್ಞರ ದೃಷ್ಟಿಯಿಂದ ಅವಿದ್ಯೆಯಿದೆ, ವಿದ್ಯೆಯು ಅದನ್ನು ತೊಲಗಿಸುತ್ತದೆ. ಪರಮಾರ್ಥದೃಷ್ಟಿಯಿಂದ ನೋಡಿದರೆ ವಿದ್ಯೆಯೂ ಇಲ್ಲ ಅವಿದ್ಯೆಯೂ ಇಲ್ಲ; ಇವು ಇದೆಯೆಂದಾಗಲಿ, ಅವಿದ್ಯೆಯು ವಿದ್ಯೆಯಿಂದ ತೊಲಗುವದೆಂದಾಗಲಿ ಭಾವಿಸುವದೇ ಭಾರಿಯ ಅವಿದ್ಯೆ.

ಆದರೆ ಒಂದು ಎಚ್ಚರಿಕೆಯ ಮಾತನ್ನು ಆಡಬೇಕಾಗಿದೆ. ವಿದ್ಯೆಯಾಗಲಿ ಅವಿದ್ಯೆಯಾಗಲಿ ಯಾವ ಅನುಭವವನ್ನೂ ನಮ್ಮ ಅಂತಃಕರಣದಲ್ಲಿ ಮಾಡುವದೇ ಇಲ್ಲವೆಂದು ತಿಳಿಯಬಾರದು. "ಬಂಜೆಯ ಮಗನು ಸತ್ತನು" ಎಂಬ ದುಃಖದಿಂದ ಅಳುತ್ತಿದ್ದ ಅವಿವೇಕಿಗೆ 'ಬಂಜೆಗೆ ಮಗನಿರುವದಿಲ್ಲ' ಎಂಬ ತಿಳಿವಳಿಕೆಯನ್ನು ಕೊಟ್ಟು ಸಮಾಧಾನ ಮಾಡುವಂತೆ ಯಾವ ಅವಿದ್ಯೆಯ ಅನರ್ಥವನ್ನೂ ಕಾಣದೆ ಇರುವ ಮನಸ್ಸಿಗೆ 'ಅನರ್ಥಗಳಿಲ್ಲ' ಎಂಬ ಉಪದೇಶದಿಂದ ಸಮಾಧಾನವನ್ನು ಮಾಡುವಂಥ ಜ್ಞಾನವಿದೆಯೆಂದು ಯೋಚಿಸಬಾರದು. ಜನರು ಹಗ್ಗವನ್ನು ಹಾವೆಂದು ತಿಳಿದು ನಡುಗುತ್ತಿರುವಾಗ, ಅಥವಾ ಕನಸಿನಲ್ಲಿ ಸಾಹುಕಾರನಾದೆನೆಂದು ಹಿಗ್ಗುತ್ತಿರುವಾಗ; ಅವರಿಗೆ ಆಯಾ ಅನುಭವಗಳು ನಿಜವಾಗಿ ಮನಸ್ಸಿಗೆ ಬಿಗಿದುಕೊಂಡೇ ಇರತ್ತವೆ. ಆದರೂ ಅವು ಭ್ರಾಂತಿಗಳೇ ಹೊರತು ಪರಮಾರ್ಥವಲ್ಲ. ಹಗ್ಗದ ನಿಜವನ್ನು ಕಂಡುಕೊಂಡ ಕೂಡಲೆ ಅಥವಾ ಎಚ್ಚತ್ತ ಕೂಡಲೆ ನಿಜವಾದ ತಿಳಿವಳಿಕೆಯು ಬಂದು ಹಿಂದಿನ ತಿಳಿವಳಿಕೆಗಳ ಜೊಳ್ಳುತನವು ತಿಳಿಯುವ

ದಲ್ಲದೆ ಆಗ ತಮಗೆ ಆಗಿದ್ದ ಅಂಜಿಕೆ ಹಿಗ್ಗು ಇವುಗಳು ನಿರಾಧಾರವಾದವುಗಳೆಂದು ಸ್ಫುಟವಾಗಿಬಿಡುತ್ತದೆ. ಕನಸಿನ ಅನುಭವಗಳಂತೂ ವಿಷಯಗಳಂತೆಯೇ ಬಾಧಿತವಾಗಿ ಅವುಗಳು ಕನಸಿನ ಕಾಲಕ್ಕೆ ನಿಜವಾಗಿದ್ದರೂ ಒಟ್ಟು ಕನಸೇ ಹುಸಿತೋರಿಕೆ ಎಂಬ ಅರಿವು ಆಗಿಬಿಡುತ್ತದೆ. ಇದರಂತೆಯೇ ಬ್ರಹ್ಮವಿದ್ಯೆಯಿಂದ ಅವಿದ್ಯೆಯ ಅನರ್ಥವೂ ಬಾಧಿತ ವಾಗುತ್ತದೆ; ಬಾಧಿತವಾಗುವವರೆಗೆ ಅವಿದ್ಯೆಯು ನಮ್ಮ ವ್ಯವಹಾರದಲ್ಲೆಲ್ಲ ತನ್ನ ಸಾಮರ್ಥ್ಯವನ್ನು ನಮಗೆ ಸಾಕ್ಷಾತ್ತಾಗಿ ತೋರಿಸಿಕೊಳ್ಳುತ್ತಲೇ ಇರುತ್ತದೆ. ಆದ್ದರಿಂದ ವ್ಯವಹಾರ ದೃಷ್ಟಿಯಿಂದ ನೋಡಿದರೆ ಅವಿದ್ಯೆಯು ಹುಸಿತಿಳಿವಳಿಕೆಯಾದರೂ ಅದು ನಮ್ಮನ್ನು ನಿಜವಾಗಿ ಗೋಳುಗುಟ್ಟಿಸುತ್ತಿದೆ; ಬ್ರಹ್ಮವಿದ್ಯೆಯೆಂಬುದು ಹುಸಿಯಾದರೂ ಅದುಸಂಸಾರದ ಅನರ್ಥಗಳನ್ನು ನಿಜವಾಗಿಯೂ ಹೋಗಲಾಡಿಸುತ್ತದೆ. ಅಧ್ಯಾತ್ಮ ಗೀತಾವಳಿಯಲ್ಲಿರುವ ಈ ಹಾಡನ್ನು ಓದುಗರು ಈ ದೃಷ್ಟಿಯಿಂದ ಪೂರ ಓದುವದು ಇಲ್ಲಿ ಸಹಾಯಕವಾದೀತು :

ರಾಗ – ಮೋಹನ ಆದಿತಾಳ

ಇಲ್ಲದವಿದ್ಯೆಯಿದು । ಜಗದೊಳ । ಗೆಲ್ಲರ ಬಾಧಿಪುದು ॥ ಪ ॥
ಇಲ್ಲದ ವಿದ್ಯೆಯನುಳ್ಳದ ಮಾಡುತ । ಬೆಲ್ಲವ ಕಹಿಯೆಂದೊಲ್ಲದೆ
ಕೊರಗುವ । ರಿಲ್ಲದ ವಿದ್ಯೆಯಿದು ॥ಅ॥
ಕನಸಿದೆಚ್ಚರೆಂಬ । ಭೇದವನೇ । ತನಗಿದಿರೊಳು ಕಾಂಬ
ಇನಿಸತಿಶಯವಿರದನುಪಾಧಿಕದರಿ । ವಿನಲಿರುವೆನಗೇ ಘನತರ
ತಮವೆಂ । ಬಿಲ್ಲದವಿದ್ಯೆಯಿದು ॥೧॥

# ಬ್ರಹ್ಮಜ್ಞಾನದ ಪ್ರಯೋಜನ

ಬ್ರಹ್ಮಜ್ಞಾನದ ಸ್ವರೂಪವನ್ನೂ ತತ್ತ್ವವನ್ನೂ ವಿವರಿಸಿದ್ದಾಗಿದೆ. ಬ್ರಹ್ಮಜ್ಞಾನವು ಅಜ್ಞಾನವನ್ನು ಸಂಪೂರ್ಣವಾಗಿ ನಾಶಪಡಿಸುತ್ತದೆಯಾದ್ದರಿಂದ ಅದರಿಂದಾಗುವ ಅನರ್ಥಗಳನ್ನೂ ತೊಲಗಿಸುತ್ತದೆ ಎಂದು ಹೇಳಿದ ಮೇಲೆ ಪ್ರಯೋಜನವನ್ನೂ ತಿಳಿಸಿ ಕೊಟ್ಟಂತೆಯೇ ಆಗಿದೆ; ಆದರೆ ಬ್ರಹ್ಮಜ್ಞಾನದಿಂದ ಅಜ್ಞಾನವೂ ಅದರ ಕಾರ್ಯವಾದ ಅನರ್ಥಗಳೂ ತೊಲಗಿದ ಮೇಲೆ ಮುಕ್ತನು ಯಾವ ಸ್ವರೂಪದಲ್ಲಿರುತ್ತಾನೆ? ಎಂಬು

ದನ್ನು ವಿವರಿಸುವದರ ಮೂಲಕ ಪ್ರಯೋಜನವನ್ನು ಇನ್ನಷ್ಟು ವಿಶದವಾಗಿ ತಿಳಿಸುವದಕ್ಕೆ ಪ್ರಯತ್ನಿಸುವೆನು.

ಬ್ರಹ್ಮವು ಸಚ್ಚಿದಾನಂದರೂಪವಾಗಿರುವದೆಂದು ವೇದಾಂತಿಗಳು ಹೇಳುತ್ತಾರೆ. ಬ್ರಹ್ಮವನ್ನು ಅರಿಯುವದೆಂದರೆ ಸಚ್ಚಿದಾನಂದಸ್ವರೂಪವಾದ ಬ್ರಹ್ಮವೇ ನಾನು ಎಂದು ಅರಿತುಕೊಳ್ಳುವದು. ಹೀಗೆ ಅರಿತುಕೊಂಡಕೂಡಲೆ ಅಸದ್ರೂಪವಾದ ಅಜ್ಞಾನರೂಪವಾದ, ಅನಾನಂದರೂಪವಾದ ಅನಾತ್ಮದಲ್ಲಿ ನಾನೆಂಬ ಬುದ್ಧಿಯು ಹೋಗಿಬಿಡುವದು. ಲೋಕದಲ್ಲಿ ಸತ್ಯವೆಂದೂ ಜ್ಞಾನವೆಂದೂ ಆನಂದವೆಂದೂ ನಾವು ಕರೆಯುವ ಪದಾರ್ಥವು ಪರಿಚ್ಛಿನ್ನವಾಗಿರುತ್ತದೆ; ಆದರೆ ಬ್ರಹ್ಮವು ನಿರವಧಿಕವಾಗಿ ಸತ್ಯವಾಗಿರುತ್ತದೆ, ಜ್ಞಾನಸ್ವರೂಪವಾಗಿರುತ್ತದೆ, ಆನಂದಸ್ವರೂಪವಾಗಿರುತ್ತದೆ. ಇದನ್ನು ತಿಳಿಸುವದಕ್ಕೆ ಬ್ರಹ್ಮವು 'ಅನಂತ'ವೆಂದು ಉಪನಿಷತ್ತಿನಲ್ಲಿ ಹೇಳಿರುತ್ತದೆ.

ಈ ಅಭಿಪ್ರಾಯವನ್ನು ಸ್ವಲ್ಪ ಹಿಗ್ಗಿಸಿ ನೋಡುವದಕ್ಕೆ ಪ್ರಯತ್ನಿಸೋಣ. ಲೋಕದಲ್ಲಿ ನಮಗೆ ಯಾವ ವಸ್ತುವನ್ನು ಕಂಡರೂ ನಮಗೆ ಅದು 'ಸತ್ತು' (ಇರುವದು) ಎಂದೇ ತೋರುವದು. ಭ್ರಾಂತಿಯಿಂದ ತೋರುವ ಶುಕ್ತಿರಜತ (ಕಪ್ಪೆಯ ಚಿಪ್ಪಿನ ಬೆಳ್ಳಿ), ರಜ್ಜುಸರ್ಪ (ಹಗ್ಗದ ಹಾವು), ಮೃಗಮರೀಚಿಕಾಜಲ (ಬಿಸಿಲು ಕುದುರೆಯ ನೀರು) ಇವು ಕೂಡ ತೋರುವಾಗ ಇರುವ ಬೆಳ್ಳಿ, ಇರುವ ಹಾವು, ಇರುವ ಜಲ ಎಂದೇ ತೋರುತ್ತಿರುವವು. ಆದರೆ ಸ್ವಲ್ಪ ಪರೀಕ್ಷೆ ಮಾಡಿ ನೋಡಿದರೆ ಇದು ಬೆಳ್ಳಿಯಲ್ಲ, ಕಪ್ಪೆಯ ಚಿಪ್ಪು; ಹಾವಲ್ಲ, ಹಗ್ಗ; ನೀರಲ್ಲ, ಬಿಸಿಲುಕುದುರೆ ಎಂಬ ಅರಿವು ಆಗುತ್ತದೆ. ಆದರೆ ಒಂದು ವಿಶೇಷ. ಆಗಲೂ ಇರುವ ಕಪ್ಪೆಯ ಚಿಪ್ಪು, ಇರುವ ಹಗ್ಗ, ಇರುವ ಬಿಸಿಲು ಕುದುರೆ - ಎಂದು ಇರವಿನಿಂದ ಕೂಡಿಕೊಂಡೇ ಶುಕ್ತ್ಯಾದಿಗಳು ನಮಗೆ ತೋರಿಕೊಳ್ಳುತ್ತಿರುವವು. ಆದ್ದರಿಂದಲೇ ಜನರು ಅದು ತೋರಿಕೆಯ ಬೆಳ್ಳಿ, ನಿಜವಾದ ಬೆಳ್ಳಿಯಲ್ಲ; ತೋರಿಕೆಯ ಹಾವು, ನಿಜವಾದ ಹಾವಲ್ಲ, ತೋರಿಕೆಯ ನೀರು, ನಿಜವಾದ ನೀರಲ್ಲ - ಎಂದು ತೋರಿಕೆಯ ವಸ್ತುಗಳನ್ನು ಬೇರ್ಪಡಿಸಿ ನಿಜವಾದ ವಸ್ತುಗಳನ್ನು ತೋರಿಸುತ್ತಾರೆ. ವ್ಯವಹಾರದಲ್ಲಿಯೇ ನಮಗೆ ಬರಿಯ ಹುಸಿತೋರಿಕೆ ಎಂದು ಗೊತ್ತಾಗುವ ವಸ್ತುಗಳನ್ನು ಅನೃತ, ಮಿಥ್ಯೆ, ಪ್ರಾತಿಭಾಸಿಕಸದ್ವಸ್ತು ಎಂದು ವೇದಾಂತಿಗಳು ಕರೆದಿರುತ್ತಾರೆ; ಈ ಶಬ್ದಗಳಿಗೆಲ್ಲ ಹುಸಿತೋರಿಕೆ ಎಂದೇ ಅರ್ಥ. ವ್ಯವಹಾರದಲ್ಲಿ ಇರುವದೆಂದೇ ತೋರುತ್ತಿರುವ ವಸ್ತುಗಳನ್ನು ವ್ಯಾವಹಾರಿಕಸತ್ಯವಾದ ವಸ್ತುಗಳೆಂದು ವೇದಾಂತಿಗಳು ಕರೆಯುತ್ತಾರೆ. ಆದರೆ ವ್ಯಾವಹಾರಿಕವಾಗಿ ಸತ್ಯವಾಗಿರಲಿ, ಪ್ರಾತಿಭಾಸಿಕವಾಗಿ ಸತ್ಯವಾಗಿರಲಿ, ವಸ್ತು

ಗಳಲ್ಲಿ ತೋರುವ ಸತ್ಯತ್ವವು ಎಲ್ಲಿಂದ ಬರುತ್ತದೆ? ಈ ಪ್ರಶ್ನೆಗೆ ಉಪನಿಷತ್ತಿನಲ್ಲಿರುವ ಉತ್ತರವೇನೆಂದರೆ: ''**ಸತ್ಯಂ ಚಾನೃತಂ ಚ ಸತ್ಯಮಭವತ್**''; ಸತ್ಯವಾಗಿರುವ ಬ್ರಹ್ಮವೇ, ಪರಮಾತ್ಮವಸ್ತುವೇ, ವ್ಯವಹಾರದಲ್ಲಿ ಸತ್ಯವೆಂದೂ ಅನೃತವೆಂದೂ ವಿಂಗಡವಾಗಿರುತ್ತದೆ. ಲೋಕದಲ್ಲಿ ಸತ್ಯವೆಂದು ನಾವು ವ್ಯವಹಾರಮಾಡುವ ಪದಾರ್ಥವಾಗಲಿ, ಸತ್ಯವೆಂದು ಭ್ರಾಂತಿಯಿಂದ ತೋರುವ ಪದಾರ್ಥವಾಗಲಿ ಅಳತೆಯ ಸತ್ಯತ್ವವುಳ್ಳದ್ದು; ಅದು ಎಲ್ಲಾ ದೇಶದಲ್ಲಿಯೂ ಎಲ್ಲಾ ಕಾಲದಲ್ಲಿಯೂ ಇರುವದಲ್ಲ, ಆತ್ಮನು ಮಾತ್ರ ಯಾವ ದೇಶದ, ಕಾಲದ ಅಥವಾ ವಸ್ತುವಿನ ಅವಧಿಯಿಲ್ಲದೆ ಅನಂತವಾಗಿ ಸತ್ಯವಾಗಿರುವ ವಸ್ತುವಾಗಿರುತ್ತಾನೆ. ಆದ್ದರಿಂದ ಅವನು ಪರಮಾರ್ಥ ಸತ್ಯವಾಗಿರುತ್ತಾನೆ. ಈ ಅರ್ಥದಲ್ಲಿ ಅನಾತ್ಮವು ಯಾವದೂ ಸತ್ಯವೇ ಅಲ್ಲ, ಎಲ್ಲವೂ ಅನೃತವೇ.

ಹೀಗೆಯೇ ಆತ್ಮನು ಅನಂತವಾದ ಜ್ಞಾನಸ್ವರೂಪನಾಗಿರುತ್ತಾನೆ. ಚೇತನವೆಂದೂ ಅಚೇತನವೆಂದೂ ವಿಂಗಡವಾಗಿರುವದೆಲ್ಲವೂ ಈ ಆತ್ಮವಸ್ತುವೇ. ಇರುವವೆಂದು ತೋರುವ ವಸ್ತುಗಳಲ್ಲಿ ಕಾಣಬರುವ ಸತ್ಯತ್ವವು ಆತ್ಮನಿಂದ ಬಂದಿರುವಂತೆಯೇ ಚೇತನವೆಂದು ತೋರುವ ವಸ್ತುಗಳಲ್ಲಿರುವ ಜ್ಞಾನವೂ ಆತ್ಮನಿಂದಲೇ ಬಂದಿರುತ್ತದೆ. ಆತ್ಮಸ್ವರೂಪವಾದ ಜ್ಞಾನಕ್ಕಿಂತ ಬೇರೆ ಯಾವ ಜ್ಞಾನವೂ ಇರುವದೇ ಇಲ್ಲ.

ಇದರಂತೆ ಆತ್ಮನೇ ಆನಂದಸ್ವರೂಪನಾಗಿರುತ್ತಾನೆ. ಲೋಕದಲ್ಲಿ ಕಾಣುವ ವಿಷಯಸುಖವೆಂಬುದೂ ಈ ಆನಂದದ ಆಭಾಸವೇ ಆಗಿರುತ್ತದೆ.

ನಮ್ಮ ಆತ್ಮನೇ ಆಗಿರುವ ಬ್ರಹ್ಮದಲ್ಲಿರುವ ಸತ್ಯಜ್ಞಾನಾನಂದರೂಪವನ್ನು ಅನಾತ್ಮವಸ್ತುಗಳಲ್ಲಿರುವಂತೆ ತಿಳಿಯುವದೇ ಅವಿದ್ಯೆ. ಈ ಅವಿದ್ಯೆಯನ್ನು ತೊಲಗಿಸಿಕೊಂಡು ತಿಳಿವಳಿಕೆಯಿಂದ ನಮ್ಮ ಸ್ವರೂಪದಲ್ಲಿ ನಾವು ನಿಲ್ಲುವದೇ ಅವಿದ್ಯೆಯ ಅನರ್ಥದಿಂದ ಬಿಡುಗಡೆಯನ್ನು ಹೊಂದುವದೆಂಬ ಮುಕ್ತಿಯು ಅಥವಾ ಕೈವಲ್ಯವು.

ಈಗ ಜ್ಞಾನದಿಂದ ಆಗುವ ಪುರುಷಾರ್ಥಕ್ಕೂ ಕರ್ಮದಿಂದ ಅಥವಾ ಉಪಾಸನೆಯಿಂದ ಆಗುವ ಪುರುಷಾರ್ಥಕ್ಕೂ ಇರುವ ತಾರತಮ್ಯವನ್ನು ನಾವು ನಿಶ್ಚಯಿಸಿಕೊಳ್ಳಬಹುದಾಗಿದೆ. ಕರ್ಮವು ಅವಿದ್ಯಾದೃಷ್ಟಿಯಲ್ಲಿ ತೋರುವ ಕಾರ್ಯಕಾರಣಭಾವವನ್ನು ಇಟ್ಟುಕೊಂಡು ಪ್ರವೃತ್ತವಾಗಿರುತ್ತದೆ. ಕುಂಬಾರನು ಮಣ್ಣು, ಕೋಲು, ತಿಗುರಿ-ಮುಂತಾದ ಸಾಧನಗಳನ್ನು ಉಪಯೋಗಿಸಿಕೊಂಡು ಒಂದು ಮಡಕೆಯನ್ನು ಮಾಡುತ್ತಾನೆ. ಅವನು ಉಪಯೋಗಿಸಿರುವ ಸಾಮಗ್ರಿಯನ್ನು ಅನುಸರಿಸಿಯೇ ಮಡಕೆಯ

ಸ್ವರೂಪವೂ ಆಯುಸ್ಸೂ ಇರುತ್ತವೆ. ಮಣ್ಣಿನಿಂದ ಮಾಡಿದ ಮಡಕೆಯು ಚಿನ್ನದ್ದಾಗ ಲಾರದು; ದೊಣ್ಣೆಯ ಪೆಟ್ಟಿಗೆ ಒಡೆಯದೇ ನಿಲ್ಲಲೂ ಆರದು. ಹೇಗೆ ಈ ಲೋಕದಲ್ಲಿ ಕೃಷಿ ವ್ಯಾಪಾರ ಮುಂತಾದವುಗಳಿಂದ ಸಂಪಾದಿಸಿಕೊಂಡಿರುವ ಭೋಗ್ಯವಸ್ತುವು ಕೃತಕವಾಗಿಯೂ ಅನಿತ್ಯವಾಗಿಯೂ ಇರುವದೋ ಅದರಂತೆ ಶಾಸ್ತ್ರೋಕ್ತಕರ್ಮವನ್ನು ಮಾಡಿ ಸಂಪಾದಿಸಿಕೊಂಡ ಸ್ವರ್ಗಾದಿಫಲವೂ ಅನಿತ್ಯವಾಗಿಯೇ ಇರುತ್ತದೆ. ಕಾಲದಲ್ಲಿ ಉಂಟಾದದ್ದು ಕಾಲದಲ್ಲಿ ನಾಶವಾಗಿಯೇ ತೀರುತ್ತದೆ. ಆದ್ದರಿಂದಲೇ ಶ್ರುತಿಯಲ್ಲಿ ಪುಣ್ಯದಿಂದ ಸಂಪಾದಿಸಿದ ಲೋಕವು ಕ್ಷಯಿಸುವದೆಂದೂ ಪುಣ್ಯವು ಕ್ಷಯವಾದರೆ ಆ ಲೋಕದಿಂದ ಮತ್ತೆ ಮರ್ತ್ಯಲೋಕವನ್ನೇ ಸೇರಬೇಕಾಗುವದೆಂದೂ ಹೇಳಿರುತ್ತದೆ.

ಕರ್ಮದಿಂದ ಪಡೆದ ಪುರುಷಾರ್ಥಕ್ಕೆ ಅನ್ವಯಿಸುವ ನ್ಯಾಯವು ಉಪಾಸನೆಗೂ ಅನ್ವಯಿಸಬೇಕೆಂಬುದು ನ್ಯಾಯವಾಗಿರುತ್ತದೆ. ಏಕೆಂದರೆ ಉಪಾಸನೆಯೆಂಬುದೂ ಮನಸ್ಸಿನಿಂದ ಮಾಡಿದ ಕರ್ಮವೇ ಆಗಿರುತ್ತದೆ. ಕರ್ಮದ ಬಲವನ್ನನುಸರಿಸಿಯೇ ಕರ್ಮಫಲವಾಗುವಂತೆ ಉಪಾಸನೆಯ ಬಲವನ್ನು ಅನುಸರಿಸಿಯೇ ಉಪಾಸನಾ ಫಲವೂ ಆಗುವದೆಂಬುದು ಯುಕ್ತವಾಗಿರುತ್ತದೆ. ಶ್ರುತಿಯಲ್ಲಿ ಉಪಾಸನೆಯನ್ನು ಜ್ಞಾನ ವೆಂದೂ ವಿದ್ಯೆಯೆಂದೂ ಕರೆದಿರುವದೇಕೆಂದರೆ ಉಪಾಸನೆಯು ಮಾನಸವಾಗಿರುತ್ತದೆ. ಉಪಾಸನೆಯ ಫಲವಾದ ಬ್ರಹ್ಮಲೋಕವನ್ನು ಪಡೆದವರಿಗೆ ಮುಪ್ಪಿಲ್ಲ, ಸಾವಿಲ್ಲ, ಶೋಕ ವಿಲ್ಲ, ಮೋಹವಿಲ್ಲ; ಹಸಿವಿಲ್ಲ, ಬಾಯಾರಿಕೆಯಿಲ್ಲ, ಅವರು ಬಯಸಿದರೆ ಅದೆಲ್ಲವೂ ಸಂಕಲ್ಪಮಾತ್ರದಿಂದಲೇ ಅವರಿಗೆ ದೊರಕುವದು. ಆ ಲೋಕಕ್ಕೆ ಹೋದವರು ಮತ್ತೆ ಈ ಮಾನವರ ಲೋಕಕ್ಕೆ ಬರುವದಿಲ್ಲ ಎಂದು ಮುಂತಾಗಿ ಶ್ರುತಿಯಲ್ಲಿ ಉಪಾಸನೆಯ ಫಲವನ್ನು ಕೊಂಡಾಡಿರುತ್ತದೆ. ಆದರೆ ಸಂಯೋಗವಾದರೆ, ವಿಯೋಗವಾಗಲೇಬೇಕು; ಬ್ರಹ್ಮಲೋಕವನ್ನು ಹೋಗಿ ಹೊಸದಾಗಿ ಮುಟ್ಟುವದಾದರೆ ಅದನ್ನು ಬಿಟ್ಟು ಅಗಲಲೇ ಬೇಕು ಎಂಬುದು ನ್ಯಾಯವಾಗಿರುತ್ತದೆ. ಆದ್ದರಿಂದ ಶ್ರುತಿಯು ಬ್ರಹ್ಮಲೋಕದ ಫಲವು ಅನಂತವಾಗಿರುವದೆಂದು ಹೇಳಿದರೆ ದೀರ್ಘಕಾಲವಿರುವದೆಂದೇ ಅರ್ಥವನ್ನು ಕಲ್ಪಿಸ ಬೇಕಾಗಿದೆ. ಈ ಕಲ್ಪವು ಮುಗಿಯುವವರೆಗೂ ಬ್ರಹ್ಮಲೋಕದಲ್ಲಿ ಉಪಾಸಕರು ನಿರಾತಂಕ ವಾಗಿರುತ್ತಾರೆಂಬ ಅರ್ಥವನ್ನು ವೇದಾಂತಿಗಳು ಈ ವಚನಗಳಿಗೆ ಕಲ್ಪಿಸಿರುತ್ತಾರೆ.

ಜ್ಞಾನದ ಫಲವು ಹೀಗಲ್ಲ. ಏಕೆಂದರೆ ಜ್ಞಾನದಿಂದ ನಾವು ಬ್ರಹ್ಮವನ್ನು ಹೊಸ ದಾಗಿ ಪಡೆಯುವದಿಲ್ಲ; ಬ್ರಹ್ಮವು ನಮ್ಮ ಆತ್ಮನೇ ಆಗಿದ್ದದ್ದು ಅಜ್ಞಾನದಿಂದ ಬೇರೆ ಯಾಗಿದ್ದಂತೆ ತೋರಿಕೊಂಡಿದ್ದು, ಜ್ಞಾನದಿಂದ ಅದು ಎಂದೆಂದಿಗೂ ನಮ್ಮ ಆತ್ಮನೇ

ಎಂಬ ನಿಶ್ಚಯವಾಗುತ್ತದೆ. ಹತ್ತು ಜನ ಅವಿವೇಕಿಗಳು ''ತಮ್ಮ ತಮ್ಮನ್ನು ಬಿಟ್ಟು ಮಿಕ್ಕವರನ್ನೇ ಎಣಿಸುತ್ತಾ ನಾವು ಹತ್ತು ಜನವಿದ್ದೆವು; ಈಗ ಒಂಬತ್ತೇ ಜನವಾಗಿರುವೆವಲ್ಲ ಇದು ಹೇಗೆ?'' ಎಂದು ವಿಚಾರಮಾಡುವದಕ್ಕೆ ಪ್ರಾರಂಭಿಸಿದ್ದರಂತೆ! ಅದರಂತೆ ನಮ್ಮ ಸ್ವರೂಪದ ಕಡೆಗೆ ಲಕ್ಷ್ಯವನ್ನು ಇಡದೆ ಇರುವಾಗ ಆತ್ಮನಲ್ಲದ ಅನಾತ್ಮವಸ್ತುಗಳಲ್ಲಿಯೇ ನಾವೆಂಬ ತಪ್ಪುತಿಳಿವಳಿಕೆಯುಂಟಾಗಿರುವದು. 'ನೀನೇ ಹತ್ತನೆಯವನು' ಎಂದು ವಿವೇಕಿಯಾದವನು ಅವರಲ್ಲಿ ಒಬ್ಬೊಬ್ಬನಿಗೂ ತಿಳಿಸಿಕೊಟ್ಟಹಾಗೆ ಶ್ರುತಿಯೂ 'ಗುರುವೂ ನೀನು', 'ಆ ಬ್ರಹ್ಮವು' ಎಂದು ಉಪದೇಶಿಸಲು ನಮ್ಮ ಸ್ವರೂಪದ ಅರಿವು ಆಗಿಬಿಡುತ್ತದೆ. ಆಗ 'ಸತ್ಯಜ್ಞಾನಾನಂದಸ್ವರೂಪವೂ ಅದ್ವಿತೀಯವೂ ಆಗಿರುವ ಬ್ರಹ್ಮವೇ ನಾನು' ಎಂಬ ನಿಶ್ಚಯವಾದರೆ ಆ ಜ್ಞಾನವನ್ನು ಬಾಧಿಸುವ ಮತ್ತೊಂದು ಜ್ಞಾನವೇ ಇರುವ ಸಂಭವವಿಲ್ಲ; ಆದ್ದರಿಂದ ಜ್ಞಾನದಿಂದ ಪ್ರಾಪ್ತವಾಗಿರುವ ಬ್ರಹ್ಮಾತ್ಮತತ್ತ್ವದಿಂದ ಜಾರಿ ಮತ್ತೆ ನಾನು ಸಂಸಾರಿಯಾದೇನೆಂಬ ಅಂಜಿಕೆಗೂ ಕಾರಣವಿರುವದಿಲ್ಲ. ಈ ರೀತಿಯಲ್ಲಿ ನೋಡಿದರೆ ಅವಿದ್ಯೆಯಿಂದ ತೋರುತ್ತಿದ್ದ ಕ್ರಿಯಾಕಾರಕಫಲರೂಪವಾದ ಸಂಸಾರವು, ಎಚ್ಚರದಿಂದ ಹಾರುವ ಕನಸಿನಂತೆ, ಜ್ಞಾನದಿಂದ ಸಂಪೂರ್ಣವಾಗಿ ಅತ್ಯಂತವಾಗಿ ನಾಶವಾಗಿಬಿಡುತ್ತದೆ. ಕರ್ಮೋಪಾಸನೆಗಳ ಫಲವು ಅನಿತ್ಯವಾಗಿರುವದಕ್ಕೂ ಜ್ಞಾನದ ಫಲವು ನಿತ್ಯವಾಗಿರುವದಕ್ಕೂ ಇದೇ ಕಾರಣ. ಆದ್ದರಿಂದ ಜ್ಞಾನದಿಂದಲೇ ಆನಂದರೂಪವಾದ ನಮ್ಮ ಸ್ವರೂಪಪ್ರಾಪ್ತಿ ಎಂಬ ಪರಮಪುರುಷಾರ್ಥವಾಗುತ್ತದೆ ಎಂದು ಹೇಳುತ್ತಾರೆ.

ಬ್ರಹ್ಮಜ್ಞಾನದ ಪ್ರಯೋಜನವು ಏನು? ''ಇದನ್ನು ಮಾಡಿ ಇದನ್ನು ಪಡೆಯುವನು'' ಎಂಬ ಕ್ಷುದ್ರಪ್ರಯೋಜನದ ಬಾಯಾರಿಕೆಯು ಹಿಂಗುವದು ಮೊದಲನೆಯ ಪ್ರಯೋಜನವು. ''ನಾನು ಪಡೆಯದೆ ಇರುವ ಆನಂದವಿಲ್ಲ, ಹೋಗಲಾಡಿಸಿಕೊಳ್ಳಬೇಕಾದ ದುಃಖವಿಲ್ಲ'' ಎಂಬ ಅರಿವಿನಿಂದ ನಿತ್ಯಾನಂದಸ್ವರೂಪದ ಸ್ಮೃತಿಯು ತಲೆದೋರುವದು ಎರಡನೆಯ ಪ್ರಯೋಜನ. ಹೃದಯಕ್ಕೆ ಗಂಟುಬಿದ್ದಿದ್ದ ಹಲವು ಕಾಮಗಳು ಹೇಳಹೆಸರಿಲ್ಲದೆ ಮಾಯವಾದದ್ದರಿಂದ, ಶರೀರದಲ್ಲಿಯೂ ಮನಸ್ಸಿನಲ್ಲಿಯೂ ಕಾಮಗಳಿಂದ ಉಂಟಾಗುತ್ತಿದ್ದ ತಾಪಗಳು ಎಂದೆಂದಿಗೂ ಇಲ್ಲವಾಗುವದು ಮೂರನೆಯ ಪ್ರಯೋಜನ.

# ಬ್ರಹ್ಮಜ್ಞಾನಕ್ಕೆ ಸಾಧನಗಳು

ಬ್ರಹ್ಮ ಎಂಬುದು ಇಡಿಯ ವಿಶ್ವದ ತಿರುಳಾಗಿರುವ, ಬ್ರಹ್ಮಾದಿಸ್ತಂಭ ಪರ್ಯಂತವಾಗಿರುವ ಎಲ್ಲಾ ಪ್ರಾಣಿಗಳಿಗೂ ನಿಜವಾದ ಆತ್ಮನಾಗಿರುವ, ಪರಮಾತ್ಮನ ಹೆಸರು. ಬ್ರಹ್ಮಜ್ಞಾನವೆಂದರೆ ಆ ಸ್ವರೂಪವನ್ನು ಇದ್ದದ್ದು ಇದ್ದಂತೆ ಅರಿತುಕೊಂಡು, ಅನುಭವಕ್ಕೆ ತಂದುಕೊಳ್ಳುವದು, ಬ್ರಹ್ಮಜ್ಞಾನವು ಯಾರಿಗೆ ದಕ್ಕುವದೋ ಅವರಿಗೆ ಅದನ್ನು ಅರಿಯದೆ ಇದ್ದಾಗ ತಪ್ಪುತಿಳಿವಳಿಕೆಯಿಂದ ಉಂಟಾಗಿದ್ದ ಸಂಸಾರದ ಅನರ್ಥಗಳೆಲ್ಲವೂ ಪರಿಹಾರವಾಗುವವು; ಶೋಕಮೋಹಗಳು ತೊಲಗುವವು, ದುಃಖದ ಸೊಂಕೇ ಇಲ್ಲದ ನಿತ್ಯಾನಂದವು ತನ್ನದೆಂಬ ಅರಿವಾಗುವದು. ಇಷ್ಟನ್ನೂ ಹಿಂದಿನ ಕೆಲವು ಲೇಖನಗಳಲ್ಲಿ ವಿವರಿಸಿರುತ್ತೇನೆ. ಈಗ ಇಂಥ ಬೆಲೆಯುಳ್ಳ ಬ್ರಹ್ಮಜ್ಞಾನವು ಉಂಟಾಗುವದಕ್ಕೆ ಯಾವ ಯಾವ ಸಾಧನವನ್ನು ಕೈಕೊಳ್ಳಬೇಕಾಗುವದು? ಎಂಬುದನ್ನು ಸ್ವಲ್ಪ ಮಟ್ಟಿಗೆ ಹೇಳುವದಕ್ಕೆ ಯತ್ನಿಸುವೆನು.

ಉಪನಿಷತ್ತಿನಲ್ಲಿ ಹೇಳಿರುವದೇನೆಂದರೆ ಬ್ರಹ್ಮವು ನಮ್ಮ ಆತ್ಮನೇ ಆಗಿರುವದರಿಂದಲೂ, ಅದೊಂದೇ ಪರಮಾರ್ಥವಾಗಿರುವದರಿಂದಲೂ, ಆತ್ಮಸ್ವರೂಪವನ್ನು ಕುರಿತು ಶ್ರವಣಮಾಡಬೇಕು, ಮನನಮಾಡಬೇಕು, ನಿಧಿಧ್ಯಾಸನಮಾಡಬೇಕು. ಯಾವ ವಸ್ತುವನ್ನು ನಾವು ಸಾಕ್ಷಾತ್ತಾಗಿ ಕಂಡುಕೊಳ್ಳಬೇಕಾಗಿರುವದೋ ಅಂಥ ವಸ್ತುವಿನ ವಿಷಯದಲ್ಲಿ ಕೇಳಿ ತಿಳಿದುಕೊಳ್ಳಬೇಕಾದದ್ದನ್ನೆಲ್ಲ ಕೇಳಿ ತಿಳಿದುಕೊಳ್ಳಬೇಕು; ಹಾಗೆ ತಿಳಿದುಕೊಳ್ಳಬೇಕಾದದ್ದನ್ನೆಲ್ಲ ಯುಕ್ತಿಗೆ ಹೊಂದಿಸಿ ಸರಿಯಾಗಿ ತಿಳಿದುಕೊಳ್ಳಬೇಕು; ಇಷ್ಟೇ ಸಾಲದು, ಹಾಗೆ ಯುಕ್ತಿಯಿಂದ ತಿಳಿದುಕೊಂಡದ್ದನ್ನೆಲ್ಲ ಅನುಭವಕ್ಕೆ ತಂದು ಕೊಳ್ಳುವವರೆಗೂ ಅದರಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಂಡಿರಬೇಕು. ಇದು ಲೋಕದ ವಸ್ತುಗಳ ವಿಷಯದಲ್ಲೆಲ್ಲ ಬೇಕಾದದ್ದೇ ಆಗಿರುತ್ತದೆ. ಉದಾಹರಣೆಗೆ ಒಬ್ಬನಿಗೆ ರತ್ನ ಪಡಿಯ ವ್ಯಾಪಾರವನ್ನು ಮಾಡಬೇಕೆಂಬ ಇಚ್ಛೆಯಿದ್ದರೆ ರತ್ನಗಳ ಜಾತಿ, ಅವುಗಳ ಉತ್ಪತ್ತಿಕ್ರಮ, ಬೇರೆ ಬೇರೆಯ ರತ್ನಗಳ ಸ್ವಭಾವ, ರತ್ನ ಪರೀಕ್ಷೆಯ ಮರ್ಮಗಳು ಮುಂತಾದ ವಿಷಯಗಳನ್ನು ಕುರಿತು ಗ್ರಂಥಗಳಿಂದಲೂ ಆಪ್ತರಿಂದಲೂ ಕೇಳಿ ತಿಳಿದುಕೊಳ್ಳಬೇಕಾಗುತ್ತದೆ. ತಾನು ಕೇಳಿದ್ದು ಸರಿಯಾಗಿ ತಿಳಿಯಿತೋ ಇಲ್ಲವೋ ಎಂಬುದನ್ನು ನಿಶ್ಚಯಿಸಿಕೊಳ್ಳುವದಕ್ಕಾಗಿ ಬಗೆಬಗೆಯ ರತ್ನಗಳನ್ನು ತಂದು ಸಾಚಾರತ್ನಗಳು, ಖೋಟಾರತ್ನಗಳು – ಇವುಗಳಿಗಿರುವ ತಾರತಮ್ಯವನ್ನೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಬಣ್ಣದವಾಗಿ

ತೋರುವ ರತ್ನಗಳು ಒಂದೊಂದಕ್ಕೂ ಇರಬಹುದಾದ ತಾರತಮ್ಯವನ್ನೂ ಬಗೆಬಗೆಯಾಗಿ ವಿಚಾರ ಮಾಡಿ ಮನದಟ್ಟುಮಾಡಿಕೊಳ್ಳಬೇಕಾಗುತ್ತದೆ. ಆದಾದ ಬಳಿಕ ರತ್ನವನ್ನು ಕೈಯಲ್ಲಿಟ್ಟು ಸೂಕ್ಷ್ಮವಾಗಿ ಪರೀಕ್ಷಿಸಿ ಒಂದೊಂದು ರತ್ನದ ಯೋಗ್ಯತೆಯನ್ನೂ ಅನುಭವದಿಂದ ಗೊತ್ತುಪಡಿಸಿಕೊಳ್ಳಬೇಕಾಗುತ್ತದೆ. ಹೀಗೆ ವಸ್ತುವಿನ ಅನುಭವಕ್ಕೆ **ಶ್ರವಣ, ಮನನ, ನಿಧಿಧ್ಯಾಸನ** - ಎಂಬ ಮೂರು ಸಾಧನಗಳು ನೇರಾಗಿ ಅವಶ್ಯವಾಗಿಬೇಕಾಗುತ್ತವೆ ಎಂಬುದು ಸ್ಪಷ್ಟವಾಗಿದೆ.

ಆದರೆ ಹಣ, ವ್ಯಾಪಾರದ ಮರ್ಯಾದ ಜ್ಞಾನ - ಮುಂತಾದ ತಿಳಿವಳಿಕೆಗಳಿದ್ದರೂ ರತ್ನವನ್ನು ಪರೀಕ್ಷಿಸುವ ಕಣ್ಣಿನಲ್ಲಿ ಏನಾದರೂ ದೋಷವಿದ್ದರೆ, ಅಥವಾ ರತ್ನವನ್ನು ಪರೀಕ್ಷಿಸಿ ನಿಶ್ಚಯಿಸುವ ಬುದ್ಧಿಯು ಸಾಕಾದಷ್ಟು ಚುರುಕಾಗಿಲ್ಲದಿದ್ದರೆ, ಸುಮ್ಮನೆ ಶ್ರವಣ ಮನನನಿಧಿಧ್ಯಾಸನಗಳನ್ನು ಮಾಡಿದ ಮಾತ್ರದಿಂದ ರತ್ನದ ಅನುಭವವು ಉಂಟಾಗಲಾರದು. ಆದ್ದರಿಂದ ಕರಣದೋಷವೇನಾದರೂ ಇದ್ದರೆ ಆ ದೋಷ ಪರಿಹಾರಕ್ಕಾಗಿಯೂ ಅದನ್ನು ರತ್ನಪರೀಕ್ಷೆಗೆ ತಕ್ಕಷ್ಟು ಸೂಕ್ಷ್ಮವಾಗಿಸಿಕೊಳ್ಳುವದಕ್ಕಾಗಿಯೂ ಬೇರೆಯ ಪ್ರಯತ್ನವನ್ನೇ ಕೈಕೊಳ್ಳಬೇಕಾಗುತ್ತದೆ. ಇದರಂತೆ ಆತ್ಮದರ್ಶನಕ್ಕೆ ಬೇಕಾದ **ಜ್ಞಾನವು ಶ್ರವಣ, ಮನನ, ನಿಧಿಧ್ಯಾಸನ** - ಇವುಗಳಿಂದ ಹುಟ್ಟುವದಾದರೂ ಶ್ರವಣಾದಿಗಳು ಈ ಜ್ಞಾನವನ್ನು ತಂದುಕೊಡುವದಕ್ಕೆ ಮೊದಲು ಅಂತಃಕರಣವನ್ನು ಸಂಸ್ಕಾರಗೊಳಿಸುವದಕ್ಕೆ ಶಮದಮಾದಿಗಳೆಂಬ ಸಾಧನಗಳು ಬೇರೆಬೇಕಾಗುತ್ತವೆ.

ಆದ್ದರಿಂದಲೇ ಶಂಕರಾಚಾರ್ಯರವರು **"ತತ್ ಆತ್ಮ ತತ್ತ್ವಮ್ ವಿಜ್ಞಾನೇವ ವಿಶಿಷ್ಟೇನ ಶಾಸ್ತ್ರಾಚಾರ್ಯೋಪದೇಶಜನಿತೇನ ಜ್ಞಾನೇನ ಶಮದಮ ಧ್ಯಾನ ಸರ್ವತ್ಯಾಗ ವೈರಾಗ್ಯೋದ್ಭೂತೇನ ಪರಿಪಶ್ಯಂತಿ ಸರ್ವತಃ ಪೂರ್ಣ ಪಶ್ಯಂತಿ ಉಪಲಭಂತೇ ಧೀರಾ ವಿವೇಕಿನಃ"** **(ಮುಂ.ಭಾ.2-2-7)**
ಎಂದಿರುತ್ತಾರೆ.

ಆತ್ಮತತ್ತ್ವವನ್ನು ಕಂಡುಕೊಳ್ಳುವದಕ್ಕೆ ಒಂದಾನೊಂದು ಅಸಾಧಾರಣವಾದ ಜ್ಞಾನವು ಬೇಕಾಗುತ್ತದೆ. ಅದಕ್ಕೆ ಶಾಸ್ತ್ರದ ಉಪದೇಶವೂ ಆಚಾರ್ಯರ ಉಪದೇಶವೂ ಬೇಕಾಗುತ್ತದೆ; ಇದರ ಜೊತೆಗೆ ಶಮ, ದಮ, ಧ್ಯಾನ, ಸರ್ವತ್ಯಾಗ; ಮುಂತಾದವುಗಳಿಂದ ಅಂತಃಕರಣಕ್ಕೆ ಸಂಸ್ಕಾರವೂ ಆಗಬೇಕಾಗಿರುತ್ತದೆ. ಹಾಗಾದರೆ ಮಾತ್ರ ಆ ಜ್ಞಾನವು ಉಂಟಾಗುತ್ತದೆ.

ಶ್ರುತಿಯಲ್ಲಿ ಈ ಶಮದಮಾದಿಗಳನ್ನು ಹೀಗೆ ವಿಧಿಸಿರುತ್ತದೆ: **''ತಸ್ಮಾ ದೇವಂ ವಿಚ್ಛಾನ್ತೋ ದಾನ್ತ ಉಪರತಸ್ತಿತಿಕ್ಷುಃ ಸಮಾಹಿತೋ ಭೂತ್ವಾತ್ಮನ್ಯೇವಾತ್ಮಾನಂ ಪಶ್ಯತಿ'' (ಬೃ.4.4.23)**

ಶಮ, ದಮ, ಉಪರತಿ, ತಿತಿಕ್ಷೆ, ಸಮಾಧಾನ - ಮುಂತಾದವುಗಳಿಂದ ಕೂಡಿದವನು ತನ್ನಲ್ಲಿಯೇ ಪರಮಾತ್ಮನನ್ನು ಕಂಡುಕೊಳ್ಳುತ್ತಾನೆ. **ಶಮ**ವೆಂದರೆ ಅಂತಃಕರಣವನ್ನು ಸ್ವಾಧೀನದಲ್ಲಿಟ್ಟುಕೊಂಡಿರುವದು; **ದಮ**ವೆಂದರೆ ಇಂದ್ರಿಯಗಳನ್ನು ಬಿಗಿಹಿಡಿದುಕೊಂಡಿರುವದು; **ಉಪರತಿ** ಎಂದರೆ ಮನಸ್ಸಿಗೆ ವಿಕ್ಷೇಪವನ್ನುಂಟುಮಾಡುವ ಕರ್ಮಗಳನ್ನು ಬಿಟ್ಟುಬಿಡುವದು; **ತಿತಿಕ್ಷೆ** ಎಂದರೆ ಶೀತ ಉಷ್ಣ- ಮುಂತಾದವುಗಳಿಂದುಂಟಾಗುವ ಸುಖದುಃಖಗಳಲ್ಲಿ ಸಮನಾಗಿದ್ದುಕೊಂಡು ಉಬ್ಬದೆ ತಗ್ಗದೆ ಇರುವದು; **ಸಮಾಧಾನ** ಎಂದರೆ ಮನಸ್ಸನ್ನು ಏರುಪೇರಿಲ್ಲದೆ ಇಟ್ಟುಕೊಂಡಿರುವದು; ಶ್ರದ್ಧೆ- ಎಂದರೆ ಆಚಾರ್ಯವಾಕ್ಯದಲ್ಲಿಯೂ ಶಾಸ್ತ್ರವಾಕ್ಯದಲ್ಲಿಯೂ 'ಇದರಿಂದ ತತ್ತ್ವಜ್ಞಾನವು ಅವಶ್ಯವಾಗಿ ಉಂಟಾಗುತ್ತದೆ' ಎಂಬ ನಂಬಿಕೆಯಿಂದ ಶ್ರವಣಮನನಗಳನ್ನು ಮಾಡುವದು. ಇದೇ ಮುಂತಾದ ಸಾಧನೆಗಳಿಂದ ಅಂತಃಕರಣವು ಚದರಿಹೋಗದೆ ಆತ್ಮಸ್ವರೂಪವನ್ನು ಪರೀಕ್ಷೆಮಾಡಿ ನೇರಾಗಿ ಅನುಭವಕ್ಕೆ ತಂದುಕೊಳ್ಳುವ ಸಾಮರ್ಥ್ಯವನ್ನು ಹೊಂದುವದು. ಇವುಗಳ ಜೊತೆಗೆ ಮೋಕ್ಷವೊಂದೇ ನಿತ್ಯವಾದ ಸುಖವು ಎಂದು ನಂಬಿ ಮಿಕ್ಕ ವಿಷಯಸುಖಗಳಲ್ಲಿರುವ ರಾಗವನ್ನು ಬಿಟ್ಟು ಆ ಪುರುಷಾರ್ಥಕ್ಕಾಗಿಯೇ ಹವಣಿಸುವದು ಎಂಬ **ವೈರಾಗ್ಯ; ಮುಮುಕ್ಷುತೆ** - ಇವೂ ಅವಶ್ಯವಾಗಿ ಬೇಕಾಗುತ್ತವೆ - ಎಂಬುದನ್ನು ಹೇಳಬೇಕಾಗಿಲ್ಲ. ಏಕೆಂದರೆ ಯಾವನಿಗೆ ವಿಷಯಸುಖವೇ ಸಾಕಾಗಿರುವದೋ, ಅಥವಾ ಯಾವನಿಗೆ ವಿಷಯಸುಖಕ್ಕಿಂತ ಹೆಚ್ಚಿನ ನಿತ್ಯಾನಂದವೊಂದು ಇದೆ ಎಂಬ ಅರಿವೇ ಇಲ್ಲವೋ ಅವನು ಬ್ರಹ್ಮಜ್ಞಾನದಿಂದ ಆಗಬೇಕಾದ ಪರಮಪುರುಷಾರ್ಥವನ್ನು ಬಯಸುವದೂ ಇಲ್ಲ; ಅದನ್ನು ಬಯಸದೆ, ಅದಕ್ಕಾಗಿ ಪ್ರಯತ್ನವನ್ನು ಮಾಡದೆ ಇರುವವರಿಗೆ ಆ ಪುರುಷಾರ್ಥವು ದಕ್ಕುವ ಹಾಗೂ ಇಲ್ಲವೆಂಬುದು ಸ್ಪಷ್ಟವಾಗಿರುತ್ತದೆ.

ಅಂತಃಕರಣವು ಸ್ವಾಭಾವಿಕವಾಗಿ ಹೊರಗಿನ ಸುಖವನ್ನೇ ಬಯಸುತ್ತಿರುವದು, ಅದು ಆ ಸುಖಕಾಮನೆಯನ್ನು ತೊರೆದು ಅಂತರ್ಮುಖವಾಗಬೇಕಾದರೆ ಶಮದಮಾದಿಗಳು ಬೇಕಾಗುತ್ತವೆ. ಆದರೆ ಹೊರಗಿನ ಸುಖದ ಇಚ್ಛೆಯಲ್ಲಿಯೇ ಎರಡು ಬಗೆಯಿರುತ್ತದೆ. ಶಾಸ್ತ್ರದಲ್ಲಿ ಶ್ರದ್ಧೆಯಿಲ್ಲದೆ, ಅಥವಾ ಶಾಸ್ತ್ರದ ಸಂಸ್ಕಾರವಿಲ್ಲದೆ ಇರುವ ಜನರಿಗೆ ಸಾಮಾನ್ಯವಾದ ಲೌಕಿಕವಾದ ತಿಳಿವಳಿಕೆಯಿಂದ ಕೃಷಿ, ವಾಣಿಜ್ಯ, ಮುಂತಾದ

ಕರ್ಮವನ್ನು ಮಾಡಿ ಈ ಲೋಕದ ಸುಖವನ್ನು ಅನುಭವಿಸಬೇಕೆಂಬ ಹಂಬಲು ಇರುತ್ತದೆ. ಸೋಮಾರಿಗಳೂ ಅವಿವೇಕಿಗಳೂ ಆಗಿರುವ ಪಾಮರರನ್ನು ಬಿಟ್ಟರೆ ಮಿಕ್ಕವರಲ್ಲಿ ಬಹಳ ಮಂದಿ ಇಂಥ ವಿಷಯಸುಖವನ್ನು ಲೌಕಿಕಪ್ರಯತ್ನದಿಂದ ಪಡೆಯುವದಕ್ಕೆ ಹವಣಿಸುವವರೇ ಆಗಿರುತ್ತಾರೆ. ಆದರೆ ದೊಡ್ಡವರ ಸಹವಾಸದಿಂದ ಅಥವಾ ಸತ್ಕುಲದಲ್ಲಿ ಹುಟ್ಟಿದ್ದರ ಫಲವಾಗಿ ಶಾಸ್ತ್ರಸಂಸ್ಕಾರವನ್ನು ಯಾರು ಹೊಂದಿ ರುವರೋ ಅವರಿಗೆ ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳನ್ನು ಮಾಡಿ ಅದರಲ್ಲಿ ಹೇಳಿರುವ ಜನ್ಮಾಂತರ ಲೋಕಾಂತರಸುಖವನ್ನು ಪಡೆಯಬೇಕೆಂಬ ಅಭಿಲಾಷೆಯುಂಟಾಗಿರುತ್ತದೆ. ಈ ಎರಡೂ ವಿಧವಾದ ವಿಷಯ ಸುಖಾಭಿಲಾಷೆಯಿಲ್ಲದ ವಿರಕ್ತರೇ ಪ್ರಕೃತವಾದ ಬ್ರಹ್ಮಜ್ಞಾನಕ್ಕೆ ಅಧಿಕಾರಿಗಳು; ಅವರಿಗೆ ಈ ಜ್ಞಾನದಿಂದ ಸಿಕ್ಕಬೇಕಾದ ಪರಮ ಪ್ರಯೋಜನವು ದೊರಕುತ್ತದೆ. ಹೇಗೆ ಈ ಲೋಕದಲ್ಲಿ ಕೃಷಿಯೇ ಮುಂತಾದ ಕರ್ಮಗಳಿಂದ ಪಡೆದು ಕೊಂಡ ಫಲವು ಸವೆದುಹೋಗುತ್ತದೆಯೋ ಹಾಗೆಯೇ ಶಾಸ್ತ್ರೋಕ್ತ ಕರ್ಮದಿಂದ ಮಾಡಿದ ಪುಣ್ಯದಿಂದ ಪಡೆದುಕೊಂಡ ಸ್ವರ್ಗಸುಖವೇ ಮುಂತಾದದ್ದು ಕೃತಕವಾಗಿ ರುವದರಿಂದ ಕ್ಷಯವಾಗುತ್ತದೆ – ಎಂದು ಶ್ರುತಿ ಹೇಳುತ್ತದೆ. ಸ್ವರ್ಗಲೋಕಕ್ಕೆ ಹೋಗಿ ಪುಣ್ಯದ ರಾಶಿಯು ಸವೆಯಲಾಗಿ ಮತ್ತೆ ಈ ಲೋಕಕ್ಕೆ ಬೀಳುವರೆಂಬುದನ್ನು **ಯಯಾತಿಯ ಕಥೆಯೇ** ಮುಂತಾದ ದೃಷ್ಟಾಂತಗಳಿಂದ ಪುರಾಣಗಳಲ್ಲಿಯೂ ಸ್ಪಷ್ಟಗೊಳಿಸಿರುತ್ತದೆ.

ಆದರೆ ಶಾಸ್ತ್ರೋಕ್ತಕರ್ಮವು ಈ ರೀತಿಯಿಂದ ಕೊಡುವ ಸುಖವು ಕ್ಷಯವಾಗುತ್ತದೆಯಾದ್ದರಿಂದ ಆ ಕರ್ಮವು ಸರ್ವಥಾ ಮುಮುಕ್ಷುಗಳಿಗೆ ಪ್ರಯೋಜನವಿಲ್ಲದ್ದೆಂದು ಭಾವಿಸುವಹಾಗಿಲ್ಲ, ಏಕೆಂದರೆ ಅದೇ ಕರ್ಮವನ್ನೇ ಪ್ರಕೃತವಾದ ಬ್ರಹ್ಮಜ್ಞಾನಕ್ಕೆ ಪ್ರಯೋಜನವಾಗುವಂತೆ ಮಾಡಿಕೊಳ್ಳುವದಕ್ಕೂ ಬರುತ್ತದೆ. ಯಜ್ಞ, ದಾನ, ತಪಸ್ಸು – ಇವುಗಳಿಂದ ಅಂತಃಕರಣದಲ್ಲಿರುವ ರಾಗ, ದ್ವೇಷ, ಮೋಹ, ಮದ, ಮಾತ್ಸರ್ಯ ಮುಂತಾದ ದೋಷಗಳು ತೊಲಗಿ ಚಿತ್ತಶುದ್ಧಿಯಾಗುವದೆಂದೂ ಬಳಿಕ ಮೇಲೆ ಹೇಳಿದಂತೆ ಶಮದಮಾದಿಗಳಿಂದ ಅಂತಃಕರಣವನ್ನು ಆತ್ಮವನ್ನೇ ಚಿಂತಿಸುತ್ತಾ ಮತ್ತೊಂದು ಕಡೆಗೆ ಚಲಿಸದಂತೆ ಮಾಡಿಕೊಳ್ಳಬಹುದೆಂದೂ ಶಾಸ್ತ್ರದಲ್ಲಿ ಹೇಳಿರುತ್ತದೆ. ಆದರೆ ಶಾಸ್ತ್ರೋಕ್ತ ಕರ್ಮಗಳನ್ನು ಈ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕಾದರೆ ಕಾಲುವೆಯ ನೀರನ್ನು ಹೊಲಕ್ಕೆ ಹಾಯಿಸಿಕೊಳ್ಳುವಂತೆ ವಿಷಯಗಳ ಕಡೆಗೆ ತಿರುಗುತ್ತಿರುವ ಮನಸ್ಸನ್ನು ಆತ್ಮನ ಕಡೆಗೇ ತಿರುಗಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಪರಮೇಶ್ವರನೇ

ನಮ್ಮೆಗಳ ಆತ್ಮನೆಂದು ನಂಬಿ, ಆತನ ಅನುಗ್ರಹಕ್ಕಾಗಿಯೇ ನಾವು ಮಾಡುವ ಕರ್ಮಗಳೆಲ್ಲವನ್ನೂ ಮಾಡಬೇಕಾಗುತ್ತದೆ. ಕರ್ಮವನ್ನು ನಾನು ಮಾಡುತ್ತೇನೆ ಎಂಬ ಸಂಗವನ್ನೂ ಇದರ ಫಲವು ನನಗೆ ಆಗಬೇಕೆಂಬ ಫಲೇಚ್ಛೆಯನ್ನೂ ತೊರೆದು ಪರಮೇಶ್ವರನ ಪ್ರೀತಿಗಾಗಿಯೇ ಕರ್ಮವನ್ನು ಮಾಡಬೇಕಾಗುತ್ತದೆ. ಈ ಕೌಶಲಕ್ಕೆ **ಕರ್ಮಯೋಗ**ವೆಂದು ಹೆಸರು. ಆದ್ದರಿಂದ ಶ್ರವಣಮನನನಿದಿಧ್ಯಾಸನಗಳ ಹಿಂಗಡೆಯಲ್ಲಿ ಶಮಾದಿಗಳು ಬೇಕಾಗಿರುವಂತೆಯೇ ಶಮಾದಿಗಳ ಹಿಂಗಡೆಯಲ್ಲಿ ಈ ಕರ್ಮಯೋಗವೂ ಅವಶ್ಯವಾದ ಸಾಧನವಾಗಿರುತ್ತದೆ.

ಇಲ್ಲಿ ಹೇಳಿರುವ ಸಾಧನಗಳನ್ನು ಇನ್ನೂ ವಿವರವಾಗಿ ತಿಳಿದುಕೊಂಡ ಹೊರತು ಇವುಗಳ ವ್ಯಾಪಾರವು ನಮಗೆ ಚೆನ್ನಾಗಿ ಮನದಟ್ಟಾಗುವ ಹಾಗಿಲ್ಲ. ಆದ್ದರಿಂದ ಮುಂದೆ ಸಂದರ್ಭವೊದಗಿದಂತೆ ಇವುಗಳನ್ನು ವಿವರಿಸುವೆನು. ಆದರೆ ಸದ್ಯಕ್ಕೆ ಇಷ್ಟು ತಿಳಿದುಕೊಂಡರೆ ಸಾಕು. ಯಜ್ಞಾದಿಗಳನ್ನು ಪರಮೇಶ್ವರಪ್ರೀತ್ಯರ್ಥವಾಗಿ ಆಚರಿಸುವ ಕರ್ಮಯೋಗವೂ, ಪರಮೇಶ್ವರನನ್ನೇ ಶಮಾದಿಗಳಿಂದೊಡಗೂಡಿ ಚಿಂತಿಸುವ ಧ್ಯಾನಯೋಗವೂ, ಒಂದಕ್ಕಿಂತ ಒಂದು ಹೆಚ್ಚು ಸೂಕ್ಷ್ಮವಾದ ಸಾಧನಗಳಾಗಿರುತ್ತವೆ. ಶ್ರವಣ ಮನನ ನಿದಿಧ್ಯಾಸನಗಳೂ ಇನ್ನೂ ಒಳಗಿನ ಸೂಕ್ಷ್ಮವಾದ ಜ್ಞಾನೋತ್ಪತ್ತಿಗೆ ನೇರಾಗಿ ಕಾರಣವಾಗಿರುವ ಸಾಧನಗಳಾಗಿರುತ್ತವೆ. ಇವುಗಳಲ್ಲಿ ಯಾವನು ಯಾವ ಅಂತಸ್ತಿನ ಚಿತ್ತವುಳ್ಳವನಾಗಿರುವನೋ ಅವನು ತನ್ನ ಅಂತಸ್ತಿನ ಸಾಧನವನ್ನು ಆರಿಸಿಕೊಳ್ಳಬೇಕು. ಬಹುಜನರು ಹೊರಗಿನ ವಿಷಯಗಳಲ್ಲಿ ಆಸಕ್ತರಾಗಿರುವದರಿಂದ ಅವರು ಮುಮುಕ್ಷುಗಳಾದರೆ ಕರ್ಮಯೋಗವನ್ನೇ ಆರಿಸಿಕೊಳ್ಳಬೇಕಾಗುತ್ತದೆ. ಆದರೆ ಯಾರು ಕರ್ಮಯೋಗದಿಂದಾಗಬೇಕಾದ ಚಿತ್ತಶುದ್ಧಿಯನ್ನು ಪಡೆದುಕೊಂಡಿರುವರೋ ಅಂಥವರು ಧ್ಯಾನಯೋಗವನ್ನೂ ಶ್ರವಣಾದಿಗಳನ್ನೂ ಕ್ರಮಕ್ರಮವಾಗಿ ಅವಲಂಬಿಸಬೇಕಾಗುವದು. ಯಾರುಬೇಕಾದರೂ ವೇದಾಂತವಿಚಾರವನ್ನು ಮಾಡಬಹುದು; ಅಲ್ಪಸ್ವಲ್ಪ ಜ್ಞಾನವನ್ನೂ ಸಂಪಾದಿಸಿಕೊಳ್ಳಬಹುದು; ಆದರೆ ಯಾರು ಸರಿಯಾಗಿ ಸಾಧನಗಳನ್ನು ಮಾಡಿ ಶ್ರವಣಮನನನಿದಿಧ್ಯಾಸಗಳನ್ನು ಮಾಡುವರೋ ಅವರಿಗೆ ಮಾತ್ರ ಈ ಜನ್ಮದಲ್ಲಿಯೇ ಜ್ಞಾನದ ಪರಮಫಲವು ಲಭಿಸುವದು.

ವೇದಾಂತಜ್ಞಾನದ ಪರಮಫಲವು ದೊರೆಯುವದಕ್ಕೆ ಜ್ಞಾನದಲ್ಲಿ ನಿಷ್ಠೆಯುಂಟಾಗಿರಬೇಕು; ಎಂದರೆ ಸಂಶಯ, ವಿಪರೀತಜ್ಞಾನಗಳ ಸಂಪರ್ಕವಿಲ್ಲದ ನಿಶ್ಚಯಜ್ಞಾನದಲ್ಲಿ ನೆಲೆನಿಂತಿರಬೇಕು. ವೇದಾಂತದಲ್ಲಿ ಹೇಳುವ ಪರಮಾರ್ಥತತ್ತ್ವವಾದ ಬ್ರಹ್ಮವು ನಮ್ಮ

ಗಳೆಲ್ಲರ ಆತ್ಮನೇ ಆಗಿರುವದರಿಂದ ಅದನ್ನು ಹೊಸದಾಗಿ ಅರಿತುಕೊಳ್ಳಬೇಕಾಗಿರುವದೇನೂ ಇಲ್ಲ, ಅದನ್ನು ಅರಿಯದಂತೆ ಮಾಡಿರುವ ಅಡ್ಡಿಗಳು ಮಾತ್ರ ಸಂಪೂರ್ಣವಾಗಿ ತೊಲಗಬೇಕಾಗುತ್ತದೆ. ನಮ್ಮ ಈಗಿನ ಅಂತಃಕರಣವು ಅನಾತ್ಮವಾದ ವಿಷಯಗಳ ಚಿಂತೆಯಿಂದ ಕಲುಷಿತವಾಗಿರುತ್ತದೆ. ಆದ್ದರಿಂದ ದೇಹಾದಿಗಳೇ ನಾವೆಂಬ ಬುದ್ಧಿಯೂ ನಮಗೆ ಗಟ್ಟಿಯಾಗಿರುತ್ತದೆ. ಅನಾತ್ಮವಾದ ವಿಷಯಗಳು ದೋಷವನ್ನೂ ಅನಿತ್ಯತೆಯನ್ನೂ ಮನಗಂಡು ಅವುಗಳಲ್ಲಿ ಎಷ್ಟರಮಟ್ಟಿಗೆ ವೈರಾಗ್ಯವನ್ನು ಹೊಂದುವೆವೋ, ಆತ್ಮಸ್ವರೂಪದ ಮಹಿಮೆಯನ್ನೂ, ಕಾಲಾತೀತವಾದ ಪರಮಾರ್ಥನಿತ್ಯಸ್ವರೂಪವನ್ನೂ ಎಷ್ಟರಮಟ್ಟಿಗೆ ತಿಳಿದುಕೊಳ್ಳುವೆವೋ ಅಷ್ಟರಮಟ್ಟಿಗೆ ನಮ್ಮ ಅಂತಃಕರಣವು ಆತ್ಮನಿಷ್ಠೆಗೆ ತಕ್ಕದ್ದಾಗುವದು. ಆದ್ದರಿಂದ ನಾವುಗಳು ಸಂಪಾದಿಸಿಕೊಳ್ಳಬೇಕಾದದ್ದೇನೆಂದರೆ ನಮ್ಮೆಲ್ಲರ ಆತ್ಮನಾಗಿರುವ ಪರಮೇಶ್ವರನಲ್ಲಿ ಭಕ್ತಿ, ಆತನ ಅನುಗ್ರಹದಿಂದ ಕೃತಾರ್ಥರಾಗಿರುವ ಮಹಾಮಹಿಮರಲ್ಲಿ ಭಕ್ತಿ. ಪರಮಾರ್ಥತತ್ತ್ವವನ್ನು ಕಂಡುಕೊಂಡು ಅದರಲ್ಲಿಯೇ ನೆಲೆನಿಂತಿರುವ ಮಹಾತ್ಮರ ಅನುಗ್ರಹವೊಂದಿದ್ದರೆ ಮಿಕ್ಕ ಎಲ್ಲಾ ಜ್ಞಾನಸಾಧನಗಳನ್ನೂ ಸುಲಭವಾಗಿ ಸಂಪಾದಿಸಿಕೊಂಡುಬಿಡಬಹುದು.

# ಬ್ರಹ್ಮದ ಲಕ್ಷಣ

ಉಪನಿಷತ್ತಿನಲ್ಲಿ ಬ್ರಹ್ಮವಿದ್ಯೆಯನ್ನು ಹೇಳಿದೆ ಎಂದು ಪ್ರಸಿದ್ಧಿ. ಬ್ರಹ್ಮವನ್ನು ಹೇಗೆ ಗುರುತಿಸಬೇಕು? ಅದರ ವಿಶೇಷಸ್ವರೂಪವೇನು?- ಎಂದು ಜಿಜ್ಞಾಸುಗಳ ಮನಸ್ಸಿನಲ್ಲಿ ಪ್ರಶ್ನೆಯು ಎದ್ದುಕೊಳ್ಳುವದು ಸಹಜವಾಗಿರುತ್ತದೆ. ಏಕೆಂದರೆ ಬ್ರಹ್ಮವೆಂದರೆ ದೊಡ್ಡದು ಎಂದು ಅರ್ಥ. ಎಲ್ಲಕ್ಕಿಂತಲೂ ದೊಡ್ಡದಾಗಿರುವ ಈ ತತ್ತ್ವವು ಯಾವದು? ಇದನ್ನು ಕುರಿತು ಎರಡು ಮಾತುಗಳನ್ನು ಇಲ್ಲಿ ಬರೆಯುವೆನು.

ತೈತ್ತಿರೀಯ ಎಂಬ ಉಪನಿಷತ್ತಿನಲ್ಲಿ ವರುಣನಿಗೂ ಅವನ ಮಗನಾದ ಭೃಗುವೆಂಬಾತನಿಗೂ ನಡೆದ ಒಂದು ಸಂವಾದವಿದೆ. ಭೃಗುವು ತಂದೆಯಾದ ವರುಣನ ಬಳಿಗೆ ಭಕ್ತಿಯಿಂದ ಬಂದು "ಪೂಜ್ಯನೇ, ಬ್ರಹ್ಮವೆಂಬುದು ಯಾವದೆಂಬುದನ್ನು ನನಗೆ ಹೇಳಿಕೊಡು" ಎಂದು ಕೇಳಿದನು. ತಂದೆಯು ಈ ಉತ್ತರವನ್ನು ಕೊಟ್ಟನು; "ಅನ್ನ (ಶರೀರ), ಪ್ರಾಣ (ಶರೀರದಲ್ಲಿರುವ ಭೋಕ್ತ), ಚಕ್ಷುಸ್ಸು, ಶ್ರೋತ್ರ, ಮನಸ್ಸು, ದಿಕ್ಕು (ಅರಿಯುವದಕ್ಕೆ ಸಾಧನಗಳು) - ಇವುಗಳನ್ನು ನೆನಪಿಟ್ಟುಕೊ. ಈ ಬ್ರಹ್ಮ ಮೊದಲು ಸ್ತಂಬದ

ವರೆಗಿನ ಪ್ರಾಣಿಗಳು ಯಾವದರಿಂದ ಹುಟ್ಟುವವೋ, ಹುಟ್ಟಿದ ಬಳಿಕ ಯಾವದರಿಂದ ಜೀವಿಸಿ ರುವವೋ, ಕೊನೆಗೆ ಯಾವದರ ಕಡೆಗೆ ಹೋಗಿ ಅದರಲ್ಲಿಯೇ ಸೇರಿ ಒಂದಾಗಿ ಬಿಡುವವೋ ಅದರ ವಿಜ್ಞಾನವನ್ನು ಮಾಡಿಕೊ. ಅದೇ ಬ್ರಹ್ಮವು."

ವೇದಾಂತವನ್ನು ಕಲಿಯುವದಕ್ಕೆಂದು ಗುರುಗಳ ಶುಶ್ರೂಷೆಗೆ ಬರುವ ಶಿಷ್ಯರು ಇಂದಿಗೂ "**ಅಧೀಹಿ ಭಗವೋ ಬ್ರಹ್ಮ**" (ಪೂಜ್ಯನೆ, ಬ್ರಹ್ಮವನ್ನು ಹೇಳಿಕೊಡು) ಎಂಬ ಭೃಗುವಿನ ಪ್ರಶ್ನೆಯ ವಾಕ್ಯದ ಮಂತ್ರವನ್ನೇ ಉಪಯೋಗಿಸುತ್ತಾರೆ. ಈಗಲೂ ಗುರು ಗಳು ಬ್ರಹ್ಮತತ್ತ್ವವನ್ನು ಉಪಯೋಗಿಸುವದಕ್ಕೆ ಈ ಲಕ್ಷಣವಾಕ್ಯವನ್ನೇ ಹೇಳಿಕೊಡುತ್ತಾರೆ. ಯಾವದು ಸಕಲಭೂತಗಳ ಜನ್ಮಸ್ಥಿತಿಲಯಗಳಿಗೆ ಕಾರಣವಾಗಿರುವದೋ ಅದೇ ಬ್ರಹ್ಮವು ಎಂಬ ಲಕ್ಷಣವನ್ನು ನೆನಪಿಟ್ಟು ನಮ್ಮ ನಮ್ಮ ಶರೀರಪ್ರಾಣಕರಣಗಳ ಸಂಘಾತದಲ್ಲಿಯೇ ಬ್ರಹ್ಮವನ್ನು ಅನುಭವಕ್ಕೆ ತಂದುಕೊಳ್ಳಬೇಕು – ಎಂಬುದು ವರುಣನ ಉಪದೇಶದ ಸಾರವು. ಈ ಲಕ್ಷಣವನ್ನೇ ಬಾದರಾಯಣರು ತಮ್ಮ ವೇದಾಂತ ಮೀಮಾಂಸಾಶಾಸ್ತ್ರದಲ್ಲಿ "**ಜನ್ಮಾದ್ಯಸ್ಯ ಯತಃ**" (೧-೧-೨) ಎಂಬ ಸೂತ್ರದಲ್ಲಿ ಸಂಗ್ರಹಿಸಿರುತ್ತಾರೆ.

ವರುಣನ ಉಪದೇಶದಲ್ಲಿರುವ ಲಕ್ಷಣವಾಕ್ಯದ ಅಭಿಪ್ರಾಯವನ್ನು ಕುರಿತು ಸ್ವಲ್ಪ ವಿಚಾರಮಾಡತಕ್ಕದ್ದಿದೆ. ಬ್ರಹ್ಮವೆಂಬುದು ಇಡಿಯ ಜಗತ್ತಿಗೆ, ಬಗೆಬಗೆಯಾಗಿ ಕಾಣುತ್ತಿ ರುವ, ಚರಾಚರಪ್ರಾಣಿಗಳಿಂದೊಡಗೂಡಿರುವತ್ತ ದೇಶಕಾಲನಿಮಿತ್ತಗಳಿಗಾಗಿ ಫಲವನ್ನು ಕೊಡುವ ಕ್ರಿಯಾಕಾರಕಗಳಿದ್ದುಕೊಂಡಿರುವ ಈ ಜಗತ್ತಿಗೆ ಕಾರಣವು. ಈ ಜಗತ್ತಿನ ಹುಟ್ಟು, ಇರವು, ನಾಶ ಎಲ್ಲವೂ ಯಾವದರಿಂದ ಆಗುವವೋ ಅದು ಬ್ರಹ್ಮವು. ಜಗತ್ತು ಹುಟ್ಟು, ಇರವು, ಸಾವು ಎಂಬ ಮೂರವಸ್ಥೆಗಳಲ್ಲಿಯೂ ಬ್ರಹ್ಮವನ್ನು ಬಿಟ್ಟಿರುವ ಹಾಗಿಲ್ಲ. ಬ್ರಹ್ಮವು ಈ ಜಗತ್ತಿಗಿಂತಲೂ ವ್ಯಾಪಕವಾಗಿರುವದು, ಜಗತ್ತನ್ನು ತನ್ನೊಳಗೇ ಅಡಕ ಮಾಡಿಕೊಂಡಿರುವದು. ಆದ್ದರಿಂದಲೇ ಅದು ಬ್ರಹ್ಮವು, ದೊಡ್ಡದು, ಅದಕ್ಕಿಂತ ದೊಡ್ಡದು ಇನ್ನೊಂದಿಲ್ಲ.

ಬ್ರಹ್ಮದಿಂದ ಜಗತ್ತು ಆಗಿದೆ ಎಂದರೆ ಕುಂಬಾರನಿಂದ ಗಡಿಗೆಯು ಆದಂತೆ ಅಲ್ಲ; ಏಕೆಂದರೆ ಕುಂಬಾರನಿಂದ ಆಗಿರುವ ಗಡಿಗೆಯು ಕುಂಬಾರನನ್ನೇ ಆಶ್ರಯಿಸಿ ಕೊಂಡು ಅವನಲ್ಲಿಯೇ ಇರುವದಿಲ್ಲ, ಅದು ನಾಶವಾಗುವಾಗ, ಕುಂಬಾರನಲ್ಲಿ ಬೆರೆ ಯುವದೂ ಇಲ್ಲ. ಆದರೆ ಜಗತ್ತು ಬ್ರಹ್ಮದಿಂದಲೇ ಹುಟ್ಟಿದೆ, ಬ್ರಹ್ಮದಲ್ಲಿಯೇ ಇರುತ್ತದೆ, ಬ್ರಹ್ಮದಲ್ಲಿಯೇ ಸೇರಿ ಏಕವಾಗುತ್ತದೆ ಎಂದು ವರುಣನು ಹೇಳಿರುತ್ತಾನೆ. ಆದ್ದರಿಂದ

ಗಡಿಗೆಯು ಮಣ್ಣಿನಿಂದ ಹುಟ್ಟಿ, ಇರುವಾಗ ಮಣ್ಣನ್ನೇ ಆಶ್ರಯಿಸಿದ್ದು ನಾಶವಾದಾಗ ಮಣ್ಣಿನಲ್ಲಿಯೇ ಬೆರತು ಒಂದಾಗಿಬಿಡುವಂತೆ ಜಗತ್ತು ಬ್ರಹ್ಮದಿಂದಲೇ ಹುಟ್ಟಿ ಅದರಲ್ಲಿಯೇ ಇದ್ದು ಅದರಲ್ಲಿಯೇ ಅಡಗುತ್ತದೆ ಎಂಬುದು ವರುಣನ ಅಭಿಪ್ರಾಯ. ಬ್ರಹ್ಮವು ಜಗತ್ತಿಗೆ **ಉಪಾದಾನಕಾರಣವು**; ಉಪಾದಾನಕಾರಣವೆಂದರೆ ಕಾರ್ಯವಾಗುವದಕ್ಕೆ ಯಾವ ವಸ್ತುವನ್ನು ಅವಶ್ಯವಾಗಿ ತೆಗೆದುಕೊಳ್ಳಬೇಕೋ ಅದು.

ಇಷ್ಟೇ ಅಲ್ಲ, ಬ್ರಹ್ಮವು ಗಡಿಗೆಗೆ ಕುಂಬಾರನಂತೆ ಜಗತ್ತಿಗೆ **ನಿಮಿತ್ತಕಾರಣವೂ** ಆಗಿದೆ ಎಂದು ತಿಳಿಯಬೇಕು. ಏಕೆಂದರೆ ಮಣ್ಣಿಗಿಂತ ಬೇರೆಯಾಗಿ ಮಣ್ಣನ್ನುಪಯೋಗಿಸಿ ಗಡಿಗೆಯನ್ನು ಮಾಡುವ ಕುಂಬಾರನಂತೆ ಬ್ರಹ್ಮಕ್ಕಿಂತ ಬೇರೆಯಾಗಿ ಮತ್ತೊಬ್ಬನು ಇದ್ದಾನೆಂದು ಹೇಳಿಲ್ಲ, ಒಂದು ವೇಳೆ ಹೇಳಿದ್ದರೂ ಬ್ರಹ್ಮವು ಬ್ರಹ್ಮವಾಗುತ್ತಿರಲಿಲ್ಲ; ಬ್ರಹ್ಮವನ್ನುಪಯೋಗಿಸಿಕೊಂಡು ಜಗತ್ತನ್ನು ಮಾಡುವ ಆ ಮತ್ತೊಬ್ಬನೇ ಬ್ರಹ್ಮಕ್ಕಿಂತ ದೊಡ್ಡವನಾಗುತ್ತಿದ್ದನು. ಆಗ ಬ್ರಹ್ಮವೆಂಬ ಶಬ್ದವನ್ನು ಮುಖ್ಯಾರ್ಥದಲ್ಲಿ ಉಪಯೋಗಿಸಿದಂತೆ ಆಗುತ್ತಿರಲಿಲ್ಲ, ಏಕೆಂದರೆ ಅದು ಆಗ ತೀರ ದೊಡ್ಡದೆನ್ನುವದಕ್ಕೆ ಬರುತ್ತಿರಲಿಲ್ಲ. ಆದ್ದರಿಂದಲೇ ಬ್ರಹ್ಮವು ಜಗತ್ತಿಗೆ ಉಪಾದಾನಕಾರಣವಾದ ಪ್ರಕೃತಿಯೂ ಆಗಿದೆ; ನಿಮಿತ್ತಕಾರಣವೂ ಆಗಿದೆ - ಎಂದು ಬಾದರಾಯಣಾಚಾರ್ಯರು ತಮ್ಮ ವೇದಾಂತಸೂತ್ರದಲ್ಲಿ ಬರೆದಿರುತ್ತಾರೆ.

ಬ್ರಹ್ಮವು ಯೋಚನೆಮಾಡಿ ಜಗತ್ತನ್ನು ಸೃಷ್ಟಿಮಾಡಿತು ಎಂದು ಕೆಲವು ಉಪನಿಷತ್ತುಗಳಲ್ಲಿ ಹೇಳಿರುತ್ತದೆ. ಆದ್ದರಿಂದಲೂ ಅದು ಗಡಿಗೆಗೆ ಕುಂಬಾರನಂತೆ ಚೇತನರೂಪವಾದ ನಿಮಿತ್ತಕಾರಣವಾಗಿರಬೇಕೆಂದು ಗೊತ್ತಾಗುತ್ತದೆ. ಇಡಿಯ ಜಗತ್ತನ್ನೇ ಸೃಷ್ಟಿಮಾಡಬೇಕಾದರೆ ಅದಕ್ಕೆ ಎಲ್ಲವೂ ತಿಳಿದಿರಬೇಕು ಎಂದು ಊಹಿಸಬೇಕಾಗುತ್ತದೆ. ಬ್ರಹ್ಮವು **ಸರ್ವಜ್ಞವು** ಎಂದು ಶ್ರುತಿಯಲ್ಲಿ ಹೇಳಿಯೂ ಇರುತ್ತದೆ, ಇದರಂತೆ ಬ್ರಹ್ಮವೇ ಎಲ್ಲವೂ ಆಯಿತು ಎಂದೂ ಉಪನಿಷತ್ತಿನಲ್ಲಿ ಹೇಳಿದೆ; ಆದ್ದರಿಂದ ಜಗತ್ತಿನಲ್ಲಿ ಕಾಣುವ ಬಗೆ ಬಗೆಯ ವಸ್ತುಗಳಾಗಿಯೂ ಜೀವರಾಗಿಯೂ ಆಗುವ ಎಲ್ಲಾ ಶಕ್ತಿಗಳೂ ಅದರಲ್ಲಿ ಇರಬೇಕೆಂದು ಊಹಿಸುವದಕ್ಕೆ ಅವಕಾಶವಿದೆ; ಶ್ರುತಿಯಲ್ಲಿ ಬ್ರಹ್ಮವು **ಸರ್ವಶಕ್ತಿಗಳುಳ್ಳದ್ದು** ಎಂದು ಹೇಳಿಯೂ ಇರುತ್ತದೆ. ಹೀಗೆ ಯಾವದು ಜಗತ್ತಿನಿಂದ ಕಟ್ಟುವಡೆಯದೆ, ಸರ್ವಜ್ಞನೂ ಸರ್ವಶಕ್ತವೂ ಆಗಿದ್ದುಕೊಂಡು, ಈ ಇಡಿಯ ಜಗತ್ತನ್ನು ಸೃಷ್ಟಿಸಿರುವದೋ, ಯಾವದರ ಅಧೀನವಾಗಿ ಅದರಲ್ಲಿಯೇ ಈ ಜಗತ್ತು ಇದ್ದುಕೊಂಡಿರುವದೋ, ಕೊನೆಗೂ ಯಾವ ದನ್ನೇ ಅವಶ್ಯವಾಗಿ ಸೇರಿಕೊಳ್ಳುವದೋ, ಅದು

ಬ್ರಹ್ಮವು; ಅದನ್ನು ಅರಿತುಕೋ – ಎಂದು ವರುಣನು ಲಕ್ಷಣವಾಕ್ಯದಿಂದ ತಿಳಿಸಿ ಕೊಟ್ಟಂತೆ ಆಯಿತು.

ಇನ್ನು ಲಕ್ಷಣವಾಕ್ಯದಿಂದ ಅದ ಈ ಪರೋಕ್ಷಜ್ಞಾನವನ್ನು ನಮ್ಮ ಅನುಭವಕ್ಕೆ ತಂದುಕೊಳ್ಳಬೇಕಷ್ಟೆ. ಅದಕ್ಕೆ ಭೃಗುವು ಮಾಡಿರುವ ಉಪದೇಶವು ಅತ್ಯಂತ ಆಶ್ಚರ್ಯ ಕರವಾಗಿದೆ. ಈ ಬ್ರಹ್ಮವನ್ನು ನಿಮ್ಮ ನಿಮ್ಮ ಶರೀರದೊಳಗೆ, ಶರೀರಪ್ರಾಣಕರಣಗಳ ಒಟ್ಟು ಸಂಘಾತದಲ್ಲಿಯೇ ಕಂಡುಕೊಳ್ಳಿರಿ ಎಂದು ನಮ್ಮ ಕಡೆಗೇ ಬೆರಳುತೋರಿಸಿರುತ್ತಾನೆ. ಇಂಥ ಬ್ರಹ್ಮವು ನಮ್ಮೊಳಗೆ ಇದೆ ಎಂದರೆ ಅಚ್ಚರಿಯ ಮಾತಲ್ಲವೆ? ಇಡಿಯ ಪ್ರಪಂಚಕ್ಕೇ ಕಾರಣನಾಗಿರುವ ಬ್ರಹ್ಮವೆಂಬ ವಸ್ತು ನಮ್ಮೊಳಗೇ ಇದೆ ಎಂದರೆ ಎಷ್ಟು ದೊಡ್ಡ ಸುಳ್ಳಾಗಿ ತೋರುತ್ತದೆ! ಆದರೂ ಇದು ಭೃಗುವೆಂಬ ತನ್ನ ಪ್ರಿಯಪುತ್ರನಿಗೆ ತಂದೆಯು ಮಾಡಿ ರುವ ಹಿತೋಪದೇಶವಾಗಿದೆಯಲ್ಲ! ಈ ವಾಕ್ಯವು ಆಸ್ತಿಕರೆಲ್ಲರೂ ನಿರ್ದುಷ್ಟಪ್ರಮಾಣ ವೆಂದು ನಂಬುತ್ತಿರುವ ವೇದದಲ್ಲಿದೆಯಲ್ಲ! ಇದಕ್ಕೇನು ಅಭಿಪ್ರಾಯವಿದ್ದೀತು? ಇದರ ವಿಚಾರವನ್ನು ಮುಂದಿನ ಲೇಖನದಲ್ಲಿ ಪ್ರಾರಂಭಿಸುವೆನು.

# ಬ್ರಹ್ಮವು ನಮ್ಮೆಲ್ಲರ ಆತ್ಮನು

ತೈತ್ತೀರಿಯೋಪನಿಷತ್ತಿನಲ್ಲಿ ವರುಣನು ತನ್ನ ಮಗನಾದ ಭೃಗುವಿಗೆ ಮಾಡಿದ ಘನವಾದ ಉಪದೇಶವಿದೆ. ಅದರಲ್ಲಿ "ಎಲ್ಲಾ ಭೂತಗಳೂ ಹುಟ್ಟುವದಕ್ಕೂ ಜೀವಿಸಿರು ವದಕ್ಕೂ ಯಾವದು ಕಾರಣವಾಗಿರುವದೋ, ಎಲ್ಲಾ ಭೂತಗಳೂ ಯಾವದನ್ನು ಕೊನೆಯಲ್ಲಿ ಸೇರುವವೋ ಯಾವದರಲ್ಲಿಯೇ ಕೊನೆಗೆ ಒಂದಾಗಿ ಬಿಡುವವೋ ಅದು ಬ್ರಹ್ಮವು" ಎಂಬ ಲಕ್ಷಣವಾಕ್ಯವಿದೆ. ಆ ವಾಕ್ಯದ ಅಭಿಪ್ರಾಯವನ್ನುಸ್ವಲ್ಪಮಟ್ಟಿಗೆ ಹಿಂದಿನ ಲೇಖನದಲ್ಲಿ ವಿವರಿಸಿರುತ್ತೇನೆ.

ಈಗ ಭೃಗುವು ತನ್ನಲ್ಲಿಯೇ ತಾನು ತಪಸ್ಸುಮಾಡಿ ಆ ಬ್ರಹ್ಮದ ವಿಶೇಷ ರೂಪ ವನ್ನು ಕಂಡುಕೊಂಡನು. ಅವನಿಗೆ ಆಗ ಬ್ರಹ್ಮವು ತನ್ನ ಆತ್ಮನೇ ಎಂದು ತಿಳಿದುಬಂತು. ಅದು ಹೇಗೆಂಬುದನ್ನು ಇಲ್ಲಿ ಸ್ವಲ್ಪ ವಿಚಾರಮಾಡೋಣ.

ವರುಣನು ಭೃಗುವಿಗೆ ಬ್ರಹ್ಮವನ್ನು ತಿಳಿದುಕೊಳ್ಳುವದಕ್ಕೆ ಅನ್ನ(ಶರೀರ), ಪ್ರಾಣ, ಚಕ್ಷುಸ್ಸು, ಶ್ರೋತ್ರ, ಮನಸ್ಸು ವಾಕ್ಕು ಎಂಬ ದ್ವಾರಗಳನ್ನು ಮೊದಲು ಹೇಳಿ ಆ ಬಳಿಕ

ಅದರ ಲಕ್ಷಣವನ್ನು ತಿಳಿಸಿಕೊಟ್ಟನು. ಆದ್ದರಿಂದ ಈ ಶರೀರವೇ ಮುಂತಾದವುಗಳ ಮೂಲಕವಾಗಿಯೇ ಬ್ರಹ್ಮವನ್ನು ವಿಶೇಷರೂಪದಿಂದ ಅರಿತುಕೊಳ್ಳಬೇಕೆಂದು ಭೃಗುವಿಗೆ ಹೊಳೆಯಿತು. ಬ್ರಹ್ಮವನ್ನು ತಿಳಿಯುವದಕ್ಕೆ ಶರೀರಾದಿಗಳು ದ್ವಾರವೆಂಬುದನ್ನು ಬೃಹದಾರಣ್ಯಕವೆಂಬ ಉಪನಿಷತ್ತಿನಲ್ಲಿಯೂ ಹೇಳಿರುತ್ತದೆ. "ಬ್ರಹ್ಮವು ಪ್ರಾಣಕ್ಕೆ ಪ್ರಾಣವು, ಚಕ್ಷುಸ್ಸಿಗೆ ಚಕ್ಷುಸ್ಸು ಶ್ರೋತ್ರಕ್ಕೆ ಶ್ರೋತ್ರವು, ಅನ್ನಕ್ಕೆ ಅನ್ನವು, ಮನಸ್ಸಿಗೆ ಮನಸ್ಸು; ಹೀಗೆಂಬುದನ್ನು ಯಾರು ಅರಿತುಕೊಳ್ಳುವರೋ ಅವರು ಅತ್ಯಂತಪುರಾಣವಾದ ಎಲ್ಲಕ್ಕೂ ಆದಿಯಾದ ಬ್ರಹ್ಮವನ್ನು ನೇರಾಗಿ ಕಂಡುಕೊಳ್ಳುವದು" ಎಂದು ಆ ಉಪನಿಷತ್ತು ತಿಳಿಸಿರುತ್ತದೆ. ಆದ್ದರಿಂದ ಭೃಗುವು ಈ ದ್ವಾರಗಳಿಂದ ಬ್ರಹ್ಮವನ್ನು ತಿಳಿದುಕೊಳ್ಳುವದಕ್ಕೆಂದು ತಪಸ್ಸು ಮಾಡಿದನು.

ಭೃಗುವು ಮಾಡಿದ ತಪಸ್ಸು ಯಾವದು? ಕೃಚ್ಛ್ರ, ಚಾಂದ್ರಾಯಣ ಮುಂತಾದ ಶರೀರವನ್ನು ಸೊರಗಿಸುವ ಸಾಧನವು ಇಲ್ಲಿ ಏತಕ್ಕೂ ಉಪಯೋಗಕ್ಕೆ ಬರುವದಿಲ್ಲ, ಏಕೆಂದರೆ ಶರೀರವನ್ನು ಸೊರಗಿಸಿದರೆ ಇಂದ್ರಿಯಗಳೂ ಮನಸ್ಸೂ ಮಬ್ಬಾಗುವವು. ಆಗ ತತ್ತ್ವವನ್ನು ನಿರ್ಧಾರಣಮಾಡುವ ಶಕ್ತಿಯೂ ಕುಗ್ಗುವದು. ಭೃಗುವು ಮಾಡಿದ ತಪಸ್ಸು ಇದಲ್ಲ, ಅವನು ಮನಸ್ಸನ್ನೂ ಇಂದ್ರಿಯಗಳನ್ನೂ ಏಕಾಗ್ರತೆಗೊಳಿಸಿಕೊಂಡು ವಿಚಾರ ಮಾಡುವದಕ್ಕೆ ಪ್ರಯತ್ನಿಸಿದನು. ಹೊರಗಿನ ವಿಷಯಗಳ ತತ್ತ್ವವನ್ನಾಗಲಿ ನಮ್ಮೊಳಗಿನ ತತ್ತ್ವವನ್ನಾಗಲಿ ತಿಳಿಯುವದಕ್ಕೆ ಈ ಏಕಾಗ್ರತೆಯು ಉತ್ತಮವಾದ ಸಾಧನವಾಗಿರುತ್ತದೆ.

ಭೃಗುವು ತಪಸ್ಸಿನಿಂದ ಕಂಡುಹಿಡಿದ ಮೊದಲನೆಯ ವಿಷಯವು ಯಾವದೆಂದರೆ ಅನ್ನವೇ ಬ್ರಹ್ಮವು. ಏಕೆಂದರೆ ವರುಣನು ಹೇಳಿದ ಬ್ರಹ್ಮಲಕ್ಷಣವು ಅನ್ನಕ್ಕೆ ಹೊಂದುತ್ತದೆ. ಇಡಿಯ ಸ್ಥೂಲಪ್ರಪಂಚವು ಅನ್ನವಾಗಿರುತ್ತದೆ; ಇದನ್ನೇ ಪ್ರಾಣಿಗಳು ತಿಂದು ಬೇರೆಬೇರೆಯ ಶರೀರಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಅನ್ನರಸದಿಂದಲೇ ಬೇರೆಬೇರೆಯ ದೇಹದ ಧಾತುಗಳು ಉತ್ಪನ್ನವಾಗಿ ಕೊನೆಗೆ ರೇತಸ್ಸು ಉಂಟಾಗುತ್ತದೆ; ಅದರಿಂದ ಹೊಸ ಹೊಸ ಪ್ರಾಣಿಗಳು ಹುಟ್ಟುತ್ತವೆ. ಹುಟ್ಟಿದ ಪ್ರಾಣಿಗಳಿಗೆ ಅನ್ನವೇ ಜೀವನಕ್ಕೆ ಆಧಾರವು; ಕೊನೆಗೆ ಆಯುಸ್ಸು ಮುಗಿದ ಬಳಿಕ ಎಲ್ಲಾ ಪ್ರಾಣಿಗಳೂ ಈ ಅನ್ನದಲ್ಲಿಯೇ ಅಡಗಿಕೊಳ್ಳುತ್ತವೆ. ಆದ್ದರಿಂದ ಅನ್ನವೇ ಎಲ್ಲರ ಜನ್ಮಸ್ಥಿತಿಲಯಗಳಿಗೆ ಕಾರಣವಾಗಿರುವ, ಎಲ್ಲರಿಗೂ ಆತ್ಮನಾಗಿರುವ, ಬ್ರಹ್ಮವು.

ಹೀಗೆಂದು ನಿರ್ಣಯಿಸಿದ ಬಳಿಕ ಭೃಗುವಿಗೆ ಸ್ವಲ್ಪ ಸಂಶಯವುಂಟಾಯಿತು. ಈ ಅನ್ನವು ಬಗೆಬಗೆಯ ಮಾರ್ಪಾಡುಗಳನ್ನು ಹೊಂದುತ್ತಿರುವದು; ಅನ್ನದಿಂದ ಹುಟ್ಟಿದ

ಶರೀರವಂತೂ ಹುಟ್ಟಿ ಬೆಳೆದು ನಾಶವಾಗುವದು. ಎಲ್ಲರಿಗೂ ತಿಳಿದಿರುವ ವಿಷಯವು. ಹೀಗಿರುವಲ್ಲಿ ಇದು ಹೇಗೆ ಬ್ರಹ್ಮವಾದೀತು?ಇದಕ್ಕೂ ಕಾರಣವಾಗಿರುವ, ಇದಕ್ಕಿಂತಲೂ ವ್ಯಾಪಕವಾದ, ಇದಕ್ಕೂ ಆತ್ಮನಾಗಿರುವ ತತ್ತ್ವವೊಂದು ಇರಬೇಕು, ಅದು ಯಾವದಿದ್ದೀತು? ಹೀಗೆಂದು ಯೋಚಿಸಿಕೊಂಡು ಭೃಗುವು ತಂದೆಯ ಬಳಿಗೆ ಬಂದು "ಪೂಜ್ಯನೆ, ಬ್ರಹ್ಮವನ್ನು ತಿಳಿಸಿಕೊಡು"ಎಂದು ಮತ್ತೆ ಕೇಳಿದನು. ಆದರೆ ತಂದೆಯು ಒಂದೇ ಒಂದು ಉತ್ತರವನ್ನು ಕೊಟ್ಟನು. "ತಪಸ್ಸಿನಿಂದಲೇ ಬ್ರಹ್ಮವನ್ನು ಅರಿತುಕೊ, ತಪಸ್ಸೇ ಬ್ರಹ್ಮವು".

ಈಗ ಭೃಗುವು ತಪಸ್ಸಿನಿಂದಲೇ ನಿಜವಾದ ಬ್ರಹ್ಮರೂಪವನ್ನು ಕಂಡು ಹಿಡಿಯುವದಕ್ಕೆ ಪ್ರಯತ್ನಿಸಿದನು. ಇಡಿಯ ಪ್ರಪಂಚವೇ ಅನ್ನರೂಪವಾಗಿರುವದೆಂದೂ ಅನ್ನಮಯವಾದ ನಮ್ಮ ಸ್ಥೂಲಶರೀರವೂ ಅದರ ಭಾಗವೇ ಆಗಿರುವದೆಂದೂ ಮೇಲುಮೇಲೆ ನೋಡಿದರೆ ಕಾಣಿಸುವದು ನಿಜ. ಆದರೆ ಮನಸ್ಸನ್ನು ಏಕಾಗ್ರಗೊಳಿಸಿ ಸ್ವಲ್ಪ ಒಳಹೊಕ್ಕು ನೋಡಿದರೆ ಇದನ್ನೆಲ್ಲ ಪ್ರಾಣವೇ ವ್ಯಾಪಿಸಿಕೊಂಡಿರುತ್ತದೆ. ಪ್ರಾಣವು ಕ್ರಿಯಾರೂಪವಾಗಿರುತ್ತದೆ; ಪ್ರಪಂಚವು ಎಲ್ಲೆಲ್ಲಿಯೂ ಕ್ರಿಯಾಮಯವಾಗಿಯೇ ಇರುತ್ತದೆ. ಇದರಂತೆ ನಾವೂ ಕ್ರಿಯಾಮಯವಾಗಿಯೇ ಇರುತ್ತೇವೆ. ಆದ್ದರಿಂದ ಪ್ರಾಣ ಕ್ಕಿಂತ ಬೇರೆಯಾದ ಬ್ರಹ್ಮವಿಲ್ಲ, ಪ್ರಾಣವೇ ಜಗತ್ತಿನ ಜನ್ಮಸ್ಥಿತಿಪ್ರಲಯಗಳಿಗೆ ಕಾರಣವಾಗಿರುತ್ತದೆ.

ಭೃಗುವು ಇನ್ನೂ ಸ್ವಲ್ಪ ಒಳಹೊಕ್ಕು ನೋಡಿದನು; ಆಗ ಮನಸ್ಸೇ ಬ್ರಹ್ಮವೆಂದು ತೋರಿತು. ಮನಸ್ಸಿನ ವೃತ್ತಿಗಳಿಗಿಂತ ಬೇರೆಯಾಗಿರುವ ಪ್ರಪಂಚವು ಎಲ್ಲಿದೆ? ನಾವೂ ಮನೋಮಯರೇ ಆಗಿರುತ್ತೇವೆ. ಅವನು ಇನ್ನೂ ಒಳಹೊಕ್ಕು ವಿಚಾರಮಾಡಿದನು; ಆಗ ವಿಜ್ಞಾನವೇ, ಬುದ್ಧಿಯೇ ಬ್ರಹ್ಮವೆಂದು ತೋರಿತು. ಮನಸ್ಸೂ ಬುದ್ಧಿಯೂ ನಮ್ಮ ಅಂತಃಕರಣದ ವಿಶೇಷಗಳು. ಆಯಾ ದೃಷ್ಟಿಯಿಂದ ನೋಡಿದ ಇಡಿಯ ಪ್ರಪಂಚವೇ ತನ್ಮಯವಾಗಿ ತೋರುವದು.

ಆಗ ಭೃಗುವು ತಂದೆಯ ಅಪ್ಪಣೆಯಂತೆ ಮತ್ತೆ ತಪಸ್ಸುಮಾಡಿದನು. ಅವನಿಗೆ ಎಲ್ಲವೂ ಆನಂದವೆಂದೇ ತೋರಿತು. ನಾನೂ ಆನಂದಸ್ವರೂಪವೇ ಎಂದು ಅವನು ಅರಿತುಕೊಂಡನು. ಆನಂದವೇ ನಮ್ಮಗಳೆಲ್ಲರ ಆತ್ಮನೆಂಬುದು ಹೇಗೆಂಬುದನ್ನು ತೈತ್ತೀರಿಯೋಪನಿಷತ್ತಿನಲ್ಲಿ ವಿಸ್ತಾರವಾಗಿ ಹೇಳಿದೆ. ಇದನ್ನು ಸಂದರ್ಭಾನುಸಾರವಾಗಿ ಪ್ರಸ್ತಾಪಿಸುವೆನು.

ಭೃಗುವಿನ ತಪಸ್ಸನ್ನು ನಾವುಗಳೆಲ್ಲರೂ ಮಾಡಬೇಕು. ನಮ್ಮ ಮನಸ್ಸನ್ನು ಏಕಾಗ್ರ

ಗೊಳಿಸಿ ನಮ್ಮ ಸ್ವರೂಪವು ಯಾವದೆಂಬುದನ್ನು ಅರಿತುಕೊಳ್ಳುವದಕ್ಕೆ ಪ್ರಯತ್ನಿಸಬೇಕು. ನಾವು ಮನಸ್ಸನ್ನು ಸೂಕ್ಷ್ಮಗೊಳಿಸಿಕೊಂಡು ಒಳಗೊಳಗೆ ನಮ್ಮ ಸ್ವರೂಪವನ್ನು ನಿರೂಪಿಸುತ್ತಾ ಹೋದಹಾಗೆಲ್ಲ ಹೊರಗಿನ ಜಗತ್ತಿನ ಸ್ವರೂಪವೂ ಬೇರೆಬೇರೆಯಾಗಿ ತೋರುತ್ತಾ ಹೋಗುವದು. ನಾವು ನಾಮರೂಪಗಳ ಮೊಟ್ಟೆಯಾದ ಸ್ಥೂಲಶರೀರವೆಂದು ಮೊದ ಮೊದಲು ತೋರುವದು. ಆಗ ಜಗತ್ತು ನಾಮರೂಪಗಳಿಂದ ಬಿಡಿಬಿಡಿಯಾಗಿರುವಂತೆ ತೋರುವದು. ಆದರೆ ನಾವು ಪ್ರಾಣಸ್ವರೂಪರು, ಕರ್ತೃರೂಪರು, ಭೋಕ್ತೃರೂಪರು ಎಂದು ತಿಳಿದುಕೊಂಡಾಗ ನಮಗೆ ಇಡಿಯ ಜಗತ್ತೇ ಅನಂತಕರ್ತೃ ಭೋಕ್ತೃಗಳ ರಾಶಿ ಎಂದು ತೋರುವದಕ್ಕೆ ಮೊದಲಾಗುತ್ತದೆ; ಇಂಥ ದೇಶದಲ್ಲಿ ಇಂಥ ಕಾಲದಲ್ಲಿ ಇಂಥ ನಿಮಿತ್ತದಿಂದ ಇಂಥ ಫಲವು ಆಗುವದು ಎಂಬ ಭಾವನೆಯು ಬಲಿತುಕೊಳ್ಳುತ್ತದೆ. ಎಲ್ಲಿ ನೋಡಿದರೂ ಬೇರೆಬೇರೆಯ ಕರ್ಮಗಳನ್ನು ಮಾಡಿ ಬೇರೆಬೇರೆಯ ದೇಶಕಾಲನಿಮಿತ್ತ ಗಳಿಂದ ಬೇರೆಬೇರೆಯ ಫಲಗಳನ್ನು ಅನುಭವಿಸುವ ಕರ್ತೃಭೋಕ್ತೃಗಳು ಕಿಕ್ಕಿರಿದಿರುವ ರೆಂದು ನಮಗೆ ಭಾಸವಾಗುತ್ತಿರುತ್ತದೆ.

ಆದರೆ ತಪಸ್ಸು ಮಾಡಿ ನಮ್ಮೊಳಗೆ ಇನ್ನೂ ಆಳವಾಗಿ ಇಳಿದುನೋಡಿದರೆ, ನಾವು ಶರೀರವಲ್ಲ, ಪ್ರಾಣವಲ್ಲ, ಮನಸ್ಸಲ್ಲ, ವಿಜ್ಞಾನವಲ್ಲ; ಇದೆಲ್ಲವನ್ನೂ ಬೆಳಗುತ್ತಿರುವ ಚಿನ್ಮಾತ್ರರು, ಸಾಕ್ಷಿಸ್ವರೂಪರು ಎಂದು ಹೊಳೆಯುತ್ತದೆ. ಆ ಸಾಕ್ಷಿಯಲ್ಲಿ ಯಾವ ಕ್ರಿಯಾ ಫಲಗಳ ಸೋಂಕೂ ಇರುವದಿಲ್ಲ, ಯಾವ ಸುಖದುಃಖಗಳ ಏರುಪೇರೂ ಇರುವದಿಲ್ಲ. ಈ ಸ್ವರೂಪವು ತಾನು ಇದ್ದಂತೆಯೇ ಇದ್ದು ಎಲ್ಲಾ ದೇಶ, ಕಾಲ, ವಸ್ತುಗಳಿಗೂ ಕಾರಣವಾಗಿರುತ್ತದೆ. ಇದರಲ್ಲಿಯೇ ಜಗತ್ತೆಲ್ಲವೂ ತೋರಿ ಅಡಗುತ್ತಿರುವದು; ಇದು ಜಗತ್ತಿನ ಯಾವ ದೋಷಗಳಿಗೂ ಎಡೆಗೊಡದ ಆನಂದಸ್ವರೂಪವಾಗಿದೆ ಎನ್ನುವದು ಅನುಭವಕ್ಕೆ ಬರುವದು.

ಜಗತ್ತು ಆನಂದದಿಂದಲೇ ಬಂದು ಆನಂದದಿಂದಲೇ ಜೀವಿಸಿಕೊಂಡಿದ್ದು ಆನಂದದಲ್ಲಿಯೇ ಅಡಗುವದಾದ್ದರಿಂದ ಆನಂದವೇ ಬ್ರಹ್ಮವು ಎಂಬುದು ಭೃಗು ವರುಣರ ಸಂವಾದದಿಂದ ಹೊರಡುವ ಸಿದ್ಧಾಂತವು. ಆದರೆ ಆನಂದದಿಂದ ಹುಟ್ಟಿದ, ಆನಂದದಿಂದಲೇ ಬೆಳೆಯುತ್ತಿರುವ, ಆನಂದದಲ್ಲಿಯೇ ಅಡಗುವ ಜಗತ್ತು ಆನಂದ ರೂಪವೇ ಆಗಿರಬೇಕಲ್ಲವೆ? ಸಕ್ಕರೆಯಿಂದ ಹುಟ್ಟಿ ಸಕ್ಕರೆಯಲ್ಲಿಯೇ ನಿಂತಿದ್ದು ಸಕ್ಕರೆಯಲ್ಲಿಯೇ ಅಡಗುವ ಪ್ರಾಣಿಯು ಆಕಾರದಲ್ಲಿ ಹಂದಿಯಾಗಿದ್ದರೂ ನಿಜವಾಗಿ ಅದರ ತಿರುಳು ಸಕ್ಕರೆಯೇ ಹೊರತು ಮತ್ತೆ ಬೇರೆಯ ವಸ್ತುವಾಗಿರಲಾರದು.

ಹಾಗೆಯೇ ಆನಂದರೂಪನಾದ ಪರಮಾತ್ಮನಿಂದ ಹುಟ್ಟಿರುವ ಆನಂದರೂಪನಾದ ಪರಮಾತ್ಮನಲ್ಲಿಯೇ ಜೀವಿಸಿಕೊಂಡಿರುವ, ಆನಂದರೂಪನಾದ ಪರಮಾತ್ಮನಲ್ಲಿಯೇ ಅಡಗಬೇಕಾಗಿರುವ, ನಾವೆಲ್ಲರೂ ಆನಂದರೂಪರೇ ಎಂದಾಯಿತು. ಹೀಗಿದ್ದರೂ ನಾವು ದುಃಖಿಗಳೆಂಬ ಅರಿವು ನಮಗೆ ಈಗ ಆಗಿರುವದಕ್ಕೆ ಕಾರಣವೇನು? ಎಂದು ಯಾರಾದರೂ ಕೇಳಬಹುದು. ಇದಕ್ಕೆ ವೇದಾಂತಿಗಳ ಉತ್ತರವೇನೆಂದರೆ ನಮ್ಮ ತಪ್ಪು ತಿಳಿವಳಿಕೆಯೇ ಇದಕ್ಕೆ ಕಾರಣವು. ನಮ್ಮ ಸ್ವರೂಪವಾದ ಆನಂದವನ್ನು ನಮ್ಮಿಂದ ಕಸಿದು ಕೊಳ್ಳುವದಕ್ಕೆ ಯಾರಿಂದಲೂ ಆಗಲಾರದು. ಅದು ಈಗಲೂ ನಮ್ಮ ಸ್ವರೂಪವಾಗಿಯೇ ಇದ್ದುಕೊಂಡಿದೆ. ಆದರೆ ನಾವು ಅದನ್ನು ಭೃಗುವಿನಂತೆ ತಪಸ್ಸಿನಿಂದ ಇಂದ್ರಿಯ ಮನಸ್ಸುಗಳ ಏಕಾಗ್ರತೆಯಿಂದ ಮನನಮಾಡುವದರ ಮೂಲಕ ಕಂಡುಕೊಳ್ಳಬೇಕಾಗಿ ರುತ್ತದೆ. ಇದು ಹೇಗೆಂಬುದನ್ನು ನಾವು ದೊಡ್ಡವರ ಉಪದೇಶದಿಂದ ಕಲಿತು ಕೊಳ್ಳಬೇಕಾಗಿರುತ್ತದೆ.

# ಬ್ರಹ್ಮವೊಂದೇ ಸತ್ಯ

ಬ್ರಹ್ಮವು ಜಗತ್ತಿನ ಹುಟ್ಟು ಇರವು, ಹೊಂದು– ಇವುಗಳಿಗೆ ಕಾರಣವಾಗಿರುತ್ತದೆ. ಅದು ಆನಂದಸ್ವರೂಪವಾಗಿರುತ್ತದೆ. ಇದನ್ನು ಹಿಂದೆ ಸ್ವಲ್ಪಮಟ್ಟಿಗೆ ವಿವರಿಸಿರುತ್ತೇನೆ. ಬ್ರಹ್ಮವು ಜಗಜ್ಜನ್ಮಾದಿಕಾರಣವೆಂದಾದ್ದರಿಂದ ಹೊರಡುವ ಒಂದು ಮುಖ್ಯವಾದ ಉಪ ಸಿದ್ಧಾಂತವಿದೆ. ಅದನ್ನು ಉದ್ದಾಲಕನು ಶ್ವೇತಕೇತುವೆಂಬ ತನ್ನ ಮಗನಿಗೆ ಉಪದೇಶಿಸಿದ ರೂಪದಲ್ಲಿ ಛಾಂದೋಗ್ಯೋಪನಿಷತ್ತಿನಲ್ಲಿ ನಿರೂಪಿಸಿದೆ. ಅದನ್ನು ಇಲ್ಲಿ ಸ್ವಲ್ಪಮಟ್ಟಿಗೆ ವಿಮರ್ಶೆಗೆ ತೆಗೆದುಕೊಳ್ಳುವೆನು.

ಉದ್ದಾಲಕನ ಮಗನಾದ ಶ್ವೇತಕೇತುವು ಹನ್ನೆರಡು ವರ್ಷಗಳವರೆಗೆ ಗುರು ಶುಶ್ರೂಷೆಯನ್ನು ಮಾಡಿ ವಿದ್ಯೆಯನ್ನು ಕಲಿತುಕೊಂಡು ವಿದ್ಯಾಭಿಮಾನದಿಂದ ಗರ್ವಿತ ನಾಗಿ ತಂದೆಯ ಬಳಿಗೆ ಬಂದನು. ಆಗ ತಂದೆಯು "ಅಪ್ಪ ಶ್ವೇತಕೇತು, ಬಹಳ ಓದಿ ರುವೆನೆಂದು ಹೆಮ್ಮೆಯಿಂದ ಬಂದಿರುವೆಯಲ್ಲ! ಯಾವದೊಂದನ್ನು ಶ್ರವಣಮನನಗಳನ್ನು ಮಾಡಿ ಅರಿತುಕೊಂಡರೆ ಎಲ್ಲವನ್ನೂ ಅರಿತಂತಾಗುವದೋ ಅದನ್ನು ಕೇಳಿ ತಿಳಿದುಕೊಂಡಿ ರುವೆಯೇನು?" ಎಂದನು. ಮಗನು ಚಮಕಿತನಾಗಿ 'ಅದು ಹೇಗೆ?' ಎಂದು ಕೇಳಿದನು.

ತಂದೆಯು "ಒಂದು ಮಣ್ಣು ಮುದ್ದೆಯನ್ನು ಅರಿತರೆ ಅದರಿಂದಾಗುವ ಮಣ್ಣಿನ ಪಾತ್ರೆಗಳನ್ನೆಲ್ಲ ಅರಿತಂತಾಗುವಂತೆ, ಚಿನ್ನದ ಗಟ್ಟಿಯನ್ನು ಅರಿತರೆ ಅದರಿಂದಾಗುವ ಒಡವೆಗಳನ್ನೆಲ್ಲ ಅರಿತಂತಾಗುವಂತೆ, ಒಂದು ಕಬ್ಬಿಣದ ತುಂಡನ್ನು ಅರಿತರೆ ಅದರಿಂದಾಗುವ ಸಾಮಾನುಗಳೆಲ್ಲವನ್ನೂ ಅರಿತಂತಾಗುವಂತೆ ಯಾವದೊಂದನ್ನು ಅರಿತುಕೊಂಡ ಮಾತ್ರದಿಂದ ಎಲ್ಲವನ್ನು ಅರಿತಂತಾಗುವದೋ ಅದನ್ನು ಅರಿತುಕೊಂಡಿರುವೆಯೇನು?" ಎಂದನು. ಶ್ವೇತಕೇತುವಿಗೆ ಇದು ತಿಳಿದಿರಲಿಲ್ಲ; ಉದ್ದಾಲಕನು ಅದನ್ನು ವಿವರವಾಗಿ ತಿಳಿಸಿಕೊಟ್ಟನು.

ಈ ದೃಷ್ಟಾಂತಗಳಿಂದ ತಿಳಿದುಬರುವದೇನೆಂದರೆ, ಬ್ರಹ್ಮವು ಗಡಿಗೆಗೆ ಕುಂಬಾರನಂತೆ ಬರಿಯ **ನಿಮಿತ್ತಕಾರಣವಲ್ಲ**, ಗಡಿಗೆಗೆ ಮಣ್ಣಿನಂತೆ, ಒಡವೆಗೆ ಚಿನ್ನದಂತ ಆಯುಧಕ್ಕೆ ಕಬ್ಬಿಣದಂತೆ **ಉಪಾದಾನಕಾರಣವೂ** ಆಗಿರುತ್ತದೆ. ಇದನ್ನು ಆಗಲೆ ವಾಚಕರ ಮನಸ್ಸಿಗೆ ತಂದಿರುತ್ತೇನೆ. ಈಗ ಉದ್ದಾಲಕನ ಉಪದೇಶದಲ್ಲಿ ಕಾಣುವ ಮತ್ತೊಂದು ವಿಶೇಷವನ್ನು ಇಲ್ಲಿ ನೆನಪಿಗೆ ಕೊಡುವೆನು. ಅದೇನೆಂದರೆ ಕಾರ್ಯವು ಉಪಾದಾನಕಾರಣಕ್ಕಿಂತ ಬೇರೆಯಾಗಿರುವದೇ ಇಲ್ಲ, ಉದ್ದಾಲಕನು ಹೇಳಿರುವಂತೆ ಅದು ವಾಚಾರಂಭಣವು, ನಾಮಧೇಯವು. ಗಡಿಗೆ, ಮಡಕೆ, ಕುಡಿಕೆ, ಶ್ರಾವೆ-ಎಂದು ಬೇರೆಬೇರೆಯ ಹೆಸರುಗಳಿಂದ ಕರೆಯುವ ವಸ್ತುಗಳು ಮಣ್ಣನ್ನು ಬಿಟ್ಟು ಬೇರೆಯಿರುವದೇ ಇಲ್ಲ, **"ವಾಚಾರಂಭಣಂ ವಿಕಾರೋ ನಾಮ ಧೇಯಮ್"** ಎಂದರೆ ಕಾರ್ಯವೆಂಬುದು ಬರಿಯ ವಾಕ್ಕಿನಿಂದಾಗಿರುವ ಒಂದು ಹೆಸರು ಮಾತ್ರ. ಕಾರಣಕ್ಕಿಂತ ಬೇರೆಯಾಗಿ ಕಾರ್ಯವೆಂಬುದು ಇಲ್ಲವೇ ಇಲ್ಲ - ಎಂಬುದು ಶ್ವೇತಕೇತುವಿಗೆ ಉದ್ದಾಲಕನು ಮಾಡಿರುವ ಉಪದೇಶವು.

ಮೊಟ್ಟಮೊದಲನೆಯ ಸಲಕ್ಕೆ ಈ ಮಾತನ್ನು ಕೇಳಿದವರಿಗೆ ಕಾರ್ಯವು ಕಾರಣಕ್ಕಿಂತ ಬೇರೆಯಾಗಿ ಸತ್ಯವಾಗಿರುವದಿಲ್ಲ ಎಂಬ ವಾಕ್ಯಕ್ಕೆ ಅರ್ಥವೇ ಆಗುವದಿಲ್ಲ, ಒಂದು ವೇಳೆ ಅರ್ಥವಾದರೂ ಗಡಿಗೆ, ಮಡಕೆ, ಕುಡಿಕೆ ಮುಂತಾದ ಪದಾರ್ಥಗಳು ಬೇರೆ ಬೇರೆಯ ರೂಪಗಳಿಂದ ಕೂಡಿದ್ದು ಬೇರೆ ಬೇರೆಯ ಕೆಲಸಗಳನ್ನು ಮಾಡುವದಕ್ಕೆ ಬರುತ್ತಿರುವದರಿಂದ ಅವು ಮಣ್ಣಿಗಿಂತ ಬೇರೆ ನಿಜವಾಗಿಲ್ಲ ಎಂಬ ವಾಕ್ಯವು ಅವರಿಗೆ ಎಂದಿಗೂ ತೃಪ್ತಿಯನ್ನುಂಟುಮಾಡುವಂತಿರುವದಿಲ್ಲ, ಹೀಗಿರುವಲ್ಲಿ ಬ್ರಹ್ಮದಿಂದ ಹುಟ್ಟಿದ ಈ ಜಗತ್ತು ಬ್ರಹ್ಮದ ಕಾರ್ಯವಾಗಿರುವದರಿಂದ ಬರಿಯ ಮಾತಿನಿಂದಾದ ಹೆಸರು ಮಾತ್ರ, ಅದು ಬ್ರಹ್ಮಕ್ಕಿಂತ ಬೇರೆಯಾಗಿ ಇರುವದೇ ಇಲ್ಲ ಎಂಬ ವೇದಾಂತದ ಉಪದೇಶದಲ್ಲಿ ಸಾಮಾನ್ಯರಿಗೆ ವಿಶ್ವಾಸವು ಹೇಗೆ ಉಂಟಾದೀತು? ಎಂದಿಗೂ ಉಂಟಾಗದು.

ಆದ್ದರಿಂದಲೇ 'ಜಗತ್ತು ಸ್ಪಷ್ಟವಾಗಿ ಕಾಣುತ್ತಿದ್ದರೂ ವೇದಾಂತಿಗಳು ಸುಮ್ಮನೆ ಮಿಥ್ಯೆ ಎಂದು ಹೇಳುತ್ತಾರೆ ಎಂದು ಅನೇಕರು ಹಾಸ್ಯಮಾಡುತ್ತಾರೆ. ಒಬ್ಬ ಗುರುವು ಶಿಷ್ಯನಿಗೆ ಜಗತ್ತು ಮಿಥ್ಯೆ ಎಂದು ಉಪದೇಶಿಸುತ್ತಿದ್ದನಂತೆ. ಅಷ್ಟರಲ್ಲಿ ಒಂದು ಮದಿಸಿದ ಆನೆಯು ಅವನ ಕಡೆಗೆ ಬರುವದು ಕಾಣಿಸಿತಂತೆ. ಕೂಡಲೆ ಗುರುವು ಓಡುವದಕ್ಕೆ ಪ್ರಾರಂಭಿಸಲು ಶಿಷ್ಯನು "ಗುರುವೆ, ಆನೆಯು ಮಿಥ್ಯೆಯಲ್ಲವೆ?" ಎಂದು ಕೇಳಿದನಂತೆ. ಗುರುವು "ಆನೆಯೂ ಮಿಥ್ಯೆ, ಓಡಿದ್ದೂ ಮಿಥ್ಯೆ" ಎಂದು ಸಮಾಧಾನವನ್ನು ಮಾಡಿದನಂತೆ! ಈ ಕಥೆಯನ್ನು ಅನೇಕರು ವೇದಾಂತಿಗಳನ್ನು ಹಾಸ್ಯಮಾಡುವದಕ್ಕೆ ಉದಾಹರಿಸುವದುಂಟು. ಆದರೆ ವಿಷಯವನ್ನು ಚೆನ್ನಾಗಿ ತಿಳಿದುಕೊಳ್ಳಲಾರದವರಿಗೆ ಹೇಗೆ ತಾನೆ ತೃಪ್ತಿಯನ್ನು ಉಂಟು ಮಾಡಿಕೊಡಬಹುದು?

ಮೊಟ್ಟಮೊದಲು ದೃಷ್ಟಾಂತದ ಕಥೆಯನ್ನೇ ಸ್ವಲ್ಪ ವಿಮರ್ಶಿಸೋಣ. ನಿಮ್ಮ ಕನಸಿನಲ್ಲಿ ಒಂದು ಆನೆಯು ನಿಮ್ಮನ್ನು ಬೆದರಿಸಿಕೊಂಡು ಬಂತೆಂದು ತಿಳಿದುಕೊಳ್ಳಿ; ಆಗ ನೀವು ಅಂಜಿಕೆಯಿಂದ ಓಡುತ್ತಿರಲು ನಿಮಗೆ ಎಚ್ಚರವಾಯಿತೆಂದೂ ಇಟ್ಟುಕೊಳ್ಳಿ. ಈ ಸಂದರ್ಭದಲ್ಲಿ ನೀವು ಕನಸಿನಲ್ಲಿ ಆನೆಯನ್ನು ಕಂಡದ್ದೂ ನೀವು ಓಡಿದ್ದೂ ಸುಳ್ಳಲ್ಲ; ಆದರೆ ಎಚ್ಚರದ ದೃಷ್ಟಿಯಿಂದ ಈ ಘಟನೆಯನ್ನು ವಿಮರ್ಶೆಮಾಡಿದರೆ? ಆನೆಯು ಕನಸಿನ ಆನೆ, ನಿಜವಾದ ಆನೆಯಲ್ಲ; ಎಂದರೆ ಎಚ್ಚರದಲ್ಲಿ ಮಾವಟಿಗನು ಸವಾರಿ ಮಾಡುವಂಥ ಆನೆಯಲ್ಲ, ಇದರಂತೆ ಓಟವೂ ಕನಸಿನ ಓಟ, ನಿಜವಾದ ಓಟವಲ್ಲ, ಎಂದರೆ ಎಚ್ಚರ ದಲ್ಲಿ ಹೆದರಿಕೊಂಡವರು ಓಡುವಂತೆ ಒಂದು ಸ್ಥಲದಿಂದ ಮತ್ತೊಂದು ಸ್ಥಲಕ್ಕೆ ನಿಜವಾಗಿ ಓಡಿದ್ದಲ್ಲ ಅಲ್ಲವೆ? ಹೀಗೆಯೇ 'ಈ ಜಗತ್ತು ಮಿಥ್ಯೆ' ಎಂದರೆ ಇದು ಕಾಣುವದೇ ಇಲ್ಲ, ಜಗತ್ತೇ ಇಲ್ಲ ಎಂದೇನೂ ಅರ್ಥವಲ್ಲ, ಪರಮಾರ್ಥಜ್ಞಾನದ ದೃಷ್ಟಿಯಿಂದ ನೋಡಿದರೆ ಜಗತ್ತು ಬ್ರಹ್ಮದಿಂದ ಹುಟ್ಟಿ ಬ್ರಹ್ಮದಲ್ಲಿದ್ದು ಬ್ರಹ್ಮದಲ್ಲಿಯೇ ಲಯವಾಗುತ್ತದೆ; ಆದ್ದರಿಂದ ಬ್ರಹ್ಮಕ್ಕಿಂತ ಬೇರೆಯಾಗಿ ಇದು ಪರಮಾರ್ಥವಾಗಿ ಇರುವದೇ ಇಲ್ಲ.

ಉದ್ದಾಲಕನು ಮಗನಿಗೆ ಕಾರ್ಯವು ಕಾರಣಕ್ಕಿಂತ ಬೇರೆಯಾಗಿರುವದಿಲ್ಲ ಎಂಬುದನ್ನು ತಿಳಿಸುವದಕ್ಕೆ ಉಪಯೋಗಿಸಿರುವ ಮಾತುಗಳನ್ನು ನಾವು ಸ್ವಲ್ಪ ಲಕ್ಷ್ಯವಿಟ್ಟು ನೋಡಿದರೆ ಜಗತ್ತು ಮಿಥ್ಯೆಯೆಂಬುದರ ಅಭಿಪ್ರಾಯವು ಮತ್ತಷ್ಟು ಸ್ಫುಟವಾಗುತ್ತದೆ. "**ಅಪಾಗಾದಗ್ನೇರಗ್ನಿತ್ವಂ ವಾಚಾರಮ್ಭಣಂ ವಿಕಾರೋ ನಾಮಧೇಯಂ ತ್ರೀಣಿ ರೂಪಾಣೀತ್ಯೇವ ಸತ್ಯಮ್**" ಬೆಂಕಿಯು ಬೆಂಕಿಯಾಗಿರುವದೆಂಬುದು ಹೀಗೆ ಬೆಂಕಿ

ಯಿಂದ ಹೋಗಿಬಿಟ್ಟಿರುತ್ತದೆ; ವಿಕಾರವಾದ ಬೆಂಕಿಯೆಂಬುದು ಬರಿಯ ಮಾತಿನಿಂದಾಗಿ ಹೆಸರು; ಅದರಲ್ಲಿ ಕೆಂಪು, ಬಿಳುಪು, ಕಪ್ಪು ಎಂಬ ಮೂರು ರೂಪಗಳೇ ಸತ್ಯವು - ಎಂದು ಅವನು ಹೇಳಿರುತ್ತಾನೆ. ಇದರಂತೆ ಸೂರ್ಯನ ಸೂರ್ಯತ್ವವು, ಚಂದ್ರನ ಚಂದ್ರತ್ವವು, ಮಿಂಚಿನ ವಿದ್ಯುತ್ತ್ವವು ಎಲ್ಲವೂ ಮೂರು ರೂಪಗಳೇ ಎಂದು ಅವನು ಹೇಳುತ್ತಾ ಹೋಗಿರುತ್ತಾನೆ. ಈ ಸರಣಿಯಲ್ಲಿಯೇ ಇನ್ನೂ ಮುಂದಕ್ಕೆ ವಿಚಾರ ಮಾಡುತ್ತಾ ಮಾಡುತ್ತಾ ಅವನು ಪ್ರಾಣಿಗಳ ಶರೀರಗಳೆಲ್ಲವೂ ಪಂಚಭೂತಗಳಿಂದಾಗಿ ರುವವೆಂದೂ ಆ ಭೂತಗಳು ಒಂದರಿಂದೊಂದಾಗಿರುವವೆಂದೂ ಕೊನೆಯಲ್ಲಿ ನೋಡಿ ದರೆ "**ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ**" ಈ ಶರೀರಗಳೆಲ್ಲ ಸತ್ತಿನಿಂದ ಬಂದಿರುತ್ತವೆ, ಸತ್ತಿನಲ್ಲಿರುತ್ತವೆ, ಸತ್ತನ್ನೇ ಸೇರುತ್ತವೆ ಎಂದೂ ನಿರ್ಣಯಿಸಿರುತ್ತಾನೆ. ಸತ್ತೆಂದರೆ ಇರವು ಎಂದರ್ಥ; ಅದು ಬ್ರಹ್ಮಕ್ಕೆ ಮತ್ತೊಂದು ಹೆಸರು.

**ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ** ಇದೇ ಎಲ್ಲಕ್ಕೂ ಆತ್ಮನು, ಇದೇ ಸತ್ಯವು, ಇದೇ ಆತ್ಮನು; ಶ್ವೇತಕೇತುವೇ, ಈ ಸದ್ಬ್ರಹ್ಮವೇ ನೀನು, ಎಂದು ಉದ್ದಾಲಕನು ಮತ್ತೆಮತ್ತೆ ಮಗನಿಗೆ ಬೋಧಿಸಿರುತ್ತಾನೆ. ಪ್ರಕೃತದಲ್ಲಿ ಬ್ರಹ್ಮವೇ ಸತ್ಯವು ಎಂಬ ವಾಕ್ಯವನ್ನು ನಾವು ಲಕ್ಷ್ಯದಲ್ಲಿಟ್ಟು ಮಾತಾಡುತ್ತಿರುತ್ತೇವೆ.

'ಬ್ರಹ್ಮವೇ ಸತ್ಯವು ಎಂದದ್ದರಿಂದ ಜಗತ್ತು ಅನೃತವು ಎಂದು ಹೇಳಿದಂತೆಯೇ ಆಯಿತು. ಆದರೆ ಈ ಜಗತ್ತು ಸತ್ಯವೇ ಆಗಿ ತೋರುವದಲ್ಲ!' ಎಂಬ ಶಂಕೆಯು ಆಗಾಗ್ಗೆ ಬಂದು ನಮ್ಮನ್ನು ಆತಂಕಪಡಿಸುತ್ತಿರುವದುಂಟು. ಇದಕ್ಕೆ ಪರಿಹಾರವನ್ನು ಮಣ್ಣು ಗಡಿಗೆಯ ದೃಷ್ಟಾಂತದಿಂದಲೇ ಹೇಳಬೇಕು. ಗಡಿಗೆಯು ಸತ್ಯವೆಂದು ನಮಗೆ ತೋರುವದು ನಿಜ; ಆದರೆ ಆ ಸತ್ಯತ್ವವು ಮಣ್ಣಿನದು, ಮಣ್ಣಿಗಿಂತ ಬೇರೆಯಾಗಿ ಸತ್ಯ ವಾಗಿರುವ ಗಡಿಗೆಯು ಯಾವದೂ ಇರುವದಿಲ್ಲ, ಮಣ್ಣಿಗಿಂತ ಎಲ್ಲಾ ವಿಧದಿಂದಲೂ ಬೇರ್ಪಡಿಸಿದ ಗಡಿಗೆಯು ಇರುವದೇ ಇಲ್ಲ, ಆದ್ದರಿಂದಲೇ ಶ್ರೀ ಶಂಕರಾಚಾರ್ಯ ರವರು "ನಾಮ, ರೂಪ ಮುಂತಾದ ಕಾರ್ಯವೆಲ್ಲವೂ ಸದ್ರೂಪದಿಂದಲೇ ಸತ್ಯವಾಗಿ ರುತ್ತದೆ; ತನ್ನ ರೂಪದಿಂದಲಾದರೋ ಅದು ಅನೃತವೇ" ಎಂದು ಹೇಳಿರುತ್ತಾರೆ.

ಅಸತ್ಯವಾದ ಅಸಾರವಾದ ಈ ಜಗತ್ತಿನಲ್ಲಿ ಸತ್ಯವಾದದ್ದು ಸಾರವಾದದ್ದು ಬ್ರಹ್ಮ ವೊಂದೇ. ಬ್ರಹ್ಮ ಪರಮೇಶ್ವರ, ಸತ್ - ಮುಂತಾದ ಶಬ್ದಗಳಿಗೆಲ್ಲ ಒಂದೇ ಒಂದು ಅರ್ಥ. ಬ್ರಹ್ಮವು ಆನಂದರೂಪವಾಗಿರುವದೆಂದು ನಾವು ತಿಳಿಸಿಕೊಟ್ಟಿರುತ್ತೇವೆ. ಆದ್ದರಿಂದ ಈ

ಜಗತ್ತು ಎಷ್ಟು ಬಗೆಯಿಂದ ಮಾರ್ಪಡುತ್ತಿರಲಿ, ಇದು ಎಷ್ಟೇ ಅಸತ್ಯವಾಗಿ ಅಸಾರವಾಗಿ ತೋರುತ್ತಿರಲಿ, ಇದರ ಆತ್ಮನಾಗಿರುವ ಪರಮಾರ್ಥತತ್ತ್ವವೊಂದು ಇದೆ; ಅದು ಸತ್ಯವಾದದ್ದು, ಅದು ಆನಂದರೂಪವಾದದ್ದು. ನಾವು ಆ ಸದಾನಂದರೂಪವಾದ ತತ್ತ್ವದಿಂದಲೇ ಬಂದಿರುತ್ತೇವೆ, ಅದರಲ್ಲಿಯೇ ಇದ್ದು ಕೊಂಡಿರುತ್ತೇವೆ, ಅದನ್ನೇ ಸೇರುವವರಾಗಿರುತ್ತೇವೆ. ಈ ಸಂಸಾರದಲ್ಲಿ ಸುಖಶಾಂತಿಗಳು ನಮಗೆ ಸಿಕ್ಕಬೇಕಾದರೆ ಈ ಆನಂದರೂಪನಾದ ಪರಮಾತ್ಮನನ್ನು ಲಕ್ಷ್ಯದಲ್ಲಿಟ್ಟುಕೊಂಡಿರುವದು ಅತ್ಯವಶ್ಯವಾಗಿರುತ್ತದೆ.

# ಮಿಥ್ಯೆ ಎಂದರೇನು?

ಬ್ರಹ್ಮವೇ ಸತ್ಯ ಎಂಬುದನ್ನು ವಿವರಿಸಿದ್ದೇನೆ. ಅಲ್ಲಿ ಪ್ರಸಂಗದಿಂದ 'ಜಗತ್ತು ಮಿಥ್ಯೆ', ಎಂದರೇನೆಂಬುದನ್ನೂ ಸ್ವಲ್ಪಮಟ್ಟಿಗೆ ತಿಳಿಸಿರುತ್ತೇನೆ. ಆದರೂ ವೇದಾಂತದಲ್ಲಿ ಆಗಾಗ್ಗೆ ಬರುತ್ತಿರುವ ಈ ಶಬ್ದದ ಅಭಿಪ್ರಾಯವನ್ನು ಇನ್ನಷ್ಟು ವಿವರವಾಗಿ ತಿಳಿದುಕೊಳ್ಳುವದು ಲಾಭದಾಯಕವಾಗಿರುತ್ತದೆ.

ಮಿಥ್ಯೆ, ಮೃಷಾ, ವಿತಥ, ಅನೃತ, ಅಸತ್ – ಇವೆಲ್ಲವೂ ಪರ್ಯಾಯಗಳು; ಇವೆಲ್ಲಕ್ಕೂ ಹುಸಿತೋರಿಕೆ ಎಂದೇ ಅರ್ಥ. ಸತ್ ಎಂದರೆ ಬ್ರಹ್ಮವು. ನಮ್ಮೆಲ್ಲರಿಗೂ ಆತ್ಮನಾಗಿರುವ ಪರಮಾತ್ಮವಸ್ತುವನ್ನು ವೇದಾಂತದಲ್ಲಿ ಸತ್ ಎಂದು ಕರೆದಿರುತ್ತದೆ; ಅನಾತ್ಮವನ್ನು ಅಸತ್ ಎಂದು ಕರೆದಿರುತ್ತದೆ. ಅಸತ್ತನ್ನೇ ಮಿಥ್ಯೆ, ಮೃಷಾ, ವಿತಥ ಎಂದು ಮುಂತಾದ ಶಬ್ದಗಳಿಂದ ಕರೆಯುವದು.

ಮೊದಲು ಸತ್ತೆಯ ಶಬ್ದದ ಅರ್ಥವನ್ನು ಚೆನ್ನಾಗಿ ಮನದಟ್ಟುಮಾಡಿಕೊಳ್ಳುವದು ಅವಶ್ಯವು. ಸತ್ ಎಂದರೆ ಇರುವದು ಎಂದು ಶಬ್ದಾರ್ಥವಾಗುತ್ತದೆ. ಲೋಕದಲ್ಲಿರುವ ಪದಾರ್ಥಗಳನ್ನು ಸತ್ (ಇರುವದು), ಅಸತ್ (ಇಲ್ಲದ್ದು), ಎಂದು ತಾರ್ಕಿಕರು ವಿಂಗಡಿಸಿರುತ್ತಾರೆ. ದ್ರವ್ಯ, ಗುಣ, ಕರ್ಮ – ಇವುಗಳೆಲ್ಲ ಇದೆ ಎಂದು ತೋರುವದರಿಂದ ಅವುಗಳಲ್ಲಿ ಸತ್ತಾ (ಇರವು) ಸೇರಿಕೊಂಡಿರುತ್ತದೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಉದಾಹರಣೆಗೆ ಗಡಿಗೆ ಎಂಬುದೊಂದು ದ್ರವ್ಯ; ಗಡಿಗೆ ಎಂದರೆ ಇರುವ ಗಡಿಗೆ ಎಂದೇ ನಮ್ಮ ಮನಸ್ಸಿಗೆ ಹೊಳೆಯುವದರಿಂದ ಅದರಲ್ಲಿ ಸತ್ತಾ (ಇರವು) ಸೇರಿಕೊಂಡೇ ಇರುತ್ತದೆ ಎನ್ನಬೇಕು. ಇದರಂತೆ ಗಡಿಗೆಯಲ್ಲಿರುವ ಕಪ್ಪು ಎಂಬುದು

ಗುಣವು; ಕಪ್ಪು ಎಂದರೆ ಇರುವ ಕಪ್ಪು ಎಂದೇ ತೋರುತ್ತದೆ. ಆದ್ದರಿಂದ ಆ ಗುಣ ಗಳಲ್ಲಿಯೂ ಸತ್ತಾ (ಇರವು) ಸೇರಿಕೊಂಡಿರುತ್ತದೆ. ಗಡಿಗೆಯು ಉರುಳುತ್ತದೆ ಎಂದು ನಮಗೆ ಕಾಣುವಾಗ ಉರುಳುವಿಕೆ ಎಂಬುದು ಗಡಿಗೆಯ ಒಂದು ಕ್ರಿಯೆಯು ಅಥವಾ ಕರ್ಮವು, ಅಲ್ಲಿ ಉರುಳುವಿಕೆ ಎಂಬುದೂ ಇರುವ ಉರುಳುವಿಕೆಯೇ. ಆದ್ದರಿಂದ ಆ ಕರ್ಮದಲ್ಲಿಯೂ ಸತ್ತಾ (ಇರವು) ಸೇರಿಕೊಂಡಿರುತ್ತದೆ. ಇದು ತಾರ್ಕಿಕರ ಮತದಂತೆ ಸತ್ ಎಂಬ ಮಾತಿಗೆ ಅರ್ಥ.

ಇನ್ನು ಅಸತ್ ಎಂದರೇನೆಂಬುದನ್ನು ವಿಚಾರಮಾಡೋಣ. ಗಡಿಗೆಯಾಗಲಿ, ಅದರಲ್ಲಿರುವ ಕಪ್ಪೆಯ ಗುಣವಾಗಲಿ, ಅದರ ಉರುಳುವಿಕೆ ಎಂಬ ಕರ್ಮವಾಗಲಿ, ಅದು ಹುಟ್ಟುವ ಮುಂಚೆ ಇರುವದಿಲ್ಲ ಎಂದೇ ನಾವೆಲ್ಲರೂ ತಿಳಿಯುತ್ತೇವೆ. ಆದ್ದರಿಂದ ಗಡಿಗೆಯೇ ಮುಂತಾದ ಪದಾರ್ಥಗಳು ಹುಟ್ಟುವದಕ್ಕಿಂತ ಮುಂಚೆ ಅಸತ್ತಾಗಿರುತ್ತವೆ. ಯಾವ ಕಾರ್ಯವೇ ಆಗಲಿ, ತಾನು ಹುಟ್ಟುವ ಮುಂಚೆ ಅಸತ್ತಾಗಿರುತ್ತದೆ; ಆ ಬಳಿಕ ಸತ್ತಾಗುತ್ತದೆ. ಸ್ವಲ್ಪಕಾಲದಲ್ಲಿ ನಾಶವಾದ ಮೇಲೆ ಅಸತ್ತಾಗುತ್ತದೆ ಎಂದು ತಾರ್ಕಿಕರು ವಿವರಿಸುತ್ತಾರೆ.

ಹೀಗೆ ಸತ್ತು, ಅಸತ್ತು – ಎಂದು ಒಂದಕ್ಕೊಂದು ಪ್ರತಿದ್ವಂದ್ವಿಯಾದ ಎರಡು ಪದಾರ್ಥಗಳಿರುವವೆಂಬುದನ್ನಾಗಲಿ ಕಾರ್ಯವು ಮೊದಲು ಅಸತ್ತಾಗಿದ್ದು ಹುಟ್ಟಿದ ಮೇಲೆ ಸತ್ತೆಯಿಂದ ಕೂಡಿ ಸತ್ತೆನಿಸುವದೆಂಬುದನ್ನಾಗಲಿ ವೇದಾಂತಿಗಳು ಒಪ್ಪುವದಿಲ್ಲ. ತಾರ್ಕಿಕರಲ್ಲದ ಶೂನ್ಯವಾದಿಗಳು ಸತ್ತಿನ ಅಭಾವವೇ ಅಸತ್ತು ಎನ್ನುವರು; ಸತ್ತಿನ ಎದುರು ಪಕ್ಷದ ಪದಾರ್ಥವು ಅಸತ್ತೆಂದು ಅವರು ಹೇಳುವದಿಲ್ಲ. ಶೂನ್ಯವಾದಿಗಳ ಮತದಲ್ಲಿ ಅಸತ್ತೆಂದರೆ ಏನೂ ಇಲ್ಲದ್ದು ನಿಸ್ಸಾರವು. ಈ ಜಗತ್ತೆಲ್ಲವೂ ಅಸತ್ತೇ ಎಂದರೆ ನಿಸ್ಸಾರವೇ; ಇದರಲ್ಲಿ ಹುರುಳೇ ಇಲ್ಲ– ಎಂಬುದು ಆ ಬೌದ್ಧರ ಮತವು. ಈ ವಾದವನ್ನೂ ವೇದಾಂತಿ ಗಳು ಒಪ್ಪುವದಿಲ್ಲ. ಹಾಗಾದರೆ ಜಗತ್ತು ಅಸತ್ತು, ಅನೃತ, ಮಿಥ್ಯೆ– ಎಂದು ಅವರು ಕರೆಯುವರಲ್ಲ, ಅದರ ಅಭಿಪ್ರಾಯವೇನು? ಇದನ್ನು ನಾವು ಈಗ ವಿಮರ್ಶಿಸಬೇಕಾಗಿದೆ.

ನಾನು ಬರೆದಂತೆ ಶ್ವೇತಕೇತುವಿಗೆ ಉದ್ದಾಲಕನು ಮಾಡಿದ ಉಪದೇಶಗಳಲ್ಲಿ ಮೊದಲನೆಯ ವಾಕ್ಯವು ಹೀಗಿದೆ: "ಅಪ್ಪ, ಇರು ಮೊದಲು ಸತ್ತೊಂದೇ ತನಗೆರಡನೆ ಯದಿಲ್ಲದ (ಸತ್ತೊಂದೇ), ಆಗಿತ್ತು" ಈ ವಾಕ್ಯದ ಅಭಿಪ್ರಾಯವನ್ನು ವಿವರಿಸುವ ಸಂದರ್ಭದಲ್ಲಿ ಶ್ರೀಶಂಕರಾಚಾರ್ಯರವರು ಬರೆದಿರುವದರ ಸಾರವೇನೆಂದರೆ: ಮೊದಲು ಇದು ಸತ್ತೇ ಆಗಿತ್ತು ಎಂದು ಹೇಳಿರುವದನ್ನು ನೋಡಿದರೆ ಈಗ ಸತ್ತಲ್ಲವೇನು?

ಎಂದು ಯಾರಾದರೂ ಕೇಳಬಹುದು. ಹಾಗೇನೂ ಇಲ್ಲ, ಈಗಲೂ ಇದೆಲ್ಲವೂ ಸತ್ತೇ. ಆದರೆ ಈಗ ಸತ್ತಾಗಿರುವದಲ್ಲದೆ, ನಾಮರೂಪಗಳಿಂದೊಡಗೂಡಿ 'ಇದು' ಎಂಬ ಬುದ್ಧಿಗೂ ವಿಷಯವಾಗಿರುತ್ತದೆ. ಆದರೆ ಸೃಷ್ಟಿಗೆ ಮೊದಲು ಇದು ಸತ್ತೊಂದೇ ಆಗಿದ್ದಿತು. **ಸತ್ತೆಂದರೆ** ಬರಿಯ ಇರವು. ಸೂಕ್ಷ್ಮವಾಗಿ ಯಾವ ವಿಶೇಷವೂ ಇಲ್ಲದೆ, ಸರ್ವಗತವಾಗಿ ಒಂದೇ ಆಗಿ, ಏತರ ಅಂಟೂ ಇಲ್ಲದೆ, ಯಾವ ಅವಯವವೂ ಇಲ್ಲದೆ ಇರುವ ಚೈತನ್ಯವು. ಇದನ್ನೇ ಎಲ್ಲಾ ವೇದಾಂತಗಳೂ ತಿಳಿಸುತ್ತಿರುವವು. ಗಾಢನಿದ್ರೆಯಲ್ಲಿ ಈ ಬರಿಯ ಸತ್ತೇ ಇತ್ತೆಂದು ನಮಗೆ ಎಚ್ಚತ್ತಮೇಲೆ ತಿಳಿಯ ಬರುತ್ತದೆ. ಸೃಷ್ಟಿಗೆ ಪೂರ್ವದಲ್ಲಿಯೂ ಹಾಗೆಯೇ. ಕುಂಬಾರನ ಮನೆಯಲ್ಲಿ ಕಾಣುವ ಗಡಿಗೆ, ಶ್ರಾವೆ - ಮುಂತಾದದ್ದೆಲ್ಲವೂ ಬೆಳಗ್ಗೆ ಮಣ್ಣೇ ಆಗಿತ್ತು ಎಂದು ಹೇಳುವೆವಲ್ಲವೆ? ಹಾಗೆಯೇ ಇದು.

ಈ ಜಗತ್ತು ಸತ್ತೇ ಆಗಿದ್ದರೆ ಸತ್ತಿನಿಂದ ಸತ್ತು ಹುಟ್ಟುತ್ತದೆ ಎಂದಾಗುತ್ತದೆಯಲ್ಲವೆ? ಎಂದು ಯಾರಾದರೂ ಹೇಳಬಹುದು. ಹಾಗಲ್ಲ, ಸದ್ರೂಪವಾದ ಪರಮಾರ್ಥವಸ್ತುವೇ ಈ ಜಗತ್ತಿನ ರೂಪವಾಗಿ ಕಾಣುತ್ತಿರುತ್ತದೆ. ಹೇಗೆ ಮಣ್ಣೇ ಗಡಿಗೆ ಮುಂತಾದವಸ್ತುಗಳ ರೂಪದಲ್ಲಿ ಕಾಣುತ್ತಿರುವದೋ, ಹಾಗೆಯೇ ಸತ್ತೇ ಜಗತ್ತಿನ ಬಗೆಬಗೆಯ ನಾಮ ರೂಪಗಳ ವಸ್ತುಗಳಾಗಿ ಕಾಣಿಸುತ್ತಿರುತ್ತದೆ. ಸತ್ತಿನಲ್ಲಿ ಯಾವ ಅವಯವಗಳೂ ಇಲ್ಲ, ಆದರೂ ಅವಿದ್ಯಾಕಲ್ಪಿತವಾದ ಅವಯವಗಳುಂಟು; ಆ ಅವಯವಗಳಿಂದ ವಿಚಿತ್ರವಾದ ಜಗತ್ತು ಉಂಟಾಗಿರುತ್ತದೆ. ಹಗ್ಗದಲ್ಲಿ ಕಲ್ಪಿತವಾಗಿರುವ ಹಾವಿನ ಅವಯವಗಳಂತೆ ಸತ್ತಿನಲ್ಲಿ ಜಗತ್ತಿನ ಅವಯವಗಳು ಕಲ್ಪಿತವಾಗಿರುತ್ತವೆ. ಹಾಗಾದರೆ ಈ ಜಗತ್ತು ಅಸತ್ತೇ ಅಲ್ಲವೆ? ಎಂದರೆ ಅಲ್ಲ, ಸತ್ತಿನಿಂದ ಅನ್ಯವಾದ ಅಸತ್ತೆಂಬ ಪದಾರ್ಥವನ್ನು ವೇದಾಂತಿಗಳು ತಾರ್ಕಿಕರಂತೆ ಒಪ್ಪಿರುವದಿಲ್ಲ; ಸತ್ತೇ ವಾಕ್ಪ್ರಪಂಚವಾಗಿಯೂ ವಾಚ್ಯಪ್ರಪಂಚವಾಗಿಯೂ ಕಾಣಿಸುತ್ತಿರುತ್ತದೆ. ಬಿಡಿಸಿ ನೋಡಿದವರಿಗೆ ಹಗ್ಗಕ್ಕಿಂತ ಬೇರೆಯಾಗಿ ಹಾವೆಂಬುದು ಇರುವದೇ ಇಲ್ಲ. ಇದರಂತೆ ತತ್ತ್ವವನ್ನು ಬಿಡಿಸಿ ನೋಡಿದವರಿಗೆ ಸತ್ತಿಗಿಂತ ಬೇರೆಯಾದ ಪ್ರಪಂಚವೂ ಇರುವದೇ ಇಲ್ಲ. ನಾಮರೂಪಪ್ರಪಂಚವೆಲ್ಲವೂ ಪರಮಾರ್ಥವಾಗಿ ಸತ್ತೊಂದೇ ಆಗಿರುತ್ತದೆ.

ಹಾಗಾದರೆ ಪ್ರಪಂಚವು ಮಿಥ್ಯೆ ಎಂದರೇನು?- ಎಂದು ಯಾರು ಕೇಳುವರೋ ಅವರಿಗೆ ನಾವು ಈವರೆಗೂ ವಿವರಿಸಿರುವ ಸದ್ವರ್ಣನೆಯು ತಿಳಿಯಲಿಲ್ಲ, ಎನ್ನಬೇಕಾಗುತ್ತದೆ. ಏಕೆಂದರೆ ಪ್ರಪಂಚವು ಪರಮಾರ್ಥವಾಗಿ ಸದ್ರೂಪವಾಗಿಯೇ ಇದೆ.

ಸತ್ತಿಗಿಂತ ಬೇರೆಯಾದ ಪ್ರಪಂಚವಿಲ್ಲ ಎಂಬುದೇ ನಾವು ಈವರೆಗೆ ಬರೆದಿರುವವರ ಸಾರವು. ಆಚಾರ್ಯರು ಬರೆದಿರುವ ಒಂದು ಅರ್ಥಪೂರ್ಣವಾದ ವಾಕ್ಯವನ್ನು ಇಲ್ಲಿ ಉದಾಹರಿಸುವೆವು :

**"ವಿಶೇಷಾಕಾರಮಾತ್ರಂ ತು ಸರ್ವೇಷಾಂ ಮಿಥ್ಯಾ ಪ್ರತ್ಯಯನಿಮಿತ್ತಮಿತಿ ವಾಚಾರಮ್ಭಣಂ ವಿಕಾರೋ ನಾಮಧೇಯಮನೃತಂ ತ್ರೀಣಿ ರೂಪಾಣಿ ಇತ್ಯೇವ ಸತ್ಯಮ್ । ತಾನ್ಯಪಿ ಅಕಾರವಿಶೇಷತೋಽನೃತಂ ಸ್ವತಃ ಸನ್ಮಾತ್ರರೂಪತಯಾ ಸತ್ಯಮ್ ॥ ಪ್ರಾಕ್ಸದಾತ್ಮಪ್ರತಿಬೋಧಾತ್ ಸ್ವವಿಷಯೇಽಪಿ ಸರ್ವಂ ಸತ್ಯಮೇವ ಸ್ವಪ್ನದೃಶ್ಯಾ ಇವ ಇತಿ ನ ಕಶ್ಚಿದ್ವಿರೋಧಃ ॥"** ಛಾಂ. ಭಾ. ೮-೫-೪

ಯಾವ ವಸ್ತುವೇ ಆಗಲಿ ತನ್ನ ವಿಶೇಷವಾದ ರೂಪದಿಂದ ತಪ್ಪುತಿಳಿವಳಿಕೆಗೆ ತೋರತಕ್ಕದ್ದಾದ್ದರಿಂದ ಮಿಥ್ಯೆ; ಸನ್ಮಾತ್ರರೂಪದಿಂದ ಸತ್ಯವು. ಎಲ್ಲವೂ ಸತ್ತೇ ಎಂದು ತಿಳಿಯುವದಕ್ಕಿಂತ ಪೂರ್ವದಲ್ಲಿ ಪ್ರತಿಯೊಂದೂ ಕನಸಿನ ಪದಾರ್ಥಗಳಂತೆ ತನ್ನ ರೂಪ ದಿಂದಲೂ ಸತ್ಯವೇ. ಆದ್ದರಿಂದ ಯಾವ ವಿರೋಧವೂ ಇಲ್ಲ ಎಂದು ಆಚಾರ್ಯರು ಬರೆದಿರುತ್ತಾರೆ.

ಪ್ರಪಂಚವು ವಿತಥ, ಎಂದರೆ ತೋರುವಂತೆ ಇಲ್ಲ; ಮತ್ತೇನೆಂದರೆ ಅದು ನಿಜ ವಾಗಿ ಸನ್ಮಾತ್ರವಾದ ಬ್ರಹ್ಮವೇ ಆಗಿರುತ್ತದೆ. ಅದು ಮಿಥ್ಯೆ, ಮೃಷಾ, ಅನೃತ- ಎಂದರೆ ತೋರುವ ತನ್ನ ಆಕಾರದಿಂದ ಹುಸಿತೋರಿಕೆ. ಅದು ಏತರ ತೋರಿಕೆ? ಎಂದರೆ ಸನ್ಮಾತ್ರವಾದ ಬ್ರಹ್ಮದ, ನಮ್ಮೆಲ್ಲರ ಆತ್ಮನಾದ ಪರಮಾತ್ಮನ, ತೋರಿಕೆ. ಯಾವಾಗ ಈ ಪ್ರಪಂಚವೆಲ್ಲವೂ ನಿಜವಾಗಿ ಪರಮಾತ್ಮನೇ ಎಂಬ ಅರಿವು ಉದಯವಾಗುವದೋ ಆಗ ಪ್ರಪಂಚವೆಂಬುದೇ ಇರುವದಿಲ್ಲ, ಆದ್ದರಿಂದ ಜನರು ಕಲ್ಪಿಸಿಕೊಂಡಿರುವ ಪ್ರಪಂಚವು ಮಿಥ್ಯೆ, ಅದು ನಿಜವಾಗಿ ಪರಮಾತ್ಮನೇ ಎಂಬ ಮಂಗಲಕರವಾದ ಸಿದ್ಧಾಂತವು ಮನಸ್ಸಿನಲ್ಲಿ ಮಿಂಚಿರುವದು.

# ಶಾಸ್ತ್ರದೃಷ್ಟಿ

ಜಗತ್ತು ಸತ್ಯವೋ, ಮಿಥ್ಯೆಯೊ? ಎಂಬ ಪ್ರಶ್ನೆಯನ್ನು ತೆಗೆದು ಅದು ತನ್ನ ರೂಪದಿಂದ ಮಿಥ್ಯೆ, ಬ್ರಹ್ಮರೂಪದಿಂದ ಸತ್ಯ ಎಂದು ತಿಳಿಸಿಕೊಟ್ಟದ್ದಾಗಿದೆ. ಈ ಜಗತ್ತು ನಾಮ, ರೂಪ, ಕರ್ಮ ಇವುಗಳ ರೂಪದಿಂದ ವಿಂಗಡವಾಗಿ ತೋರುತ್ತಿರುವದು. ಇದು ಗಡಿಗೆ ಎಂದು ಒಂದಾನೊಂದು ಹೆಸರನ್ನುಪಯೋಗಿಸುವೆವು; ಆ ಹೆಸರು ಒಂದಾನೊಂದು ರೂಪವನ್ನು ತಿಳಿಸುತ್ತದೆ; ಆ ರೂಪದ ವಸ್ತುವಿನಲ್ಲಿ ಒಂದು ಕ್ರಿಯೆಯು ಕಾಣುತ್ತದೆ. ಗಡಿಗೆ, ಮಡಕೆ, ಕುಡಿಕೆ, ಶ್ರಾವೆ, ಕಂದಲು ಇವೆಲ್ಲವೂ ಮಣ್ಣಿನಿಂದಾದ ಪಾತ್ರೆಗಳು. ಈ ಗಡಿಗೆಯೇ ಮುಂತಾದ ಹೆಸರಿನ ಆಯಾ ರೂಪದ ಪಾತ್ರೆಗಳು ಆಯಾ ಕೆಲಸಕ್ಕೆ ಬರುತ್ತವೆ. ಆದ್ದರಿಂದ ಅವು ಬೇರೆಬೇರೆಯ ಪದಾರ್ಥಗಳೆಂದು ನಾವು ವ್ಯವಹರಿಸುವೆವು. ಆದರೆ ಈ ಹೆಸರು, ಆಕಾರ, ಕೆಲಸ ಎಂಬಿವುಗಳ ಕಡೆಗೆ ಲಕ್ಷ್ಯವಿಡದೆ ಅವುಗಳಿಗೆ ಉಪಾದಾನವಾಗಿರುವ ವಸ್ತುವನ್ನು ನೋಡಿದರೆ ಗಡಿಗೆ, ಮಡಕೆ, ಕುಡಿಕೆ, ಶ್ರಾವೆ, ಕಂದಲು ಎಲ್ಲವೂ ಮಣ್ಣೇ; ಮಣ್ಣಿಗಿಂತ ಬೇರೆಯಾಗಿ ಸ್ವತಂತ್ರವಾಗಿರುವ ಗಡಿಗೆ, ಮಡಕೆ ಮುಂತಾದ ಪದಾರ್ಥಗಳು ಇಲ್ಲವೇ ಇಲ್ಲ. ಆದ್ದರಿಂದ ಅವು ತಮ್ಮ ರೂಪದಿಂದ ಮಿಥ್ಯೆ, ಹುಸಿತೋರಿಕೆ; ಅವು ಮಣ್ಣಿನ ರೂಪದಿಂದಲೇ ಸತ್ಯ. ಇದರಂತೆ ಈ ಜಗತ್ತೆಂಬುದು ಎಷ್ಟೇ ನಾಮರೂಪ ಕರ್ಮಗಳಿಂದ ವಿಂಗಡವಾಗಿ ಕಾಣುತ್ತಿರಲಿ, ಇದು ತನ್ನ ರೂಪದಿಂದ ಮಿಥ್ಯೆಯೇ, ಹುಸಿ ತೋರಿಕೆಯೇ. ಇದು ಬ್ರಹ್ಮರೂಪದಿಂದಲೇ ಸತ್ಯವು. ಬ್ರಹ್ಮವೊಂದೇ ಪರಮಾರ್ಥವು. ಇದೇ ವೇದಾಂತದ ಸಿದ್ಧಾಂತವು.

ಆದರೆ ನಾವು ಎಷ್ಟೇ ವೇದಾಂತಶ್ರವಣವನ್ನು ಮಾಡಿರಲಿ, ನಮಗೆ ನಾಮ ರೂಪಕರ್ಮದೃಷ್ಟಿಯೇ ಪ್ರಬಲವಾಗಿರುತ್ತದೆ. ವ್ಯವಹಾರದಲ್ಲಿ ಆಯಾ ಹೆಸರಿನ ಪದಾರ್ಥಗಳನ್ನು ಅವುಗಳ ರೂಪಕರ್ಮಗಳಿಂದ ಬೇರೆಬೇರೆ ಎಂದು ತಿಳಿದುಕೊಂಡಿರುವದಲ್ಲದೆ ಅವು ಪರಮಾರ್ಥವಾಗಿಯೂ ಇರುವವೆಂದೇ ಭಾವಿಸಿಕೊಂಡಿರುವೆವು. ನಮ್ಮ ಈ ನಂಬಿಕೆಯು ಯಾವ ಯುಕ್ತಿಯಿಂದಲೂ ಹಾರಿಹೋಗುವದಿಲ್ಲ. ಈ ವ್ಯವಹಾರವು ನಮಗೆಲ್ಲರಿಗೂ ಸ್ವಾಭಾವಿಕವಾಗಿರುತ್ತದೆ. ಇದನ್ನು ನಮಗೆ ಯಾರೂ ಕಲಿಸಿಕೊಟ್ಟಿರುವದಿಲ್ಲ; ಹುಟ್ಟಿರುವ ಮನುಷ್ಯರಿಗೆಲ್ಲ ಸಹಜವಾದ ಭಾವನೆಯಿದು. ಇದು ಪ್ರಬಲವಾಗಿರುವವರೆಗೂ ನಮಗೆ ಜಗತ್ತು ತನ್ನ ರೂಪದಿಂದಲೂ ಸತ್ಯವೇ ಎಂದೇ ನಮ್ಮ ಬುದ್ಧಿಯು ಪಟ್ಟು ಹಿಡಿದುಕೊಂಡಿರುತ್ತದೆ. "ಬರ್ಲಿನ್ ನಗರದಲ್ಲಿ ಒಬ್ಬ ಕಳ್ಳನು

ಹೇಗೋ ಕೆಲವು ಕೃತಕವಾದ ಕಾಗದಪತ್ರಗಳ ಆಧಾರದಿಂದ ಕೆಳಕೋರ್ಟಿನ ಜಡ್ಜಿಯಾಗಿ ಬಿಟ್ಟಿದ್ದನಂತೆ. ಅವನು ಕಳ್ಳನೇ ಎಂದು ಪತ್ತೆ ಹಚ್ಚಿ ಅವನಿಗೆ ಸಜಹಾಕಿಸುವದರೊಳಗಾಗಿ ಅವನು ಏಳು ಸಾವಿರ ಮೊಕದ್ದಮೆಗಳನ್ನು ಫೈಸಲು ಮಾಡಿದ್ದನಂತೆ; ತನ್ನ ಜೊತೆಗಾರ ನಾದ ಒಬ್ಬ ಖೈದಿಯನ್ನು ಹದಿನೈದುಸಾವಿರ ರೂಪಾಯಿಗಳಷ್ಟು ಲಂಚವನ್ನು ತೆಗೆದು ಕೊಂಡು ಖುಲಾಸೆಮಾಡಿಸಿದ್ದನಂತೆ. ಅವನು ಕಳ್ಳನೇ ಎಂದು ಗೊತ್ತಾದಾಗ ಆವರೆಗೆ ಅವನಿಗೆ ಹದಿನಾಲ್ಕು ಸಲ ಸಜ ಆಗಿತ್ತೆಂದು ತಿಳಿದುಬಂತಂತೆ!" ಈ ದೃಷ್ಟಾಂತದಲ್ಲಿ ಅವನು ಜಡ್ಜಿ ಯಾಗಿದ್ದದ್ದು ಸತ್ಯವೊ, ಮಿಥ್ಯೆಯೊ? ನಾಮರೂಪ ಕರ್ಮಗಳ ದೃಷ್ಟಿಯಿಂದನೋಡಿದರೆ ಅವನ ತೀರ್ಮಾನಗಳೆಲ್ಲವೂ ಸತ್ಯವೇ ಆಗಿದ್ದವು. ಏಕೆಂದರೆ ಅವನು ಅಪರಾಧಿಗಳೆಂದು ತೀರ್ಪಿತ್ತವರಿಗೆ ಆದ ದಂಡವನ್ನು ಅವರು ನಿಜವಾಗಿ ಅನುಭವಿಸಿದರು; ಅವನು ನಿರಪರಾಧಿಗಳೆಂದು ನಿಶ್ಚಯಿಸಿದವರನ್ನು ಪೋಲೀಸಿನವರು ಬಿಟ್ಟುಬಿಟ್ಟರು. ಅವನು ಯಾರು ಯಾರಿಗೆ ಯಾರು ಯಾರು ನಷ್ಟವನ್ನು ಕೊಡಬೇಕೆಂದು ನಿರ್ಣಯಿಸಿದನೋ ಅವರವರು ಹಾಗೆಯೇ ಕೊಟ್ಟರು. ಸರ್ಕಾರದವರು ಕೂಡ ಆವರೆಗೆ ಅವನು ಮಾಡಿದ ಕಾರ್ಯಭಾಗವು ಸರಿಯೆಂದೇ ಒಪ್ಪಿಕೊಂಡರು. ಆದರೇನು? ಸರಿಯಾಗಿ ವಿಚಾರ ಮಾಡಿದಮೇಲೆ ಅವನು ಜಡ್ಜಿಯಾಗಿದ್ದದ್ದು ಹುಸಿಯೆಂದೇ ಆಯಿತು; ಅವನ ಮಾತು ಗಳೆಲ್ಲ ಸಟೆಯೆಂದೇ ಆದವು. ಕೊನೆಗೆ ಅವನಿಗೂ ಶಿಕ್ಷೆಯಾಯಿತು.

ಈ ಘಟನೆಯು ಒಂದು ನಾಟಕದಲ್ಲಿ ಆಯಿತೆಂದು ಇಟ್ಟುಕೊಳ್ಳಿರಿ. ಆಗ ಎಲ್ಲವೂ ನಟನೆಯೇ ಹೊರತು ನಿಜವಾಗಿ ಯಾವ ಪಾತ್ರದವರೂ ತಾವು ಅಭಿನಯಿಸಿದ ಸ್ತ್ರೀಪುರುಷರಾಗಿರಲಿಲ್ಲವೆಂಬುದು ಸ್ಪಷ್ಟವೇ ಆಗುತ್ತದೆ. ಇನ್ನು ಈ ಘಟನೆಯು ಕನಸಿನಲ್ಲಿ ಆಗಿದ್ದರೆ? ಆಗ ಕನಸಿನಲ್ಲಿ ಎಷ್ಟೇ ಸತ್ಯವಾಗಿ ಕಾಣಲಿ, ಎಚ್ಚರದ ದೃಷ್ಟಿಯಿಂದ ಅದೆಲ್ಲವೂ ಹುಸಿತೋರಿಕೆಯೆಂದೇ ನಾವೆಲ್ಲರೂ ಏಕಕಂಠರಾಗಿ ನಿಶ್ಚಯಿಸಿಬಿಡುತ್ತಿದ್ದೆವು. ಅಲ್ಲವೆ?

ಜಗತ್ತಿನಲ್ಲಿ ನಾವು ವ್ಯವಹಾರಕ್ಕೆ ಬಳಸುವ ಚೇತನಾಚೇತನವಸ್ತುಗಳೆಲ್ಲವೂ ಹೀಗೆಯೇ ಇರುತ್ತವೆ. ನಾಟಕಕಾಲದಲ್ಲಿ ಅಥವಾ ಕನಸಿನ ಕಾಲದಲ್ಲಿ, ಕಂಡ ಆಯಾ ದೃಶ್ಯಗಳು ಎಷ್ಟೇ ಸತ್ಯವಾಗಿ ಕಂಡರೂ ಪರಮಾರ್ಥವಾಗಿ ಅವು ಇರಲಿಲ್ಲವೆಂದೂ ಬರಿಯ ತೋರಿಕೆಯೆಂದೂ ನಾವು ನಿರ್ಣಯಿಸುವಂತೆಯೇ ಈ ಜಗತ್ತೆಲ್ಲವೂ ಬರಿಯ ಹುಸಿತೋರಿಕೆಯೇ ಎಂದು ಪೂರ್ಣದೃಷ್ಟಿಯಿಂದ ನೋಡಿದಾಗ ನಿರ್ಣಯಿಸಿ ಬಿಡಬಹುದು.

ಸ್ವಾಭಾವಿಕವಾದ ಅಪೂರ್ಣದೃಷ್ಟಿಯಿಂದ ನಾವು ನೋಡಿದಾಗ ಕಾಣುವ ಜಗತ್ತು ಮಿಥ್ಯೆ, ಎಂದರೆ ಬರಿಯ ತೋರಿಕೆ; ನಿಜವಾಗಿ ಅದು ಹಾಗಿರುವದಿಲ್ಲ. ಆದರೆ ವೇದಾಂತಶಾಸ್ತ್ರದಲ್ಲಿ ಹೇಳಿರುವ ಪೂರ್ಣದೃಷ್ಟಿಯಿಂದ ನೋಡಿದಾಗ ಅದೆಲ್ಲವೂ ಪರಮಾರ್ಥವಾದ ಬ್ರಹ್ಮವೇ ಆಗಿರುತ್ತದೆ. ಈ ತಾರತಮ್ಯವನ್ನು ತಿಳಿಸುವದಕ್ಕಾಗಿ ವೇದಾಂತಗಳು ಲೋಕದೃಷ್ಟಿ ಶಾಸ್ತ್ರದೃಷ್ಟಿ ಎಂದು ಎರಡು ದೃಷ್ಟಿಗಳನ್ನು ವಿಂಗಡಿಸಿ ಉಪದೇಶಿಸುತ್ತಾರೆ. ನಮಗೆಲ್ಲರಿಗೂ ಸ್ವಾಭಾವಿಕವಾಗಿರುವ ದೃಷ್ಟಿಯೇ ಲೋಕ ದೃಷ್ಟಿಯು. ಈ ದೃಷ್ಟಿಯಿಂದಲೇ ಜಗತ್ತು ನಿಜವಾಗಿಯೂ ನಾಮರೂಪಕರ್ಮಗಳಿಂದ ಕೂಡಿದ್ದಾಗಿರುವದೆಂದುಕಾಣುವದು. ಇದರಲ್ಲಿ ಅನೇಕ ಕರ್ತೃಭೋಕ್ತೃಗಳು ಇರುವಂತೆ ಕಾಣುತ್ತಿರುವದು. ಆ ಜೀವರುಗಳು ಬೇರಬೇರೆಯ ಕಾರಕಗಳನ್ನು ಉಪಯೋಗಿಸಿ ಕೊಂಡು ಬೇರೆಬೇರೆಯ ಕ್ರಿಯೆಗಳನ್ನು ಮಾಡುತ್ತಿರುವಂತೆ ಕಾಣುತ್ತಿರುವದು. ಆ ಕ್ರಿಯೆಗಳಿಂದ ತಕ್ಕ ಕಾಲದಲ್ಲಿ ತಕ್ಕ ದೇಶದಲ್ಲಿ ಆಯಾ ಕ್ರಿಯೆಗೆ ಅನುರೂಪವಾದ ಫಲಗಳನ್ನು ಅವರು ಅನುಭವಿಸುತ್ತಿರುವಂತೆ ಕಾಣುವದು.

ಆದರೆ ಶಾಸ್ತ್ರದೃಷ್ಟಿಯಿಂದ ನೋಡಿದರೊ? ಎಂದರೆ ಬ್ರಹ್ಮವು ಅಥವಾ ಪರಮಾತ್ಮನು ಸತ್ಯಜ್ಞಾನಾನಂತಸ್ವರೂಪನೂ ನಿತ್ಯಾನಂದನೂ ಕೂಟಸ್ಥನೂ ಅದ್ವಿತೀಯನೂ ಆಗಿರುತ್ತಾನೆ. ಅವನೊಬ್ಬನೇ ಪರಮಾರ್ಥವು; ಅವನನ್ನು ಬಿಟ್ಟರೆ ಮಿಕ್ಕ ಜೀವರುಗಳಾಗಲಿ ಅಚೇತನ ವಸ್ತುಗಳಾಗಲಿ ಇರುವದೇ ಇಲ್ಲ. ಅವುಗಳೆಲ್ಲ ಮಾಯೆಯಲ್ಲಿ ಅಥವಾ ಕನಸಿನಲ್ಲಿ ಕಾಣುವ ಪದಾರ್ಥಗಳಂತೆ ತತ್ಕಾಲಕ್ಕೆ ಮಾತ್ರ ತೋರುವವುಗಳಾಗಿರುತ್ತವೆ. ಒಬ್ಬನೇ ಮಾಯಾವಿಯು ಅನೇಕ ಪ್ರಕಾರದ ಜನರಾಗಿಯೂ ಪ್ರಾಣಿಗಳಾಗಿಯೂ ವಸ್ತು ಗಳಾಗಿಯೂ ತನ್ನ ಮಾಯಾಪ್ರಭಾವದಿಂದ ತೋರಿಕೊಳ್ಳುವಂತೆಯೂ, ನಮ್ಮಲ್ಲಿ ಪ್ರತಿ ಯೊಬ್ಬರೂ ತಾವು ಒಬ್ಬರೇ ಇದ್ದರೂ ಕನಸಿನಲ್ಲಿ ನಿಜವಾದ ಪ್ರಪಂಚವೊಂದನ್ನೇ ಕಂಡು ಅಲ್ಲಿ ತಾವು, ಮತ್ತೊಬ್ಬರು ಎಂಬ ವಿಭಾಗವನ್ನೂ ಬಗೆಬಗೆಯ ದೃಶ್ಯಗಳನ್ನೂ ಕಂಡು ಸುಖದುಃಖಗಳನ್ನು ಅನುಭವಿಸುವಂತೆ ತೋರಿ ಕೊಳ್ಳುವಂತೆಯೂ ಇಡಿಯ ಜಗತ್ತೇ ಆ ಪರಮಾತ್ಮನಲ್ಲಿ ತೋರಿಕೊಳ್ಳುತ್ತಿರುವದು. ಆ ದೃಷ್ಟಿಯಿಂದ ನೋಡುವಾಗ ಜಗತ್ತು ಪರಮಾತ್ಮನಿಂದಲೇ ಬಂದುತೋರಿಕೊಳ್ಳುತ್ತಿರುವದು; ತೋರುವಾಗ ಪರಮಾತ್ಮನ ಆಧಾರದಿಂದಲೇ ತೋರಿಕೊಳ್ಳುತ್ತಿರುವದು; ಮರೆಯಾದಾಗ ಪರಮಾತ್ಮನಲ್ಲಿಯೇ ಅಡಕವಾಗುತ್ತಿರುವದು. ನಿಜವಾಗಿ ಪರಮಾತ್ಮನೇ ಎಲ್ಲವೂ ಆಗಿರುತ್ತಾನೆ. ಪರಮಾತ್ಮನಿ ಗಿಂತ ಬೇರೆ ಯಾವದೊಂದೂ ಇಲ್ಲವೇ ಇಲ್ಲ.

ಶಾಸ್ತ್ರದೃಷ್ಟಿಯೆಂಬುದು ಯಾವದೋ ಒಂದು ವಿಶೇಷ ದೃಷ್ಟಿಯೆಂದೂ ಯಾವದೋ ಒಂದು ಕಾಲದ ಕೆಲವು ಮಹಾವೀರ್ಯರಾದ ತಪಃಸಿದ್ಧರಿಗೆ ಮಾತ್ರವೇ ಸಾಧ್ಯವಾಯಿತೆಂದೂ ಈಗಿನವರಾದ ನಮ್ಮಂಥವರಿಗೆ ಅದು ದಕ್ಕದೆಂದೂ ಭಾವಿಸ ಬಾರದು. ಎಡಗಡೆಗೆ ತಿರುಗಿದ್ದ ಕತ್ತನ್ನು ಬಲಗಡೆಗೆ ತಿರುಗಿಸುವದು ಎಷ್ಟು ಸುಲಭವೋ ಮತ್ತು ಹಾಗೆ ತಿರುಗಿಸುವದು ಆರೋಗರಾದ ಮನುಷ್ಯರಿಗೆಲ್ಲ ಹೇಗೆ ಸಾಧ್ಯವೋ, ಹಾಗೆ ಲೋಕದೃಷ್ಟಿಯನ್ನು ಬಿಟ್ಟು ಶಾಸ್ತ್ರದೃಷ್ಟಿಯನ್ನು ಅವಲಂಬಿಸುವದೂ ಅಷ್ಟೇ ಸುಲಭ, ಅಷ್ಟೇ ಸಾಧ್ಯ. ಸರಿಯಾದ ಕ್ರಮದಲ್ಲಿ ಪ್ರಯತ್ನವನ್ನು ಮಾಡಿದರೆ ನಾವೆಲ್ಲರೂ ಒಂದಲ್ಲ ಒಂದು ಕಾಲಕ್ಕೆ ಆ ದೃಷ್ಟಿಯನ್ನು ಸಂಪಾದಿಸಿಕೊಳ್ಳಬಹುದು. ಅದು ಹೇಗೆಂಬುದನ್ನು ಮುಂದೆ ನೋಡೋಣ.

ಖಖಖಖಖ

# ಶಾಸ್ತ್ರದೃಷ್ಟಿಯ ಅವಲಂಬನೆ

ಲೋಕದೃಷ್ಟಿ , ಶಾಸ್ತ್ರದೃಷ್ಟಿ - ಎಂದು ಎರಡು ದೃಷ್ಟಿಗಳುಂಟು. ಲೋಕದೃಷ್ಟಿ ಎಂದರೆ ಎಲ್ಲಾ ಜನರೂ ಸ್ವಾಭಾವಿಕವಾಗಿ ಅವಲಂಬಿಸಿರುವ ದೃಷ್ಟಿ. ಇಂದ್ರಿಯಗಳು ನನ್ನವು, ದೇಹವು ನಾನು ಎಂಬ ಅಭಿಪ್ರಾಯವು ನಮ್ಮೆಲ್ಲರಿಗೂ ಯಾರೂ ಕಲಿಸದೆ ಬಂದಿರುತ್ತದೆ. ನಮಗೆಲ್ಲ ಇಂದ್ರಿಯಗಳು ಪ್ರಮಾಣಗಳು, ಎಂದರೆ ನಿಜವನ್ನು ತಿಳಿಸುವ ಸಾಧನಗಳು. ಇಂದ್ರಿಯಗಳು ತಿಳಿಸಿದ್ದನ್ನು ನಿಜವೆನ್ನುವವರು ನಾವು. ಇಂದ್ರಿಯಗಳು ತೋರಿಸಿದ ಪದಾರ್ಥಗಳಿಂದ ನಾವು ಕಲ್ಪಿಸಿಕೊಂಡ ಪದಾರ್ಥಗಳನ್ನು ನಾವು ನಿಜವೆಂದೇ ನಂಬುವೆವು. ಉದಾಹರಣೆಗೆ ನಾಗರಹಾವು ಕಚ್ಚಿದರೆ ವಿಷದಿಂದ ಸಾಯುತ್ತಾರೆಂದು ನಮಗೆ ಇಂದ್ರಿಯಗಳು ತಿಳಿಸಿಕೊಡುತ್ತವೆ. ಆದ್ದರಿಂದ ದೂರಕ್ಕೆ ನಾಗರಹಾವಿನಾಕಾರದ ಪ್ರಾಣಿಯನ್ನು ಕಂಡರೆ, ಕೂಡಲೆ ಅಂಜಿಕೆಯಿಂದ ಇತ್ತ ಸರಿಯುವೆವು. "ಇದು ನಾಗರಹಾವು; ಆದ್ದರಿಂದ ಇದು ಕಚ್ಚಿದರೆ ವಿಷದಿಂದ ಸತ್ತೇನು" ಎಂಬ ಕಲ್ಪನೆಯೇ ಇದಕ್ಕೆ ಕಾರಣ. ಇಂದ್ರಿಯಗಳಿಂದ ನೇರಾಗಿ ಕಂಡುಕೊಂಡದ್ದು ಪ್ರತ್ಯಕ್ಷಜ್ಞಾನವು; ಅವುಗಳು ತೋರಿಸಿದ ಗುರುತುಗಳಿಂದ ನಾವೇ ಕಲ್ಪಿಸಿದ್ದು ಅನುಮಿತವು. ಹೀಗೆ ಲೋಕದಲ್ಲಿ ಪ್ರತ್ಯಕ್ಷ, ಅನುಮಾನ - ಎಂಬ ಎರಡು ಪ್ರಮಾಣಗಳು ವ್ಯವಹಾರಕ್ಕೆ ಸಾಧನವಾಗಿರುತ್ತವೆ.

ಲೋಕದೃಷ್ಟಿಯಿಂದ ಕೆಲವು ವೇಳೆ ನಾವು ಮೋಸಹೋದದ್ದೂ ಉಂಟು. ಉದಾಹರಣೆಗೆ ದೂರದಲ್ಲಿ ನಸುಗತ್ತಲೆಯಲ್ಲಿ ಕಂಡ ಹಾವಿನಾಕಾರದ ವಸ್ತುವು ಹಾವೇ ಎಂದುಕಲ್ಪಿಸಿಕೊಂಡು ನಾವು ಹೆದರಿಕೆಯಿಂದ ನಡುಗಿದ್ದೂ ಉಂಟು. ಓಡಿದ್ದೂ ಉಂಟು. ಆದರೆ ದೀಪವನ್ನು ತಂದು ನೋಡಿದಾಗ, ಅದು ಒಂದು ಹಗ್ಗವೆಂದು ತಿಳಿದಾಗ ನಮ್ಮ ಅಂಜಿಕೆಗೆ ನಾವೇ ನಾಚಿಕೆಪಟ್ಟಿರುತ್ತೇವೆ. ಆದರೂ ಪರೀಕ್ಷಿಸಿದ ಮೇಲೆ, ಸರಿಯಾದ ಇಂದ್ರಿಯಪಾಟವವಿರುವವರಿಗೆಲ್ಲ ಒಂದೇ ಸಮನಾಗಿ ಕಾಣುವ ವಸ್ತು ಸತ್ಯವೆಂದೇ ನಾವು ನಂಬುವೆವು. ಆ ವಸ್ತು ಇಷ್ಟವಾದರೆ ಅದನ್ನು ಸಂಪಾದಿಸಿಕೊಳ್ಳು ವದಕ್ಕೂ ಅನಿಷ್ಟವಾದರೆ ಅದನ್ನು ತೊಲಗಿಸಿಕೊಳ್ಳುವದಕ್ಕೂ ಪ್ರಯತ್ನಿಸುವೆವು. ಇದೇ ನಮ್ಮಗಳ ವ್ಯವಹಾರವು. ಆದ್ದರಿಂದ ನಮ್ಮಗಳ ವ್ಯವಹಾರವು ಲೋಕದೃಷ್ಟಿಯನ್ನು ಅವಲಂಬಿಸಿರುತ್ತದೆ.

ಆದರೆ ವೇದಾಂತದಲ್ಲಿ ಇನ್ನೊಂದು ದೃಷ್ಟಿಯನ್ನು ವರ್ಣಿಸಿರುತ್ತದೆ. ಅದಕ್ಕೆ 'ಶಾಸ್ತ್ರದೃಷ್ಟಿ' ಎಂಬ ಹೆಸರನ್ನು ವೇದಾಂತಿಗಳು ಕೊಟ್ಟಿರುತ್ತಾರೆ. ಶಾಸ್ತ್ರದೃಷ್ಟಿಯು ಪರಮಾರ್ಥವನ್ನು ತತ್ತ್ವವು ಇದ್ದಂತೆ ಅದನ್ನು ತಿಳಿಸುವ ದೃಷ್ಟಿಯು ಎಂದು ಅವರು ಹೇಳುತ್ತಿರುತ್ತಾರೆ. ಹಗ್ಗವನ್ನು ಹಾವೆಂದು ತಿಳಿಯುವವರು ಭ್ರಾಂತರೆಂದು ಹಗ್ಗವನ್ನು ಹಗ್ಗವೆಂದೇ ತಿಳಿದುಕೊಂಡಿರುವವರನ್ನು ಸರಿಯಾಗಿ ತಿಳಿದುಕೊಂಡವರೆಂದೂ ಲೋಕ ದೃಷ್ಟಿಯವರೆಲ್ಲ ಎಣಿಸುತ್ತಾರಲ್ಲವೆ? ಹೀಗೆಯೇ ಪರಮಾರ್ಥದ ವಿಷಯಕ್ಕೆ ಲೋಕ ದೃಷ್ಟಿಯವರೆಲ್ಲ ಭ್ರಾಂತರಾಗಿರುವರೆಂದೂ ಶಾಸ್ತ್ರದೃಷ್ಟಿಯುವರು ಮಾತ್ರ ಸರಿಯಾದ ತಿಳಿವಳಿಕೆಯುಳ್ಳವರೆಂದೂ ವೇದಾಂತಿಗಳು ಎಣಿಸುತ್ತಾರೆ.

ಶಾಸ್ತ್ರದೃಷ್ಟಿಯನ್ನು ಅವಲಂಬಿಸುವದು ಹೇಗೆ? ಇಂದ್ರಿಯಗಳಲ್ಲದೆ ಮನುಷ್ಯ ನಿಗೆ ತತ್ತ್ವವನ್ನು ತಿಳಿದುಕೊಳ್ಳುವದಕ್ಕೆ ಮತ್ತೆ ಯಾವ ಕರಣವಿದೆ? ಇಂದ್ರಿಯಗಳು ತೋರಿಸದೆ ಇರುವ, ಅಥವಾ ಇಂದ್ರಿಯಗಳ ಆಧಾರದಿಂದ ನಾವು ಊಹಿಸಿ ಅರಿಯದೆ ಇರುವ, ಯಾವ ಪದಾರ್ಥವು ತಾನೆ ಎಲ್ಲಿದ್ದೀತು? ಅದನ್ನು ಯಾರು ಹೇಗೆ ಅರಿತು ಕೊಂಡಾರು?- ಎಂದು ಕೆಲವರು ಆಶ್ಚರ್ಯವನ್ನು ತೋರಿಸುತ್ತಾರೆ. ಆದರೆ ಇಲ್ಲೊಂದು ರಹಸ್ಯವಿದೆ. ಅನಾದಿಕಾಲದಿಂದ ಕತ್ತಲೆಯಲ್ಲಿರುವವರು, ಅಥವಾ ಕುರುಡರು, ಬೆಳಕೆಂದರೇನು? ಅದು ಇದ್ದರೆ ನಮಗೇಕೆ ಕಾಣಿಸುವದಿಲ್ಲ? - ಎಂದೂ ಕೇಳಬಹು ದಲ್ಲವೆ? ಅವರು ಕತ್ತಲೆಯಲ್ಲಿರುವವರೆಗೂ ಅಥವಾ ಅವರ ಕಣ್ಣಿನಲ್ಲಿ ಕೊರತೆಯಿರು ವವರೆಗೂ ಅವರಿಗೆ ಹೇಗೆ ಬೆಳಕಿನ ಜ್ಞಾನವಾಗಲಾರದೋ ಹಾಗೆಯೇ ಇಂದ್ರಿಯಗಳ

ಉಪಯೋಗದಿಂದಲೇ ವ್ಯವಹರಿಸುತ್ತಿರುವವರಿಗೆ ಶಾಸ್ತ್ರದೃಷ್ಟಿಯು ಅಥವಾ ಅದರಿಂದ ತೋರಿಬರುವ ಪರಮಾರ್ಥದ, ಕನಸು ಕೂಡ ಆಗುವ ಹಾಗಿಲ್ಲ, ಇದು ಸ್ವಾಭಾವಿಕ ವಾಗಿದೆ. ಆದರೆ ಅಷ್ಟು ಮಾತ್ರದಿಂದ ಶಾಸ್ತ್ರದೃಷ್ಟಿಯೇ ಇಲ್ಲವೆಂದು ವಾದಿಸುವದು ಸರಿಯಲ್ಲ.

ತತ್ತ್ವವನ್ನು ತಿಳಿದುಕೊಳ್ಳುವದಕ್ಕೆ ಇಂದ್ರಿಯಗಳಲ್ಲದೆ ಮತ್ತೆ ಯಾವ ಕರಣವಿದೆ? ಎಂಬ ಪ್ರಶ್ನೆಗೆ ಗೀತಾಭಾಷ್ಯದಲ್ಲಿ ಕೊಟ್ಟಿರುವ ಉತ್ತರವನ್ನು ಮೊದಲು ಪರಿಭಾವಿಸೋಣ.

**''ಶಾಸ್ತ್ರಾಚಾರ್ಯೋಪದೇಶಶಮದಮಾದಿ ಸಂಸ್ಕೃತಂ ಮನ ಆತ್ಮದರ್ಶನೇ ಕರಣಮ್''**

ಶಾಸ್ತ್ರಶ್ರವಣ, ಆಚಾರ್ಯರ ಉಪದೇಶ, ಶಮದಮಾದಿಸಾಧನಗಳು – ಇವು ಗಳಿಂದ ಸಂಸ್ಕಾರವನ್ನು ಪಡೆದುಕೊಂಡಿರುವ ಮನಸ್ಸೇ ಪರಮಾತ್ಮನನ್ನು ಕಾಣುವದಕ್ಕೆ ಕರಣವು – ಎಂದು ಈ ವಾಕ್ಯದ ಅರ್ಥವು. ಶಾಸ್ತ್ರವೆಂದರೆ ವೇದವು. ಪರಮಾತ್ಮ ಸ್ವರೂಪವನ್ನು ಕಂಡು ಕೊಂಡ ಋಷಿಗಳ ಮನಸ್ಸಿನಲ್ಲಿ ಹೊಳೆದು ಅವರ ಬಾಯಿಂದ ಬಂದಿರುವ ವೇದ ವಾಕ್ಕು. ಆ ಋಷಿವಾಣಿಯಲ್ಲಿ ಸಾಮಾನ್ಯಪುರುಷರಿಗೆ ಗೋಚರ ವಾಗದ ತತ್ತ್ವವನ್ನು ನೇರಾಗಿ ನಮ್ಮ ಹೃದಯಕ್ಕೆ ತಿಳಿಯಬರುವಂತೆ ಮಾಡುವ ಅಚಿಂತ್ಯಶಕ್ತಿಯಿದೆ. ಹೇಗೆ ಭೌತಿಕವಿಜ್ಞಾನಶಾಸ್ತ್ರದ ಪುಸ್ತಕಗಳಲ್ಲಿ ಬರೆದಿರುವ ವಿಷಯ ಗಳು, ಹೊರಗಿನ ಪ್ರಪಂಚದ ವಿಷಯಕ್ಕೆ ನಾವು ಮೇಲು ಮೇಲೆಯೇ ನೋಡಿ ಮಾಡಿ ಕೊಂಡಿರುವ ಅಭಿಪ್ರಾಯಗಳನ್ನು ಬದಲಾಯಿಸುವವೋ ಹಾಗೆಯೇ ಪರಮಾತ್ಮನನ್ನು ಕಂಡುಕೊಂಡು ಆನಂದಪಟ್ಟಿರುವ ಋಷಿಗಳ ಮುಖದಿಂದ ಹೊರಬಿದ್ದಿರುವ ವೇದ ವಾಣಿಯೂ ನಮ್ಮ ಕಿವಿಗೆ ಬಿದ್ದಮಾತ್ರದಿಂದ ಪರಮಾರ್ಥತತ್ತ್ವವನ್ನು ಅರಿತುಕೊಳ್ಳು ವದಕ್ಕೆ ನಮ್ಮನ್ನು ಸಜ್ಜುಮಾಡಿ, ಪರಮಾರ್ಥವೊಂದು ನಿಜವಾಗಿ ಇದೆ ಎಂಬ ನಂಬಿಕೆ ಯನ್ನುಂಟುಮಾಡುವ ಶಕ್ತಿಯುಳ್ಳದ್ದಾಗಿರುತ್ತದೆ.

ಈ ಶಾಸ್ತ್ರಶ್ರವಣವನ್ನು ಮಾಡಿ ಅದರಂತೆ ತತ್ತ್ವವಿಚಾರವನ್ನು ನಡೆಯಿಸಿ ಆತ್ಮಾನು ಭವವನ್ನು ಹೊಂದಿರುವವರೂ ಅದನ್ನು ತಿಳಿದುಕೊಳ್ಳಬೇಕೆಂದು ಹಾತುವರಿಯುತ್ತಿರು ವವರಿಗೆ ನಿಸ್ಸಂಶಯವಾಗಿ ಹೇಳಿಕೊಡಬಲ್ಲವರೂ ಆಗಿರುವವರು ಆಚಾರ್ಯರು. ಅಂಥ ಆಚಾರ್ಯರ ಬೋಧೆಯಿಂದಲೂ ಅವರು ತಿಳಿಸಿದ ಮಾರ್ಗದಲ್ಲಿ ಮಾಡಿದ ಮನನದಿಂದಲೂ ಮನಸ್ಸಿನಲ್ಲಿದ್ದ ಹಲವು ಸಂಶಯಗಳು ಕತ್ತರಿಸಿಹೋಗುವವು.

ಪರಮಾರ್ಥವೊಂದು ಇದೆ, ಅದನ್ನು ನಾವೂ ತಿಳಿದುಕೊಳ್ಳಬಹುದು; ಅದನ್ನು ತಿಳಿದು ಕೊಳ್ಳುವದಕ್ಕೆ ಮಾರ್ಗವೂ ಇದೆ ಎಂದು ಗಟ್ಟಿಯಾದ ನಂಬಿಕೆಯುಂಟಾಗುವದು.

ಹೀಗೆ ಶಾಸ್ತ್ರಾಚಾರ್ಯರ ಬೋಧೆಯು ನಮ್ಮ ಮೇಲೆ ಪರಿಣಾಮವನ್ನು ಉಂಟುಮಾಡಬೇಕಾದರೆ ಮೊದಲು ನಾವು ಹೊರಗಿನ ದೃಷ್ಟಿಯಾದ ಲೋಕದೃಷ್ಟಿಯಲ್ಲಿ ಸ್ವಲ್ಪಮಟ್ಟಿಗಾದರೂ ಅವಿಶ್ವಾಸವುಳ್ಳವರಾಗಿರಬೇಕು. ಇಂದ್ರಿಯಗಳು ತಿಳಿವಳಿಕೆಗೆ ಎಲ್ಲೆ ಕಟ್ಟಿದೆಯೆಂದೂ ಅವು ವಸ್ತುಗಳನ್ನು ಇಡಿಯಾಗಿ ತಿಳಿಸದೆ ಶಬ್ದ, ಸ್ಪರ್ಶ, ರೂಪ, ರಸ, ಗಂಧ - ಎಂದು ಒಡೆದು ಒಡೆದು ತಿಳಿಸುವ ಕೊರತೆಯುಳ್ಳವಾಗಿವೆಯೆಂದೂ ಆ ಇಂದ್ರಿಯಗಳ ಬೆನ್ನಂಟಿದ ಮನಸ್ಸು ಎಷ್ಟೋ ಸಲ ಮೋಸಹೋಗಿರುವದೆಂದೂ ಮನಗಂಡಿರಬೇಕು. ಹೊರಗಿನ ವಸ್ತುಗಳು ನಿಜವಾಗಿ ಎಲ್ಲವೂ ಕಾರ್ಯವೇ ಆಗಿದ್ದರೂ ಅವುಗಳಲ್ಲಿ ಒಂದಕ್ಕೊಂದು ಕಾರ್ಯಕಾರಣಭಾವವನ್ನು ಕಲ್ಪಿಸಿಕೊಂಡು ಹೊಯ್ದಾಡು ತ್ತಿರುವ ಅನುಮಾನ ಪ್ರಮಾಣವು ತತ್ತ್ವನಿರ್ಧಾರಕ್ಕೆ ಸಾಲದೆಂಬ ನಿಶ್ಚಯವನ್ನೂ ಮಾಡಿ ಕೊಂಡಿರಬೇಕು. ಇಷ್ಟೇ ಅಲ್ಲ, ಮನುಷ್ಯನಿಗೆ ಅತ್ಯಂತ ಅವಶ್ಯವಾಗಿ ಬೇಕಾಗಿರುವ ಶಾಂತಿಸುಖಗಳು ಯಾವ ಇಂದ್ರಿಯಜ್ಞಾನದ ಮೂಲಕವೂ ದಕ್ಕುವ ಹಾಗಿಲ್ಲವೆಂಬು ದನ್ನೂ ಚೆನ್ನಾಗಿ ಮನದಟ್ಟುಮಾಡಿಕೊಂಡಿರಬೇಕು.

ಯಾರಿಗೆ ಶಾಸ್ತ್ರದ ಮತ್ತು ಆಚಾರ್ಯರ ಬೋಧೆಯ ನಿಮಿತ್ತದಿಂದ ಪರಮಾರ್ಥ ವನ್ನು ತಿಳಿಯುವ ಆಶೆಯು ಪ್ರಬಲವಾಗಿಬಿಟ್ಟಿರುವದೋ ಯಾರಿಗೆ ಪರಮಾರ್ಥವನ್ನು ತಿಳಿಯುವದಕ್ಕೆ ಮನಸ್ಸು ಸಜ್ಜಾಗುವದು ಅವಶ್ಯವೆಂಬ ನಂಬಿಕೆಯೂ ಇರುವದೋ ಅವರು ಶಾಸ್ತ್ರದಲ್ಲಿ ಹೇಳಿರುವ ಶಾಂತಿ, ದಾಂತಿ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ - ಎಂಬ ಸಾಧನಗಳನ್ನು ಅಳವಡಿಸಿಕೊಳ್ಳುವದಕ್ಕೆ ಮನಃಪೂರ್ವಕವಾಗಿ ಪ್ರಯತ್ನಿಸು ವರು. ಯಾವ ಮಹನೀಯರಿಗೆ ಶಾಸ್ತ್ರ ಆಚಾರ್ಯ, ಶಮಾದಿಗಳು - ಈ ಮೂರು ದ್ವಾರಗಳಿಂದಲೂ ಮನಸ್ಸಿಗೆ ಸಂಸ್ಕಾರವಾಗಿಯರುವದೋ, ಅವರಿಗೆ ಉಂಟಾಗುವ ದೃಷ್ಟಿಯೇ ಶಾಸ್ತ್ರದೃಷ್ಟಿಯು. ಈ ಶಾಸ್ತ್ರದೃಷ್ಟಿಯಿಂದ ನೋಡಿದಾಗಲೇ ಈ ಪ್ರಪಂಚ ವೆಲ್ಲವೂ ನಿಜವಾಗಿ ಪರಮಾತ್ಮನೇ, ಪರಮಾತ್ಮನಿಗಿಂತ ಬೇರೆಯಾಗಿ ಯಾವದೊಂದೂ ಇಲ್ಲವೇ ಇಲ್ಲ - ಎಂಬ ಅರಿವು ಉಂಟಾಗುವದೆಂದು ನಾನು ಹಿಂದೆ ತಿಳಿಸಿರುವೆನು.

ಶಾಸ್ತ್ರಶ್ರವಣವನ್ನು ಹೇಗೆ ಮಾಡಬೇಕು. ಆಚಾರ್ಯರ ಬೋಧೆಯನ್ನು ಹೇಗೆ ಉಪಯೋಗಿಸಬೇಕು, ಶಮದಮಾದಿಗಳನ್ನು ಹೇಗೆ ಅಳವಡಿಸಿಕೊಳ್ಳಬೇಕು - ಎಂಬಿ

ದನ್ನೆಲ್ಲ ವಿಸ್ತಾರವಾಗಿ ತಿಳಿಸುವದಕ್ಕೆ ಇಲ್ಲಿ ಅವಕಾಶವಿಲ್ಲ, ಆದರೆ ಇವೆಲ್ಲವೂ ಅಳವಟ್ಟಾಗ ಶಾಸ್ತ್ರದೃಷ್ಟಿಯುಂಟಾಗುವದೆಂಬುದನ್ನು ತಿಳಿದುಕೊಂಡರೆ ಸಾಕಾಗಿದೆ. ಆ ದೃಷ್ಟಿಯನ್ನು ಅವಲಂಬಿಸಿ ನೋಡಿದರೆ ಪರಮಾತ್ಮನೇ ಪರಮಾರ್ಥವು; ಪರಮಾತ್ಮನೇ ನನ್ನ ಮತ್ತು ಮಿಕ್ಕವರೆಲ್ಲರ ಆತ್ಮನು; ಪರಮಾತ್ಮನನ್ನು ಬಿಟ್ಟು ಏನೇನೂ ಇರುವದೇ ಇಲ್ಲ - ಎಂಬ ಉತ್ತಮವಾದ ಜ್ಞಾನವುಂಟಾಗುವದು. ಅಂಥವರಿಗೆ ಪರಮಾತ್ಮನೆಂದರೂ ಒಂದೇ, ತಮ್ಮ ನಿಜವಾದ ಸ್ವರೂಪವೆಂದರೂ ಒಂದೇ. ನನ್ನೊಳಗಿರುವ ಪರಮಾತ್ಮನೇ ಎಲ್ಲವೂ ಆಗಿದ್ದಾನೆ. ಆ ಅರ್ಥದಲ್ಲಿ ನಾನೇ ಎಲ್ಲವೂ ಆಗಿರುತ್ತೇನೆ - ಎಂಬ ಜ್ಞಾನವು ಶಾಸ್ತ್ರದೃಷ್ಟಿ ಯಿಂದ ಆಗುವ ಜ್ಞಾನವು. ಇದನ್ನೇ ಬ್ರಹ್ಮಜ್ಞಾನವೆನ್ನುವರು.

# ಶಾಸ್ತ್ರದೃಷ್ಟಿಯಿಂದಾಗುವ ಬ್ರಹ್ಮಜ್ಞಾನ

ಶಾಸ್ತ್ರದೃಷ್ಟಿಯಿಂದ ನೋಡಿದಕೂಡಲೆ ಲೌಕಿಕದೃಷ್ಟಿಯು ಅಪೂರ್ಣವಾಗಿ ಕಂಡುಬರುವದೆಂಬುದನ್ನೂ ಇಡಿಯ ಜಗತ್ತೇ ಬ್ರಹ್ಮವಾಗಿರುವದೆಂದು ತಿಳಿಯಬರುವ ದೆಂಬುದನ್ನೂ ಹಿಂದಿನ ಲೇಖನಗಳಲ್ಲಿ ವಿವರಿಸಿದ್ದೆನು. ಶಾಸ್ತ್ರದೃಷ್ಟಿಯ ಸ್ವರೂಪವೇನು? ಅದಕ್ಕೆ ಯಾರು ಅರ್ಹರು? ಆ ದೃಷ್ಟಿಯಿಂದಾದ ಜ್ಞಾನದ ಫಲವೇನು?- ಎಂಬುದನ್ನು ಸ್ವಲ್ಪಮಟ್ಟಿಗೆ ಇಲ್ಲಿ ವಿವರಿಸುವೆನು.

ಮೊಟ್ಟಮೊದಲು ವೇದಾಂತಿಗಳ ದೃಷ್ಟಿಯಿಂದ ಶಾಸ್ತ್ರದ ಕೃತ್ಯವೇನೆಂಬುದನ್ನು ತಿಳಿದುಕೊಳ್ಳುವದು ಅಗತ್ಯವಾಗಿರುತ್ತದೆ. ಏಕೆಂದರೆ, ಸಾಮಾನ್ಯಜನರು ಕೆಲವರು ಶಾಸ್ತ್ರವೆಂದರೆ ಯಾವದೋ ಪವಾಡಗಳನ್ನು ನಡೆಯಿಸುವ ಕಣ್ಣುಕಟ್ಟು ವಿದ್ಯೆಯನ್ನು ತಿಳಿಸಿಕೊಡುವ ಮಂತ್ರವೆಂತ ನಂಬಿರುತ್ತಾರೆ. ಅದು ಈಗ ನಮ್ಮಲ್ಲಿಲ್ಲದ ಹೊಸ ಶಕ್ತಿ ಯನ್ನು ಹೇಗೋ ಉಂಟುಮಾಡಿಕೊಡುವದೆಂದೂ ಈಗ ನಮ್ಮಲ್ಲಿರುವ ಅಲ್ಪಶಕ್ತಿಯನ್ನು ಅದು ಹೇಗೋ ಕಳೆದುಹಾಕುವದೆಂದೂ ನಂಬಿರುತ್ತಾರೆ. ಇದಲ್ಲದೆ ಈ ದೃಷ್ಟಿಯನ್ನು ಅನುಗ್ರಹಿಸುವದಕ್ಕೆ ಗುರುಗಳು ಬೇಕೆಂದು ನಾವು ಉಪದೇಶಪರಂಪರೆಯಿಂದಲೂ ನಂಬಿಕೊಂಡು ಬಂದಿರುವದರಿಂದ ಎಲ್ಲಿಯೋ ಕೆಲವರು ಅಧಿಕಾರಿಗಳಿಗೆ ಯಾವಾ ಗಲೋ ದೊಡ್ಡವರ ಪರಮಾನುಗ್ರಹದಿಂದ ಮಾತ್ರವೇ ಈ ಶಾಸ್ತ್ರದೃಷ್ಟಿಯು ದೊರಕು ವದೆಂಬ ಅನೇಕರ ನಂಬಿಕೆಯಿದೆ. ಪರಮಾರ್ಥದ ಸಾಕ್ಷಾತ್ಕಾರವೆಂಬುದು ಯಾರೋ

ಕೆಲವರು ಮಹಾತಪಸ್ವಿಗಳಿಗೆ ಮಾತ್ರವೇ ಹಿಂದಿನ ಕಾಲದಲ್ಲಿ ದೊರಕಿರುವದೆಂದೂ ಈ ಕಲಿಯುಗದಲ್ಲಿ ನಮ್ಮಂಥವರ ಪಾಲಿಗೆ ಅದು ದಕ್ಕಲಾರದೆಂದು ನಿರಾಶೆಯ ಮಾತನ್ನು ಆಡುವವರೂ ಇರುತ್ತಾರೆ.

ಶಾಸ್ತ್ರವೆಂದರೆ ಪುರುಷಾರ್ಥಕ್ಕೆ ಉಪಾಯವನ್ನು ತಿಳಿಸಿಕೊಡುವ ವಾಕ್ಯವು. ವೇದವೆಲ್ಲವೂ ಈ ಅರ್ಥದಲ್ಲಿಯೇ ಶಾಸ್ತ್ರವೆನಿಸಿರುತ್ತದೆ. ಕರ್ಮಕಾಂಡದ ವಾಕ್ಯಗಳು ಪ್ರತ್ಯಕ್ಷದಿಂದಾಗಲಿ ಅನುಮಾನದಿಂದಾಗಲಿ ಅರಿಯುವದಕ್ಕೆ ಆಗದ ಸ್ವರ್ಗಾದಿಫಲವನ್ನು ದೊರಕಿಸುವ ಕರ್ಮವೆಂಬ ಉಪಾಯವನ್ನು ತಿಳಿಸುತ್ತವೆ. ಇದರಂತೆ ಜ್ಞಾನಕಾಂಡದ ವಾಕ್ಯಗಳು ಪ್ರತ್ಯಕ್ಷದಿಂದಾಗಲಿ ಅನುಮಾನದಿಂದಾಗಲಿ ಅರಿಯುವದಕ್ಕಾಗದ ಪರಮಾರ್ಥ ತತ್ತ್ವವನ್ನು ತಿಳಿಸುವ ಜ್ಞಾನವೆಂಬ ಉಪಾಯವನ್ನು ತಿಳಿಸಿಕೊಡುತ್ತವೆ. ಇಲ್ಲಿ ಒಂದು ವಿಶೇಷವುಂಟು: ಕರ್ಮವಾಕ್ಯಗಳಿಂದ ಕರ್ಮವೆಂಬ ಸಾಧನದ ಸ್ವರೂಪವನ್ನು ತಿಳಿದು ಕೊಂಡ ಬಳಿಕ ಆಯಾ ಕರ್ಮವನ್ನು ಮಾಡಿ ಆಯಾ ಫಲವನ್ನು ಪಡೆದುಕೊಳ್ಳಬೇಕಾ ಗುವದು; ಆದ್ದರಿಂದ ಶಾಸ್ತ್ರದಲ್ಲಿ ಹೇಳಿದ ವಾಕ್ಯದಲ್ಲಿ ಶ್ರದ್ಧೆಯನ್ನಿಟ್ಟು ಆಯಾ ಕರ್ಮ ವನ್ನು ನಾವು ಮಾಡಬೇಕಾಗಿರುವದು. ಆದರೆ ಜ್ಞಾನವಾಕ್ಯಗಳ ಉಪದೇಶವು ಹೀಗಲ್ಲ, ಕಣ್ಣಿಗೂ ಬೆಳಕಿಗೂ ಸಂಬಂಧವಾದ ಕೂಡಲೆ ಮುಂದಿರುವ ರೂಪದ ಅಭಿವ್ಯಕ್ತಿಯು ಹೇಗೆ ಆಗುವದೋ ಹಾಗೆಯೇ ಜ್ಞಾನವು ಮನಸ್ಸಿನಲ್ಲಿ ಉಂಟಾದ ಕಾಲದಲ್ಲಿಯೇ ಪರಮಾರ್ಥದ ಅರಿವು ಉಂಟಾಗಿಬಿಡುವದು, ಮರಹು ಅಡಗಿ ಹೋಗುವದು. ಜ್ಞಾನಮಾತ್ರದಿಂದಲೇ ಮೋಕ್ಷವಾಗಿಬಿಡುವದರಿಂದ ಆ ಫಲದ ಪ್ರಾಪ್ತಿಗಾಗಿ ಮತ್ತೆ ಮಾಡತಕ್ಕದ್ದು ಏನೂ ಉಳಿಯುವದಿಲ್ಲ. ಇದು ಹೇಗಾದರೂ ಇರಲಿ, **ಶಾಸ್ತ್ರವಾಕ್ಯವು ಜ್ಞಾಪಕವೇ ಹೊರತು ಕಾರಕವಲ್ಲ; ಇದ್ದದ್ದನ್ನು ಇದ್ದಂತೆ ತಿಳಿಸಿಕೊಡುವದೇ ಹೊರತು ಇಲ್ಲದ್ದನ್ನುಂಟುಮಾಡುವದಿಲ್ಲ, ಇರುವದನ್ನು ಕಳೆಯುವದೂ ಇಲ್ಲ.** ಇದು ಶಾಸ್ತ್ರದ ಕೃತ್ಯವು.

ಯಾವ ಶಾಸ್ತ್ರವಾದರೂ ಜ್ಞಾನವನ್ನು ಕೊಟ್ಟು ಅಜ್ಞಾನವನ್ನು ಕಳೆಯುತ್ತದೆ; ಆದ್ದರಿಂದ ಎಲ್ಲಾ ಶಾಸ್ತ್ರಗಳೂ ಜ್ಞಾಪಕವೇ ಆಗಿರುತ್ತವೆ. ಆದರೆ ಬ್ರಹ್ಮವಿದ್ಯೆಯನ್ನು ಕೊಡುವ ವೇದಾಂತಶಾಸ್ತ್ರದಲ್ಲಿ ಒಂದು ವಿಶೇಷವಿದೆ. ಅದೇನೆಂದರೆ ಅದು ಬ್ರಹ್ಮವನ್ನು ತಿಳಿಸಿಕೊಟ್ಟ ಬಳಿಕ ಮತ್ತೆ ಯಾವದನ್ನೂ ತಿಳಿಯಬೇಕಾದದ್ದೇ ಇರುವದಿಲ್ಲ. ಬ್ರಹ್ಮವು ನಮ್ಮೆಗಳೆಲ್ಲರ ಆತ್ಮನೇ ಆಗಿರುವದು, ಅದರಲ್ಲಿಯೇ ಎಲ್ಲವೂ ಕಲ್ಪಿತವಾಗಿರುತ್ತದೆ; ಬ್ರಹ್ಮ ವನ್ನು ಅರಿತುಕೊಳ್ಳುವವರೆಗೆ ಮಿಕ್ಕದ್ದು ತೋರುತ್ತಿರುತ್ತದೆ. ಮಿಕ್ಕದ್ದು ಯಾವದೊಂದನ್ನು

ತಿಳಿದರೂ ಅಜ್ಞಾನವು ಪೂರ್ಣವಾಗಿ ಹೋಗುವದಿಲ್ಲ. ಆದರೆ ಬ್ರಹ್ಮವನ್ನು ಅರಿತುಕೊಂಡರೆ ಮತ್ತೆ ಯಾವದನ್ನೂ ತಿಳಿಯಬೇಕಾದದ್ದು ಇರುವದಿಲ್ಲ; ಏಕೆಂದರೆ ಬ್ರಹ್ಮವೇ ಎಲ್ಲವೂ ಆಗಿರುತ್ತದೆ ಎಂದು ವೇದಾಂತವಾಕ್ಯಗಳು ಮೊಳಗುತ್ತಿರುವವು.

ಲೌಕಿಕದೃಷ್ಟಿಯು ಅಪೂರ್ಣವೆಂಬುದು ಹೇಗೆ? ಶಾಸ್ತ್ರದೃಷ್ಟಿಯು ಪೂರ್ಣವೆಂಬುದು ಹೇಗೆ ಎಂಬುದನ್ನು ಈಗ ಸ್ವಲ್ಪ ವಿಚಾರಿಸೋಣ. ಉಪನಿಷತ್ತಿನಲ್ಲಿ ಹೀಗೆಂದು ಹೇಳಿರುತ್ತದೆ;

"ಪರಮಾತ್ಮನು ಜಗತ್ತೆಲ್ಲವನ್ನೂ ಸೃಷ್ಟಿಸಿ ಇಲ್ಲಿರುವ ಬ್ರಹ್ಮಾದಿಸ್ತಂಬಪರ್ಯಂತವಾದ ಪ್ರಾಣಿಗಳ ಶರೀರದಲ್ಲಿ ಪ್ರವೇಶಿಸಿರುವನು. ಆದರೂ ಅವನನ್ನು ಜನರು ಅರಿತುಕೊಳ್ಳಲಾರದೆ ಇರುವರು. ಏಕೆಂದರೆ ಅವರು ಅರಿಯುತ್ತಿರುವದು ಅಪೂರ್ಣವಾಗಿರುತ್ತದೆ. 'ನಾನು ಉಸಿರಾಡುವವನು, ಮಾತನಾಡುವವನು, ನೋಡುತ್ತಿರುವವನು, ಕೇಳುತ್ತಿರುವವನು, ಯೋಚಿಸುತ್ತಿರುವವನು' ಎಂದು ತಮ್ಮ ತಮ್ಮ ಕರ್ಮನಾಮಗಳಿಂದ ತಮ್ಮ ಸ್ವರೂಪವನ್ನು ಅರಿತುಕೊಳ್ಳುತ್ತಿರುವರು. ಹೀಗೆ ಒಂದೊಂದೇ ರೂಪದಲ್ಲಿ ಅರಿತುಕೊಂಡವನು ನಿಜವನ್ನು ಅರಿಯನು. 'ನಾನು ಆತ್ಮನು' ಎಂದೇ ಅರಿಯಬೇಕು. ಏಕೆಂದರೆ ಆತ್ಮನೆಂದು ಅರಿತುಕೊಂಡರೆ ಇದೆಲ್ಲವನ್ನೂ ಅರಿತುಕೊಂಡಂತಾಗುವದು.'

ಈ ವೇದಾಂತವಾಕ್ಯದಲ್ಲಿ ಹೇಳಿರುವದನ್ನು ಸ್ವಲ್ಪ ಬಿಡಿಸಿ ನೋಡಿದರೆ ಇಷ್ಟು ಗೊತ್ತಾಗುವದು;

(1) ಪರಮಾತ್ಮನನ್ನು ನಮ್ಮೊಳಗೇ ಅರಿತುಕೊಳ್ಳಬೇಕು; ಏಕೆಂದರೆ ಅವನು ನಮ್ಮ ಶರೀರದೊಳಗೆ ಹೊಕ್ಕಿರುವನು.

(2) ಅವನು ನಮ್ಮ ಸ್ವರೂಪನೇ ಆಗಿರುವನೆಂದು ಅರಿತುಕೊಳ್ಳಬೇಕು.

(3) ನಮ್ಮ ಸ್ವರೂಪವು ಬೇರೆಬೇರೆಯ ಇಂದ್ರಿಯಗಳಿಂದ ಬೇರೆಬೇರೆಯ ಅಪೂರ್ಣರೂಪದಲ್ಲಿ ತೋರುತ್ತಿರುವದು; ಆದರೆ ಅದೊಂದೂ ಪರಮಾತ್ಮನ ರೂಪವಲ್ಲ.

(4) ಈ ಎಲ್ಲಾ ರೂಪಗಳನ್ನೂ ವ್ಯಾಪಿಸಿಕೊಂಡಿರುವ ರೂಪವೊಂದಿದೆ; ಅದಕ್ಕೆ ಆತ್ಮನೆಂದು ಹೆಸರು. ಆತ್ಮರೂಪದಿಂದ ಅರಿತುಕೊಂಡರೇ ನಮ್ಮ ರೂಪವನ್ನು ಪೂರ್ಣವಾಗಿ ಅರಿತುಕೊಂಡಂತೆ ಆಗುವದು.

ಮೇಲಿನ ವಿವರಣೆಯಲ್ಲಿ ಶಾಸ್ತ್ರವು ಉಪದೇಶಿಸಿರುವ ದೃಷ್ಟಿಯ ಸ್ವರೂಪವು ಸ್ವಲ್ಪಮಟ್ಟಿಗೆ ನಮ್ಮ ಮನಸ್ಸಿನಲ್ಲಿ ಮಿಂಚುವಂತೆ ಇದೆ. ಏಕೆಂದರೆ ನಾವು ಇಂದ್ರಿಯ ಗಳಿಂದ ಹೊರಗಿನ ವಸ್ತುಗಳನ್ನು ನೋಡುವವರು ಎಂಬುದು ನಮ್ಮ ಸ್ವಾಭಾವಿಕವಾದ ಲೌಕಿಕದೃಷ್ಟಿ. ನಾವು ಇಂದ್ರಿಯಗಳಿಂದ ಹೊರಗೆ ವಿಷಯಗಳನ್ನು ನೋಡುವಾಗ ಒಂದೊಂದು ಇಂದ್ರಿಯವನ್ನು ಒಮ್ಮೊಮ್ಮೆ ಉಪಯೋಗಿಸಿ ಹೊರಗಿನ ಪ್ರಪಂಚದ ಒಂದೊಂದು ಭಾಗವನ್ನು ಪರೀಕ್ಷಿಸುತ್ತಿರುವೆವು. ಶ್ರೋತ್ರಾದಿಗಳಿಂದ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವನ್ನು ಮಾತ್ರ ಅರಿಯುತ್ತಿರುವೆವು. ಆದರೆ ಶಾಸ್ತ್ರವು ಹೇಳುವ ದೇನೆಂದರೆ, "ಈ ದೃಷ್ಟಿಯು ಅಲ್ಪ ದೃಷ್ಟಿ ಪೂರ್ಣದೃಷ್ಟಿಯಲ್ಲ; ಇದರಿಂದ ತತ್ತ್ವವನ್ನು ಸಂಪೂರ್ಣವಾಗಿ ಅರಿತಂತೆ ಆಗುವದೇ ಇಲ್ಲ, ನೀವು ಈ ಎಲ್ಲಾ ಇಂದ್ರಿಯಗಳನ್ನೂ ವ್ಯಾಪಿಸಿಕೊಂಡಿರುವ ಚೈತನ್ಯರೂಪವಾದ ನಿಮ್ಮ ನಿಜವಾದ ಸ್ವರೂಪವನ್ನು ನೋಡು ವದಕ್ಕೆ ಯತ್ನಿಸಿರಿ. ಆಗ ನಿಮಗೆ ಪೂರ್ಣದೃಷ್ಟಿಯು ದೊರಕುವದು; ಆಗ ನಿಮಗೆ ಎಲ್ಲವನ್ನೂ ಅರಿಯುವ ಜ್ಞಾನವು ದೊರಕುವದು" ಈ ಉಪದೇಶವು ನಮ್ಮಲ್ಲಿಲ್ಲದ ಹೊಸ ತತ್ತ್ವವನ್ನೇನೂ ಹೇಳಿಕೊಡುವದಿಲ್ಲ; ಸ್ವಭಾವದಿಂದ ಹೊರಮುಖವಾಗಿರುವ ಲೌಕಿಕ ದೃಷ್ಟಿಯನ್ನು ತಪ್ಪಿಸಿ ನಮ್ಮ ಒಳಗಡೆಗೆ ನೋಡುವಂತೆ ನಮಗೆ ತಿಳಿವಳಿಕೆಯನ್ನು ಕೊಡುತ್ತದೆ. ಹೊರಗೆ ನೋಡುವ ದೃಷ್ಟಿಗೆ **ಪರಾಗ್ದೃಷ್ಟಿ** ಎಂದು ಹೆಸರು; ನಮ್ಮೊಳಗೇ ಇರುವ ತತ್ತ್ವವನ್ನು ನೋಡುವ ದೃಷ್ಟಿಗೆ **ಪ್ರತ್ಯಗ್ದೃಷ್ಟಿ** ಎಂದು ಹೆಸರು. ಆದ್ದರಿಂದ ಶಾಸ್ತ್ರದೃಷ್ಟಿಯ ಅಸಾಧಾರಣರೂಪವು ಯಾವದೆಂದರೆ ಪ್ರತ್ಯಗ್ದೃಷ್ಟಿಯೇ.

ನಾವು ಹೊರಗಿನ ಶಬ್ದಸ್ಪರ್ಶಾದಿಗಳನ್ನು ನೋಡುವಂತೆ ನಮ್ಮ ಸ್ವರೂಪವೇ ಆಗಿರುವ ಪರಮಾತ್ಮನನ್ನು ವಿಷಯೀಕರಿಸಿ ನೋಡಲಾರೆವೆಂಬುದು ಸ್ಪಷ್ಟವಾಗಿದೆ. ಏಕೆಂದರೆ ಆ ಸ್ವರೂಪದ ಬೆಳಕಿನಿಂದಲೇ ನಾವು ಎಲ್ಲವನ್ನೂ ನೋಡುತ್ತಿರುವದು. ಆದರೆ ಆ ಸ್ವರೂಪವು ಇಲ್ಲವೆನ್ನುವದಕ್ಕೂ ಆಗುವಂತಿಲ್ಲ, ಏಕೆಂದರೆ ಅದು ಇಲ್ಲವೆನ್ನುವದಕ್ಕೆ ಕೂಡ ನಾವು ಇರಬೇಕು. ನಮ್ಮ ಸ್ವರೂಪವನ್ನು ಇಲ್ಲವೆನ್ನುವದು ಎಂದಿಗೂ ಆಗದ ಮಾತು. ಹಾಗಾದರೆ ನಾವು ಅದನ್ನು ಅರಿಯುವದು ಹೇಗೆ? ಎಂದರೆ ಅದೇ ನಾವು ಎಂದು ತಿಳಿದುಕೊಳ್ಳುವದೇ ಅದಕ್ಕೆ ಉಪಾಯವು. ಆದ್ದರಿಂದಲೇ ಶ್ರುತಿಯು ಹೀಗೆನ್ನುತ್ತಿರುವದು:

"ಇದು ಮೊದಲು ಬ್ರಹ್ಮವೇ ಆಗಿತ್ತು; ಅದು ತನ್ನನ್ನೇ ಬ್ರಹ್ಮವೆಂದು ಅರಿತು ಕೊಂಡಿತು. ಆ ಜ್ಞಾನದಿಂದಲೇ ಅದು ಎಲ್ಲವೂ ಆಯಿತು. ದೇವತೆಗಳಲ್ಲಿ ಯಾವ

ಯಾವನು ಅದನ್ನು ಅರಿತುಕೊಂಡನೋ ಅವನೇ ಆದದನು. ಋಷಿಗಳಲ್ಲಿಯೂ ಹೀಗೆಯೇ, ಮನುಷ್ಯರಲ್ಲಿಯೂ ಹೀಗೆಯೇ. ಈಗಲೂ ಯಾವಯಾವನು, 'ನಾನು ಬ್ರಹ್ಮವಾಗಿರುವೆನು' ಎಂದು ಅರಿತುಕೊಳ್ಳುವನೋ ಅವನು ಇದೆಲ್ಲವೂ ಆಗುವನು. ಅವನನ್ನು ಸರ್ವವಾಗದಂತೆ ದೇವತೆಗಳೂ ಅಡ್ಡಿಮಾಡಲಾರರು; ಏಕೆಂದರೆ ಅವನು ಅವರಿಗೂ ಆತ್ಮನಾಗಿರುವನು.''

ನಾವೆಲ್ಲರೂ ತಿಳಿದಿರಲಿ ತಿಳಿಯದಿರಲಿ, ನಮ್ಮ ಪರಮಾರ್ಥಸ್ವರೂಪವು ಬ್ರಹ್ಮವೇ ಆಗಿರುತ್ತದೆ. ನಾವು ಇದನ್ನು ಅರಿತುಕೊಳ್ಳುವದಕ್ಕೆ ಇಂದ್ರಿಯಗಳ ಹೊರಗಿನ ಪರಾಗ್ದೃಷ್ಟಿಯನ್ನು ಅವಲಂಬಿಸಿದರೆ ಆಗುವದಿಲ್ಲ; ಇದಕ್ಕೆ ನಾವು ನಮ್ಮೊಳಗೇ ಇರುವ ರೂಪವನ್ನು ಅರಿತುಕೊಳ್ಳಬೇಕು. ಯಾರೇ ಆಗಲಿ, ಎಷ್ಟು ಮಹಾಮಹಿಮರಾಗಲಿ, ಈ ದೃಷ್ಟಿಯನ್ನು ಅವಲಂಬಿಸಿದ ಹೊರತು ಆ ಪರಮಾರ್ಥಜ್ಞಾನವು ಉದಯಿಸದು. ದೇವತೆಗಳಂತೆ ಹುಟ್ಟಿದಂದಿನಿಂದಲೂ ಸಿದ್ಧಿಯನ್ನು ಪಡೆದುಕೊಂಡಿರುವವರಾಗಿರಲಿ, ಋಷಿಗಳಂತೆ ತಪಸ್ಸಿನಿಂದ ಸಿದ್ಧಿಯನ್ನು ಪಡೆದುಕೊಂಡವರಾಗಿರಲಿ, ಅವರೆಲ್ಲರಿಗೂ ಆ ಸಿದ್ಧಿಗಳಿಂದ ಹೊರಗಿನ ವಿಷಯಗಳನ್ನು ಅನುಭವಿಸುವ ಕೌಶಲವು ದೊರಕೀತೇ ಹೊರತು ಪರಮಾತ್ಮ ಜ್ಞಾನವು ಎಂದಿಗೂ ಉದಯಿಸಲಾರದು. ಅವರಲ್ಲಿ ಯಾರು ಮಾತ್ರ ಇಂದ್ರಿಯಗಳ ದೃಷ್ಟಿಯಿಂದ ಹೊರಗಿನ ವಿಷಯಗಳ ಕಡೆಗೇ ಧಾವಿಸುವ ಲೌಕಿಕ ದೃಷ್ಟಿಯನ್ನು ಬಿಟ್ಟು ಒಳಗಡೆಗೆ ತಿರುಗುವ ಶಾಸ್ತ್ರದೃಷ್ಟಿಯನ್ನು ಅವಲಂಬಿಸುವರೋ ಅವರು ಮಾತ್ರ ನಮ್ಮೆಲ್ಲರ ಆತ್ಮನಾಗಿರುವ ಪರಮಾತ್ಮನ ಜ್ಞಾನವನ್ನು ಪಡೆದುಕೊಳ್ಳುವರು. ಅವರು ಮಾತ್ರ ಸರ್ವಾತ್ಮಭಾವವೆಂಬ ಮಹಾಫಲವನ್ನು ಪಡೆದುಕೊಳ್ಳುವರು.

ಬಹುಪುರಾತನ ಕಾಲದಲ್ಲಿ ವಾಮದೇವನೆಂಬ ಒಬ್ಬ ಋಷಿಯಿದ್ದನು. ಆತನು ಒಂದಾನೊಂದು ಕಾಲದಲ್ಲಿದ್ದನು ಎಂಬುದೇ ಸರಿಯಲ್ಲ; ಏಕೆಂದರೆ ಶ್ರುತಿಯಲ್ಲಿ ಅವನ ಹೆಸರು ಬಂದಿರುತ್ತದೆ. ಆ ವಾಮದೇವನಿಗೆ ಈ ಪ್ರತ್ಯಗ್ದೃಷ್ಟಿಯು ದೊರಕಿತು. ಅವನು ಆ ದೃಷ್ಟಿಯು ದೊರಕಿದ ಕೂಡಲೆ, ಆ ಸಮಕಾಲದಲ್ಲಿಯೇ, ''ನಾನು ಮನುವಾಗಿದ್ದೆನು. ಸೂರ್ಯನಾಗಿದ್ದೆನು, ಕಕ್ಷೀವಂತನೆಂಬ ಋಷಿಯಾಗಿದ್ದೆನು......'' ಎಂದು ಮುಂತಾಗಿ ಅರಿತುಕೊಂಡನು. ಆ ಅರ್ಥದ ಸೂಕ್ತವೊಂದು ಋಗ್ವೇದದಲ್ಲಿರುತ್ತದೆ. ಆ ಸೂಕ್ತದಲ್ಲಿ ಇಂದ್ರನು ತಾನು ಸರ್ವಾತ್ಮನೆಂದು ಹೇಳಿಕೊಂಡಿರುವಂತೆ, ಋಷಿಯು ಹಾಡಿರುತ್ತಾನೆ. ಜ್ಞಾನವಾದ ಕೂಡಲೆ ಸರ್ವಾತ್ಮಭಾವವು ಇಂದ್ರನಿಗೂ ಋಷಿಗೂ ಬಂತೆಂದದ್ದರಿಂದ ಅವರಿಬ್ಬರೂ ಮೊದಲೂ ಸರ್ವಾತ್ಮರಾಗಿಯೇ ಇದ್ದರೆಂದು ಸ್ಪಷ್ಟ

ವಾಗಿರುತ್ತದೆ. ಬೆಳಕಿಗೂ ಕಣ್ಣಿಗೂ ಸಂಬಂಧವಾದರೆ ಬೆಳಕಿನಲ್ಲಿರುವ ವಸ್ತುಗಳ ರೂಪವು ಮತ್ತೆ ಯಾವ ಪ್ರತ್ಯಯವೂ ಇಲ್ಲದೆ ತಾನೇ ಕಾಣುವಂತೆ ಅವರಿಬ್ಬರಿಗೂ 'ಬ್ರಹ್ಮವು ನನ್ನ ಆತ್ಮನು' ಎಂಬ ಜ್ಞಾನವು ಉದಯಿಸಿದ ಕ್ಷಣದಲ್ಲಿಯೇ 'ನಾನು ಸರ್ವಾತ್ಮನು' ಎಂಬ ಅರಿವು ಉಂಟಾಯಿತು. ಆ ಅರಿವನ್ನು ಸಂಪಾದಿಸಿಕೊಳ್ಳುವದಕ್ಕೆ ಅವರು ಮತ್ತೆಯಾವ ಅನುಷ್ಠಾನವನ್ನೂ ಮಾಡಬೇಕಾಗಿಬರಲಿಲ್ಲ, ಇದೇ ಪ್ರತ್ಯಗ್ದೃಷ್ಟಿಯಿಂದಾದ ಬ್ರಹ್ಮಜ್ಞಾನದ ಮಹಿಮೆಯು.

ಈ ಜ್ಞಾನವನ್ನು ಸಂಪಾದಿಸುವದಕ್ಕೆ ಮಹಾವೀರ್ಯರಾದ ದೇವತೆಗಳೇ ಆಗಬೇಕು, ಋಷಿಗಳೇ ಆಗಬೇಕು, ಎಂಬುದೇನೂ ಇಲ್ಲ; ಮನುಷ್ಯರಲ್ಲಿ ಕೂಡ ಅನೇಕರು ಈ ಜ್ಞಾನವನ್ನು ಸಂಪಾದಿಸಿಕೊಂಡಿರುತ್ತಾರೆ. ಈ ಯುಗದವರಾದ ನಮ್ಮಂಥವರು ಕೂಡ ಈ ಶಾಸ್ತ್ರೀಯ ದೃಷ್ಟಿಯನ್ನು ಅವಲಂಬಿಸಿದರೆ ಸಾಕು; ನಾನು ಬ್ರಹ್ಮವಾಗಿರುವೆನು ಎಂಬ ಉತ್ತಮಜ್ಞಾನವು ಆಗಿಬಿಡುತ್ತದೆ. ಅದರಿಂದಾಗುವ ಸರ್ವಾತ್ಮಭಾವವೆಂಬ ಫಲವೂ ದೊರಕಿಬಿಡುತ್ತದೆ. ಉತ್ತಮಪದವಿಗೇರುವವರನ್ನು ಅಸೂಯೆಯಿಂದ ಮೇಲಿರುವರು ಕೆಳಕ್ಕೆ ತಳ್ಳುವದುಂಟು. ಆದರೆ ದೇವತೆಗಳಾಗಲಿ ಋಷಿಗಳಾಗಲಿ ಶಾಸ್ತ್ರೀಯ ದೃಷ್ಟಿಯನ್ನವಲಂಬಿಸಿದವರಿಗೆ ಆಗುವ ಜ್ಞಾನಫಲವನ್ನು ಸಿಕ್ಕದಂತೆ ಅಡ್ಡಿಮಾಡಲಾರದು. ಏಕೆಂದರೆ ಜ್ಞಾನಿಯು ಅವರೆಲ್ಲರಿಗೂ ಆತ್ಮನಾಗಿ ಬಿಟ್ಟಿರುತ್ತಾನೆ. ಅವನೇ ಎಲ್ಲವೂ ಆಗಿಬಿಟ್ಟಿರುತ್ತಾನೆ. ಇದು ಹೇಗೆಂಬುದನ್ನು ಇನ್ನೊಮ್ಮೆ ಸ್ವಲ್ಪ ವಿಸ್ತರಿಸಿ ತಿಳಿಸುವೆನು.

# ಪರಮಾತ್ಮ

ಶಾಸ್ತ್ರದೃಷ್ಟಿಯಿಂದ ತಿಳಿಯಬರುವ ಪರಮಾತ್ಮನು ಸಾಕ್ಷಿಯಾಗಿರುತ್ತಾನೆ ಎಂದು ಹಿಂದಿನ ಲೇಖನದಲ್ಲಿ ತಿಳಿಸಿರುತ್ತೇನೆ. ಆ ಸಾಕ್ಷಿಸ್ವರೂಪವನ್ನು ಮತ್ತಷ್ಟು ಬಿಚ್ಚಿ ವಿವರಿಸುವದಕ್ಕೆ ಇಲ್ಲಿ ಪ್ರಯತ್ನವನ್ನು ಮಾಡುವೆನು.

ಸಾಕ್ಷಿಯ ಸ್ವರೂಪವನ್ನು ಉಪನಿಷತ್ತಿನಲ್ಲಿ ಮಾತ್ರವೇ ತಿಳಿಸಿರುತ್ತದೆ. ಆದ್ದರಿಂದ ಇವನನ್ನು ಔಪನಿಷದಪುರುಷನೆಂದೂ ಕರೆಯುವದುಂಟು. ವೇದದ ಕರ್ಮಕಾಂಡದಲ್ಲಿ ಎಲ್ಲಿಯೂ ಈ ಸಾಕ್ಷಿಸ್ವರೂಪವನ್ನು ವಿವರಿಸಿರುವದಿಲ್ಲ. ಅದರಲ್ಲಿ 'ನಾನು', 'ನಾನು'- ಎಂದು ಅಹಂಪ್ರತ್ಯಯಕ್ಕೆ ಗೋಚರನಾಗಿರುವ ಆತ್ಮನನ್ನು ಮಾತ್ರ ಇಟ್ಟುಕೊಂಡು 'ಈ

ಕರ್ಮವನ್ನು ಮಾಡಬೇಕು, ಈ ಕರ್ಮವನ್ನು ಮಾಡಬಾರದು' – ಎಂದು ವಿಧಿಸುತ್ತಲೂ ನಿಷೇಧಿಸುತ್ತಲೂ ಹೋಗಿರುತ್ತದೆ.

ವಿಧಿನಿಷೇಧಗಳಿಗೆ ಗೋಚರನಾದ ಆತ್ಮನು ಬರಿಯ ದೇಹವಲ್ಲ, ಏಕೆಂದರೆ 'ಈ ಕರ್ಮವನ್ನು ಮಾಡಿದರೆ ನನಗೆ ಪರಲೋಕದಲ್ಲಿ ಸುಖವುಂಟು, ಅಥವಾ ದುಃಖವುಂಟು'; 'ಈ ಕರ್ಮದ ಫಲವಾಗಿ ಮುಂದಿನ ಜನ್ಮದಲ್ಲಿ ನನಗೆ ಇಂಥಿಂಥ ಸುಖವನ್ನು ಅಥವಾ ದುಃಖವನ್ನು ಅನುಭವಿಸುವ ಶರೀರವು ಬರುತ್ತದೆ – ಎಂದು ಶಾಸ್ತ್ರಬಲದಿಂದ ತಿಳಿದುಕೊಳ್ಳುವವನೇ ಕರ್ಮಕ್ಕೆ ಅಧಿಕಾರಿಯು ಶರೀರವು ಈ ಜನ್ಮಕ್ಕೆ ಮಾತ್ರ ಸೇರಿದ್ದು; ಕರ್ಮದ ಫಲವು ಜನ್ಮಾಂತರಕ್ಕೂ ಲೋಕಾಂತರಕ್ಕೂ ಸೇರಿದ್ದು, ಆದ್ದರಿಂದ ದೇಹಕ್ಕಿಂತ ಬೇರೆಯಾದ ಆತ್ಮನು ನಾನು ಎಂಬ ಜ್ಞಾನವಿದ್ದವನೇ ಕರ್ಮಕ್ಕೆ ಅಧಿಕಾರಿಯಾಗುತ್ತಾನೆಂಬುದು ನಿಜ. ಆದರೂ ನಾನು ಎಂಬ ಅಹಂಪ್ರತ್ಯಯಕ್ಕೆ ಗೋಚರನಾಗಿರುವ ಆತ್ಮನು ದೇಹಾದಿಸಂಘಾತದ ಅಭಿಮಾನವನ್ನು ಪೂರ ಬಿಟ್ಟವನೆಂದು ಹೇಳುವದಕ್ಕೆ ಬರುವದಿಲ್ಲ, ನಾನು ಹೋಗುತ್ತೇನೆ, ಬರುತ್ತೇನೆ, ಕುರುಡನು, ಕುಂಟನು, ಜ್ಞಾನಿಯು, ಅಜ್ಞಾನಿಯು – ಎಂದು ಮುಂತಾಗಿ ದೇಹೇಂದ್ರಿಯ ಮನಸ್ಸುಗಳ ಸಂಬಂಧವನ್ನು ತನಗೆ ಒಂದಿಷ್ಟಾದರೂ ಹಾಕಿಕೊಳ್ಳದೆ ಯಾವನೂ ವಿಧಿನಿಷೇಧಗಳಿಗೆ ಅಧಿಕಾರಿಯಾಗುವದೇ ಇಲ್ಲ, ಇದನ್ನು ಹಿಂದಿನ ಲೇಖನದಲ್ಲಿ ವಿವರಿಸಿರುತ್ತೇನೆ.

ಕರ್ಮಕಾಂಡದಲ್ಲಿ ಹೇಳಿರುವ ಈ ಆತ್ಮನನ್ನು ತರ್ಕಶಾಸ್ತ್ರವನ್ನು ಅವಲಂಬಿಸಿರುವ ವಾದಿಗಳೂ ಒಪ್ಪಿರುತ್ತಾರೆ. ಅವರು ನಾನು ದೇಹವಲ್ಲ, ದೇಹಕ್ಕಿಂತಲೂ, ಇಂದ್ರಿಯಗಳಿಗಿಂತಲೂ, ಬೇರೆಯಾಗಿದ್ದು ಇವುಗಳನ್ನು ಉಪಯೋಗಿಸಿರುವ ಜೀವಾತ್ಮನಾಗಿರುತ್ತೇನೆ. ನಾನು ಹೇಗೆ ಜೀವಾತ್ಮನೋ ಹಾಗೆಯೇ ನನ್ನಂತೆ ಅನೇಕ ಜೀವಾತ್ಮರುಗಳು ಇರುತ್ತಾರೆ. ಅವರು ನನ್ನಂತೆಯೇ ಆಯಾ ಶರೀರೇಂದ್ರಿಯಸಂಘಾತಗಳನ್ನು ಉಪಯೋಗಿಸಿಕೊಂಡು ಪುಣ್ಯಪಾಪಕರ್ಮಗಳನ್ನು ಮಾಡಿ ಆಯಾ ಫಲವನ್ನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಪಡೆಯುತ್ತಾರೆ. ಅವರಿಗೆ ಇಚ್ಛಾಜ್ಞಾನಸ್ಮೃತ್ಯಾದಿಗಳು ಗುಣಗಳು; ಆ ಗುಣಗಳ ತಾರತಮ್ಯದಿಂದ ಜೀವರೂ ತಾರತಮ್ಯವುಳ್ಳವರಾಗಿರುತ್ತಾರೆ ಎಂದು ಪ್ರತ್ಯಕ್ಷಾನುಮಾನಗಳಿಂದ ಜೀವಾತ್ಮನನ್ನು ತಾರ್ಕಿಕರು ಸಾಧಿಸುತ್ತಾರೆ.

ಆದರೆ ವಿಧಿಕಾಂಡದಲ್ಲಾಗಲಿ ತಾರ್ಕಿಕರ ವಾದಗಳಲ್ಲಾಗಲಿ ವೇದಾಂತೈಕ ವೇದ್ಯನಾದ ಪರಮಾರ್ಥಾತ್ಮನ ವಿಷಯವನ್ನು ಹೇಳಿರುವದಿಲ್ಲ, ಅಹಂಪ್ರತ್ಯಯಕ್ಕೆ ಗೋಚರ

ನಾಗಿರುವ ಲೌಕಿಕಾತ್ಮನಿಗಿಂತ ಬೇರೆಯಾಗಿ ಅವನಿಗೂ ಸಾಕ್ಷಿಯಾಗಿರುವ ಮತ್ತೊಬ್ಬ ಆತ್ಮನಿರುವನೆಂದು ಅವರು ಯಾರೂ ತಿಳಿದಿರುವದಿಲ್ಲ. ವೇದಾಂತದ ಅಭ್ಯಾಸದಿಂದಲ್ಲದೆ ತಿಳಿಯುವದಕ್ಕೆ ಸಾಧ್ಯವೂ ಅಲ್ಲ.

ಸಾಕ್ಷಿಯೆಂದರೇನು? ಸಾಕ್ಷಾದ್ ದ್ರಷ್ಟೃ, ನೇರಾಗಿ ನೋಡುವವನು, ಇದನ್ನು ಹಿಂದಿನ ಲೇಖನದಲ್ಲಿ ವಿವರಿಸಿರುತ್ತೇನೆ. ಯಾವದಾದರೊಂದು ಕರಣವನ್ನು ಉಪಯೋಗಿಸಿಕೊಂಡು ಅರಿಯುವ ಆತ್ಮನು 'ಪ್ರಮಾತೃ' - ಎನಿಸುತ್ತಾನೆ. ಆ ಪ್ರಮಾತೃವಿಗೆ ಕರಣಗಳು ಪ್ರಮಾಣ ಎನಿಸುತ್ತವೆ; ಅವನು ಅರಿಯುವ ಪದಾರ್ಥಗಳು ಪ್ರಮೇಯವೆನಿಸುವವು. ಆದರೆ ಈ ಪ್ರಮಾತೃ, ಪ್ರಮಾಣ, ಪ್ರಮೇಯ - ಎಲ್ಲವನ್ನೂ ತನ್ನ ಚೈತನ್ಯಪ್ರಕಾಶದಿಂದಲೇ ಮತ್ತೆ ಯಾವ ಕರಣವನ್ನೂ ಬಯಸದೆ ಕಾಣುತ್ತಿರುವದರಿಂದ ಔಪನಿಷದಪುರುಷನು ಸಾಕ್ಷಿ ಎನಿಸಿರುತ್ತಾನೆ.

**ಉಪನಿಷತ್ತಿನಲ್ಲಿ ಈ ಸಾಕ್ಷಿಯನ್ನು ಹೇಗೆ ವರ್ಣಿಸಿದೆ. ನೋಡಿರಿ! ಒಬ್ಬನೇ ದೇವನು ಸರ್ವಭೂತಗಳಲ್ಲಿಯೂ ಹುದುಗಿಕೊಂಡಿರುತ್ತಾನೆ. ಅವನು ಸರ್ವವ್ಯಾಪಿಯು, ಎಲ್ಲಾ ಭೂತಗಳಿಗೂ ಅಂತರಾತ್ಮನು, ಅವನು ಕರ್ಮಗಳಿಗೆ ಅಧ್ಯಕ್ಷನು, ಸರ್ವಭೂತಗಳಲ್ಲಿಯೂ ವಾಸಮಾಡಿಕೊಂಡಿರುವಾತನು, ಸಾಕ್ಷಿಯು, ಚೈತನ್ಯ ಸ್ವರೂಪನು, ಕೇವಲನು, ನಿರ್ಗುಣನು.** **ಶ್ವೇತಾಶ್ವತರ**

ಪರಮಾತ್ಮನು ದೇವನು, ಸ್ವಪ್ರಕಾಶನು; ಅವನು ಬೆಳಗುವದಕ್ಕೆ ಮತ್ತೆ ಯಾವದೊಂದರ ಬೆಳಕಿನ ಸಹಾಯವೂ ಬೇಕಿಲ್ಲ. ಅವನು ಒಬ್ಬನೇ ಸರ್ವಭೂತಗಳಲ್ಲಿಯೂ ಅಡಗಿರುತ್ತಾನೆ. ಬ್ರಹ್ಮಾದಿಸ್ತಂಬಪರ್ಯಂತವಾದ ಸ್ಥಾವರ ಜಂಗಮಾತ್ಮಕವಾದ ಭೂತಗಳಲ್ಲಿ ಆತನೊಬ್ಬನೇ ದೇವನು; ಆತನ ಬೆಳಕಿನಿಂದಲೇ ಅನಾತ್ಮವಾದದ್ದೆಲ್ಲವೂ ಬೆಳಗುತ್ತಿರುತ್ತದೆ. ಅವನು ಎಲ್ಲಾ ಭೂತಗಳಿಗೂ ಅಂತರಾತ್ಮನು ಶರೀರಾದಿಗಳು ಒಂದಕ್ಕಿಂತ ಒಂದು ಒಳಗೆ ಇರುವವು; ಶರೀರಕ್ಕಿಂತ ಪ್ರಾಣವೂ ಪ್ರಾಣಕ್ಕಿಂತ ಮನೋಬುದ್ಧಿಗಳೂ ಅವಕ್ಕಿಂತ ಅಹಂಪ್ರತ್ಯಯಗಮ್ಯನಾದ ಆತ್ಮನೂ ಒಳಗೊಳಗೆ ಇರುತ್ತಾರೆ. ಒಳಕ್ಕೊಳಕ್ಕೆ ಹೋಗುತ್ತಾ ಸೂಕ್ಷ್ಮತ್ವವೂ ಹೆಚ್ಚಾಗುತ್ತದೆ. ಆತ್ಮಭಾವನೆಯೂ ಬಲವಾಗಿರುತ್ತದೆ. ಆದರೆ ಈ ಪರಮಾತ್ಮನು ಎಲ್ಲಕ್ಕೂ ಒಳಗಿದ್ದು ಎಲ್ಲಕ್ಕಿಂತಲೂ ಸೂಕ್ಷ್ಮನಾಗಿರುವದರಿಂದ ಅನ್ವರ್ಥವಾಗಿಯೂ ಪರಮಾತ್ಮನು, ಸರ್ವಶ್ರೇಷ್ಠನಾದ, ಆತ್ಮನು ಅವನ ಸಂಬಂಧದಿಂದಲೇ ದೇಹಾದಿಗಳಲ್ಲಿ ಆತ್ಮತ್ವಬುದ್ಧಿಯುಂಟಾಗಿರುವದು. ಜೀವರು ಮಾಡುತ್ತಿರುವ ಕರ್ಮ

ಗಳಿಗೆ ಫಲವು ಈ ಪರಮಾತ್ಮನಿಂದಲೇ ಬರುವದು, ಇಷ್ಟೇ ಅಲ್ಲ, ಕರ್ಮಗಳಲ್ಲಿ ಪ್ರವೃತ್ತಿಯು ಈ ಪರಮಾತ್ಮನಿಂದಲೇ ಆಗುತ್ತಿರುವದು. ನಮ್ಮ ಶರೀರದಲ್ಲಿ ಆತನು ವಾಸಮಾಡಿಕೊಂಡಿರುತ್ತಾನಾದರೂ ನಿಜವಾಗಿ ನಾವೇ ಆತ್ಮನನ್ನು ಆಶ್ರಯಿಸಿಕೊಂಡಿ ರುವೆವು. ನಮ್ಮ ಶರೀರಾದಿಗಳ ಸತ್ತೆ, ಸ್ಫೂರ್ತಿ, ವ್ಯಾಪಾರ, ಆ ವ್ಯಾಪಾರದ ಫಲ - ಇವೆಲ್ಲಕ್ಕೂ ಆತನ ಸತ್ತೆಯೇ ಆಧಾರವಾಗಿರುವದು. ಆತನು ಸಾಕ್ಷಿಯಾಗಿರುವದರಿಂದ ಸಾಕ್ಷ್ಯವಾದ ಯಾವ ಅನಾತ್ಮದ ಕಲಂಕವೂ ಆತನಿಗೆ ಹತ್ತುವಂತಿಲ್ಲ, ಆದರೂ ಈ ಅನಾತ್ಮವನ್ನೆಲ್ಲ ಅವನು ಸಂಪೂರ್ಣವಾಗಿ ವ್ಯಾಪಿಸಿಕೊಂಡಿರುತ್ತಾನೆ. ಅವನ ವ್ಯಾಪಕತ್ವವು ಎಷ್ಟರವುಟ್ಟಿಗೆ ಇರುವದೆಂದರೆ ಆತನ ವ್ಯಾಪ್ತಿಯಿಲ್ಲದ ಕ್ರಿಯೆಯಾಗಲಿ ಕಾರಕವಾಗಲಿ, ಫಲವಾಗಲಿ ಇರುವದೇ ಇಲ್ಲ, ಆತನ ಚೈತನ್ಯಸ್ವರೂಪದ ಕಣ್ಣಿನಿಂದ ನೋಡಿದರೆ ಎಲ್ಲವೂ ಆತನೇ; ಆತನು ಕೇವಲನು, ಎಂದರೆ ಅದ್ವಿತೀಯನು, ಆತನಿಗೆ ಎರಡನೆ ಯದೆಂದು ಯಾವದೊಂದನ್ನು ಕಲ್ಪಿಸಿದರೂ ಅದೆಲ್ಲವೂ ಆತನ ಚಿದ್ರೂಪಸತ್ತೆಯಿಂದಲೇ ವ್ಯಾಪ್ತವಾಗಿ ರುತ್ತದೆ. ಆತನಲ್ಲಿ ಸ್ವಗತವಾದ ಯಾವದೊಂದು ಭೇದವೂ ಇರುವದಿಲ್ಲ; ಏಕೆಂದರೆ ಭೇದವೆಲ್ಲವನ್ನೂ ಆತನ ಚೈತನ್ಯವೇ ವ್ಯಾಪಿಸಿಕೊಂಡಿರುತ್ತದೆ. ಚೈತನ್ಯದಲ್ಲಿ ಯಾವ ದೊಂದು ಭೇದವನ್ನೂ ಕಲ್ಪಿಸುವದಕ್ಕೆ ಆಗುವದಿಲ್ಲ; ಏಕೆಂದರೆ ಹಾಗೆ ಕಲ್ಪಿಸಿದರೆ ಅದೇ ಜಡವೆಂದಾಗುತ್ತದೆ. ಆದ್ದರಿಂದಲೇ ಶ್ರುತಿಯು ವಿಜ್ಞಾನವೂ ಅವಿಜ್ಞಾನವೂ ಆ ಪರಮಾತ್ಮನೇ. ಆತನಲ್ಲಿ ಚೇತನಾಚೇತನವಿಭಾಗವಿಲ್ಲ - ಎಂದು ಸಾರುತ್ತಿರುತ್ತದೆ.

ಪರಮಾತ್ಮನ ಅದ್ವಿತೀಯತ್ವವನ್ನು ಹೀಗೆ ವರ್ಣಿಸುತ್ತದೆ; ಅವನು ಎಚ್ಚರದಲ್ಲಿಯೂ ಕನಸಿನಲ್ಲಿಯೂ ಕಾಣುವ ಎಲ್ಲವನ್ನೂ ನೋಡುತ್ತಿರುತ್ತಾನೆ. ಎಚ್ಚರದಲ್ಲಿ ಕಾಣುವ ಪ್ರಪಂಚವನ್ನೆಲ್ಲ - ಅನೇಕ ಜೀವರುಗಳು ಅಚೇತನವಸ್ತುಗಳು ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಎಂಬ ಭೇದದಿಂದ ಹರಡಿಕೊಂಡು ಕಾಣುವ ಪ್ರಪಂಚವನ್ನೆಲ್ಲ - ತನ್ನ ಚೈತನ್ಯಪ್ರಕಾಶದಿಂದ ಕಾಣುತ್ತಿರುತ್ತಾನೆ; ಎಚ್ಚರದ ಅವಸ್ಥೆಯನ್ನೇ ಕಾಣುತ್ತಿರುತ್ತಾನೆ. ಹೀಗೆಯೇ ಕನಸನ್ನೂ ಕನಸಿನಲ್ಲಿ ಕಾಣುವ ಇಡಿಯ ಪ್ರಪಂಚವನ್ನೂ ಕಾಣುತ್ತಿರುತ್ತಾನೆ. ತನಿನಿದ್ರೆಯಲ್ಲಿಪ್ರಪಂಚದ ಅಭಾವವನ್ನೂ- ಭಾವಭಾವ ರೂಪವಾಗಿರುವ ಪ್ರಪಂಚವೇ ಇಲ್ಲದಿರುವ ತನ್ನಸ್ವರೂಪವನ್ನೂ - ತನ್ನ ಚಿತ್ಪ್ರಕಾಶದಿಂದಲೇ ವಿಶೇಷಜ್ಞಾನದ ಸಹಾಯ ವಿಲ್ಲದೆ ಅರಿಯುತ್ತಿರುತ್ತಾನೆ. ಸಾಕ್ಷಿಸ್ವರೂಪನಾದ ತಾನು ಯಾವ ದೇಶಕಾಲನಿಮಿತ್ತ ಗಳಿಗೂ ಕಟ್ಟುಬಿದ್ದಿರುವದಿಲ್ಲ; ತನಗೆ ಸಾಕ್ಷ್ಯವಾಗಿರುವ ಪ್ರಪಂಚವೂ ದೇಶಕಾಲನಿಮಿತ್ತ ಗಳಿಗೆ ಕಟ್ಟುಬಿದ್ದಿರುವದಿಲ್ಲ, ಏಕೆಂದರೆ ಎಲ್ಲಾ ದೇಶಕಾಲ ನಿಮಿತ್ತಗಳೂ ಸೇರಿರುವ

ಒಂದೊಂದು ಅವಸ್ಥೆಯೂ ಅವನಿಗೇ ಸಾಕ್ಷ್ಯವಾಗಿರುತ್ತದೆ – ಹೀಗಿರುವ ಈ ಆತ್ಮನನ್ನು ಒಂದೆಂದು ಎಣಿಸುವದಕ್ಕಾಗುವದಿಲ್ಲ, ಅವಸ್ಥೆಗಳನ್ನು ಅವನಿಗೆ ಎರಡನೆಯವು ಎಂದೂ ಲೆಕ್ಕಿಸುವದಕ್ಕಾಗುವದಿಲ್ಲ, ಆದ್ದರಿಂದ ಎಲ್ಲಾ ಬಗೆಯಿಂದಲೂ ಅದ್ವಿತೀಯನಾಗಿರುತ್ತಾನೆ. ಇದೇ ಅವನ ಕೇವಲತ್ವವು.

ಹೀಗಿರುವದರಿಂದ ಆತನು ನಿರ್ಗುಣನು. ಪರಮಾತ್ಮನಲ್ಲಿ ಯಾವ ಗುಣವೂ ಇಲ್ಲವೆಂದರೆ ಅವನಲ್ಲಿ ದೋಷಗಳಿರುವವೆಂದು ತಪ್ಪಾಗಿ ಅರ್ಥವನ್ನು ಮಾಡಿಕೊಳ್ಳುವದಕ್ಕೆ ಅವಕಾಶವಿಲ್ಲ, ಏಕೆಂದರೆ ಸರ್ವವ್ಯಾಪಿಯೂ ಚೈತನ್ಯವೂ ಆಗಿರುವ ಆತನ ಸ್ವರೂಪಕ್ಕೆ ಯಾವದೊಂದು ಅನಾತ್ಮವೂ ಅಂಟಿಕೊಳ್ಳಲಾರದು. ಗುಣದೋಷಗಳೆಂಬ ವಿಭಾಗವು ಅಚೇತನದಲ್ಲಿರುತ್ತದೆ; ಚೈತನ್ಯದಲ್ಲಿ ಯಾವದೊಂದು ವಿಭಾಗವೂ ಇರುವದಿಲ್ಲ, ಆದ್ದರಿಂದಲೇ ಪರಮಾತ್ಮನನ್ನು ನಿತ್ಯಶುದ್ಧಬುದ್ಧಮುಕ್ತಸ್ವಭಾವನು ಎಂದು ಬಲ್ಲವರು ಹೇಳುತ್ತಾರೆ.

# ಸಾಕ್ಷಿ

ಶಾಸ್ತ್ರದೃಷ್ಟಿಯಿಂದ ನಮಗೆ ತಿಳಿದುಬರುವ ಆತ್ಮಸ್ವರೂಪಕ್ಕೂ ಲೌಕಿಕದೃಷ್ಟಿಯಿಂದ ತಿಳಿದು ಬರುವ ಆತ್ಮಸ್ವರೂಪಕ್ಕೂ ಇರುವ ತಾರತಮ್ಯವನ್ನು ಹಿಂದೆ ತಿಳಿಸಿರುತ್ತೇನೆ. ಈಗ ಆ ಸ್ವರೂಪವನ್ನು ಇನ್ನೂ ಸ್ವಲ್ಪ ವಿವೇಚನೆ ಮಾಡಿ ನೋಡುವ ಕ್ರಮವನ್ನು ತಿಳಿಸುವದಕ್ಕೆ ಪ್ರಯತ್ನಿಸುವೆನು.

ಲೌಕಿಕದೃಷ್ಟಿಯ ಆತ್ಮನೂ ನಮ್ಮ ಸ್ವರೂಪವೆಂದೇ ನಮಗೆ ಭಾಸವಾಗುತ್ತಿರುತ್ತದೆ. ನಮ್ಮ ಶರೀರ, ಇಂದ್ರಿಯಗಳು, ಪ್ರಾಣ, ಮನಸ್ಸು – ಬುದ್ಧಿ, ಇವುಗಳಲ್ಲಿ ಪ್ರತಿಯೊಂದರಲ್ಲಿಯೂ 'ನಾನು' ಎಂಬ ಬುದ್ಧಿಯು ಒಂದೊಂದು ಸ್ಥಿತಿಯಲ್ಲಿ ಆಗಿರುತ್ತದೆ. ಆದರೆ ಶರೀರವು ನಾನಲ್ಲ, ಇಂದ್ರಿಯಗಳು ನಾನಲ್ಲ, ಪ್ರಾಣವು ನಾನಲ್ಲ, ಮನಸ್ಸು ನಾನಲ್ಲ, ಬುದ್ಧಿಯೂ ನಾನಲ್ಲ – ಎಂದು ವಿಂಗಡಿಸಿಕೊಂಡ ಮೇಲೆಯೂ ಇವು ನನ್ನವು. ಇವು ನನಗೆ ಸೇರಿದವು – ಎಂಬ ಬುದ್ಧಿಯು ಉಳಿದುಕೊಂಡಿರುತ್ತದೆ. ನಾನು ಶರೀರವಲ್ಲ, ನನಗೆ ಶರೀರವಿದೆ, ನಾನು ಇಂದ್ರಿಯವಲ್ಲ, ಇಂದ್ರಿಯಗಳು ನನಗೆ ಇವೆ. ಹೀಗೆಯೇ ಪ್ರಾಣಮನೋಬುದ್ಧಿಗಳು ನಾನಲ್ಲ, ಅವು ನನಗೆ ಸೇರಿರುತ್ತವೆ

– ಎಂಬ ಬುದ್ಧಿಯಿರುವ ವಿವೇಕಿಗೆ ಶಾಸ್ತ್ರವು "ನಿನ್ನ ಶರೀರಾದಿಗಳ ಸದುಪಯೋಗವನ್ನು ಮಾಡಿಕೊಂಡು ಧರ್ಮವನ್ನು ಮಾಡು; ಲೋಕಾಂತರದಲ್ಲಿ ಕಾಲಾಂತರದಲ್ಲಿ ನಿನಗೆ ಒಳ್ಳೆಯ ಫಲವು ದೊರಕುವದು" ಎಂದು ಉಪದೇಶಿಸುತ್ತದೆ. ವೇದದ ಕರ್ಮಕಾಂಡ ದಲ್ಲಿ ಕಾಣುವ ವಿಧಿನಿಷೇಧಗಳೆಲ್ಲ ಈ ಗುಂಪಿಗೆ ಸೇರತಕ್ಕವುಗಳಾಗಿರುತ್ತವೆ.

ಆದರೆ ಶಾಸ್ತ್ರವು ಈ ಸ್ಥಿತಿಯಲ್ಲಿ ಆತ್ಮನ ಪರಮಾತ್ಮನ ಸ್ವರೂಪವನ್ನು ತಿಳಿಸುವದಕ್ಕೆ ಹೊರಟಿರುವದಿಲ್ಲ; ಜೀವನಿಗೆ ಪರಲೋಕದಲ್ಲಿ ಆಗಬೇಕಾದ ಸದ್ಗತಿಗೆ ಉಪಾಯವನ್ನು ಹೇಳುವದಕ್ಕೆಮಾತ್ರ ಹೊರಟಿರುತ್ತದೆ. ಜೀವನು ಜ್ಞಾತೃ, ಕರ್ತೃ, ಭೋಕ್ತೃ – ಎಂದು ಎಲ್ಲರೂ ತಿಳಿದುಕೊಂಡಿರುವದನ್ನು ಹಾಗೆಯೇ ಇಟ್ಟುಕೊಂಡೇ ಇಷ್ಟಪ್ರಾಪ್ತಿಗೂ ಅನಿಷ್ಟ ನಿವೃತ್ತಿಗೂ ಉಪಾಯವನ್ನು ತಿಳಿಸುವದೇ ವೇದದ ಕರ್ಮಕಾಂಡದ ಉದ್ದೇಶವು. ಆದರೆ ಯಾರಿಗೆ ಈ ಕರ್ಮಗಳೆಂಬ ಸಾಧನಗಳಿಂದ ಇಷ್ಟಪ್ರಾಪ್ತಿಯನ್ನೂ ಅನಿಷ್ಟನಿವೃತ್ತಿಯನ್ನೂ ಸಾಧಿಸಿಕೊಳ್ಳುವ ಹಂಬಲಿಕೆಯಿರುವದಿಲ್ಲವೋ, ಯಾರು ಅನಿತ್ಯವಾದ ಈ ಕರ್ಮಫಲ ಗಳಿಗೆ ಬೇಸತ್ತಿರುವರೋ, ಯಾರು ನಿತ್ಯವಾಗಿರುವ ಪರಮಪುರುಷಾರ್ಥವೇ ತಮಗೆ ಬೇಕೆಂದು ಹಾತುವರಿಯುತ್ತಿರುವರೋ, ಅಂಥವರಿಗಾಗಿ ಶಾಸ್ತ್ರವು ತನ್ನ ಹೃದಯ ದಲ್ಲಿರುವ ಆತ್ಮತತ್ತ್ವವನ್ನೂ ಬಿಚ್ಚಿತೋರಿಸುವದು. ಈ ಶಾಸ್ತ್ರದೃಷ್ಟಿಯ ಆತ್ಮನೇ ನಮ್ಮ ಪರಮಾರ್ಥವಾದ ಸ್ವರೂಪವು.

ನಮ್ಮ ಹುಸಿ ಆತ್ಮನಾದ ನಾನೂ ನಿಜವಾದ ಆತ್ಮನಾದ ನಾನೂ ನಮ್ಮ ಈ ಶರೀರದೊಳಗೇ ಅನುಭವಕ್ಕೆ ಬರುತ್ತವೆ. ಲೌಕಿಕದೃಷ್ಟಿಯಿಂದ ನೋಡುವಾಗ ಹುಸಿ ಆತ್ಮನೇ ನಮ್ಮ ನಿಜವಾದ ಆತ್ಮನೆಂಬ ತಿಳಿವಳಿಕೆ ನಮಗೆ ಗಟ್ಟಿಯಾಗಿರುತ್ತದೆ. ಆ ಆತ್ಮ ನಿಗಿಂತ ವ್ಯತಿರಿಕ್ತವಾಗಿ ಇದೇ ಶರೀರದಲ್ಲಿ ಮತ್ತೊಬ್ಬ ಆತ್ಮನು ಇದಾನೆಂಬುದರ ಕನಸೂ ನಮಗೆ ಆಗಿರುವದಿಲ್ಲ, ಆದರೆ ಯಾವಾಗ ಶ್ರುತಿಯಿಂದಲೂ ಆಚಾರ್ಯರಿಂದಲೂ ನಮಗೆ ಉಪದೇಶವಾಗಿ, ಶಾಸ್ತ್ರದೃಷ್ಟಿಯ ಆತ್ಮನ ಸ್ವರೂಪದ ಅರಿವು ನಮ್ಮ ಮನದಲ್ಲಿ ಹೊಳೆಯುವದೋ ಆಗ ಈ ಲೌಕಿಕ ಆತ್ಮನು ನಿಜವಾದ ಆತ್ಮನಲ್ಲ, ಹುಸಿ ತೋರಿಕೆಯು ಮಾತ್ರ ಎಂಬ ಅರಿವೂ ಆಗಿಬಿಡುತ್ತದೆ. ಈ ಅಭಿಪ್ರಾಯವನ್ನು ಮುಂಡಕೋಪ ನಿಷತ್ತಿನಲ್ಲಿ ಒಂದು ಸುಂದರವಾದ ರೂಪಕದಿಂದ ಹೀಗೆಂದು ವರ್ಣಿಸಿರುತ್ತದೆ :

**ಜೊತೆಯಲ್ಲಿಯೇ ಇರುವ ಎರಡು ಹಕ್ಕಿಗಳು, ಸಖರಾಗಿ ಒಂದೇ ಮರವನ್ನು ಆಶ್ರಯಿಸಿರುತ್ತವೆ; ಅವೆರಡರಲ್ಲಿ ಒಂದು ಹಣ್ಣನ್ನು ಸವಿಯುತ್ತಿರುತ್ತದೆ; ಇನ್ನೊಂದು ತಿನ್ನದೆ ಸುಮ್ಮನೆ ನೋಡುತ್ತಿರುತ್ತದೆ. ಅದೇ ವೃಕ್ಷದಲ್ಲಿರುವ ಪುರುಷನು ಮುಳುಗಿ**

**ಮೋಹದಿಂದ ಶೋಕಿಸುತ್ತಿರುವನು; ಆದರೆ ಯಾವಾಗ ಸೇವಿಸಿದ ಮತ್ತೊಬ್ಬನಾದ ಈಶನನ್ನು ಕಂಡುಕೊಳ್ಳುವನೋ, ಅವನ ಈ ಮಹಿಮೆಯನ್ನು ಕಂಡುಕೊಳ್ಳುವನೋ, ಆಗ ವೀತಶೋಕನಾಗುವನು — ಮುಂ. 3.1.1.2.**

ಈ ನಮ್ಮ ಶರೀರವೇ ಒಂದು ವೃಕ್ಷವು, ಇದರಲ್ಲಿ ನಾವುಗಳು ಮಾಡುತ್ತಿರುವ ಧರ್ಮಾಧರ್ಮಗಳ ಫಲಗಳು ಆಶ್ರಯಿಸಿಕೊಂಡಿರುವವು. ಧರ್ಮದಿಂದ ಪುಣ್ಯವನ್ನೂ ಅಧರ್ಮದಿಂದ ಪಾಪವನ್ನೂ ಸಂಪಾದಿಸಿಕೊಳ್ಳುತ್ತಾ ಹೊರಗಿನ ವಿಷಯಗಳನ್ನು ಇಷ್ಟವೆಂದೂ ಅನಿಷ್ಟವೆಂದೂ ವಿಂಗಡಿಸಿಕೊಂಡು ಅವುಗಳಿಂದಾಗುವ ಸುಖದುಃಖ ಗಳನ್ನು ಈ ಶರೀರದಲ್ಲಿ ಅನುಭವಿಸುತ್ತಿರುವದೇ ನಮ್ಮಗಳ ವ್ಯವಹಾರವು. ಹೀಗೆ ಸುಖ ದುಃಖಗಳ ಸವಿಯನ್ನು ಕಾಣುತ್ತಿರುವ ನಾನು ಎಂಬುದೇ ಲೌಕಿಕದೃಷ್ಟಿಗೆ ಗೋಚರ ವಾಗುವ ಆತ್ಮಸ್ವರೂಪವು. ಇದನ್ನೇ ಅಕೃತ್ಸ್ನರೂಪವು ಎಂದು ನಾನು ಹಿಂದೊಂದು ಲೇಖನದಲ್ಲಿ ತಿಳಿಸಿರುವದು. ಆದರೆ ಇದೇ ಶರೀರದಲ್ಲಿ ಶರೀರ, ಇಂದ್ರಿಯಗಳು, ಪ್ರಾಣ, ಮನಸ್ಸು ಬುದ್ಧಿ – ಇವೆಲ್ಲವನ್ನೂ ತನ್ನ ಚೈತನ್ಯದಿಂದ ಕಾಣುತ್ತಾ, ಯಾವ ಸುಖದುಃಖಗಳ ಏರುಪೇರುಗಳೂ ಇಲ್ಲದ, ಆತ್ಮಸ್ವರೂಪವೊಂದುಂಟು. ಅದನ್ನೇ ಶಾಸ್ತ್ರವು ನಮಗೆ ತಿಳಿಸಿಕೊಡುತ್ತಿರುವದೆಂದು ನಾವು ಹೇಳಿರುವದು.

ಲೌಕಿಕದೃಷ್ಟಿಯಿಂದ ತಿಳಿಯಬರುವ ನಾನು ಎಂಬ ಆತ್ಮನು ಶರೀರೇಂದ್ರಿ ಯಾದಿಗಳಲ್ಲಿ ನಾನು ನನ್ನದು – ಎಂಬ ಮೋಹದಿಂದ ಕೂಡಿರುವನು. ಅವುಗಳಿಂದ ವಿಷಯಗಳ ಅನುಭವಗಳನ್ನು ಆಗಾಗ್ಗೆ ಹೊಂದುತ್ತಾ, ಈಗ ಹೀಗಾದೆನು. ಆಗ ಹಾಗಿದ್ದೆನು ಮುಂದೆ ಹೀಗಾಗುವೆನು – ಎಂಬ ವಿಶೇಷರೂಪಗಳನ್ನು ತನ್ನ ಸ್ವರೂಪದಲ್ಲಿ ಹುಟ್ಟು ಹಾಕಿಕೊಂಡು ಶೋಕಿಸುತ್ತಿರುವನು. ಅಂತಃಕರಣದಲ್ಲಿ ಒಂದೊಂದು ಬಾಹ್ಯಾ ನುಭವದಿಂದಲೂ ಒಂದೊಂದು ವಿಶೇಷರೂಪವು ಆಗುತ್ತಿರುವದಷ್ಟೆ; ಆಯಾ ರೂಪವು ತನ್ನದೇ ಎಂಬ ಮೋಹವೂ ಅದರಿಂದಾದ ಮೋಹವೂ ಈ ಲೌಕಿಕಾತ್ಮನಿಗೆ ಬಿಟ್ಟಿದ್ದಲ್ಲ.

ಆದರೆ ಈ ಲೌಕಿಕಾತ್ಮಸಮೇತರಾಗಿ ಅವನ ಕರಣಗಳನ್ನೂ ಆ ಕರಣಗಳಿಗೆ ಗೋಚರನಾಗುವ ಸುಖದುಃಖಕಾರಕವಾದ ವಿಷಯಗಳನ್ನೂ ತನ್ನ ಸ್ವರೂಪಚೈತನ್ಯದಿಂದ ಬೆಳಗುತ್ತಿರುವ ಶಾಸ್ತ್ರದೃಷ್ಟಿಯ ಆತ್ಮನಿದಾನಲ್ಲ, ಅವನುಹೀಗೆ ಬದಲಾಯಿಸುತ್ತಿರು ವದಿಲ್ಲ, ಅವನಿಗೆ ಅಂತಃಕರಣವೂ ವಿಷಯವಾಗಿರುವದರಿಂದ ಅವನಿಗೆ ಅನಾತ್ಮವೆಲ್ಲ ವನ್ನೂ ಬೆಳಗಿ ತಿಳಿಯುವದಕ್ಕೆ ಯಾವದೊಂದು ಕರಣದ ಹಂಗೂ ಇರುವದಿಲ್ಲ, ಆದ್ದರಿಂದ ಅಂತಃಕರಣಾದಿಗಳ ವಿಶೇಷಗಳಿಂದ ಯಾವ ವಿಶೇಷವನ್ನೂ ಹೊಂದುತ್ತಿರು

ವದಿಲ್ಲ. ಹೀಗೆ ಕರಣದ ಹಂಗಿಲ್ಲದೆ ನೇರಾಗಿ ಅವನು ಅನಾತ್ಮವೆಲ್ಲವನ್ನೂ ಬೆಳಗಿ ನೋಡುತ್ತಿರುವದರಿಂದ "ಸಾಕ್ಷಿ" ಎಂದು ಹೆಸರು.

ನಮ್ಮಲ್ಲಿ ಪ್ರತಿಯೊಬ್ಬನೂ ಹೀಗೆ ತನ್ನ ತನ್ನಲ್ಲಿಯೇ ದೇಹಾದಿಗಳಿಗಿಂತಲೂ ತನ್ನ ನಾನು ಎಂಬ ಲೌಕಿಕದೃಷ್ಟಿಯ ಆತ್ಮನಿಗಿಂತಲೂ ವ್ಯತಿರಿಕ್ತವಾಗಿ ಯಾವ ಬದಲಾವಣೆ ಯಾಗಲಿ ಚಲನೆಯಾಗಲಿ ಇಲ್ಲದೆ ಇರುವ ಕೂಟಸ್ಥನಾದ ಸಾಕ್ಷಿಸ್ವರೂಪನಾದ ಪರಮಾರ್ಥಾತ್ಮನನ್ನು ಕಂಡುಕೊಳ್ಳಬೇಕಾಗಿರುವದು. ಇದಕ್ಕೆ ಪರಮಕಾರುಣಿಕನಾದ ಸದ್ಗುರುವು ಹೇಳಿಕೊಡುವ ಅಧ್ಯಾತ್ಮಯೋಗವನ್ನು ಅಹಿಂಸಾಸತ್ಯಬ್ರಹ್ಮಚರ್ಯಾದಿ ಸಾಧನಗಳಿಂದೊಡಗೂಡಿ ಅಭ್ಯಾಸಮಾಡಬೇಕಾದದ್ದು ಅವಶ್ಯವಾಗುತ್ತದೆ. ಈ ಜನ್ಮ ದಲ್ಲಾಗಲಿ ಹಿಂದಿನ ಜನ್ಮದಲ್ಲಾಗಲಿ ಅನುಷ್ಠಾನಮಾಡಿದ ಸಾಧನದ ಬಲದಿಂದ ಯಾವಾಗ ಈ ಪರಮಾರ್ಥ ಆತ್ಮನನ್ನು ಕಂಡುಕೊಳ್ಳುವೆವೋ ಆಗ ನಮಗೆ ಆಗುವ ಜ್ಞಾನದಲ್ಲಿ ಎರಡು ಮುಖ್ಯವಾದ ಅಂಶಗಳಿರುತ್ತವೆ. ಮೊದಲನೆಯದಾಗಿ ಈ ಅಧ್ಯಾತ್ಮ ಸಾಧನದಿಂದ ನಾನು ಕಂಡುಕೊಂಡಿರುವ ಆತ್ಮನು ನನಗೊಬ್ಬನಿಗೇ ಆತ್ಮನಲ್ಲ; ಎಲ್ಲಾ ಪ್ರಾಣಿಗಳಿಗೂ ಇಡಿಯ ಜಗತ್ತಿಗೂ ಇವನೇ ಆತ್ಮನು ಎಂಬ ಅರಿವು ಆಗುವದು. ಎರಡನೆಯದಾಗಿ, ಈ ಆತ್ಮನೇ ನಿತ್ಯಶುದ್ಧಬುದ್ಧಮುಕ್ತಸ್ವಭಾವನೂ ಸರ್ವಜ್ಞನೂ ಸರ್ವಶಕ್ತನೂ ಆದ ಪರಮೇಶ್ವರನು ಎಂಬ ಅರಿವೂ ಆಗುವದು.

ಈ ಎರಡು ಅನುಭವಗಳನ್ನೂ ಸ್ವಲ್ಪ ವಿಮರ್ಶಿಸಿ ನೋಡೋಣ. ಸಾಕ್ಷಿಯಾಗಿ ರುವ ಆತ್ಮನು ನಮ್ಮನಮ್ಮ ಶರೀರದೊಳಗೇ ಇರುವಂತೆ ನಮಗೆ ತಿಳಿದು ಬರುವದು ನಿಜ. ಆದರೆ ನಮ್ಮ ಶರೀರ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ - ಮುಂತಾದ ಯಾವದೊಂದರ ಹಂಗೂ ಅವನಿಗೆ ಇರುವದಿಲ್ಲ. ಈ ಶರೀರಾದಿಗಳು ಆ ಸಾಕ್ಷಿ ರೂಪನಾದ ಆತ್ಮನಿಗೆ ಯಾವ ಎಲ್ಲೆಕಟ್ಟನ್ನೂ ಮಾಡಿರುವದಿಲ್ಲ. ಈ ಶರೀರಾದಿಗಳು ತೀರ ಕಾಣದಂತೆ ಆಗಿ ಇವುಗಳಂತೆ ತತ್ಕಾಲಕ್ಕೆ ತೋರುವ ಹೊಸ ಶರೀರಾದಿಗಳು ಕಾಣಿಸಿ ಕೊಳ್ಳುವ ಕನಸೆಂಬ ಅವಸ್ಥೆಯೂ ನಮಗೆ ಆದಂತೆ ಅನುಭವಕ್ಕೆ ಬರುವದುಂಟು. ಅಂಥ ಕನಸುಗಳು ಲೆಕ್ಕವಿಲ್ಲದಷ್ಟು ನಮಗೆ ಬರುತ್ತಲೇ ಇದ್ದರೂ ಅವುಗಳಲ್ಲಿರುವ ಆ ತೋರಿಕೆಯ ಶರೀರಾದಿಗಳನ್ನೂ ಬೆಳಗುತ್ತಾ ಇದೇ ಸಾಕ್ಷಿಯು ಸ್ವಯಂಪ್ರಕಾಶನಾಗಿ ತನ್ನ ಚೈತನ್ಯಪ್ರಕಾಶದಿಂದಲೇ ಬೆಳಗುತ್ತಿರುವದು. ಎಚ್ಚರವು ಮಾಯವಾದರೂ ಕನಸುಗಳು ಬಂದುಹೋಗುತ್ತಿದ್ದರೂ ತನ್ನ ಸ್ವಂತ ಮಹಿಮೆಯಿಂದಲೇ ಬೆಳಗುತ್ತಿರುವ ಈ ಸಾಕ್ಷಿಗೆ ಎಚ್ಚರದ ಅಥವಾ ಕನಸಿನ ಯಾವ ಕಟ್ಟೂ ಇರುವದಿಲ್ಲವೆಂಬುದನ್ನು ಹೇಳಬೇಕೆ?

ಹೀಗೆ ನಮ್ಮನಮ್ಮೊಳಗೇ ಇರುವಂತೆ ತೋರುವ ಈ ಸಾಕ್ಷಿಯು 'ನನ್ನ ಸಾಕ್ಷಿಯು' ಎಂದು ನಾವು ಅಭಿಮಾನಪಟ್ಟುಕೊಳ್ಳಬಹುದು. ಆದರೆ 'ನನ್ನ ಸಾಕ್ಷಿಯು ಮತ್ತೊಬ್ಬನಿಗೆ ಸೇರಿಲ್ಲ' ಎಂದು ನಾವು ಈ ಸಾಕ್ಷಿಯನ್ನು ಬಚ್ಚಿಟ್ಟುಕೊಳ್ಳುವದಕ್ಕೆ ಅಥವಾ ಅವನಿಗೆ ಯಾವದಾದರೊಂದು ಬೇಲಿಯನ್ನು ಸುತ್ತುಗಟ್ಟಿ ಬೇರೆಯಾಗಿಟ್ಟುಕೊಳ್ಳುವದಕ್ಕೆ ನಮಗೆ ಯಾವ ಹಕ್ಕೂ ಇರುವದಿಲ್ಲ. 'ಸೂರ್ಯನು ನಮ್ಮೂರಿನ ಹೆಬ್ಬಾಗಿಲಿನ ಕಡೆಗೆ ಇದಾನೆ' ಎಂದು ನಮ್ಮೂರಿನ ಹುಡುಗರು ಹೇಳಿಕೊಳ್ಳುತ್ತಿರಬಹುದು. ಆದರೆ ಆ ಸೂರ್ಯನು ಆ ನಮ್ಮೂರಿನ ಹೆಬ್ಬಾಗಿಲಿಗೆ ಕಟ್ಟುಬಿದ್ದಿರುತ್ತಾನೇನು? ಒಂದೊಂದು ಊರಿಗೆ ಒಬ್ಬೊಬ್ಬ ಬೇರೆಯ ಸೂರ್ಯನು ಇರುತ್ತಾನೇನು? ಎಂದಿಗೂ ಇಲ್ಲ. ಹೀಗೆಯೇ ಪ್ರತಿಯೊಬ್ಬ ನನ್ನೂ ತನ್ನತನ್ನಲ್ಲಿ ಕಾಣುವನೆಂದು ಅಭಿಮಾನಪಡಬಹುದಾದ ಸಾಕ್ಷಿ ಚೈತನ್ಯವು ನಮ್ಮ ಗಳೆಲ್ಲರಿಗೂ – ಸಕಲ ಪ್ರಾಣಿಗಳಿಗೂ – ಸಾಕ್ಷಿಚೈತನ್ಯವಾಗಿರುತ್ತದೆ. ಅದು ಯಾವ ಜೀವನಿಗೂ ಕಟ್ಟುಬಿದ್ದಿರುವದಿಲ್ಲ. ಇದೇ ಮೊದಲನೆಯ ಅನುಭವವೆಂದು ನಾವು ಹೇಳಿರುವದು.

ಇನ್ನು ಎರಡನೆಯ ಅನುಭವದ ಕಡೆಗೆ ಚಿತ್ತವನ್ನು ಹೊರಳಿಸೋಣ. ನಮ್ಮಲ್ಲಿ ಆಗುವ ಎಲ್ಲಾ ಮಾರ್ಪಾಡುಗಳನ್ನೂ ನೋಡುತ್ತಾ, ನಮ್ಮ ಎಲ್ಲಾ ಅವಸ್ಥೆಗಳಿಗೂ ಸಾಕ್ಷಿಯಾಗಿರುವ ಈ ಚೈತನ್ಯವು ನಮ್ಮ ಶರೀರವೇ ಮುಂತಾದ ಯಾವದೊಂದರ ಪುಣ್ಯ ಪಾಪಗಳ ಕಲ್ಮಷವೂ ಇಲ್ಲದ್ದೆಂಬುದು ಸ್ಪಷ್ಟವೇ ಆಗಿದೆ. ಇದೇ ನಮ್ಮ ಶರೀರಾದಿಗಳನ್ನೂ ಹೊರಗಿನ ಎಲ್ಲಾ ಪ್ರಪಂಚವನ್ನೂ ಬೆಳಗುತ್ತಿರುವದರಿಂದ ಎಚ್ಚರದಲ್ಲಿ ನಮಗೆ ಕಾಣುವ, ಅಥವಾ ಎಚ್ಚರದಲ್ಲಿ ನಾವು ಅನುಮಾನಾದಿಗಳಿಂದ ಕಲ್ಪಿಸುವ ಪ್ರಪಂಚದಲ್ಲಿ ಇರುವಂತೆ ನಮಗೆ ಭಾಸವಾಗುವ, ಎಲ್ಲಾ ಪ್ರಾಣಿಗಳನ್ನೂ ಬೆಳಗುತ್ತಿರುತ್ತದೆ, ಹೀಗೆಯೇ ಒಂದೊಂದು ಕನಸಿನಲ್ಲಿ ತೋರುವ ಇಡಿಯ ಪ್ರಪಂಚವನ್ನೂ ಅದರಲ್ಲಿ ನಮ್ಮ ಕಲ್ಪನೆಗೆ ಗೋಚರವಾಗುವ, ಪ್ರಾಣಿಗಳನ್ನೂ ಇದೇ ಬೆಳಗುತ್ತಿರುತ್ತದೆ. ಇಷ್ಟೇ ಅಲ್ಲ, ನಮಗೆ ಯಾವ ಪ್ರಪಂಚದ ತೋರಿಕೆಯೂ ಹೊಳೆಯುವ ಗಾಢನಿದ್ರೆಯೇ ಮುಂತಾದ ಅವಸ್ಥೆಗಳಲ್ಲಿಯೂ ಆ ಅನಾತ್ಮದ ಅಭಾವವನ್ನು ತಿಳಿಸಿ ಕೊಡುವದಕ್ಕೂ ಸಾಧನವಾಗಿರು ವದು ಇದೇ ಚೈತನ್ಯವಾಗಿದೆ. ಆದ್ದರಿಂದ ಈ ಸಾಕ್ಷಿಯು ನಿತ್ಯಶುದ್ಧವು ಮಾತ್ರವಲ್ಲದೆ ನಿತ್ಯಬುದ್ಧವೂ ಆಗಿರುತ್ತದೆಯೆಂದು ಸಿದ್ಧವಾಗುತ್ತದೆ. ಇದರಂತೆ ಹೊರಗಿನ ಯಾವ ಅನಾತ್ಮವೂ ಇದಕ್ಕೆ ಯಾವ ಬಂಧವನ್ನೂ ಎಂದಿಗೂ ಮಾಡುವಂತಿಲ್ಲವಾದ್ದರಿಂದ ಅದು ನಿತ್ಯಮುಕ್ತವೂ ಆಗಿರುತ್ತದೆ. ಇದು ಎರಡನೆಯ ಅನುಭವದ ಸ್ವರೂಪವು.

ಈ ಸಾಕ್ಷಿಚೈತನ್ಯವು ಒಂದೇ ಇರಬಹುದಲ್ಲದೆ ಮತ್ತೊಂದು ಸಾಕ್ಷಿಯೂ ಇರುವದೆಂದು ಕಲ್ಪಿಸುವದಕ್ಕೆ ಬರುವದಿಲ್ಲ. ಏಕೆಂದರೆ ಎರಡು ಸಾಕ್ಷಿಗಳಿದ್ದರೆ ಒಂದಕ್ಕೊಂದು ಸಾಕ್ಷಿಯೂ ಸಾಕ್ಷ್ಯವೂ ಆಗುವವು. ಆದರೆ ಸಾಕ್ಷಿಯು ಸಾಕ್ಷ್ಯವೆಂಬುದನ್ನು ಯಾರೂ ಒಪ್ಪುವ ಹಾಗಿಲ್ಲ. ಇನ್ನು ಸಾಕ್ಷ್ಯವೆಂದು ತೋರುತ್ತಿರುವ ಅವಸ್ಥೆಗಳಲ್ಲಿ ಯಾವದಾದರೊಂದನ್ನಾದರೂ ಈ ಸಾಕ್ಷಿಗೆ ದ್ವಿತೀಯವೆಂದು ಭಾವಿಸಬಹುದಲ್ಲ! ಎಂದರೆ ಅದೂ ಆಗುವದಿಲ್ಲ. ಏಕೆಂದರೆ ಎರಡೆಂಬುದು ಸಂಖ್ಯೆಯು. ಆದರೆ ಈ ಸಂಖ್ಯೆಯು ಕಾಲದಲ್ಲಿ ಆಗುವ ಘಟನೆಗಳಿಗೆ ಅಥವಾ ಒಂದೇ ದೇಶದಲ್ಲಿರುವ ವಸ್ತುಗಳಿಗೆ ಹೊಂದುವ ಗುಣವು. ಸಾಕ್ಷಿಗೆ ಕಾಲವೂ ದೇಶವೂ ವಿಷಯವೇ ಆಗಿ ಸಾಕ್ಷ್ಯಗಳಾಗಿರುವದರಿಂದ ಸಾಕ್ಷಿಯೂ ಸಾಕ್ಷ್ಯವು ಒಂದು ಕಾಲದಲ್ಲಿ ಅಥವಾ ಒಂದು ದೇಶದಲ್ಲಿರುವದೇ ಇಲ್ಲ. ಆದ್ದರಿಂದ ಸಾಕ್ಷಿಯು ಅದ್ವಿತೀಯವು.

ಹೀಗೆ ಶಾಸ್ತ್ರದೃಷ್ಟಿಯಿಂದ ನಮಗೆ ತಿಳಿದು ಅನುಭವಕ್ಕೆ ಬರುವ ಈ ಪರಮಾರ್ಥವು ನಾವು ಆತ್ಮನೆಂದು ಹೇಳಿಕೊಳ್ಳುವ ಎಲ್ಲಕ್ಕಿಂತಲೂ ಒಳಗಿನ ನಿಜವಾದ ಆತ್ಮನಾಗಿರುವದರಿಂದ ಇದನ್ನು ಪರಮಾತ್ಮ ಎನ್ನಬಹುದು. ಇದು ಎಲ್ಲಾ ಜೀವರಿಗೂ ಆತ್ಮನೆಂದು ಕಂಡುಬರುವದರಿಂದ ಇದನ್ನು ಸರ್ವಾತ್ಮ ಎನ್ನಬಹುದು. ಇದರ ಇರವೇ ಎಲ್ಲವನ್ನೂ ನಿಯಮದಲ್ಲಿಟ್ಟುಕೊಂಡು ಆಳುತ್ತಿರುವದರಿಂದ ಇದನ್ನು ಪರಮೇಶ್ವರನೆಂದೂ ಕರೆಯಬಹುದು.

ಖಖಖಖಖ

# ಬ್ರಹ್ಮಜ್ಞಾನವಿಧಿ

ಬ್ರಹ್ಮವು ಪರಮಾತ್ಮನು, ಈ ಇಡಿಯ ಜಗತ್ತಿಗೂ ನಮ್ಮೆಲ್ಲರಿಗೂ ಆತ್ಮನು; ಆ ಆತ್ಮನು ನಮ್ಮಗಳಲ್ಲಿರುವ ಸಾಕ್ಷಿಚೈತನ್ಯವು - ಎಂದು ಹಿಂದೆ ತಿಳಿಸಿರುತ್ತೇನೆ. ಈಗ ಬ್ರಹ್ಮಜ್ಞಾನವೆಂದರೇನು? ಬ್ರಹ್ಮವನ್ನು ಹೇಗೆ ಯಾವ ಉಪಾಯದಿಂದ ಅರಿತುಕೊಳ್ಳಬೇಕು?- ಎಂಬುದನ್ನು ಕುರಿತು ಕೆಲವು ಮನನೀಯ ವಿಷಯಗಳನ್ನು ಇಲ್ಲಿ ತಿಳಿಸುತ್ತೇನೆ.

ಹಿಂದಕ್ಕೆ ಯಾಜ್ಞವಲ್ಕ್ಯನೆಂಬ ಒಬ್ಬ ಋಷಿಯಿದ್ದನು. ಆತನು ವಿರಕ್ತಿಯಿಂದ ಪಾರಿವ್ರಾಜ್ಯವನ್ನು ಸ್ವೀಕರಿಸಲಿಚ್ಛಿಸಿ ತನ್ನ ಹೆಂಡತಿಯರಿಬ್ಬರಿಗೂ ತನ್ನ ಧನವನ್ನು ಪಾಲು ಮಾಡಿಕೊಟ್ಟು ಹೋಗುವದಕ್ಕೆ ಉಜ್ಜುಗಿಸಿದನು. ಅವನ ಪ್ರಿಯಭಾರ್ಯೆಯಾದ

ಮೈತ್ರೇಯಿಯು "ಈ ಧನಸಂಪತ್ತಿನಿಂದ ನನಗೆ ಅಮೃತತ್ವವು ಸಿಕ್ಕೀತೇನು?" ಎಂದು ಕೇಳಿದಳು. ಯಾಜ್ಞವಲ್ಕ್ಯನು "ಇಲ್ಲ, ಇದರಿಂದ ಇಹಭೋಗದ ಸಾಮಗ್ರಿಗಳನ್ನು ಒದಗಿಸಿಕೊಳ್ಳಬಹುದು. ಅಷ್ಟೇ; ಅಮೃತಳಾಗಬೇಕಾದರೆ ಆತ್ಮಜ್ಞಾನವನ್ನೇ ಸಂಪಾದಿಸಿ ಕೊಳ್ಳಬೇಕು. ಮನುಷ್ಯನಿಗೆ ಈ ಲೋಕದಲ್ಲಿ ಆತ್ಮನಿಗಿಂತ ಪ್ರಿಯವಾದದ್ದು ಇನ್ನೊಂದಿಲ್ಲ, ಆ ಆತ್ಮನನ್ನೇ ಕಂಡುಕೊಳ್ಳಬೇಕು; ಅದಕ್ಕಾಗಿ ಶ್ರವಣಮಾಡಬೇಕು, ಮನನಮಾಡ ಬೇಕು, ನಿದಿಧ್ಯಾಸನಮಾಡಬೇಕು" ಎಂದು ಉತ್ತರಕೊಟ್ಟನು. ಹೀಗೆಂದು ಬೃಹದಾರಣ್ಯ ಕೋಪನಿಷತ್ತಿನಲ್ಲಿರುತ್ತದೆ. ಪರಮಾತ್ಮದರ್ಶನಕ್ಕೆ ಶ್ರವಣಮನನನಿದಿಧ್ಯಾಸನಗಳೇ ಸಾಧನ ವೆಂದು ವೇದಾಂತಿಗಳು ಈ ವಾಕ್ಯದ ಆಧಾರದಿಂದ ಹೇಳುತ್ತಿರುವರು.

ಆತ್ಮದರ್ಶನವೆಂದರೇನು? ಶ್ರವಣಮನನನಿದಿಧ್ಯಾಸನಗಳೆಂದರೆ ಯಾವವು?- ಎಂಬ ವಿಷಯಕ್ಕೆ ಸಾವಿರಾರು ವರ್ಷಗಳಿಂದ ವೇದಾಂತಿಗಳಲ್ಲಿ ಚರ್ಚೆಯಾಗುತ್ತಾ ಬಂದಿದೆ. ಈ ವಿಷಯದಲ್ಲಿ ಆಚಾರ್ಯರುಗಳು ಅಭಿಪ್ರಾಯಪಟ್ಟಿರುವದನ್ನು ಮುಖ್ಯ ವಾಗಿ ಎರಡು ವರ್ಗಗಳಾಗಿ ವಿಂಗಡಿಸಬಹುದು. ಅವುಗಳಲ್ಲಿ ವಿಧಿವಾದಿಗಳ ಮತವು ಒಂದು; ವಸ್ತುಜ್ಞಾನವಾದಿಗಳ ಮತವು ಮತ್ತೊಂದು. ಈ ಎರಡು ಮತಗಳೂ ಫಲದಲ್ಲಿ ಅದ್ವೈತವನ್ನೇ ಅಂಗೀಕರಿಸಿರುವವಾದರೂ ಇವುಗಳ ಪ್ರಕ್ರಿಯೆಯಲ್ಲಿ ಬಹಳ ತಾರತಮ್ಯ ವಿರುತ್ತದೆ. ಆದ್ದರಿಂದ ಇವನ್ನು ವಿಮರ್ಶಪೂರ್ವಕವಾಗಿ ಮನದಟ್ಟುಮಾಡಿಕೊಳ್ಳುವದ ರಿಂದ ಪ್ರಯೋಜನವಿದೆ.

ಬ್ರಹ್ಮವು ಶಾಸ್ತ್ರಪ್ರಮಾಣಕವು ಎಂದರೆ ಅದನ್ನು ಪ್ರತ್ಯಕ್ಷ, ಅನುಮಾನ, ಮುಂತಾದ ಲೌಕಿಕ ಪ್ರಮಾಣಗಳಿಂದ ಅರಿತುಕೊಳ್ಳುವದಕ್ಕೆ ಆಗುವದಿಲ್ಲ- ಎಂಬುದನ್ನು ಈ ಎರಡು ಪಂಗಡದವರೂ ಒಪ್ಪುತ್ತಾರೆ. ಆದರೆ ಬ್ರಹ್ಮಪ್ರಾಪ್ತಿ ಮತ್ತು ಅದರ ಸಾಧನ - ಇವುಗಳ ಬಗ್ಗೆ ಇಬ್ಬರಿಗೂ ಇರುವ ಅಭಿಪ್ರಾಯಗಳು ಒಂದಕ್ಕೊಂದು ತೀರ ಭಿನ್ನ ವಾಗಿರುತ್ತವೆ. ಶಾಸ್ತ್ರದಲ್ಲಿ ಜ್ಞಾನವನ್ನು ವಿಧಿಸಿದೆ ಎನ್ನುವವರ ಮತವನ್ನು ಸೂತ್ರಭಾಷ್ಯ ದಲ್ಲಿಯೂ ಬೃಹದಾರಣ್ಯಕಭಾಷ್ಯದಲ್ಲಿಯೂ ಶಂಕರಾಚಾರ್ಯರವರು ಅನುವಾದ ಮಾಡಿರುತ್ತಾರೆ. ಆ ಅನುವಾದದಂತೆ ಈ ವಾದದಲ್ಲಿ ಜ್ಞಾನವೆಂದರೆ ಉಪಾಸನೆಯು; ಅಥವಾ ಧ್ಯಾನವು. ಶಾಸ್ತ್ರದ ಕರ್ಮಕಾಂಡದಲ್ಲಿ ಹೇಗೆ ಸ್ವರ್ಗಾದಿಫಲವನ್ನು ಬಯಸು ವವರಿಗೆ ಕರ್ಮವನ್ನು ವಿಧಿಸದೆಯೋ ಹಾಗೆ ಜ್ಞಾನಕಾಂಡದಲ್ಲಿ ಅಮೃತತ್ವಕಾಮರಿಗೆ ಬ್ರಹ್ಮಜ್ಞಾನವನ್ನು ವಿಧಿಸಿರುತ್ತದೆ. ಶಾಸ್ತ್ರವೆಂದರೆ ಪುರುಷಾರ್ಥವನ್ನು ಬಯಸುವ ಪುರುಷ ನನ್ನು ಯಾವದಾದರೊಂದು ವಿಷಯದಲ್ಲಿ ತೊಡಗಿಸುವದು, ಅಥವಾ ಯಾವದಾದ

ರೊಂದು ವಿಷಯದಿಂದ ಹಿಮ್ಮೆಟ್ಟಿಸುವದು – ಹೀಗಿರಬೇಕು ಎಂಬುದು ಈ ವಾದಿಗಳ ಅಭಿಪ್ರಾಯವು.

ಮೇಲೆ ಹೇಳಿರುವ "ಆತ್ಮನನ್ನು ದರ್ಶನಮಾಡಬೇಕು, ಶ್ರವಣಮಾಡಬೇಕು, ಮನನಮಾಡಬೇಕು, ನಿದಿಧ್ಯಾಸನವನ್ನು ಮಾಡಬೇಕು" ಎಂಬ ಶ್ರುತಿವಾಕ್ಯದಲ್ಲಿ ಆತ್ಮನ ದರ್ಶನ, ಶ್ರವಣ, ಮನನಾದಿಗಳನ್ನು ವಿಧಿಸಿದೆಯಷ್ಟೆ. ಪರಮಪುರುಷಾರ್ಥವು ಬೇಕೆಂದು ಪುರುಷನನ್ನು ಶಾಸ್ತ್ರವು ಬ್ರಹ್ಮಜ್ಞಾನದಲ್ಲಿ – ಎಂದರೆ ಬ್ರಹ್ಮದ ಉಪಾಸನೆಯಲ್ಲಿ – ತೊಡಗಿಸುತ್ತದೆ. ಆದರೆ ಆತ್ಮನೆಂದರೆ ಯಾರು? ಯಾವ ಸಾಧನದಿಂದ ಉಪಾಸನೆ ಮಾಡಬೇಕು? ಹೇಗೆ ಉಪಾಸನೆಮಾಡಬೇಕು – ಎಂಬುದು ತಿಳಿದಲ್ಲದೆ ಉಪಾಸನೆ ಮಾಡುವದು ಆಗಲಾರದು. ಆದ್ದರಿಂದ ಉಪಾಸ್ಯಸ್ವರೂಪವನ್ನು ತಿಳಿಸುವದಕ್ಕೆ **'ನೇತಿ ನೇತಿ', 'ಅಸ್ಥೂಲಮ್', 'ಏಕಮೇವಾದ್ವಿತೀಯಮ್', 'ಅಶನಾಯಾದ್ಯತೀತಃ', 'ನಿತ್ಯಃ', 'ಸರ್ವಜ್ಞಃ', 'ಸರ್ವಗತಃ'** – ಮುಂತಾದ ವಿಶೇಷಣಗಳನ್ನು ಶಾಸ್ತ್ರದಲ್ಲಿ ಉಪದೇಶಿಸಿರುತ್ತದೆ. ಅಡಿಗೆಯ ಸಾಮಾನುಗಳ ವರ್ಣನೆಯಿಂದಲೇ ಹಸಿವು ಅಡಗುವದಿಲ್ಲ; ಅವುಗಳನ್ನು ಅಡುಗೆ ಮಾಡಿ ಭೋಜನಮಾಡಿದರೇ ತೃಪ್ತಿಯಾಗುತ್ತದೆ. ಇದರಂತೆ, ಬ್ರಹ್ಮಸ್ವರೂಪದ ವರ್ಣನೆಯನ್ನು ಕೇಳಿದ ಮಾತ್ರದಿಂದ ಅಜ್ಞಾನವು ಅಡಗುವದಿಲ್ಲ, ಬ್ರಹ್ಮಪ್ರಾಪ್ತಿಯೂ ಆಗುವದಿಲ್ಲ; ಶಾಸ್ತ್ರದಲ್ಲಿ ವಿಧಿಸಿರುವ ಸಾಧನಗಳನ್ನು ಅಳವಡಿಸಿಕೊಂಡು ಶಾಸ್ತ್ರದಲ್ಲಿ ಹೇಳಿರುವ ಪ್ರಕಾರದಿಂದ ಸಂತತವಾಗಿ ಉಪಾಸನೆ ಮಾಡಬೇಕು. ಹೀಗೆ ಉಪಾಸನೆಮಾಡುತ್ತಿದ್ದರೆ ಅವಿದ್ಯೆಯು ನಾಶವಾಗಿ ಬ್ರಹ್ಮದ ಸಾಕ್ಷಾತ್ಕಾರವಾಗುವದು; ಶರೀರವು ಬಿದ್ದ ಬಳಿಕ ಶಾಸ್ತ್ರದಲ್ಲಿ ಹೇಳಿರುವ ಸ್ವರ್ಗಾದಿಗಳಂತೆ ಮೋಕ್ಷವೆಂಬ ಬ್ರಹ್ಮಪ್ರಾಪ್ತಿರೂಪವಾದ ಫಲವೂ ದೊರಕುತ್ತದೆ ಎಂದು ಬ್ರಹ್ಮಜ್ಞಾನವಿಧಿವಾದಿಗಳ ಮತವು.

ಇನ್ನೂ ಕೆಲವರು ವಾದಿಗಳು ಅಭಿಪ್ರಾಯಪಟ್ಟಿರುವದೇನೆಂದರೆ ಶಾಸ್ತ್ರವು ವಾಕ್ಯರೂಪವಾಗಿರುವದರಿಂದ ಪದಾರ್ಥಗಳ ಸಂಬಂಧವನ್ನು ಮಾತ್ರ ಬೋಧಿಸಬಲ್ಲದು. 'ಹಾಲಿನಿಂದ ಪಾಯಸವನ್ನು ಮಾಡಬೇಕು?' ಮುಂತಾದ ವಾಕ್ಯಗಳಲ್ಲಿ ಕ್ರಿಯಾಕಾರಕಗಳ ಸಂಬಂಧವು ಹೇಗೆ ತಿಳಿಯಬರುವದೋ ಹಾಗೆಯೇ 'ಆತ್ಮನನ್ನು ದರ್ಶನ ಮಾಡಬೇಕು' ಮುಂತಾದ ವಾಕ್ಯಗಳೂ ಹಲವು ಪದಾರ್ಥಗಳ ಸಂಬಂಧವನ್ನು ಹೇಳುತ್ತವೆ. ಆದರೆ ಬ್ರಹ್ಮವು ಅದ್ವಿತೀಯವಾಗಿ ಯಾವ ವಿಭಾಗಗಳೂ ಇಲ್ಲದ್ದಾಗಿರುವದರಿಂದ ವಾಕ್ಯದಿಂದಾಗುವ ಜ್ಞಾನವು ನೇರಾಗಿ ಬ್ರಹ್ಮವನ್ನು ತಿಳಿಸಲಾರದು. ಆದರೆ ವಾಕ್ಯಜ್ಞಾನವನ್ನು

ಬಿಡದೆ ಉಪಾಸನೆಮಾಡುತ್ತಿದ್ದರೆ ಉಂಟಾಗುವ ಅಖಂಡಜ್ಞಾನವೇ ಅಜ್ಞಾನವನ್ನು ತೊಲಗಿಸಿ ಬ್ರಹ್ಮವನ್ನು ತಿಳಿಸುತ್ತದೆ. ಅದರಿಂದಲೇ ಮೋಕ್ಷವು ಪ್ರಾಪ್ತವಾಗುತ್ತದೆ.

ಬ್ರಹ್ಮಜ್ಞಾನವಿಧಿವಾದಿಗಳಲ್ಲಿ ಇನ್ನೂ ಕೆಲವು ಪ್ರಭೇದಗಳುಂಟು. ಆದರೆ ಅವರಿಗೆಲ್ಲ ಸಮಾನವಾದ ಅಭಿಪ್ರಾಯವು ಯಾವದೆಂದರೆ ಬ್ರಹ್ಮವನ್ನು ತಿಳಿಸುವ ವಾಕ್ಯಗಳು ನೇರಾಗಿ ಬ್ರಹ್ಮಪ್ರಾಪ್ತಿಗೆ ಕಾರಣವಲ್ಲ; ಬ್ರಹ್ಮಜ್ಞಾನವೇ ಎಂದರೆ ಬ್ರಹ್ಮದ ಉಪಾಸನೆಯೇ ಬ್ರಹ್ಮಪ್ರಾಪ್ತಿಗೆ ಕಾರಣವಾಗಿರುತ್ತದೆ. ಬ್ರಹ್ಮಪ್ರಾಪ್ತಿ ಎಂಬ ಫಲವು ಇಲ್ಲಿಯೇ ಈಗಲೇ ಆಗುವದೆಂಬುದು ಈ ವಾದಿಗಳಿಗೆಲ್ಲ ಸಮ್ಮತವಲ್ಲ. ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳಿಗೆ ಹೇಗೋ ಹಾಗೆ ಶಾಸ್ತ್ರದಲ್ಲಿ ವಿಧಿಸಿರುವ ಜ್ಞಾನಕ್ಕೂ ಅದೃಷ್ಟವಾದ ಫಲವೇ, ಶರೀರಪಾತವಾದ ಬಳಿಕವೇ ಆಗುವದು. ಶಾಸ್ತ್ರಪ್ರಾಮಾಣ್ಯದಿಂದ ಇವೆಲ್ಲವನ್ನೂ ನಂಬಬೇಕಾಗಿರುತ್ತದೆ ಎಂಬುದು ಈ ವಾದಿಗಳ ಮತವು. ವಸ್ತುಜ್ಞಾನವಾದಿಗಳ ಅಭಿಪ್ರಾಯವನ್ನು ಮುಂದೆ ಅರಿಕೆಮಾಡಿಕೊಳ್ಳುವೆನು.

ಉಉಉಉಉ

# ವಿದ್ಯೆಯಿಂದ ಅವಿದ್ಯಾನಿವೃತ್ತಿ

ಅವಿದ್ಯೆಯೆಂದರೆ ಆತ್ಮಾನಾತ್ಮಗಳಲ್ಲಿ ಒಂದನ್ನೊಂದೆಂದೂ ಒಂದರ ಧರ್ಮಗಳನ್ನು ಮತ್ತೊಂದರವೆಂದೂ ಭಾವಿಸಿರುವ ತಪ್ಪುತಿಳಿವಳಿಕೆ. ಇದು ಜನರಿಗೆ ಸ್ವಭಾವದಿಂದಲೇ ಇದ್ದುಕೊಂಡಿರುತ್ತದೆ – ಎಂದು **ಭಾಷ್ಯಕಾರರು** ಹೇಳಿರುತ್ತಾರಷ್ಟೆ? ಈ ಅವಿದ್ಯೆಯು ನಿವೃತ್ತಿಯಾಗುವದು ಹೇಗೆ? – ಎಂದರೆ ಯಾವದರಲ್ಲಿ ಯಾವದನ್ನು ಅಧ್ಯಾರೋಪ ಮಾಡಿಕೊಂಡಿರುವರೋ – ಅವುಗಳನ್ನು ವಿಂಗಡಿಸಿ ಅರಿತುಕೊಂಡು ವಸ್ತುವನ್ನು ಇದ್ದದ್ದು ಇದ್ದಂತೆ ಗೊತ್ತುಪಡಿಸುವ ವಿದ್ಯೆಯಿಂದ, "**ತದ್ವಿವೇಕೇನ ವಸ್ತು ಸ್ವರೂಪಾವಧಾರಣಂ ವಿದ್ಯಾಮಾಹುಃ**" ಎಂಬ ಅಧ್ಯಾಸಭಾಷ್ಯವಾಕ್ಯದ ಅರ್ಥವಿದು.

ಇಲ್ಲಿ '**ಅವಿದ್ಯೆ**' ಎಂಬುದು ನಿಜವಾಗಿದ್ದುಕೊಂಡಿದೆಯೆಂದೂ ಅದನ್ನು ವಿದ್ಯೆಯಿಂದ ಅಳಿಸಿಹಾಕಬೇಕಾಗಿದೆಯೆಂದೂ ಭಾವಿಸಬಾರದು. ಅವಿದ್ಯೆಯಿಂದ ಆತ್ಮನಲ್ಲಿ ಅನಾತ್ಮವನ್ನು ಅಧ್ಯಾಸಮಾಡಿರುತ್ತದೆ, ಅನಾತ್ಮದಲ್ಲಿ ಆತ್ಮನನ್ನು ಅಧ್ಯಾಸಮಾಡಿರುತ್ತದೆ; ಇದರಂತೆ ಒಂದರ ಧರ್ಮಗಳನ್ನು ಮತ್ತೊಂದರಲ್ಲಿ ಅಧ್ಯಾಸಮಾಡಿರುತ್ತದೆ. ಅಷ್ಟೆ; '**ತತ್ರೈವಂ ಸತಿ ಯತ್ರ ಯದಧ್ಯಾಸಃ, ತತ್ಕೃತೇನ ದೋಷೇಣ ಗುಣೇನ ವಾ**

**ಅಣುಮಾತ್ರೇಣಾಪಿ ಸ ನ ಸಂಬಧ್ಯತೇ!'** ಒಂದರಲ್ಲಿ ಒಂದನ್ನು ಅಧ್ಯಾಸಮಾಡಿರುವದರಿಂದ, ಅನಾತ್ಮದೋಷವು, ಆತ್ಮನಿಗಾಗಲಿ ಆತ್ಮನ ಗುಣವು ಅನಾತ್ಮಕ್ಕಾಗಲಿ ಒಂದಿಷ್ಟೂ ಅಂಟುವದಿಲ್ಲ - ಎಂದು ಭಾಷ್ಯಕಾರರು ಹೇಳಿರುವದರ ಪೂರ್ಣಾಭಿಪ್ರಾಯವನ್ನು ಮನದಟ್ಟುಮಾಡಿಕೊಳ್ಳಬೇಕಾದರೆ ಇದೆಲ್ಲವೂ ಜನರು ಮನಸ್ಸಿನಲ್ಲಿ ಹುಟ್ಟುಹಾಕಿಕೊಂಡಿರುವದೇ ಎಂಬುದನ್ನು ಮರೆಯದೆ ಇರಬೇಕು, ಅನಾತ್ಮವು ಅನೃತ, ಹುಸಿ; ಅದರ ಧರ್ಮಗಳಾಗಲಿ ಸ್ವರೂಪವಾಗಲಿ ಆತ್ಮನಿಗೆ ಎಂದಿಗೂ ಅಂಟಿಕೊಳ್ಳಲಾರವು. ಆತ್ಮನು ಸಂಸಾರಿಯೆಂದೂ ದುಃಖಿಯೆಂದೂ ಬದ್ಧನೆಂದೂ ಮುಕ್ತನಾಗಬೇಕೆಂದೂ ತಿಳಿಯುವದು ತಪ್ಪು; ದೇಹಾದಿಬುದ್ಧಿಪರ್ಯಂತವಾದ ಅನಾತ್ಮವು ಸತ್ಯವೆಂದೂ ಚೇತನವೆಂದೂ ನಿತ್ಯವೆಂದೂ ತಿಳಿಯುವದೂ ತಪ್ಪೇ, ಇಲ್ಲಿ ಭಗವದ್ಗೀತಾಭಾಷ್ಯವಾಕ್ಯವೊಂದನ್ನು ಮನಸ್ಸಿಗೆ ತಂದುಕೊಳ್ಳುವದರಿಂದ ಇದೆಲ್ಲವೂ ಸ್ಪಷ್ಟತರವಾಗುವದು:

**ಯಥಾಶಾಸ್ತ್ರಂ ಕ್ಷೇತ್ರಕ್ಷೇತ್ರಜ್ಞಲಕ್ಷಣಭೇದಪರಿಜ್ಞಾನಪೂರ್ವಕಂ ಪ್ರಾಗ್ದರ್ಶಿತ ರೂಪಾತ್ ಕ್ಷೇತ್ರಾತ್, ಮುಞ್ಜಾದಿವೇಷೀಕಾಂ ಯಥೋಕ್ತಲಕ್ಷಣಂ ಕ್ಷೇತ್ರಜ್ಞಂ ಪ್ರವಿಭಜ್ಯ, 'ನ ಸತ್ತನ್ನಾಸದುಚ್ಯತೇ' ಇತ್ಯನೇನ ನಿರಸ್ತ ಸರ್ವೋಪಾಧಿವಿಶೇಷಂ ಜ್ಞೇಯಂ ಬ್ರಹ್ಮಸ್ವರೂಪೇಣ ಯಃ ಪಶ್ಯತಿ, ಕ್ಷೇತ್ರಂ ಚ ಮಾಯಾನಿರ್ಮಿತ ಹಸ್ತಿಸ್ವಪ್ನದೃಷ್ಟವಸ್ತು ಗನ್ಧರ್ವನಗರಾದಿವತ್ ಅಸದೇವ ಸದಿವ ಅವಭಾಸತೇ - ಇತ್ಯೇವಂ ನಿಶ್ಚಿತವಿಜ್ಞಾನೋ ಯಃ ತಸ್ಯ ಯಥೋಕ್ತ ಸಮ್ಯಗ್ದರ್ಶನವಿರೋಧಾತ್ ಅಪಗಚ್ಛತಿ ಮಿಥ್ಯಾಜ್ಞಾನಮ್ ॥ ಗೀ.ಭಾ.13.26, ಪು. 213**

'ಶಾಸ್ತ್ರದಲ್ಲಿರುವಂತೆ ಕ್ಷೇತ್ರಕ್ಷೇತ್ರಜ್ಞರ ಲಕ್ಷಣವನ್ನು ವಿವೇಚನೆಮಾಡಿ ಹಿಂದೆ ಹೇಳಿರುವ ಕ್ಷೇತ್ರಕ್ಕಿಂತ –ನೊದೆಹುಲ್ಲಿನಿಂದ ದಂಟನ್ನು ಬಿಂಗಡಿಸಿಕೊಳ್ಳುವಂತೆ - "ಸತ್ತಲ್ಲ, ಅಸತ್ತಲ್ಲ" - ಎಂದು ಹೇಳಿರುವ ಲಕ್ಷಣವುಳ್ಳ ಕ್ಷೇತ್ರಜ್ಞನನ್ನು ಬಿಂಗಡಿಸಿಕೊಂಡು ಯಾವ ಉಪಾಧಿವಿಶೇಷವೂ ಇಲ್ಲದವನೆಂದೂ ಜ್ಞೇಯವಾದ ಬ್ರಹ್ಮವೇ ಎಂದೂ ಯಾವನು ಸ್ವರೂಪದಿಂದ ಕಂಡುಕೊಳ್ಳುವನೋ ಮತ್ತು ಕ್ಷೇತ್ರವೆಂಬುದು ಮಾಯಾ ನಿರ್ಮಿತವಾದ ಆನೆ, ಕನಸಿನಲ್ಲಿ ಕಂಡುವಸ್ತು, ಗಂಧರ್ವನಗರ - ಮುಂತಾದದ್ದರಂತೆ ಅಸತ್ತೇ ಸತ್ತಾಗಿರುವಂತೆ ಕಾಣುತ್ತಿದೆ ಎಂದು ಯಾವನು ನಿಶ್ಚಿತವಾದ ಅನುಭವವುಳ್ಳವನಾಗಿರುವನೋ, ಅವನಿಗೆ ಅಂಥ ಸಮ್ಯಗ್ಜ್ಞಾನಕ್ಕೆ ವಿರುದ್ಧವಾಗಿರುವದರಿಂದ ಮಿಥ್ಯಾಜ್ಞಾನವು ಹೋಗಿಬಿಡುತ್ತದೆ.'

ಇದರಿಂದ ತಿಳಿಯಬೇಕಾದದ್ದೇನೆಂದರೆ ಆತ್ಮನೆಂಬುದು ಎಂದೆಂದಿಗೂ ಇರುವ ಪರಮಾರ್ಥ, ಅನಾತ್ಮವೆಂಬುದು ಬರಿಯ ಹುಸಿತೋರಿಕೆ, ಎಂದಿಗೂ ಇಲ್ಲದೆ ಇರುವದು - ಎಂದು ಅನುಭವಕ್ಕೆ ತಂದುಕೊಳ್ಳುವದೇ ವಿದ್ಯೆ. ಈ ವಿದ್ಯೆಯಿಂದ ಅವಿದ್ಯೆಯು ತೊಲಗುವದು ಎಂದರೆ ಅದು ಇರಲೇ ಇಲ್ಲವೆಂಬುದನ್ನು ಕಂಡುಕೊಳ್ಳು ವದು, ಅಷ್ಟೆ ಏಕೆಂದರೆ ಇದ್ದದ್ದು ಎಂದಿಗೂ ಹೋಗಲಾರದು. ಅವಿದ್ಯೆಯು ಜ್ಞಾನೋದಯಕ್ಕಿಂತ ಮೊದಲು ಇರುವಂತೆ ತೋರುತ್ತಿದ್ದರೂ ಜ್ಞಾನವು ಉಂಟಾದ ಮೇಲೆ ಅದು ಇರಲೇ ಇಲ್ಲವೆಂದು ಗೊತ್ತಾಗುವದು. ಈ ಅಭಿಪ್ರಾಯವನ್ನು ಸೂತ್ರ ಭಾಷ್ಯದಲ್ಲಿ ಹೀಗೆಂದು ಹೊರಪಡಿಸಿರುತ್ತದೆ; "**ನನ್ವಹಮೀಶ್ವರ ಏವೋಕ್ತಃ ಶ್ರುತ್ಯಾ। ಯದ್ಯೇವಂ ಪ್ರತಿಬುದ್ಧೋಽಸಿ ನಾಸ್ತಿಕಸ್ಯಚಿದಪ್ರಬೋಧಃ ।**" (ಶಂಕೆ); ನಾನು ಈಶ್ವರನೇ ಎಂದು ಶ್ರುತಿಯಲ್ಲಿ ಹೇಳಿದೆಯಲ್ಲ! ನನಗೆ ಅವಿದ್ಯೆಯೆಲ್ಲಿಂದ ಬಂತು? (ಪರಿಹಾರ): ಹೀಗೆಂದು ತಿಳಿದುಕೊಂಡೆಯಾದರೆ ಯಾರೊಬ್ಬರಿಗೂ ಅಜ್ಞಾನವು ಇರುವದೇ ಇಲ್ಲ.

ಅಂತೂ ಈವರೆಗೆ ಏನು ಸಿದ್ಧವಾಯಿತೆಂದರೆ, ವ್ಯವಹಾರದಲ್ಲಿ ಜನರು 'ನನಗೆ ಶಾಸ್ತ್ರದಲ್ಲಿ ಹೇಳಿರುವ ಆತ್ಮನ ಸ್ವರೂಪವು ತಿಳಿಯದೆ, ನಾನು ಕರ್ತೃಭೋಕ್ತೃರೂಪನೆಂದೇ ನನಗೆ ತೋರುತ್ತಿದೆ' ಎಂದೇ ಸ್ವಭಾವದಿಂದ ಭಾವಿಸಿಕೊಂಡಿರುವರಾದರೂ ಅವರಿಗೆ ನಿಜವಾಗಿ ಅವಿದ್ಯೆಯಾಗಲಿ ಅವಿದ್ಯೆಯ ಕಾರ್ಯವಾದ ಸಂಸಾರವಾಗಲಿ ಇರುವದೇ ಇಲ್ಲ; ಹೀಗೆಂದು ನಿಶ್ಚಯಿಸಿಕೊಳ್ಳುವದೇ ವಿದ್ಯೆ. **ವಾರ್ತಿಕಕಾರರು** ಈ ಅಭಿಪ್ರಾಯ ವನ್ನು ಹೀಗೆಂದು ಸ್ಪಷ್ಟಗೊಳಿಸಿರುತ್ತಾರೆ :

**ಬ್ರಹ್ಮಣ್ಯವಿದಿತೇ ಬೋಧಾನ್ನಾವಿದ್ಯೇತ್ಯುಪಪದ್ಯತೇ । ನಿತರಾಂ ಚಾಪಿ ವಿಜ್ಞಾತೇ ಮೃಷಾಧೀರ್ನಾಸ್ತ್ಯಬಾಧಿತಾ ॥ ಅವಿದ್ಯಾವಾನವಿದ್ಯಾಂ ತಾಂ ನ ನಿರೂಪಯಿತುಂ ಕ್ಷಮಃ । ವಸ್ತುವೃತ್ತಮತೋಽಪೇಕ್ಷ್ಯ ನಾವಿದ್ಯೇತಿ ನಿರೂಪ್ಯತೇ ॥**

**ಸಂ.ವಾ.178, 179**

ಈ ಶ್ಲೋಕಗಳ ಅಭಿಪ್ರಾಯವೇನೆಂದರೆ, 'ಬ್ರಹ್ಮಸ್ವರೂಪವನ್ನು ಅರಿತುಕೊಳ್ಳದೆ ಇರುವ ಅವಸ್ಥೆಯಲ್ಲಿ 'ಇದು ಅವಿದ್ಯೆ' ಎಂಬ ಅರಿವು ಇರುವದಕ್ಕೆ ಅವಕಾಶವಿಲ್ಲ; ಏಕೆಂದರೆ ತಪ್ಪು ತಿಳಿವಳಿಕೆಯಿರುವವರೆಗೂ ಅದು ಸರಿಯಾದ ಜ್ಞಾನವೆಂದೇ ಭಾವಿಸಿ ಕೊಳ್ಳುತ್ತಿರುತ್ತಾರೆ. ಬ್ರಹ್ಮವನ್ನು ಅರಿತುಕೊಂಡಮೇಲಂತೂ ಅವಿದ್ಯೆಯಿರುವದೇ ಇಲ್ಲ; ಏಕೆಂದರೆ ತಪ್ಪುತಿಳಿವಳಿಕೆಯು ಸರಿಯಾದ ಜ್ಞಾನವುಂಟಾದ ಮೇಲೆ ಬಾಧಿತವಾಗದೆ

ಇರುವದೇ ಇಲ್ಲ. ಅಜ್ಞಾನಿಯಾದವನಿಗೆ ಇದು ಅವಿದ್ಯೆ ಎಂದು ನಿಶ್ಚಯಿಸಿಕೊಳ್ಳಲಾಗ ದಲ್ಲವೆ? ಆದ್ದರಿಂದ ವಸ್ತುಸ್ವಭಾವವನ್ನು ಲಕ್ಷ್ಯದಲ್ಲಿಟ್ಟುಕೊಂಡಾಗ ಅವಿದ್ಯೆಯಿಲ್ಲವೆಂದೇ ನಿಶ್ಚಯಿಸಬೇಕಾಗುತ್ತದೆ. ಹೀಗಿರುವದರಿಂದ ಅವಿದ್ಯೆಯು ಇದೆಯೆಂದು ಅಧ್ಯಾರೋಪ ದೃಷ್ಟಿಯಿಂದ ಇಟ್ಟುಕೊಂಡು ಅದು ವಿದ್ಯೆಯಿಂದ ನಿವೃತ್ತವಾಗುತ್ತದೆ ಎಂದು ಹೇಳಿರು ತ್ತದೆಯೇ ಹೊರತು, ನಿಜವಾಗಿ ಅದು ಇದೆಯೆಂದಲ್ಲ. ಪರಮಾರ್ಥದೃಷ್ಟಿಯಿಂದ ನೋಡಿದರೆ ಹೋಗದೆ ಇರುವ ಅವಿದ್ಯೆಯಿಲ್ಲ; ಹುಟ್ಟದೆ ಇರುವ ಜ್ಞಾನವೂ ಇಲ್ಲ. ಆದ್ದರಿಂದಲೇ ವಾರ್ತಿಕಕಾರರು: **'ತತ್ತ್ವಮಸ್ಯಾದಿವಾಕ್ಯೋತ್ಥಸಮ್ಯಗ್ಧೀ ಜನ್ಮ ಮಾತ್ರತಃ । ಅವಿದ್ಯಾ ಸಹ ಕಾರ್ಯೇಣ ನಾಸೀದಸ್ತಿ ಭವಿಷ್ಯತಿ॥'' (ಸಂ.ವಾ.183)** ಎಂದಿರುತ್ತಾರೆ.

**'ತತ್ತ್ವಮಸಿ' 'ಆ ಬ್ರಹ್ಮವೇ ನೀನು'** ಮುಂತಾದ ವೇದಾಂತವಾಕ್ಯಗಳಿಂದ ಸಮ್ಯಗ್ಜ್ಞಾನವುಂಟಾದರೆ ಸಾಕು, ಅಷ್ಟರಿಂದಲೇ 'ಅವಿದ್ಯೆಯಾಗಲಿ ಅದರ ಕಾರ್ಯ ವಾದ ಬಂಧವಾಗಲಿ ಹಿಂದೆ ಇರಲಿಲ್ಲ, ಈಗಲೂ ಇಲ್ಲ, ಮುಂದೆಯೂ ಇರುವದಿಲ್ಲ' - ಎಂಬ ನಿಶ್ಚಯವಾಗಿ ಬಿಡುವದು - ಎಂಬುದು ಅವರ ಅಭಿಪ್ರಾಯ.

ಈವರೆಗೆ ಹೇಳಿರುವದು ಆಚಾರ್ಯರಿಗೆ ಸಮ್ಮತವಾದ ಪ್ರಸ್ಥಾನ. ಇನ್ನು ವ್ಯಾಖ್ಯಾನಕಾರರು ಏನು ಹೇಳುತ್ತಿರುವರೆಂಬುದನ್ನು ನೋಡೋಣ. **ಪಂಚಪಾದಿಕೆ** ಯಲ್ಲಿ ಅವಿದ್ಯೆಯು ಅಹಂಕಾರಕ್ಕೆ ಉಪಾದಾನಕಾರಣವೆಂದು ಇಟ್ಟುಕೊಂಡಿರುತ್ತದೆ. ಆದ್ದರಿಂದ ಜ್ಞಾನವುಂಟಾದಮಾತ್ರದಿಂದ ಅವಿದ್ಯೆಹೋಗಿಬಿಡುವದರಿಂದ ಅದರಿಂದಾಗಿದ್ದ ಅಹಂಕಾರಗ್ರಂಥಿಯೂ ಹೋಗಿಬಿಡಬೇಕಲ್ಲವೆ? - ಎಂಬ ಶಂಕೆಯನ್ನು ತೆಗೆದು ಆ ಟೀಕಾಕಾರರು ಬರೆದಿರುವದೇನೆಂದರೆ: 'ಸರಿಯಾದ ತಿಳಿವಳಿಕೆಯಿಂದ ಉಂಟಾಗಿದ್ದ ಹಾವೆಂಬ ಅಂಜಿಕೆಯು ನಿವೃತ್ತವಾದ ಮೇಲೂ ತನ್ನ ಸಂಸ್ಕಾರದಿಂದ ಮುಂದುವರಿಯ ಬಹುದು, ನಡುಕವೇ ಮುಂತಾದ ಕಾರ್ಯವನ್ನು ಉಂಟುಮಾಡಬಹುದು; ಅದರಂತೆ ಅವಿದ್ಯೆಯೂ ತನ್ನ ಸಂಸ್ಕಾರದಿಂದ ಮುಂದುವರಿಯುತ್ತದೆ, ಅಹಂಕಾರಗ್ರಂಥಿಗೆ ಕಾರಣವೂ ಆಗಬಹುದು. ಆದ್ದರಿಂದ ಈ ಪ್ರಕ್ರಿಯೆಯಲ್ಲಿ ಯಾವ ದೋಷವೂ ಇಲ್ಲ' (ಪಂ.ಪಾ. ಪುಟ.513-515) ಆ ಟೀಕೆಗೆ ಬರೆದಿರುವ ವಿವರಣವೆಂಬ ವ್ಯಾಖ್ಯಾನದಲ್ಲಿ 'ತತ್ತ್ವಜ್ಞಾನದಿಂದ ಅವಿದ್ಯೆಯು ನಾಶವಾದರೂ ಮತ್ತೆ ಅದರ ವ್ಯಾಪಾರವುಂಟಾಗ ಬಹುದು. ಇದಕ್ಕೆ ಅವಿದ್ಯೆಯ ಸಂಸ್ಕಾರವೇ ಕಾರಣ. ಅವಿದ್ಯೆಯಂತೆ ಸಂಸ್ಕಾರವೂ

ಚೈತನ್ಯದೋಷವಾಗಿರುತ್ತದೆ. ಈ ಸಂಸ್ಕಾರಕ್ಕೆ ಅವಿದ್ಯೆಯು ಉಪಾದಾನವಲ್ಲ; ಆತ್ಮನೂ ಆ ಸಂಸ್ಕಾರಕ್ಕೆ ಉಪಾದಾನಕಾರಣವಲ್ಲವಾದರೂ ಆಶ್ರಯನಾಗಿರುತ್ತಾನೆ. ಆ ಸಂಸ್ಕಾರವು ತತ್ತ್ವಜ್ಞಾನದ ಅನುಸಂಧಾನದಿಂದಲೇ ನಿವೃತ್ತವಾಗುತ್ತದೆ ಅಥವಾ ಅವಿದ್ಯಾಸಂಸ್ಕಾರ ವೆಂದರೆ ಅವಿದ್ಯಾಲೇಶವೇ ಎಂದಾದರೂ ಹೇಳಬಹುದು' (ಪಂ.ವಿ.ಪುಟ 514-516 ರಲ್ಲಿರುವದರ ಸಾರ) ಎಂದು ಬರೆದಿರುತ್ತಾರೆ. ಈ ಅವಿದ್ಯಾಲೇಶವು ಕೆಲವು ಕಾಲದವರೆಗೆ ಇದ್ದ ಬಳಿಕ **ವಿದೇಹಮುಕ್ತಿ**ಯಾಗುವದು - ಎಂದು ಅವರ ಅಭಿಪ್ರಾಯ.

**ಶ್ರೀಶಂಕರಭಗವತ್ಪಾದರೂ** ಎರಡನೆಯ ಚಂದ್ರನ ಜ್ಞಾನದಂತೆ ಮಿಥ್ಯಾಜ್ಞಾನವು ಕೆಲವು ಕಾಲವಿದ್ದು ಪ್ರಾರಬ್ಧ ಕರ್ಮವಾದ ಬಳಿಕ ನಿವೃತ್ತವಾಗಬಹುದು; ಆಮೇಲೆ ಮತ್ತೆ ಸಂಸಾರಕ್ಕೆ ಬೀಳುವ ಅಂಜಿಕೆಯಿರುವದಿಲ್ಲ; ಏಕೆಂದರೆ ಅದು ಸಮ್ಯಗ್ಜ್ಞಾನದಿಂದ ಬಾಧಿತವಾಗುತ್ತದೆ - ಎಂದು ವ್ಯವಹಾರದೃಷ್ಟಿಯನ್ನವಲಂಬಿಸಿ ಹೇಳಿರುತ್ತಾರಾದರೂ ಜೀವನ್ಮುಕ್ತರಿಗೆ ಅವಿದ್ಯಾಲೇಶವಿರಬಹುದೆಂಬುದನ್ನು ಮಾತ್ರ ಒಪ್ಪಿರುವದೇ ಇಲ್ಲ. ಅವರು ಜ್ಞಾನಫಲದ ವಿಷಯಕ್ಕೆ ಬರೆದಿರುವದು ಹೀಗಿದೆ :

**"ಅನುಭವಾರೂಢಂ ತು ಜ್ಞಾನ ಫಲಮ್ 'ಯತ್ಸಾಕ್ಷಾದಪರೋಕ್ಷಾದ್ ಬ್ರಹ್ಮ' ಇತಿ ಶ್ರುತೇಃ । 'ತತ್ತ್ವಮಸಿ' ಇತಿ ಚ ಸಿದ್ಧವದುಪದೇಶಾತ್ । ನ ಹಿ 'ತತ್ತ್ವಮಸಿ' ಇತ್ಯಸ್ಯ ವಾಕ್ಯಸ್ಯಾರ್ಥಃ 'ತತ್ತ್ವಂ ಮೃತೋ ಭವಿಷ್ಯಸಿ' ಇತ್ಯೇವಂ ಪರಿಣೇತುಂ ಶಕ್ಯಃ ॥" ಸೂ.ಭಾ. 3.3.32.**

ಜ್ಞಾನದ ಫಲವು ಅನುಭವದಲ್ಲಿಯೇ ತೋರಿಕೊಳ್ಳುತ್ತದೆ. 'ಬ್ರಹ್ಮವು ಸಾಕ್ಷಾದ ಪರೋಕ್ಷವಾಗಿರುತ್ತದೆ' ಎಂದೇ ಶ್ರುತಿ ಹೇಳುತ್ತದೆ. 'ಅದೇ ನೀನಾಗಿದ್ದೀಯೆ' ಎಂಬ ಶ್ರುತಿಯು 'ಈಗಲೇ ಬ್ರಹ್ಮವಾಗಿದೀಯೆ' ಎಂದೇ ಹೇಳುತ್ತಿದೆ. 'ನೀನು ಅದೇ ಆಗಿದ್ದೀಯೆ' ಎಂಬ ವಾಕ್ಯಕ್ಕೆ 'ನೀನು ಸತ್ತು ಆ ಬ್ರಹ್ಮವಾಗುವೆ' ಎಂದೇನೂ ಅರ್ಥವನ್ನು ಮಾಡುವದಕ್ಕೆ ಬರುವದಿಲ್ಲವಷ್ಟೆ?- ಎಂದು ಅವರು ಜೀವನ್ಮುಕ್ತಿಗೆ ಪ್ರಾಧಾನ್ಯವನ್ನು ಕೊಟ್ಟು ಬರೆದಿರುತ್ತಾರೆ. ಪ್ರಾರಬ್ಧ ಕರ್ಮವು ಇರುವಷ್ಟು ಕಾಲವೂ ಮಿಥ್ಯಾಜ್ಞಾನದ ಸಂಸ್ಕಾರವು ಬಾಧಿತವಾಗಿಯೇ ತೋರಿಕೊಂಡಿರುತ್ತದೆ - ಎಂದು ಅವರು ಹೇಳಿರುವದು ನಿಜ; ಆದರೆ ಸಮ್ಯಗ್ಜ್ಞಾನವುಂಟಾದ ಮೇಲೆ ಜ್ಞಾನಿಗೆ ಕರ್ಮವು ಸಂಪೂರ್ಣವಾಗಿ ನಾಶವಾಗಿಬಿಟ್ಟಿರುತ್ತದೆ - ಎಂಬುದಕ್ಕೆ ಅವರು ಬರೆದಿರುವ ಒಂದು ವಾಕ್ಯವು ಬಹುಬೆಲೆಯುಳ್ಳ ಸಾಕ್ಷಿಯಾಗಿರುತ್ತದೆ :

**ಪೂರ್ವಸಿದ್ಧಕರ್ತೃತ್ವಭೋಕ್ತೃತ್ವವಿಪರೀತಂ ಹಿ ತ್ರಿಷ್ವಪಿ ಕಾಲೇಷು ಅಕರ್ತೃತ್ವಾಭೋಕ್ತೃತ್ವಸ್ವರೂಪಂ ಬ್ರಹ್ಮಾಹಮಸ್ಮಿ, ನೇತಃ ಪೂರ್ವಮಪಿ ಕರ್ತಾ ಭೋಕ್ತಾ, ವಾ ಅಹಮಾಸಮ್, ನೇದಾನೀಂ ನಾಪಿ ಭವಿಷ್ಯತ್ಕಾಲೇ - ಇತಿ ಬ್ರಹ್ಮವಿದವಗಚ್ಛತಿ ॥**
**ಸೂ.ಭಾ.4.1.13**

ಹಿಂದೆ ಇದ್ದ ಕರ್ತೃತ್ವಭೋಕ್ತೃತ್ವಕ್ಕೆ ವಿರುದ್ಧವಾಗಿ 'ಮೂರು ಕಾಲಕ್ಕೂ ಕರ್ತೃತ್ವ ಭೋಕ್ತೃತ್ವವಿಲ್ಲದ ಸ್ವರೂಪವುಳ್ಳ ಬ್ರಹ್ಮವೇ ನಾನು; ಇದಕ್ಕೆ ಹಿಂದೆಯೂ ನಾನು ಕರ್ತೃ ಭೋಕ್ತೃವಾಗಿರಲಿಲ್ಲ, ಈಗಲೂ ಇಲ್ಲ, ಮುಂದೆಯೂ ಇರುವದಿಲ್ಲ' ಎಂದೇ ಬ್ರಹ್ಮ ಜ್ಞಾನಿಯು ನಿಶ್ಚಯಿಸಿರುತ್ತಾನೆ - ಎಂಬುದು ಅವರ ವಾಕ್ಯದ ಅರ್ಥ. ಇದಕ್ಕೆ ವಿರುದ್ಧ ವಾಗಿ ವ್ಯಾಖ್ಯಾನಕಾರರು ಹೇಳುತ್ತಿರುವದು ಹೀಗೆ : ''ಪೃಥಿವ್ಯಾದಿಗಳು ಇದ್ದೇ ಇರುತ್ತವೆ ಯಾದರೂ ಅಂತಃಕರಣಾಧ್ಯಾಸವು ತೊಲಗುವದರಿಂದ ಪ್ರಮಾತೃತ್ವವಿಲ್ಲದ್ದರಿಂದ - ಕುರುಡರಿಗೆ ಬಣ್ಣವು ಕಾಣದಿರುವಂತೆ ದ್ವೈತವು ಕಾಣದೆ ಇರುತ್ತದೆ' (ಪಂ.ವಿ. 1.1.1. ಪು. 865) ಈ ಪಕ್ಷದಲ್ಲಿ ಕರ್ತೃತ್ವಾಧ್ಯಾಸವು ಹೋದರೂ ಪೃಥಿವ್ಯಾದಿ ಪ್ರಪಂಚವು ಇದ್ದೇ ಇರುತ್ತದೆ ಎಂದಿಟ್ಟುಕೊಂಡಿದೆ. ಇನ್ನೊಂದು ಪಕ್ಷವು ಹೀಗಿದೆ : ''ಜ್ಞಾನಾವಾದಮೇಲೂ ಪ್ರಾರಬ್ಧಕರ್ಮವಿರುತ್ತದೆ. ಆಗ ಒಂದೊಂದು ವೇಳೆ ಅಸಂಪ್ರಜ್ಞಾತಸಮಾಧಿಯಲ್ಲಿ ಆತ್ಮ ದರ್ಶನವಾಗುತ್ತದೆ. ಒಂದೊಂದು ವೇಳೆ ಕರ್ಮನಿಮಿತ್ತದಿಂದ ದ್ವೈತದರ್ಶನವಾಗುತ್ತದೆ. ಸಶರೀರರಿಗೇ ಅಪರೋಕ್ಷಜ್ಞಾನವಾಗುತ್ತದೆ' (ಪಂ.ವಿ. 1.1.4, ಪು. 1240). ಈ ಪಕ್ಷ ದಲ್ಲಿ ಸಮಾಧಿಯಲ್ಲಿ ಅದ್ವೈತದರ್ಶನವಿದೆ ಅಷ್ಟೆ.

ಅವಿದ್ಯೆಯು ಆತ್ಮಾನಾತ್ಮರ ಪರಸ್ಪರಾಧ್ಯಾಸರೂಪವಾದ ಭ್ರಾಂತಿಯಾದ್ದರಿಂದ ಅದು ವಿವೇಕರೂಪವಾದ ವಿದ್ಯೆಯಿಂದ ನಾಶವಾಗುತ್ತದೆ. ನಿಜವಾಗಿ ಜೀವನಿಗೆ ಪ್ರಮಾತೃತ್ವವಾಗಲಿ, ದ್ವೈತದರ್ಶನವಾಗಲಿ ಇಲ್ಲವೇ ಇಲ್ಲವೆಂಬುದೇ ಆಚಾರ್ಯರ ವೇದಾಂತ ಸಿದ್ಧಾಂತ. ವ್ಯಾಖ್ಯಾನಕಾರರು ಇದಕ್ಕೆ ಅಡ್ಡಿಯಾಗುವಂತೆ ಅವಿದ್ಯೆ ಎಂಬ ಶಕ್ತಿಯೊಂದನ್ನು ಕಲ್ಪಿಸಿ ಅದರಿಂದ ದ್ವೈತದರ್ಶನರೂಪವಾದ ಕಾರ್ಯವಾಗಿದೆ ಎಂಬ ಪ್ರಕ್ರಿಯೆಯನ್ನು ಹೂಡಿರುತ್ತಾರೆ.

# ಜ್ಞಾನಸಾಧನಗಳು

ಬ್ರಹ್ಮಜ್ಞಾನವು ಉಂಟಾಗುವದಕ್ಕೆ ಸಾಕ್ಷಾತ್ಸಾಧನಗಳು ಮೂರು. ಇವೇ ಶ್ರವಣ ಮನನನಿದಿಧ್ಯಾಸನಗಳು ಎಂಬ ವಿಷಯಕ್ಕೆ ವೇದಾಂತಿಗಳಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಅವುಗಳ ಸ್ವರೂಪ, ವ್ಯಾಪಾರ ಫಲ - ಇವುಗಳ ಬಗೆಗೆ ಈಗ್ಗೆ ಬೇರೆ ಬೇರೆಯ ಅಭಿಪ್ರಾಯಗಳು ಹುಟ್ಟಿಕೊಂಡಿವೆ. ಆದ್ದರಿಂದ ಇಲ್ಲಿ ಆಚಾರ್ಯರ ಸಾಕ್ಷಾದ್ವಚನಗಳನ್ನು ಮೊದಲು ಕೊಟ್ಟು ಅಭಿಪ್ರಾಯವನ್ನು ವಿವರಿಸಿ ಬಳಿಕ ವ್ಯಾಖ್ಯಾನ ಕಾರರ ಮತ ವಿಶೇಷಗಳನ್ನು ಶ್ರೋತೃಗಳ ಮುಂದೆ ಇಡುವೆನು.

**ಶ್ರವಣಾದಿಗಳು ವಿಹಿತವಾಗಿವೆಯೆ?** ಈ ಪ್ರಶ್ನೆಗೆ ಕೇಳುವವರ ಆಶಯವನ್ನು ವಿಂಗಡಿಸಿ ಅನುವಾದಮಾಡಿಕೊಂಡು ಉತ್ತರಹೇಳಬೇಕಾಗುತ್ತದೆ. ಶ್ರವಣ, ಮನನ, ನಿದಿಧ್ಯಾಸನ, ಈ ಮೂರಕ್ಕೂ ಜ್ಞಾನವೆಂದು ಅರ್ಥಮಾಡಬಹುದು. ಹಾಗೆ ಅರ್ಥವನ್ನು ಮಾಡಿದರೆ, ಇದನ್ನು ವಿಧಿಸಿಲ್ಲವೆನ್ನಬೇಕು. ಇದ್ದದ್ದು ಇದ್ದಂತೆ ತಿಳಿಸುವ ಬ್ರಹ್ಮಾತ್ಮ ವಿಷಯದ ಜ್ಞಾನವು ಚೋದನಾತಂತ್ರವಲ್ಲ.

''**ಯಥಾಭೂತಬ್ರಹ್ಮಾತ್ಮ ವಿಷಯಮಪಿ ಜ್ಞಾನಂ ನ ಚೋದನಾತನ್ತ್ರಮ್**''- ಎಂದು ಆಚಾರ್ಯರು ಸ್ಪಷ್ಟವಾಗಿ ಹೇಳಿಬಿಟ್ಟಿರುತ್ತಾರೆ. ಜ್ಞಾನವೆಂದರೆ ಕೊನೆಗೆ ಉಂಟಾಗುವ ಅರಿವೆಂಬ ಫಲ. ''**ತದ್ವಿಷಯೇ ಲಿಙಾದಯಃ ಶ್ರೂಯಮಾಣಾ ಅಪಿ ಅನಿಯೋಜ್ಯ ವಿಷಯತ್ವಾತ್ ಕುಣ್ಠೀಭವನ್ತಿ ಉಪಲಾದಿಷು ಪ್ರಯುಕ್ತಕ್ಷುರತೈಕ್ಷ್ಣ್ಯಾದಿವತ್ । ಅಹೇಯಾನುಪಾದೇಯ ವಸ್ತುವಿಷಯತ್ವಾತ್**' ।

ಆತ್ಮವು ಬಿಡತಕ್ಕದ್ದಲ್ಲ, ತೆಗೆದುಕೊಳ್ಳತಕ್ಕದ್ದೂ ಅಲ್ಲ; ಆದ್ದರಿಂದ ಅದರ ವಿಷಯಕ್ಕೆ ಪ್ರಯೋಗಿಸಿದ ವಿಧಿವಿಭಕ್ತಿಗಳು - ಕಲ್ಲಿನ ಮೇಲೆ ಪ್ರಯೋಗಿಸಿದ ಹರಿತವಾದ ಕ್ಷೌರಕತ್ತಿಯಂತೆ ಮೊಂಡಾಗಿ ಬಿಡುತ್ತವೆ - ಎಂಬ ಆಚಾರ್ಯೋಕ್ತಿಯು ಇದನ್ನು ಸ್ಫುಟಗೊಳಿಸುತ್ತದೆ. ಹಾಗಾದರೆ '**ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯಃ**' **(ಬೃ.2.4.5)** ಎಂದು ಆತ್ಮದರ್ಶನಕ್ಕೆ ಶ್ರವಣ, ಮನನ, ನಿದಿಧ್ಯಾಸನಗಳನ್ನು ವಿಧಿಸಿರುವದೇಕೆ - ಎಂಬ ಪ್ರಶ್ನೆಗೆ ಆಚಾರ್ಯರು ಕೊಟ್ಟಿರುವ ಉತ್ತರವಿದು: **ಸ್ವಾಭಾವಿಕಕಾರ್ಯಕರಣ ಸಂಘಾತಪ್ರವೃತ್ತಿಗೋಚರಾತ್ ವಿಮುಖೀಕೃತ್ಯ ಪ್ರತ್ಯಗಾತ್ಮಸ್ರೋತಸ್ತಯಾ ಪ್ರವರ್ತಯನ್ತಿ 'ಆತ್ಮಾ ವಾ ಅರೇ ದ್ರಷ್ಟವ್ಯಃ' ಇತ್ಯಾದೀನಿ ।** ಅವಿದ್ಯಾವಸ್ಥೆಯಲ್ಲಿ ಸ್ವಭಾವದಿಂದಲೇ ಹೊರಗಡೆಗೆ ವಿಷಯಾಭಿಮುಖವಾಗಿ ಹೊರಹೊಮ್ಮುತ್ತಿರುವ ದೇಹೇಂದ್ರಿಯ

ಸಂಘಾತದ ಪ್ರವೃತ್ತಿಯನ್ನು ತಪ್ಪಿಸಿ ಒಳಗಿನ ಆತ್ಮನಕಡೆಗೆ ಹರಿಯುವಂತೆ ಮಾಡುವದೇ ಈ ದ್ರಷ್ಟವ್ಯಾದಿವಾಕ್ಯಗಳ ಕೆಲಸ. ಇದನ್ನು ಸ್ಫುಟಗೊಳಿಸುವದಕ್ಕೆ ಆಚಾರ್ಯರು ಕೊಟ್ಟಿರುವ ದೃಷ್ಟಾಂತವಾಕ್ಯದ ಅರ್ಥವನ್ನು ನಾವೆಲ್ಲರೂ ಮನಸ್ಸಿನಲ್ಲಿ ಮೆಲುಕುಹಾಕುವದು ಲಾಭಕರವಾಗಿರುತ್ತದೆ; **ಲೋಕೇಽಪಿ 'ಇದಂ ಪಶ್ಯ, ಇದಂ ಆಕರ್ಣಯ' ಇತಿ ಚೈವಂಜಾತೀಯಕೇಷು ನಿರ್ದೇಶೇಷು ಪ್ರಣಿಧಾನಮಾತ್ರಂ ಕುರು ಇತ್ಯುಚ್ಯತೇ, ನ ಸಾಕ್ಷಾತ್ ಜ್ಞಾನಮೇವ ಕುರ್ವಿತಿ ।** ಲೋಕದಲ್ಲಿಯೂ 'ಇದನ್ನು ನೋಡು', 'ಇದನ್ನು ಕೇಳು' ಎನ್ನುವಾಗ 'ಆ ಕಡೆಗೆ ಅವಧಾನವಿಡು' ಎಂದು ಹೇಳುತ್ತಾರೆಯೇ ಹೊರತು ನೇರಾಗಿ 'ಜ್ಞಾನವನ್ನೇ ಮಾಡಿಕೊ' ಎಂದೇನೂ ಹೇಳುವದಿಲ್ಲ, (ಸೂ.ಭಾ.3.2.21. ಪು.362). ಆದ್ದರಿಂದ ಇಲ್ಲಿ ಜ್ಞಾನವನ್ನು ಮಾಡಿಕೊಳ್ಳಬೇಕೆಂಬ ವಿಧಿಯಿಲ್ಲ; ಆತ್ಮನ ಕಡೆಗೆ ತಿರುಗಬೇಕೆಂದು ಹಿಂತಿರುಗಿಸುವ ವಾಕ್ಯಗಳಿವು :

**ಶ್ರವಣಮಾತ್ರದಿಂದಲೇ ಜ್ಞಾನವಾಗಿಬಿಡಬಹುದೆ?** ಆಚಾರ್ಯರು ಈ ಪ್ರಶ್ನೆಗೆ ಕೊಟ್ಟಿರುವ ಉತ್ತರವಿದು: **"ತತ್ರ ಯೇಷಾಮೇತೌ ಪದಾರ್ಥೌ ಅಜ್ಞಾನ ಸಂಶಯವಿಪರ್ಯಯ ಪ್ರತಿಬದ್ಧೌ ತೇಷಾಂ 'ತತ್ತ್ವಮಸಿ' ಇತ್ಯೇತದ್ವಾಕ್ಯಂ ಸ್ವಾರ್ಥೇ ಪ್ರಮಾಂ ನೋತ್ಪಾದಯಿತುಂ ಶಕ್ನೋತಿ ।........ಯೇಷಾಂ ಪುನರ್ನಿಪುಣ ಮತೀನಾಂ ನಾ ಜ್ಞಾನಸಂಶಯವಿಪರ್ಯಯ ಲಕ್ಷಣಃ ಪದಾರ್ಥವಿಷಯಃ ಪ್ರತಿ ಬನ್ಧೋಽಸ್ತಿ ತೇ ಶಕ್ನುವನ್ತಿ ಸಕೃದುಕ್ತಮೇವ ತತ್ತ್ವಮಸಿವಾಕ್ಯಾರ್ಥಮನುಭವಿತುಮ್ ।'**

**ಸೂ.ಭಾ. 4.1.2. ಪುಟ. 462**

ತತ್ಪದದ ಮತ್ತು ತ್ವಂಪದದ ಅರ್ಥವು ಯಾವ ಸಂಸಾರಧರ್ಮವೂ ಇಲ್ಲದ ಚೈತನ್ಯಮಾತ್ರವೇ – ಎಂಬುದು ಯಾರಿಗೆ ಗೊತ್ತಾಗಿರುವದೋ ಅವರಿಗೆ ಅಜ್ಞಾನ, ಸಂಶಯ, ವಿಪರೀತ ಜ್ಞಾನ – ಎಂಬ ಅಡ್ಡಿಯು ಇಲ್ಲದ್ದರಿಂದ ಆ ಉತ್ತಮಾಧಿಕಾರಿಗಳಿಗೆ ಶ್ರವಣಮಾತ್ರದಿಂದ ವಾಕ್ಯಾರ್ಥದ ಅನುಭವವು ಆಗಿಯೇಬಿಡುತ್ತದೆ.

ಇನ್ನು ಈ ವಿಷಯಕ್ಕೆ ವ್ಯಾಖ್ಯಾನಕಾರರುಗಳ ಅಭಿಪ್ರಾಯವು ಹೇಗಿದೆ ಎಂಬುದನ್ನು ನೋಡೋಣ:

1. ಇವು ಅರ್ಥವಾದವಾಗಿದ್ದು ಆತ್ಮಜ್ಞಾನವನ್ನು ಹೊಗಳಿ ಆತ್ಮನ ಕಡೆಗೆ ತಿರುಗಿಸುವ ಮಟ್ಟಿಗೆ ವಿಧಿಯ ಕಾರ್ಯವನ್ನು ಮಾಡುತ್ತವೆ – ಎಂದು **ಪಂಚಪಾದಿಕೆ**

2. 'ದ್ರಷ್ಟವ್ಯಃ' ಎಂದು ದರ್ಶನವನ್ನು ಅಮೃತತ್ವಕ್ಕೆ ಸಾಧನವೆಂದು ಅನುವಾದ ಮಾಡಿ ಅದಕ್ಕಾಗಿ ಮನನನಿದಿಧ್ಯಾಸನಗಳೆಂಬ ಅಂಗಗಳೊಡನೆ ಶ್ರವಣ ವೆಂಬ ಅಂಗಿಯನ್ನು ವಿಧಿಸಿದೆ (ಪಂ.ವಿ.3.4.168,273)- ಎಂದು ಪಂಚ ಪಾದಿಕೆಯ ವ್ಯಾಖ್ಯಾನವಾಗಿ ಬಂದಿರುವ **ವಿವರಣ.**

3. ಬ್ರಹ್ಮಸಾಕ್ಷಾತ್ಕಾರವು ನೇರಾಗಿ ಶಾಸ್ತ್ರಯುಕ್ತಿಗಳಿಂದಲೇ ಆಗುವದಿಲ್ಲ; ಯುಕ್ತಿ, ಶಾಸ್ತ್ರಜ್ಞಾನ - ಇವುಗಳಿಂದಾದ ಸಂಸ್ಕಾರದೊಡಗೂಡಿದ ಚಿತ್ತವೇ ಸಾಕ್ಷಾತ್ಕಾರವುಳ್ಳ ಚಿತ್ತವೃತ್ತಿಯನ್ನುಂಟುಮಾಡುತ್ತದೆ. ಗಾಂಧರ್ವಶಾಸ್ತ್ರದ ಅರ್ಥದ ಜ್ಞಾನಾಭ್ಯಾಸದಿಂದ ಉಂಟಾದ ಸಂಸ್ಕಾರದಿಂದೊಡಗೂಡಿದ ಶ್ರೋತೇಂದ್ರಿಯದಿಂದ ಷಡ್ಜವೇ ಮುಂತಾದ ಮೂರ್ಛನವಿಶೇಷವನ್ನು ಹೇಗೆ ಅರಿತುಕೊಳ್ಳುವರೋ ಹಾಗೆಯೇ ವೇದಾಂತಜ್ಞಾನದಿಂದುಂಟಾದ ಸಂಸ್ಕಾರದಿಂದ ಜೀವನು ಬ್ರಹ್ಮಸ್ವಭಾವದವನೇ ಆಗಿರುತ್ತಾನೆಂಬುದನ್ನು ಅಂತಃಕರಣದಿಂದ ಅರಿತುಕೊಳ್ಳುತ್ತಾರೆ. (ಭಾ. 58).

ಪರೋಕ್ಷವಾಗಿ ತೋರುವ ವಾಕ್ಯಾರ್ಥದಲ್ಲಿಯೂ ವ್ಯಕ್ತಾವ್ಯಕ್ತತಾರತಮ್ಯವಿರು ವಾಗ ಮನನವಾದ ಮೇಲೆ ಮಾಡುವ ಜ್ಞಾನಾಭ್ಯಾಸವು ಹೆಚ್ಚುಕಡಿಮೆಯಾಗಿ ಕ್ರಮ ವಾಗಿ ಉಂಟಾಗುವ ಪ್ರತ್ಯಯಪ್ರವಾಹದಲ್ಲಿ ಸಾಕ್ಷಾತ್ಕಾರವು ಕಾಲಾವಧಿಯ ತಾರತಮ್ಯ ದಿಂದಲೇ ಉಂಟಾಗುವದೆಂದು ಹೇಳತಕ್ಕದ್ದೇನಿದೆ? (ಭಾ.ಪು. 937). 'ತತ್ತ್ವಮಸಿ' ಎಂದು ಒಂದು ಸಲ ಹೇಳಿದ ಮಾತ್ರಕ್ಕೇ ಅರ್ಥವನ್ನು ಅನುಭವಕ್ಕೆ ತಂದುಕೊಳ್ಳುವನು - ಎಂದು ಭಾಷ್ಯಕಾರರು ಬರೆದಿರುವದಕ್ಕೆ ಶ್ರವಣಮಾಡಿ, ಮನನಮಾಡಿ, ಕ್ಷಣಹೊತ್ತು ಅವಧಾನಮಾಡಿ ಪೂರ್ವಜನ್ಮದ ಸಂಸ್ಕಾರದಿಂದ ಯಾವನು ಅರಿತುಕೊಳ್ಳುತ್ತಾನೋ ಅವನ ವಿಷಯವನ್ನು ಹೇಳಿರುತ್ತದೆ ಎಂಬುದು **ಭಾಮತೀಕಾರರ** ಮತ. ಬ್ರಹ್ಮಜ್ಞಾನ ವಾದ ಬಳಿಕ, ಅನುಷ್ಠಾನಮಾಡಬೇಕಾದದ್ದೇನೂ ಇರುವದಿಲ್ಲ - ಎಂದು ಭಾಷ್ಯಕಾರರು (1.1.1) ಬರೆದಿರುವದಕ್ಕೆ ಶಾಬ್ದಜ್ಞಾನವನ್ನು 'ಅಭ್ಯಾಸಮಾಡಬೇಕಾಗುವದೆಂಬುದನ್ನು ಬಿಟ್ಟರೆ ಮತ್ತೇನನ್ನೂ ಮಾಡಬೇಕಾದದ್ದಿರುವದಿಲ್ಲ' (ಭಾ.ಪು.889) ಎಂದೇ ಅವರು ವ್ಯಾಖ್ಯಾನಮಾಡಿರುತ್ತಾರೆ.

ವಾಕ್ಯಾರ್ಥವನ್ನು ಶ್ರವಣಮಾಡಿ, ಮನನಮಾಡಿದಮೇಲೆ ಅದರ ನೈರಂತರ್ಯ ಸತ್ಕಾರಗಳೆಂಬ ವಿಶೇಷಣತ್ರಯದಿಂದ ಮಾಡಿದ ಭಾವನೆಯಿಂದಲೇ ಬ್ರಹ್ಮಸಾಕ್ಷಾತ್ಕಾರ

ವಾಗುವದು (ಪು. 935) ಎಂಬುದು ಅವರ ಸಿದ್ಧಾಂತ. **ಶ್ರವಣಾದಿಗಳಲ್ಲಿ ಒಂದೂ ವಿಧೇಯವಲ್ಲ,** 'ಶ್ರವಣವು ಅಧ್ಯಯನವಿಧಿಯಿಂದಲೇ ಪ್ರಾಪ್ತವಾಗಿದೆ ಎಂದು ಪೂರ್ವ ಪಕ್ಷಿಯು ಹೇಳಿದ್ದನ್ನು ಭಾಮತೀಕಾರರು ಒಪ್ಪಿರುತ್ತಾರೆ. (ಪ್ರ. 113); ಮನನ ನಿದಿ ಧ್ಯಾಸನಗಳು ವಿಹಿತವಲ್ಲ, ಅನ್ವಯವ್ಯತಿರೇಕದಿಂದಲೇ ಅವುಗಳಿಂದ ಸಾಕ್ಷಾತ್ಕಾರವಾಗು ವದೆಂಬುದನ್ನು ಶ್ರುತಿಯಲ್ಲಿ ಅನುವಾದಮಾಡಿರುತ್ತದೆ (ಪು. 153) ಎಂದು ಅದನ್ನು ಬಲಪಡಿಸಿರುತ್ತಾರೆ. ಒಂದು ಕಡೆಯಲ್ಲಿ ಶ್ರವಣ ಮನನಗಳೆಂದರೆ **ಧಾರಣೆ;** ನಿದಿ ಧ್ಯಾಸನ ಎಂದರೆ **ಧ್ಯಾನ, ದರ್ಶನ** ಎಂದರೆ ಸಮಾಧಿ – ಎಂದೂ ಅವರು ವಿವರಿಸಿ ರುತ್ತಾರೆ (ಪು. 615) ! ಅದನ್ನು ನೋಡಿದವರಿಗೆ ಯೋಗದರ್ಶನದಲ್ಲಿ ಹೇಳಿರುವ ಸಂಯಮವನ್ನೇ ವೇದಾಂತದಲ್ಲಿಯೂ ಒಪ್ಪಿರುತ್ತದೆ – ಎಂಬುದೇ ಅವರ ಮತ ವೆಂದು ತೋರುವಂತಿದೆ ಇನ್ನು

4. ವಾರ್ತಿಕಕಾರರು **"ಅತೋಽಪುರುಷತನ್ತ್ರತ್ವಾನ್ನಾತ್ಮಜ್ಞಾನೇವಿಧಿರ್ಭವೇತ್ । ಅನ್ವಯಾದಿಕ್ರಿಯಾ ತ್ವಸ್ಯ ತತ್ತನ್ತ್ರತ್ವಾದ್ ವಿಧೀಯತೇ । ಶ್ರವಣಂ ಮನನಂ ತದ್ವತ್ತಥಾ ಶಮದಮಾದಿ ಯತ್ । ಪುಮಾನ್ ಶಕ್ನೋತಿ ತತ್ಕರ್ಮು ತಸ್ಮಾ ದೇತದ್ ವಿಧೀಯತೇ ॥'** **ಬೃ.ವಾ.4.4.120, 122.**

ಜ್ಞಾನವನ್ನು ವಿಧಿಸುವದಕ್ಕಾಗಲಾರದು; ಏಕೆಂದರೆ ಅದು ಪುರುಷತಂತ್ರವಲ್ಲ; ಆದರೆ ಅನ್ವಯವ್ಯತಿರೇಕ, ಶ್ರವಣಾದಿಗಳು ಶಮದಮಾದಿಗಳು – ಇವೆಲ್ಲವೂ ಪುರುಷ ತಂತ್ರವಾಗಿರುವದರಿಂದ ಅವನ್ನು ವಿಧಿಸಿರುತ್ತದೆ ಎಂದಿರುತ್ತಾರೆ.

**ಯಜ್ಞಾದಿಗಳು ಜ್ಞಾನಕ್ಕೆ ಬೇಕೆ?** ಯಜ್ಞಾದಿಗಳು ಶಮದಮಾದಿಗಳೂ ಆಶ್ರಮ ಕರ್ಮಗಳೂ ವಿದ್ಯೋತ್ಪತ್ತಿಗೆ ಬೇಕು; ಅದರಲ್ಲಿಯೂ ಸಾಕ್ಷಾದ್ವಿದ್ಯೋತ್ಪತ್ತಿಗೆಂದೇ ಹೇಳಿ ರುವದರಿಂದ ಶಮಾದಿಗಳು ಅಂತರಂಗಸಾಧನ; ಯಜ್ಞಾದಿಗಳಿಗೆ ವಿವಿದಿಷೆಯನ್ನು ಹೇಳಿರುವದರಿಂದ ಅವು ಬಹಿರಂಗಸಾಧನಗಳು ಎಂದು ಆಚಾರ್ಯರು (ಸೂ.ಭಾ. 3.4.27) ಬರೆದಿರುತ್ತಾರೆ. ಪರಿವ್ರಾಜಕನು ಸರ್ವಕರ್ಮಗಳನ್ನೂ ಸಂನ್ಯಾಸಮಾಡಿದರೂ ಅದರಿಂದ ಅವನಿಗೆ ಪ್ರತ್ಯವಾಯವಾಗುವದಿಲ್ಲ ಏಕೆಂದರೆ ಬ್ರಹ್ಮನಿಷ್ಠೆಯೇ ಅವನಿಗೆ ವಿಹಿತವಾದ ಕರ್ಮ, ಯಜ್ಞಾದಿಗಳು ಮಿಕ್ಕವರಿಗೆ; ಆಯಾ ಆಶ್ರಮದವರು ತಮ್ಮ ಕರ್ಮವನ್ನು ಬಿಟ್ಟರೆ ಅವರವರಿಗೆ ಪ್ರತ್ಯವಾಯವಾಗುತ್ತದೆ. (ಸೂ.ಭಾ. 3.4. 20. ಪು. 441) ಎಂದಿರುತ್ತಾರೆ.

ಈ ವಿಷಯದಲ್ಲಿ ವ್ಯಾಖ್ಯಾನಕಾರರೊಳಗೆ ಇರುವ ಮತಭೇದವನ್ನು ವಿಸ್ತಾರ ಭೀತಿಯಿಂದ ಇಲ್ಲಿ ಹೇಳಿಲ್ಲ. ಭಾಮತೀಪ್ರಸ್ಥಾನಕ್ಕೂ ವಿವರಣಪ್ರಸ್ಥಾನಕ್ಕೂ ಸಾಧನಗಳ ವಿಷಯಕ್ಕಿರುವ ಭಿನ್ನಾಭಿಪ್ರಾಯಗಳನ್ನು "**ಅಧ್ಯಾಸಭಾಷ್ಯಾರ್ಥವಿಮರ್ಶೆ**" ಎಂಬ ಹೆಸರಿನಿಂದ ಕಾರ್ಯಾಲಯದಲ್ಲಿ ಪ್ರಕಟವಾಗಿರುವ ಪುಸ್ತಕದಲ್ಲಿ ಸಂಗ್ರಹಿಸಿರುತ್ತದೆ. (ಅ.ವಿ.ಪು. 72).

# ವಿದ್ಯಾವಿದ್ಯೆಗಳೂ ಸತ್ಯಾನೃತಗಳೂ

ವಿದ್ಯೆ ಎಂದರೆ ಸರಿಯಾದ ತಿಳಿವಳಿಕೆ; ಸತ್ಯವೆಂದರೆ ಬಾಧ್ಯವಾಗದ ಪರಮಾರ್ಥ ಶ್ರೀಮಚ್ಛಂಕರಭಗವತ್ಪಾದರವರು ವ್ಯವಹಾರದಲ್ಲಿರುವ ಸಮ್ಯಗ್ಜ್ಞಾನಕ್ಕಿಂತ ವಿಲಕ್ಷಣವಾದ ತತ್ತ್ವಜ್ಞಾನವನ್ನೇ **ವಿದ್ಯೆ** ಎಂದು ಪಾರಿಭಾಷಿಕವಾಗಿ ಕರೆದಿರುತ್ತಾರೆ. ಕನಸಿನಲ್ಲಿ ಒಬ್ಬನು ಒಂದು ತಪ್ಪುತಿಳಿವಳಿಕೆಯನ್ನು ಕಳೆದುಕೊಂಡು 'ಈವರೆಗೆ ನಾನು ಭಾವಿಸಿಕೊಂಡಿದ್ದದ್ದು ತಪ್ಪು, ಈಗ ಸರಿಯಾಗಿ ನಿಜವನ್ನು ತಿಳಿದುಕೊಂಡೆನು' ಎಂದು ಭಾವಿಸುವಾಗ ದಿಟವಾದ ಜ್ಞಾನವು ತಪ್ಪುತಿಳಿವನ್ನು ಬಾಧಿಸುತ್ತದೆಯಾದರೂ ಎಚ್ಚತ್ತಕೂಡಲೆ ಅದೆಲ್ಲವೂ ಕನಸಿನಲ್ಲಿ ನನಗೆ ಆದ ತಪ್ಪುಭಾವನೆಯೇ ಎಂದು ನಿಶ್ಚಿತವಾಗುವಂತೆ ವೇದಾಂತೋಕ್ತವಾದ ತತ್ತ್ವಜ್ಞಾನವು ಹುಟ್ಟಿದಕೂಡಲೆ ವ್ಯವಹಾರದಲ್ಲಿ ಜನರು ವಿಂಗಡಿಸಿಕೊಂಡಿರುವ ಸಮ್ಯಗ್ಜ್ಞಾನವೂ ಭ್ರಾಂತಿಗಳೂ ಎಲ್ಲವೂ ಭ್ರಾಂತಿಜ್ಞಾನವೇ ಎಂಬ ನಿಶ್ಚಯವಾಗಿ ಬಿಡುತ್ತದೆ. ಆದ್ದರಿಂದ ಆ ದೃಷ್ಟಿಯಿಂದ ಲೌಕಿಕಜ್ಞಾನವೆಲ್ಲವೂ **ಅವಿದ್ಯೆ**ಯಾಗಿ ಬಿಡುತ್ತದೆ. ವ್ಯವಹಾರದ ವಿದ್ಯಾವಿದ್ಯಾವಿಭಾಗವೇನೂ ಇದರಿಂದ ಅಳಿಸಿ ಹೋಗುವದಿಲ್ಲ. ಕನಸಿನ ದೃಷ್ಟಿಯಿಂದ ಆಗಿರುವ ಸರಿಯಾದ ತಿಳಿವಳಿಕೆ, ತಪ್ಪುತಿಳಿವಳಿಕೆ – ಎಂಬ ವಿಭಾಗವು ಕನಸಿರುವವರೆಗೂ ಇದ್ದೇ ಇರುವಂತೆ ವ್ಯವಹಾರದೃಷ್ಟಿಯಿಂದ ನಾವು ನೋಡುತ್ತಿರುವವರೆಗೂ ಲೌಕಿಕ ವಿದ್ಯಾವಿದ್ಯೆಗಳ ವಿಂಗಡವು ಅಚ್ಚಳಿಯದೆ ಇದ್ದುಕೊಂಡಿರುತ್ತದೆ.

ಹೀಗೆಯೇ ಬಾಹ್ಯವಸ್ತುಗಳಲ್ಲಿ ಕೆಲವು ಹಗ್ಗ, ಕಪ್ಪೆಯ ಚಿಪ್ಪು, ಮರಳುಕಾಡು ಎಂಬಂತೆ ಸತ್ಯವಾಗಿರುವವು; ಅವುಗಳಲ್ಲಿ ಜನರಿಗೆ ಭ್ರಾಂತಿಯಿಂದ ತೋರುವ ಹಗ್ಗದ ಹಾವು, ಹುಸಿ ಬೆಳ್ಳಿ – ಬಿಸಿಲುಕುದುರೆಯ ನೀರು – ಮುಂತಾದವುಗಳು ಹುಸಿತೋರಿಕೆಯಾಗಿರುತ್ತವೆ. ಕನಸಿನಲ್ಲಿನಾವು ಕೆಲವು ಪದಾರ್ಥಗಳನ್ನು ಸತ್ಯವೆಂದೂ ಮತ್ತೆ ಕೆಲವನ್ನು

ಹುಸಿಯೆಂದೂ ವಿಂಗಡಿಸಿಕೊಂಡಿದ್ದರೂ ಎಚ್ಚತ್ತ ಕೂಡಲೆ ಅಲ್ಲಿ ತೋರಿದ್ದ ಪದಾರ್ಥಗಳೆಲ್ಲವೂ ಬರಿಯ ತೋರಿಕೆಯೇ ಎಂದು ಗೊತ್ತಾಗಿಬಿಡುವಂತೆ ವ್ಯವಹಾರದಲ್ಲಿ ಜನರು ವಿಂಗಡಿಸಿಕೊಂಡಿರುವ ನಿಜವಾದ ವಸ್ತುಗಳು, ಬರಿಯ ತೋರಿಕೆಗಳು –ಎಂಬಿವೆರಡೂ ಬರಿಯ ತೋರಿಕೆಯೇ; ಆ ತೋರುವ ರೂಪದಿಂದ ಅವು ಎಂದಿಗೂ ನಿಜವಾಗಿರುವದಿಲ್ಲ. ಜ್ಞಾನವುಂಟಾದ ಬಳಿಕ ಎಲ್ಲವೂ **ಮಿಥ್ಯೆ, ಅನೃತ** – ಎಂಬ ನಿಶ್ಚಯವುಂಟಾಗಿಬಿಡುವದು. ವ್ಯವಹಾರದ ಸತ್ಯ, ಅಸತ್ಯ – ಎಂಬ ವಿಂಗಡವೇನೂ ಇದರಿಂದ ಅಳಿಸಿಹೋಗುವದೇ ಇಲ್ಲ. ಕನಸಿನಲ್ಲಿ ತೋರುವ ಪದಾರ್ಥಗಳ ಸತ್ಯಾನೃತವಿಭಾಗವು ಕನಸಿರುವವರೆಗೂ ಹೇಗೆ ಇದ್ದೇ ಇರುವದೋ, ಹಾಗೆಯೇ ವ್ಯವಹಾರದೃಷ್ಟಿಯಿಂದ ನಾವು ನೋಡುತ್ತಿರುವವರೆಗೂ ಲೌಕಿಕಸತ್ಯಮಿಥ್ಯಾ ವಿಭಾಗವು ಇದ್ದೇ ಇರುತ್ತದೆ.

ಲೋಕದಲ್ಲಿ ಯಾವ ಪದಾರ್ಥವು ತನ್ನತನ್ನ ಒಂದು ಅಸಾಧಾರಣಪ್ರಯೋಜನವನ್ನುಂಟುಮಾಡುವದೋ ಅದು ಸತ್ಯ. ಉದಾಹರಣೆಗೆ ಬಾಯಾರಿಕೆಯನ್ನು ಇಂಗಿಸುವ ನೀರು, ಹಸಿವನ್ನು ಅಡಗಿಸುವ ಅನ್ನ – ಇವೆರಡೂ **ಸತ್ಯ.** ಆದರೆ ಮರಳು ಕಾಡಿನಲ್ಲಿ ತೋರುವ ಬಿಸಿಲುಕುದುರೆಯ ನೀರು ನೀರಡಿಕೆಯನ್ನು ಹೋಗಿಸುವ ಪ್ರಯೋಜನವನ್ನುಂಟುಮಾಡಲಾರದು; ಕಪ್ಪೆಯ ಚಿಪ್ಪಿನಲ್ಲಿ ಕಂಡ ಬೆಳ್ಳಿಯು ಆಭರಣವನ್ನು ಮಾಡಿಸಿಕೊಳ್ಳುವ ಪ್ರಯೋಜನವನ್ನುಂಟುಮಾಡಲಾರದು. ಆದ್ದರಿಂದ ಇವೆರಡೂ ಮಿಥ್ಯೆ, ಮಿಥ್ಯೆ, ಅನೃತ, ಮಾಯಿಕ–ಇವೆಲ್ಲ ಒಂದೇ ಅರ್ಥದ ಮಾತುಗಳು. ಆದರೆ ವೇದಾಂತದಲ್ಲಿ ಹೇಳಿರುವ ಆತ್ಮೈಕತ್ವಜ್ಞಾನವು ಬಂದಾಗ **ನಮ್ಮೆಲ್ಲರಿಗೂ ಆತ್ಮನಾಗಿರುವ ಬ್ರಹ್ಮವೊಂದೇ ಸತ್ಯ.** ಬಗೆಬಗೆಯ ಜೀವರುಗಳೂ ಅಚೇತನ ಪದಾರ್ಥಗಳೂ ಸಪ್ರಯೋಜನವಾಗಿರುವವೆಂಬರ್ಥದಲ್ಲಿ ಸತ್ಯವೇ ಆಗಿರುತ್ತಿದ್ದರೂ ನಮ್ಮ ನಿಜವಾದ ಆತ್ಮನು ಸತ್ಯವಾಗಿರುವನೆಂಬ ಅರ್ಥದಲ್ಲಿ ಅವು ಸತ್ಯವಲ್ಲ; ನಮ್ಮ ಎಚ್ಚರವೆಂಬ ಅವಸ್ಥೆಯಲ್ಲಿ ಮಾತ್ರವೇ ಅವು ತೋರುತ್ತಿರುವದರಿಂದಲೂ ತೋರುವಾಗಲೂ ಆತ್ಮನಲ್ಲಿಯೇ ತೋರುತ್ತಿರುವವೇ ಹೊರತು ಆತ್ಮನನ್ನು ಬಿಟ್ಟು ಸ್ವತಂತ್ರವಾಗಿ ತೋರುವದಿಲ್ಲವಾದ್ದರಿಂದಲೂ ಸ್ವಪ್ನಸುಷುಪ್ತಿಗಳಲ್ಲಿ ತೋರದೆ ಅವು ಆತ್ಮನಲ್ಲಿಯೇ ಅಡಗಿಕೊಳ್ಳುವವಾದ್ದರಿಂದಲೂ ಅವುಗಳು ಮಿಥ್ಯೆಯೇ, ಮಾಯಿಕವೇ.

ಹೀಗೆ **ಬ್ರಹ್ಮವಿದ್ಯೆಯ** ದೃಷ್ಟಿಯಿಂದ ನೋಡಿದಾಗ ಜಗತ್ತೂ ಜೀವರೂ ಎಲ್ಲವೂ ಬ್ರಹ್ಮವೇ ಆಗಿರುತ್ತದೆ. ಅದೊಂದೇ ಸತ್ಯ – ಎಂದು ಶ್ರುತಿಯು ಸಾರುತ್ತಿರುವದು.

ಎಚ್ಚರವಾದರೆ ಕನಸೆಲ್ಲವೂ ಹುಸಿಯೆಂದೂ ಅಲ್ಲಿ ಆತ್ಮನೊಬ್ಬನೇ ಸತ್ಯವಾಗಿದ್ದನೆಂದೂ ತಿಳಿಯ ಬರುವಂತೆ ವ್ಯವಹಾರದ ನಿದ್ರೆಯಿಂದ ಎಚ್ಚತ್ತಾಗ ಬ್ರಹ್ಮವೊಂದೇ ಸತ್ಯವಾಗಿರುವದೆಂಬುದನ್ನು ಗೌಡಪಾದಾಚಾರ್ಯರು ಹೀಗೆಂದು ಒಂದು ಶ್ಲೋಕದಲ್ಲಿ ಸಂಗ್ರಹಿಸಿರುತ್ತಾರೆ : **ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ । ಅಜಮನಿದ್ರಮಸ್ವಪ್ನಮದ್ವೈತಂ ಬುಧ್ಯತೇ ತದಾ ॥ ಗೌ.ಕಾ.1.16**

**ಭಾವಾರ್ಥ :** ಎಂದಿನಿಂದೆಂದು ಗೊತ್ತುಮಾಡುವದಕ್ಕಾಗದ ಮಾಯಾ ನಿದ್ರೆಯಿಂದ - ಎಂದರೆ ಅವಿದ್ಯೆಯಿಂದ - ಕನಸು ಕಾಣುತ್ತಿರುವ ಜೀವನು ಯಾವಾಗ ಶಾಸ್ತ್ರಾಚಾರ್ಯರ ಬೋಧೆಯಿಂದ ಎಚ್ಚರುವನೋ, ಆಗ ನಾನು ಜನ್ಮಾದಿವಿಕಾರವಿಲ್ಲದವನು, ಅಜ್ಞಾನವಿಲ್ಲದವನು, ಭ್ರಾಂತಿಯಿಲ್ಲದವನು, ಅದ್ವೈತತತ್ತ್ವವೇ ನಾನು ಎಂಬುದನ್ನು ಅರಿತುಕೊಳ್ಳುವನು.

ಖಖಖಖಖ

# ಶಾಂಕರಾದ್ವೈತದಲ್ಲಿ ಅವಿದ್ಯೆ ಎಂದರೇನು?

ಶ್ರೀಶಂಕರಾಚಾರ್ಯರವರು ಆತ್ಮಾನಾತ್ಮರ ಇತರೇತರಾಧ್ಯಾಸವೆಂಬ ಭ್ರಾಂತಿ ಜ್ಞಾನವೇ ಅವಿದ್ಯೆಯೆಂದು **'ತಮೇತಮೇವಂಲಕ್ಷಣಮಧ್ಯಾಸಂ ಪಣ್ಡಿತಾ ಅವಿದ್ಯೇತಿ ಮನ್ಯನ್ತೇ'** ಎಂಬ ಲಕ್ಷಣವಾಕ್ಯದಿಂದ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಹೀಗಿರುವದರಿಂದ 'ಅವ್ಯಕ್ತ', 'ನಾಮರೂಪ' 'ಮಾಯೆ'- ಮುಂತಾದ ಹೆಸರುಗಳಿಂದ ಕರೆದಿರುವ 'ಪ್ರಕೃತಿಯೇ ಅವಿದ್ಯೆ' ಎಂದು ಹೇಳುವ ವ್ಯಾಖ್ಯಾನಕಾರರು ಎಂದಿಗೂ ಶಾಂಕರ ಪ್ರಸ್ಥಾನದ ಅನುಯಾಯಿಗಳೆಂದು ಆಗುವದಿಲ್ಲವೆಂಬುದು ಸ್ಫುಟವಾಗಿರುತ್ತದೆ.

ಆಚಾರ್ಯರವರು ಮೇಲೆ ಉದಾಹರಿಸಿರುವ ಭಾಷ್ಯವಾಕ್ಯದಲ್ಲಿ ಮಾತ್ರವೇ ಅಲ್ಲ, ಇನ್ನೊಂದು (2.3.48) ಸೂತ್ರದ ಭಾಷ್ಯದಲ್ಲಿ : **'ಕಃ ಪುನರ್ದೇಹಸಂಬನ್ಧಃ? ದೇಹಾದಿರಯಂ ಸಙ್ಘಾತೋಽಹಮೇವೇತ್ಯಾತ್ಮನಿ ವಿಪರೀತಪ್ರತ್ಯಯೋತ್ಪತ್ತಿಃ । ...... ನ ಹ್ಯಸ್ಯಾಃ ಸಮ್ಯಗ್ದರ್ಶನಾದನ್ಯನ್ನಿವಾರಕಮಸ್ತಿ । ಪ್ರಾಕ್ತು ಸಮ್ಯಗ್ದರ್ಶನಾತ್ ಪ್ರತತೈಷಾ ಭ್ರಾನ್ತಿಃ ಸರ್ವಜನ್ತುಷು । 'ತದೇವಮವಿದ್ಯಾನಿಮಿತ್ತದೇಹಾದ್ಯುಪಾಧಿ ಸಂಬನ್ಧಕೃತಾದ್ ವಿಶೇಷಾದ್ ಐಕಾತ್ಮ್ಯಾಭ್ಯುಪಗಮೇಽಪಿ ಅನುಜ್ಞಾಪರಿಹಾರೌ ಅವಕಲ್ಪ್ಯೇತೇ ॥'** ಎಂಬ ವಾಕ್ಯದಲ್ಲಿ ಸಮ್ಯಗ್ದರ್ಶನರೂಪವಾದ ವಿದ್ಯೆಯಿಂದ ಬಾಧಿತ

ವಾಗುವ ವಿಪರೀತ ಪ್ರತ್ಯಯ (ತಪ್ಪುತಿಳಿವಳಿಕೆ), ಭ್ರಾಂತಿ - ಇವುಗಳನ್ನೇ 'ಅವಿದ್ಯೆ' ಎಂಬ ಶಬ್ದದಿಂದ ಪರಾಮರ್ಶಿಸಿರುತ್ತಾರೆ. ಪ್ರಶ್ನೋಪನಿಷತ್ತಿನ ಭಾಷ್ಯದಲ್ಲಿಯೂ:

**'ಯಸ್ತ್ವಮೇವ ಅಸ್ಮಾಕಮ್ ಅವಿದ್ಯಾಯಾಃ ವಿಪರೀತಜ್ಞಾನಾತ್....... ವಿದ್ಯಾಪ್ಲವೇನ ಪರಮ್ ಅಪುನರಾವೃತ್ತಿಲಕ್ಷಣಂ ಮೋಕ್ಷಾಖ್ಯಂ ಮಹೋದಧೇರಿವ ಪಾರಂ ತಾರಯಸ್ಯಸ್ಮಾನ್' ಪ್ರ. 6.8**

ಎಂಬ ವಾಕ್ಯದಲ್ಲಿ ಅವಿದ್ಯೆ ಎಂದರೆ ವಿಪರೀತ ಜ್ಞಾನ (ತಪ್ಪು ತಿಳಿವಳಿಕೆ), ಇದನ್ನು ಕಳೆದು ವಿದ್ಯೆಯಿಂದ ಈ ಅವಿದ್ಯಾಸಾಗರದ ಮತ್ತೊಂದು ದಡಕ್ಕೆ ನಮ್ಮನ್ನು ಸೇರಿಸಿ ರುತ್ತೀಯೆ - ಎಂದು ಬರೆದಿರುವದರಿಂದ ವಿದ್ಯೆಯಿಂದ ಬಾಧಿತವಾಗುವ ಅವಿದ್ಯೆ ಯೆಂಬುದು ತಪ್ಪಾಗಿ ತಿಳಿದುಕೊಳ್ಳುವದೆಂಬ ಭ್ರಾಂತಿಯೇ ಎಂದಾಯಿತು.

ಪ್ರಕೃತಿಯನ್ನು ಅವಿದ್ಯೆಯೆಂದು ಕರೆದಿರುವ ಭಾಷ್ಯವಾಕ್ಯವು ಎಲ್ಲಿಯೂ ಕಾಣುವದಿಲ್ಲ, ಇದಕ್ಕೆ ಬದಲಾಗಿ ಪ್ರಕೃತಿಯು 'ಅವಿದ್ಯೆಯಿಂದ ಕಲ್ಪಿತ'ವಾಗಿದೆ ಎಂದು ಸುಸ್ಫುಟವಾಗಿ ಭಾಷ್ಯಕಾರರು ಹೇಳಿರುತ್ತಾರೆ. ಹೇಗೆಂದರೆ :

**1. ಅವಿದ್ಯಾ ಕಲ್ಪಿತೇ ನಾಮರೂಪೇ......ಸರ್ವಜ್ಞಸ್ಯ ಈಶ್ವರಸ್ಯ ಮಾಯಾ ಶಕ್ತಿಃ, ಪ್ರಕೃತಿಃ - ಇತಿ ಶ್ರುತಿಸ್ಮೃತ್ಯೋರಭಿಲಪ್ಯೇತೇ ॥ (ಸೂ.ಭಾ.2.1.14)**
(ನಾಮ ರೂಪ ಮಾಯೆ, ಶಕ್ತಿ- ಈ ಹೆಸರುಗಳಿಂದ ಕರೆಯುವ ಪ್ರಕೃತಿಯು ಅವಿದ್ಯಾ ಕಲ್ಪಿತವೆಂದು ಇಲ್ಲಿ ಹೇಳಿದೆ.)

**2. ಅವಿದ್ಯಾಕಲ್ಪಿತೇನ ಚ ನಾಮರೂಪಲಕ್ಷಣೇನ ರೂಪಭೇದೇನ ವ್ಯಾಕೃತಾ ವ್ಯಾಕೃತಾತ್ಮಕೇನ....ಬ್ರಹ್ಮ, ಪರಿಣಾಮಾದಿಸರ್ವವ್ಯವಹಾರಾಸ್ಪದತ್ವಂ ಪ್ರತಿಪದ್ಯತೇ ॥ (ಸೂ.ಭಾ.2.1.27)**
ಇಲ್ಲಿಯೂ ನಾಮರೂಪ, ಅವ್ಯಾಕೃತ - ಇವು ಅವಿದ್ಯಾಕಲ್ಪಿತವೆಂದು ಹೇಳಿರುತ್ತದೆ. ವ್ಯಾಖ್ಯಾನಕಾರರ ಮತದಂತೆ ಅವಿದ್ಯೆ, ಮಾಯೆ, ಅವ್ಯಕ್ತ - ಎಂಬ ಹೆಸರುಗಳು ನಾಮರೂಪಬೀಜದವೇ ಆಗಿರುವದರಿಂದ ಭಾಷ್ಯಕಾರರು ಮೇಲಿನ ವಾಕ್ಯಗಳಲ್ಲಿ 'ಅವಿದ್ಯೆಯೂ ಅವಿದ್ಯಾಕಲ್ಪಿತ'ವೆಂದೇ ಹೇಳಿದಂತೆ ಆಗುವದಿಲ್ಲವೆ?

ಆದ್ದರಿಂದ ಅವ್ಯಕ್ತವು ಅಥವಾ ಅವ್ಯಾಕೃತವು ಅವಿದ್ಯೆ ಎಂಬುದು ಭಾಷ್ಯಸಮ್ಮತ ವಲ್ಲ, ಅವ್ಯಕ್ತವೂ ವ್ಯಕ್ತವೂ ಅಧ್ಯಾಸರೂಪವಾದ ಅವಿದ್ಯೆಯಿಂದ ಕಲ್ಪಿತವಾಗಿರುತ್ತವೆ

ಯಾದ್ದರಿಂದ ವಿದ್ಯೆಯಿಂದ ಆ ಅವಿದ್ಯೆಯು ಅಥವಾ ಮಿಥ್ಯಾಜ್ಞಾನವು ಬಾಧಿತವಾಗುತ್ತದೆ. ಆಗ ಆ ಅವಿದ್ಯೆಯಿಂದ ಕಲ್ಪಿತವಾದ ಅವ್ಯಕ್ತವೂ ವ್ಯಕ್ತವೂ ಎಲ್ಲವೂ ಬಾಧಿತವಾಗುತ್ತವೆ ಎಂಬುದೇ ಭಾಷ್ಯಕಾರರ ಮತವೆಂದು ಸಿದ್ಧವಾಗುತ್ತದೆ.

ಯುಕ್ತಿಯಿಂದ ನೋಡಿದರೂ ವಿದ್ಯೆಯು– ಎಂದರೆ ಸರಿಯಾದ ತಿಳಿವಳಿಕೆಯು ಅವಿದ್ಯೆ(ತಪ್ಪುಕಲ್ಪನೆ)ಯನ್ನು ಬಾಧಿಸುವದೆಂಬುದು ಹೊಂದಿಕೆಯಾಗುತ್ತದೆ. ನಾಮರೂಪ ಅಥವಾ ಪ್ರಕೃತಿಯು ವಸ್ತುರೂಪವಾಗಿರುವದರಿಂದ ಅದು ಸಮ್ಯಗ್ಜ್ಞಾನದಿಂದ ಬಾಧಿತವಾದೀತೇ? ಹಾಗೆಂದು ಭಾಷ್ಯಕಾರರು ಹೇಳದೆ ಇದ್ದರೂ ಜ್ಞಾನವು ವಸ್ತುವನ್ನು ಬಾಧಿಸುತ್ತದೆ ಎಂಬುದು ಭಾಷ್ಯಕಾರರ ಮತವೆಂದು ಕಲ್ಪಿಸಿದರೆ ಇದನ್ನು ಯಾರಾದರೂ ನಂಬಬಹುದೇ?

ಹೀಗಿರುವದರಿಂದ ಅವ್ಯಕ್ತವು, ಅಥವಾ ಪ್ರಕೃತಿಯು 'ಅವಿದ್ಯೆ' ಎಂಬುದು ಭಾಷ್ಯಸಮ್ಮತವಲ್ಲ, ಹಾಗೆ ಹೇಳುವದು ಯುಕ್ತಿ ಯುಕ್ತವೂ ಅಲ್ಲ – ಎಂದೇ ತೀರ್ಮಾನಿಸಬೇಕಾಗಿರುತ್ತದೆ.

# ಅಭಿನವಶಂಕರಾಲಯದಲ್ಲಿ ಉಪನ್ಯಾಸಗಳು

ಮೈಸೂರಿನ ಅಭಿನವಶಂಕರಾಲಯದಲ್ಲಿ ಶ್ರೀಶಂಕರಸಪ್ತಾಹ ಮಹೋತ್ಸವವು ಜರುಗಿದಿಂದೀಚೆಗೆ ಮೇಲಿಂದ ಮೇಲೆ ಪ್ರತಿ ಭಾನುವಾರವೂ ವೇದಾಂತೋಪನ್ಯಾಸಗಳಾಗುತ್ತಿವೆಯಂತೆ. ಇವುಗಳಲ್ಲಿ ನಾನುಹೋಗಿ ಕೇಳಿದ ಕೆಲವು ಉಪನ್ಯಾಸಗಳ ವಿಚಾರವನ್ನು ವಾಚಕರ ತಿಳಿವಳಿಕೆಗೆ ತರುವದರಿಂದ ಪ್ರಯೋಜನವುಂಟೆಂದು ತಿಳಿದು ಇಲ್ಲಿ ಸಂಕ್ಷಿಪ್ತವಾಗಿ ಅವುಗಳ ವಿಚಾರವನ್ನು ಕೊಡುವೆನು.

ತಾರೀಖು 23.7.1939 ರಲ್ಲಿ ಸಾಹಿತ್ಯರತ್ನಂ ಆಸ್ಥಾನಮಹಾವಿದ್ವಾನ್ ಬ್ರ।ಶ್ರೀ। ವೇ। ಕೆ.ಗೋಪಾಲಕೃಷ್ಣಶಾಸ್ತ್ರಿಗಳವರು "ಜೀವನ್ಮುಕ್ತರ ಭಾವನೆ" ಎಂಬ ವಿಷಯದಲ್ಲಿ ಉಪನ್ಯಾಸವನ್ನು ಮಾಡಿದರು. ಆ ದಿನ ಜೀವನ್ಮುಕ್ತರ ವಿಚಾರವನ್ನೇನೂ ಭಾಷಣಕಾರರು ಅಷ್ಟಾಗಿ ವಿವರಿಸಲಿಲ್ಲವಾದರೂ

**ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ ।**
**ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ॥**

ಎಂಬ ಶ್ಲೋಕದ ವಿವರಣೆಯನ್ನು ಮಾಡುವದಕ್ಕೆ ಪ್ರಾರಂಭಿಸಿ, ಬ್ರಹ್ಮವು ನಿರ್ಗುಣವಾದ ಜ್ಞೇಯನೆಂದೂ ಸಗುಣವಾಗಿ ಉಪಾಸ್ಯವೆಂದೂ ಎರಡು ಬಗೆಯಾಗಿದೆ; ನಿರ್ಗುಣ ಜ್ಞಾನವನ್ನು ಉಪಾಸನೆಯೆಂದು, ಕೆಲವರು ಅರ್ಥಮಾಡಿರುವದು ಸಂಪ್ರದಾಯವು ಗೊತ್ತಿಲ್ಲದೆ – ಎಂಬುದನ್ನು ತಿಳಿಸಿಕೊಟ್ಟರು.

ಆಮೇಲೆ ಜ್ಞಾನವೇ ಅಜ್ಞಾನವನ್ನು ನಾಶಮಾಡತಕ್ಕದ್ದು ಎಂದು ಹೇಳಿ ಅಜ್ಞಾನದ ಸ್ವಭಾವವನ್ನು ವಿವರಿಸುವದಕ್ಕೆ ಮೊದಲು ಮಾಡಿದರು. ಅಜ್ಞಾನವು ಭಾವವಲ್ಲ; ಅಭಾವವು;* ಶೂನ್ಯರೂಪವಾದದ್ದು. ಅವಿದ್ಯೆ, ಮಾಯೆ, ಶಕ್ತಿ, ಪ್ರಧಾನ, ಅವ್ಯಕ್ತ, ಸೂಕ್ಷ್ಮ, ಬೀಜ – ಇವೆಲ್ಲ ಪರ್ಯಾಯಪದಗಳು. ಅಜ್ಞಾನದಲ್ಲಿ ಆವರಣ, ವಿಕ್ಷೇಪ ಗಳೆಂಬ ಎರಡು ಶಕ್ತಿಗಳುಂಟು; ವಿಕ್ಷೇಪಕ್ಕೆ ಮೂಲವಾದ್ದರಿಂದ ಅದನ್ನು **'ಮೂಲಾವಿದ್ಯೆ'** ಯೆಂದು ಕರೆಯುತ್ತಾರೆ. ಇದು ಬ್ರಹ್ಮದ ಶಕ್ತಿಯು, ಬೆಂಕಿಗೂ ಸುಡುವ ಶಕ್ತಿಗೂ ಭೇದವಿಲ್ಲದಿರುವಂತೆ, ಬ್ರಹ್ಮಕ್ಕೂ ಅದರ ಶಕ್ತಿಯಾದ ಅವಿದ್ಯೆಗೂ ಭೇದವಿಲ್ಲ; ಆದ್ದರಿಂದ ಅದು ಜ್ಞಾನಬಾಧ್ಯವಾಗಬಹುದು (!), ಈ ಶಕ್ತಿಯು ಕಾರ್ಯಗಮ್ಯವಾದದ್ದು; ಸತ್ತೂ ಅಲ್ಲ, ಅಸತ್ತೂ ಅಲ್ಲ, ಅನಿರ್ವಚನೀಯವಾದದ್ದು – ಎಂದು ಹೇಳಿದರು.

ಈ ಮಾಯೆ ಜೀವನಿಗೆ ಅನರ್ಥಕಾರಿಯಾಗುತ್ತದೆ. ಈಶ್ವರನಿಗೆ ಅನರ್ಥಕಾರಿಯಲ್ಲ ಎಂದು ತಿಳಿಸಿ, ಆ ದಿನ ಹೊತ್ತಾದ್ದರಿಂದ ಅಷ್ಟಕ್ಕೆ ಉಪನ್ಯಾಸವನ್ನು ಮುಗಿಸಿದರು.

ತಾ. 30.7.1939ನೆಯ ಭಾನುವಾರ ಉಪನ್ಯಾಸವು ಮುಂದುವರಿಯಿತು. ಆ ದಿನ ಬ್ರ॥ಶ್ರೀ॥ ಶಾಸ್ತ್ರಿಗಳವರು 'ಅವಿದ್ಯಾಸ್ವರೂಪ'ವನ್ನು ಇನ್ನೂ ಸ್ವಲ್ಪ ವಿವರವಾಗಿ ಹೇಳುವದಕ್ಕೆ ಮೊದಲು ಮಾಡಿ **'ಜ್ಞಾನಾಭಾವಾದಿತ್ರಯಭಿನ್ನಾ, ಅನಾದಿಃ, ಭಾವರೂಪಾ, ಅನಿರ್ವಚನೀಯಾ, ಜ್ಞಾನನಾಶ್ಯಾ ಅವಿದ್ಯಾ'** ಎಂದೇ ಹೇಳಬೇಕು.

---

*ಇಲ್ಲಿ ಉಪನ್ಯಾಸಕರು ಅಭಾವಕ್ಕೆ ಉತ್ಪತ್ತಿಕಾರಣತ್ವವಿಲ್ಲವೆಂಬುದನ್ನು ಹೇಳಿ ಇದನ್ನು ಸಪ್ತಾಹದಲ್ಲಿ ವಿವರಿಸಿದ್ದೇನೆಂದರು; "ಸಪ್ತಾಹದಲ್ಲಿ ತಮ್ಮ ಉಪನ್ಯಾಸವಾದ ಮೇಲೆ ಅನುವಾದಕರು **'ವಿವೇಕಗ್ರಹಣಾಭಾವನಿಬನ್ಧನಃ"** ಎಂದು ಗ್ರಹಣಾಭಾವವು ಅಧ್ಯಾಸಕಾರಣವೆಂದು ಹೇಳಿರುವ ಭಾಷ್ಯವಾಕ್ಯವನ್ನುದಾಹರಿಸಿದ್ದರಷ್ಟೆ; ಅದನ್ನೂ ಅನುವಾದಮಾಡಿ ಏಕವಾಕ್ಯತೆಯನ್ನು ತೋರಿಸಬೇಕು ಎಂದು ನಾನು ಕೇಳಿಕೊಂಡೆನು. ಬ್ರ।ಶ್ರೀ।ಶಾಸ್ತ್ರಿಗಳವರು ಅದಕ್ಕೆ ಉತ್ತರ ಹೇಳಲಿಲ್ಲ; ಸಭೆಯವರು ಸಂದೇಹವನ್ನು ಕೇಳುವ ಪದ್ಧತಿಯಿಲ್ಲವೆಂದು ಹೇಳಿದ್ದರಿಂದ ಆ ದಿನ ಈ ವಿಷಯ ಮುಂದಕ್ಕೆ ಚರ್ಚೆಯಾಗಲಿಲ್ಲ.

ಭಾಸ್ಕರರು* ಅದು ಜ್ಞಾನಾಭಾವವೇ ಎಂದು ಹೇಳುತ್ತಾರೆ; ಆದರೆ ಅಭಾವದಿಂದ ಉತ್ಪತ್ತಿಯನ್ನು ಹೇಳುವದು ಪ್ರಮಾಣವಿರುದ್ಧವಾದದ್ದು. ಬೌದ್ಧರೂ+ ಹಾಗೆ ಹೇಳುತ್ತಾರೆ; ಅದು ಸಂಪ್ರದಾಯವಿರುದ್ಧವಾದದ್ದು. **'ನಾಸದಾಸೀತ್'** ಎಂಬ ಮಂತ್ರವೂ, ಪಂಚದಶೀ ಪಂಚಪಾದಿಕಾಕಾರರ ++ ವಚನವೂ, ಅವಿದ್ಯೆಯು ಈ ಸ್ವರೂಪವೆಂಬುದಕ್ಕೆ ಪ್ರಮಾಣ – ಎಂದು ವಿವರಿಸಿದರು.

**'ಯತ್ರ ಯತ್ರ ಅನಾದಿತ್ವೇ ಸತಿ ಭಾವತ್ವಂ ತತ್ರ ತತ್ರ ನಿತ್ಯತ್ವಮ್'** (ಎಲ್ಲೆಲ್ಲಿ ಅನಾದಿಭಾವರೂಪತ್ವವಿರುವದೋ ಅಲ್ಲಲ್ಲಿ ನಿತ್ಯತ್ವವಿರುವದು) ಎಂದು ಹೇಳಿದರೇನು ಮಾಡುತ್ತೀರೆನ್ನಬಹುದು. ಆದರೆ **'ಭೂಯಶ್ಚಾನ್ತೇ ವಿಶ್ವಮಾಯಾನಿವೃತ್ತಿಃ'** (ಕೊನೆಗೆ ಎಲ್ಲಾ ಮಾಯೆಯೂ ನಿವೃತ್ತಿಯಾಗುವದು)ಎಂಬ ಶ್ರುತಿಪ್ರಾಮಾಣ್ಯದಿಂದ ಈ ಯುಕ್ತಿಗೆ ಪ್ರಾಮಾಣ್ಯವಿಲ್ಲ (!). ಆದ್ದರಿಂದ ಇದು ಜ್ಞಾನದಿಂದ ನಿವೃತ್ತಿಯಾಗಬಹುದಾಗಿದೆ.

ಇದು ಸುಷುಪ್ತಿಯಲ್ಲಿಯೂ ಸಮಾಧಿಯಲ್ಲಿಯೂ ಆವರಣವಾಗಿರುತ್ತದೆ. ಇದಕ್ಕೆ ಪ್ರಮಾಣವು ಸೂತ್ರಭಾಷ್ಯ* "2-1-9 (ಇದರಲ್ಲಿ **'ಸುಷುಪ್ತಿ ಸಮಾಧ್ಯಾದಾವಪಿ'**ಎಂಬ ಮಾತಿದೆ); 2-3-31 (ಇದರಲ್ಲಿ **'ಅವಿದ್ಯಾತ್ಮಕ ಬೀಜಸದ್ಭಾವ**

---

* ಭಾಸ್ಕರಾಚಾರ್ಯರು ಹೀಗೆಂದು ಹೇಳಿಲ್ಲ. **"ಜೀವಸ್ಯ ವಸ್ತುಭೂತಸ್ಯ ದೇಹಾದಿಷ್ವನಾತ್ಮಸು ವಿಪರೀತಜ್ಞಾನಂ ಬ್ರಹ್ಮಸ್ವರೂಪಾಪ್ರತಿಪತ್ತಿಶ್ಚ ತದುಭಯಂ ಗ್ರಹಣಾಗ್ರಹಣಮವಿದ್ಯಾ"** (ಜೀವನು ಅನಾತ್ಮವಾದ ದೇಹಾದಿಗಳನ್ನು ತಾನೆಂದು ತಿಳಿದುಕೊಂಡಿರುವದೂ ಬ್ರಹ್ಮಸ್ವರೂಪವನ್ನು ತಿಳಿಯದಿರುವದೂ ಅವಿದ್ಯೆ) ಎಂದು ಅವರು ಹೇಳುತ್ತಾರೆ. ಅವರ 1-1-4 ಸೂತ್ರಭಾಷ್ಯವನ್ನು ನೋಡಿರಿ. **ಸಂಪಾದಕರು, ಅ.ಪ್ರ.**

+ ಬೌದ್ಧರೂ ಅವಿದ್ಯೆಯನ್ನು ಅಭಾವರೂಪವೆಂದಿಲ್ಲ; ಅನೇಕವಾಗಿರುವ ಪ್ರಥಿವ್ಯಾದಿ ಧಾತುಗಳ ಸಮೂಹವನ್ನು ಒಂದು ಶರೀರ, ನಿತ್ಯ, ಸುಖ – ಎಂದು ಮುಂತಾಗಿ ಭಾವಿಸುವದೇ ಅವಿದ್ಯೆ ಎಂದು ಅವರು ಹೇಳುತ್ತಾರೆಂತ ಬ್ರ.ಸೂ. 2-2-19ರ ಭಾಷ್ಯದ ಭಾಮತೀ ವ್ಯಾಖ್ಯಾನದಲ್ಲಿ ವಿವರಿಸಿದೆ. **ಸಂಪಾದಕರು, ಅ.ಪ್ರ.**

++ ಪಂಚದಶಿಯಲ್ಲಾಗಲಿ ಪಂಚಪಾದಿಕೆಯಲ್ಲಾಗಲಿ **'ಜ್ಞಾನಾತಿಭಾವಾದಿ ತ್ರಯಭಿನ್ನಾ'** ಎಂಬ ಮಾತಿಲ್ಲ; ಆದರೆ ಈ ಅಭಿಪ್ರಾಯಕ್ಕೆ ಹೊಂದುವ ಕೆಲವು ಮಾತುಗಳಿವೆ. **ಸಂಪಾದಕರು, ಅ.ಪ್ರ.**

*ಆವರಣವಾಗಿರುತ್ತದೆ ಎಂಬ ಮಾತು ಈ ಸೂತ್ರಭಾಷ್ಯಗಳಲ್ಲಿಲ್ಲ. **ಸಂಪಾದಕರು, ಅ.ಪ್ರ.**

**ಕಾರಿತಮ್'** ಎಂಬ ಮಾತಿದೆ.) ಅದು ಜ್ಞಾನವು ಬರುವವರೆಗೂ ಇದ್ದೇ ಇರುತ್ತದೆ. ಅಜ್ಞಾನವು ಭಾವವೂ ಅಲ್ಲದೆ (!) ಅಭಾವವೂ ಅಲ್ಲದೆ ಅನಿರ್ವಚನೀಯವಾಗಿರುವ ದರಿಂದ ಅದು ಜ್ಞಾನದಿಂದ ನಿವೃತ್ತಿಯಾಗಬಹುದಾಗಿದೆ – ಎಂದು ಅವಿದ್ಯಾ ವಿಚಾರ ವನ್ನು ಉಪಸಂಹಾರ ಮಾಡಿದರು.

ಇಲ್ಲಿಗೆ ಈ ಚರ್ಚೆಯನ್ನು ನಿಲ್ಲಿಸಿ ಉಪನ್ಯಾಸಕರು ವಿಷ್ಣುಪುರಾಣದಿಂದ ಜಡಭರತನಿದಾಘರ ಉಪಾಖ್ಯಾನವನ್ನು ಹೃದಯಂಗಮವಾಗಿ ಹೇಳಿ ಆ ದಿನದ ತಮ್ಮ ಭಾಷಣವನ್ನು ಮುಗಿಸಿದರು.

ಭಾಷಣದ ಕೊನೆಯಲ್ಲಿ ಉಪನ್ಯಾಸಕರ ಅನುಮತಿಯನ್ನು ಪಡೆದು ನಾನು ಕೆಲವು ಸಂಶಯಗಳನ್ನು ಸಭೆಯ ಮುಂದಿಟ್ಟೆನು; ಆಗ ಮೈಸೂರು ಮಹಾರಾಜ ಸಂಸ್ಕೃತ ಕಾಲೇಜಿನ ವೇದಾಂತ ಪ್ರೊಫೆಸರಾಗಿರುವ ವಿದ್ವಾನ್ ಬ್ರ॥ಶ್ರೀ॥ ಪಾಲಘಾಟು ನಾರಾಯಣಶಾಸ್ತ್ರಿಗಳು ನನ್ನ ಪ್ರಶ್ನೆಗಳಿಗೆಲ್ಲ ಉತ್ತರವನ್ನು ಕೊಡುತ್ತಾ ಬಂದರು. ಮುಖ್ಯ ವಾದ ಪ್ರಶ್ನೋತ್ತರಗಳನ್ನು ಇಲ್ಲಿ ಕೊಟ್ಟಿರುತ್ತೇನೆ –

ಪ್ರಶ್ನೆ : ಅವಿದ್ಯೆಯು ಜಗತ್ತಿಗೆ ಉಪಾದಾನಕಾರಣವಾದರೆ ಜಗತ್ತಿಗೆ ಅವಿದ್ಯೆಯೇ ಸ್ವರೂಪವೆಂದಾಗುವದಿಲ್ಲವೆ?

ಉತ್ತರ : ಅವಿದ್ಯೆಯು ಉಪಾದಾನಕಾರಣವಲ್ಲ; ವಿವರ್ತೋಪಾದಾನಕಾರಣ. **'ಮೃತ್ತ್ವಾದ್ಯನುಪಮರ್ದನೇನ ಕಾರ್ಯಘಟಾದ್ಯಾಕಾರೇಣ ಪರಿಣಮ ಮಾನತ್ವಂ ವಿವರ್ತತ್ವಮ್; ಕ್ಷೀರಾದಿ ತು ಕ್ಷೀರತ್ವಾದಿಕಮುಪಮೃದ್ಯೈವ ದಧ್ಯಾದ್ಯಾಕಾರೇಣ ಪರಿಣಮತೇ'** (ಮಣ್ಣು ಮುಂತಾದದ್ದು ಮಣ್ಣು ಮುಂತಾದ ರೂಪವನ್ನು ಬಿಡದೆಯೇ ಕಾರ್ಯವಾದ ಗಡಿಗೆಯೇ ಮುಂತಾದ ರೂಪವನ್ನು ತಳೆಯುವದು ವಿವರ್ತವೆನಿಸುವದು; ಹಾಲು ಮುಂತಾದದ್ದು ಮೊಸರೇ ಮುಂತಾದ ಕಾರ್ಯವಾಗುವಾಗ ಹಾಲಿನ ಸ್ವರೂಪವನ್ನು ಬಿಟ್ಟೇ ಮಾರ್ಪಡುತ್ತದೆ.)

ಪ್ರಶ್ನೆ : ಹಾಗಾದರೂ ವಿವರ್ತೋಪಾದಾನಕಾರಣವಾದ ಮಣ್ಣಿನ ರೂಪದಲ್ಲಿಯೇ ಮಡಕೆ ಮುಂತಾದವುಗಳಿರುವಂತೆ ಅವಿದ್ಯೆಯೇ ಜಗತ್ತಿನ ರೂಪವಾಗಲಿ ಎಂದರೊ?(ಇದಕ್ಕೆ ಉತ್ತರವು ಬರಲಿಲ್ಲ)

ಪ್ರಶ್ನೆ : ಬ್ರಹ್ಮವನ್ನು ಬಿಟ್ಟು ಬೇರೊಂದನ್ನು ಕಾರಣವೆಂತ ಭಾಷ್ಯಕಾರರು ಎಲ್ಲಿಯಾದರೂ ಹೇಳಿದ್ದಾರೆಯೆ?

ಉತ್ತರ : ಅವಿದ್ಯೆಯ ಮೂಲಕವೇ ಬ್ರಹ್ಮವು ಕಾರಣವೆಂತ ಹೇಳಬೇಕು; ಹಾಗಿಲ್ಲದೆ ಬೇರೆಯಾಗಿ ಯಾರಾದರೂ ಹೇಳಲಿ, ನೋಡೋಣ?

ಪ್ರಶ್ನೆ : ಕಾರ್ಯವು ಪರಮಾರ್ಥವೆಂದು ಮಾಡಿಕೊಂಡಿರುವವರಿಗೆ ಅದಕ್ಕೆ ತಕ್ಕಂತೆ ಬ್ರಹ್ಮವು ಕಾರಣವೆಂದು ಹೇಳಿದ್ದಾರೆಯೇ ಹೊರತು ನಿಜವಾಗಿ ವೇದಾಂತ ಶಾಸ್ತ್ರದಲ್ಲಿ ಬ್ರಹ್ಮಕ್ಕೆ ಕಾರಣತ್ವವಿಲ್ಲ – ಎಂದೂ ಕಾರ್ಯಕಾರಣಾನನ್ಯತ್ವ ವಿಚಾರವನ್ನು ಬಗೆಹರಿಸುವದಕ್ಕೆ ಆಗುವದಿಲ್ಲವೆ? ಅವಿದ್ಯೆಯನ್ನು ಈ ದಿನದ ಉಪನ್ಯಾಸಕರು ಹೇಳಿರುವಂತೆ ಒಪ್ಪಿದರೆ ಅದು ಪರಮಾರ್ಥವೆಂದೂ ಕಾರಣತ್ವವೂ ಪರಮಾರ್ಥವೆಂದೂ ಆಗುವದಿಲ್ಲವೆ? ಆಗ ಜಗತ್ತು ಅವಿದ್ಯೆಗಿಂತ ಬೇರೆಯಲ್ಲವೆಂದು ಆಗುತ್ತದೆಯಲ್ಲವೆ?

ಉತ್ತರ : ಹೌದು, ಮಾಂಡೂಕ್ಯದಲ್ಲಿ ಕಾರ್ಯಕಾರಣತ್ವವೇ ಇಲ್ಲವೆಂದು ಹೇಳಿರುವದು ನಿಜ. ಆದರೆ ಅದು ಯಾರಿಗೆ? ನಮಗಲ್ಲ, ಜೀವನ್ಮುಕ್ತರಿಗೆ ಸಮಾಧಿಸ್ಥರಿಗೆ.

ಪ್ರಶ್ನೆ : ಸಮಾಧಿಸ್ಥರಿಗೂ ಜೀವನ್ಮುಕ್ತರಿಗೂ ನೀವು ಹೇಳುವ ಅಜ್ಞಾನವು ಜ್ಞಾನದಿಂದ ಹೇಗೆ ಹೋಯಿತು – ಎಂದಲ್ಲವೆ ನಾನು ಕೇಳುವದು?

ಅವರ ಪ್ರಶ್ನೆ : ಶ್ರುತಿಸ್ಮೃತಿಗಳಲ್ಲೆಲ್ಲ ಅಜ್ಞಾನವು ಜ್ಞಾನಬಾಧ್ಯವೆಂದು ಹೇಳಿದೆಯಲ್ಲ!

ನನ್ನ ಉತ್ತರ : ಅಜ್ಞಾನವೆಂಬ ಶಬ್ದವೇನೋ ಅಲ್ಲಿ ಇದೆ. ಆದರೆ ನೀವು ಹೇಳುವ ಅರ್ಥದಲ್ಲಿ ಅಜ್ಞಾನವನ್ನು ಎಲ್ಲಿ ಹೇಳಿದೆ?

ಅವರ ಪ್ರಶ್ನೆ : ಅಜ್ಞಾನವೆಂದರೆ ನೀವೇನು ಹೇಳುತ್ತೀರಿ?

ನನ್ನ ಉತ್ತರ : **'ಅಧ್ಯಾಸಂ ಪಣ್ಡಿತಾ ಅವಿದ್ಯೇತಿ ಮನ್ಯನ್ತೇ'**
(ಪಂಡಿತರು ಅಧ್ಯಾಸವನ್ನೇ ಅವಿದ್ಯೆಯೆನ್ನುವರು.)

ಅವರು : ಕಾರ್ಯಕಾರಣಾನನ್ಯತ್ವನ್ಯಾಯದಿಂದ ಮೂಲಾವಿದ್ಯೆಯನ್ನೇ ಅಲ್ಲಿಯೂ ಹೇಳಿರುವದು.

ನಾನು : ಕಾರಣಾವಿದ್ಯೆಯನ್ನು ಮತ್ತೆಲ್ಲಿಯಾದರೂ ಭಾಷ್ಯಕಾರರು ಹೇಳಿದ್ದರಲ್ಲವೆ, ಅಲ್ಲಿ ಹೀಗೆ ಅರ್ಥಮಾಡುವದು? ಹಾಗೆಂತ ಭಾಷ್ಯದಲ್ಲಿ ಎಲ್ಲಿ ಹೇಳಿದೆ?

**ಅವರು :** ವ್ಯಾಖ್ಯಾನಕಾರರು ಭಾಷ್ಯದ ಅಭಿಪ್ರಾಯವನ್ನೇ ವಿಶದಪಡಿಸಿರುತ್ತಾರೆ. ಎಲ್ಲಿಯೋ ಒಂದು ಕಡೆ ಬೃಹದಾರಣ್ಯಕದಲ್ಲಿ ಕರ್ಮವಿಚಾರದಲ್ಲಿ ಪೂರ್ವಪಕ್ಷ ಯುಕ್ತಿಯಲ್ಲಿ ಅಭಾವರೂಪವೆಂದು ಹೇಳಿದ್ದರೆ ಆಮಾತೇ ಪ್ರಮಾಣವೆ? ಅದೇ ಸಿದ್ಧಾಂತವೆ?

**ನಾನು :** ಇದು ಅಜ್ಞಾನವನ್ನು ಅಜ್ಞಾನವು ಬೇರೆಯ ಸ್ವರೂಪವುಳ್ಳದ್ದೇ - ಎಂದು ಸಿದ್ಧಾಂತದಲ್ಲಿ ಹೇಳಿದ್ದಾರೆಯೆ?

ಇಲ್ಲಿಗೆ ಈ ಚರ್ಚೆಯು ನಿಂತಿತು. 'ಮುಂದಿನ ಭಾನುವಾರವೇ ವಿಠ್ಠಲಶಾಸ್ತ್ರಿಗಳು ಅಧ್ಯಾಸಾತಿರಿಕ್ತವಾದ ಅವಿದ್ಯೆಯ ಭಾಷ್ಯಸಮ್ಮತವಲ್ಲ, ಯುಕ್ತಿಗೂ ಹೊಂದುವದಿಲ್ಲ - ಎಂಬುದನ್ನು ಕುರಿತು ಉಪನ್ಯಾಸಮಾಡಲಿ, ಎಂದು ವೇ||ಬ್ರ||ಶ್ರೀ|| ಹಲಸೂರು ವೆಂಕಟರಾಮ ಶಾಸ್ತ್ರಿಗಳು ಸೂಚಿಸಿದರು; ಎಲ್ಲರೂ ಅನುಮೋದಿಸಿದರು. ಅಂದಿನ ಸಭೆಯು ಇಲ್ಲಿಗೆ ಮುಗಿಯಿತು.

ಹಿಂದಿನ ಭಾನುವಾರ ಸಭೆಯಲ್ಲಿ ಆಗಿದ್ದ ಗೊತ್ತುವಳಿಗೆ ಅನುಗುಣವಾಗಿ ತಾ.6.8.39ನೆಯ ಭಾನುವಾರ ನನ್ನ ಉಪನ್ಯಾಸವಾಯಿತು. ಸುಮಾರು ಅರವತ್ತೆಪ್ಪತ್ತು ಜನರು ಸೇರಿದ್ದರು. ಉಪನ್ಯಾಸವು ಪ್ರಾರಂಭವಾಗುವ ಮೊದಲೇ ವೇ||ಬ್ರ||ಶ್ರೀ ಮಲ್ಲಿಕೆರೆ ಸುಬ್ರಹ್ಮಣ್ಯಶಾಸ್ತ್ರಿಗಳವರು ಉಪನ್ಯಾಸವು 5 ರಿಂದ 6 ಘಂಟೆಯ ವರೆಗೇ ನಡೆಯಬೇಕೆಂದೂ ನಡುವೆ ಯಾರೂ ಏನೂ ಮಾತನಾಡಬಾರದೆಂದೂ ಒಂದು ನಿಯಮವನ್ನು ಸಭೆಯ ಮುಂದಿಟ್ಟರು. ಬಳಿಕ ನಾನು ಉಪನ್ಯಾಸವನ್ನು ಆರಂಭಿಸಿದೆನು. ಉಪನ್ಯಾಸದ ವಿಷಯವಿದು: **ಅಧ್ಯಾಸಾತಿರಿಕ್ತವಾದ ಮೂಲಾವಿದ್ಯೆಯುಂಟು ಎಂಬ ವಾದವು ಅನುಪಪನ್ನವಾದದ್ದು.**

ಅಧ್ಯಾಸಾತಿರಿಕ್ತವಾದ ಅವಿದ್ಯೆಯೆಂಬುದು ಶ್ರುತಿಯುಕ್ತಿಗಳಿಗೂ ಭಾಷ್ಯಕ್ಕೂ ಅನುಭವಕ್ಕೂ ಹೊಂದಿಗೆಯಾಗದೆ ಇರುವದೆಂಬುದನ್ನು ಬ್ರ||ಶ್ರೀ||ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮರವರೂ, ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರೂ ಪ್ರಕಾರಪಡಿಸಿರುತ್ತಾರೆ. ಅದರಿಂದ ಶತಾಂಶವನ್ನು ತಿಳಿದುಕೊಂಡಿರುವ ನಾನು ಹೇಳುವದನ್ನು ತಾವುಗಳು ದಯವಿಟ್ಟು ಕೇಳಬೇಕು. ಹೆಚ್ಚಿನ ಸಂಗತಿಯನ್ನು ಬ್ರ|ಶ್ರೀ|ಶರ್ಮರಿಂದಲೇ ತಿಳಿಯಬೇಕಾಗಿರುತ್ತದೆಯೆಂಬುದನ್ನು ಮೊದಲೇ ಅರಿಕೆ ಮಾಡಿಕೊಂಡಿರುತ್ತೇನೆ.

**ಮೂಲಾವಿದ್ಯಾವಾದಿಗಳು ಹೇಳುವ ಅವಿದ್ಯೆಯ ಸ್ವರೂಪವೇನು?** ಅದು ಜ್ಞಾನಾಭಾವ, ಸಂಶಯ, ಮಿಥ್ಯಾಜ್ಞಾನ ಇವು ಮೂರಕ್ಕಿಂತಲೂ ಬೇರೆಯಾಗಿರುತ್ತದೆ, ಅನಾದಿಯಾಗಿರುತ್ತದೆ, ಭಾವರೂಪವಾಗಿರುತ್ತದೆ, ಅನಿರ್ವಚನೀಯವಾಗಿಯೂ ಆವರಣವಿಕ್ಷೇಪಶಕ್ತಿದ್ವಯದಿಂದ ಕೂಡಿದ್ದಾಗಿಯೂ ಇರುತ್ತದೆ. ಅನಾದಿಯೆಂದರೆ ಮತ್ತೊಂದರಿಂದ ಹುಟ್ಟತಕ್ಕದ್ದಲ್ಲ; ಭಾವವೆಂದರೆ ಅಭಾವಕ್ಕಿಂತ ಬೇರೆಯಾದದ್ದು; ಅನಿರ್ವಚನೀಯವೆಂದರೆ ಸತ್ತೂ ಅಲ್ಲದೆ, ಅಸತ್ತೂ ಅಲ್ಲದೆ, ಸದಸತ್ತೂ ಅಲ್ಲದೆ ಇರತಕ್ಕದ್ದು; ಹಗ್ಗದಲ್ಲಿ ಹಾವು ಮುಂತಾದ ಭ್ರಾಂತಿಯ ಪದಾರ್ಥಗಳ ತೋರಿಕೆಗೆ ಈ ಅವಿದ್ಯೆಯೇ ಕಾರಣವಾಗಿರುತ್ತದೆ; ಮಡಕೆಗೆ ಮಣ್ಣು ಕಾರಣವಾಗಿರುವಂತೆ ಹಾವಿಗೂ ಹಾವಿನ ಜ್ಞಾನಕ್ಕೂ ಅದು ಉಪಾದಾನಕಾರಣವಾಗಿರುತ್ತದೆ. ಆವರಣವೆಂದರೆ ವಸ್ತುವನ್ನು ಕಾಣದಂತೆ ಮಾಡುವ ಶಕ್ತಿ, ವಿಕ್ಷೇಪವೆಂದರೆ ಅದನ್ನು ಬೇರೊಂದು ರೂಪದಲ್ಲಿ ತೋರುವಂತೆ ಮಾಡುವ ಶಕ್ತಿ. ಉದಾಹರಣೆಗೆ ಉಕ್ತದೃಷ್ಟಾಂತದಲ್ಲಿ ಹಗ್ಗವು ಕಾಣದಂತೆ ಮಾಡುವದು ಆವರಣ, ಅದನ್ನು ಹಾವಾಗಿ ತೋರಿಸುವದು ವಿಕ್ಷೇಪ. ಇಂಥ ಈ ಅವಿದ್ಯೆಯೇ ಪ್ರಪಂಚಕ್ಕೂ ಅದರ ಜ್ಞಾನಕ್ಕೂ ಕಾರಣವಾಗಿದೆಯೆಂಬುದು ಮೂಲಾವಿದ್ಯಾವಾದವು.

**ಈ ವಾದವು ಅನುಭವಕ್ಕೆ ಹೊಂದುವದಿಲ್ಲ.** ಏಕೆಂದರೆ ಮನುಷ್ಯನಿಗೆ ಯಾವ ವಿಷಯದ ಸರಿಯಾದ ಅರಿವು ಇರುವದಿಲ್ಲವೋ ಆ ವಿಷಯದಲ್ಲಿ ಜ್ಞಾನಾಭಾವ, ಸಂಶಯ, ಮಿಥ್ಯಾಜ್ಞಾನ – ಈ ಮೂರಲ್ಲದೆ ಯಾವ ಅಜ್ಞಾನವೂ ಇರುವದನ್ನು ನಾವು ಕಂಡಿಲ್ಲ. ಉದಾಹರಣೆಗೆ ಮೂರೂ ನಾಲ್ಕೂ ಎಷ್ಟು? – ಎಂಬ ಪ್ರಶ್ನೆಗೆ ತತ್ತ್ವಜ್ಞಾನವಿಲ್ಲದವನು ಏನೇನು ಹೇಳಬಹುದೋ ನೋಡೋಣ. 'ಮೂರೂ ನಾಲ್ಕೂ ಸೇರಿದರೆ ಎಷ್ಟಾಗುವದೋ ತಿಳಿಯದು' ಎಂದು ಹೇಳಬಹುದು. ಅದು ಜ್ಞಾನಾಭಾವ; 'ಎಂಟೋ ಏಳೋ ಆದೀತು' ಎನ್ನಬಹುದು, ಅದು ಸಂಶಯ; 'ಎಂಟೇ ಆಗುತ್ತದೆ' ಎಂದೂ ಹೇಳಬಹುದು, ಅದು ಮಿಥ್ಯಾಜ್ಞಾನ. ಹೀಗೆ ತಿಳಿಯದಿರುವದು, ಸಂಶಯ ಪಡುವದು, ತಪ್ಪಾಗಿ ತಿಳಿದುಕೊಳ್ಳುವದು – ಈ ಮೂರನ್ನೂ ಬಿಟ್ಟು ಜ್ಞಾನದಿಂದ ನಾಶವಾಗುವ ಯಾವ ಅವಿದ್ಯೆಯೂ ಲೋಕದಲ್ಲಿ ಜನರ ಅನುಭವಕ್ಕೆ ಬಂದಿರುವದಿಲ್ಲ. ಆದರೆ ಮೂಲಾವಿದ್ಯೆಯು ಈ ಮೂರಕ್ಕೂ ಬೇರೆಯೆಂತಲೂ ಆದರೂ ಜ್ಞಾನದಿಂದ ನಾಶವಾಗತಕ್ಕದ್ದೆಂತಲೂ ಈ ವಾದಿಗಳು ಹೇಳುತ್ತಾರೆ. ಇದು ಅನುಭವಕ್ಕೆ ಹೇಗೆ ಹೊಂದೀತು?

ಈ ವಾದವು ಭಾಷ್ಯಸಮ್ಮತವಲ್ಲ, ಏಕೆಂದರೆ ಆಚಾರ್ಯರು ಬರೆದಿರುವ ಗೀತಾಭಾಷ್ಯ, ಉಪನಿಷದ್ಭಾಷ್ಯ, ಸೂತ್ರಭಾಷ್ಯ - ಎಂಬ ಪ್ರಸ್ಥಾನತ್ರಯಭಾಷ್ಯದಲ್ಲಿ ಎಲ್ಲಿಯೂ 'ಮೂಲಾವಿದ್ಯೆ' ಎಂಬ ಹೆಸರೇ ಕಂಡುಬರುವದಿಲ್ಲ, ಇಷ್ಟೇ ಅಲ್ಲ, ಆ ಅರ್ಥವನ್ನು ಕೊಡುವ ಮಾತೂ ಅಲ್ಲಿರುವದಿಲ್ಲ, ಇದಕ್ಕೆ ಬದಲಾಗಿ ಅವರು ಅಧ್ಯಾಸವನ್ನೇ ಅವಿದ್ಯೆಯೆಂದು ಕಂಠೋಕ್ತವಾಗಿ ಕರೆದಿರುತ್ತಾರೆ. ವ್ಯಾಖ್ಯಾನಕಾರರು ಕೆಲವರು ಮಾತ್ರ ಮೂಲಾವಿದ್ಯೆಯೂ ಭಾಷ್ಯಾಭಿಮತವೆಂದು ಬರೆದಿರುತ್ತಾರೆ; ಆದರೆ ಈ ಅವರ ಅಭಿಪ್ರಾಯವೇ ಭಾಷ್ಯವಿರುದ್ಧವೆಂದು ಹೇಳುವ ನಾವು ಅವರ ಮತವನ್ನು ಒಪ್ಪುವದಕ್ಕಾಗುವದಿಲ್ಲ, ಒಪ್ಪುವದೂ ಇಲ್ಲ.

**ಈ ವಾದವು ಯುಕ್ತಿಗೂ ವಿರುದ್ಧವಾಗಿರುತ್ತದೆ.** ಹೇಗೆಂದರೆ ಅವಿದ್ಯೆಯು ಅನಾದಿಯೆಂದೂ ಭಾವರೂಪವೆಂದೂ ಹೇಳುವ ಈ ವಾದಿಗಳು ಅವಿದ್ಯೆಯೇ ಪ್ರಪಂಚಕ್ಕೆ ಉಪಾದಾನಕಾರಣವೆನ್ನುತ್ತಾರೆ. (1) ಹಾಗಾದರೆ ಪ್ರಪಂಚಕ್ಕೆ ಅವಿದ್ಯೆಯೇ ತತ್ತ್ವವೆಂದಾಗುತ್ತದೆ. ಉಪಾದಾನಕಾರಣವಾಗಿರುವ ಮಣ್ಣು ತನ್ನ ಕಾರ್ಯವಾದ ಮಡಕೆಯ ತತ್ತ್ವವಾಗಿರುವಂತೆ ಪ್ರಪಂಚಕ್ಕೆ ಉಪಾದಾನವಾದ ಅವಿದ್ಯೆಯೇ ಪ್ರಪಂಚತತ್ತ್ವವಾಗಬೇಕೆನ್ನುವದು ಯುಕ್ತವಾಗಿರುತ್ತದೆ. ಒಂದು ವೇಳೆ ಮಣ್ಣನ್ನು ವಿವರ್ತೋಪಾದಾನವೆಂದು ಕರೆದರೂ ಅದರಂತೆಯೇ ಅವಿದ್ಯೆಯೂ ವಿವರ್ತೋಪಾದಾನವೇ ಆಗುವದರಿಂದ ಆಗಲೂ ಮಣ್ಣಿನ ದೃಷ್ಟಾಂತವು ಅವಿದ್ಯೆಗೂ ಹೊಂದುತ್ತದೆ. ಎಲ್ಲರೂ ಹೇಳುವ ಉಪಾದಾನಕಾರಣವೇ ಆಗಿರಲಿ, ಅಥವಾ ಇವರು ಹೇಳುವ ವಿವರ್ತೋಪಾದಾನಕಾರಣವೇ ಆಗಿರಲಿ,* ಕಾರಣವಾಗಿರುವ ಅವಿದ್ಯೆಯನ್ನು ದಾಟುವದಕ್ಕೆ ಯಾರಿಂದಲೂ ಸಾಧ್ಯವಿಲ್ಲ, ಹೀಗಿರುವಲ್ಲಿ ಪ್ರಪಂಚದ ಪರಮಾರ್ಥಸ್ವರೂಪವು ಬ್ರಹ್ಮವೆಂದು ಹೇಳಲು ಈ ವಾದಿಗಳಿಗೆ ಹೇಗೆತಾನೆ ಸಾಧ್ಯವಾದೀತು?

---

* ಈ ಸಂದರ್ಭದಲ್ಲಿ ಬ್ರ।ಶ್ರೀ। ಮಲ್ಲಿಕೆರೆ ಸುಬ್ರಹ್ಮಣ್ಯಶಾಸ್ತ್ರಿಗಳವರು 'ಅವಿದ್ಯೆಯನ್ನು ವಿವರ್ತವೆಂದು ಯಾರು ಹೇಳುತ್ತಾರೆ?' ಎಂದು ಕೇಳಿದರು. ಈ ನಿಮ್ಮ ಬ್ರ।ಶ್ರೀ।'ಪಾಲುಘಾಟು ನಾರಾಯಣಶಾಸ್ತ್ರಿಗಳೇ; ಹೌದೋ ಅಲ್ಲವೋ ಅವರನ್ನೇ ಕೇಳಿರಿ' ಎಂದು ನಾನು ಉತ್ತರವನ್ನು ಕೊಟ್ಟೆನು. ಅಷ್ಟರಲ್ಲಿ ವೇ।ಬ್ರ। ಸಾಹಿತ್ಯರತ್ನಂ ಬೆಟ್ಟಹಲಸೂರು ವೆಂಕಟರಾಮಾಶಾಸ್ತ್ರಿಗಳವರು 'ಮಧ್ಯೆ ಮಾತನಾಡಕೂಡದೆಂಬ ನಿಮ್ಮ ನಿಯಮವನ್ನು ನೀವೇ ಏಕೆ ಮೀರುತ್ತೀರಿ?' ಎಂದು ಚರ್ಚೆಯನ್ನು ಅಲ್ಲಿಗೇ ನಿಲ್ಲಿಸಿದರು.

ಈ ಅವಿದ್ಯೆಯು ಅನಾದಿಭಾವರೂಪವಾಗಿದೆ ಎಂದು ಇವರು ಹೇಳುತ್ತಿರುವದರಿಂದಲೇ ದ್ವೈತಿಗಳೂ ವಿಶಿಷ್ಟಾದ್ವೈತಿಗಳೂ (2) ಸ್ವಯಂಪ್ರಕಾಶರೂಪನಾದ ಪರಮಾತ್ಮನಿಗೆ ಆವರಣವು ಹೇಗೆ ಬಂದೀತು? – ಎಂದು ಆಕ್ಷೇಪಿಸುತ್ತಿದ್ದಾರೆ. ಹರಿಹರದಲ್ಲಿ ಒಂದಾನೊಂದು ಪ್ರಚಂಡಸಭೆ ನಡೆದಿದ್ದಾಗ ಮಾಧ್ವರು ಕೆಲವರು ಈ ಪ್ರಶ್ನೆಯನ್ನು ನನಗೂ ಹಾಕಿದ್ದರು. ಈ ವಾದದಲ್ಲಿ ಆ ಪ್ರಶ್ನೆಗೆ ಯುಕ್ತಿಯುಕ್ತವಾದ ಉತ್ತರವೇನೂ ಇರುವದಿಲ್ಲ. ಸೂರ್ಯನಿಗೆ ರಾಹುವು ಮುಸುಕಿಕೊಳ್ಳುವಂತೆ **(ರಾಹುಗ್ರಸ್ತ ದಿವಾಕರೇಂದುಸದೃಶಮ್...)** ಅವಿದ್ಯೆಯು ಮುಸುಕಿಕೊಂಡಿದೆ ಎಂದು ಹೇಳುವದುಂಟು; ಅಲ್ಲಿ ರಾಹುವು ಸೂರ್ಯನನ್ನು ನಿಜವಾಗಿ ಮುಸುಕಿಕೊಂಡಿದ್ದರೆ ಎಲ್ಲಾ ದೇಶಕ್ಕೂ ಏಕಕಾಲದಲ್ಲಿ ಗ್ರಹಣವಾಗಬೇಕಲ್ಲವೆ? ಮುಚ್ಚಿಕೊಂಡಿರದಿದ್ದರೆ ದಾರ್ಷ್ಟಾಂತಿಕದಲ್ಲಿ ಭಾವಾವಿದ್ಯೆಯನ್ನೇಕೆ ಇಟ್ಟುಕೊಳ್ಳಬೇಕು? ಜೀವನಿಗೆ ಅಧ್ಯಾಸರೂಪವಾದ ಅವಿದ್ಯೆಯು ಸಿದ್ಧವೇ ಆಗಿರುವದಲ್ಲವೆ?

ಇನ್ನೊಂದು ಮುಖ್ಯವಾದ ಪೂರ್ವಪಕ್ಷಯುಕ್ತಿಯಿದೆ : (3) ಅನಾದಿಭಾವರೂಪವಾದ ಅವಿದ್ಯೆಯು ಜ್ಞಾನದಿಂದ ನಾಶವಾಗುವದು ಹೇಗೆ? ತೋರಿಕೊಳ್ಳುವ ಸರ್ಪವು ಭಾವರೂಪವೂ ಅನಿರ್ವಚನೀಯವೂ ಆದ ಅವಿದ್ಯೆಯ ಪರಿಣಾಮವಾಗಿದ್ದರೆ ಅನಿರ್ವಚನೀಯ ದಂಡವಲ್ಲವೆ, (ಕೋಲಲ್ಲವೇ) ಅದನ್ನು ಹೊಡೆಯುವದಕ್ಕೆ ಬೇಕಾಗುತ್ತದೆ? ಜ್ಞಾನವು ಆ ಕೆಲಸವನ್ನು ಹೇಗೆ ಮಾಡೀತು? ಜ್ಞಾನವು ಜ್ಞಾಪಕ, ಇರುವದನ್ನು ತಿಳಿಯಪಡಿಸತಕ್ಕದ್ದು; ಕಾರಕವಲ್ಲ, ಇಲ್ಲದ್ದನ್ನುಂಟುಮಾಡುವದಲ್ಲ; ಹೀಗಿರುವಾಗಿ ಅನಿರ್ವಚನೀಯ ಮೂಲಾವಿದ್ಯೆಯನ್ನು ಅದೇಕೆ ನಾಶಗೊಳಿಸಬೇಕು? 'ಅನಿರ್ವಚನೀಯ ಅವಿದ್ಯೆಯದು' ಎಂದು ಬೇಕಾದರೆ ತಿಳಿಯಪಡಿಸಲಿ, ನಾಶಗೊಳಿಸುವದೇಕೆ?ಜ್ಞಾನಕ್ಕೆ ಆ ಸ್ವಭಾವವು ಎಲ್ಲಿ ಕಂಡು ಬಂದಿದೆ?

ಪ್ರಪಂಚವು ಅವಸ್ಥಾತ್ರಯದಲ್ಲಿಯೂ ಇರುತ್ತದೆಯೆಂದು ಈ ವಾದಿಗಳು ಹೇಳುತ್ತಾರೆ. ಅದು ಎಚ್ಚರದಲ್ಲಿ ಸ್ಥೂಲರೂಪದಿಂದಲೂ ಕನಸಿನಲ್ಲಿ ಸೂಕ್ಷ್ಮರೂಪದಿಂದಲೂ ಗಾಢನಿದ್ರೆಯಲ್ಲಿ ಕಾರಣವಾದ ಮೂಲಾವಿದ್ಯೆಯ ರೂಪದಿಂದಲೂ ಇದ್ದುಕೊಂಡಿರುವದಂತೆ. ಹಾಗಾದರೆ (4) ಪ್ರಪಂಚವು ರೂಪಾಂತರವನ್ನು ಹೊಂದಬಲ್ಲ ಪರಿಣಾಮಿನಿತ್ಯ ವಸ್ತುವೆಂದಾಗಬೇಕೇ ಹೊರತು ಅದು ಮಿಥ್ಯೆಯೆನ್ನುವದಕ್ಕೆ ಕಾರಣವಿಲ್ಲ; ಏಕೆಂದರೆ ಅದು ಬಾಧಿತವಾಗುವದೇ ಇಲ್ಲ. ಸಮಾಧಿಯಲ್ಲಿ ಕಾರಣ ರೂಪವೂ ಇಲ್ಲವೆಂದು ಕೆಲವರು ಹೇಳುವದುಂಟು; ಹಾಗಾದರೆ ಸಮಾಧಿಯಿಂದ ಮತ್ತೆ ಎಚ್ಚೆತ್ತು ಪ್ರಪಂಚವನ್ನು ಕಾಣು

ವದೇಕೆ? ಅವಿದ್ಯೆಯಿಲ್ಲದ ಸಮಾಧಿಸ್ಥನೂ ಸಂಸಾರಕ್ಕೆ ಬರಬಹುದಾದರೆ ಮುಕ್ತನೂ ಏಕೆ ಬರಬಾರದು? ಸಾಹಿತ್ಯರತ್ನಂ, ಅಲಂಕಾರ ರಕ್ಷಾಮಣಿ ವೇ।ಬ್ರ।ಶ್ರೀ ಗೋಪಾಲಕೃಷ್ಣ ಶಾಸ್ತ್ರಿಗಳವರು ಉಪನ್ಯಾಸಮಾಡಿದಾಗ **'ನ ತು ದೃಷ್ಟಾಂತಭಾವಾತ್'** (ಬ್ರ.ಸೂ. 2-1-9) ಎಂಬ ಸೂತ್ರಭಾಷ್ಯವನ್ನುದಾಹರಿಸಿ **''ಸುಷುಪ್ತಿ ಸಮಾಧ್ಯಾದಾವಪಿ ಮಿಥ್ಯಾ ಜ್ಞಾನಸ್ಯಾನಪ್ರೋದಿತತ್ವಾತ್''** ಎಂಬ ವಾಕ್ಯದ ಬಲದಿಂದ ಸುಷುಪ್ತಿಯಂತೆ ಸಮಾಧಿ ಯಲ್ಲಿಯೂ ಅವಿದ್ಯೆಯು ಇದ್ದೇ ಇರುವದೆಂದು ತಿಳಿಸಿರು ತ್ತಾರಷ್ಟೆ; ಅದರಂತೆ ಎರಡು ಕಡೆಗಳಲ್ಲಿಯೂ ಪ್ರಪಂಚದ ಕಾರಣಾವಿದ್ಯಾರೂಪದಿಂದ ಇದ್ದೇ ಇದೆ ಎಂದು ಒಪ್ಪ ಬೇಕಲ್ಲವೆ? ಇಲ್ಲದಿದ್ದರೆ ಸಮಾಧಿಯಿಂದ ಮನುಷ್ಯನನ್ನು ಎಚ್ಚರಕ್ಕೆ ತಳ್ಳುವದು ಯಾವದು? ಅದು ಅವಿದ್ಯೆಯೇ ಎಂದು ಒಪ್ಪಿದರೆ ಪ್ರಪಂಚದ ಅಥವಾ ಅವಿದ್ಯೆಯ ಅಭಾವವನ್ನು ಎಲ್ಲಿ ತೋರಿಸುವದು? ಇದೇ ವಾಕ್ಯದಲ್ಲಿ **'ಸತ್ಯಾಂ ಸ್ವಾಭಾವಿಕ್ಯಾಮ ವಿಭಾಗಪ್ರಾಪ್ತೌ'** (ಸ್ವಾಭಾವಿಕವಾಗಿ ಅವಿಭಾಗವೇ ಇದ್ದರೂ)ಎಂದಿದೆಯಷ್ಟೇ; ಮೂಲಾ ವಿದ್ಯಾವಾದದಲ್ಲಿ ಅವಿಭಾಗವು ಹೇಗೆ? ಪ್ರಪಂಚವು ಇದ್ದೇ ಇರುವದಲ್ಲವೆ? ಅಲ್ಲಿ ಅವಿಭಾಗವನ್ನು ಒಪ್ಪಿದರೆ ಸುಷುಪ್ತಿಯಲ್ಲೇಕೆ ಒಪ್ಪಬಾರದು?

ಸುಷುಪ್ತಿಯಲ್ಲಿ ಅವಿಭಾಗವು ಅಥವಾ ಬ್ರಹ್ಮಾತ್ಮೈಕ್ಯವು ಆಗುವದೇ ಇಲ್ಲವೆಂದರೆ ಛಾಂದೋಗ್ಯಶ್ರುತಿಗೆ ವಿರೋಧವಾಗುವದು. ಹೇಗೆಂದರೆ ಜೇನುಹುಳುಗಳು ಬಗೆ ಬಗೆಯ ಹೂಗಳ ರಸವನ್ನು ಸೇರಿಸಿ ಜೇನುತುಪ್ಪವೆಂಬ ಒಂದೇ ರಸವನ್ನು ಮಾಡು ವಂತೆ ಸುಷುಪ್ತಿಯಲ್ಲಿ ಎಲ್ಲರೂ ಸದ್ರೂಪವಾಗಿ ಏಕರಸವಾಗಿಬಿಡುವದರಿಂದ ನಾನು ನಾನೆಂದು ಬಿಡಿಬಿಡಿಯಾಗಿ ತಿಳಿಯುವದಿಲ್ಲ ಎಂದು ಹೇಳಿದ್ದರಿಂದ, 'ಹಾಗಾದರೆ ಮತ್ತೆ ಎಚ್ಚರದಲ್ಲಿ ಬೇರಾದದ್ದು ಹೇಗೆ?'-ಎಂಬ ಪ್ರಶ್ನೆಯುಂಟಾಗಿ ಮುಂದಿನ ಮಂತ್ರಾರ್ಥವು ಉತ್ತರವಾಗುತ್ತದೆ; ಅಲ್ಲಿ ಐಕ್ಯವೇ ಇಲ್ಲವೆಂದರೆ ಪ್ರಶ್ನೆಯೇ ಇಲ್ಲವಾದ್ದರಿಂದ ಉತ್ತರ ವೇತಕ್ಕೆ?

ಪ್ರಪಂಚವು ಸುಷುಪ್ತಿಯಲ್ಲಿಯೂ ಸಮಾಧಿಯಲ್ಲಿಯೂ ಇದ್ದರೂ ಜೀವನ್ಮುಕ್ತ ರಿಗೆ ಅವಿದ್ಯಾನಾಶವಾಗುವದರಿಂದ ಮೇಲೆ ಹೇಳಿದ ದೋಷವಿಲ್ಲ - ಎಂದು ಕೆಲವರು ತಪ್ಪಿಸಿಕೊಳ್ಳುವದುಂಟು. ಆದರೆ ಜೀವನ್ಮುಕ್ತರಿಗೂ ಪ್ರಪಂಚವು ತೋರುತ್ತಲೇ ಇರುವ ದಲ್ಲ! ಆಗ ಮೂಲಾವಿದ್ಯೆಯು ಇಲ್ಲವಾದರೆ ಅಧ್ಯಾಸರೂಪವಾದ ಅವಿದ್ಯೆಯನ್ನು ಕಡ ತೆಗೆದುಕೊಂಡು ಪ್ರಪಂಚಭಾನವನ್ನು ಹೇಳುತ್ತಾರೇನು? ಇದೂ ಅಲ್ಲದೆ ಜೀವನ್ಮುಕ್ತರಿಗೆ ಮೂಲಾವಿದ್ಯೆಯ ಲೇಶವು ಇದ್ದೇ ಇರುವದೆಂದು ಈ ವಾದಿಗಳು ಹೇಳುತ್ತಾರೆ.

ಆದ್ದರಿಂದ ಅವಿದ್ಯಾನಾಶಕ್ಕೆ ಜೀವನ್ಮುಕ್ತರಲ್ಲಿಯೂ ಉದಹರಣೆಯು ಸಿಕ್ಕುವದಿಲ್ಲ, ಅಂತು ಪ್ರಪಂಚವು ಮೂಲಾವಿದ್ಯೆಯ ರೂಪದಿಂದ ಜೀವನ್ಮುಕ್ತಿಯಾದರೂ ಬೆನ್ನುಬಿಡದೆ ಇರುವದರಿಂದ ಅದು ಮಿಥ್ಯೆಯೆಂದು ತೋರಿಸುವದಕ್ಕೆ ಆಗುವಂತೆಯೇ ಇಲ್ಲ.*

ಹೀಗೆ ಅವಿದ್ಯೆಯು ಇಲ್ಲದಿರುವದು ಎಲ್ಲಿಯೂ ಕಂಡುಬರುವದಿಲ್ಲವಾದ್ದರಿಂದ ಈಶ್ವರನು ಅವಿದ್ಯಾಪರತಂತ್ರನಲ್ಲ, ಸ್ವತಂತ್ರನು – ಎಂಬುದು ಹೇಗೆ ಸಿದ್ಧವಾಗಬೇಕು? ಅಧಿಕಾರಿಯ ಹಿಂದೆ ಪೋಲಿಸಿನವನು ಇದ್ದರೂ ಪೋಲಿಸಿನವನಿಗೆ ಅಧಿಕಾರಿಯು ಆಡಿಯಾಳಲ್ಲವೆಂಬುದು ಪೋಲಿಸಿನವನಿಲ್ಲದೆ ಅಧಿಕಾರಿಯೊಬ್ಬನೇ ಇರುವದನ್ನು ಕಾಣು ವದರಿಂದ ಸಿದ್ಧವಾಗುತ್ತದೆ; ದಾರ್ಷ್ಟಾಂತಿಕದಲ್ಲಿ ಹಾಗಿಲ್ಲವಲ್ಲ! ಆತ್ಮನೊಡನೆ ಯಾವಾ ಗಲೂ ಅವಿದ್ಯೆಯಿದೆಯೆಂದು ಸಿದ್ಧವಾಗುವದರಿಂದ ಅವಿದ್ಯಾರಹಿತನಾದ ಆತ್ಮನೇ ಇಲ್ಲವೆಂದಾಗುವುದಿಲ್ಲವೆ?

ಇಷ್ಟು ಹೊತ್ತಿಗೆ ಸುಮಾರು ಆರು ಘಂಟೆ ಇಪ್ಪತ್ತು ನಿಮಿಷವಾಯಿತು. ಆಗ ನಾನು ಮೂಲಾವಿದ್ಯಾವಾದವು ಭಾಷ್ಯಕ್ಕೂ ಹೊಂದುವಂತಿಲ್ಲ, ಏಕೆಂದರೆ ಭಾಷ್ಯದಲ್ಲಿ ಅಧ್ಯಾಸವನ್ನೇ ಆಕ್ಷೇಪಿಸಿ ಅದಕ್ಕೆ ಸಮಾಧಾನವನ್ನು ಹೇಳಿ ಅದನ್ನೇ ಅವಿದ್ಯೆಯೆಂದು ಕರೆದಿರುವಾಗ, ಕೊನೆಯಲ್ಲಿ ಮತ್ತೊಂದು ಸಲವೂ "**ತಮೇತಮವಿದ್ಯಾಖ್ಯಮಾತ್ಮಾನಾತ್ಮನೋರಿತರೇತರಾಭ್ಯಾಸಮ್.......**" ಎಂಬ ವಾಕ್ಯದಲ್ಲಿ ಅದನ್ನೇ ಅವಿದ್ಯೆಯೆಂದು

---

* ಈ ಸಂದರ್ಭದಲ್ಲಿ ಬ್ರ।ಶ್ರೀ। ಮಲ್ಲಿಕೆರೆ ಸುಬ್ರಹ್ಮಣ್ಯಶಾಸ್ತ್ರಿಗಳವರು 'ನಿಮ್ಮ ವಾದವನ್ನು ನೀವು ಹೇಳಿರಿ; ಸುಮ್ಮನೆ ನಮ್ಮ ವಾದವನ್ನೇ ಏಕೆ ಹೇಳುತ್ತೀರಿ?' ಎಂದರು. 'ನನ್ನ ಉಪನ್ಯಾಸಕ್ಕೆ ಇದೇ ವಿಷಯ; ಇದನ್ನು ಬಿಟ್ಟು ಬೇರೆ ಕಡೆಗೆ ನಾನೇಕೆ ಹೋಗಲಿ? ನಮ್ಮವಾದವನ್ನು ಕೇಳಬೇಕಾದರೆ ಮೊದಲೇ ಭಿನ್ನವಿಸಿಕೊಂಡಿರುವಂತೆ ಬ್ರ।ಶ್ರೀ। ಸುಬ್ರಹ್ಮಣ್ಯ ಶರ್ಮರನ್ನು ಕರೆಯಿಸಿರಿ; ಅವರಲ್ಲಿ ಶತಾಂಶವನ್ನು ಮಾತ್ರ ನಾನು ತಿಳಿದುಕೊಂಡಿರುತ್ತೇನೆ' ಎಂದು ನಾನು ಹೇಳಲು 'ಹಾಗಾದರೆ ನಾನು ಮುಂದಿನ ಭಾನುವಾರ ಇದಕ್ಕೆಲ್ಲ ಸಮಾಧಾನ ವನ್ನು ಹೇಳುತ್ತೇನೆ, ಅವರು ಆ ಮುಂದಿನ ಭಾನುವಾರ ಬಂದು ತಮ್ಮ ಸಿದ್ಧಾಂತವನ್ನು ಹೇಳಲಿ!' ಎಂದರು. 'ಹಾಗಾದರೆ ಅವರಿಗೆ ಕಾಗದವನ್ನು ಬರೆಯಿರಿ' ಎಂದದ್ದಕ್ಕೆ 'ನಾವು ಬರೆಯುವದಿಲ್ಲ; ನೀವೇ ಬರೆದು ಕರೆಯಿಸಿ, ನಾವು ಅವರಿಗೆ ಇಲ್ಲಿ ಹೇಳಲು ಅವಕಾಶವನ್ನು ಕೊಟ್ಟಿರುತ್ತೇವೆ' ಎಂದು ಹೇಳಿದರು. 'ಆಗಲಿ, ನಾನು ಬರೆದುಕೇಳುತ್ತೇನೆ' ಎಂದೆನು. ಅಲ್ಲಿಗೆ ಈ ವಿಚಾರವು ನಿಂತಿತು.

ಹೆಸರಿಸಿರುವಾಗ, ಮತ್ತು 'ಅಸ್ಯಾನರ್ಥಹೇತೋಃ' ಎಂದು ಅದೇ ಅನರ್ಥಕ್ಕೆ ಕಾರಣವೆಂದು ಹೇಳಿರುವಾಗ ವ್ಯಾಖ್ಯಾನಕಾರರು ಅಪ್ರಸಕ್ತವಾದ ಮೂಲಾವಿದ್ಯೆಯನ್ನು ಅಲ್ಲಿ ತಂದೊಡ್ಡಿರುತ್ತಾರೆ.

ಈ ಕ್ರಮವು ಸರ್ವಥಾ ಒಪ್ಪತಕ್ಕದ್ದಲ್ಲ. ಆದ್ದರಿಂದ ಮೂಲಾವಿದ್ಯಾವಾದವು ಭಾಷ್ಯಕ್ಕೂ ಹೊಂದಿಗೆಯಾಗಿರುವದಿಲ್ಲ, ಭಾಷ್ಯಯುಕ್ತಿಗೆ ವಿರುದ್ಧವೂ ಆಗಿರುತ್ತದೆ. ಈ ರೀತಿಯಲ್ಲಿ ಈ ವಾದವು ಶ್ರುತಿಭಾಷ್ಯಯುಕ್ತ್ಯನುಭವಗಳಿಗೆ ವಿರುದ್ಧವಾಗಿರುವದರಿಂದ ಸರ್ವಥಾ ಒಪ್ಪತಕ್ಕದ್ದಲ್ಲ ಎಂದು ಉಪಸಂಹಾರಮಾಡಿದೆನು.

# ಶಂಕರಾಚಾರ್ಯರೂ ಅವರ ವ್ಯಾಖ್ಯಾನಕಾರರೂ

ಈ ಲೋಕದಲ್ಲಿ ಕೆಲವರು ಮಹಾತತ್ತ್ವಶಾಸ್ತ್ರಜ್ಞರುಗಳಿಗೆ ತಮ್ಮ ಅಭಿಪ್ರಾಯವನ್ನು ತಮ್ಮ ತಮ್ಮ ಅನುಯಾಯಿಗಳೆಂಬವರೇ ತಿಳಿಯದೆ ಹೋಗಿರುವರೆಂಬ ದೌರ್ಭಾಗ್ಯವು ಒದಗಿರುತ್ತದೆ. ಇಂಥವರಲ್ಲಿ ಶ್ರೀಶಂಕರಾಚಾರ್ಯರೂ ಒಬ್ಬರು. ಇಂದು ವ್ಯಾಖ್ಯಾನಕಾರರು ಶ್ರೀಶಂಕರಾಚಾರ್ಯರವರ ಹೆಸರಿನಲ್ಲಿ ವಿಲಕ್ಷಣವಾದ ತರ್ಕಪ್ರಧಾನವಾದ ವಾದವೊಂದನ್ನು ಹೊರಕ್ಕೆ ತಂದಿರುತ್ತಾರೆ; ಆದರೆ ನಿಜವಾಗಿ ನೋಡಿದರೆ ಆ ಆಚಾರ್ಯರಿಗೆ ಈ ವಾದದ ಸಂಬಂಧವು ಎಳ್ಳಷ್ಟೂ ಇರುವದಿಲ್ಲ.

ವ್ಯಾಖ್ಯಾನಕಾರರು, ಭಾಷಾಂತರಕಾರರು, ಇತ್ತೀಚಿನ ಭಾಷ್ಯಕಾರರುಗಳ ಪ್ರಭಾವಕ್ಕೆ ಸಿಕ್ಕಿರುವ ಪ್ರತಿವಾದಿಗಳು, ಪ್ರಾಚ್ಯತತ್ತ್ವಶೋಧಕರು ಸರಣಿಯನ್ನನುಸರಿಸಿ ಶಂಕರಸಿದ್ಧಾಂತವನ್ನು ಮೆಚ್ಚಿ ವಿವರಿಸುತ್ತಿರುವವರು – ಎಲ್ಲರೂ ಈಗ ಮಾಯವಾದವೇ ಅದ್ವೈತಕ್ಕೆ ಕೇಂದ್ರಸ್ಥಾನೀಯವಾದ ವಾದವೆಂದು ಹೇಳುತ್ತಿದಾರೆ. ಮೂಲಾವಿದ್ಯೆಯು ಅಥವಾ ಮಾಯೆ ಎಂಬ ಹೆಸರಿನ ತತ್ತ್ವವು, ಈ ಸಿದ್ಧಾಂತಕ್ಕೆ ಅತ್ಯಂತಬಲಾಧಾಯಕವಾದ ಮೂಲಸ್ಥಂಭವೆಂಬಂತೆ ಶಂಕರಪಕ್ಷದವರು ಆ ವಾದವನ್ನು ಪ್ರಸ್ತಾಪಿಸುತ್ತಿರುತ್ತಾರೆ; ಪ್ರತಿ ಪಕ್ಷದವರು ಆ ಅವಿದ್ಯೆಯ ಹೆಸರನ್ನು ಕೇಳಿದ ಮಾತ್ರದಿಂದಲೇ ಶಂಕಾತಂಕವುಳ್ಳವರಾಗಿ ಕಾಣಬರುತ್ತಾರೆ. ಈ ಕಲ್ಪನಾಮಾತ್ರವಾದ ಮೂಲಾವಿದ್ಯೆಗೆ ಶ್ರೀಶಂಕರಾ

ಚಾರ್ಯರು ತಮ್ಮ ಸರ್ವಸ್ವವನ್ನೂ ಧಾರೆಯೆರೆದುಬಿಟ್ಟಿದ್ದಾರೋ ಎಂಬಂತೆ ವಾದಿ ಪ್ರತಿವಾದಿಗಳಿಬ್ಬರಿಗೂ ಈ ವಿಷಯವನ್ನು ಕುರಿತು ಕೆಲವು ಶತಮಾನಗಳಿಂದಲೂ ಭಯಂಕರವಾದ ವಾಗ್ಯುದ್ಧವೊಂದು ನಡೆಯುತ್ತಿರುವಂತೆ ಕಾಣುತ್ತಿದೆ.

ಆದರೆ ಆ ಆಚಾರ್ಯರರು ಮಾತ್ರ ಈ ವಿಚಿತ್ರ ಮೂಲಾವಿದ್ಯೆಯ ಹೆಸರನ್ನೂ ಕೇಳಿದಂತೆ ತೋರಿಬರುವದಿಲ್ಲ. ಶಂಕರರೇ ಬರೆದಿದ್ದಾರೆಂದು ಸರ್ವಸಮ್ಮತವಾಗಿರುವ ಗ್ರಂಥಗಳೆಲ್ಲವೂ ಈಗ ಭಾಷಾಂತರರಾಗಿರುತ್ತವೆ. ಆ ಭಾಷ್ಯಗ್ರಂಥಗಳಲ್ಲಿ ಹಗಲು ಬತ್ತಿ ಹಿಡಿದುಕೊಂಡು ಹುಡುಕಿದರೂ ಈ ಬಗೆಯ ವಾದದ ಸೆಲೆಯೂ ಗೋಚರಿಸುವುದಿಲ್ಲ. 1929ರಲ್ಲಿಯೇ ಹಿಂದೆಯೇ ಬ್ರ॥ಶ್ರೀ॥ಯ. ಸುಬ್ರಹ್ಮಣ್ಯಶರ್ಮರವರು ಶ್ರೀಶ್ರೀಗಳವರು **'ಶಂಕರಹೃದಯ ಅಥವಾ ಮೂಲಾವಿದ್ಯಾನಿರಾಸ'** ಎಂಬ ಗ್ರಂಥವನ್ನು ಬರೆದು, 'ಈ ವಿಲಕ್ಷಣವಾದಕ್ಕೆ ಸಾಧಕವಾಗಿರುವ ಒಂದೇ ಒಂದು ಭಾಷ್ಯವಚನವನ್ನು ತೋರಿಸಿರಿ, ಅಥವಾ ಈ ವಾದಕ್ಕೆ ಉಪಪಾದಕವಾಗಿರುವ ಯುಕ್ತಿಗಳನ್ನಾದರೂ ಹೇಳಿರಿ' – ಎಂದು ಸಂಸ್ಕೃತಪಂಡಿತರನ್ನು ಆಹ್ವಾನಪೂರ್ವಕವಾಗಿ ಕೇಳಿಕೊಂಡರು. ಅದಕ್ಕೆ ಈವರೆಗೂ ಯಾರೊಬ್ಬರೂ ಉತ್ತರವನ್ನು ಕೊಟ್ಟಿರುವದಿಲ್ಲ. ಅದೇ ಗ್ರಂಥಕರ್ತರು ಮೊನ್ನೆ ಮೊನ್ನೆ ಬರೆದಿರುವ ಕನ್ನಡ ಗ್ರಂಥವೊಂದರಲ್ಲಿ ಈ ವಿಷಯವನ್ನು ವಿಸ್ತಾರವಾಗಿ ಚರ್ಚಿಸಿ ಶ್ರೀಶಂಕರರು ಅರ್ವಾಚೀನವೇದಾಂತಿಕಲ್ಪಿತವಾದ ಈ ವಿನಾಶಕರವಾದ ಆಗಂತುಕ ವಾದವನ್ನು ಒಪ್ಪಿದ್ದಾರೆಂಬ ಮತದ ಜಳ್ಳುತನವನ್ನು ತೋರಿಸಿಕೊಟ್ಟಿರುತ್ತಾರೆ.

ಶ್ರೀಶಂಕರರು ನಿಜವಾಗಿ ಹೇಳಿರುವ ಅವಿದ್ಯಾವಾದಕ್ಕೂ ಈ ಮೂಲಾವಿದ್ಯಾವಾದಕ್ಕೂ ಇರುವ ತಾರತಮ್ಯವನ್ನು ತಿಳಿಯಬೇಕಾದರೆ ಇದನ್ನು ಸ್ವಲ್ಪ ವಿವರವಾಗಿ ವಿಮರ್ಶಿಸಬೇಕಾಗುತ್ತದೆ. ಇವೆರಡು ವಾದಗಳಿಗೂ ಇರುವಷ್ಟು ವೈಧರ್ಮ್ಯವು ಮತ್ತೆ ಯಾವ ಎರಡು ವಾದಗಳಿಗೂ ಇರಲಾರದು. ಏಕೆಂದರೆ ಶಂಕರರ ಮತದಲ್ಲಿ ಅವಿದ್ಯೆಯೆಂದರೆ ಆತ್ಮಾನಾತ್ಮಗಳನ್ನು ಒಂದೆಂದು ಒಂದನ್ನು ತಿಳಿಯುವದು, ಅವುಗಳಲ್ಲಿ ಒಂದರ ಧರ್ಮವನ್ನು ಮತ್ತೊಂದರ ಧರ್ಮವೆಂದು ಬಗೆಯುವದು–ಎಂಬ ಅಧ್ಯಾಸವೇ ಹೊರತು ಮತ್ತೆ ಬೇರೆಯಲ್ಲ. ಹೀಗೆ ಒಂದನ್ನೊಂದೆಂದು ತಿಳಿದು ಒಂದರ ಧರ್ಮವನ್ನು ಮತ್ತೊಂದಕ್ಕೆ ತಗಲಿಸುತ್ತಿರುವದಕ್ಕೆ ಮಾನವನ ನೈಸರ್ಗಿಕ ಮನಃಪ್ರವೃತ್ತಿಯೇ ಕಾರಣವೆಂದೂ ಅದ್ವೈತವನ್ನು – ಎರಡನೆಯದಿಲ್ಲದೆ ಒಂದೇ ಒಂದಾಗಿರುವ ಪರಮಾರ್ಥವನ್ನು – ಸಾಕ್ಷಾತ್ಕರಿಸಿಕೊಳ್ಳುವದರಿಂದಲೇ ಈ ಪ್ರವೃತ್ತಿಯು ನಿರ್ಮೂಲವಾಗುವದೆಂದೂ ಅವರ ಅಭಿಪ್ರಾಯವಾಗಿರುತ್ತದೆ. ಈ ಅಧ್ಯಾಸವಾದದ ಗಾಂಭೀರ್ಯವನ್ನಾಗಲಿ

ಅದರಿಂದ ತತ್ತ್ವಶಾಸ್ತ್ರಕ್ಕೆ ಆಗುವ ಫಲವನ್ನಾಗಲಿ ವಿವರಿಸುವದು ಈ ಒಂದು ಸಣ್ಣ ಲೇಖನದಲ್ಲಿ ಆಗಲಾರದು. ಆದ್ದರಿಂದ ಇಷ್ಟನ್ನು ಮಾತ್ರ ಇಲ್ಲಿ ಹೇಳಿರುವೆನು: ಶಂಕರಾಚಾರ್ಯರ ಸಿದ್ಧಾಂತಕ್ಕೆ ಜೀವನದಲ್ಲಿ ನಮಗೆ ಆಗುವ ಅನುಭವಗಳೇ ಆಧಾರವಾಗಿರುತ್ತವೆ. ಜಾಗ್ರತ್ತು, ಸ್ವಪ್ನ, ಸುಷುಪ್ತಿ - ಎಂಬ ಮೂರು ಅವಸ್ಥೆಗಳಿಗೂ ಸಾಕ್ಷಿಯಾಗಿರುವವನೇ ನಮ್ಮ ನಿಜವಾದ ಆತ್ಮನು, ಅವನಿಗೆ ಯಾವ ಪರಿಚ್ಛೇದವೂ ಇರುವದಿಲ್ಲ; ಮಾನವನು ವಿಚಾರಮಾಡುವದಕ್ಕೆ ಹೊರಟಂದಿನಿಂದ ತತ್ತ್ವಶಾಸ್ತ್ರವು ಹುಡುಕುತ್ತಿರುವ ಪರಮಾರ್ಥತತ್ತ್ವವೇ ಈ ಆತ್ಮನು - ಎಂದು ಅವರು ತೋರಿಸಿ ಕೊಟ್ಟಿರುತ್ತಾರೆ.

ಶಂಕರರ ಹೆಸರಿನಲ್ಲಿ ನವೀನ ವೇದಾಂತಿಗಳು ಅದೂ ಇದೂ ತುರುಕಿ ಹೊಲೆದು ಕುಣಿಸುತ್ತಿರುವ ಮೂಲಾವಿದ್ಯಾವಾದವೆಂಬ ಗೊಂಬೆಗೂ ಆ ಆಚಾರ್ಯರ ನಿಜವಾದ ಅವಿದ್ಯಾವಾದಕ್ಕೂ ಅಜಗಜಾಂತರವಿರುತ್ತದೆ. ಈ ಹೊಸ ವೇದಾಂತಿಗಳು ಪರಮಾರ್ಥವು ಅದ್ವೈತವೆಂಬುದನ್ನು ಮೊದಲೇ ಇಟ್ಟುಕೊಂಡುಬಿಟ್ಟಿರುತ್ತಾರೆ; ವ್ಯವಹಾರದಲ್ಲಿ ಕಾಣಬರುತ್ತಿರುವ ದ್ವೈತಕ್ಕೆ ಕಾರಣವನ್ನು ಹೇಳುವದಕ್ಕಾಗಿ ಮೇಲೆ ಹೇಳಿರುವ ಅಧ್ಯಾಸದಿಂದೊಡಗೂಡಿದ ಸಕಲ ದೃಶ್ಯಕ್ಕೂ ಕಾರಣವಾಗಿ ಮೂಲಾವಿದ್ಯೆ ಎಂಬ ಅನಾದಿಯಾದ ಅವಿದ್ಯೆಯೊಂದನ್ನು ಹುಟ್ಟಿಹಾಕಿಕೊಂಡಿರುತ್ತಾರೆ. ಇದಕ್ಕೆ ಮೂಲಾವಿದ್ಯೆ ಎಂಬ ಹೆಸರು ಏಕೆ ಬಂದಿರುವದೆಂದರೆ ಇದು ವ್ಯವಹಾರದಲ್ಲಿ ಕಾಣಬರುವ ಬೇರೆ ಬೇರೆ ಜೀವರಲ್ಲಿ ತೋರುವ ಅವಿದ್ಯೆಗಳಿಗೆಲ್ಲ ಮೂಲಕಾರಣವಾಗಿರುವದರಿಂದ. ಅದು ನನ್ನ , ನಿಮ್ಮ - ಅಥವಾ ಮತ್ತೊಬ್ಬ ವ್ಯಕ್ತಿಯ ಅವಿದ್ಯೆಯಲ್ಲ, ಸಾರ್ವತ್ರಿಕವಾಗಿ ಅನಾದಿಯಾಗಿರುವ ಅವಿದ್ಯೆಯು, ಅದಕ್ಕೆ ಬ್ರಹ್ಮವೆಂಬ ಶುದ್ಧಚೈತನ್ಯವೇ ಆಶ್ರಯವಾಗಿರುತ್ತದೆ. ಇದಕ್ಕೆ ಅವಿದ್ಯೆ ಎಂಬ ಹೆಸರು ಏತಕ್ಕೆ ಬಂದಿರುವದೆಂದರೆ ಇದು ವಿದ್ಯೆಯಿಂದ - ಬ್ರಹ್ಮಜ್ಞಾನದಿಂದ - ನಾಶವಾಗುವದೆಂದು ಈ ವಾದಿಗಳು ಒಪ್ಪಿಕೊಂಡಿರುವದರಿಂದ.

ಸಾಂಖ್ಯರ ದ್ವಿತೀಯ ಸತ್ಯತ್ವವಾದದ ನೆರಳು ಈ ವಾದದ ಮೇಲೆ ಬಿದ್ದಿದೆ ಎಂದು ಯಾರಿಗಾದರೂ ತಟ್ಟನೆ ಕಾಣುವಂತಿದೆ; ಏಕೆಂದರೆ ಇಲ್ಲಿ ಯಾವ ಮುಚ್ಚುಮರೆಯೂ ಇಲ್ಲದೆ ಸರಳವಾಗಿಯೇ ಕಾರ್ಯಕಾರಣವಾದವನ್ನು ತಿಳಿಸಿರುತ್ತದೆ. ಗೌಡಪಾದರೂ ಶಂಕರರೂ ಹೇಳಿರುವ ನಿರುಪಚರಿತವಾದ ಅದ್ವೈತಕ್ಕೆ ಮುಖ್ಯ ಕಾರ್ಯಕಾರಣವಾದವು ವಿರುದ್ಧವಾಗುತ್ತದೆ. ಏಕೆಂದರೆ ವೇದಾಂತದ ಪರಮಾರ್ಥದ ದೃಷ್ಟಿಯಿಂದ ಕಾರ್ಯಕಾರಣಭಾವವೇ ಇಲ್ಲವೆಂದು ಆ ಇಬ್ಬರು ಆಚಾರ್ಯರೂ ತೋರಿಸಿ ಕೊಟ್ಟಿರುತ್ತಾರೆ. ಆದರೆ ಈ ನಮ್ಮ ಹೊಸಗೆಳೆಯರು ತಮ್ಮ ಕಾರ್ಯಕಾರಣವಾದಕ್ಕೆ

ಎಚ್ಚರಿಕೆಯಿಂದ ಗಿಲಾವು ಮಾಡಿ ಶಂಕರರ ಅನುಯಾಯಿಗಳೆಂದುಕೊಳ್ಳುವವರ ಮನಸ್ಸಾಕ್ಷಿಗೆ ವಿರೋಧವಾಗದಂತೆ ನೋಡಿಕೊಂಡಿರುತ್ತಾರೆ. ಇವರು ಹೇಳುವದೇನೆಂದರೆ ಮೂಲಾವಿದ್ಯೆಯೆಂಬ ಈ ಕಾರಣವು ಪರಮಾರ್ಥವಲ್ಲ, ಕೇವಲ ವ್ಯಾವಹಾರಿಕವಾಗಿರುತ್ತದೆ; ವ್ಯಾವಹಾರಿಕವಾದರೂ ಇದು ಸತ್ತು ಅಲ್ಲ, ಅಸತ್ತೂ ಅಲ್ಲ ಮತ್ತು ಇದು ಬ್ರಹ್ಮಕ್ಕಿಂತ ಬೇರೆಯಲ್ಲವಾದ್ದರಿಂದ ಅದ್ವೈತಕ್ಕೆ ವಿರೋಧವಿಲ್ಲ. ಇದು ದೃಶ್ಯಪ್ರಪಂಚಕ್ಕೆಲ್ಲ ಕಾರಣವಾಗಿರುವುದರಿಂದ ಅದೇ ಬ್ರಹ್ಮವು ಎನ್ನುವದಕ್ಕೂ ಬರುವುದಿಲ್ಲ. ಈ ಕಾರಣಾವಿದ್ಯೆಯು ಹೀಗೆ ಸ್ವಭಾವದಿಂದಲೇ ಅನಿರ್ವಚನೀಯವಾಗಿರುವದರಿಂದ ಇದರ ಕಾರ್ಯವಾದ ಅಧ್ಯಾಸಪ್ರವಾಹವೂ ವಿಷಯಪ್ರಪಂಚವೂ ಅದರ ಸ್ವಭಾವವುಳ್ಳವೇ ಆಗಿ ಅದರಂತೆಯೇ ಅನಿರ್ವಚನೀಯವಾಗಿರುತ್ತವೆ. ಆದ್ದರಿಂದ ಜ್ಞಾನೋದಯವಾದ ಕೂಡಲೆ ಅವಿದ್ಯೆಯೂ ಅದರ ಕಾರ್ಯಗಳೂ ಸಂಪೂರ್ಣವಾಗಿ ನಾಶವಾಗಬಹುದಾಗಿರುತ್ತದೆ – ಎಂಬುದು ಈ ವಾದಿಗಳ ಹೇಳಿಕೆ.

ಆದರೆ ಈಗ ಮತ್ತೊಂದು ಹೆಚ್ಚಿನ ಕಷ್ಟವು ಈ ವಾದವನ್ನು ಎದುರಿಸುತ್ತದೆ. ಇಂಥ ಅವಿದ್ಯೆಯನ್ನು ವಿದ್ಯೆಯು ಸಂಪೂರ್ಣವಾಗಿ ನಾಶಮಾಡಿಬಿಡುವದೆಂದು ಹೇಗೆ ನಂಬುವದು? ಅವಿದ್ಯೆಯನ್ನೆಲ್ಲ ತೊಲಗಿಸಿಕೊಂಡು ಬ್ರಹ್ಮಜ್ಞಾನವನ್ನು ಸಂಪಾದಿಸುವ ಹಾದಿಯನ್ನು ಜನರಿಗೆ ತೋರಿಸಬಲ್ಲ ಜ್ಞಾನಿಜೀವನು ಯಾವನು ಇದಾನೆ? ಈ ಸ್ವಾಭಾವಿಕಪ್ರಶ್ನೆಯನ್ನು ಹಾಕಿದ ಮಾತ್ರದಿಂದ ಮೂಲಾವಿದ್ಯಾಪಕ್ಷದವರಿಗೆ ಬಹಳ ಉದ್ವೇಗವಾಗುತ್ತದೆ. ಏಕೆಂದರೆ ಅವಿದ್ಯೆಯು ಯಾರಿಗಾದರೂ ಪೂರ್ತಿಯಾಗಿ ನಾಶವಾಗಿಬಿಟ್ಟರೆ ಅವರು ಅವಿದ್ಯಾಕಾರ್ಯವಾದ ಜಗತ್ತನ್ನು ನೋಡುವದು ಆಗಲಾರದು; ವೇದಾಂತತತ್ತ್ವವನ್ನು ಇತರರಿಗೆ ಹೇಳಿಕೊಡಬಲ್ಲ ತತ್ತ್ವಜ್ಞಾನಿಯೇ ಇಲ್ಲವೆಂದರೆ ಬ್ರಹ್ಮಾತ್ಮೈಕ್ಯವೆಂಬುದು ಕೇವಲ ಶ್ರದ್ಧಾಮಾತ್ರಗಮ್ಯವಾದದ್ದೇ ಹೊರತು ಅನುಭವಗಮ್ಯವಲ್ಲವೆಂದು ಆಗಿಬಿಡುತ್ತದೆ. ಈ ಇಕ್ಕಣಿಕೆಯ ಕಣ್ಣಿನಿಂದ ತಪ್ಪಿಸಿಕೊಳ್ಳುವದು ಅಸಾಧ್ಯ. ಆದರೆ ಮೂಲಾವಿದ್ಯಾವಾದಿಗಳು ಇದಕ್ಕೂ ಅಂಜುವಂತಿಲ್ಲ. ಅವರು ಯೋಗದರ್ಶನದವರೊಡನೆ ಸಂಧಿಯನ್ನು ಮಾಡಿಕೊಂಡು, 'ಅವಿದ್ಯೆಯು ನಿರ್ವಿಕಲ್ಪಸಮಾಧಿಯಲ್ಲಿ ನಾಶವಾಗುತ್ತದೆ' ಎಂದು ಧೈರ್ಯದಿಂದ ನುಡಿಯುತ್ತಾರೆ. ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಮೂರೂ ಅವಸ್ಥೆಗಳಲ್ಲಿಯೂ ಈ ಅವಿದ್ಯೆಯು ಇರುವದೆಂದೂ ಇದು ಸುಷುಪ್ತಿಯಲ್ಲಿ ಅವ್ಯಕ್ತವಾಗಿಯೂ ಮಿಕ್ಕ ಅವಸ್ಥೆಗಳಲ್ಲಿ ವ್ಯಕ್ತವಾಗಿಯೂ ಇರುವದೆಂದೂ ಈ ವಾದಿಗಳ ಮತವಾದ್ದರಿಂದ ಇದು ನಾಶವಾಗುವದಕ್ಕೆ ನಾಲ್ಕನೆಯದೊಂದು ಅವಸ್ಥೆಯು ಇವರಿಗೆ

ಬೇಕಾಗಿರುತ್ತದೆ. ಆದ್ದರಿಂದ ಉಪನಿಷತ್ತುಗಳಲ್ಲಿ ಹೇಳಿರುವ ತುರೀಯವೂ ಯೋಗಿಗಳು ಹೇಳುವ ಸಮಾಧಿಯೂ ಒಂದೇ ಎಂದೇ ಹೇಳುವದು ಉತ್ತಮವೆಂತ ಈ ವಾದಿಗಳಿಗೆ ತೋರಿರುತ್ತದೆ. ಹೀಗೆ ಸಮಾಧಿಯಿಂದಲೇ ಅವಿದ್ಯೆಯು ನಾಶವಾಗುವದೆಂದು ಕಟ್ಟಕಡೆಯ ತೀರ್ಪಾಗುವದರಿಂದ ಆ ಅವಸ್ಥೆಯನ್ನು ಪಡೆಯುವವರೆಗೂ ಅದು ಎಲ್ಲಾ ಬಗೆಯ ದ್ವೈತಕ್ಕೂ ಕಾರಣವಾಗಿರುವದೆಂದು ಹೇಳುವದು ನಿರ್ಬಾಧಕವೆಂದು ಅವರು ತಿಳಿಯುತ್ತಾರೆ.

ಆದರೆ ಈ ಅಭಿಪ್ರಾಯವನ್ನಿಟ್ಟುಕೊಂಡರೆ ಹುರಿಯೋಡಿನಿಂದ ಹಾರಿದ ಪ್ರಾಣಿಯು ಉರಿಯೊಳಕ್ಕೆ ಬಿದ್ದಂತೆ ಆಗಿಬಿಡುತ್ತದೆ. ಏಕೆಂದರೆ ಆಗಲೂ ಈ ಶನೀಶ್ವರನಂತಿರುವ ಭೀಕರಾವಿದ್ಯೆಯಿಂದ ತಪ್ಪಿಸಿಕೊಂಡಂತೆ ಆಗುವದಿಲ್ಲ. ಸಮಾಧಿಯನ್ನು ಪಡೆದಾತನು ಅದನ್ನು ಬಿಟ್ಟು ಎಚ್ಚತ್ತರೆ, ಅವನ ಜೊತೆಯಲ್ಲಿ ಮೂಲವಿದ್ಯೆಯೂ ಬರಬೇಕಾಗುವದು; ಏಕೆಂದರೆ ಇದೊಂದಕ್ಕೇ ಪ್ರಪಂಚವನ್ನು ಸೃಷ್ಟಿಮಾಡುವ ಶಕ್ತಿಯಿರುವದೆಂದು ಈ ವಾದಿಗಳು ಹೇಳುತ್ತಾರೆ. ಸಮಾಧಿಯನ್ನು ಪಡೆದವನು ಮತ್ತೆ ಎಚ್ಚರುವದೇ ಇಲ್ಲ ಎನ್ನುವದಾದರೆ ಅವಿದ್ಯೆಯು ನಾಶವಾದದ್ದನ್ನು ನಮಗೆ ತಿಳಿಸುವ ಅನುಭವಿಗಳೇ ಯಾರೂ ಉಳಿದಂತಾಗುವದಿಲ್ಲ.

ಈ ಮೂಲಾವಿದ್ಯಾವಾದದ ಸರಪಳಿಯಲ್ಲಿ ತೀರ ಕೊನೆಯ ಕೊಂಡಿಯನ್ನು ಈಗ ತಿಳಿಸುವದು ಉಳಿದಿರುತ್ತದೆ. ಅವಿಷ್ಟವಾದ ಈ ಮೂಲಾವಿದ್ಯೆಯು ಮನುಷ್ಯನ ಬೆನ್ನು ಹತ್ತಿ ಅವನು ಬದುಕಿರುವವರೆಗೂ ಅವನ ಹಿಂದೆಯೇ ಇರುವದಲ್ಲದೇ ಸಮಾಧಿಯನ್ನು ಪಡೆದ ಮೇಲೂ ತನ್ನ ವಿಕರಾಳರೂಪವನ್ನು ತೋರಿಸಿಕೊಳ್ಳುವದಾಗಿದೆ ಎಂದು ಈವರೆಗೆ ತಿಳಿಸಿದ್ದಾಗಿದೆಯಷ್ಟೆ. ಇದು ಹೀಗೆ ಮತ್ತೊಮ್ಮೆ ಮುಖವನ್ನು ತೋರಿಸದೆ ಇರಲೆಂದು 'ಅವಿದ್ಯಾಲೇಶ'ವೆಂಬ ವಾದವನ್ನು ಈ ಜನರು ಉಪಯೋಗಿಸಿಕೊಂಡಿರುತ್ತಾರೆ. ಮೂಲಾವಿದ್ಯೆಯು ನಿರ್ವಿಕಲ್ಪಕ ಸಮಾಧಿಯಲ್ಲಿ ಬಹಳಮಟ್ಟಿಗೆ ನಾಶವಾಗಿಯೇ ತೀರುತ್ತದೆಯಾದರೂ ಆ ಸಮಾಧಿಯಿಂದ ಎಚ್ಚತ್ತ ಆಚಾರ್ಯನಿಗೆ ಪ್ರಪಂಚವನ್ನು ಕಾಣುವದು, ಅದರಲ್ಲಿ ವ್ಯವಹಾರಮಾಡುವದು ಇಷ್ಟರಮಟ್ಟಿಗೆ ತಕ್ಕಷ್ಟು ಅವಿದ್ಯೆಯ ಅಂಶವು ಉಳಿದುಕೊಂಡಿರುತ್ತದೆ; ಆತನ ದೃಷ್ಟಿಯಿಂದ ಪ್ರಪಂಚವು ಕಾಣುವದೆಂಬುದು ಕೂಡ ಮಾಯಿಕವಾಗಿರುತ್ತದೆ; ದೇಹಪಾತವಾದ ಬಳಿಕ ಜ್ಞಾನಿಯು ಸಂಪೂರ್ಣವಾಗಿ ಮುಕ್ತನಾಗಿ ಸಂಸಾರಕ್ಕೆ ಎಂದಿಗೂ ತಿರುಗಿ ಬಂದು ಬೀಳದೆ ಇರುತ್ತಾನೆ – ಎಂದು ಹೇಳುವದು ಅವಿದ್ಯಾಲೇಶವಾದವು. ಮೂಲಾವಿದ್ಯೆಗೆ ಲೇಶವಾಗಲಿ ಅಂಶವಾಗಲಿ

ಇರುವದು ಹೇಗೆ? ಅದು ಭೌತಿಕವಸ್ತುವಲ್ಲವಲ್ಲ - ಎಂದು ಯಾರಾದರೂ ಆಕ್ಷೇಪಿಸುವದಾದರೆ ಅದಕ್ಕೆ ಪರಿಹಾರವಾಗಿ ಅನಿರ್ವಚನೀಯವಾದವು ಸಿದ್ಧವಾಗಿಯೇ ಇರುತ್ತದೆ. ಮೂಲಾವಿದ್ಯೆಯು ಹೇಗೆ ಅನಿರ್ವಚನೀಯವೋ ಹಾಗೆಯೇ ಅದರ ಅಂಶಗಳೂ ಅನಿರ್ವಚನೀಯವೇ ಆಗಿರುತ್ತವೆಯಾದ್ದರಿಂದ ಬರಿಯ ತರ್ಕದಿಂದ ತೋರುವ ಈ ದೋಷಕ್ಕೇನೂ ನಾವು ಅಂಜಬೇಕಾಗಿರುವದಿಲ್ಲ ಎಂಬುದೇ ಇವರ ಕೊನೆಯ ಸಿದ್ಧಾಂತ.

ಶಂಕರಾಚಾರ್ಯರದ್ದೆಂದು ಕಲ್ಪಿಸಿರುವ ಮೂಲಾವಿದ್ಯಾವಾದದ ಸಾರಸಂಗ್ರಹವನ್ನು ಈವರೆಗೆ ತಿಳಿಸಿದ್ದಾಗಿದೆ. ಈಗಿನ ಕಾಲಕ್ಕೆ ಪ್ರಚಾರದಲ್ಲಿರುವ ಈ ವಾದದ ಶಾಖೋಪಶಾಖೆಗಳನ್ನು ಪೂರ್ಣವಾಗಿ ವಿಸ್ತರಿಸಿ ಹೇಳುವದು ಇಲ್ಲಿ ಸಾಧ್ಯವೂ ಅಲ್ಲ ಬೇಕಾಗಿಯೂ ಇಲ್ಲ. ಈ ವಾದವು ಹುಟ್ಟಿದ್ದು ಹೇಗೆ, ಹೇಗೆ ಹೇಗೆ ವಿಸ್ತರಿಸಿಕೊಂಡಿದೆ ಎಂಬ ಬಗ್ಗೆ ಸ್ವಾರಸ್ಯವಾಗಿರುವ ಐತಿಹಾಸಿಕವಿಷಯಗಳ ಸಂಕ್ಷೇಪವನ್ನು ಕೂಡ ಇಲ್ಲಿ ಕೊಡುವದಕ್ಕೆ ಸ್ಥಲಾಭಾವದಿಂದ ಹಿಂಜರಿಯಬೇಕಾಗಿದೆ. ಆದರೆ ಶಾಂಕರ ಸಿದ್ಧಾಂತಕ್ಕೂ ಈ ವಾದಕ್ಕೂ ಇರುವ ತಾರತಮ್ಯವು ಬಂಗಾರಕ್ಕೂ ಕಾಗೆಬಂಗಾರಕ್ಕೂ ಇರುವ ತಾರತಮ್ಯವಾಗಿದೆ ಎಂಬುದನ್ನು ಸ್ಪಷ್ಟಗೊಳಿಸುವದಕ್ಕೆ ತಕ್ಕಷ್ಟು ತಿಳಿವಳಿಕೆಯನ್ನು ಇಲ್ಲಿ ಕೊಡಲಾಗಿದೆಯೆಂದು ನಂಬುತ್ತೇನೆ. ಈ ವಾದದಲ್ಲಿ ಆತ್ಮೈಕ್ಯವನ್ನು ಮೊದಲೇ ಸಿದ್ಧವಾಗಿರುವಂತೆ ಇಟ್ಟುಕೊಂಡು ನಮಗೆಲ್ಲರಿಗೂ ಕಾಣುತ್ತಿರುವ ದ್ವೈತಕ್ಕೆ ಗತಿಯೇನೆಂಬ ಶಂಕೆಯ ಪರಿಹಾರಕ್ಕಾಗಿ ಮೂಲಾವಿದ್ಯೆಯೆಂಬ ಪಿಶಾಚಿಯನ್ನು ಆಹ್ವಾನಮಾಡಿರುತ್ತದೆ. ಆಮೇಲೆ ಅದಕ್ಕೆ ಸಿಕ್ಕಿಕೊಂಡು ಅದರ ಪಟ್ಟಿನಿಂದ ಬಿಡಿಸಿಕೊಳ್ಳುವದಕ್ಕೆ ಮಾಡುವ ಬೇರೆಬೇರೆಯ ಪ್ರಯತ್ನಗಳ ಮಾಲೆಯೇ ಇದು. ಹೀಗಾಗಿ ಪರಮಮುಕ್ತಿಯೆಂಬುದು ಮರಣಾನಂತರವೇ ಸಾಧ್ಯವೆಂದು ಈ ವಾದಿಗಳು ಹೇಳಬೇಕಾಗಿ ಬಂದಿರುತ್ತದೆ.

ನಾನು ಮೊದಲೇ ಹೇಳಿರುವಂತೆ ಶಂಕರಾಚಾರ್ಯರ ಭಾಷ್ಯಗಳಲ್ಲಿ ಅವರ ನಿಜವಾದ ಉಪದೇಶದ ಸ್ವರೂಪವನ್ನು ತಿಳಿದುಕೊಳ್ಳುವದಕ್ಕೆ ಬೇಕಾದಷ್ಟು ಸಾಧನವಿರುವದರಿಂದ ಅದನ್ನು ಕಂಡುಹಿಡಿಯುವದೇನೂ ಕಷ್ಟವಲ್ಲ. ಈ ಆಧಾರ ಗ್ರಂಥಗಳಿಂದ ಹೊರಡುವ ಸಿದ್ಧಾಂತವೇನೆಂಬ ಬಗ್ಗೆ ನನ್ನ ಸ್ವಂತ ಅಭಿಪ್ರಾಯವನ್ನು ತಿಳಿಸಲು ಇಲ್ಲಿ ಅವಕಾಶವಿರುವದಿಲ್ಲ. ಆದರೆ ಶಾಂಕರಸಿದ್ಧಾಂತವನ್ನು ತಿಳಿಯುವದಕ್ಕೆ ಬೀಗದಕೈಯಾಗಿರುವ ಒಂದು ವಿಚಾರವನ್ನು ನಾನು ಇಲ್ಲಿ ಬೆಟ್ಟಿಟ್ಟಂತೆ ತಿಳಿಸಿರುತ್ತೇನೆ. ಆ ವಿಚಾರದ ಸಹಾಯವಿಲ್ಲದೆ ಈ ಸಿದ್ಧಾಂತದ ಸ್ವರೂಪವನ್ನು ತಿಳಿಯುವದು ಎಂದಿಗೂ ಆಗಲಾರದು. ಆತ್ಮಾನಾತ್ಮಗಳನ್ನು ಒಂದನ್ನೊಂದೆಂದು ತಿಳಿಯುವ ಅಧ್ಯಾಸವೇ ಅವಿದ್ಯೆ

ಎಂದು ಬೇಸರ ವಿಲ್ಲದೆ ಮತ್ತೆ ಮತ್ತೆ ಹೇಳುತ್ತಿರುವ ವಚನಗಳು ಆಚಾರ್ಯರ ಭಾಷ್ಯ ಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಈ ಅವಿದ್ಯೆಯೊಂದೇ ತತ್ತ್ವಜ್ಞಾನಕ್ಕೆ ಪ್ರತಿಬಂಧಕ ವಾಗಿರುವದೆಂದೂ ಅವರು ಸಾರಿ ಹೇಳಿರುತ್ತಾರೆ. ಅಂತಃಕರಣದ ಧರ್ಮಗಳನ್ನು ಆತ್ಮ ನಲ್ಲಿ ಹಾಕಿ ಅವನನ್ನು ಪ್ರಮಾತೃವೆಂದು ಬಗೆಯುವದೇ ನಮಗೆ ಸ್ವಭಾವವಾಗಿ ಬಿಟ್ಟಿರುತ್ತದೆ. ಆದರೆ ಈ ಅವಿದ್ಯೆಯು ಮುಸುಕಿರುವಾಗಲೂ ಆತ್ಮನು ವ್ಯಕ್ತಿತ್ವವನ್ನೂ ಸಗುಣತ್ವವನ್ನೂ ಭೇದವನ್ನೂ ಮೀರಿ ನಿತ್ಯಶುದ್ಧನಾಗಿಯೇ ಇರುತ್ತಾನೆ; ಏಕೆಂದರೆ ತಪ್ಪು ತಿಳಿವಳಿಕೆಯಿಂದ ವಸ್ತುಸ್ಥಿತಿಗೆ ಯಾವ ಧಕ್ಕೆಯೂ ತಗಲುವದು ಸಾಧ್ಯವಿಲ್ಲ. ಆದ್ದರಿಂದ ಶಂಕರಾಚಾರ್ಯರವರು ಯಾಜ್ಞವಲ್ಕ್ಯ, ಉದ್ದಾಲಕ, ಮೊದಲಾದ ಉಪನಿಷದಾಚಾರ್ಯ ರಂತೆ ಅವಸ್ಥಾತ್ರಯ ಪರೀಕ್ಷೆಯ ಮೂಲಕ ನಮ್ಮಲ್ಲಿರುವ ಸಾಕ್ಷಿಯೂ ಪರಮಾತ್ಮನೂ ಸರ್ವಥಾ ಒಬ್ಬನೇ ಎಂದು ತಿಳಿದುಕೊಳ್ಳಬಹುದೆಂಬುದನ್ನು ತಿಳಿಸಿಕೊಟ್ಟಿರುತ್ತಾರೆ. ಆ ಆಚಾರ್ಯರು ತೋರಿಸಿರುವ ಜಿಜ್ಞಾಸಾ ಸರಣಿಯನ್ನು ವಿವರವಾಗಿ ತಿಳಿಯಬೇಕೆನ್ನು ವವರು ವೇದಾಂತ ಸೂತ್ರ, ಬೃಹದಾರಣ್ಯಕ, ಛಾಂದೋಗ್ಯ - ಈ ಭಾಷ್ಯಗಳನ್ನು ಅವಲೋಕನಮಾಡಬೇಕು.

ಸದ್ಯಕ್ಕೆ ನಾನು ತಮ್ಮನ್ನು ಕೇಳಿಕೊಳ್ಳುವದೇನೆಂದರೆ ಇಂಥ ಅತ್ಯಂತ ಅನುಪಪನ್ನ ವಾದ ವಾದವನ್ನು ಎಂದೆಂದಿಗೂ ತಮ್ಮ ಕನಸಿನಲ್ಲಿಯೂ ಕಾಣದ ಶ್ರೀಶಂಕರರ ಮೇಲೆ ಅನ್ಯಾಯವಾಗಿ ಹಾಕಿದ ದೋಷವನ್ನು ಕಟ್ಟಿಕೊಳ್ಳುವದನ್ನು ಬಿಟ್ಟುಬಿಡುವದು ಈಗಲಾದರೂ ನಮಗೆ ಯುಕ್ತವಲ್ಲವೆ? ಇದನ್ನು ತಾವು ಆಲೋಚಿಸಬೇಕು.

# ಈ ನಮ್ಮೆಲ್ಲರ ಆತ್ಮನೇ ಬ್ರಹ್ಮವು

ಸಮಸ್ತಜನರೂ ಪ್ರಮಾಣಗಳಿಂದ ಪ್ರಮೇಯವನ್ನು ಅಂದರೆ ಪ್ರಪಂಚವನ್ನು ನೋಡುತ್ತಾರೆ. ಇದು ಕಾರ್ಯವಾಗಿ ತೋರುತ್ತಿರುವದರಿಂದ ಇದಕ್ಕೊಂದು ಉಪಾ ದಾನಕಾರಣವಿರಬೇಕೆಂದು ಊಹಿಸಿ ಅವರವರಿಗೆ ತೋರಿದ ಒಂದೊಂದು ವಸ್ತುವನ್ನು ಕಾರಣವನ್ನಾಗಿ ಹೇಳುತ್ತಾರೆ. ಈಗಿನ ವಿಜ್ಞಾನಶಾಸ್ತ್ರಜ್ಞರೂ ಸಹ ಇದೇ ರೀತಿಯಲ್ಲಿ ಪರಿಶೋಧಿಸಿ ಎಲೆಕ್ಟ್ರಾನ್, ಪ್ರೋಟಾನ್ - ಮುಂತಾದ ಕಾರಣಗಳನ್ನು ಹೇಳುತ್ತಾರೆ; ಆದರೆ ಇವರು ಯಾರೂ ಪ್ರಪಂಚವನ್ನು ನೋಡತಕ್ಕವನನ್ನೂ ಅದಕ್ಕೆ ಕಾರಣವನ್ನು

ಹೇಳುವವನನ್ನೂ ಪರೀಕ್ಷಿಸುವದೇ ಇಲ್ಲ. 'ನಾನು ಸರಿಯಾದವನು' ಎಂದು ತಿಳಿದು ಕೊಂಡೇ ಪ್ರಪಂಚವಿಚಾರವನ್ನು ಮಾಡುತ್ತಾರೆ.

ಶ್ರೀಮಚ್ಛಂಕರಭಗವತ್ಪಾದರವರು ಮಾತ್ರ ಪ್ರಪಂಚವನ್ನು ನೋಡುವವನು ಭ್ರಾಂತನು ಎಂದು ತಿಳಿಸಿದ್ದಾರೆ. ಭ್ರಾಂತನು ಹೇಳಿದ್ದು, ನಿರ್ಣಯಮಾಡಿದ್ದು ಸರಿಯಾಗಿ ರುತ್ತದೆಯೇ? ಇಲ್ಲ; ಪ್ರಪಂಚವನ್ನು ನೋಡುವವನು ತನಗೆ ವಿಷಯವಾದ ಶರೀರೇಂದ್ರಿಯಾದಿಗಳನ್ನು ನಾನು, ನನ್ನದು – ಎಂದು ತಪ್ಪಾಗಿಯೇ ತಿಳಿದವನಲ್ಲವೆ? ಶರೀರೇಂದ್ರಿಯಾದಿಗಳು ಅವನು ತಿಂದ, ಉಂಡ, ಅನ್ನದ ರಸದಿಂದ ಆದದ್ದಲ್ಲವೆ? 'ಇದು ನನ್ನ ಶರೀರ', 'ಇವು ನನ್ನ ಇಂದ್ರಿಯಗಳು' – ಎಂದು ಅವುಗಳನ್ನು ವಿಷಯ ವಾಗಿ ಮಾಡಿಕೊಂಡಲ್ಲವೆ, ವ್ಯವಹಾರಮಾಡುವದು? ಹೀಗೆ ಅನ್ನರಸಮಯವಾದ, ಅನಾತ್ಮಗಳಾದ, ಮತ್ತು ವಿಷಯವಾದ, ದೇಹೇಂದ್ರಿಯಾದಿಗಳನ್ನು ನಾನು, ನನ್ನವು ಎಂದು ತಿಳಿಯುವದು ಭ್ರಾಂತಿಜ್ಞಾನವಲ್ಲವೆ? ಆದ್ದರಿಂದ ಭ್ರಾಂತನು ಪ್ರಮಾಣಗಳನ್ನು ಉಪಯೋಗಿಸಿ ಜಗತ್ತು ಮತ್ತು ಅದರ ಕಾರಣವನ್ನು ನಿರ್ಣಯಿಸಿದರೆ ಆ ನಿರ್ಣಯವು ಸರಿಯಾದದ್ದಾಗುತ್ತದೆಯೇ? ಎಂದಿಗೂ ಆಗುವದಿಲ್ಲ.

ಆದರೆ ಈ ಭ್ರಾಂತಿಯನ್ನು ಕಳೆದುಕೊಂಡ ಜ್ಞಾನಿಗಳಾದ ಋಷಿಗಳು ತತ್ತ್ವವನ್ನು ಕಂಡು ಆಡಿದ ಮಾತಿದು; **'ಸದೇವ ಸೋಮ್ಯೇದಮಗ್ರ ಆಸೀತ್'** ಎಂಬುದು. ಸತ್ ಎಂಬುದು ಒಂದೇ ಇತ್ತು. ಈಗಲೂ ಒಂದೇ ಇದೆ. ಮುಂದೆಯೂ ಅದು ಒಂದೇ ಇರುವದಾಗಿದೆ. 'ಇಲ್ಲದ್ದು ಬರುವದಿಲ್ಲ, ಇದ್ದದ್ದು ಹೋಗುವದಿಲ್ಲ' ಎಂದು ಭಗವಂತನೂ ಉಪದೇಶಿಸಿರುತ್ತಾನೆ. ಆಗ ಇಲ್ಲದ್ದು ಈಗ ಬರುವ ಹಾಗಿಲ್ಲವಾದ್ದರಿಂದ ಭ್ರಾಂತನು ಪ್ರಪಂಚವು ಇದೆ ಎಂದು ಹೇಳಿದ ಮಾತ್ರದಿಂದ ಅದು ನಿಜವಾಗಿ ಇರುವದಿಲ್ಲ. ದೇಹಾದಿಗಳಲ್ಲಿ ನಾನು ನನ್ನವು ಎಂಬ ಭ್ರಾಂತಿಯು ಇದ್ದಾಗಲೇ ಪ್ರಪಂಚವು ಕಾಣುತ್ತದೆ. ಅದಿಲ್ಲದಿರುವ ಸುಷುಪ್ತಿಸಮಾಧಿಯಗಳಲ್ಲಿ ಈ ಪ್ರಪಂಚವು ಕಾಣುವದಿಲ್ಲ; ಆದ್ದರಿಂದ ಪ್ರಪಂಚವು ಈ ಭ್ರಾಂತಿಜ್ಞಾನದಿಂದ ಕಲ್ಪಿತವಾದದ್ದು ಎಂಬುದು ಯುಕ್ತಿಯಿಂದಲೂ ಸಿದ್ಧವಾಯಿತು.

ಹೀಗೆ ಭ್ರಾಂತಿಕಲ್ಪಿತವಾದದ್ದಕ್ಕೆ ಅಧಿಷ್ಠಾನವೇ ಉಪಾದಾನಕಾರಣವೂ ನಿಮಿತ್ತ ಕಾರಣವೂ ಆಗಿರುತ್ತದೆ. ಹಗ್ಗದಲ್ಲಿ ಅಜ್ಞಾನದಿಂದ ಕಲ್ಪಿತವಾದ ಹಾವಿಗೆ ಆಸ್ಪದವಾಗಿರುವ ಹಗ್ಗವೇ ಉಪಾದಾನಕಾರಣವೂ ನಿಮಿತ್ತಕಾರಣವೂ ಆಗಿರುವಂತೆ ಭ್ರಾಂತಿಯಿಂದ ಕಲ್ಪಿತವಾದ ಈ ಜಗತ್ತಿಗೆ ಸದ್ರೂಪವಾದ ಬ್ರಹ್ಮವಸ್ತುವೇ ಉಪಾದಾನಕಾರಣವೂ ನಿಮಿತ್ತ ಕಾರಣವೂ ಆಗಿರುತ್ತದೆ.

ಶ್ರುತಿಯೂ 'ಯತೋ ವಾ ಇಮಾನಿ ಭೂತಾನಿ ಜಾಯನ್ತೇ । ಯೇನ **ಜಾತಾನಿ ಜೀವನ್ತಿ । ಯತ್ಪ್ರಯನ್ತ್ಯಭಿಸಂವಿಶನ್ತಿ । ತದ್ವಿಜಿಜ್ಞಾಸಸ್ವ । ತದ್ಬ್ರಹ್ಮ.** ಎಂದೇ ಬ್ರಹ್ಮವನ್ನೇ ಕಾರಣವನ್ನಾಗಿ ಹೇಳುತ್ತಿವೆ. ಬ್ರಹ್ಮವು ನಿರ್ವಿಕಾರವಾದದ್ದು ನಿರವಯವ ವಾದದ್ದು; ವಿಷಯಗಳು ತಿಳಿಯಲ್ಪಡತಕ್ಕವುಗಳು. ಬ್ರಹ್ಮವು ವಿಷಯಿ, ಎಲ್ಲವನ್ನೂ ತಿಳಿಯುವ ವಸ್ತು. ಈ ಎರಡಕ್ಕೂ ಭ್ರಾಂತಿರೂಪ ಸಂಬಂಧವನ್ನು ಹೇಳಬಹುದೇ ಹೊರತು ನಿಜವಾದ ಸಂಬಂಧವು ಹೊಂದುವದಿಲ್ಲ, ಏಕೆಂದರೆ ಒಂದು ಸತ್ಯ; ಮತ್ತೊಂದು ಅನೃತ. ಆದುದರಿಂದ ಬ್ರಹ್ಮ ಅಥವಾ ಆತ್ಮ ಎಂಬುದು ಜಗತ್ಕಾರಣವೆಂದು ವ್ಯವಹರಿಸಲ್ಪಟ್ಟರೂ ಅದು ನಿರ್ವಿಕಾರಿಯು. ಉಪಾದಾನಕಾರಣವಾಗಬೇಕಾದರೆ ಸಾವಯವವಾದದ್ದೂ ವಿಷಯವಾದದ್ದೂ ಆಗಿರಬೇಕು. ಬ್ರಹ್ಮವು ನಿರವಯವವೂ ವಿಷಯಿಯೂ ಆಗಿದೆ; ಆದ್ದರಿಂದ ನಿಜವಾಗಿ ಬ್ರಹ್ಮವು ಜಗತ್ತಾಗಿ ಪರಿಣಾಮವಾಗು ವದಿಲ್ಲ, ಹಾಗಾದರೆ ಬ್ರಹ್ಮವು ಕಾರಣ ಎಂಬ ವಾಕ್ಯಕ್ಕೆ ಏನರ್ಥ? ಎಂದರೆ ಜಗತ್ತೆಂಬುದು ಭ್ರಾಂತಿಯಿಂದ ಬ್ರಹ್ಮದಲ್ಲಿ ಕಲ್ಪಿತವಾಗಿದೆ ಎಂದಿಷ್ಟೇ ಎಂದು ಮೊದಲೇ ತಿಳಿಸಿರುತ್ತೇನೆ. ಕಲ್ಪಿತವಾದ ವಸ್ತುವಿಗೆ ಆಸ್ಪದವಾದ ವಸ್ತುವೇ ಉಪದಾನಕಾರಣವೂ ನಿಮಿತ್ತಕಾರಣವೂ ಆಗಿರುವದರಿಂದ ಕಲ್ಪಿತವಾದ ಜಗತ್ತಿಗೆ ಉಪಾದಾನಕಾರಣವೂ ಬ್ರಹ್ಮವೇ, ನಿಮಿತ್ತ ಕಾರಣವೂ ಬ್ರಹ್ಮವೇ ಎಂದು ವ್ಯಾವಹಾರಿಕ ದೃಷ್ಟಿಯಿಂದ ಹೇಳಿದೆ. ಸತ್ ಎಂಬ ಶಬ್ದದಿಂದ ತಿಳಿಸಿದ ಆತ್ಮ ಅಥವಾ ಬ್ರಹ್ಮವು ಒಂದೇ ಯಾವಾಗಲೂ ಇರತಕ್ಕದ್ದು. ಆತ್ಮನಿಗಿಂತ ಭಿನ್ನವಾದ ಯಾವ ಪ್ರಪಂಚವೂ ಯಾವಾಗಲೂ ಅಂದರೆ ಇರುವಂತೆ ತೋರುವ ಕಾಲದಲ್ಲಿಯೂ ಇರುವದೇ ಇಲ್ಲ, ಅದು ಬರಿಯ ಹುಸಿತೋರಿಕೆ ಎಂದು ಸಿದ್ಧವಾಯಿತು.

ಈ ತತ್ತ್ವವನ್ನು ಯಾರು ಬೇಕಾದರೂ ಈಗಲೇ ಮನಗಾಣಬಹುದು. ದೇಹಾದಿ ಗಳಲ್ಲಿ ನಾನು ಎಂಬ ಬುದ್ಧಿಯ ಭ್ರಾಂತಿ ಎಂದು ಯಾವಾಗ ತಿಳಿಯಿತೋ ಆಗಲೇ ಈ ಭ್ರಾಂತಿಯನ್ನು ಕಳೆದುಕೊಂಡು ತನ್ನ ಸ್ವರೂಪವೇ ಬ್ರಹ್ಮಸ್ವರೂಪವು – ಎಂದು ಅರಿಯ ಬಹುದಾಗಿದೆ. ಅದೊಂದೇ ಪರಮಾರ್ಥವಾಗಿರತಕ್ಕದ್ದು. **'ಸದೇವ ಸತ್ಯಮ್'** ಎಂಬ ಅನುಭವರೂಪವಾದ ಜ್ಞಾನವು ಭ್ರಾಂತಿನಿವಾರಣೆಯ ಸಮಕಾಲದಲ್ಲಿಯೇ ಉಂಟಾ ಗುತ್ತದೆ. ಜ್ಞಾನವುಂಟಾದ ಸಮಕಾಲದಲ್ಲಿಯೇ ತಾನು ಬ್ರಹ್ಮವೆಂದರಿತುಕೊಳ್ಳುತ್ತಾನೆ. ಅಂದರೆ ಮುಕ್ತನಾಗುತ್ತಾನೆ ಎಂದು ಉಪನಿಷತ್ತುಗಳು ಮೊಳಗುತ್ತಿರುವವು.

# ಮೋಕ್ಷದ ಸ್ವರೂಪ

ನಮ್ಮಗಳಲ್ಲಿ ಯಾರೊಬ್ಬರಿಗೂ ದುಃಖವು ಬೇಡ, ಸುಖವು ಬೇಕು ಎಂಬುದು ಸ್ವಭಾವವಾಗಿದೆ. ನಮ್ಮ ಜೀವನವೇ ದುಃಖರಹಿತವಾದ ಶಾಶ್ವತಸುಖಕ್ಕಾಗಿ ಹೂಡಿರುವ ಒಂದಾನೊಂದು ಕಾಳಗವೆಂದು ಹೇಳಬಹುದು. ಇದು ಎಲ್ಲಾ ಆಸ್ತಿಕ-ನಾಸ್ತಿಕರಿಗೂ ಸಮಾನವಾಗಿರುತ್ತದೆ. ವಿವೇಕಿಯಾಗಿದ್ದು ಸುಖವು ಬೇಡವೆಂದಾಗಲಿ ದುಃಖವು ಬೇಕೆಂದಾಗಲೀ ಬಯಸುವವನು ಯಾವ ಲೋಕದಲ್ಲಿಯೂ ಯಾವ ಕಾಲದಲ್ಲಿಯೂ ಹಿಂದೆ ಇದ್ದನೆಂದೂ ನಾವು ಕೇಳಿರುವದಿಲ್ಲ; ಈಗಲೂ ಇಂಥವನು ನಮಗೆ ಕಾಣ ಬರುವದಿಲ್ಲ; ಇನ್ನು ಮುಂದೆಯೂ ಇಂಥವನನ್ನು ನಾವು ನೋಡಬಹುದೆಂಬ ನಿರೀಕ್ಷೆಯೂ ಇಲ್ಲ. ಮನುಷ್ಯಮಾತ್ರದವನಿಗೆ ಅಷ್ಟೇಕೆ, ಪ್ರಾಣಿಮಾತ್ರಕ್ಕೂ ಸುಖವೇ ಬೇಕಾಗಿರುತ್ತದೆ. ದುಃಖವು ಯಾರಿಗೂ ಬೇಡವಾಗಿರುತ್ತದೆ.

ಮನುಷ್ಯರು ಸುಖವು ಬೇಕೆನ್ನುತ್ತಿದ್ದಾರಲ್ಲದೆ ತಮಗೆ ಆದಷ್ಟು ದೀರ್ಘಕಾಲ ಸುಖವಿರಬೇಕೆಂದು ಹವಣಿಸುತ್ತಾರೆ. ಆ ಸುಖದಲ್ಲಿ ಯಾವ ದುಃಖದ ಬೆರಕೆಯೂ ಇರಬಾರದೆಂದೂ ಹೊಡೆದಾಡುತ್ತಿದ್ದಾರೆ. ಇದನ್ನು ನೋಡಿದರೆ ಅವರಿಗೆ ನಿತ್ಯವಾದ ಸುಖವು, ದುಃಖಮಿಶ್ರವಿಲ್ಲದ ಅನಂತವಾದ ಸುಖವು ದೊರಕುವದಾದರೆ ಅದು ಬೇಕು ಎಂದು ಧಾರಾಳವಾಗಿ ಹೇಳಬಹುದಾಗಿರುತ್ತದೆ. ಇಂತಹ ಸುಖವೊಂದು ಇದೆ, ಅದು ಒಂದಾನೊಂದು ಮಾರ್ಗದಿಂದ ದೊರಕೇ ದೊರಕುತ್ತದೆ ಎಂದು ಕೆಲವು ಜನರು ಹಿಂದಿನ ಕಾಲದಲ್ಲಿ ಸಾರಿರುತ್ತಾರೆ. ಈಗಲೂ ಹೀಗೆಂದೇ ಅವರು ಅಭಿಪ್ರಾಯ ಪಡುತ್ತಾರೆ. ಈ ಸುಖಕ್ಕೆ "ಮೋಕ್ಷ"ವೆಂದು ಹೆಸರು. ಮೋಕ್ಷದ ಸ್ವರೂಪವನ್ನೂ ಅದನ್ನು ಪಡೆಯುವ ಉಪಾಯವನ್ನೂ ಹೇಳುವ ಜನರನ್ನು ಮೋಕ್ಷವಾದಿಗಳೆಂದು ಕರೆಯ ಬಹುದು.

ಮೋಕ್ಷವಾದಿಗಳೆಲ್ಲರೂ ಮೋಕ್ಷವು ನಿತ್ಯವಾದ ಸುಖವೆಂಬಷ್ಟಕ್ಕೆ ಒಂದೇ ಅಭಿಪ್ರಾಯ ವುಳ್ಳವರಾದರೂ ಅದರ ನಿಜವಾದ ಸ್ವರೂಪವು ಯಾವದು? ಎಂಬ ವಿಷಯದಲ್ಲಿ ಒಂದೇ ಮತವುಳ್ಳವರಾಗಿರುವದಿಲ್ಲ; ಅದನ್ನು ಪಡೆಯುವದಕ್ಕೆ ಅನುಸರಿಸಬೇಕಾದ ಮಾರ್ಗದ ವಿಷಯದಲ್ಲಿಯೂ ಒಂದೇ ಅಭಿಪ್ರಾಯವುಳ್ಳವರಾಗಿರುವದಿಲ್ಲ. ಈ ನಾನಾ ಮತಗಳನ್ನು ಮುಖ್ಯವಾಗಿ ಎರಡು ದೊಡ್ಡ ಪಂಗಡಗಳಾಗಿ ವಿಂಗಡಿಸಬಹುದಾಗಿ ರುತ್ತದೆ. ಮೋಕ್ಷವು ದೇಶಾಂತರದಲ್ಲಿ ಕಾಲಾಂತರದಲ್ಲಿ ಮತ್ತು ಅವಸ್ಥಾಂತರದಲ್ಲಿ

ದೊರಕಬೇಕಾಗಿರುವ ಒಂದಾನೊಂದು ಪುರುಷಾರ್ಥವು ಎಂದು ಹೇಳುವವರು ಒಂದು ಪಂಗಡ. ಅದು ಈಗಲೇ ಇಲ್ಲಿಯೇ ದೊರಕತಕ್ಕದ್ದಾಗಿದೆ ಎಂದು ಹೇಳುವವರು ಮತ್ತೊಂದು ಪಂಗಡ. ಈ ಎರಡು ಪಂಗಡದವರು ಹೇಳುವ ಮೋಕ್ಷಸಾಧನಗಳೂ ಸ್ವಾಭಾವಿಕವಾಗಿಯೇ ಮೋಕ್ಷಸ್ವರೂಪದಲ್ಲಿ ಅವರವರಿಗಿರುವ ಮತವನ್ನನುಸರಿಸಿ ಭಿನ್ನಭಿನ್ನ ವಾಗಿಯೇ ಇರುತ್ತವೆ.

ಈ ಮತಭೇದಗಳನ್ನು ಕುರಿತು ವಿಚಾರಮಾಡುವದು ನಿಷ್ಪ್ರಯೋಜನವೆಂದು ಯಾರೂ ಹೇಳುವದಕ್ಕಾಗುವದಿಲ್ಲ, ಏಕೆಂದರೆ ನಾವು ಮೋಕ್ಷವನ್ನು ಒಪ್ಪದ ನಾಸ್ತಿಕ ರಾಗಿದ್ದರೂ ಅದು ಇಲ್ಲವೇ ಇಲ್ಲವೆಂದು ನಿರ್ಧರಿಸಿಕೊಳ್ಳುವದು ಅತ್ಯಗತ್ಯವು. ಒಂದು ವೇಳೆ ಮೋಕ್ಷವು ನಿಜವಾಗಿಯೂ ಇದ್ದೇ ಇದೆಯೆಂದು ಸಿದ್ಧವಾಗುವದಾದರೆ ಅದ ನಮಗೆ ಬೇಡವೆಂದು ಯಾರೂ ಹೇಳುವಂತಿಲ್ಲ, ಮೋಕ್ಷವನ್ನು ಒಪ್ಪುವರಾದರಂತೂ ಯಾವ ಮತವು ಸರಿಯೆಂಬುದನ್ನು ನಿಶ್ಚಯಿಸಿಕೊಂಡೇ ತೀರಬೇಕು. ಇಲ್ಲದಿದ್ದರೆ ನಮಗೆ ಪರಮಪುರುಷಾರ್ಥವಾದ ಮೋಕ್ಷವು ಸಿಕ್ಕದೇ ಹೋಗಬಹುದು. ವಿಚಾರ ವಿಲ್ಲದೆ ಯಾವದಾದರೊಂದು ಮಾರ್ಗವನ್ನನುಸರಿಸಿದರೆ ಅನರ್ಥವೂ ಬಂದೊದಗ ಬಹುದು. ಆದ್ದರಿಂದ ಹಿಂದಿನವರಿಗೆ ಹೇಗೋ ಹಾಗೆಯೇ ಈಗಿನವರಾದ ನಮಗೂ ಈ ಮೋಕ್ಷವಿಚಾರವು ಸಪ್ರಯೋಜನವೇ ಆಗಿರುತ್ತದೆ.

ಮೋಕ್ಷವಾದಿಗಳಲ್ಲಿ ಬಹುಮಟ್ಟಿಗೆ ಎಲ್ಲರೂ ಯಾವದಾದರೂ ಒಂದು ಧರ್ಮ ಗ್ರಂಥವನ್ನು ಪ್ರಮಾಣವಾಗಿ ಅಂಗೀಕರಿಸಿಯೇ ಮೋಕ್ಷಸ್ವರೂಪವನ್ನು ಗೊತ್ತುಪಡಿಸು ತ್ತಿರುತ್ತಾರೆ. ಸೌಕರ್ಯಕ್ಕಾಗಿ ಇವರನ್ನು ವೈದಿಕರೆಂದೂ ಅವೈದಿಕರೆಂದೂ ಎರಡು ವರ್ಗ ಗಳಾಗಿ ವಿಂಗಡಿಸಿಕೊಳ್ಳಬಹುದು. ಅವೈದಿಕರಲ್ಲಿ ಬೌದ್ಧರು, ಜೈನರು, ಕ್ರಿಸ್ತಿಯನ್ನರು, ಮುಸಲ್ಮಾನರು, ಪಾರ್ಸಿಯವರು ಮುಂತಾದವರು ಸೇರಿರುತ್ತಾರೆ. ವೈದಿಕರಲ್ಲಿ ದ್ವೈತ, ವಿಶಿಷ್ಟಾದ್ವೈತ, ಅದ್ವೈತ ಎಂಬ ಸಿದ್ಧಾಂತಗಳನ್ನು ಅನುಸರಿಸುವ ವೇದಾಂತಿಗಳು ಸೇರಿ ರುತ್ತಾರೆ. ಈ ಎಲ್ಲ ಮೋಕ್ಷವಾದಿಗಳೂ ಭರತಖಂಡದಲ್ಲಿ ಈಗ ಕಂಡುಬರುತ್ತಿದ್ದಾರೆ. ದ್ವೈತಾದ್ವೈತವೇ ಮುಂತಾದ ಒಂದೆರಡು ಪ್ರಭೇದಗಳನ್ನು ನಾವು ಇಲ್ಲಿ ಕೈಬಿಟ್ಟರೂ ಬಾಧಕವಿಲ್ಲ, ಏಕೆಂದರೆ ಅವುಗಳನ್ನು ಭರತಖಂಡದ ದಕ್ಷಿಣದೇಶದಲ್ಲಿ ಪ್ರಚಾರದಲ್ಲಿರುವ ಮೇಲಿನ ಸಿದ್ಧಾಂತತ್ರಯದ ವಿಚಾರದಿಂದಲೇ ವಿಚಾರಮಾಡಿದಂತಾಗುತ್ತದೆ.

ಅವೈದಿಕರಲ್ಲಿ ಕೆಲವರು ಅನಾತ್ಮವಾದಿಗಳು, ಕೆಲವರು ಆತ್ಮವಾದಿಗಳು; ಕೆಲವರು ಸೇಶ್ವರವಾದಿಗಳು, ಕೆಲವರು ನಿರೀಶ್ವರವಾದಿಗಳು, ಈ ಪ್ರಭೇದಗಳಿಂದ ಪ್ರಕೃತವಿಚಾರಕ್ಕೆ

ಯಾವ ಬಾಧಕವೂ ಇರುವದಿಲ್ಲ, ಏಕೆಂದರೆ ಇವರೆಲ್ಲರೂ ಬಹುಮಟ್ಟಿಗೆ ಒಂದೇ ಬಗೆಯ ಮೋಕ್ಷೋಪಾಯವನ್ನು ಉಪದೇಶಿಸಿರುತ್ತಾರೆ. ಅವರ ಮತದಂತೆ ಅಹಿಂಸೆ, ಪ್ರೇಮ, ಸತ್ಯ, ಧರ್ಮ ಮುಂತಾದವುಗಳ ಅನುಷ್ಠಾನವೇ ಮೋಕ್ಷಕ್ಕೆ ಕಾರಣವಾಗಿ ರುತ್ತದೆ. ಈಶ್ವರನನ್ನು ಒಪ್ಪುವ ವಾದಿಗಳು ಈಶ್ವರನ ಧ್ಯಾನವನ್ನು ಈ ಸಾಧನಗಳ ಪಟ್ಟಿಗೆ ಸೇರಿಸುತ್ತಾರೆ. ಅಂತೂ ತಮ್ಮ ತಮ್ಮ ಗ್ರಂಥಗಳಲ್ಲಿ ಬೋಧಿಸಿರುವ ಸಾಧನಗಳನ್ನು ಅನುಷ್ಠಾನಮಾಡುವದರಿಂದಲೇ ಕಾಲಾಂತರದಲ್ಲಿ, ದೇಶಾಂತರದಲ್ಲಿ ಅಥವಾ ಅವಸ್ಥಾಂತರದಲ್ಲಿ ಮೋಕ್ಷವು ಸಿಕ್ಕುವದೆಂಬುದು ಇವರೆಲ್ಲರಿಗೂ ಸಮಾನವಾಗಿರುತ್ತದೆ.

ಈ ವಾದಿಗಳು ಹೇಳುವ ಸಾಧನಗಳು ನಿಷ್ಪ್ರಯೋಜಕವೆಂದು ಯಾರೂ ಹೇಳುವದಿಲ್ಲ, ಆ ಸಾಧನಗಳಲ್ಲಿ ಅನೇಕ ಸಾಧನಗಳನ್ನು ವೈದಿಕರೂ ಅವೈದಿಕರೂ ಸಮವಾಗಿಯೇ ಹೊಗಳಿರುತ್ತಾರೆ. ಆದರೆ ಅವುಗಳಿಂದ ನಮಗೆ ಪ್ರಕೃತವಾಗಿರುವ ಪರಮ ಪುರುಷಾರ್ಥವು ಸಿಕ್ಕೀತೆ? ಎಂಬುದೀಗ ವಿಚಾರಣೀಯವಾಗಿರುತ್ತದೆ. ಅವೈದಿಕ ದರ್ಶನಗಳಲ್ಲಿ ಈ ಸಾಧನದಿಂದ ಸಿಕ್ಕುವ ಸ್ವರ್ಗಾದಿಪದಾಭಿಧೇಯವಾದ ಸದ್ಗತಿಯನ್ನು ನಿತ್ಯವೆಂದೇ ಹೇಳಿರುತ್ತದೆ. ಆದರೆ ಸಾಧನದಿಂದ ದೊರೆತದ್ದು ಹೇಗೆ ನಿತ್ಯವಾದೀತು? ಈ ಲೋಕದಲ್ಲಿ ನಾವು ಮಾಡುತ್ತಿರುವ ಪ್ರಯತ್ನಗಳಿಂದ ಸಾಧಿಸಿದ ಯಾವ ಸುಖವೂ ನೆಲೆಯಾಗಿ ನಿಂತಿರುವದಿಲ್ಲ, ಹಾಗೆ ನಿಲ್ಲುವದೆಂದು ಯಾವ ವಿವೇಕಿಯೂ ನಂಬಿ ರುವದಿಲ್ಲ, ಹೀಗಿರುವಲ್ಲಿ ಮೇಲೆ ಹೇಳಿದ ಧರ್ಮಗ್ರಂಥಗಳಲ್ಲಿ ಹೇಳಿರುವ ಸಾಧನ ಗಳಿಂದ ಹೊಸದಾಗಿ ದೊರಕುವದಾಗಿರುವ ಸದ್ಗತಿಯು ನಿತ್ಯಾನಂದವಾಗಿರುವದೆಂದು ನಂಬುವದು ಹೇಗೆ? ''ಯಾವದು ಕೃತಕವಾಗಿರುವದೋ ಅದು ಅನಿತ್ಯವಾಗಿರುವದು'' ಎಂಬುದೊಂದೇ ನ್ಯಾಯವು ನಮ್ಮ ಮನಸ್ಸಿಗೆ ಒಪ್ಪಾಗಿರುತ್ತದೆ. ಕ್ರಿಯಾಸಾಧ್ಯವಾಗಿರುವ ಯಾವದೊಂದೂ ನಿತ್ಯವಾಗಿರುವದೆಂದರೆ ವಿಚಾರಪರರಾದವರ ಮನಸ್ಸಿಗೆ ತೃಪ್ತಿಯಾಗು ವಹಾಗೆ ಇರುವದೇ ಇಲ್ಲ.

ಹಿಂದೆ ವೈದಿಕರಲ್ಲಿ ಕೆಲವರು ''ಕರ್ಮದಿಂದಲೇ ಅಕ್ಷಯವಾದ ಸುಖವು ದೊರಕುವದು'' ಎಂದು ಹೇಳುತ್ತಿದ್ದರು. ಕರ್ಮಕಾಂಡದಲ್ಲಿ ಹೇಳಿರುವ ಸ್ವರ್ಗವೇ ನಿತ್ಯ ನಿರತಿಶಯವಾದ ಸುಖವೆಂದು ಅವರ ತಾತ್ಪರ್ಯವಾಗಿತ್ತು. ''ಸೋಮಪಾನವನ್ನು ಮಾಡಿ ಅಮೃತರಾದೆವು'' ಮುಂತಾದ ವೇದವಚನಗಳನ್ನು ಉದಾಹರಿಸುತ್ತಿದ್ದರು. ಆದರೆ ಈ ಮತವೂ ಮೇಲೆ ಬರೆದಿರುವ ನಿಯಮಕ್ಕೆ ವಿರುದ್ಧವಾಗಿರುತ್ತದೆ. ಕರ್ಮ ದಿಂದ ಆದ ಯಾವ ಫಲವೂ ಈ ಲೋಕದಲ್ಲಿ ನಿತ್ಯವಾಗಿರುವದು ಕಂಡುಬಂದಿರು

ವದಿಲ್ಲ. ಇದರಂತೆ ಪರಲೋಕದಲ್ಲಿಯೂ ವೈದಿಕಕರ್ಮದಿಂದ ಆಗುವ ಫಲವೂ ಅನಿತ್ಯ ವಾಗಿರಬೇಕೆಂಬುದು ಯುಕ್ತವಾಗಿಯೇ ಕಾಣಿಸುತ್ತದೆ. ಇಷ್ಟೇ ಅಲ್ಲದೆ ಈ ನ್ಯಾಯಕ್ಕೆ ಶ್ರುತಿಯ ಬೆಂಬಲವೂ ಇದೆ. **'ತದ್ಯಥೇ ಹ ಕರ್ಮಚಿತೋ ಲೋಕಃ ಕ್ಷೀಯತೇ ಏವಮೇವಾಮುತ್ರ ಪುಣ್ಯಚಿತೋ ಲೋಕಃಕ್ಷೀಯತೇ'** ಎಂಬ ವಾಕ್ಯವು ಪುಣ್ಯ ದಿಂದಾದ ಸ್ವರ್ಗವೂ ಕ್ಷಯವಾಗಿಯೇ ತೀರುವದೆಂದು ಸ್ಪಷ್ಟವಾಗಿ ಹೇಳಿಬಿಟ್ಟಿರುತ್ತದೆ.

ಕರ್ಮವಾದದಲ್ಲಿ ಮೇಲೆ ಹೇಳಿದ ದೋಷವನ್ನು ಕಂಡ ಕೆಲವರು ಮೀಮಾಂಸಕರು ಮತ್ತೊಂದು ಬಗೆಯಲ್ಲಿ ಆ ವಾದವನ್ನು ಸ್ಥಾಪಿಸುವದಕ್ಕೆ ಯತ್ನಿಸಿದ್ದರು. ಅದು ಹೇಗೆಂದರೆ ಮುಕ್ತಿ ಎಂಬುದು ಕರ್ಮದಿಂದ ಹೊಸದಾಗಿ ಉಂಟಾಗುವ ಫಲವೆನ್ನು ವದು ನಿಜ; ಆದರೂ ಕರ್ಮವನ್ನು ಸರಿಯಾಗಿ ಮಾಡದಿದ್ದರೆ ಆ ಮುಕ್ತಿಯು ಸಿದ್ಧ ವಾಗುವ ಹಾಗಿಲ್ಲ. ಏಕೆಂದರೆ ಕಾಮ್ಯಕರ್ಮಗಳಿಂದ ಒಳ್ಳೆಯ ಫಲಗಳೂ ನಿಷಿದ್ಧ ಕರ್ಮ ಗಳಿಂದ ಕೆಟ್ಟಫಲಗಳೂ ಆಗುತ್ತಲೇ ಇರುತ್ತವೆ. ಶಾಸ್ತ್ರದಲ್ಲಿ ಹೇಳಿದ ನಿತ್ಯಕರ್ಮವನ್ನು ಮಾಡದಿದ್ದರೆ ಪ್ರತ್ಯವಾಯವೂ ಬರುತ್ತದೆ. ಹೀಗೆ ಒಳ್ಳೆಯ ಮತ್ತು ಕೆಟ್ಟಫಲಗಳನ್ನು ಅನುಭವಿಸುತ್ತಿರುವದೇ ಸಂಸಾರವು. ಇದರಿಂದ ತಪ್ಪಿಸಿಕೊಳ್ಳುವದೇ ಮೋಕ್ಷವು. ಆದ್ದರಿಂದ ಕಾಮನಿಷಿದ್ಧಕರ್ಮಗಳನ್ನು ಬಿಟ್ಟು ನಿತ್ಯಕರ್ಮಗಳನ್ನು ಮಾಡುತ್ತಿದ್ದರೆ ಈಗ ನಾವು ಹೊಂದಿರುವ ದೇಹವು ಆಯಸ್ಸು ಕಳೆದ ಬಳಿದ ಬಿದ್ದುಹೋಗಲು ಮತ್ತೊಂದು ಜನ್ಮ ಉಂಟಾಗಲು ಕಾರಣವೇ ಇಲ್ಲವಾದ್ದರಿಂದ ಮೋಕ್ಷವು ತಾನಾಗಿಯೇ ದೊರಕುವದು. ಹೀಗೆಂಬುದು ಅವರ ಮತವಾಗಿತ್ತು.

ಆದರೆ ಈ ವಾದದಲ್ಲಿ ಒಂದು ದೋಷವಿದ್ದೇ ಇದೆ. ಅದೇನೆಂದರೆ ಸಂಚಿತ ಕರ್ಮವು ರಾಶಿರಾಶಿಯಾಗಿ ಬಿದ್ದಿರುವಾಗ ಅದಕ್ಕೆ ಫಲವಿಲ್ಲದೇ ಹೋಗುವದು ಸಾಧ್ಯ ವಿಲ್ಲ. ಈ ಜನ್ಮದಲ್ಲಿ ನಾವು ಹೇಗೆ ವರ್ತಿಸಿದರೂ ಆ ಸಂಚಿತಕರ್ಮವು ನಮ್ಮನ್ನು ಬೆನ್ನಂಟಿಯೇ ಇರುವದರಿಂದ ಅದನ್ನು ತಪ್ಪಿಸಿಕೊಳ್ಳುವದಕ್ಕೆ ಆಗುವ ಹಾಗಿಲ್ಲ. ಈ ಪೀಕಲಾಟವನ್ನು ತಪ್ಪಿಸಿಕೊಳ್ಳುವದಕ್ಕೆ ಆ ಮೀಮಾಂಸಕರು ಒಂದು ಹಂಚಿಕೆಯನ್ನು ಮಾಡಿದರು. ನಿತ್ಯ ಕರ್ಮಾನುಷ್ಠಾನವೇ ಆ ಸಂಚಿತಕರ್ಮವನ್ನೆಲ್ಲ ನಾಶಗೊಳಿಸುವದೆಂದು ಒಂದು ಅಭಿಪ್ರಾಯವನ್ನು ತೆಗೆದರು. ಆದರೆ ಇದರಿಂದಲೂ ಅವರ ಇಷ್ಟಾರ್ಥವು ಕೈಗೂಡಲಿಲ್ಲ. ಏಕೆಂದರೆ ನಿತ್ಯಕರ್ಮವೂ ಸಂಚಿತಕರ್ಮವೂ ಕರ್ಮಗಳೇ ಆಗಿರುವಲ್ಲಿ ಒಂದು ಕರ್ಮವು ಮತ್ತೊಂದಕ್ಕೆ ವಿರುದ್ಧವೆಂಬುದು ಹೊಂದಿಕೆಯಾಗುವದಿಲ್ಲ. ಹಿಂದಿನ ಜನ್ಮಗಳ ಪಾಪಕರ್ಮಗಳನ್ನೆಲ್ಲ ಅದು ಪ್ರಾಯಶ್ಚಿತ್ತದಂತೆ ಅಳಿಸಿ ಹಾಕುವದೆಂದು ಒಂದು ವೇಳೆ

ಹೇಳಿದರೂ ಹಿಂದಿನ ಪುಣ್ಯಕರ್ಮಗಳು ಹಾಗೆಯೇ ಉಳಿದುಕೊಳ್ಳುವದರಿಂದ ಕರ್ಮಮಾತ್ರದಿಂದಲೇ ಮೋಕ್ಷವು ಅಯತ್ನವಾಗಿ ಸಿಕ್ಕುವದೆಂಬುದು ಅಯುಕ್ತವಾಗುತ್ತದೆ.

ೞೞೞೞೞ

# ವಿಶಿಷ್ಟಾದ್ವೈತಸಿದ್ಧಾಂತ

ಶ್ರೀರಾಮಾನುಜಾಚಾರ್ಯರವರು ಬ್ರಹ್ಮಸೂತ್ರಕ್ಕೆ ಬರೆದಿರುವ ವಿವರಣೆಗಳ ಮೂಲಕ ಪ್ರತಿಪಾದಿಸಿರುವ ಸಿದ್ಧಾಂತಕ್ಕೆ ವಿಶಿಷ್ಟಾದ್ವೈತವೆಂದು ಹೆಸರು. ಇವರು ಬರೆದಿರುವ ಬ್ರಹ್ಮಸೂತ್ರವಿವರಣೆಯು ಶ್ರೀಭಾಷ್ಯ, ವೇದಾಂತಸಾರ, ವೇದಾಂತದೀಪ– ಎಂಬ ಮೂರು ಗ್ರಂಥಗಳ ರೂಪದಲ್ಲಿರುವದು. ಶ್ರೀಶಂಕರಾಚಾರ್ಯರಂತೆಯೂ ಶ್ರೀಮಧ್ವಾಚಾರ್ಯರಂತೆಯೂ ಇವರು ಉಪನಿಷತ್ತುಗಳಿಗೆ ಭಾಷ್ಯವನ್ನು ಬರೆದಿಲ್ಲ, ಮುಖ್ಯವಾಗಿ ಗೀತಾಭಾಷ್ಯ ಮತ್ತು ಸೂತ್ರಭಾಷ್ಯ – ಇವೆರಡರ* ಮೂಲಕವಾಗಿಯೇ ಇವರ ಸಿದ್ಧಾಂತವನ್ನು ನಿರ್ಣಯಿಸಬೇಕಾಗಿರುವದು.

ವಿಶಿಷ್ಟಾದ್ವೈತದಲ್ಲಿ ಸರ್ವವೂ ಪರಮಾತ್ಮನೇ. ಆ ಪರಮಾತ್ಮನಿಗೆ ಚಿತ್ತು, ಅಚಿತ್ತು – ಎಂಬ ಎರಡು ಶರೀರಗಳು. ಪ್ರಪಂಚವು ಚಿತ್ತು, ಅಚಿತ್ತು– ಎಂಬ ಎರಡು ದೊಡ್ಡ ವಿಭಾಗಗಳುಳ್ಳದ್ದಾಗಿರುವದು. ಚಿತ್ತೆಂದರೆ ಜೀವರು, ಅಚಿತ್ತೆಂದರೆ ಜಡವಸ್ತುಗಳು. ಅಚಿದ್ವಸ್ತುವಿನ ಸ್ವರೂಪವೂ ಸ್ವಭಾವವೂ ಚಿದ್ವಸ್ತುವಿನ ಸ್ವರೂಪವೂ ಸ್ವಭಾವವೂ ಅತ್ಯಂತವಾಗಿ ಬೇರೆ ಬೇರೆ ಬಗೆಯಾಗಿರುವವು. ಇವುಗಳಲ್ಲಿ ಅಚಿದ್ವಸ್ತುವಿಗೆ ಚಿದ್ವಸ್ತುವಾದ ಜೀವನು ಆತ್ಮನು; ಈ ಜೀವನು ಚೇತನರೂಪನಾಗಿಯೂ ಅಚಿದ್ವಸ್ತುವಿನ ಒಳಗೆ ಇದ್ದುಕೊಂಡು ಅದಕ್ಕೆ ಆತ್ಮನೂ ಆಗಿರುವನು. ಜೀವನು ಸಂಸಾರದಲ್ಲಿದ್ದರೆ ಬದ್ಧನೆನಿಸುವನು. ಅದರಿಂದ ಬಿಡುಗಡೆಯನ್ನು ಹೊಂದಿದರೆ ಮುಕ್ತನೆನಿಸುವನು. ಜೀವನು ಬದ್ಧನಾಗಿರಲಿ, ಮುಕ್ತನಾಗಿರಲಿ, ಪರಮಾತ್ಮನು ಯಾವಾಗಲೂ ಅವನಿಗಿಂತ ಅತ್ಯಂತ ವಿಲಕ್ಷಣನಾಗಿರುವನು. ಪರಮಾತ್ಮನಲ್ಲಿ ಯಾವ ದೋಷಗಳೂ ಇರುವದಿಲ್ಲ, ಕಲ್ಯಾಣ ಗುಣಗಳೇ ಅವನಲ್ಲಿ ತುಂಬಿರುವವು. ಚಿದ್ವಸ್ತುವಾದ ಜೀವನು ಅಚಿದ್ವಸ್ತುವಿಗೆ ಆತ್ಮನಾಗಿರುವಂತೆಯೇ ಪರಮಾತ್ಮನೂ ಚಿದಚಿದ್ವಸ್ತುಗಳೆರಡಕ್ಕೂ ಆತ್ಮನಾಗಿರುವನು, ಅವುಗಳೆ

* ಈ ಲೇಖನಕ್ಕೆ ಶ್ರೀಭಾಷ್ಯ, ವೇದಾಂತಸಾರ, ವೇದಾಂತ ದೀಪ – ಎಂಬ ಬ್ರಹ್ಮ ಸೂತ್ರ ವಿವರಣೆಗಳೇ ಮುಖ್ಯವಾಗಿ ಆಧಾರವಾಗಿವೆ.

ರಡನ್ನೂ ಯಾವಾಗಲೂ ವ್ಯಾಪಿಸಿಕೊಂಡಿರುವನು; ಅವುಗಳಿಗೆ ಆಧಾರನಾಗಿ ಅವುಗಳನ್ನು ವಶದಲ್ಲಿಟ್ಟುಕೊಂಡಿರುವನಾಗಿ ಯಾವಾಗಲೂ ಸ್ವತಂತ್ರನಾಗಿರುವನು. ಈ ರೀತಿಯಲ್ಲಿ ಅಚಿದ್ವಸ್ತುವಿಗಿಂತ ಜೀವನು ಎಷ್ಟರವುಟ್ಟಿಗೆ ಅತ್ಯಂತವಾಗಿ ಬೇರೆಯ ಸ್ವರೂಪದವನೂ ಸ್ವಭಾವದವನೂ ಆಗಿರುವನೋ, ಜೀವನಿಗಿಂತಲೂ ಪರಮಾತ್ಮನು ಮೇಲೆ ಹೇಳಿದ ಧರ್ಮಗಳ ದೃಷ್ಟಿಯಿಂದ ನೋಡಿದರೆ ಅಷ್ಟೇ ಬೇರೆಯ ಸ್ವರೂಪದವನೂ ಸ್ವಭಾವದ ವನೂ ಆಗಿರುವನು. ಚಿದಚಿದ್ವಸ್ತುಗಳೆರಡೂ ಪರಮಾತ್ಮನಿಗೆ ಶರೀರಗಳು, ಪರಮಾತ್ಮನು ಅವಕ್ಕೆ ಆತ್ಮನು. ಈ ಚಿದಚಿದ್ವಸ್ತುಗಳೆರಡಕ್ಕೂ ಸೂಕ್ಷ್ಮಾವಸ್ಥೆಯೆಂದೂ ಸ್ಥೂಲಾವಸ್ಥೆ ಯೆಂದೂ ಎರಡು ಅವಸ್ಥೆಗಳಿರುವವು. ಸೂಕ್ಷ್ಮವಾಗಿರುವ ಚಿತ್ತು, ಅಚಿತ್ತು – ಎಂಬೆ ರಡು ಶರೀರವುಳ್ಳ ಪರಮಾತ್ಮನು ಕಾರಣನೆನಿಸುವನು; ಅದೇ ಪರಮಾತ್ಮನೇ ಸ್ಥೂಲ ವಾದ ಚಿತ್ತು, ಅಚಿತ್ತು – ಎಂಬ ಶರೀರಗಳುಳ್ಳವನಾಗಿ ಕಾರ್ಯನೆನಿಸುವನು. ಹೀಗೆ ಕಾರಣಾವಸ್ಥೆಯಲ್ಲಿಯೂ ಕಾರ್ಯಾವಸ್ಥೆಯಲ್ಲಿಯೂ ಚಿದಚಿದ್ವಸ್ತುಗಳು ಆ ಪರಮಾತ್ಮ ನಿಗೆ ಶರೀರವಾಗಿರುವದರಿಂದ ಅವುಗಳಿಂದೊಡಗೂಡಿದ ಪರಮಾತ್ಮನೇ ಸರ್ವಶಬ್ದ ಗಳಿಗೂ ವಾಚ್ಯನಾಗಿರುವನು. ಸೂಕ್ಷ್ಮಚಿದಚಿತ್ತುಗಳಿಂದ ಕೂಡಿರುವ ಚೈತನ್ಯರೂಪನಾದ ಈಶ್ವರನಿಗೂ ಸ್ಥೂಲಚಿದಚಿತ್ತುಗಳಿಂದ ಕೂಡಿರುವ ಈಶ್ವರನಿಗೂ ಅಭೇದವನ್ನು ಹೇಳುವ ದರಿಂದಲೂ ಅಂಥ ವಿಶಿಷ್ಟಚೈತನ್ಯರೂಪನಾದ ಈಶ್ವರನಿಗಿಂತ ಬೇರೆಯಾಗಿ ಮತ್ತೆ ಯಾವ ತತ್ತ್ವವೂ ಇಲ್ಲವೆಂದು ಹೇಳುವದರಿಂದಲೂ ಈ ಸಿದ್ಧಾಂತಕ್ಕೆ **ವಿಶಿಷ್ಟಾದ್ವೈತ**ವೆಂದು ಹೆಸರು.

ಈ ಸಿದ್ಧಾಂತದಲ್ಲಿ ಪ್ರತ್ಯಕ್ಷ, ಅನುಮಾನ, ಆಗಮ – ಎಂಬ ಮೂರು ಪ್ರಮಾಣ ಗಳನ್ನು ಅಂಗೀಕರಿಸಿರುತ್ತದೆ. ಯಾವದೊಂದು ದೋಷದ ಸಂಬಂಧವಿಲ್ಲದವನೂ ಇಷ್ಟೆಂಬ ಅವಧಿಯಾಗಲಿ ಲೆಕ್ಕವಾಗಲಿ ಇಲ್ಲದಂಥ ನಿರತಿಶಯವಾದ ಕಲ್ಯಾಣಗುಣ ಗಣಗಳಿಂದ ಕೂಡಿದವನೂ ಆಗಿರುವ ಸರ್ವಜ್ಞನಾದ ಸತ್ಯಸಂಕಲ್ಪನಾದ ಪರಮಾತ್ಮನು ಮೇಲೆ ಹೇಳಿದಂತೆ ಚಿದಚಿತ್ತುಗಳೆಂಬ ಶರೀರದಿಂದ ಕೂಡಿದವನಾಗಿ ಇರುವನೆಂಬುದಕ್ಕೆ ಆಗಮವೇ ಪ್ರಮಾಣವು. ನಮಗೆ ತೋರುವದೆಲ್ಲವೂ ಪರಬ್ರಹ್ಮದ ಶರೀರವೇ ಎಂದು ಸಕಲ ಉಪನಿಷತ್ತುಗಳಲ್ಲಿಯೂ ಹೇಳಿರುತ್ತದೆ; '**ಬ್ರಹ್ಮವೇ ಸಕಲವು**' ಎಂದು ಶಾಸ್ತ್ರಗಳಲ್ಲಿ ಹೇಳಿರುವದಕ್ಕೆ ಇದೇ ತಾತ್ಪರ್ಯವು. ಪರಮಾತ್ಮನೊಬ್ಬನೇ ಸೃಷ್ಟಿಗೆ ಆದಿಯಲ್ಲಿದ್ದನೆಂದೂ ಆಮೇಲೆ ಬಹುಪ್ರಕಾರವಾಗಿ ತಾನೇ ಆದನೆಂದೂ ಉಪನಿಷತ್ತುಗಳಲ್ಲಿ ಹೇಳಿರುತ್ತದೆ ಯಷ್ಟೆ; ಸೂಕ್ಷ್ಮವಾಗಿರುವ ಚಿದಚಿದ್ವಸ್ತುಗಳೆಂಬ ಶರೀರನಾಗಿರುವಾಗ ಏಕನೆಂದೂ

ನಾಮರೂಪಗಳನ್ನು ವಿಂಗಡಿಸಿ ಸ್ಥೂಲರೂಪವಾದ ಚಿದಚಿದ್ವಸ್ತುಗಳೆಂಬ ಶರೀರವುಳ್ಳವನಾಗುತ್ತಲೂ ಅದೇ ಪರಮಾತ್ಮನನ್ನೇ ಅನೇಕನೆಂದೂ ಹೇಳಿದೆಯೆಂತ ತಿಳಿಯಬೇಕು. ಪರಮಾತ್ಮ, ಈಶ್ವರ, ನಾರಾಯಣ, ವಾಸುದೇವ, ಪರಬ್ರಹ್ಮ - ಇವೆಲ್ಲ ಈ ಪರಮಾತ್ಮನೆಂಬ ಒಂದೇ ವಸ್ತುವನ್ನು ಬೋಧಿಸುವ ಶಬ್ದಗಳು.

ಪರಬ್ರಹ್ಮವು ಜಗತ್ತಿಗೆಲ್ಲ ಕಾರಣವಾಗಿರುವದು; ಜಗತ್ತು ಆ ಬ್ರಹ್ಮದ ಕಾರ್ಯವಾಗಿರುವದು. ಗಡಿಗೆಗೆ ಕುಂಬಾರನು ನಿಮಿತ್ತಕಾರಣನೆಂದೂ ಮಣ್ಣು ಉಪಾದಾನ ಕಾರಣವೆಂದೂ ಶಾಸ್ತ್ರದಲ್ಲಿ ಪ್ರಸಿದ್ಧಿಯಷ್ಟೆ. ಪರಬ್ರಹ್ಮವು ಜಗತ್ತಿಗೆ ತಾನೇ ಉಪಾದಾನ ಕಾರಣವು, ತಾನೇ ನಿಮಿತ್ತಕಾರಣವು. ಮಣ್ಣು ಅಚೇತನ ಪದಾರ್ಥವಾದ್ದರಿಂದ ಅದು ತನಗೆ ತಾನೇ ಗಡಿಗೆಯಾಗಲಾರದು. ಅದಕ್ಕೆ ಕುಂಬಾರನ ಪ್ರಯತ್ನವೂ ಬೇಕು; ಕುಂಬಾರನು ಸರ್ವಶಕ್ತನಲ್ಲದ್ದರಿಂದ ಮಣ್ಣಿಲ್ಲದೆ ಹಾಗೆಯೇ ಗಡಿಗೆಯನ್ನು ಮಾಡುವದಕ್ಕೆ ಅವನಿಂದಲೂ ಆಗಲಾರದು. ಆದರೆ ಪರಮಾತ್ಮನು ಸರ್ವಜ್ಞನು, ಸರ್ವಶಕ್ತನು ಆದ್ದರಿಂದ ಅವನು ತಾನೇ ಮತ್ತೊಂದು ವಸ್ತುವನ್ನು ಬಯಸದೆಯೇ ಜಗತ್ತಾಗಿ ಪರಿಣಮಿಸುವನು. ನಿಜವಾಗಿ ನೋಡಿದರೆ ಜಗತ್ತೆಂಬುದು ಚೇತನಾಚೇತನರೂಪವಾಗಿರುವದು. ಈ ಚಿದಚಿದ್ವಸ್ತುವು ಪರಮಾತ್ಮನನ್ನು ಬಿಟ್ಟು ಯಾವಾಗಲೂ ಹೋಗುವದಿಲ್ಲ; ಏಕೆಂದರೆ ಆ ಪರಮ ಪುರುಷನಿಗೆ ಶರೀರವಾಗಿ ಅವನ ಅಧೀನವಾಗಿ ಅವನನ್ನು ಅಗಲದೇ ಇರುವದೇ ಇವುಗಳ ಸ್ವಭಾವವು. ಆದರೂ ಈ ಶರೀರರೂಪವಾದ ಪ್ರಪಂಚವು ಪ್ರಲಯಕಾಲದಲ್ಲಿ ತನ್ಮಾತ್ರೆಗಳು, ಅಹಂಕಾರ ಮುಂತಾದ ಪರಂಪರೆಯಿಂದ ತನ್ನ ತನ್ನ ಕಾರಣದಲ್ಲಿ ಲಯವಾಗುತ್ತಾ ಕೊನೆಗೆ ತಮಸ್ಸೆಂದು ಕರೆಯಲ್ಪಡುವ ಅತಿಸೂಕ್ಷ್ಮವಾದ ಅಚಿದ್ವಸ್ತುವಿನ ರೂಪದಲ್ಲಿ ಉಳಿದುಕೊಳ್ಳುವದು. ಆಗ ಈ ತಮಸ್ಸು ಕೂಡ ಇದು ಪರಮಾತ್ಮನ ಶರೀರವೆಂದು ವಿಂಗಡಿಸಿ ಹೇಳಲಾಗದಷ್ಟು ಸೂಕ್ಷ್ಮವಾಗಿ ಆತನಲ್ಲಿಯೇ ಒಂದಾಗಿಬಿಟ್ಟಿರುವದು. ಕೆಲವು ಕಾಲದ ಮೇಲೆ ಈ ಪರಬ್ರಹ್ಮವು 'ಮೊದಲಿನಂತೆಯೇ ನಾಮರೂಪಗಳನ್ನು ವಿಂಗಡಿಸಿ ಚಿದಚಿದ್ರೂಪವಾದ ಪ್ರಪಂಚ ಶರೀರವುಳ್ಳವನಾಗುವೆನು'-ಎಂದು ಸಂಕಲ್ಪಿಸಿ ಮತ್ತೆ ಸ್ಥೂಲರೂಪವನ್ನು ಪಡೆಯುವದು. ಈ ರೀತಿಯಲ್ಲಿ ಚಿದಚಿದ್ರೂಪವಾದ ಈ ಸಮಸ್ತ ಪ್ರಪಂಚವೂ ಬ್ರಹ್ಮದಿಂದಲೇ ಹುಟ್ಟಿ ಬ್ರಹ್ಮದಲ್ಲಿಯೇ ಇದ್ದು ಬ್ರಹ್ಮದಲ್ಲಿಯೇ ಲಯವನ್ನು ಹೊಂದುತ್ತಿರುವದು.

ಒಂದು ವಸ್ತು ಒಂದವಸ್ಥೆಯಿಂದ ಮತ್ತೊಂದು ಅವಸ್ಥೆಯನ್ನು ಹೊಂದಿದರೆ

ಕಾರಣಾವಸ್ಥೆಯಿಂದ ಕಾರ್ಯಾವಸ್ಥೆಗೆ ಬಂದಂತೆ ಆಯಿತು. ಈ ದೃಷ್ಟಿಯಿಂದ ನೋಡಿದರೆ ಚಿದ್ವಸ್ತುವಾದ ಜೀವನೂ ಅಚಿದ್ವಸ್ತುವಾದ ಆಕಾಶವೇ ಮುಂತಾದದ್ದೂ ಎರಡೂ ಬ್ರಹ್ಮದ ಕಾರ್ಯವೇ; ಆದರೂ ಇವುಗಳೊಳಗೆ ತಾರತಮ್ಯವುಂಟು. ಅದೇನೆಂದರೆ – ಅಚಿದ್ರೂಪವಾದ ಆಕಾಶವೇ ಮುಂತಾದವುಗಳು ತಮ್ಮ ಸ್ವರೂಪದಲ್ಲಿಯೇ ಮಾರ್ಪಡುತ್ತಿರುವವು. ಹೀಗೆ ಸ್ವರೂಪವು ಮಾರ್ಪಡುವದೆಂಬ ಉತ್ಪತ್ತಿಯು ಜೀವನಿಗೆ ಇರುವದಿಲ್ಲ ಆದ್ದರಿಂದ ಜೀವನು ನಿತ್ಯನೆನಿಸುವನು. ಜೀವನಿಗೆ ಧರ್ಮವಾಗಿರುವ ಜ್ಞಾನವು ಸಂಕೋಚವಾಗುತ್ತಲೂ ವಿಕಾಸವಾಗುತ್ತಲೂ ಇರುವದರಿಂದ ಅವನಲ್ಲಿಯೂ ಒಂದು ಬಗೆಯ ಮಾರ್ಪಾಟು ಉಂಟು. ಚಿದ್ವಸ್ತುವೂ ಅಚಿದ್ವಸ್ತುವೂ ಎರಡೂ ಬ್ರಹ್ಮದ ಪ್ರಕಾರಗಳು, ಎರಡೂ ಅದರ ಶರೀರಗಳು, ಎರಡಕ್ಕೂ ಅದೇ ಆತ್ಮನು. ಅಚಿದ್ವಸ್ತುವು ಭೋಗ್ಯವು, ಚಿದ್ವಸ್ತುವು ಅದನ್ನು ಅನುಭವಿಸುವ ಭೋಕ್ತೃ; ಈಶ್ವರನು ಇವೆರಡನ್ನೂ ಸ್ವಾಧೀನದಲ್ಲಿಟ್ಟುಕೊಂಡಿರುವ ನಿಯಂತೃ. ಪರಬ್ರಹ್ಮವು ಕಾರಣಾವಸ್ಥೆಯಲ್ಲಿರಲಿ ಕಾರ್ಯಾವಸ್ಥೆಯಲ್ಲಿರಲಿ, ಇಲ್ಲಿ ಹೇಳಿರುವ ಭೋಗ್ಯ ಭೋಕ್ತೃ ನಿಯಂತೃಗಳೆಂಬ ಮೂರು ಬಗೆಯ ಒಳಭೇದವು ಯಾವಾಗಲೂ ತಪ್ಪಿದ್ದಲ್ಲ. ಕಾರಣಾವಸ್ಥೆಯಲ್ಲಿ ಅಚಿದಂಶದಲ್ಲಿ ಶಬ್ದವೇ ಮುಂತಾದ ಗುಣಗಳು ಇರುವದಿಲ್ಲ; ಕಾರ್ಯಾವಸ್ಥೆಗೆ ತಿರುಗಿದ ಮೇಲೆ ಅದು ತನ್ನ ಸ್ವರೂಪವನ್ನು ಮಾರ್ಪಡಿಸಿಕೊಂಡು ಶಬ್ದಾದಿಗಳುಳ್ಳದ್ದಾಗಿ ಜೀವನಿಗೆ ಭೋಗ್ಯವಾಗುವದು. ಹೀಗೆಯೇ ಚಿದಂಶನಾದ ಜೀವನ ಜ್ಞಾನವು ಕಾರಣಾವಸ್ಥೆಯಲ್ಲಿ ಸಂಕುಚಿತವಾಗಿರುವದು. ಕಾರ್ಯಾವಸ್ಥೆಗೆ ಬಂದ ಮೇಲೆಯೇ ತನ್ನ ಕರ್ಮಗಳ ಆಯಾ ಫಲವನ್ನು ಅನುಭವಿಸುವದಕ್ಕೆ ತಕ್ಕಂತೆ ಅವನ ಜ್ಞಾನವು ವಿಕಾಸವಾಗುವದು. ಹೀಗೆ ಅಚಿದಂಶವು ಸ್ವರೂಪದಲ್ಲಿ ಮಾರ್ಪಟ್ಟು ಜೀವನು ಜ್ಞಾನವಿಕಾಸವೆಂಬ ಮಾರ್ಪಾಡನ್ನು ಹೊಂದಲು ಬ್ರಹ್ಮವು ತನ್ನ ಕಾರಣಾವಸ್ಥೆಯನ್ನು ಬಿಟ್ಟು ಆ ಎರಡರಿಂದ ಕೂಡಿರೋಣವೆಂಬ ಕಾರ್ಯಾವಸ್ಥೆಯನ್ನು ಹೊಂದುವದು. ಅಂತೂ ಕಾರಣಾವಸ್ಥೆಯಿಂದ ಕಾರ್ಯಾವಸ್ಥೆಗೆ ಬರುವದೆಂಬ ವಿಕಾರವು ಚಿದಚಿತ್ತುಗಳೆಂಬ ಎರಡು ಪ್ರಕಾರಗಳಿಗೂ, ಆ ಪ್ರಕಾರಗಳುಳ್ಳ ಬ್ರಹ್ಮಕ್ಕೂ, ಸಮಾನವಾಗಿರುವದು. ಆದರೂ ಭೋಗ್ಯವಾದ ಅಚಿದ್ವಸ್ತುವಿನ ಉತ್ಪತ್ತಿಯೇ ಮುಂತಾದವುಗಳು ಭೋಕ್ತೃವಾದ ಜೀವನಲ್ಲಿರುವದಿಲ್ಲ; ನಿಯಂತೃವಾದ ಪರಮಾತ್ಮನಲ್ಲಿಯೂ ಇರುವದಿಲ್ಲ. ಭೋಕ್ತೃವಿನಲ್ಲಿರುವ ಜ್ಞಾನಸಂಕೋಚವಿಕಾಸವೆಂಬ ಆ ಪುರುಷಾರ್ಥಗಳು ನಿಯಂತೃವಾದ ಪರಮಾತ್ಮನನ್ನು ಸ್ವಲ್ಪವೂ ಸೋಕುವದಿಲ್ಲ. ಆತನು ನಿತ್ಯನು, ನಿರವದ್ಯನು, ಯಾವಾಗಲೂ ಸರ್ವಜ್ಞನು, ಸತ್ಯಸಂಕಲ್ಪನು, ಕರಣಗಳಿಗೆ ಒಡೆಯನಾದ ಜೀವನಿಗೂ

ಒಡೆಯನು, ಪ್ರಪಂಚಕ್ಕೆಲ್ಲ ಒಡೆಯನು, ಯಾವಾಗಲೂ ಯಾವ ದೋಷವೂ ಇಲ್ಲದೆ ಅಳತೆಯಿಲ್ಲದ ಜ್ಞಾನಾನಂದಗಳುಳ್ಳವನಾಗಿ ಒಂದೇ ರೂಪದಲ್ಲಿರುವವನು. ಸೂಕ್ಷ್ಮದೆಶೆಯಲ್ಲಿಯೂ ಸ್ಥೂಲದೆಶೆಯಲ್ಲಿಯೂ ಇರುವ ಚಿದಚಿದ್ವಸ್ತುಗಳೆಲ್ಲವೂ ಆತನ ಲೀಲೆಗೆ ಉಪಕರಣವಾಗಿರುವವು. ಜಗತ್ತಿನ ಸೃಷ್ಟಿಸ್ಥಿತಿಲಯಗಳೇ ಆತನ ಲೀಲೆಯು.

ಜೀವನು ಜ್ಞಾನಸ್ವರೂಪನು, ಇವನಿಗೆ ಜ್ಞಾನವೆಂಬ ಗುಣವೂ ಇರುವದು. ಜೀವನು ಬರಿಯ ಜ್ಞಾನಸ್ವರೂಪನೆಂದೂ ಜ್ಞಾನವೆಂಬ ಗುಣವು ಅವನಲ್ಲಿಲ್ಲವೆಂದೂ ತಿಳಿಯಬಾರದು. ಹೇಗೆ ರತ್ನ ಸೂರ್ಯ – ಮುಂತಾದ ವಸ್ತುಗಳು ಒಂದೊಂದು ಸ್ಥಳದಲ್ಲಿದ್ದುಕೊಂಡು ತಮ್ಮ ಬೆಳಕನ್ನು ಎಲ್ಲಾ ಕಡೆಗೂ ಬೀರುವವೋ ಅದರಂತೆ ಜೀವನು ಹೃದಯದಲ್ಲಿದ್ದುಕೊಂಡು ತನ್ನ ಬೆಳಕಿನಂತಿರುವ ಜ್ಞಾನವನ್ನು ಸಕಲ ದೇಹದಲ್ಲಿಯೂ ಹರಡಿರುವನು. ಆ ಜ್ಞಾನದಿಂದ ಇವನು ವಿಷಯಗಳನ್ನು ಅರಿಯುವನು. ಗಾಢನಿದ್ರೆಯೇ ಮುಂತಾದ ಅವಸ್ಥೆಗಳಲ್ಲಿ ಈ ಜ್ಞಾನಗುಣವು ಸಂಕೋಚವಾಗಿದ್ದು ಎಚ್ಚರವಾಗುತ್ತಲೂ ಚೆನ್ನಾಗಿ ತೋರಿಕೊಳ್ಳುವದು. ಇವನು ಅಣುರೂಪನು; ಆದ್ದರಿಂದಲೇ ಇವನು ಶರೀರವನ್ನು ಬಿಟ್ಟುಹೋಗುವದು, ಲೋಕಾಂತರದಲ್ಲಿ ಕರ್ಮಫಲವನ್ನು ಅನುಭವಿಸಿ ಮತ್ತೆ ಈ ಲೋಕಕ್ಕೆ ಬರುವದು – ಇವುಗಳೆಲ್ಲ ಸಂಭವಿಸುವವು. ಜೀವನು ಸರ್ವಗತನಾಗಿದ್ದಿದ್ದರೆ ಅವನಿಗೆ ಹೀಗೆ ಸಂಚಾರವು ಉಂಟಾಗುವದಕ್ಕೆ ಅವಕಾಶವಿರುತ್ತಿರಲಿಲ್ಲ. ಜೀವನು ಕರ್ತೃಸ್ವರೂಪನು. ಎಂದರೆ ಕರ್ಮಗಳನ್ನು ಮಾಡಿ ಕರ್ಮಫಲವನ್ನು ಅನುಭವಿಸುವವನು. ತನಗೆ ಬೇಕಾದ ಕರ್ಮವನ್ನು ಮಾಡುವನು, ಬೇಡದಾಗ ಬಿಡುವನು. ಹೀಗಿದ್ದರೂ ಇವನು ಮಾಡುವ ಕೆಲಸವನ್ನು ಈಶ್ವರನ ಅನುಮತಿಯಿಂದ ಮಾಡುತ್ತಿರುವನೇ ಹೊರತು, ಸಂಪೂರ್ಣಸ್ವಾತಂತ್ರ್ಯದಿಂದ ಮಾಡುವದಿಲ್ಲ. ಜೀವರು ಅನೇಕರು, ಇವರೆಲ್ಲರೂ ಪರಮಾತ್ಮನ ಅಂಶರೇ. ಆದರೂ ಪರಮೇಶ್ವರನು ಅವರವರು ಯಾವ ಯಾವ ಕರ್ಮದಲ್ಲಿ ಮನಸ್ಸು ಹಾಕುವರೋ ಆಯಾ ಕರ್ಮದಲ್ಲಿಯೇ ಅವರಿಗೆ ಸವಿಯನ್ನು ಹಚ್ಚಿ ಆಯಾ ಕರ್ಮಕ್ಕೆ ತಕ್ಕ ಫಲವನ್ನು ಕೊಡುವನು. ಅವರವರ ದೇಹಕ್ಕೆ ತಕ್ಕ ಕರ್ಮವನ್ನು ಅವರವರು ಮಾಡಿ, ಅದದಕ್ಕೆ ತಕ್ಕ ಬೇರೆ ಬೇರೆ ಫಲವನ್ನೇ ಜೀವರು ಪಡೆಯುವರು.

ಜೀವನಿಗೆ ಜಾಗ್ರತ್ತು, ಸ್ವಪ್ನ, ಸುಷುಪ್ತಿ – ಎಂಬ ಮೂರು ಅವಸ್ಥೆಗಳು ಉಂಟು. ಜಾಗ್ರದವಸ್ಥೆ ಎಂದರೆ ಎಚ್ಚರವು. ಈ ಅವಸ್ಥೆಯಲ್ಲಿ ಜೀವನು ನಾನಾ ಕರ್ಮಗಳನ್ನು ಮಾಡಿ ಕರ್ಮಕ್ಕೆ ಅನುಸಾರವಾದ ಫಲವನ್ನು ಅನುಭವಿಸುವದಕ್ಕಾಗಿ ಬೇರೆ ಬೇರೆ ಮಾರ್ಗಗಳಿಂದ ಲೋಕಾಂತರವನ್ನು ಕುರಿತು ಹೋಗಿಬರುತ್ತಿರುವನು. ಪುಣ್ಯಕರ್ಮಗಳ

ಫಲವನ್ನು ಅನುಭವಿಸುವದಕ್ಕೆ ಹೋಗುವದು ಧೂಮಾದಿಮಾರ್ಗವು; ಇದಕ್ಕೆ ಪಿತೃಯಾನವೆಂದು ಹೆಸರು. ಉಪಾಸನೆಯ ಫಲವನ್ನು ಅನುಭವಿಸುವದಕ್ಕೆ ಹೋಗುವದು ಅರ್ಚಿರಾದಿಮಾರ್ಗವು; ಇದಕ್ಕೆ ದೇವಯಾನವೆಂದು ಹೆಸರು. ಪಾಪಿಗಳು ಈ ಎರಡು ಮಾರ್ಗವನ್ನೂ ಪಡೆಯದೆ ಮೂರನೆಯದಾದ ಪಾಪಿಜನ್ಮವನ್ನು ಪಡೆಯುತ್ತಿರುವರು. ಇದೆಲ್ಲ ಜಾಗ್ರದವಸ್ಥೆಯ ಗತಿಯಾಯಿತು. ಇನ್ನು ಸ್ವಪ್ನವನ್ನು ಕುರಿತು ವಿಚಾರಮಾಡಿದರೆ ಅಲ್ಲಿಯೂ ಜೀವನು ದುಃಖಿಯೇ. ಅಲ್ಲಿಯೂ ಜೀವನ ಪುಣ್ಯ ಪಾಪಗಳಿಗೆ ತಕ್ಕಂತೆ ಆಯಾ ಜೀವನೊಬ್ಬನೇ ಅನುಭವಿಸುವದಕ್ಕಾಗಿ ಭಗವಂತನು ವಿಚಿತ್ರವಾದ ಸೃಷ್ಟಿಯನ್ನು ಮಾಡಿರುತ್ತಾನೆ. ಸುಷುಪ್ತಿಯಲ್ಲಿಯೋ ಎಂದರೆ ಜೀವನು ನಾಡಿಗಳಲ್ಲಿರುವ ಪುರೀತತ್ತಿನಲ್ಲಿ ಬ್ರಹ್ಮವನ್ನು ಸೇರಿಕೊಳ್ಳುತ್ತಾನೆ; ಆಗ ಮೇಲೆ ಹೇಳಿದಂತೆ ಇವನ ಜ್ಞಾನಗುಣವು ಸಂಕೋಚವಾಗಿರುವದರಿಂದ ಅಜ್ಞಾನದಲ್ಲಿ ಮುಳುಗಿರುತ್ತಾನೆ. ಹೀಗೆ ಜೀವನು ಅವಸ್ಥಾತ್ರಯಗಳಲ್ಲಿಯೂ ದೋಷಗಳಿಂದ ಕೂಡಿರುತ್ತಾನೆ; ಆದರೆ ಅವನಲ್ಲಿ ಅಂತರ್ಯಾಮಿಯಾಗಿರುವ ಬ್ರಹ್ಮವು ಯಾವಾಗಲೂ ನಿರ್ದುಷ್ಟವಾಗಿಯೂ ಕಲ್ಯಾಣಗುಣಗಳಿಂದ ಕೂಡಿಕೊಂಡೂ ಇರುತ್ತದೆ.

ಜೀವನ ನಿಜವಾದ ಸ್ವರೂಪವು ಪಾಪವಿಲ್ಲದ್ದು, ಮುಪ್ಪಿಲ್ಲದ್ದು, ಮರಣವಿಲ್ಲದ್ದು, ಶೋಕವಿಲ್ಲದ್ದು, ಹಸಿವುಬಾಯಾರಿಕೆಗಳಿಲ್ಲದ್ದು, ಸತ್ಯಕಾಮ ಸತ್ಯಸಂಕಲ್ಪರೂಪವಾದದ್ದು. ಹೀಗಿದ್ದರೂ ಸಂಸಾರದಶೆಯಲ್ಲಿ ಕರ್ಮವೆಂಬ ಅವಿದ್ಯೆಯಿಂದ ಅವನ ಸ್ವರೂಪವು ಕಾಣದೆ ಇರುವದು. ಅದನ್ನು ಕಂಡುಕೊಳ್ಳುವದಕ್ಕಾಗಿ ಜೀವನು ಪರಮಾತ್ಮನನ್ನು ಉಪಾಸನೆ ಮಾಡಬೇಕು. ದೋಷಗಳಿಲ್ಲದವನೂ ಕಲ್ಯಾಣಗುಣಗಳ ಆಕರನೂ ಆಗಿರುವ ಪರಮಾತ್ಮನನ್ನು ಸ್ತುತಿನಮಸ್ಕಾರಕೀರ್ತನ ಅರ್ಚನಧ್ಯಾನಾದಿಗಳಿಂದ ಎಡೆಬಿಡದೆ ಆರಾಧನೆ ಮಾಡುತ್ತಾ ಪರಮಾತ್ಮನ ಭಾವನೆಯಿಂದ ಸಾಕ್ಷಾತ್ಕಾರಪಡೆದಷ್ಟು ಬಲವಾಗಿ ಮಾಡಿಕೊಂಡರೆ, ಬ್ರಹ್ಮಜ್ಞಾನವು ಉಂಟಾಗುವದಕ್ಕೆ ಮೊದಲು ತಾನು ಮಾಡಿ ಫಲವನ್ನು ಅನುಭವಿಸದೆ ಉಳಿದಿರುವ ಪುಣ್ಯಪಾಪರೂಪನಾದ ಸಂಚಿತಕರ್ಮವು ಜ್ಞಾನದ ಮಹಿಮೆಯಿಂದಲೇ ನಾಶವಾಗುವದು; ಜ್ಞಾನವು ಹುಟ್ಟಿದ ಮೇಲೆ ಮಾಡಿದ ಕರ್ಮವು ಇವನಿಗೆ ಅಂಟಿಕೊಳ್ಳದೆ ಹೋಗುವದು. ಪ್ರಾರಬ್ಧಕರ್ಮದ ಫಲವನ್ನು ಅನುಭವಿಸಿದ ಮೇಲೆ ಶರೀರವನ್ನು ಬಿಟ್ಟು ಅರ್ಚಿರಾದಿಮಾರ್ಗದಿಂದ ಹೋಗಿ ಲೋಕಪರಬ್ರಹ್ಮವನ್ನು ಪಡೆದು ತನ್ನ ನಿಜವಾದ ಸ್ವರೂಪವನ್ನು ಕಂಡುಕೊಳ್ಳುವನು. ಈ ರೀತಿಯಲ್ಲಿ ಜ್ಞಾನ, ಆನಂದ-ಮುಂತಾದ ಜೀವನ ಗುಣಗಳು ಮೊದಲು ಸಂಕುಚಿತವಾಗಿದ್ದು ಪರಮೇಶ್ವರ

ನನ್ನು ಸೇರಿದ ಮೇಲೆ ವಿಕಾಸವಾಗುವವು. ಚೆನ್ನಾಗಿ ನೋಡಿದರೆ ಪರಮಾತ್ಮನು ಸರ್ವಗತನಾಗಿರುವದರಿಂದ ಅವನನ್ನು ಪಡೆಯುವದಕ್ಕೆ ಜೀವನು ಎಲ್ಲಿಗೂ ಹೋಗಬೇಕಾಗಿರುವದಿಲ್ಲ; ಮತ್ತು ಜೀವನ ಸ್ವಭಾವವೂ ಯಾವಾಗಲೂ ಪ್ರಾಪ್ತವಾಗಿಯೇ ಇರುವದರಿಂದ ಅದರ ಪ್ರಾಪ್ತಿಗಾಗಿಯೂ ಎಲ್ಲಿಯೂ ಹೋಗಬೇಕಾದದ್ದಿಲ್ಲ, ಆದರೂ ಇಂಥಲ್ಲಿಗೆ ಹೋದ ಮೇಲೇ ಜೀವನ ಸ್ವರೂಪವು ಅಭಿವ್ಯಕ್ತವಾಗುವದೆಂಬ ನಿಯಮವುಂಟು. ಈ ಅಭಿವ್ಯಕ್ತಿಗಾಗಿಯೇ ಜೀವನು ಜ್ಞಾನವನ್ನು ಸಂಪಾದಿಸಿ ಪರಮಾತ್ಮನನ್ನು ಉಪಾಸನೆ ಮಾಡಬೇಕಾಗಿರುವದು. ಹೀಗೆಂಬುದಕ್ಕೆ ಶಾಸ್ತ್ರವೇ ಪ್ರಮಾಣವು.

ಹೀಗೆ ತನ್ನ ಸ್ವರೂಪವನ್ನು ಪಡೆದುಕೊಂಡ ಜೀವನು ಸತ್ಯಸಂಕಲ್ಪನಾಗಿರುವನು, ಸಂಕಲ್ಪಮಾತ್ರದಿಂದ ಅವನಿಗೆ ಬೇಕಾದದ್ದು ಸಿದ್ಧಿಸುವದು. ಮುಕ್ತಜೀವರಿಗೆ ಅವರ ಇಷ್ಟಾನುಸಾರವಾಗಿ ಶರೀರವು ಇರುವದು ಅಥವಾ ಇಲ್ಲದೆ ಇರುವದು. ಅವರು ತಾವೇ ಸಂಕಲ್ಪದಿಂದ ತಮಗೆ ಬೇಕಾದ ಶರೀರಾದಿಗಳನ್ನು ಸೃಷ್ಟಿಸಿಕೊಂಡು ಭೋಗಪಡುವರು; ಅಥವಾ ಪರಮಾತ್ಮನು ಸೃಷ್ಟಿಸಿದ ಭೋಗೋಪಕರಣಗಳಿಂದಲಾದರೂ ಸುಖವನ್ನು ಅನುಭವಿಸುವರು. ಅವರು ಒಬ್ಬೊಬ್ಬರೂ ಅನೇಕ ಶರೀರಗಳನ್ನು ಸೃಷ್ಟಿಸಿಕೊಂಡು ಅವುಗಳಲ್ಲೆಲ್ಲ ಭೋಗವನ್ನನುಭವಿಸುವರು. ಯಾವ ವಿಕಾರವೂ ಇಲ್ಲದೆ, ಯಾವ ದೋಷವೂ ಇಲ್ಲದೆ, ಕಲ್ಯಾಣರೂಪವಾಗಿಯೂ, ಅತ್ಯಂತವಾದ ಆನಂದರೂಪವಾಗಿಯೂ ಇರುವ ಬ್ರಹ್ಮವನ್ನು ಈ ಮುಕ್ತರು ಅನುಭವಿಸುತ್ತಿರುವರು. ಮುಕ್ತರು ಹೀಗೆ ನಿರತಿಶಯವಾದ ಬ್ರಹ್ಮಾನಂದವನ್ನು ಅನುಭವಿಸಿ ಬ್ರಹ್ಮಕ್ಕೆ ಸಮವಾಗಿಯೇ ಆಗುವರಾದರೂ ಚೇತನಾಚೇತನರೂಪವಾದ ಜಗತ್ತಿನ ಸೃಷ್ಟಿಸ್ಥಿತಿಲಯವನ್ನು ಮಾಡುವ ಶಕ್ತಿಯು ಮಾತ್ರ ಅವರಿಗೆ ಉಂಟಾಗುವದಿಲ್ಲ; ಅದು ಪರಮೇಶ್ವರನೊಬ್ಬನಲ್ಲಿಯೇ ಇರುವ ಅಸಾಧಾರಣ ಧರ್ಮವು.

# ಯಾಮುನಮುನಿಕೃತ ಗೀತಾರ್ಥಸಂಗ್ರಹ

ನಮ್ಮ ದೇಶದಲ್ಲಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ – ಎಂಬ ಮೂರು ಶಾಖೆಗಳು ವೇದಾಂತದಲ್ಲಿ ಇಂದಿಗೂ ಕಂಡುಬರುತ್ತವೆ. ಒಬ್ಬರ ಸಿದ್ಧಾಂತವನ್ನೊಬ್ಬರು ತಿಳಿಯದೆಯೇ ದುರಭಿಮಾನದಿಂದ ಬಡಿದಾಡುವುದು ನಿಲ್ಲಬೇಕಾದರೆ ಅಧ್ಯಾತ್ಮಪ್ರಕಾಶದಂಥ ರಂಗಸ್ಥಳದಲ್ಲಿ ಮೂರು ಸಿದ್ಧಾಂತಗಳ ಉಪದೇಶವನ್ನೂ ಜನರಿಗೆ ತಿಳಿಯುವ ಭಾಷೆಯಲ್ಲಿಡು

ವುದು ಅತ್ಯವಶ್ಯವಾಗಿರುತ್ತದೆ. ವಿಷಯವು ತಿಳಿದ ಮೇಲೆ ಯಾವದು ಸರಿಯೆಂಬ ಬಗ್ಗೆ ವಿಮರ್ಶೆಯನ್ನು ಪ್ರಾರಂಭಿಸುವುದು ಯುಕ್ತವಾಗಿರುತ್ತದೆ.

ಈ ಅಭಿಪ್ರಾಯದಿಂದ ನಾನು ಈ ಮೊದಲೇ ಶ್ರೀರಾಮಾನುಜರ ಮತ್ತು ಶ್ರೀಮದಾನಂದತೀರ್ಥರ ಸಿದ್ಧಾಂತಗಳ ರೂಪರೇಖೆಯನ್ನು ಸಂಕ್ಷಿಪ್ತವಾದ ಬರಹಗಳ ರೂಪದಲ್ಲಿ ವಾಚಕರಿಗೆ ಅರ್ಪಿಸಿರುತ್ತೇನೆ. ಈಗ ಆ ಕೆಲಸವನ್ನೇ ಮುಂದುವರಿಸಿ ಶ್ರೀಯಾಮುನಮುನಿಗಳವರು ವಿರಚಿಸಿರುವ **'ಗೀತಾರ್ಥಸಂಗ್ರಹದ'** ಅಭಿಪ್ರಾಯ ವನ್ನು ತಿಳಿಸಬೇಕೆಂದು ಹೊರಟಿರುತ್ತೇನೆ.

ಶ್ರೀಯಾಮುನಮುನಿಗಳು ಶ್ರೀರಾಮಾನುಜರ ಪರಮ ಗುರುಗಳೆಂದು ವಾಚಕ ರಿಗೆ ಆಗಲೇ ತಿಳಿದೇ ಇದೆ. ಸದ್ಯಕ್ಕೆ ನಮಗೆ ಪೂರ್ಣರೂಪದಲ್ಲಿ ದೊರೆಯುವ ವಿಶಿಷ್ಟಾ ದ್ವೈತವೇದಾಂತ ಸಂಸ್ಕೃತಗ್ರಂಥಗಳಲ್ಲಿ ಅವರದೇ ಅತ್ಯಂತ ಪುರಾತನವಾಗಿರುತ್ತವೆ. ಅವರ ಬರಹಗಳಲ್ಲಿ ಬೀಜರೂಪವಾಗಿರುವ ಬಹು ವಿಷಯಗಳನ್ನು ಶ್ರೀಭಾಷ್ಯದಲ್ಲಿಯೂ ಗೀತಾ ಭಾಷ್ಯದಲ್ಲಿಯೂ ಶ್ರೀರಾಮಾನುಜರು ವಿವರಿಸಿರುತ್ತಾರೆ. ಆದ್ದರಿಂದ ವೇದಾಂತ ವಿಚಾರ ಸರಣಿಯ ಇತಿಹಾಸವನ್ನು ತಿಳಿಯಬೇಕೆನ್ನುವವರಿಗೆ ಯಾಮುನಮುನಿಗಳ ಗ್ರಂಥವು ಒಂದು ಉತ್ತಮಸಾಧನವಾಗಿರುತ್ತದೆ.

ಗೀತಾರ್ಥಸಂಗ್ರಹದಲ್ಲಿ ಮೂವತ್ತೆರಡು ಶ್ಲೋಕಗಳು ಮಟ್ಟಿಗೆ ಇವೆ. ಇವಕ್ಕೆ ಶ್ರೀ ವೇದಾಂತದೇಶಿಕರು ಬರೆದಿರುವ "ರಕ್ಷಾ" ಎಂಬ ವ್ಯಾಖ್ಯಾನವೂ ಇದೆ. ವಿಶಿಷ್ಟಾದ್ವೈತ ಸಿದ್ಧಾಂತದಂತೆ ಗೀತೆಯ ಒಟ್ಟರ್ಥವನ್ನು ವಿವೇಚನೆಮಾಡಿಕೊಳ್ಳಬೇಕೆನ್ನುವವರಿಗೆ ಈ ಶ್ಲೋಕಗಳು ಸಹಾಯಕವಾಗಿರುವದರಿಂದ ಇವುಗಳ ಭಾವಾರ್ಥವನ್ನು ಇಲ್ಲಿ ಕೊಡು ತ್ತೇವೆ. ಅವಶ್ಯಕಬಿದ್ದಾಗ ವ್ಯಾಖ್ಯಾನದ ಕೆಲವು ಅಂಶಗಳನ್ನೂ ತೆಗೆದುಕೊಂಡು ಸುಲಭ ವಾಗಿ ತಿಳಿಯುವ ರೀತಿಯಲ್ಲಿ ಕನ್ನಡದಲ್ಲಿಡುವೆನು.

**ಸ್ವಧರ್ಮಜ್ಞಾನವೈರಾಗ್ಯಸಾಧ್ಯಭಕ್ತ್ಯೈಕಗೋಚರಃ ।**
**ನಾರಾಯಣಃ ಪರಂ ಬ್ರಹ್ಮ ಗೀತಾಶಾಸ್ತ್ರೇ ಸಮೀರಿತಃ ॥೧॥**

"ಗೀತಾಶಾಸ್ತ್ರದಲ್ಲಿ ಹೇಳಿರುವ ಪರಬ್ರಹ್ಮವು ನಾರಾಯಣನೇ. ಆ ನಾರಾಯಣನೇ ಪರಬ್ರಹ್ಮವು. ಆತನು ಸ್ವಧರ್ಮ, ಜ್ಞಾನ, ವೈರಾಗ್ಯ ಇವುಗಳಿಂದ ಪಡೆದುಕೊಳ್ಳಬೇಕಾಗಿ ರುವ ಭಕ್ತಿಯೊಂದಕ್ಕೇ ಸಿಕ್ಕತಕ್ಕವನು" ಇದು ಶ್ರೀಯಾಮುನಮುನಿಗಳ ಅಭಿಪ್ರಾಯ ದಂತೆ ಒಟ್ಟು ಗೀತಾರ್ಥವು. ಇದರಲ್ಲಿ ಏನೇನು ಅಡಕವಾಗಿದೆಯೆಂಬುದನ್ನು ಸ್ವಲ್ಪ ಬಿಚ್ಚಿ ನೋಡೋಣ.

"ನಾರಾಯಣನೇ ಪರಬ್ರಹ್ಮವು" ಉಪನಿಷತ್ತಗಳ ಜಗತ್ತಿಗೆ ಕಾರಣವಾಗಿರುವದು ಸತ್ತು, ಬ್ರಹ್ಮ-ಎಂದು ಮುಂತಾಗಿ ಸಾಮಾನ್ಯವಾದ ಶಬ್ದಗಳನ್ನುಪಯೋಗಿಸಿರುತ್ತದೆ. ಆದರೆ ಮಹೋಪನಿಷತ್ತೇ ಮುಂತಾದವುಗಳಲ್ಲಿ ಇದೇ ಸಂದರ್ಭದಲ್ಲಿ ಕಾರಣವಾದ ತತ್ತ್ವವನ್ನು ನಾರಾಯಣನೆಂಬ ಹೆಸರಿನಿಂದ ಕರೆದಿರುತ್ತದೆ. ಆದ್ದರಿಂದ ನಾರಾಯಣನನ್ನೇ ಉಪನಿಷತ್ತುಗಳಲ್ಲೆಲ್ಲಾ ಬ್ರಹ್ಮವೆಂಬ ಸಾಮಾನ್ಯಶಬ್ದದಿಂದ ಕರೆದಿರುತ್ತದೆ ಎಂದು ಹೇಳಬೇಕಾಯಿತು. ಬ್ರಹ್ಮನು, ಶಿವನು, ಇಂದ್ರನು ಮುಂತಾದವರೆಲ್ಲ ಯಾವಾತನ ಮಹಿಮೆಯ ತುಂತುರು ಹನಿಗಳೋ ಆತನೇ, ಆ ನಾರಾಯಣನೇ, ಸ್ವಾಭಾವಿಕವಾಗಿ ಮಿಗಿಲಿಲ್ಲದ ಈಶ್ವರತ್ವವುಳ್ಳವನು ಎಂದು ಯಾಮುನಾಚಾರ್ಯರೇ ತಮ್ಮ ಸ್ತೋತ್ರರತ್ನದಲ್ಲಿ ಹೇಳಿರುತ್ತಾರೆ. ಇದೇ ಅಭಿಪ್ರಾಯವು ಅವರ ಆಗಮಪ್ರಾಮಾಣ್ಯ, ಪುರುಷನಿರ್ಣಯ ಮುಂತಾದ ಗ್ರಂಥಗಳಲ್ಲಿಯೂ ಇರುತ್ತದೆ. ಆದ್ದರಿಂದ ನಾರಾಯಣನೇ ಗೀತೆಯಲ್ಲಿ ಹೇಳಿರುವ ಬ್ರಹ್ಮವಸ್ತು; ಬ್ರಹ್ಮವೆಂಬ ಹೆಸರನ್ನು ಜೀವನಿಗೂ ಉಪಚಾರಕ್ಕೆ ಉಪಯೋಗಿಸುವದುಂಟು; ಆದರೆ ಇಲ್ಲಿ ನಾವು ಹೇಳುವದು ನಾರಾಯಣನೆಂಬ ಪರಮಾತ್ಮರೂಪವಾದ ಪರಬ್ರಹ್ಮವು. ಇದೇ ಗೀತೆಯಲ್ಲಿ ಹೇಳಿರುವ ತತ್ತ್ವವು.

"ಆ ನಾರಾಯಣನು ಭಕ್ತಿಯೊಂದರಿಂದಲೇ ಸಿಕ್ಕತಕ್ಕವನು" ಉಪನಿಷತ್ತುಗಳಲ್ಲಿ ವೇದನ, ಉಪಾಸನ, ಧ್ಯಾನ ಮುಂತಾದ ಹೆಸರುಗಳಿಂದ ಕರೆಯಲ್ಪಡುವದೂ ಗೀತೆಯಲ್ಲಿ ಭಕ್ತಿಯೆಂದು ಕರೆಯಲ್ಪಟ್ಟಿರುವದೂ ಒಂದೇ ಪದಾರ್ಥವು. ಉಪನಿಷತ್ತುಗಳಲ್ಲಿ ಜ್ಞಾನವನ್ನು ಬಿಟ್ಟರೆ ಮಿಕ್ಕ ಯಾವದೊಂದೂ ಮೋಕ್ಷಕ್ಕೆ ಸಾಧನವಲ್ಲವೆಂದು ಮತ್ತೆ ಮತ್ತೆ ಹೇಳಿರುತ್ತದೆ; ಗೀತೆಯಲ್ಲಿ ಭಕ್ತಿಯಿಂದಲೇ ಪರಮಾತ್ಮನನ್ನು ಅರಿತುಕೊಂಡು ಆತನಲ್ಲಿ ಪ್ರವೇಶಮಾಡುವದಕ್ಕೂ ಶಕ್ಯವೆಂದು ಹೇಳಿರುತ್ತದೆ. ಈ ಎರಡು ಉಪದೇಶಗಳೂ ಒಂದೇ. ಭಕ್ತಿಯೇ ಉಪನಿಷತ್ತುಗಳ ಜ್ಞಾನವು, ಜ್ಞಾನವೇ ಭಕ್ತಿಯು – ಎಂದು ತಿಳಿಯುವದು ಯುಕ್ತವೂ ಆಗಿರುತ್ತದೆ. ಆದ್ದರಿಂದಲೇ ಪುರಾಣಾದಿಗಳಲ್ಲಿಯೂ ಭಕ್ತಿಯಿಂದಲೇ ಪರಮಾತ್ಮನು ಲಭಿಸತಕ್ಕವನೆಂದು ಹೇಳಿರುತ್ತದೆ.

"ಭಕ್ತಿಗೆ ಸ್ವಧರ್ಮ, ಜ್ಞಾನ, ವೈರಾಗ್ಯ – ಇವು ಮೂರೇ ಸಾಧವಾಗಿರುತ್ತವೆ." ಸ್ವಧರ್ಮವೆಂದರೆ ತಮ್ಮ ತಮ್ಮ ವರ್ಣಾಶ್ರಮಗಳಿಗೆ ಶಾಸ್ತ್ರದಲ್ಲಿ ಗೊತ್ತಾಗಿರುವ ಧರ್ಮಗಳು. ಜ್ಞಾನವೆಂದರೆ ಆತ್ಮನಾದ ತನ್ನ ಸ್ವರೂಪವನ್ನು ಇದ್ದದ್ದು ಇದ್ದಂತೆ ತಿಳಿದುಕೊಳ್ಳುವುದು. ವೈರಾಗ್ಯವೆಂದರೆ ಪರಮಾತ್ಮನನ್ನು ಬಿಟ್ಟು ಮಿಕ್ಕ ವಿಷಯಗಳಲ್ಲೆಲ್ಲ ವಿರಕ್ತಿಯು. ಕರ್ಮಜ್ಞಾನಗಳು ಮೊದಲು ಕರ್ಮಯೋಗ, ಜ್ಞಾನಯೋಗರೂಪ ವಾಗಿರುತ್ತವೆ; ಭಕ್ತಿಯೋಗಕ್ಕೆ

ಅಧಿಕಾರವನ್ನು ಕೊಟ್ಟು ಅದಕ್ಕೆ ಸಾಧನಗಳೆನಿಸಿಕೊಳ್ಳುತ್ತವೆ. ಭಕ್ತಿಯೋಗವು ಉಂಟಾದ ಮೇಲೂ ಆ ಭಕ್ತಿಯೋಗವು ದಿನದಿನವೂ ಅಭ್ಯಾಸಮಾಡಿದಂತೆಲ್ಲ ವಿಶದವಾಗುತ್ತಾ ಬಂದು ಪ್ರತ್ಯಕ್ಷದಂತೆ ಆಕಾರವನ್ನು ಹೊಂದಬೇಕಾಗಿರುವುದರಿಂದಲೂ ಆತ್ಮಜ್ಞಾನ ಪೂರ್ವಕ ವಾಗಿ ಮಾಡಿದ ನಿತ್ಯನೈಮಿತ್ತಿಕಕರ್ಮಗಳು ಸತ್ತ್ವವೃದ್ಧಿಯನ್ನುಂಟುಮಾಡುವುದರ ಮೂಲಕ ಭಕ್ತಿಯೋಗಕ್ಕೆ ಸಾಧನವೆನಿಸುತ್ತವೆ.

ವೈರಾಗ್ಯವು ನಿಜವಾಗಿ ಕರ್ಮಯೋಗಕ್ಕೆ ಸೇರಿದ್ದಾದರೂ ವೈರಾಗ್ಯವಿದ್ದರೆ ಮೋಕ್ಷವು, ಇಲ್ಲದಿದ್ದರೆ ಇಲ್ಲ - ಎಂಬುದನ್ನು ತಿಳಿಸುವದಕ್ಕಾಗಿ ಇಲ್ಲಿ ಅದನ್ನು ಬೇರೆಯಾಗಿ ಹೇಳಿರುತ್ತದೆ.

ಅಂತೂ ಹೀಗೆ ತತ್ತ್ವವಾಗಿರುವ ಶ್ರೀಮನ್ನಾರಾಯಣಸ್ವರೂಪವನ್ನು ಆತನನ್ನು ಪಡೆಯುವದಕ್ಕೆ ಬೇಕಾದ ಭಕ್ತಿಯೆಂಬ ಹಿತಸಾಧನವನ್ನೂ ತಿಳಿಸುವದರಿಂದ **ಗೀತೆಯು ಶಾಸ್ತ್ರವೆನಿಸುತ್ತದೆ.** ಈ ಶಾಸ್ತ್ರವು ಶ್ರೀಮನ್ನಾರಾಯಣನ ಸ್ವರೂಪವನ್ನು ಅಜ್ಞಾನ, ಸಂಶಯ, ವಿಪರೀತ ಜ್ಞಾನ - ಇವುಗಳುಂಟಾಗದಂತೆ ಆತನೇ ಪರಮಪ್ರಾಪ್ಯನು, ಪ್ರಾಪಕನು, ಸರ್ವಕಾರಣನು - ಎಂದು ಮುಂತಾಗಿ ಮಿಕ್ಕ ಯಾವ ಪದಾರ್ಥ ದಲ್ಲಿಯೂ ಇಲ್ಲದ ಅಸಾಧಾರಣವಾದ ಸ್ವಭಾವವುಳ್ಳ ಪುರುಷೋತ್ತಮರೂಪದಿಂದ ತಿಳಿಸಿಕೊಡುತ್ತದೆ. ಇದೇ ಗೀತಾಶಾಸ್ತ್ರದ ಪರಮ ತಾತ್ಪರ್ಯವು.

ಈ ಸಿದ್ಧಾಂತದಲ್ಲಿ ಬರಿಯ ಕರ್ಮದಿಂದ ಮೋಕ್ಷವೆಂಬುದನ್ನಾಗಲಿ, ಬರಿಯ ಉಪನಿಷತ್ತಿನ ವಾಕ್ಯಾರ್ಥಜ್ಞಾನದಿಂದ ಮೋಕ್ಷವೆಂಬುದನ್ನಾಗಲಿ, ಜ್ಞಾನಕರ್ಮಸಮುಚ್ಚಯ ದಿಂದ ಮೋಕ್ಷವೆಂಬುದನ್ನಾಗಲಿ ಒಪ್ಪಿರುವದಿಲ್ಲ, ಜ್ಞಾನಕರ್ಮಗಳು ಸಾಧನವು, ಭಕ್ತಿಯೇ ಸಾಧ್ಯವು; ಭಕ್ತಿ ಎಂಬುದೂ ಉಪನಿಷತ್ತುಗಳಲ್ಲಿ ಹೇಳಿರುವ ಮೋಕ್ಷ ಕಾರಣವಾದ ನಿದಿ ಧ್ಯಾಸನರೂಪವಾದ ಜ್ಞಾನವೂ ಒಂದೇ. ಆ ಭಕ್ತಿಯೇ ಸಾಧನ ಬಲದಿಂದ ಬಲವಾಗುತ್ತಾ ಬಂದು ಮೋಕ್ಷವನ್ನು ಕೊಡುತ್ತದೆ.

# ಗೀತೆಯ ಪೂರ್ವಷಟ್ಕ

**ಜ್ಞಾನ ಕರ್ಮಾತ್ಮಿಕೇ ನಿಷ್ಠಾ ಯೋಗಲಕ್ಷ್ಯೇ ಸುಸಂಸ್ಕೃತೇ ।**
**ಆತ್ಮಾನುಭೂತಿಸಿದ್ಧ್ಯರ್ಥೇ ಪೂರ್ವಷಟ್ಕೇನ ಚೋದಿತೇ ॥೨॥**

"ಜ್ಞಾನಾತ್ಮಕ ಮತ್ತು ಕರ್ಮಾತ್ಮಕ ಸುಸಂಸ್ಕೃತನಿಷ್ಠೆಗಳು ಪೂರ್ವಷಟ್ಕದಲ್ಲಿ ವಿಹಿತವಾಗಿರುತ್ತದೆ. ಇವೆರಡಕ್ಕೂ ಯೋಗವೇ ಲಕ್ಷ್ಯವು. ಆತ್ಮಾನುಭವವು ಸಿದ್ಧಿಸುವದೇ ಇದಕ್ಕೆ ಪ್ರಯೋಜನವು."

ಹಿಂದಿನ ಶ್ಲೋಕದಲ್ಲಿ ಒಟ್ಟು ಗೀತಾಶಾಸ್ತ್ರದ ವಿಷಯವನ್ನು ಹೇಳಿದ್ದಾಗಿದೆ. ಈಗ ಗೀತೆಯನ್ನು ಮೂರು ಭಾಗಗಳಾಗಿ ಮಾಡಿಕೊಂಡು ಪ್ರತಿಯೊಂದು ಆರು ಅಧ್ಯಾಯಗಳಲ್ಲಿಯೂ ಹೇಳಿರುವದನ್ನು ತಿಳಿಸುತ್ತಿದಾರೆ.

ಮೊದಲನೆಯ ಷಟ್ಕದಲ್ಲಿ ಎಂದರೆ ಒಂದರಿಂದ ಆರನೆಯ ಅಧ್ಯಾಯದವರೆಗೆ ಹೇಳಿರುವದು ಜ್ಞಾನಯೋಗ, ಕರ್ಮಯೋಗ - ಎಂಬ ಎರಡು ನಿಷ್ಠೆಗಳು. ಇವುಗಳ ಸ್ವರೂಪವೇನೆಂಬುದು ಮುಂದೆ ಸ್ಪಷ್ಟವಾಗುತ್ತದೆ.

**"ಕರ್ಮಯೋಗ, ಜ್ಞಾನಯೋಗ - ಇವೆರಡಕ್ಕೂ ಯೋಗವೇ ಲಕ್ಷ್ಯವು"** ಕರ್ಮಯೋಗದಿಂದಲೂ ಯೋಗವನ್ನೇ ಪಡೆಯಬೇಕಾಗಿರುತ್ತದೆ. ಜ್ಞಾನಯೋಗದಿಂದಲೂ ಯೋಗವನ್ನೇ ಪಡೆಯಬೇಕಾಗಿರುತ್ತದೆ. ಕರ್ಮನಿಷ್ಠೆಯಿಂದ ಜ್ಞಾನನಿಷ್ಠೆಯನ್ನು ಪಡೆದು, ಆಮೇಲೆ ಅದರಿಂದ ಯೋಗವನ್ನು ಪಡೆಯುವದು ಒಂದು ಕ್ರಮವು. ಜ್ಞಾನನಿಷ್ಠೆ ಎಂಬುದು ನಡುವೆ ಬಾರದೆಯೇ ಕರ್ಮನಿಷ್ಠೆಯಿಂದಲೇ ನೇರಾಗಿ ಯೋಗವನ್ನು ಪಡೆಯುವುದು ಮತ್ತೊಂದು ಕ್ರಮವು.

**"ನಿಷ್ಠೆಗಳೆರಡೂ ಸುಸಂಸ್ಕೃತವಾಗಿರಬೇಕು"** ಎಂದರೆ ನಾನು ಪರಮಾತ್ಮನಿಗೆ ಅಧೀನನಾಗಿರುವವನು ಎಂಬ ಬುದ್ಧಿ, ಆತನ ಪ್ರೀತಿಗಾಗಿ ಈ ಸಾಧನವನ್ನು ಮಾಡುತ್ತಿದೇನೆ ಎಂಬ ಬುದ್ಧಿ, ನನಗೆ ಮತ್ತೊಂದು ಫಲವು ಬೇಡ ಎಂಬುದೇ ಮುಂತಾದ ಬುದ್ಧಿ ಇವುಗಳಿಂದ ಈ ನಿಷ್ಠೆಗಳಿಗೆ ತಕ್ಕ ಸಂಸ್ಕಾರವಾಗಿರಬೇಕು. ಹಾಗಿದ್ದರೇ ಇವು ಕಾರ್ಯಕಾರಿಯಾಗುವವು, ಇಲ್ಲದಿದ್ದರೆ ಇಲ್ಲ.

**"ಆತ್ಮಾನುಭವದ ಸಿದ್ಧಿಯೇ ಇವಕ್ಕೆ ಪ್ರಯೋಜನ"** ಆತ್ಮಾನುಭವವೆಂಬುದು ಒಂದಾನೊಂದು ಸುಖವಿಶೇಷವು. ಅದು ವಿಷಯಸುಖಗಳಂತೆ ಇರುವದಲ್ಲ, ಮಿಕ್ಕ

ಎಲ್ಲಾ ಸುಖದಲ್ಲಿಯೂ ವೈರಾಗ್ಯವನ್ನು ಹುಟ್ಟಿಸತಕ್ಕದ್ದು. ಅದೇ ಈ ಎರಡು ನಿಷ್ಠೆಗಳಿಗೂ ಪ್ರಯೋಜನವು.

ಇಲ್ಲಿ ಯೋಗವೆಂದರೆ ಆಸನಾದಿಗಳನ್ನು ಅಳವಡಿಸಿಕೊಂಡು ಆತ್ಮನನ್ನೇ ನೋಡುವದೆಂಬ ಚಿತ್ತಸಮಾಧಾನರೂಪವಾದ ವ್ಯಾಪಾರವೇ. ಜ್ಞಾನಯೋಗ ಎಂಬುದು ಸ್ಮೃತಿಯನ್ನು ಸಂತತವಾಗಿರಿಸಿಕೊಳ್ಳುವದು. ಜ್ಞಾನದಿಂದ ಯೋಗವು ದಕ್ಕಿದ ಮೇಲೆ ಅದರಿಂದ ಆತ್ಮಾನುಭವವೆಂಬ ಫಲವು ಸಿಕ್ಕುತ್ತದೆ. ಹೀಗೆ ಕರ್ಮನಿಷ್ಠೆ ಜ್ಞಾನನಿಷ್ಠೆಗಳು, ಅವುಗಳಿಂದ ಯೋಗ, ಅವುಗಳಿಂದ ಆತ್ಮಾನುಭವ. ಹೀಗೆ ಉಂಟಾಗುವದೆಂಬುದು ಗೀತೆಯ ಮೊದಲನೆಯ ಆರು ಅಧ್ಯಾಯಗಳ ಒಟ್ಟರ್ಥವು.

ಖುಖುಖುಖುಖು

# ಗೀತೆಯ ಮಧ್ಯಮಷಟ್ಕ

**ಮಧ್ಯಮೇ ಭಗವತ್ತತ್ತ್ವಯಾಥಾತ್ಮ್ಯಾವಾಪ್ತಿಸಿದ್ಧಯೇ ।**
**ಜ್ಞಾನಕರ್ಮಾಭಿನಿರ್ವರ್ತ್ಯೋ ಭಕ್ತಿಯೋಗಃ ಪ್ರಕೀರ್ತಿತಃ ॥೩॥**

"ಮಧ್ಯಮ ಷಟ್ಕದಲ್ಲಿ ಭಗವತ್ತತ್ತ್ವದ ಯಾಥಾತ್ಮ್ಯವನ್ನು ಪಡೆದುಕೊಳ್ಳುವದೆಂಬ ಸಿದ್ಧಿಗಾಗಿ ಜ್ಞಾನಕರ್ಮಗಳಿಂದ ಉಂಟಾಗತಕ್ಕ ಭಕ್ತಿಯೋಗವು ಚೆನ್ನಾಗಿ ಹೇಳಲ್ಪಟ್ಟಿರುತ್ತದೆ."

ಮೊದಲನೆಯ ಷಟ್ಕದಲ್ಲಿ ಜ್ಞಾನನಿಷ್ಠೆ ಕರ್ಮನಿಷ್ಠೆ - ಇವೆರಡನ್ನೂ ಹೇಳಿದೆ. ಎಂದು ತಿಳಿಸಿದ್ದಾಗಿರುತ್ತದೆ. ಈ ಎರಡು ನಿಷ್ಠೆಗಳೂ ಆತ್ಮಾನುಭವಕ್ಕೆ ಕಾರಣವಾಗಿದೆ ಎಂದೂ ಹೇಳಿದ್ದಾಗಿರುತ್ತದೆ. ಭಗವಂತನನ್ನು ಪಡೆಯುವವನಾಗಿರುವ ಆತ್ಮನ ಯಾಥಾತ್ಮ್ಯವನ್ನೇ ಅಲ್ಲಿ ಹೇಳಿರುತ್ತದೆ. ಆ ಯಾಥಾತ್ಮ್ಯಜ್ಞಾನವು ಆತ್ಮಜ್ಞಾನಪೂರ್ವಕವಾಗಿ ಕರ್ಮಾನುಷ್ಠಾನ ಮಾಡುವದರಿಂದ ದೊರೆಯತಕ್ಕದ್ದಾಗಿರುತ್ತದೆ.

ಈ ಆತ್ಮತತ್ತ್ವವನ್ನು ಅರಿತು ಅನುಭವಿಸಿದ ಮೇಲೆ ಭಗವಂತನ ಯಾಥಾತ್ಮ್ಯವನ್ನು ಅನುಭವಿಸಬೇಕಾಗಿರುತ್ತದೆ. **ಭಗವಂತನೆಂದರೆ** ಸಕಲಜಗತ್ತಿಗೂ ಕಾರಣನಾಗಿ, ನಿರ್ದೋಷನಾಗಿ, ಕಲ್ಯಾಣಗುಣಗಳ ಗನಿಯಾಗಿರುವ ಪರಬ್ರಹ್ಮಸ್ವರೂಪವು. ಆ ಪರಮಾತ್ಮನೇ ಭಗವಂತನೆಂಬ ಹೆಸರಿಗೆ ತಕ್ಕವನಾದವನು. ಮಿಕ್ಕವರಲ್ಲಿ ಉಪಯೋಗಿಸಿದಾಗ ಆ ಶಬ್ದವು ಉಪಚಾರಕ್ಕಾಗಿ ಉಪಯೋಗಿಸುವದಾಗಿರುತ್ತದೆ.

ಪರಮಾತ್ಮನು ಇದ್ದರೂ, ಇರುವ ಹಾಗೆಯೇ ತಿಳಿದರೆ ಆತನ **ಯಾಥಾತ್ಮ್ಯ**ವನ್ನು ಅರಿತುಕೊಂಡಂತೆ ಆಗುತ್ತದೆ. ಅಳತೆಯ ಕಟ್ಟಿಲ್ಲದ ಮಿಗಿಲಿಲ್ಲದ ಆನಂದರೂಪದಿಂದ ಅದನ್ನು **ಅನುಭವಿಸುವದೇ ಭಗವಂತನೆಂಬ ತತ್ತ್ವ ಯಾಥಾತ್ಮ್ಯವನ್ನು ಪಡೆಯುವದು.**

ಈ ರೀತಿಯಲ್ಲಿ ನಿರುಪಚರಿತನಾಗಿ ಭಗವಂತನೆನಿಸಿರುವ ಶ್ರೀಮನ್ನಾರಾಯಣನ ಪರಮಾರ್ಥವಾದ ಸ್ವರೂಪವನ್ನು ಪರಮಾನಂದರೂಪದಿಂದ ಅನುಭವಿಸುವದೆಂಬ ಸಿದ್ಧಿಯು ಆಗಲೇಬೇಕಾದರೆ ಅದಕ್ಕೆ ಸಾಧನವಾದ ಭಕ್ತಿಯೆಂಬ ಉಪಾಸನೆಯು ಬೇಕಾಗುತ್ತದೆ. ಭಕ್ತಿಯೇ ಭಗವತ್ಪ್ರಾಪ್ತಿಗೆ ಯೋಗವಾಗಿರುವದರಿಂದ ಎಂದರೆ ಉಪಾಯವಾಗಿರುವದರಿಂದ ಅದನ್ನು ಇಲ್ಲಿ ಹೇಳಿರುತ್ತದೆ.

ಅಂತೂ ಎರಡನೆಯ ಷಟ್ಕದಲ್ಲಿ ಮುಖ್ಯವಾಗಿ ಭಕ್ತಿಯನ್ನು ಹೇಳಿರುತ್ತದೆ. ಭಕ್ತಿಯ ಸ್ವರೂಪವೇನು? ಅದನ್ನು ಹೇಗೆ ಮಾಡಬೇಕು? ಅದಕ್ಕೆ ವಿಷಯವು ಯಾವದು, ಅದರ ಕಾರ್ಯವೇನು? ಇವೆಲ್ಲವನ್ನೂ ವಿವರಿಸಿ ಸ್ಪಷ್ಟಗೊಳಿಸುವದರಿಂದ ಈ ಷಟ್ಕದಲ್ಲಿ ಭಕ್ತಿಯೋಗವು 'ಪ್ರಕೀರ್ತಿತ'ವಾಗಿದೆ ಎಂದು ಪ್ರಕೃಷ್ಟಾರ್ಥವಾದ 'ಪ್ರ' ಎಂಬ ಉಪಸರ್ಗವನ್ನು ಕೂಡಿಸಿ ಶ್ಲೋಕದಲ್ಲಿ ಹೇಳಿರುತ್ತದೆ.

# ಗೀತೆಯ ಅಂತಿಮಷಟ್ಕ

**ಪ್ರಧಾನ ಪುರುಷವ್ಯಕ್ತಸರ್ವೇಶ್ವರವಿವೇಚನಮ್ ।**
**ಕರ್ಮಧೀರ್ಭಕ್ತಿರಿತ್ಯಾದಿಃ ಪೂರ್ವಶೇಷೋಽನ್ತಿಮೋದಿತಂ ॥೪॥**

"ಅಂತಿಮಷಟ್ಕದಲ್ಲಿ ಪ್ರಧಾನ, ಪುರುಷ, ವ್ಯಕ್ತ, ಸರ್ವೇಶ್ವರ ಇವುಗಳ ವಿವೇಚನವನ್ನು ಹಿಂದೆ ಹೇಳಿದ್ದ ಕರ್ಮ, ಜ್ಞಾನ, ಭಕ್ತಿ - ಮುಂತಾದ್ದರ ವಿಷಯಕ್ಕೆ ಉಳಿದಿರುವ ವಿಚಾರವನ್ನೂ ಹೇಳಿರುತ್ತದೆ."

ಹಿಂದಿನ ಎರಡು ಷಟ್ಕಗಳಲ್ಲಿ ಹೇಳಿರುವ ಮುಖ್ಯ ವಿಚಾರಗಳನ್ನು ವಿವೇಚನೆ ಮಾಡುವದೇ ಕೊನೆಯ ಷಟ್ಕದ ಮುಖ್ಯ ಉದ್ದೇಶವು.

**ಪ್ರಧಾನ**ವೆಂದರೆ ಕಾರಣಾವಸ್ಥೆಯಲ್ಲಿರುವ ಅಚಿದ್ದ್ರವ್ಯವು. ಅಚಿದ್ದ್ರವ್ಯವು ಕಾರಣಾವಸ್ಥೆಯೆಂದೂ ಕಾರ್ಯಾವಸ್ಥೆಯೆಂದೂ ಎರಡು ಅವಸ್ಥೆಗಳನ್ನು ಪಡೆಯುತ್ತದೆ. ಇದರ ವಿವೇಚನೆಯನ್ನು ಮಾಡುವದು ಈ ಷಟ್ಕದ ಒಂದು ಕೆಲಸವು.

**ಪುರುಷ**ನೆಂದರೆ ಚಿತ್ತತ್ವವು. ಪುರುಷನು ಅಚಿನ್ಮಿಶ್ರನಾಗಿಯೂ ಅಚಿತ್ತಿಗಿಂತ ಬೇರೆಯಾಗಿ ಶುದ್ಧನಾಗಿಯೂ ಇರುತ್ತಾನೆ. ಈ ಪುರುಷನನ್ನೂ ಇಲ್ಲಿ ವಿವೇಚನೆಮಾಡಿ ತಿಳಿಸಿರುತ್ತದೆ.

**ವ್ಯಕ್ತ**ನೆಂದರೆ ಕಾರ್ಯಸಮೂಹವು. ಕಾರ್ಯವು ಮಹತ್ತೇ ಮುಂತಾದದ್ದೆಂದೂ ಅದರಿಂದಾಗಿರುವ ದೇವತೆಗಳು ತಿರ್ಯಕ್ಪ್ರಾಣಿಗಳು, ಮನುಷ್ಯರು - ಮುಂತಾದ ವೆಂದೂ ಎರಡು ಬಗೆ. ಇದರ ವಿವೇಚನೆಯೂ ಈ ಷಟ್ಕದಲ್ಲಿದೆ.

**ಸರ್ವೇಶ್ವರ**ನೆಂದರೆ ಚಿದಚಿತ್ತುಗಳೆರಡಕ್ಕಿಂತಲೂ ವಿಲಕ್ಷಣವಾಗಿ ಅವುಗಳನ್ನು ಆಳುವ ಪರಮೇಶ್ವರನು. ಪ್ರಧಾನ, ಪುರುಷ, ವ್ಯಕ್ತ- ಈ ಮೂರಕ್ಕಿಂತಲೂ ವಿಂಗಡ ವಾಗಿರುವ ಸರ್ವೇಶ್ವರನ ಸ್ವರೂಪವನ್ನು ಇಲ್ಲಿ ತಿಳಿಸಿರುತ್ತದೆ.

ಹಿಂದಿನ ಷಟ್ಕದಲ್ಲಿ ಹೇಳಿದ ಕರ್ಮ, ಜ್ಞಾನ, ಭಕ್ತಿ - ಮುಂತಾದವುಗಳ ವಿವರ ವನ್ನು ಮತ್ತಷ್ಟು ಮಾಡಿ ಉಪಸಂಹಾರಮಾಡುವದರಿಂದ ಹಿಂದೆ ಹೇಳಿರುವ ವಿಷಯವು ಇಲ್ಲಿ ಚೆನ್ನಾಗಿ ಮನದಟ್ಟಾಗುವದಕ್ಕೆ ಅವಕಾಶವಿದೆ.

ಅಂತೂ ಅಂತಿಮ ಷಟ್ಕದ ಮೊದಲನೆಯ ಅಧ್ಯಾಯಗಳಲ್ಲಿ ಹಿಂದಿನ ಷಟ್ಕಗಳಲ್ಲಿ ಹೇಳಿದ ತತ್ತ್ವಗಳ ವಿವೇಚನೆಯನ್ನೂ ಅನುಷ್ಠಾನದ ವಿವೇಚನೆಯನ್ನೂ ಮಾಡಿರುತ್ತದೆ ಯೆಂದು ಸಾಮಾನ್ಯವಾಗಿ ಹೇಳಬಹುದು.

# ಗೀತಾಶಾಸ್ತ್ರದ ಅವತರಣಿಕೆ

**ಅಸ್ಥಾನಸ್ನೇಹಕಾರುಣ್ಯಧರ್ಮಾಧರ್ಮಧಿಯಾಕುಲಮ್ ।**
**ಪಾರ್ಥಂ ಪ್ರಪನ್ನಮುದ್ದಿಶ್ಯ ಶಾಸ್ತ್ರಾವತರಣಂ ಕೃತಮ್ ॥೫॥**

"ಅಯೋಗ್ಯವಾದ ಕಡೆಯಲ್ಲಿ ಸ್ನೇಹದಿಂದಲೂ ಕಾರುಣ್ಯದಿಂದಲೂ ಉಂಟಾದ ಧರ್ಮಾಧರ್ಮಗಳ ಬುದ್ಧಿಯಿಂದ ಕದಡಿದ ಬುದ್ಧಿಯುಳ್ಳ ಪಾರ್ಥನು ತನ್ನನ್ನು ಶರಣು ಬಂದ ಪಾರ್ಥನಿಗಾಗಿ ಶಾಸ್ತ್ರದ ಅವತರಣಿಕೆಯನ್ನು ಮಾಡಲಾಗಿರುತ್ತದೆ."

ಇದುವರೆಗೆ ಶಾಸ್ತ್ರದ ಒಟ್ಟರ್ಥವನ್ನು ಆರಾರು ಅಧ್ಯಾಯಗಳ ತಾತ್ಪರ್ಯವನ್ನೂ ತಿಳಿಸಿಕೊಟ್ಟಿದ್ದಾಯಿತು. ಈಗ ಒಂದೊಂದು ಅಧ್ಯಾಯದ ಅಭಿಪ್ರಾಯವನ್ನೂ ತಿಳಿಸು

ವದಕ್ಕೆ ಪ್ರಾರಂಭಿಸಿರುತ್ತಾರೆ. ಈ ಶ್ಲೋಕದಲ್ಲಿ ಶಾಸ್ತ್ರದ ಅವತರಣಿಕೆಯ ಒಟ್ಟರ್ಥವನ್ನು ತಿಳಿಸಿರುತ್ತದೆ. ಅವತರಣಿಕೆಯೆಂಬುದು ಅರ್ಜುನನಿಗೆ ವಿಷಾದವುಂಟಾದ ರೀತಿಯನ್ನು ವರ್ಣಿಸುವ ಮೊದಲನೆಯ ಅಧ್ಯಾಯವೇ ಅಲ್ಲದೆ ಎರಡನೆಯ ಅಧ್ಯಾಯದ ಹತ್ತನೆಯ ಶ್ಲೋಕದವರೆಗಿನ ಗ್ರಂಥಭಾಗವನ್ನೂ ಅಡಕಮಾಡಿಕೊಂಡಿರುತ್ತದೆ. ಈ ಭಾಗವನ್ನು ವಿವರಿಸುವದಕ್ಕಾಗಿಯೇ ಯಾಮುನಾಚಾರ್ಯರು ಈ ಶ್ಲೋಕವನ್ನು ಬರೆದಿರುತ್ತಾರೆಂದು ರಾಮಾನುಜಾಚಾರ್ಯರವರು ಗೀತಾಭಾಷ್ಯದಲ್ಲಿ ಹೇಳಿರುತ್ತಾರೆ.

ಅರ್ಜುನನಿಗೆ ಅಸ್ಥಾನದಲ್ಲಿ ಅಯೋಗ್ಯವಾದ ಸಂದರ್ಭದಲ್ಲಿ ಸ್ನೇಹವೂ ಕಾರುಣ್ಯವೂ ಉಂಟಾಗಿದ್ದವು. ಸ್ವಭಾವದಿಂದ ಅವನು ಧೀರನಾದರೂ ಈಗ ಸಲ್ಲದ ಸ್ನೇಹವನ್ನೂ ಕಾರುಣ್ಯವನ್ನೂ ಬಂಧುಗಳಲ್ಲಿ ತೋರಿಸುವದಕ್ಕೆ ಹೊರಟು ಯಾವದು ಧರ್ಮ, ಯಾವದು ಅಧರ್ಮ – ಎಂಬುದನ್ನೇ ತಿಳಿಯಲಾರದೆ ಹೋದನು. ಕ್ಷತ್ರಿಯರಿಗೆ ಯುದ್ಧವು ಧರ್ಮವೇ ಆದರೂ ಅದು ಅಧರ್ಮವೆಂಬ ಬುದ್ಧಿಯು ಅವನಲ್ಲಿ ಮೊಳಕೆಯಾಯಿತು. ಆದ್ದರಿಂದ ಅರ್ಜುನನು ಭಗವಂತನಲ್ಲಿ ಧರ್ಮವನ್ನು ತಿಳಿಯುವದಕ್ಕಾಗಿ ಶರಣಾಗತನಾಗಿ ಬಂದನು.

ಅರ್ಜುನನು ಆತ್ಮಸ್ವರೂಪವನ್ನು ತಿಳಿದುಕೊಳ್ಳಬೇಕು. ಫಲದ ಆಶೆಯಿಲ್ಲದೆ ತನ್ನ ಧರ್ಮವಾದ ಯುದ್ಧವನ್ನು ಮಾಡಿದರೇ ಆ ಜ್ಞಾನವುಂಟಾಗುತ್ತದೆ. ಇಷ್ಟಾದ ಹೊರತು ಅವನ ಅಜ್ಞಾನವು ತೊಲಗುವದಿಲ್ಲ – ಎಂದು ಭಗವಂತನು ಅರ್ಜುನನಿಗಾಗಿ ಶಾಸ್ತ್ರದ ಅವತರಣಿಕೆಯನ್ನು ಮಾಡಿದನು.

ಆದ್ದರಿಂದ ಭಗವದ್ಗೀತೆಯು ಅಧ್ಯಾತ್ಮಶಾಸ್ತ್ರವು, ಇದರಲ್ಲಿ ಮೋಹವನ್ನು ಕಳೆಯುವ ಅಧ್ಯಾತ್ಮವಿಚಾರವಿದೆ. ಅರ್ಜುನನ ವ್ಯಾಜದಿಂದ ಭಗವಂತನು ಈ ಶಾಸ್ತ್ರವನ್ನು ಹೊರಕ್ಕೆ ತಂದಿರುತ್ತಾನೆ – ಎಂದು ಹೇಳಿದಂತೆ ಆಯಿತು.

# ಎರಡನೆಯ ಅಧ್ಯಾಯ

**ನಿತ್ಯಾತ್ಮಸಙ್ಗಕರ್ಮೇಹಾಗೋಚರಾ ಸಾಙ್ಖ್ಯಯೋಗಧೀಃ ।**
**ದ್ವಿತೀಯೇ ಸ್ಥಿತಧೀಲಕ್ಷ್ಯಾ ಪ್ರೋಕ್ತಾ ತನ್ಮೋಹಶಾನ್ತಯೇ ॥೩॥**

“ನಿತ್ಯಾತ್ಮವಿಷಯವಾದ ಮತ್ತು ಅಸಂಗಕರ್ಮಾನುಷ್ಠಾನವಿಷಯವಾದ ಸಾಂಖ್ಯ ಯೋಗಗಳ ಬುದ್ಧಿಯನ್ನೂ ಸ್ಥಿತಪ್ರಜ್ಞರ ಸ್ಥಿತಿಯನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಆ ಅರ್ಜುನನ ಮೋಹನಾಶಕ್ಕಾಗಿ ಎರಡನೆಯ ಅಧ್ಯಾಯದಲ್ಲಿ ಹೇಳಿರುತ್ತದೆ.”

ಅರ್ಜುನನಿಗೆ ಆತ್ಮನ ಯಾಥಾತ್ಮ್ಯವು ತಿಳಿಯದೆ ಇತ್ತು. ಅದಕ್ಕೆ ಯುದ್ಧವೆಂಬ ತನ್ನ ಕರ್ಮವು ಸಾಧನವೆಂಬುದೂ ತಿಳಿಯದೆ ಇತ್ತು. ಅವನು ಶರೀರಾತ್ಮಜ್ಞಾನದಿಂದ ಮೋಹಿತನಾಗಿದ್ದುಬಿಟ್ಟನು. ಆದ್ದರಿಂದ ಅವನು ಯುದ್ಧವನ್ನು ಮಾಡದೆ ಇದ್ದುಬಿಟ್ಟನು.

ಈ ಮೋಹವು ಶಾಂತಿಯಾಗುವದಕ್ಕಾಗಿ ಭಗವಂತನುಅವನಿಗೆ ಸಾಂಖ್ಯ ಬುದ್ಧಿ ಯನ್ನೂ ಯೋಗಬುದ್ಧಿಯನ್ನೂ ಉಪದೇಶಮಾಡಿದನು.

ಸಾಂಖ್ಯಬುದ್ಧಿಯೆಂದರೆ ಬುದ್ಧಿಯಿಂದ ನಿಶ್ಚಯಿಸಬೇಕಾಗಿರುವ ಆತ್ಮತತ್ತ್ವವಿಷಯ ವಾದ ಬುದ್ಧಿಯು. ಆತ್ಮನು ನಿತ್ಯನು ಎಂದು ನಿಶ್ಚಯಿಸಬೇಕಾಗಿರುವದಕ್ಕೆ ಸಾಧನವಾದದ್ದು ಅದು.

ಯೋಗಬುದ್ಧಿಯೆಂದರೆ ಸಂಗವಿಲ್ಲದೆ ಕರ್ಮವನ್ನು ಮಾಡಬೇಕೆಂಬ ವಿಷಯದ ಬುದ್ಧಿಯು, ಈ ಎರಡು ಬುದ್ಧಿಗಳಿಗೂ ಸ್ಥಿತಪ್ರಜ್ಞತ್ವವೇ ಸಾಧ್ಯವು. ಸ್ಥಿತಪ್ರಜ್ಞತ್ವವೆಂದರೆ ಜ್ಞಾನನಿಷ್ಠೆಯು. ಅದೇ ಇವೆರಡಕ್ಕೂ ಲಕ್ಷ್ಯವು.

ಅರ್ಜುನನಿಗೆ ಶರೀರವೇ ತಾನು ಎಂಬುದೇ ಮುಂತಾದ ಅಭಿಪ್ರಾಯವಿದ್ದ ದ್ದರಿಂದಲೂ ಭೀಷ್ಮಾದಿಗಳೂ ಅದರಂತೆ ದೇಹಾದಿಗಳೆಂಬ ಬುದ್ಧಿಯಿದ್ದದ್ದರಿಂದಲೂ ಅವರನ್ನು ಹೊಡೆಯಬಾರದೆಂಬ ಬುದ್ಧಿಯೂ ಬಂದಿತು. ಈ ಮೋಹವು ತೊಲಗ ಬೇಕಾದರೆ ದೇಹಾತೀತನಾಗಿ ನಿತ್ಯನಾಗಿರುವ ಆತ್ಮನ ಸ್ವರೂಪದ ಜ್ಞಾನವು ಬೇಕು. ಆ ಜ್ಞಾನವು ಬರಬೇಕಾದರೆ ಅದಕ್ಕೆ ಸಾಧನವಾಗಿ ಸಂಗರಹಿತವಾಗಿ ಕರ್ಮವನ್ನು ಮಾಡುವ ದೆಂಬ ಕರ್ಮಯೋಗವು ಬೇಕು. ಇವೆರಡೂ ಆದರೆ ಅವನು ಸ್ಥಿತಪ್ರಜ್ಞನಾಗಿ ಮೋಹ ವನ್ನು ಕಳೆದುಕೊಳ್ಳುತ್ತಾನೆ. ಈ ಕಾರಣದಿಂದ ಭಗವಂತನು ಈ ಎರಡನ್ನೂ ಗೀತೆಯ ಎರಡನೆಯ ಅಧ್ಯಾಯದಲ್ಲಿ ಹೇಳಿರುತ್ತಾನೆ – ಎಂದು ತಾತ್ಪರ್ಯ.

# ಮೂರನೆಯ ಅಧ್ಯಾಯ

**ಅಸಕ್ತ್ಯಾ ಲೋಕರಕ್ಷಾಯೈ ಗುಣೇಷ್ವಾರೋಪ್ಯ ಕರ್ತೃತಾಮ್ ।**
**ಸರ್ವೇಶ್ವರೇವಾನ್ಯಸ್ಯೋಕ್ತಾ ತೃತೀಯೇ ಕರ್ಮಕಾರ್ಯತಾ ॥೭॥**

"ಕರ್ತೃತ್ವವನ್ನು ಗುಣಗಳಲ್ಲಿ ಆರೋಪಮಾಡಿ ಅಥವಾ ಸರ್ವೇಶ್ವರನಲ್ಲಿಟ್ಟು ಆಸಕ್ತಿಯಿಂದ ಲೋಕರಕ್ಷೆಗಾಗಿ ಕರ್ಮವನ್ನು ಮಾಡಬೇಕು - ಎಂದು ಮೂರನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿರುತ್ತದೆ."

ಕರ್ಮವನ್ನು ಹೇಗೆ ಮಾಡಬೇಕು? ಎಂಬುದನ್ನು ಮೂರನೆಯ ಅಧ್ಯಾಯ ದಲ್ಲಿ ಹೇಳಿರುತ್ತದೆ.

ಕರ್ತೃತ್ವವನ್ನು ಗುಣಗಳಲ್ಲಿ ಆರೋಪಮಾಡಬೇಕು. ಕರ್ತೃತ್ವವೆಂದರೆ ದೇಶ, ಕಾಲ, ಅವಸ್ಥೆ - ಮುಂತಾದವುಗಳಿಂದ ನಿಯತವಾದ ವಿಷಯವುಳ್ಳ ಜ್ಞಾನ, ಇಚ್ಛೆ ಪ್ರಯತ್ನ - ಇವುಗಳಿಗೆ ಆಶ್ರಯನಾಗಿರುವದು. ಈ ದೇಶದಲ್ಲಿ ಈ ಕಾಲದಲ್ಲಿ ಈ ಅವಸ್ಥೆಯಲ್ಲಿ ಇಂಥ ಕರ್ಮವನ್ನೇ ಮಾಡಬೇಕು ಎಂಬ ತಿಳಿವಳಿಕೆಯೂ ಇಚ್ಛೆಯೂ ಅದಕ್ಕನುಗುಣವಾಗಿ ಪ್ರಯತ್ನವೂ ಯಾವನಲ್ಲಿರುವದೋ ಅವನೇ ಕರ್ತೃವೆನಿಸುತ್ತಾನೆ. ಈ ಕರ್ತೃತ್ವವು ಹೇಗೆ ಉಂಟಾದದ್ದು ಎಂಬುದನ್ನು ವಿಮರ್ಶಿಸಿ, ಇದು ಸತ್ತ್ವರಜಸ್ತಮು ಗಳೆಂಬ ಪ್ರಕೃತಿಯ ಗುಣಗಳಿಂದಲೇ ಆಗಿರುತ್ತದೆ. ಆತ್ಮನ ಸ್ವರೂಪದಿಂದಾಗಿರುವದಿಲ್ಲ - ಎಂದು ತಿಳಿದುಕೊಂಡು ಕರ್ಮವನ್ನು ಮಾಡಬೇಕು. ಇದು ಮೊದಲನೆಯ ಮೆಟ್ಟಿಲು.

ಇದರ ಜೊತೆಗೆ ಈ ಕರ್ತೃತ್ವವನ್ನು ಸರ್ವೇಶ್ವರನಲ್ಲಿಡಬೇಕು. ಈ ಗುಣಗಳು, ಇವುಗಳಿಗೆ ಆಶ್ರಯವಾದ ತ್ರಿಗುಣದ್ರವ್ಯ, ಅದರ ಸಂಬಂಧವುಳ್ಳವನೂ ಸಂಬಂಧದಿಂದ ಬಿಡುಗಡೆಹೊಂದಿದವನೂ ಆದ ಜೀವ - ಇದೆಲ್ಲವನ್ನೂ ನಿಯಮನ ಮಾಡುತ್ತಿರುವ ಭಗವಂತನಲ್ಲಿಯೇ ಕರ್ತೃತ್ವವನ್ನಿಟ್ಟು ಇದೆಲ್ಲಕ್ಕೂ ಆತ್ಮನೇ ಮೂಲವೆಂದು ಭಾವಿಸಿ ಕೊಂಡು ಕರ್ಮವನ್ನು ಮಾಡಬೇಕು. ಇದು ಎರಡನೆಯ ಮೆಟ್ಟಿಲು.

ಕರ್ಮವನ್ನು ಅಸಂಗದಿಂದ ಮಾಡಬೇಕು. ಪರಮಪುರುಷನಿಗೆ ಇದರಿಂದ ಪ್ರೀತಿಯುಂಟಾಗಲಿ ಎಂಬುದೊಂದು ಹೊರತು ಮತ್ತೆ ಯಾವ ಫಲದ ಸಂಗವನ್ನೂ ಇಟ್ಟುಕೊಳ್ಳದೆ ಮಾಡಬೇಕು. ಸ್ವರ್ಗದ ಸಂಗವು ಕೂಡ ಇರಬಾರದು.

ಕರ್ಮವನ್ನು ಲೋಕರಕ್ಷೆಗಾಗಿ ಮಾಡಬೇಕು. ತತ್ತ್ವವನ್ನು ತಿಳಿದವನು ಹೀಗೆ ಅರಿತು ಮಾಡುವ ಕರ್ಮವು ಸಂಪೂರ್ಣ ಜ್ಞಾನವಿಲ್ಲದ ಜನರಿಗೆ ಪ್ರಮಾದವಿಲ್ಲದೆ ಸರಿಯಾದ ಮಾರ್ಗದಿಂದ ಕರ್ಮವನ್ನು ಮಾಡುವದಕ್ಕೆ ಮೇಲುಪಙ್ತಿಯಾಗುತ್ತದೆ. ಇದೇ ಲೋಕ ಸಂಗ್ರಹವು. ಹೀಗೆ ಅಸಂಗದಿಂದ ಕರ್ತೃತ್ವವನ್ನು ಗುಣಗಳಲ್ಲಿ ಆರೋಪಿಸಿ ಅದಕ್ಕೆ ಮೂಲ ವಾಗಿರುವವನು ಭಗವಂತನೇ ಎಂದರಿತುಕೊಂಡು ಲೋಕಸಂಗ್ರಹಕ್ಕಾಗಿ, ಕರ್ಮವನ್ನು ಮಾಡಬೇಕು ಎಂಬುದು ಮೂರನೆಯ ಅಧ್ಯಾಯದ ಉಪದೇಶದ ತಾತ್ಪರ್ಯವು.

ಖಖಖಖಖ

# ನಾಲ್ಕನೆಯ ಅಧ್ಯಾಯ

**ಪ್ರಸಜ್ಞಾತ್ ಸ್ವಸ್ವಭಾವೋಕ್ತಿಃ ಕರ್ಮಣೋಽಕರ್ಮತಾಸ್ಯ ಚ ।**
**ಭೇದಾಜ್ಞಾನಸ್ಯ ಮಾಹಾತ್ಮ್ಯಂ ಚತುರ್ಥಾಧ್ಯಾಯ ಉಚ್ಯತೇ ॥೮॥**

"ಪ್ರಸಂಗವಶದಿಂದ ತನ್ನ ಸ್ವಭಾವವನ್ನೂ ಕರ್ಮವು ಅಕರ್ಮವಾಗುವದೆಂಬುದನ್ನೂ ಅದರ ಭೇದಗಳನ್ನೂ ಜ್ಞಾನದ ಮಾಹಾತ್ಮ್ಯವನ್ನೂ ನಾಲ್ಕನೆಯ ಅಧ್ಯಾಯದಲ್ಲಿ ಹೇಳಲಾಗುತ್ತದೆ."

ಕರ್ಮವು ಅಕರ್ಮವಾಗುವದೆಂದರೇನು? ಅಕರ್ಮವೆಂದರೆ ಕರ್ಮವಲ್ಲದ್ದು ಪ್ರಕೃತದಲ್ಲಿ ಜ್ಞಾನವು ಕರ್ಮವನ್ನು ಮಾಡುತ್ತಿರುವಾಗಲೇ ಆತ್ಮತತ್ತ್ವವನ್ನು ಅನುಸಂಧಾನ ಮಾಡಿದರೆ ಅಕರ್ಮವಾಗುತ್ತದೆ ಎಂದರೆ ಜ್ಞಾನವಿಶಿಷ್ಟವಾಗುತ್ತದೆ. ಕರ್ಮದಲ್ಲಿ ಜ್ಞಾನವು ಅಂತರ್ಗತವಾಗಿರುವದರಿಂದ ಕರ್ಮಯೋಗವೇ ಜ್ಞಾನಯೋಗಾಕಾರವಾಗಿರುತ್ತದೆ - ಎಂಬುದನ್ನು ತಿಳಿಸಿ ಕರ್ಮಯೋಗವನ್ನು ಇಲ್ಲಿ ವಿವರಿಸುತ್ತದೆ.

ಕರ್ಮದ ಭೇದಗಳನ್ನೂ ಈ ನಾಲ್ಕನೆಯ ಅಧ್ಯಾಯದಲ್ಲಿ ವಿವರಿಸಿರುತ್ತದೆ. ದೇವತಾರ್ಚನೆ, ಇಂದ್ರಿಯನಿಗ್ರಹ, ಪ್ರಾಣಾಯಾಮ, ಯಾಗ, ದಾನ, ಹೋಮ, ತಪಸ್ಸು ತೀರ್ಥಸೇವೆ, ಅಧ್ಯಾಯನ, ಅದರ ಅರ್ಥವನ್ನು ಅಭ್ಯಾಸಮಾಡುವದು - ಇವೇ ಮುಂತಾದವುಗಳನ್ನು ತಿಳಿಸಿದಮಟ್ಟಿಗೆ ಕೈಯಲ್ಲಾದ ಮಟ್ಟಿಗೆ ತನ್ನ ಅಭಿರುಚಿಗೆ ತಕ್ಕಂತೆ ಮುಖ್ಯವಾಗಿ ಸ್ವೀಕರಿಸಿ ವರ್ಣಾಶ್ರಮಧರ್ಮಗಳನ್ನು ಮಾಡುವ ಬಗೆಯನ್ನೂ ಇಲ್ಲಿ ಹೇಳಿರುತ್ತದೆ ಎಂದರ್ಥ.

ಜ್ಞಾನದ ಮಹಾತ್ಮ್ಯವನ್ನೂ ಈ ಅಧ್ಯಾಯದಲ್ಲಿ ಹೇಳಿರುತ್ತದೆ. 'ದ್ರವ್ಯಮಯ ವಾದ ಜ್ಞಾನಕ್ಕಿಂತ ಜ್ಞಾನಯಜ್ಞವೇ ಮೇಲು' ಎಂದು ಇಲ್ಲಿ ಜ್ಞಾನದ ಹೆಚ್ಚುಗಾರಿಕೆ ಯನ್ನು ಹೇಳಿದೆ. ಮೇಲೆ ಹೇಳಿದಂತೆ ಕರ್ಮಯೋಗದಲ್ಲಿ ದ್ರವ್ಯಮಯಾಂಶವೊಂದು, ಜ್ಞಾನಮಯಾಂಶವೊಂದು – ಹೀಗೆ ಎರಡಂಶಗಳಿರುತ್ತವೆಯಷ್ಟೆ. ಇವೆರಡರಲ್ಲಿ ಜ್ಞಾನವೇ ಹೆಚ್ಚಿನದು; ಏಕೆಂದರೆ ಕರ್ಮವು ಮಿಕ್ಕಿದ್ದೆಲ್ಲವೂ ಜ್ಞಾನದಲ್ಲಿಯೇ ಕೊನೆಗಾಣುವದಾಗಿದೆ. ಆದ್ದರಿಂದ ಕೊನೆಗೆ ಪಡೆಯಬೇಕಾಗಿರುವ ಜ್ಞಾನವನ್ನು ಕರ್ಮದೊಳಗೆ ಸೇರಿಕೊಂಡಿ ರುವ ರೀತಿಯಿಂದಲೇ ಅಭ್ಯಾಸಮಾಡಬೇಕು; ಕೊನೆಗೆ ಅದೇ ಕ್ರಮಕ್ರಮವಾಗಿ ಪ್ರಾಪ್ಯ ಸ್ಥಿತಿಯನ್ನು ಹೊಂದುತ್ತದೆ – ಎಂದು ಜ್ಞಾನಾಂಶದ ಹೆಚ್ಚುಗಾರಿಕೆಯನ್ನೂ ಇಲ್ಲಿ ತಿಳಿಸುತ್ತದೆ.

ಪ್ರಸಂಗದಿಂದ ಭಗವಂತನ ಅವತಾರ ಸ್ವಭಾವದ ತತ್ವವನ್ನೂ ತಿಳಿಸಿರುತ್ತದೆ. ಯಾವ ಹೇಯಗುಣಗಳೂ ಇಲ್ಲದ ಕಲ್ಯಾಣ ಗುಣಮಾತ್ರ ಉಳ್ಳ ಭಗವಂತನ ಜನ್ಮವು ಇಂದ್ರಜಾಲದಂತೆ ಮಿಥ್ಯೆಯಾದುದಲ್ಲ, ಸತ್ಯವಾದ್ದದ್ದು. ಹಾಗೆ ಅವತಾರ ಮಾಡಿದ ಮೇಲೂ ಈ ಭಗವಂತನು ನಮ್ಮಗಳಂತೆ ಜ್ಞಾನಸಂಕೋಚಾದಿಗಳನ್ನು ತಳೆಯುವದಿಲ್ಲ; ಆತನು ಆಗಲೂ ಅಜನೂ, ಅವ್ಯಯಾತ್ಮನೂ, ಸರ್ವೇಶ್ವರನೂ ಆಗಿ ತನ್ನ ಪರಮೇಶ್ವರ ಸ್ವಭಾವವನ್ನಿಟ್ಟುಕೊಂಡೇ ಅವತರಿಸುತ್ತಾನೆ. ಆತನು ಅವತರಿಸುವಾಗ ತಳೆಯುವ ಶರೀರವು ಗುಣತ್ರಯದಿಂದಾದ್ದಲ್ಲ, ಪ್ರಕೃತವಾದದ್ದಲ್ಲ; ಅದು ಅಪ್ರಕೃತವಾದ ಶುದ್ಧಸತ್ತ್ವಮಯ ವಾದುದ್ದು. ಆತನು ಹೀಗೆ ಅವತರಿಸುವದು ಜೀವರುಗಳಂತೆ ಪುಣ್ಯಾಪುಣ್ಯ ರೂಪ ಕರ್ಮಗಳಿಗೆ ವಶನಾಗಿರುವದರಿಂದಲ್ಲ, ತನ್ನ ಇಚ್ಛಾನುಗುಣವಾಗಿಯೇ ಅವನು ಅವತರಿಸುತ್ತಾನೆ; ಕರ್ಮವು ಯಾವಯಾವಾಗ ವಿಕಾರವಾಗುವದೋ ಆಗ ಹುಟ್ಟುವ ಜೀವರಂತೆ ಆತನ ಅವತಾರಕ್ಕೆ ಕರ್ಮವಿಪಾಕಕಾಲದ ಅಪೇಕ್ಷೆಯೂ ಇಲ್ಲ, ಧರ್ಮವು ಕುಂದಿ ಅಧರ್ಮವು ತಲೆಯೆತ್ತಿರುವಾಗಲೇ ಆತನು ಅವತರಿಸುತ್ತಾನೆ. ಈ ಭಗವಂತನು ಅವತರಿಸುವದರ ಫಲವು ಸುಖಮಿಶ್ರವಾಗಿರುವದಿಲ್ಲ; ಸಾಧುಗಳ ರಕ್ಷಣೆ, ಪಾಪಿಗಳ ನಾಶ, ಧರ್ಮಸ್ಥಾಪನೆ ಮುಂತಾದವೇ ಅದರ ಫಲವಾಗಿರುತ್ತವೆ. ಈ ರೀತಿಯಲ್ಲಿ ಸ್ವರೂಪದಿಂದಲೂ, ಪ್ರಾಕಾರದಿಂದಲೂ, ದ್ರವ್ಯದಿಂದಲೂ, ಕಾರಣದಿಂದಲೂ, ಕಾಲ ದಿಂದಲೂ, ಪ್ರಯೋಜನದಿಂದಲೂ ಭಗವಂತನ ಅವತಾರವೆಂಬುದು ದಿವ್ಯವಾಗಿರುತ್ತದೆ. ಈ ದಿವ್ಯ ಪ್ರಕಾರದ ಮಾಹಾತ್ಮ್ಯೆಯನ್ನು ಅರಿತವನಿಗೆ ಒಂದೇ ಜನ್ಮದಲ್ಲಿ ಸಾಧನವು ಮುಗಿದು ಮತ್ತೆ ಜನ್ಮಾಂತರವಿಲ್ಲದಂತೆ ಭಗವಂತನ ಪ್ರಾಪ್ತಿಯಾಗಿ ಬಿಡುತ್ತದೆ. ಅದರಿಂದಲೇ ವ್ಯಾಸಶುಕಶೌನಕರೇ ಮುಂತಾದ ಪರಮಹರ್ಷಿಗಳು ಆ ಭಗವಂತ

ನಲ್ಲಿಯೇ ಹೆಚ್ಚಿನ ನಿಷ್ಠೆಯನ್ನು ಬಯಸುತ್ತಾರೆ. ಹೀಗೆಂಬುದು ಭಗವಂತನ ಅವತಾರದ ಮಾಹಾತ್ಮ್ಯವು.

ಈ ಮಾಹಾತ್ಮ್ಯವನ್ನು ಪ್ರಸಂಗವಶದಿಂದ ಹೇಳಿರುತ್ತದೆ. ಭಗವಂತನು 'ಜಗತ್ತೆಲ್ಲವನ್ನೂ ಉದ್ಧರಿಸುವದಕ್ಕಾಗಿ ಮನ್ವಂತರದ ಆದಿಯಲ್ಲಿಯೇ ಈ ಕರ್ಮಯೋಗವನ್ನು ಉಪದೇಶಿಸಿರುತ್ತೇನಾದ್ದರಿಂದ ಇದನ್ನು ನೀನು ಮಾಡು' ಎಂದು ಹೇಳಲು ಅರ್ಜುನನು "ನಮ್ಮ ಜನ್ಮದ ಸಮಕಾಲದಲ್ಲಿ ನೀನೂ ಹುಟ್ಟಿದವನಾದ್ದರಿಂದ ನೀನು ಈಚಿನವನು; ನೀನು ಯಾರಿಗೆ ಉಪದೇಶ ಮಾಡಿದೆನೆಂದು ಹೇಳಿದೆಯೋ ಆ ವಿವಸ್ವಂತನು ಬಹುಕಾಲ ಹಿಂದಿನವನು. ಹೀಗಿರುವಲ್ಲಿ ನೀನೇ ಮೊದಲು ಹೇಳಿದೆಯೆಂದು ಹೇಗೆ ತಿಳಿಯಲಿ?" ಎಂದು ಚೋದ್ಯಮಾಡುವವನಂತೆ ಪ್ರಶ್ನೆಮಾಡಲಾಗಿ ಭಗವಂತನು ತನ್ನ ಅವತಾರದ ಸ್ವರೂಪಾದಿಗಳನ್ನು ಉಪದೇಶಮಾಡಿರುತ್ತಾನೆ. ಆದ್ದರಿಂದ ಉಪದೇಶ ಪ್ರಸಂಗದಿಂದ ಈ ಅವತಾರದ ಮಾಹಾತ್ಮ್ಯವನ್ನು ಭಗವಂತನು ತಿಳಿಸಿರುತ್ತಾನೆ.

ಹೀಗೆ ಪ್ರಸಂಗವಶದಿಂದ ಉಪದೇಶಮಾಡಿದ್ದರೂ ಇದು ವ್ಯರ್ಥವಲ್ಲ ಏಕೆಂದರೆ ಯಾವನು ಈ ತತ್ತ್ವವನ್ನು ಚನ್ನಾಗಿ ಅರಿತುಕೊಳ್ಳುವವನೋ ಅವನು ಸಾಧನವನ್ನು ಪರಿಪೂರ್ತಿಗೊಳಿಸಿಕೊಂಡು ಭಗವಂತನನ್ನೇ ಪಡೆಯುತ್ತಾನೆ ಎಂದು ಫಲವನ್ನು ತಿಳಿಸಿರುತ್ತದೆ.

ಈ ರೀತಿಯಲ್ಲಿ ಕರ್ಮಜ್ಞಾನಾಂಶದ್ವಯದಿಂದ ಕೂಡಿದ ಕರ್ಮಯೋಗದ ವಿಷಯವು ನಾಲ್ಕನೆಯ ಅಧ್ಯಾಯದಲ್ಲಿ ಉಪದಿಷ್ಟವಾಗಿದೆಯೆಂಬುದು ಶ್ಲೋಕದ ಒಟ್ಟು ತಾತ್ಪರ್ಯ.

# ಐದನೆಯ ಅಧ್ಯಾಯ

**ಕರ್ಮಯೋಗಸ್ಯ ಸೌಕರ್ಯಂ ಶೈಘ್ರ್ಯಂ ಕಾಶ್ಚನ ತದ್ವಿಧಾಃ ।**
**ಬ್ರಹ್ಮಜ್ಞಾನಪ್ರಕಾರಶ್ಚ ಪಞ್ಚಮಾಧ್ಯಾಯ ಉಚ್ಯತೇ ॥೯॥**

"ಕರ್ಮಯೋಗದ ಸೌಕರ್ಯವೂ ಶೀಘ್ರತೆಯೂ ಕೆಲವು ಅದರ ಪ್ರಕಾರಗಳೂ ಬ್ರಹ್ಮಜ್ಞಾನದ ಪ್ರಕಾರವೂ ಐದನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿರುತ್ತದೆ."

ಕರ್ಮಯೋಗವು ಸುಕರವಾದದ್ದು ಎಂಬುದು ನಿಜವಾಗಿ ಮೂರನೆಯ ಅಧ್ಯಾಯದಲ್ಲಿಯೇ ಹೇಳಿರುತ್ತದೆ. ಕರ್ಮಯೋಗದೊಳಗೆ ಆತ್ಮಜ್ಞಾನವೂ ಅಡಕವಾಗಿ ರುವದರಿಂದಲೂ ಅದರಲ್ಲಿ ಯಾವ ಅನವಧಾನತೆಯೂ ಇಲ್ಲದ್ದರಿಂದಲೂ ಅದನ್ನು ಮಾಡುವದು ಸುಲಭವಾಗಿರುವದರಿಂದ ಅದು ಜ್ಞಾನಯೋಗಕ್ಕಿಂತಲೂ ಉತ್ತಮ ವೆಂದು ಆ ಅಧ್ಯಾಯದಲ್ಲಿ ಹೇಳಿರುತ್ತದೆ. ಈಗ ಅದನ್ನು ಇಲ್ಲಿ ಮತ್ತೊಮ್ಮೆ ಹೇಳಿ ಕೊಂಡು, 'ಹೀಗೆ ಸುಖವಾಗಿರುವದರಿಂದ ಅದು ಶೀಘ್ರವಾಗಿಯೇ ಫಲವನ್ನು ಕೊಡುವದಾಗಿದೆ' ಎಂದು ಹೇಳಿರುತ್ತದೆ.

ಕರ್ಮಯೋಗವು ಹೀಗೆ ಜ್ಞಾನಯೋಗಕ್ಕಿಂತಲೂ ಮೇಲಾದ್ದರಿಂದ ಅದನ್ನು ಮಾಡುವ ಬಗೆಯನ್ನು ಭಗವಂತನು ಇಲ್ಲಿ ಮೊದಲು ತಿಳಿಸಿರುತ್ತಾನೆ. 'ಪ್ರಕೃತಿಯ ಕಾರ್ಯವಾದ ಇಂದ್ರಿಯಗಳೂ ಪ್ರಾಣಗಳೂ ತಮ್ಮ ತಮ್ಮ ಕೆಲಸವನ್ನು ಮಾಡುತ್ತಿರು ವಾಗ ನಾನು ಯಾವ ಕೆಲಸವನ್ನೂ ಮಾಡುತ್ತಿಲ್ಲ' ಎಂದು ಅನುಸಂಧಾನಮಾಡುತ್ತಾ, ಕರ್ಮವನ್ನು ಮಾಡುತ್ತಿರಬೇಕು. ಹೀಗಾದರೆ ಕರ್ಮಬಂಧವು ಅಂಟಿಕೊಳ್ಳುವದಿಲ್ಲ.

ಈ ಅಧ್ಯಾಯದಲ್ಲಿ 'ಬ್ರಹ್ಮಜ್ಞಾನಪ್ರಕಾರ'ವೂ ಹೇಳಲ್ಪಟ್ಟಿದೆ. ಇಲ್ಲಿ ಬ್ರಹ್ಮವೆಂದರೆ ಬ್ರಹ್ಮಕ್ಕೆ ಸಮಾನವಾದ ಆಕಾರವುಳ್ಳ ಶುದ್ಧಾತ್ಮನು. ಜ್ಞಾನವೆಂದರೆ ಸಮದರ್ಶನರೂಪದ ಜ್ಞಾನವು ಪಕ್ವವಾದ ಸ್ಥಿತಿ. ಯಾವ ರೀತಿಯಿಂದ ನಡೆದುಕೊಂಡರೆ ಕರ್ಮಯೋಗಿ ಯಾದವನಿಗೆ ಸಮದರ್ಶನರೂಪವಾದ ಜ್ಞಾನವಿಪಾಕವು ಉಂಟಾಗುತ್ತದೆಯೋ ಅದನ್ನೂ ಇಲ್ಲಿ ಹೇಳಿರುತ್ತದೆ.

ನಾಲ್ಕನೆಯ ಅಧ್ಯಾಯದಲ್ಲಿ ಕರ್ಮಯೋಗವು ಜ್ಞಾನಾಕಾರವಾಗಿಯೂ ಇರುತ್ತದೆ ಎಂಬುದನ್ನು ತಿಳಿಸಿ ಅದರಲ್ಲಿ ಜ್ಞಾನಾಂಶಕ್ಕೇ ಮುಖ್ಯತ್ವವನ್ನು ಕೊಟ್ಟು ವಿವರಿಸಿರುತ್ತದೆ ಯಷ್ಟೆ. ಅದೂ ಕರ್ಮಯೋಗದಲ್ಲಿಯೇ ಅಡಕವಾಗಿರುವದರಿಂದ ಮೂರು ನಾಲ್ಕನೆಯ ಅಧ್ಯಾಯಗಳಲ್ಲಿ ಹೇಳಿರುವ ಕರ್ಮಯೋಗವನ್ನೇ ಕೆಲವು ಹೊಸ ವಿಷಯಗಳನ್ನು ತಿಳಿಸಿ ಇಲ್ಲಿ ವಿವರಿಸಿರುತ್ತದೆ ಎಂದಂತೆ ಆಯಿತು.

# ಆರನೆಯ ಅಧ್ಯಾಯ

**ಯೋಗಾಭ್ಯಾಸವಿಧಿರ್ಯೋಗೀ ಚತುರ್ಧಾ ಯೋಗಸಾಧನಮ್ ।**

**ಯೋಗಸಿದ್ಧಿಃ ಸ್ವಯೋಗಸ್ಯ ಪಾರಮ್ಯಂ ಷಷ್ಠ ಉಚ್ಯತೇ ॥೧೦॥**

"ಯೋಗಾಭ್ಯಾಸದ ಕ್ರಮವನ್ನೂ, ಯೋಗಿಗಳಲ್ಲಿ ನಾಲ್ಕು ಬಗೆಯನ್ನೂ ಯೋಗ ಸಾಧನವನ್ನೂ ಯೋಗಸಿದ್ಧಿಯನ್ನೂ, ತನ್ನ ಯೋಗದ ಹೆಚ್ಚುಗಾರಿಕೆಯನ್ನೂ ಆರನೆಯ ಅಧ್ಯಾಯದಲ್ಲಿ ಹೇಳಿರುತ್ತದೆ."

ಐದನೆಯ ಅಧ್ಯಾಯದ ಕೊನೆಯಲ್ಲಿ ಹೇಳಿರುವ ಯೋಗಾಭ್ಯಾಸದ ಕ್ರಮವನ್ನು ಈ ಅಧ್ಯಾಯದಲ್ಲಿ ವಿವರಿಸಿರುತ್ತಾರೆ. ಇದೇ ಈ ಅಧ್ಯಾಯಕ್ಕೆ ಮುಖ್ಯ ವಿಷಯವು. ಮಿಕ್ಕವುಗಳೆಲ್ಲವೂ ಅದಕ್ಕೆ ಸಂಬಂಧಪಟ್ಟಂತೆ ಹೇಳಿದವುಗಳಾಗಿವೆ.

ಯೋಗಿಗಳಲ್ಲಿ ನಾಲ್ಕು ವಿಧ. ಯೋಗವು ಪಕ್ವವಾದರೆ ನಾಲ್ಕು ಬಗೆಯ ಸ್ಥಿತಿಯುಂಟಾಗುತ್ತದೆ.

1. ಆತ್ಮರುಗಳು ಎಲ್ಲರೂ ಸ್ವರೂಪದಿಂದ ಜ್ಞಾನಾನಂದಸ್ವರೂಪರೇ ಆಗಿರುವದ ರಿಂದ ಪ್ರಕೃತಿಸಂಪರ್ಕರಹಿತವಾದ ಆತ್ಮರುಗಳೆಲ್ಲರೂ ಒಂದೇ ಸಮವೆಂದು ತಿಳಿಯುವದು. 2. ಆತ್ಮನು ತನ್ನ ಶುದ್ಧಾವಸ್ಥೆಯಲ್ಲಿ ಅಪಹತಪಾಪ್ಮತ್ವವೇ ಮುಂತಾದ ಗುಣಗಳಿಂದ ಈಶ್ವರನಿಗೆ ಸಮನಾಗಿರುತ್ತಾನೆಂದು ತಿಳಿಯುವದು. 3. ಪ್ರಕೃತಿಸಂಬಂಧವಾದ ಭೇದ ವನ್ನು ಬಿಟ್ಟು, ಅವರೆಲ್ಲರೂ ಜ್ಞಾನಸಂಕೋಚನವಿಲ್ಲದೆ ಒಂದೇ ರೂಪವಾಗಿರುವದರಿಂದ ಈಶ್ವರನಿಗೂ ಅವರಿಗೂ, ಒಬ್ಬರೊಬ್ಬರಿಗೂ ಸಾಮ್ಯವಿರುವದೆಂದು ತಿಳಿಯುವುದು. 4. ತನ್ನ ಪುತ್ರಪೌತ್ರಾದಿಗಳ ಜನ್ಮಮರಣಾದಿಗಳಿಂದುಂಟಾಗುವ ಸುಖದುಃಖಗಳು ಪರರ ಪುತ್ರಾದಿಗಳ ಜನ್ಮಮರಣಾದಿಗಳಿಂದುಂಟಾಗುವ ಸುಖ-ದುಃಖಗಳಂತೆಯೇ ತನಗೆ ಸಂಬಂಧಪಟ್ಟವಲ್ಲವೆಂದು ತಿಳಿಯುವದು.

ಯೋಗಸಾಧನವೆಂದರೆ ಅಭ್ಯಾಸವೈರಾಗ್ಯವೇ ಮುಂತಾದವು. ಯೋಗಸಿದ್ಧಿ ಯೆಂದರೆ ಯೋಗಭ್ರಷ್ಟನಾದರೂ ದೋಷವಿಲ್ಲ ; ಅವನು ಪುಣ್ಯಲೋಕವನ್ನು ಪಡೆದು ಉತ್ತಮಕುಲದಲ್ಲಿ ಹುಟ್ಟಿ ಮತ್ತೆ ಯೋಗಾಭ್ಯಾಸವನ್ನು ಮಾಡಿಯೇ ಮುಕ್ತಿಯನ್ನು ಪಡೆದುಕೊಳ್ಳುತ್ತಾನೆ ಎಂಬುದು. ಸ್ವಯೋಗದ ಪಾರಮ್ಯವೆಂದರೆ ವಾಸುದೇವರೂಪನಾದ ಭಗವಂತನ ಭಜನರೂಪವಾದ ಯೋಗದ ಹೆಚ್ಚುಗಾರಿಕೆ. ಎರಡನೆಯ ಷಟ್ಕದಲ್ಲಿ

ಹೇಳುವ ಈ ಪರಮೇಶ್ವರಭಕ್ತಿಯನ್ನು ಈ ಅಧ್ಯಾಯದ ಕೊನೆಯಲ್ಲಿಯೂ ಸೂತ್ರ ರೂಪವಾಗಿ ಹೇಳಿರುತ್ತದೆ.

ಖಖಖಖಖ

# ಏಳನೆಯ ಅಧ್ಯಾಯ

**ಸ್ವಯಾಥಾತ್ಮ್ಯಂ ಪ್ರಕೃತ್ಯಾಸ್ಯ ತಿರೋಧಿಃ ಶರಣಾಗತಿಃ ।**
**ಭಕ್ತಭೇದಃ ಪ್ರಬುದ್ಧಸ್ಯ ಶ್ರೈಷ್ಠ್ಯಂ ಸಪ್ತಮ ಉಚ್ಯತೇ ॥೧೧॥**

"ತನ್ನ ಮಾಹಾತ್ಮ್ಯ, ಪ್ರಕೃತಿಯಿಂದ ಅದು ಮುಚ್ಚಿರುವದು, ಶರಣಾಗತಿ, ಭಕ್ತರಲ್ಲಿರುವ ಭೇದಗಳು, ಜ್ಞಾನಿಯ ಶ್ರೇಷ್ಠತೆ – ಇಷ್ಟನ್ನು ಏಳನೆಯ ಅಧ್ಯಾಯದಲ್ಲಿ ಹೇಳಿರುತ್ತದೆ."

**ಪರಮೇಶ್ವರನ ಮಾಹಾತ್ಮ್ಯ :** ವಾಸುದೇವನೇ ಪರಬ್ರಹ್ಮವು, ಆತನು ಚೇತನ ವಸ್ತುಗಳಿಗೆಲ್ಲರಿಗೂ ಶೇಷಿಯು, ಜಗತ್ಕಾರಣನು, ಜಗತ್ತಿಗೆ ಆಧಾರವಾಗಿರುವನು, ಸರ್ವವೂ ಆತನಿಗೆ ಶರೀರವಾಗಿರುವದರಿಂದ, ಸರ್ವಶಬ್ದಗಳಿಗೂ ವಾಚ್ಯನಾದವನು, ಸರ್ವವನ್ನೂ ನಿಯಮನಮಾಡುವಾತನು, ಸಕಲಕಲ್ಯಾಣಗುಣಾಕಾರನಾಗಿರುವದರಿಂದ ಪರತರನು – ಎಂಬುದೇ ಮಾಹಾತ್ಮ್ಯ.

ಈ ಮಾಹಾತ್ಮ್ಯಗೆ ಮುಸುಕು ಯಾವದು? ಸತ್ತ್ವರಜಸ್ತಮೋಗುಣಗಳು ದೇಹೇಂದ್ರಿಯಗಳ ರೂಪದಲ್ಲಿ ಪರಿಣಾಮವಾಗಿ ಭೋಗ್ಯವಾಗಿರುವದಷ್ಟೆ ಅವು ಪಾಪ ಕರ್ಮಗಳ ದೆಸೆಯಿಂದ ಈ ಮಾಹಾತ್ಮ್ಯೆಯು ಜೀವರಿಗೆ ಕಾಣದೆ ಇರುವದು. ಸುಕೃತ ವಶದಿಂದ ಭಗವಂತನನ್ನು ಮರೆಹೋಗುವದೆಂಬ ಶರಣಾಗತಿಯಿಂದ ಆ ಮರೆಯು ಹೋಗಿಬಿಡುವದು.

ಭಕ್ತರಲ್ಲಿ ಬೇರೆಬೇರೆಯ ತೆರನಾದವರುಂಟು : ಅವರು ಮಾಡಿರುವ ಸುಕೃತದ ತಾರತಮ್ಯವೇ ಇದಕ್ಕೆ ಕಾರಣ. ಇವರಲ್ಲಿ ಕೆಲವರು ಐಶ್ವರ್ಯಪ್ರಾಪ್ತಿಗಾಗಿ, ಮತ್ತೆ ಕೆಲವರು ಆತ್ಮಜ್ಞಾನಕ್ಕಾಗಿ, ಇನ್ನೂ ಕೆಲವರು ಭಗವತ್ಪ್ರಾಪ್ತಿಗಾಗಿ ಭಜಿಸುತ್ತಾರೆ.

**ಭಕ್ತರಲ್ಲಿ ಜ್ಞಾನಿಯೇ ಶ್ರೇಷ್ಠನು :** ಏಕೆಂದರೆ ಅವನು ನಿತ್ಯಯುಕ್ತನಾಗಿ ಯಾವಾಗಲೂ ಏಕಭಕ್ತಿಯಿಂದ ಭಗವಂತನನ್ನೇ ಭಜಿಸುತ್ತಿರುತ್ತಾನೆ. ಆ ಪರಮಪುರುಷನಿಗೆ ಈ

ಜ್ಞಾನಿಯೇ ಅತ್ಯಂತಪ್ರಿಯನಾಗಿರುತ್ತಾನೆ. ಇಷ್ಟು ವಿಷಯಗಳನ್ನೂ ಏಳನೆಯ ಅಧ್ಯಾಯ ದಲ್ಲಿ ಹೇಳಿರುತ್ತದೆ.

# ಎಂಟನೆಯ ಅಧ್ಯಾಯ

**ಐಶ್ವರ್ಯಾಕ್ಷರಯಾಥಾತ್ಮ್ಯಭಗವಚ್ಚರಣಾರ್ಥಿನಾಮ್ ।**
**ವೇದ್ಯೋಪಾದೇಯಭಾವಾನಾಮಷ್ಟಮೋ ಭೇದ ಉಚ್ಯತೇ ॥**

''ಐಶ್ವರ್ಯವನ್ನೂ ಅಕ್ಷರದ ನಿಜವನ್ನೂ ಭಗವಚ್ಚರಣತೆಯನ್ನೂ ಬಯಸುವ ವರು ತಿಳಿಯಬೇಕಾದವುಗಳ ಮತ್ತು ಸ್ವೀಕರಿಸಬೇಕಾದವುಗಳ ವಿಶೇಷಗಳನ್ನು ಎಂಟನೆಯ ಅಧ್ಯಾಯದಲ್ಲಿ ಹೇಳಿರುತ್ತದೆ.''

ಎಂಟನೆಯ ಅಧ್ಯಾಯದ ಅಭಿಪ್ರಾಯವನ್ನು ತಿಳಿಯಬೇಕೆನ್ನುವವರ ಶಾಂಕರ ರಾಮಾನುಜಸಂಪ್ರದಾಯಗಳ ಮತಭೇದವನ್ನು ಚೆನ್ನಾಗಿ ಲಕ್ಷ್ಯವಿಟ್ಟಿರಬೇಕಾಗುವದು. ಶಂಕರಮತದಲ್ಲಿ ಈ ಅಧ್ಯಾಯವು ಸಗುಣಬ್ರಹ್ಮೋಪಾಸಕರ ಅನುಸರಿಸಬೇಕಾದ ಧಾರಣಾಯೋಗವನ್ನೂ ಅವರು ಅರ್ಚಿರಾದಿಮಾರ್ಗದಿಂದ ಹೋಗಿ ಪಡೆಯ ಬೇಕಾಗಿರುವ ಕ್ರಮಮುಕ್ತಿಯನ್ನೂ ತಿಳಿಸುತ್ತದೆ.

ಶ್ರೀರಾಮಾನುಜಸಂಪ್ರದಾಯದಲ್ಲಿ ಹೀಗಲ್ಲ. ಮುಕ್ತರಾದವರು ಪಡೆಯುವ ಐಶ್ವರ್ಯವು ಇಂದ್ರಬ್ರಹ್ಮರುದ್ರರ ಭೋಗಕ್ಕಿಂತಲೂ ಮಿಗಿಲಾದದ್ದು. ಅದನ್ನು ಪಡೆದು ಕೊಳ್ಳುವದಕ್ಕೆ ಏನು ಮಾಡಬೇಕು? ಅಕ್ಷರವೆಂದರೆ ಇಲ್ಲಿ ಬ್ರಹ್ಮವಲ್ಲ, ಶುದ್ಧಾತ್ಮಸ್ವರೂಪವು; ಅದನ್ನು ಪಡೆದುಕೊಳ್ಳುವದಕ್ಕೆ ಏನು ಮಾಡಬೇಕು? ಭಗವಂತನೇ ತಮಗೆ ಶರಣ ವಾಗೆನ್ನುವವರು ಏನೇನು ಅರಿಯಬೇಕು ಏನೇನು ಮಾಡಬೇಕು?- ಎಂಬುದನ್ನೇ ಈ ಅಧ್ಯಾಯದಲ್ಲಿ ಹೇಳಿರುತ್ತದೆ.

ಇಲ್ಲಿ ತಿಳಿಯಬೇಕಾಗಿರುವದೆಂದರೆ ಪಡೆಯಬೇಕಾದ ಕ್ಷೇತ್ರಜ್ಞಸ್ವರೂಪವು ಬಿಡುಗಡೆ ಹೊಂದಬೇಕಾದ ಭೂತಸೂಕ್ಷ್ಮವೇ ಮುಂತಾದ ಅನಾತ್ಮಮನುಷ್ಯಾದಿ ಭಾವ ವನ್ನು ಹೊಂದುವದಕ್ಕೆ ಕಾರಣವಾಗಿರುವ ಕರ್ಮ, ಆಕಾಶಾದಿಭೂತಗಳ ನಾಶಸ್ವಭಾವ, ಸಕಲ ದೇವತೆಗಳಿಗೂ ಮಿಗಿಲಾಗಿರುವ ಪುರುಷನೆಂಬ ಭೋಕ್ತೃತ್ವಾವಸ್ಥೆ, ಯಜ್ಞದಿಂದ ಆರಾಧ್ಯನಾದ ಪರಮೇಶ್ವರ - ಮುಂತಾದದ್ದು. ಸ್ವೀಕರಿಸಬೇಕಾದವುಗಳೆಂದರೆ ಅವರವರ

ಇಷ್ಟಫಲಕ್ಕೆ ತಕ್ಕಂತೆ ಪರಮ ಪುರುಷನನ್ನು ಚಿಂತಿಸುವದು, ಕೊನೆಯ ಕಾಲದಲ್ಲಿರಬೇಕಾದ ಭಗವಂತನ ಚಿಂತೆ ಮಾರ್ಗ ಚಿಂತನೆ – ಮುಂತಾದವುಗಳು. ಇಷ್ಟನ್ನೂ ಎಂಟನೆಯ ಅಧ್ಯಾಯದಲ್ಲಿ ವಿವರಿಸಿರುತ್ತದೆ.

ఖఖఖఖఖ

# ಒಂಭತ್ತನೆಯ ಅಧ್ಯಾಯ

**ಸ್ವಮಾಹಾತ್ಮ್ಯಂ ಮನುಷ್ಯತ್ವೇ ಪರತ್ವಂ ಚ ಮಹಾತ್ಮನಾಮ್ ।**
**ವಿಶೇಷೋ ನವಮೋ ಯೋಗೋ ಭಕ್ತಿರೂಪಃ ಪ್ರಕೀರ್ತಿತಃ ॥೧೩॥**

"ತನ್ನ ಮಾಹಾತ್ಮ್ಯವನ್ನೂ ಮನುಷ್ಯನಾಗಿರುವಾಗಲೂ ಹೆಚ್ಚಿಗೆಯನ್ನೂ ಮಹಾತ್ಮರ ವಿಶೇಷವನ್ನೂ ಭಕ್ತಿಯೋಗವನ್ನೂ ಒಂಭತ್ತನೆಯ ಅಧ್ಯಾಯದಲ್ಲಿ ಹೇಳಿರುತ್ತದೆ."

**ಮಾಹಾತ್ಮ್ಯ :** ಭಗವಂತನು ಸರ್ವವನ್ನೂ ವ್ಯಾಪಿಸಿಕೊಂಡಿರುತ್ತಾನೆ. ಎಲ್ಲವೂ ಆತನಿಗೆ ಅಧೀನವಾಗಿದ್ದುಕೊಂಡಿರುತ್ತದೆ, ಆತನ ಪ್ರಕೃತಿಯಲ್ಲಿಯೇ ಲಯವಾಗುತ್ತದೆ – ಎಂದು ಮುಂತಾಗಿ ಭಗವಂತನ ಮಾಹಾತ್ಮ್ಯವನ್ನು ಇಲ್ಲಿ ವರ್ಣಿಸಿರುತ್ತದೆ.

ಮನುಷ್ಯನಾಗಿರುವಾಗಲೂ ಭಗವಂತನ ಹೆಚ್ಚಿಗೆ : ಭಗವಂತನು ಜನರ ಕಣ್ಣಿಗೆ ಮನುಷ್ಯಾವತಾರರೂಪದಿಂದ ಗೋಚರನಾಗಿರುವಾಗಲೂ ಸರ್ವಸಮಾಶ್ರಯಣೀಯನಾಗಿಯೇ ತನ್ನ ಹೆಚ್ಚಿನ ಮಹಿಮೆಯಿಂದಲೇ ಕೂಡಿರುತ್ತಾನೆ – ಎಂದು ಇಲ್ಲಿ ಹೇಳಿರುತ್ತದೆ. ಮನುಷ್ಯನಾಗಿರುವಾಗಲೂ ಎಂದು ಹೇಳಿರುವದು ಉಪಲಕ್ಷಣವಾಗಿರುತ್ತದೆ. ಏಕೆಂದರೆ ಯಾವ ಅವತಾರದಲ್ಲಿಯೇ ಆಗಲಿ ಪರಮಾತ್ಮನು ತನ್ನ ಪ್ರಭಾವದಿಂದಲೇ ಇದ್ದುಕೊಂಡಿರುತ್ತಾನೆ – ಎಂದು ತಿಳಿಯಬೇಕು.

**ಮಹಾತ್ಮರ ವಿಶೇಷ :** ಮಹಾತ್ಮರಾದವರು ಮಿಕ್ಕವರಂತೆ ಆಸುರ ಪ್ರಕೃತಿಯವರಾಗಿರುವದಿಲ್ಲ, ದೈವಪ್ರಕೃತಿಯನ್ನು ಆಶ್ರಯಿಸಿಕೊಂಡು ಅವರು ಅನನ್ಯತೆಯಿಂದ ಭಗವಂತನನ್ನೇ ಭಜಿಸುತ್ತಿರುತ್ತಾರೆ. ಆದ್ದರಿಂದ ಅವರು ಭಗವಂತನನ್ನು ಪಡೆದುಕೊಂಡ ಮೇಲೆ ಸಂಸಾರಕ್ಕೆ ಮರಳುವದಿಲ್ಲ – ಎಂದು ಮುಂತಾಗಿ ಮಹಾತ್ಮರ ವಿಶೇಷವನ್ನು ಇಲ್ಲಿ ವರ್ಣಿಸಿರುತ್ತದೆ.

**ಭಕ್ತಿಯೋಗ :** ಈ ಅಧ್ಯಾಯದಲ್ಲಿ ಭಕ್ತಿಯೋಗವನ್ನು ತಿಳಿಸುವದಕ್ಕಾಗಿಯೇ ಮಿಕ್ಕದ್ದೆಲ್ಲವನ್ನೂ ವರ್ಣಿಸಿರುತ್ತದೆ. ಆದ್ದರಿಂದ ಭಕ್ತರು ಮಾಡುವ ಭಕ್ತಿಯ ಪ್ರಕಾರವನ್ನು ವಿಸ್ತಾರವಾಗಿ ಹೇಳಿರುವದಲ್ಲದೆ "ನನ್ನಲ್ಲಿಯೇ ಅವಿಚ್ಛಿನ್ನವಾಗಿ ಮನಸ್ಸಿಡು, ನನ್ನಲ್ಲಿಯೇ ಅತ್ಯಂತವಾದ ಪ್ರೀತಿಯಿಟ್ಟ ಭಕ್ತನಾಗಿರು, ನನ್ನನ್ನೇ ನಮಸ್ಕರಿಸು ಹೀಗೆ ಮನಸ್ಸನ್ನು ನನ್ನಲ್ಲಿಯೇ ಇಟ್ಟುಕೊಂಡಿದ್ದರೆ ನನ್ನನ್ನು ಅನುಭವಿಸುವದಕ್ಕೆ ತಕ್ಕ ಮನಸ್ಸನ್ನು ಪಡೆದು ನನ್ನನ್ನೇ ಸೇರಿಕೊಳ್ಳುವೆ' ಎಂದು ಉಪಸಂಹಾರಮಾಡಿರುತ್ತದೆ. ಆದ್ದರಿಂದ ಸಕಲ ಪರಿಕರ ಗಳೊಡನೆ ಭಕ್ತಿಯೋಗಸ್ವರೂಪವನ್ನು ತಿಳಿಸುವದೇ ಅಧ್ಯಾಯಕ್ಕೆ ಮುಖ್ಯೋದ್ದೇಶವೆಂದು ಹೇಳಬಹುದು.

# ಹತ್ತು-ಹನ್ನೊಂದನೆಯ ಅಧ್ಯಾಯ

**ಸ್ವಕಲ್ಯಾಣಗುಣಾನನ್ತ್ಯಕೃತ್ಸ್ನಸ್ವಾಧೀನತಾ ಮತಿಃ ।**
**ಭಕ್ತ್ಯುತ್ಪತ್ತಿವಿವೃದ್ಧ್ಯರ್ಥಾ ವಿಸ್ತೀರ್ಣಾ ದಶಮೋದಿತಾ ॥೧೪॥**

"ತನ್ನ ಕಲ್ಯಾಣಗುಣಗಳ ಅನಂತ್ಯವನ್ನೂ, ಎಲ್ಲವೂ ತನಗೆ ಅಧೀನವಾಗಿಯೇ ಇರುವದೆಂಬುದನ್ನು ಭಕ್ತಿಯುಂಟಾಗಿ ಅದು ಬೆಳೆದುಕೊಳ್ಳುವದಕ್ಕಾಗಿ ಹತ್ತನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿರುತ್ತದೆ."

ಹಿಂದಿನ ಅಧ್ಯಾಯದಲ್ಲಿ ಭಕ್ತಿಯೋಗವನ್ನು ಹೇಳಿದ್ದಾಯಿತಷ್ಟೆ. ಈಗ ಆ ಭಕ್ತಿ ಯುಂಟಾಗಿ ಅದು ಬೆಳೆದುಕೊಳ್ಳುವದಕ್ಕೆ ಬೇಕಾದ ಎರಡು ಸಾಧನಗಳನ್ನು ಹತ್ತನೆಯ ಅಧ್ಯಾಯದಲ್ಲಿ ಹೇಳಿರುತ್ತದೆ.

ಮೊದಲನೆಯದು ಭಗವಂತನಿಗೇ ಸಕಲಕಲ್ಯಾಣಗುಣಗಳೂ ಮೀಸಲೆಂಬ ತಿಳಿವಳಿಕೆ. ಭಗವಂತನಿಗೆ ನಿರಂಕುಶವಾದ ಐಶ್ವರ್ಯವೇ ಮುಂತಾದ ಅನಂತ ಕಲ್ಯಾಣ ಗುಣಗಳು ಇವೆಯೆಂದು ತಿಳಿದರಲ್ಲವೆ, ಆತನಲ್ಲಿ ಭಕ್ತಿಯುಂಟಾಗುವದು?

ಎರಡನೆಯ ಚಿದಚಿದಾತ್ಮಕವಾದದ್ದೆಲ್ಲವೂ ಆತನ ಅಧೀನವಾಗಿಯೇ ಇದೆ ಯೆಂಬುದು. ಎಲ್ಲವೂ ಆತನ ಶರೀರವೇ, ಅದರ ಸ್ವರೂಪವೂ ಸ್ಥಿತಿಯೂ ಪ್ರವೃತ್ತಿಯೂ ಆತನಿಂದಲೇ, ಎಂಬ ಜ್ಞಾನವೂ, ಭಕ್ತಿಯುಂಟಾಗಿ ಬೆಳೆಯುವದಕ್ಕೆ ಅತ್ಯವಶ್ಯ ವಾಗಿರುತ್ತದೆ.

ಏಕಾದಶೇ ಸ್ವಮಾಹಾತ್ಮ್ಯಸಾಕ್ಷಾತ್ಕಾರಾವಲೋಕನಮ್ ।
ದತ್ತಮುಕ್ತಂ ವಿಧಿಪ್ರಾಪ್ತ್ಯೋರ್ಭಕ್ತ್ಯೇಕೋಪಾಯತಾ ತಥಾ ॥೧೫॥

"ಹನ್ನೊಂದನೆಯ ಅಧ್ಯಾಯದಲ್ಲಿ ತನ್ನ ಮಾಹಾತ್ಮ್ಯದ ಸಾಕ್ಷಾತ್ಕಾರಕ್ಕೆ ಬೇಕಾದ ಸಾಧನವನ್ನು ಕೊಟ್ಟು, ತಿಳಿಯುವದು, ಪಡೆದುಕೊಳ್ಳುವದು – ಇವೆರಡೂ ಭಕ್ತಿಯಿಂದಲೇ ಸಿಕ್ಕುವದೆಂದು ಹೇಳಲಾಗಿದೆ."

ಭಗವಂತನ ನಿರಂಕುಶವಾದ ಐಶ್ವರ್ಯರೂಪವಾದ ಮಾಹಾತ್ಮ್ಯವನ್ನು ನೇರಾಗಿ ನೋಡಬೇಕೆಂದು ಬಯಸಿದ ಅರ್ಜುನನಿಗೆ ದಿವ್ಯಚಕ್ಷುಸ್ಸನ್ನು ಭಗವಂತನು ದಯಪಾಲಿಸಿದನೆಂಬುದನ್ನು ಹನ್ನೊಂದನೆಯ ಅಧ್ಯಾಯದಲ್ಲಿ ಹೇಳಿರುತ್ತದೆ.

ಭಗವಂತನನ್ನು ಅರಿತುಕೊಳ್ಳುವದಕ್ಕೂ ಆತನನ್ನು ಕಾಣುವದಕ್ಕೂ ಆತನನ್ನೇ ಪಡೆದುಕೊಳ್ಳುವದಕ್ಕೂ ಭಕ್ತಿಯೊಂದೇ ಉಪಾಯವು – ಎಂಬುದನ್ನೂ ಈ ಅಧ್ಯಾಯದಲ್ಲಿ ಹೇಳಿರುತ್ತದೆ.

# ಹನ್ನೆರಡನೆಯ ಅಧ್ಯಾಯ

ಭಕ್ತೇಃ ಶ್ರೈಷ್ಠ್ಯಮುಪಾಯೋಕ್ತಿರಶಕ್ತಸ್ಯಾತ್ಮನಿಷ್ಠತಾ ।
ತತ್ಪ್ರಕಾರಾಸ್ತ್ವತಿಪ್ರೀತಿರ್ಭಕ್ತೇ ದ್ವಾದಶ ಉಚ್ಯತೇ ॥೧೬॥

"ಭಕ್ತಿಯು ಶ್ರೇಷ್ಠವೆಂಬುದನ್ನೂ, ಅದಕ್ಕೆ ಸಾಧನವನ್ನೂ, ಅದನ್ನು ಮಾಡಲು ಅಶಕ್ತನಾದವನಿಗೆ ಆತ್ಮನಿಷ್ಠೆಯನ್ನೂ, ಅವರ ಬಗೆಗಳನ್ನೂ, ಭಕ್ತನಲ್ಲಿ ಭಗವಂತನಿಗೆ ಅತಿಶಯವಾದ ಪ್ರೀತಿಯೆಂಬುದ್ನೂ ಹನ್ನೆರಡನೆಯ ಅಧ್ಯಾಯದಲ್ಲಿ ಹೇಳಿರುತ್ತದೆ."

ಆತ್ಮಪ್ರಾಪ್ತಿಗೆ ಸಾಧನವಾಗಿರುವ ಆತ್ಮೋಪಾಸನೆಗಿಂತಲೂ ಭಗವಂತನ ಉಪಾಸನೆಯೆಂಬ ಭಕ್ತಿಯೇ ಶ್ರೇಷ್ಠವಾದದ್ದು. ಏಕೆಂದರೆ ಅದರಿಂದ ಫಲವು ಬೇಗನೆ ಉಂಟಾಗುತ್ತದೆ.

ಭಕ್ತಿಯನ್ನು ಅನುಷ್ಠಾನಮಾಡುವ ಸಾಮರ್ಥ್ಯವಿಲ್ಲದವನು ಭಗವಂತನ ಗುಣಗಳನ್ನು ಮತ್ತೆ ಮತ್ತೆ ಚಿಂತಿಸುತ್ತಿರಬೇಕು; ಅದಕ್ಕೂ ಅಶಕ್ತನಾದವನು ಪ್ರೀತಿಯಿಂದ ಭಗವತ್ಕರ್ಮವನ್ನು ಮಾಡುತ್ತಿರಬೇಕು; ಅದೂ ಸಾಗದವನು ಆತ್ಮನಿಷ್ಠೆಯನ್ನು ಹೊಂದಿರಬೇಕು – ಎಂಬ ಕ್ರಮದಿಂದ ಭಕ್ತಿಗೆ ಉಪಾಯಗಳನ್ನು ಹೇಳಿರುತ್ತದೆ.

ಆತ್ಮನಿಷ್ಠೆಯ ಪ್ರಕಾರಗಳಾದ ಕರ್ಮಯೋಗವೇ ಮುಂತಾದವುಗಳಿಗೆ ಬೇಕಾದ ಗುಣಗಳನ್ನೂ ಇಲ್ಲಿ ತಿಳಿಸಿರುತ್ತದೆ. ಈ ಅಧ್ಯಾಯದ ಕೊನೆಯಲ್ಲಿ ಹೇಳಿರುವ ಯಾವ ಪ್ರಾಣಿಯನ್ನೂ ಹಗೆಮಾಡದಿರುವದೇ ಮುಂತಾದ ಗುಣಗಳನ್ನೇ ಇಲ್ಲಿ ಪ್ರಕಾರಗಳೆಂದು ಕರೆದಿರುವದು.

ಆತ್ಮನಿಷ್ಠನಿಗಿಂತಲೂ ಭಕ್ತಿಯೋಗದಲ್ಲಿ ನಿಷ್ಠೆಯುಳ್ಳಾತನು ಭಗವಂತನಿಗೆ ಅತ್ಯಂತಪ್ರಿಯನಾಗಿರುತ್ತಾನೆ - ಎಂಬುದು ಅಧ್ಯಾಯದ ಕೊನೆಯಲ್ಲಿ ಹೇಳಿರುತ್ತದೆ.

ಶಾಂಕರಮತದಂತೆ ಈ ಅಧ್ಯಾಯದಲ್ಲಿ ಸಗುಣನಿರ್ಗುಣಭಕ್ತಿಗಳ ವಿಚಾರವನ್ನು ಹೇಳಿರುತ್ತದೆ; ಅನಂತತೀರ್ಥರಮತದಂತೆ ಲಕ್ಷ್ಮಿಯ ಉಪಾಸನೆಯನ್ನು ಭಗವದುಪಾಸನೆಯನ್ನೂ ಹೇಳಿರುತ್ತದೆ; ಆದರೆ ಯಾಮುನಾಚಾರ್ಯರ ಮತದಂತೆ ಇಲ್ಲಿ ಆತ್ಮನಿಷ್ಠೆಯನ್ನೂ ಭಗವದ್ಭಕ್ತಿಯನ್ನೂ ಹೇಳಿರುತ್ತದೆ. ಈ ಮೂರು ಮತಗಳಲ್ಲಿಯೂ ಎರಡನೆಯ ಭಕ್ತಿಯ ವಿಷಯವು ಹೆಚ್ಚಿನ ತತ್ತ್ವವಾಗಿರುತ್ತದೆ. ಆದರೆ ಮೊದಲನೆಯ ಎರಡು ಮತಗಳಲ್ಲಿ ನಿರ್ಗುಣವಸ್ತುವನ್ನು ಅಂಗೀಕಾರಮಾಡಿರುವದಿಲ್ಲ. ಭಕ್ತಿಯು ಭಗವಂತನ ಪ್ರೀತಿಗೆ ಸಾಧನವೆಂಬುದು ಮಾತ್ರ ಸರ್ವಸಮ್ಮತವಾಗಿರುತ್ತದೆ.

ಉಉಉಉಉ

# ಹದಿಮೂರನೆಯ ಅಧ್ಯಾಯ

**ದೇಹಸ್ವರೂಪಮಾತ್ಮಾಪ್ತಿಹೇತುರಾತ್ಮವಿಶೋಧನಮ್ ।**
**ಬನ್ಧಹೇತುರ್ವಿವೇಕಶ್ಚ ತ್ರಯೋದಶ ಉದೀರ್ಯತೇ ॥**

"ದೇಹದ ಸ್ವರೂಪವನ್ನೂ ಆತ್ಮನನ್ನು ಪಡೆದುಕೊಳ್ಳುವದಕ್ಕೆ ಸಾಧನವನ್ನೂ, ಆತ್ಮಶೋಧನವನ್ನೂ, ಬಂಧಕ್ಕೆ ಕಾರಣವನ್ನೂ, ವಿವೇಕದ ಕ್ರಮವನ್ನೂ ಹದಿಮೂರನೆಯ ಅಧ್ಯಾಯದಲ್ಲಿ ಹೇಳಿರುತ್ತದೆ."

ದೇಹದ ಸ್ವರೂಪವೆಂಬ ಮಾತಿನಲ್ಲಿ ಆತ್ಮನ ಸ್ವರೂಪವೂ ಅಡಕವಾಗಿರುತ್ತದೆ. ಏಕೆಂದರೆ ದೇಹದ ಸ್ವರೂಪವನ್ನು ತಿಳಿದು ವಿಂಗಡಿಸಿಕೊಂಡಮೇಲೆಯೇ ಆತ್ಮಸ್ವರೂಪವನ್ನು ತಿಳಿಯುವದಕ್ಕೆ ಬರುತ್ತದೆ.

ದೇಹದಿಂದ ಬೇರೆಯಾಗಿರುವ ಆತ್ಮಸ್ವರೂಪವನ್ನು ಪಡೆಯುವ ಅಮಾನಿತ್ವವೇ ಮುಂತಾದ ಸಾಧನವನ್ನು ಈ ಅಧ್ಯಾಯದಲ್ಲಿ ಹೇಳಿರುತ್ತದೆ.

ಅಮಾನಿತ್ವವೇ ಮುಂತಾದ ಸಾಧನಗಳಿಂದ ಪಡೆಯುವ ಆತ್ಮನ ಸ್ವರೂಪವು ಹೇಗಿರುವದೆಂಬುದನ್ನು ಅನಾದಿ, ಮತ್ಪರಂ – ಮುಂತಾದ ವಿಶೇಷಣಗಳಿಂದ ತಿಳಿಸಿ ಕೊಟ್ಟಿರುತ್ತದೆ.

ಬಂಧಕ್ಕೆ ಕಾರಣವು – ಎಂದರೆ ಆತ್ಮನು ಪ್ರಕೃತಿಯ ಸಂಸರ್ಗದಿಂದ ಸುಖ ದುಃಖವನ್ನು ಅನುಭವಿಸುತ್ತಾನಷ್ಟೆ; ಹಾಗೆ ಅನುಭವಿಸುವದಕ್ಕೆ ಕಾರಣವು – ಹಿಂದಿನ ಜನ್ಮಗಳಲ್ಲಿ ಸತ್ತ್ವಾದಿಗುಣಫಳ ಕಾರ್ಯವಾದ ಸುಖದುಃಖಗಳಲ್ಲಿ ಆಸಕ್ತನಾಗಿದ್ದದ್ದೇ ಎಂದು ಇಲ್ಲಿ ತಿಳಿಸಿರುತ್ತದೆ.

ವಿವೇಕದ ಕ್ರಮವೆಂದರೆ ಆತ್ಮನನ್ನು ವಿವೇಚನೆಮಾಡಿಕೊಂಡು ಅನುಸಂಧಾನ ಮಾಡುವ ರೀತಿಯು. ಕೆಲವರು ಧ್ಯಾನದಿಂದ, ಕೆಲವರು ಜ್ಞಾನದಿಂದ, ಕೆಲವರು ಕರ್ಮಯೋಗದಿಂದ – ಹೀಗೆ ಬೇರೆ ಬೇರೆಯ ಬಗೆಯಿಂದ ಆತ್ಮನನ್ನು ತಮ್ಮ ತಮ್ಮ ಅಧಿಕಾರಕ್ಕೆ ತಕ್ಕಂತೆ ಉಪಾಸನೆಮಾಡುತ್ತಾರೆ – ಎಂಬುದನ್ನೂ ಇಲ್ಲಿ ತಿಳಿಸಿಕೊಟ್ಟಿರುತ್ತದೆ.

ಈ ಅಧ್ಯಾಯದಲ್ಲಿ ಮುಖ್ಯವಾಗಿ ಆತ್ಮನನ್ನು – ಕ್ಷೇತ್ರಜ್ಞನನ್ನು – ವಿವರಿಸಿದೆ ಯೆಂಬುದೇ ಈ ಸಿದ್ಧಾಂತದ ಹೇಳಿಕೆಯು. ಶಾಂಕರಸಿದ್ಧಾಂತದಂತೆ ಪರಮಾತ್ಮನ ವಿಚಾರವನ್ನು ಇಲ್ಲಿ ಹೇಳಿರುವದಿಲ್ಲ.

# ಹದಿನಾಲ್ಕನೆಯ ಅಧ್ಯಾಯ

**ಗುಣಬನ್ಧವಿಧಾ ತೇಷಾಂ ಕರ್ತೃತ್ವಂ ತನ್ನಿವರ್ತನಮ್ ।**
**ಗತಿತ್ರಯಸ್ವಮೂಲತ್ವಂ ಚತುರ್ದಶ ಉದೀರ್ಯತೇ ॥೧೮॥**

“ಗುಣಗಳಿಂದಾಗುವ ಬಂಧದ ಬಗೆಗಳು, ಅವುಗಳೇ ಕರ್ತೃವೆಂಬುದು, ಗುಣಗಳು ನಿವೃತ್ತಿಯಾಗುವ ರೀತಿ, ಗತಿತ್ರಯವೂ ತನ್ನಿಂದಾಗುವದೆಂಬುದು, ಇಷ್ಟನ್ನೂ ಹದಿನಾಲ್ಕನೆಯ ಅಧ್ಯಾಯದಲ್ಲಿ ಹೇಳಿರುತ್ತದೆ.”

**ಗುಣಬಂಧದ ಬಗೆಗಳು :** ಸತ್ತ್ವದಿಂದ ಜ್ಞಾನಸುಖಗಳ ಸಂಗವೆಂಬ ಬಾಧವಾಗುತ್ತದೆ; ರಜೋಗುಣದಿಂದ ಕರ್ಮಸಂಗವೆಂಬ ಬಂಧವಾಗುತ್ತದೆ; ತಮೋಗುಣದಿಂದ ಪ್ರಮಾದ, ಆಲಸ್ಯ, ನಿದ್ರೆ – ಎಂಬ ಬಂಧವಾಗುತ್ತದೆ.

**ಗುಣಗಳೇ ಕರ್ತೃ :** ಆತ್ಮನು ಪರಿಶುದ್ಧನೇ ಆಗಿರುತ್ತಾನಾದರೂ ಒಂದು ಹಿಂದಿನ ಕರ್ಮದಿಂದಾಗಿ ಗುಣಸಂಗದಿಂದ ಬೇರೆಬೇರೆ ಕರ್ಮಗಳಲ್ಲಿ ತೊಡಗುತ್ತಾನೆ – ಎಂದರ್ಥ. ಗುಣಗಳಿಂದಾಗುವ ಕರ್ಮಗಳಿಗೆ ಆತ್ಮನು ಕರ್ತೃವಲ್ಲ ಎಂದರ್ಥ. ಈ ಸಿದ್ಧಾಂತದಲ್ಲಿ ಆತ್ಮನು ಸರ್ವಥಾ ಅಕರ್ತೃವೆಂಬುದನ್ನು ಒಪ್ಪಿಲ್ಲ.

**ಗುಣಗಳ ನಿವೃತ್ತಿ :** ಯಾವ ಪರಮೇಶ್ವರನನ್ನೇ ಅವ್ಯಭಿಚರಿತನಾದ ಭಕ್ತಿಯಿಂದ ಸೇವಿಸುತ್ತಿರುವರೋ ಅವರು ಈ ಮೂರು ಗುಣಗಳನ್ನೂ ದಾಟಿ ಬ್ರಹ್ಮ ಸಾಮ್ಯವನ್ನು ಪಡೆಯುತ್ತಾರೆ.

**ಗತಿತ್ರಯವೂ ತನ್ನಿಂದಾಗುವದು :** ಇಲ್ಲಿ ಗತಿತ್ರಯವೆಂದರೆ ಯಾವದು? ಸತ್ತ್ವಗುಣದಿಂದ ಕೂಡಿದವರಿಗೆ ಊರ್ಧ್ವಗತಿಯಾಗುವದು – ಎಂದು ಮುಂತಾಗಿ ಮೂರು ಬಗೆಯ ಗತಿಯನ್ನೂ ಈ ಅಧ್ಯಾಯದಲ್ಲಿ ಹೇಳಿದೆ. ಆದರೆ ಅವುಗಳನ್ನು ಶ್ಲೋಕದಲ್ಲಿ ಹೇಳಿರುವ ಕ್ರಮದಲ್ಲಿ ಕೊನೆಯದಾಗಿ ಹೇಳಿರುವದಿಲ್ಲ. ಆದ್ದರಿಂದ ಎಲ್ಲಕ್ಕೂ ಕೊನೆಯಲ್ಲಿ ಹೇಳಿರುವ ಇಪ್ಪತ್ತೇಳನೆಯ ಶ್ಲೋಕದ ಅಭಿಪ್ರಾಯವನ್ನೇ ಇಲ್ಲಿ '**ಗತಿತ್ರಯಸ್ವಮೂಲತ್ವಮ್**' ಎಂಬ ಮಾತಿನಿಂದ ತಿಳಿಸಿದೆಯೆಂದು ತಿಳಿಯಬೇಕು. ಜೀವನಿಗೆ ಸಿಕ್ಕಬೇಕಾದ ಮುಕ್ತರೂಪ, ಐಶ್ವರ್ಯ, ಸುಖ– ಈ ಮೂರಕ್ಕೂ ಭಗವಂತನೇ ಮೂಲವು. ಈ ಮೂರನ್ನೇ '**ಅಮೃತಸ್ಯಾವ್ಯಯಸ್ಯ ಬ್ರಹ್ಮಣಃ**', '**ಶಾಶ್ವತಸ್ಯ ಧರ್ಮಸ್ಯ**', '**ಸುಖಸ್ಯೈಕಾನ್ತಿಕಸ್ಯ**' – ಎಂಬ ಮಾತುಗಳಿಂದ ಹೇಳಿರುತ್ತದೆ. ಭಗವಂತನ ಪ್ರಪತ್ತಿಯೆಂಬ ಮುಖ್ಯವಾದ ಉಪಾಯದಿಂದಲೇ ಈ ಮೂರೂ ಸಿಕ್ಕುತ್ತವೆ ಎಂಬುದನ್ನು ಈ ಅಧ್ಯಾಯದಲ್ಲಿ ಹೇಳಿರುತ್ತದೆ.

ಖಖಖಖಖ

# ಹದಿನೈದು-ಹದಿನಾರನೆಯ ಅಧ್ಯಾಯ

**ಅಚಿನ್ಮಿಶ್ರಾದ್ವಿಶುದ್ಧಾಚ್ಚ ಚೇತನಾತ್ಪುರುಷೋತ್ತಮಃ ।**
**ವ್ಯಾಪನಾದ್ಭರಣಾತ್ ಸ್ವಾಮ್ಯಾದನ್ಯಃ ಪಞ್ಚದಶೋದಿತಃ ॥೧೯॥**

"ಪುರುಷೋತ್ತಮನಾದ ಭಗವಂತನು ಅಚಿತ್ತಿನಿಂದ ಮಿಶ್ರನಾಗಿಯೂ ಶುದ್ಧನಾಗಿಯೂ ಇರುವ ಚೇತನಕ್ಕಿಂತ ಅನ್ಯನಾಗಿರುತ್ತಾನೆ; ಏಕೆಂದರೆ ಆತನು ವ್ಯಾಪಕನೂ ಧರಿಸುವಾತನೂ ಸ್ವಾಮಿಯೂ ಆಗಿರುತ್ತಾನೆ ಎಂದು ಹದಿನೈದನೆಯ ಅಧ್ಯಾಯದಲ್ಲಿ ಹೇಳಿರುತ್ತದೆ."

ಜೀವನು ಬಂಧದೆಶೆಯಲ್ಲಿ ಅಚಿತ್ತಿನಿಂದ ಕೂಡಿರುತ್ತಾನೆ. ಮುಕ್ತಿ ದೆಶೆಯಲ್ಲಿ ಅದರಿಂದ ರಹಿತನಾಗಿರುತ್ತಾನೆ. ಆದ್ದರಿಂದ 'ಅಚಿನ್ಮಿಶ್ರಜೀವನ' ಎಂದರೆ ಹದಿನಾಲ್ಕನೆಯ ಅಧ್ಯಾಯದಲ್ಲಿ ಹೇಳಿರುವ ಗುಣಸಂಗವುಳ್ಳ ಜೀವನು ಎಂದರ್ಥ. 'ವಿಶುದ್ಧ ಜೀವನು' ಎಂದರೆ ಹದಿಮೂರನೆಯ ಅಧ್ಯಾಯದಲ್ಲಿ ಹೇಳಿದ ಗುಣಸಂಬಂಧವಿಲ್ಲದ ಜ್ಞಾನ ಸ್ವರೂಪನಾದ ಜೀವನು ಎಂದರ್ಥ.

ಸರ್ವವ್ಯಾಪಕನಾಗಿರುವದರಿಂದಲೂ ಚಿದಚಿತ್ತುಗಳೆರಡನ್ನೂ ಭರಣಮಾಡುತ್ತಿರುವದರಿಂದಲೂ ಎರಡಕ್ಕೂ ಒಡೆನಾಗಿರುವದರಿಂದಲೂ ಭಗವಂತನು ಈ ಎರಡವಸ್ಥೆಗಳ ಜೀವನಿಗಿಂತಲೂ ಹೆಚ್ಚಿನವನು ಎಂಬುದು ಹದಿಮೂರನೆಯ ಅಧ್ಯಾಯದ ಅರ್ಥವು.

**ದೇವಾಸುರವಿಭಾಗೋಕ್ತಿ ಪೂರ್ವಿಕಾ ಶಾಸ್ತ್ರವಶ್ಯತಾ ।**
**ತತ್ತ್ವಾನುಷ್ಠಾನವಿಜ್ಞಾನಸ್ಥೇಮ್ನೇ ಷೋಡಶ ಉಚ್ಯತೇ ॥೨೦॥**

"ತತ್ತ್ವಾನುಷ್ಠಾನವಿಜ್ಞಾನಗಳ ಸ್ಥಿರತ್ವಕ್ಕಾಗಿ ದೇವಾಸುರವಿಭಾಗ ಪೂರ್ವಕವಾಗಿ ಶಾಸ್ತ್ರವಶ್ಯತೆಯನ್ನು ಹದಿನಾರನೆಯ ಅಧ್ಯಾಯದಲ್ಲಿ ಹೇಳಿರುತ್ತದೆ."

ಹಿಂದೆ ಹೇಳಿರುವ ಅರ್ಥವೆಲ್ಲವೂ ನೆಲೆನಿಲ್ಲಬೇಕಾದರೆ ಶಾಸ್ತ್ರವಶ್ಯನಾಗಿರಬೇಕು, ಎಂದರೆ ಶಾಸ್ತ್ರದಲ್ಲಿ ಹೇಳಿರುವಂತೆ ನಡೆದುಕೊಳ್ಳಬೇಕು. ಯಾವನು ಶಾಸ್ತ್ರವನ್ನು ಮೀರಿ ನಡೆಯುತ್ತಾನೋ ಅವನು ಅಸುರನು, ಯಾವನು ಶಾಸ್ತ್ರವಶನಾಗಿ ನಡೆಯುತ್ತಾನೋ ಅವನೇ ದೇವನು - ಎಂಬ ದೇವಾಸುರವಿಭಾಗವನ್ನು ಹದಿನಾರನೆಯ ಅಧ್ಯಾಯದಲ್ಲಿ ವಿವರಿಸಿ ಹೇಳಿರುತ್ತದೆ.

# ಹದಿನೇಳನೆಯ ಅಧ್ಯಾಯ

**ಅಶಾಸ್ತ್ರಮಾಸುರಂ ಕೃತ್ಸ್ನಂ ಶಾಸ್ತ್ರೀಯಂ ಗುಣತಃ ಪೃಥಕ್ ।**
**ಲಕ್ಷಣಂ ಶಾಸ್ತ್ರಸಿದ್ಧಸ್ಯ ತ್ರಿಧಾ ಸಪ್ತದಶೋದಿತಮ್ ॥೨೦॥**

"ಅಶಾಸ್ತ್ರೀಯವಾದ ಅಸುರವನ್ನೂ ಶಾಸ್ತ್ರೀಯವಾದದ್ದನ್ನೂ ಗುಣಗಳಿಗನುಸಾರವಾಗಿ ಬೇರೆಬೇರೆಯಾಗಿವೆ ಎಂಬುದನ್ನೂ ಶಾಸ್ತ್ರಸಿದ್ಧವಾದದ್ದರ ಮೂರು ಬಗೆಯ ಲಕ್ಷಣವನ್ನೂ ಹದಿನೇಳನೆಯ ಅಧ್ಯಾಯದಲ್ಲಿ ಹೇಳಿದೆ."

ಶಾಸ್ತ್ರದಲ್ಲಿ ವಿಧಿಸದೆ ಇರುವ ಕರ್ಮವು ಅಶಾಸ್ತ್ರೀಯವೆನಿಸುವದು. ಅಶಾಸ್ತ್ರೀಯವಾದದ್ದೆಲ್ಲವೂ ಆಸುರಸಂಪತ್ತಿನಿಂದುಂಟಾದದ್ದು; ಆದ್ದರಿಂದ ಅದಕ್ಕೆ ಯಾವ ಫಲವೂ ಇಲ್ಲ. ಇದನ್ನು ಹದಿನೇಳನೆಯ ಅಧ್ಯಾಯದಲ್ಲಿ ಹೇಳಿದೆ.

ಶಾಸ್ತ್ರವಿಹಿತವಾದದ್ದೆಲ್ಲವೂ ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರು ಬಗೆ. ಅದಕ್ಕೆ ಆಯಾ ಗುಣಕ್ಕೆ ತಕ್ಕಂತೆ ಫಲವಾಗುತ್ತದೆ. ಇದನ್ನು ಇಲ್ಲಿ ಹೇಳಿದೆ.

ಶಾಸ್ತ್ರವಿಹಿತವಾದ ಯಜ್ಞಾದಿಗಳಿಗೇ **ಓಂ ತತ್ಸತ್** ಎಂಬ ಶಬ್ದಗಳನ್ನು ಸೇರಿಸಿಕೊಂಡಿರುವ ಕರ್ಮಗಳಿಂದ ವಿಂಗಡಿಸಿ ಮೂರು ಬಗೆಯ ಲಕ್ಷಣವನ್ನು ಇಲ್ಲಿ ಹೇಳಿದೆ.

# ಹದಿನೆಂಟನೆಯ ಅಧ್ಯಾಯ

**ಈಶ್ವರೇ ಕರ್ತೃತಾಬುದ್ಧಿಃ ಸತ್ತ್ವೋಪಾದೇಯತಾನ್ತಿಮೇ ।**
**ಸ್ವಕರ್ಮಪರಿಣಾಮಶ್ಚ ಶಾಸ್ತ್ರಸಾರಾರ್ಥ ಉಚ್ಯತೇ ॥೨೨॥**

ಈಶ್ವರನಲ್ಲಿ ಕರ್ತೃತ್ವಬುದ್ಧಿಯನ್ನು ಮಾಡಬೇಕೆಂಬುದನ್ನೂ ಸತ್ತ್ವಗುಣವನ್ನೇ ಸ್ವೀಕರಿಸಬೇಕೆಂಬುದನ್ನೂ ಸ್ವಕರ್ಮದ ಪರಿಣಾಮವನ್ನೂ ಶಾಸ್ತ್ರದ ಸಾರಾರ್ಥವನ್ನೂ ಕೊನೆಯ ಅಧ್ಯಾಯದಲ್ಲಿ ಹೇಳಿರುತ್ತದೆ.

**ಈಶ್ವರನಲ್ಲಿ ಕರ್ತೃತ್ವಬುದ್ಧಿ :** ಜೀವನು ಮಾಡುವದೆಲ್ಲ ಪರಮೇಶ್ವರನ ಅಧೀನವೇ ಆಗಿರುವದರಿಂದ ಸರ್ವೇಶ್ವರನಾದ ಭಗವಂತನೇ ಸರ್ವಕರ್ಮಗಳಿಗೂ ಕರ್ತೃ ಎಂದು ಅನುಸಂಧಾನಮಾಡಬೇಕು - ಎಂಬುದು ಈ ಅಧ್ಯಾಯದಲ್ಲಿ ಹೇಳಿರುತ್ತದೆ.

ಸತ್ತ್ವವನ್ನೇ ಸ್ವೀಕರಿಸಬೇಕೆಂಬುದು; ಸತ್ತ್ವ, ರಜಸ್ಸು, ತಮಸ್ಸು – ಈ ಗುಣಗಳ ಕಾರ್ಯವನ್ನು ವಿವರಿಸಿದ ಬಳಿಕ ಸತ್ತ್ವಗುಣವನ್ನೇ ಸ್ವೀಕರಿಸಬೇಕು – ಎಂಬುದನ್ನು ಇಲ್ಲಿ ಹೇಳಿರುತ್ತದೆ.

**ಸ್ವಕರ್ಮದ ಪರಿಣಾಮ :** ಆಯಾ ವರ್ಣಕ್ಕೆ ತಕ್ಕ ಕರ್ಮಗಳನ್ನು ಮಾಡುವಾಗ ಅದನ್ನು ಪರಮಪುರುಷನಾದ ಭಗವಂತನ ಆರಾಧನೆಯೆಂದೇ ಮಾಡುವದರಿಂದ ಆ ಪರಮಪುರುಷನ ಪ್ರಾಪ್ತಿಯೇ ಆಗುತ್ತದೆ – ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಿ ಹೇಳಿರುತ್ತದೆ.

**ಶಾಸ್ತ್ರದ ಸಾರ :** ಭಕ್ತಿಯೋಗವೇ ಸಕಲ ಗೀತಾಶಾಸ್ತ್ರದ ಸಾರಾರ್ಥವು. ಈ ವಾದವನ್ನು ''ಸರ್ವಗುಹ್ಯತಮವಾದ ಭಕ್ತಿಯೋಗವನ್ನು ಮತ್ತೂ ಹೇಳುತ್ತೇನೆ ಕೇಳು'' (18–64)–ಎಂದು ಪ್ರಾರಂಭಿಸಿ ''ನನ್ನಲ್ಲಿಯೇ ಮನಸ್ಸಿಡು, ನನ್ನ ಭಕ್ತನಾಗಿರು, ನನ್ನನ್ನೇ ಹೊಂದುವೆ –ಎಂದು ಪ್ರತಿಜ್ಞೆಮಾಡಿ ಹೇಳುತ್ತೇನೆ. ಸರ್ವಧರ್ಮಗಳನ್ನೂ ಬಿಟ್ಟು ನನ್ನನ್ನೇ ಶರಣುಹೊಂದು; ಭಕ್ತಿಗೆ ವಿರೋಧಿಯಾಗಿರುವ ಸಕಲಪಾಪಗಳಿಂದಲೂ ನಿನ್ನನ್ನು ಬಿಡಿಸುತ್ತೇನೆ'' ಎಂದು ಭಗವಂತನು ಹೇಳಿರುತ್ತಾನೆ.

**''ಸರ್ವಧರ್ಮಾನ್ ಪರಿತ್ಯಜ್ಯ''** ಎಂಬ ಶ್ಲೋಕವನ್ನು ಚರಮಶ್ಲೋಕವೆಂದು ವಿಶಿಷ್ಟಾದ್ವೈತಿಗಳು ಕರೆಯುತ್ತಾರೆ. ಇವರ ಅಭಿಪ್ರಾಯವನ್ನು ಶ್ರೀರಾಮಾನುಜಾಚಾರ್ಯರ ಗೀತಾಭಾಷ್ಯದಿಂದಲೂ ವೇದಾಂತದೇಶಿಕರ ತಾತ್ಪರ್ಯಚಂದ್ರಿಕೆಯಿಂದಲೂ ತಿಳಿದುಕೊಳ್ಳಬೇಕು.

# ಯೋಗತ್ರಯ

**ಕರ್ಮಯೋಗಸ್ತಪಸ್ತೀರ್ಥದಾನಯಜ್ಞಾದಿಸೇವನಮ್ ।**
**ಜ್ಞಾನಯೋಗೋ ಜಿತಸ್ವಾನ್ತೈಃ ಪರಿಶುದ್ಧಾತ್ಮನಿ ಸ್ಥಿತಿಃ ॥೨೩॥**

**ಭಕ್ತಿಯೋಗಃ ಪರೈಕಾನ್ತಪ್ರೀತ್ಯಾ ಧ್ಯಾನಾದಿಷು ಸ್ಥಿತಿಃ ।**
**ತ್ರಯಾಣಾಮಪಿ ಯೋಗಾನಾಂ ತ್ರಿಭಿರನ್ಯೋನ್ಯಸಂಗ್ರಹಃ ॥೨೪॥**

"ಕರ್ಮಯೋಗವೆಂದರೆ ತಪಸ್ಸು ತೀರ್ಥ, ದಾನ, ಯಜ್ಞ - ಮುಂತಾದವುಗಳನ್ನು ಸೇವಿಸುವುದು. ಜ್ಞಾನಯೋಗವೆಂದರೆ ಮನಸ್ಸನ್ನು ಜಯಿಸಿಕೊಂಡು ಪರಿಶುದ್ಧ ಆತ್ಮನಲ್ಲಿಯೇ ನಿಷ್ಠೆಯನ್ನು ಪಡೆಯುವದು ಭಕ್ತಿಯೆಂದರೆ ಪರಮಾತ್ಮನಲ್ಲಿಯೇ ಏಕಾಂತಪ್ರೇಮದಿಂದ ಧ್ಯಾನಾದಿಗಳಲ್ಲಿ ನೆಲೆ ನಿಲ್ಲುವದು. ಈ ಮೂರು ಯೋಗಗಳೂ ಒಂದರಲ್ಲೊಂದು ಬೆರೆತುಕೊಂಡಿರುತ್ತದೆ."

ಇಲ್ಲಿಂದ ಮುಂದಕ್ಕೆ ಹತ್ತು ಶ್ಲೋಕಗಳಲ್ಲಿ ಗೀತಾರ್ಥವನ್ನು ಉಪಸಂಹಾರ ಮಾಡುತ್ತಾರೆ. ಕರ್ಮಯೋಗವನ್ನು ಹಿಂದೆ ನಾಲ್ಕನೆಯ ಅಧ್ಯಾಯದ ವಿಷಯವನ್ನು ವರ್ಣಿಸುವಾಗ ಹೇಳಿರುತ್ತದೆ. ಅದರಲ್ಲಿರುವ ಪ್ರಭೇದಗಳನ್ನೂ ಅಲ್ಲಿ ಹೇಳಿದೆ. ಅಲ್ಲಿ ಹೇಳಿರುವವಲ್ಲದೆ, ಮತ್ತೆ ಕೆಲವನ್ನು ಇಲ್ಲಿ ಹೇಳಿದೆ. ತಪಸ್ಸೇ ಮುಂತಾದವುಗಳನ್ನು ಕೊನೆಯವರೆಗೂ ಎಡೆಬಿಡದೆ ಮಾಡುತ್ತಿರುವದು ಕರ್ಮಯೋಗಕ್ಕೆ ಸೇರಿರುತ್ತದೆ. ಮನಸ್ಸನ್ನು ಜಯಿಸಿಕೊಂಡು ನಿರಂತರವಾಗಿ ಆತ್ಮಚಿಂತನೆಯನ್ನು ಮಾಡುತ್ತಿರುವುದು ಜ್ಞಾನಯೋಗವು. ಸ್ನೇಹಪೂರ್ವಕವಾಗಿ ಧ್ಯಾನಮಾಡುತ್ತಿರುವದೇ ಭಕ್ತಿಯು. ಪರಬ್ರಹ್ಮನಾದ ಭಗವಂತನಲ್ಲಿ ನಿಯಮವಾಗಿ ಪ್ರೇಮವನ್ನಿಟ್ಟು ಧ್ಯಾನಾದಿಗಳನ್ನು ಮಾಡುತ್ತಿರುವದು ಭಕ್ತಿಯೋಗದಲ್ಲಿ ಸೇರಿರುತ್ತದೆ. ಧ್ಯಾನಾದಿಗಳು ಎಂದರೆ ಅರ್ಚನೆಮಾಡುವದು, ನಮಸ್ಕಾರ ಮಾಡುವದು - ಮುಂತಾದವುಗಳು.

ಕರ್ಮಯೋಗದಲ್ಲಿ ಆತ್ಮಜ್ಞಾನವೂ ಪರಮೇಶ್ವರನ ಭಕ್ತಿಯೂ ಸೇರಿಕೊಂಡಿರುತ್ತವೆ. ಜ್ಞಾನಯೋಗದಲ್ಲಿ ನಿತ್ಯಕರ್ಮಾನುಷ್ಠಾನವೂ ಪರಮೇಶ್ವರಭಕ್ತಿಯೂ ಇರುತ್ತವೆ. ಇದರಂತೆ ಭಕ್ತಿಯೋಗದಲ್ಲಿಯೂ ಕರ್ಮಜ್ಞಾನಗಳು ಸೇರಿಕೊಂಡಿರುತ್ತವೆ. ಆದರೆ ಈ ಮೂರರ ಬೆರಕೆಯಲ್ಲಿ ಯಾವದು ಮುಖ್ಯವಾಗಿರುವದೋ ಅದರ ಹೆಸರನ್ನು ಕೊಟ್ಟು **ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ** - ಎಂದು ಕರೆಯುತ್ತಾರೆ. ಈ ಮೂರು ಯೋಗಗಳು ಹೇಗೆ ಪರಮಪ್ರಾಪ್ತಿಗೆ ಸಾಧನವೆಂಬುದನ್ನು ಮುಂದಿನ ಶ್ಲೋಕಗಳಲ್ಲಿ ತಿಳಿಸಲಾಗುವದು.

ಖಖಖಖಖ

# ಯೋಗತ್ರಯವೂ ಆತ್ಮದರ್ಶನವೂ

ನಿತ್ಯನೈಮಿತ್ತಿಕಾನಾಂ ಚ ಪರಾರಾಧನರೂಪಿಣಾಮ್ ।
ಆತ್ಮದೃಷ್ಟೇಸ್ತ್ರಯೋಽಪ್ಯೇತೇ ಯೋಗದ್ವಾರೇಣ ಸಾಧಕಾಃ ॥೨೫॥
ನಿರಸ್ತನಿಖಿಲಾಜ್ಞಾನೋ ದೃಷ್ಟ್ವಾತ್ಮಾನಂ ಪರಾನುಗಮ್ ।
ಪ್ರತಿಲಭ್ಯ ಪರಾಂ ಭಕ್ತಿಂ ತಯೈವಾಪ್ನೋತಿ ತತ್ಪದಮ್ ॥೨೬॥

"ಪರಮೇಶ್ವರನ ಆರಾಧನೆಯ ರೂಪವಾಗಿರುವ ನಿತ್ಯನೈಮಿತ್ತಿಕಕರ್ಮಗಳು ಮೂರಕ್ಕೂ ಸೇರಿರುತ್ತದೆ. ಈ ಮೂರೂ ಯೋಗದ್ವಾರದಿಂದ ಆತ್ಮದೃಷ್ಟಿಗೆ ಕಾರಣವಾಗಿರುತ್ತದೆ. ಅಜ್ಞಾನವನ್ನೆಲ್ಲ ಕಳೆದುಕೊಂಡು, ಪರಮೇಶ್ವರಾನುಸಾರಿಯಾದ ಆತ್ಮನನ್ನು ಕಂಡುಕೊಂಡು ಪರಭಕ್ತಿಯನ್ನು ಪಡೆದುಕೊಂಡು ಅದರಿಂದಲೇ ಆತನ ಪದವನ್ನು ಪಡೆಯುತ್ತಾರೆ."

ಕರ್ಮಗಳಲ್ಲಿ ಬೇರೆಬೇರೆ ದೇವತೆಗಳ ಸಂಬಂಧವಿರುವದರಿಂದ ಪರಮಾತ್ಮನಲ್ಲಿಯೇ ಇರಬೇಕಾದ ಏಕಾಂತಪ್ರೇಮಕ್ಕೆ ಅವು ಅಡ್ಡಿಯಾಗುವದಲ್ಲವೆ? – ಎಂದರೆ ಹಾಗಲ್ಲ, ವರ್ಣಾಶ್ರಮಧರ್ಮವನ್ನು ಅವಶ್ಯವಾಗಿ ಮಾಡಬೇಕು. ಅಗ್ನ್ಯಾದಿ ಶಬ್ದಗಳು ಆಯಾ ದೇವತೆಯೆಂಬ ಶರೀರವುಳ್ಳ ಪರಮಾತ್ಮನನ್ನು ಅಥವಾ ನೇರಾಗಿ ಪರಮಾತ್ಮನನ್ನೇ ತಿಳಿಸುವ ಶಬ್ದಗಳಾಗಿರುತ್ತವೆ. ಆದ್ದರಿಂದ ಪರಮಾತ್ಮನ ಆರಾಧನೆಯ ರೂಪದಿಂದ ಕರ್ಮಗಳನ್ನು ಮಾಡುವದು ಮೂರು ಯೋಗಗಳಿಗೂ ಸೇರಿದ್ದೇ ಆಗಿರುತ್ತದೆ.

ಈ ಮೂರಕ್ಕೂ ಆತ್ಮದರ್ಶನವೇ ಮೊದಲನೆಯ ಫಲವು. ಇವು ಅಂತಃಕರಣದ ಏಕಾಗ್ರತೆಯ ಮೂಲಕ ಆತ್ಮದರ್ಶನವನ್ನು ಕೊಡುತ್ತವೆ. ಸಾಧನಕ್ಕೆ ವಿರುದ್ಧವಾದ ಅಜ್ಞಾನವನ್ನೆಲ್ಲ ಕಳೆದು ಆತ್ಮನ ದರ್ಶನವನ್ನುಂಟುಮಾಡುತ್ತವೆ.

ಆತ್ಮನು ಪರಮಾತ್ಮಾನುಚರನು, ಅವನಿಗೆ ಶೇಷಭೂತನಾಗಿರುವವನು. ಅಂಥ ಆತ್ಮನನ್ನು ಕಂಡುಕೊಂಡಬಳಿಕ ಪರಭಕ್ತಿಯು ದೊರಕುವದು. "ಪರಭಕ್ತಿಯೇ ಪರಮಭಕ್ತಿಯೆಂಬ ರೂಪವನ್ನು ತಾಳಿ ಪರಮಾತ್ಮಪದವನ್ನು ದೊರಕಿಸಿಕೊಡುತ್ತದೆ. ಇಲ್ಲಿ 'ತತ್ಪದ' ಎಂಬ ಮಾತಿಗೆ ಆತನ ಚರಣವನ್ನು ಎಂದಾಗಲಿ, ಆ ಪರಮಪುರುಷನ ಅಪ್ರಾಕೃತವಾದ ಸ್ಥಾನವನ್ನು ಅಥವಾ ಸ್ವರೂಪವನ್ನು ಎಂದಾಗಲಿ, ಅರ್ಥವನ್ನು ಮಾಡಬಹುದು. ಅಂತೂ ಯೋಗತ್ರಯಕ್ಕೆ ತತ್ಪದಪ್ರಾಪ್ತಿಯೇ ಪರಮಫಲವೆಂದಾಯಿತು.

# ಯೋಗತ್ರಯಕ್ಕೆ ಫಲ

ಭಕ್ತಿಯೋಗಸ್ತದರ್ಥೀ ಚೇತ್ ಸಮಗ್ರೈಶ್ವರ್ಯಸಾಧಕಮ್ ।
ಆತ್ಮಾರ್ಥೀ ಚೇತ್ತ್ರಯೋऽಪ್ಯೇತೇ ತತ್ಕೈವಲ್ಯಸ್ಯ ಸಾಧಕಾಃ ॥೨೭॥

ಐಕಾನ್ತ್ಯಂ ಭಗವತ್ಯೇಷಾಂ ಸಮಾನಮಧಿಕಾರಿಣಾಮ್ ।
ಯಾವತ್ಪ್ರಾಪ್ತಿ ಪರಾರ್ಥೀ ಚೇತ್ತದೇವಾತ್ಯನ್ತಮಶ್ನುತೇ ॥೨೮॥

"ಭಕ್ತಿಯೋಗವು, ಸಾಧಕರಿಗೆ ಅಂಥ ಇಚ್ಛೆಯಿದ್ದರೆ, ಸಮಗ್ರವಾದ ಐಶ್ವರ್ಯವನ್ನು ಕೊಡುತ್ತದೆ. ಸಾಧಕನು ಆತ್ಮಾರ್ಥಿಯಾಗಿದ್ದರೆ ಈ ಮೂರೂ ಆ ಕೈವಲ್ಯವನ್ನು ಕೊಡುವವು. ಈ ಮೂವರು ಅಧಿಕಾರಿಗಳಿಗೂ ಭಗವಂತನಲ್ಲಿ ಐಕಾಂತ್ಯವೆಂಬುದು ಸಮಾನವಾಗಿರುತ್ತದೆ. ಪರಮಾತ್ಮಪ್ರಾಪ್ತಿಯನ್ನೇ ಕೊನೆಯವರೆಗೂ ಇಚ್ಛಿಸುವನಾದರೆ ಅದನ್ನೇ ಅತ್ಯಂತವಾಗಿ ಪಡೆಯುತ್ತಾನೆ."

ಭಕ್ತಿಯೋಗಕ್ಕೆ ಮೂರು ಫಲಗಳು. ಅಚಿದ್ದ್ರವ್ಯದ ಪರಿಣಾಮವಿಶೇಷವನ್ನು ಅನುಭವಿಸುವದೆಂಬ ಸಮಗ್ರೈಶ್ವರ್ಯವು ಅದನ್ನು ಬಯಸುವವರಿಗೆ ದೊರಕುತ್ತದೆ. ಆತ್ಮಾನುಭವವನ್ನೇ ಬಯಸುವವರಿಗೆ ಆತ್ಮಕೈವಲ್ಯವು ದೊರಕುತ್ತದೆ. ಇವೆರಡನ್ನೂ ಬಿಟ್ಟು ಪರಮಾತ್ಮಪ್ರಾಪ್ತಿಯನ್ನೇ ಬಯಸುವವರಿಗೆ ಆ ಫಲವೇ ದೊರಕುತ್ತದೆ.

ಭಕ್ತಿಯೋಗಕ್ಕೆ ಹೇಗೋ ಹಾಗೆ ಕರ್ಮಯೋಗ, ಜ್ಞಾನಯೋಗ – ಇವಕ್ಕೂ ಆತ್ಮಕೈವಲ್ಯಾಪೇಕ್ಷಿಗಳಾದವರಿಗೆ, ಪರಮಪುರುಷನ ಪ್ರೇಮದ ಮೂಲಕವಾಗಿ ಆ ಕೈವಲ್ಯವು ದೊರಕುತ್ತದೆ. ಈ ಮೂರು ಯೋಗದವರೂ ಭಗವಂತನದಲ್ಲಿ ಏಕಾಂತ ಭಕ್ತಿಯುಳ್ಳವರಾಗಿರುವರು; ಎಂದರೆ ಮತ್ತೊಂದು ದೇವತೆಯನ್ನನುಸರಿಸದೆ ಪರಮಾತ್ಮನಲ್ಲಿಯೇ ಪ್ರೇಮವುಳ್ಳವರಾಗಿರುತ್ತಾರೆ. ಆ ಪ್ರೀತಿಯಿಂದಲೇ ಅವರವರಿಗೆ ಬೇಕಾದ ಫಲವು ದೊರಕುತ್ತದೆ.

ಆಯಾ ಫಲವನ್ನು ಪಡೆಯುವವರೆಗೆ ಭಗವತ್ಪ್ರೇಮವುಳ್ಳವರಾಗಿರುವದು ಮೂವರಿಗೂ ಸಮಾನವೆಂದು ಹೇಳಿದ್ದಾಯಿತಷ್ಟೆ. ಆದರೆ ಭಗವಂತನು ದೊರಕುವವರೆಗೂ ಆತನಲ್ಲಿಯೇ ಪ್ರೇಮದಿಂದೊಡಗೂಡಿರುವವರಿಗೆ ಆ ಪರಮಪುರುಷನ ಪ್ರಾಪ್ತಿಯೇ ಫಲವಾಗಿರುತ್ತದೆ. ಈ ಫಲವು ಆತ್ಯಂತಿಕವಾಗಿರುತ್ತದೆ. ಆತ್ಯಂತಿಕಭಕ್ತಿಯಿಂದೊಡಗೂಡಿದವರಿಗೆ ಅತ್ಯಂತಿಕವಾದ ಫಲವು ದೊರಕುವದು ಯುಕ್ತವೇ

ಆಗಿರುತ್ತದೆ. ಆದ್ದರಿಂದ ಮತ್ತೊಂದು ಫಲದಲ್ಲಿ ಆಸಕ್ತಿಯಿಲ್ಲದೆ ಭಗವಂತನಲ್ಲಿಯೇ ಪ್ರೇಮವುಳ್ಳವರಾಗಿದ್ದರೆ ನೇರಾಗಿ ಭಗವಂತನನ್ನೇ ಸೇರುತ್ತಾರೆ. ಆ ಬಳಿಕ ಸಂಸಾರಕ್ಕೆ ಮರಳಿ ಬರುವದೂ ಇಲ್ಲ, ಇದೇ ಈ ಭಕ್ತಿಯ ವಿಶೇಷವು.

# ಗೀತೆಯ ಪ್ರಧಾನೋಪದೇಶ

ಜ್ಞಾನೀ ತು ಪರಮೈಕಾನ್ತೀ ತದಾಯತ್ತಾತ್ಮ ಜೀವನಃ ।
ತತ್ಸಂಶ್ಲೇಷವಿಯೋಗೈಕಸುಖದುಃಖಸ್ತದೇಕಧೀಃ ॥೨೯॥
ಭಗವದ್ಧ್ಯಾನಯೋಗೋಕ್ತಿವನ್ದನಸ್ತುತಿಕೀರ್ತನೈಃ ।
ಲಬ್ಧಾತ್ಮಾ ತದ್ಗತಪ್ರಾಣಮನೋಬುದ್ಧೀನ್ದ್ರಿಯಕ್ರಿಯಃ ॥೩೦॥
ನಿಜಕರ್ಮಾದಿಭಕ್ತ್ಯನ್ತಂ ಕುರ್ಯಾತ್ ಪ್ರೀತ್ಯೈವ ಕಾರಿತಃ ।
ಉಪಾಯತಾಂ ಪರಿತ್ಯಜ್ಯ ನ್ಯಸ್ಯೇದ್ದೇವೇ ತು ತಾಮಭೀಃ ॥೩೧॥
ಏಕಾನ್ತಾತ್ಯನ್ತದಾಸ್ಯೈಕರತಿಸ್ತತ್ಪದಮಾಪ್ನುಯಾತ್ ।
ತತ್ಪ್ರಧಾನಮಿದಂ ಶಾಸ್ತ್ರಮಿತಿ ಗೀತಾರ್ಥಸಙ್ಗ್ರಹಃ ॥೩೨॥

"ಆದರೆ ಜ್ಞಾನಿಯು ಪರಮೈಕಾಂತಿಯು, ಅವನು ಆತನ ಅಧೀನನಾಗಿ ತನ್ನ ಬಾಳುವೆಯನ್ನಿಟ್ಟುಕೊಂಡಿರುವನು. ಅವನಿಗೆ ಆತನ ಸೇರುವಿಕೆಯಿಂದಲೇ ಸುಖ ಆತನ ಅಗಲುವಿಕೆಯಿಂದಲೇ ದುಃಖ, ಆತನೊಬ್ಬನಲ್ಲಿಯೇ ಅವನ ಬುದ್ಧಿ ಭಗವಂತನ ಧ್ಯಾನ, ಯೋಗ, ಉಕ್ತಿ, ವಂದನ, ಸ್ತುತಿ, ಕೀರ್ತನ- ಇವುಗಳಿಂದಲೇ ತನ್ನ ಆತ್ಮನನ್ನು ಪಡೆದಿರುತ್ತಾನೆ. ಆತನಲ್ಲಿಯೇ ಪ್ರಾಣ, ಮನಸ್ಸು ಬುದ್ಧಿ ಇಂದ್ರಿಯ - ಇವುಗಳ ವ್ಯಾಪಾರವನ್ನಿಟ್ಟುಕೊಂಡಿರುತ್ತಾನೆ. ಸ್ವಧರ್ಮದಿಂದ ಭಕ್ತಿಯವರೆಗಿನ ಸಾಧನ ವೆಲ್ಲವನ್ನೂ ಪ್ರೀತಿಯಿಂದಲೇ ಪ್ರೇರಿತನಾಗಿ ಮಾಡುತ್ತಿರುವನು; ಅವುಗಳು ಉಪಾಯ ವೆಂಬ ಬುದ್ಧಿಯನ್ನು ಬಿಟ್ಟು ದೇವನಲ್ಲಿಯೇ ಆ ಬುದ್ಧಿಯನ್ನಿಟ್ಟುಕೊಂಡಿರುವನು. ಏಕಾಂತವಾಗಿ ಅತ್ಯಂತ ದಾಸ್ಯವೊಂದರಲ್ಲಿಯೇ ರಮಣಮಾಡುತ್ತಿದ್ದು ಆತನ ಸ್ಥಾನವನ್ನೇ ಹೊಂದುವನು. ಈ ಶಾಸ್ತ್ರಕ್ಕೆ ಇದೇ ಮುಖ್ಯವಾದದ್ದು. ಈ ರೀತಿಯಲ್ಲಿ ಗೀತಾರ್ಥ ಸಂಗ್ರಹವು ಮುಗಿಯಿತು."

ಈ ಮೂರು ಯೋಗದವರೂ ಭಗವಂತನಲ್ಲಿ ಏಕಾಂತಭಕ್ತಿಯುಳ್ಳವರೇ ಆಗಿರು

ತ್ತಾರೆ – ಎಂದು ಇಪ್ಪತ್ತೆಂಟನೆಯ ಶ್ಲೋಕದಲ್ಲಿ ಹೇಳಿತ್ತಷ್ಟೆ. ಅದರಲ್ಲಿ ಒಂದು ವಿಶೇಷವುಂಟು; ಅದೇನೆಂದರೆ; ಜ್ಞಾನಿಯು ಮಿಕ್ಕವರಂತೆ ತಮ್ಮ ಐಶ್ವರ್ಯ, ಆತ್ಮಾನುಭವ – ಎಂಬ ಪುರುಷಾರ್ಥಗಳು ದೊರೆಯುವವರೆಗೂ ಏಕಾಂತಭಕ್ತಿಯಿರುತ್ತದೆ; ಆದರೆ ಜ್ಞಾನಿಗೆ ಹಾಗಲ್ಲ, ಅವನು ಪರಮೈಕಾಂತಿಯು. ಏಕೆಂದರೆ ಅವನಿಗೆ ಮತ್ತೊಂದು ದೇವತೆಯಲ್ಲಿ ಭಕ್ತಿಯಿಲ್ಲವೆಂಬುದಿಷ್ಟೇ ಅಲ್ಲ, ಭಗವಂತನನ್ನು ಬಿಟ್ಟರೆ ಮತ್ತೊಂದು ಪುರುಷಾರ್ಥವೂ ಅವನಿಗಿಲ್ಲ, ಆದ್ದರಿಂದ ಅನನ್ಯಭಕ್ತಿಯೆಂಬುದು ಅವನಲ್ಲಿ ಪರಮತ್ವವನ್ನು ಪಡೆದಿರುತ್ತದೆ.

ಜ್ಞಾನಿಯ ಬಾಳುವೆ ಪರಮೇಶ್ವರನಿಗಧೀನವಾಗಿರುತ್ತದೆ. ಭಗವಂತನನ್ನು ತ್ರಿಕರಣಗಳಿಂದಲೂ ಆರಾಧನೆಮಾಡುತ್ತಿರುವದೆಂಬ ಆತನ ಸಂಯೋಗದಿಂದ ಅವನಿಗೆ ಸುಖವಾಗುವದು, ಅದನ್ನು ಬಿಟ್ಟಾಗಲೀ ಅವನಿಗೆ ಅತ್ಯಂತ ದುಃಖವಾಗುವದು. ಆದ್ದರಿಂದ ಅವನು ಯಾವಾಗಲೂ ತನ್ನ ಚಿತ್ತವನ್ನು ಭಗವಂತನಲ್ಲಿಯೇ ಇಟ್ಟು ಕೊಂಡಿರುತ್ತಾನೆ.

ಭಗವಂತನನ್ನೇ ಧ್ಯಾನಮಾಡುತ್ತಿರುವದು, ಆತನ ದರ್ಶನವನ್ನು ಮಾಡುವದು, ಯೋಗ್ಯರಾದ ಶಿಷ್ಯನಿಗೆ ಆತನ ವಿಚಾರವನ್ನು ತಿಳಿಯಹೇಳುವದು, ಕರಣತ್ರಯ ದಿಂದಲೂ ಆತನನ್ನು ನಮಸ್ಕರಿಸುವದು, ಆತನ ಗುಣಗಳನ್ನು ಕೊಂಡಾಡುವದು, ಆಯಾ ಗುಣಗಳನ್ನೂ ವಿಭವವ್ಯಾಪಾರಗಳನ್ನೂ ಸೂಚಿಸುವ ನಾಮಗಳನ್ನು ಕೀರ್ತನೆ ಮಾಡುವದು – ಇವುಗಳಿಂದಲೇ ಅವನ ಆತ್ಮವು ನಿಂತಿರುವದು – ಎಂದರೆ ಈ ಸಾಧನಗಳಿಲ್ಲದಿದ್ದರೆ ತಾನೊಂದು ವಸ್ತುವೇ ಅಲ್ಲವೆಂದು ಅವನ ಭಾವನೆಯಿರುವದು. ಪ್ರಾಣ ವ್ಯಾಪಾರವಾಗಲಿ ಮನೋವ್ಯಾಪಾರವಾಗಲಿ, ಬುದ್ಧಿವ್ಯಾಪಾರವಾಗಲಿ, ಇಂದ್ರಿಯ ವ್ಯಾಪಾರವಾಗಲಿ ಆ ಭಗವಂತನಲ್ಲಿಯೇ ಜ್ಞಾನಿಗೆ ನೆಟ್ಟಿರುತ್ತದೆ. ಅವನು ಭಗವಂತ ನಿಗಲ್ಲದೆ ತನ್ನ ಯಾವ ಕರ್ಮವನ್ನೂ ಮತ್ತೊಬ್ಬರಿಗಾಗಿ ಮಾಡನು.

ತಾನು ಮಾಡುವ ವರ್ಣಾಶ್ರಮಾದಿಕರ್ಮಗಳಿಂದ ಹಿಡಿದು ಭಕ್ತಿಯವರೆಗಿನ ಸಾಧನಗಳನ್ನು ಅವನು ಭಗವಂತನಲ್ಲಿರುವ ಪ್ರೇಮದಿಂದಲೇ ಮಾಡುವವನಲ್ಲದೆ ಅವು ಮೋಕ್ಷೋಪಾಯವೆಂಬ ಬುದ್ಧಿಯೇನೂ ಅವನಿಗಿರುವದಿಲ್ಲ, ಏಕೆಂದರೆ ಭಗವಂತನೇ ಆಯಾ ಸಾಧನೆಗಳಿಂದ ತುಷ್ಟನಾಗಿ ಮೋಕ್ಷಕ್ಕೆ ನಿಜವಾದ ಉಪಾಯನಾಗಿರುತ್ತಾನೆ – ಎಂಬುದನ್ನು ಅವನು ಬಲ್ಲನು. ಆದ್ದರಿಂದ ಅವನು ಏತರ ಅಂಜಿಕೆಯೂ ಇಲ್ಲದೆ ಭಗವಂತನೊಬ್ಬನನ್ನೇ ನಂಬಿರುತ್ತಾನೆ.

ಈ ರೀತಿಯಲ್ಲಿ ಪರಮೈಕಾಂತಭಕ್ತಿಯಿಂದ ಭಗವಂತನ ದಾಸ್ಯದಲ್ಲಿಯೇ ರಮಣ ಮಾಡುತ್ತಿದ್ದು ಜ್ಞಾನಿಯು ಆತನ ಸ್ಥಾನವನ್ನೇ ಪಡೆಯುವನು.

ಭಗವದ್ಗೀತಾಶಾಸ್ತ್ರಕ್ಕೆ ಇದೇ ಮುಖ್ಯವಾದದ್ದು ಎಂದರೆ ಭಗವಂತನೇ ಪರಮೋಪಾಯವೆಂದು ನೆರೆನಂಬಿ ಆತನನ್ನೇ ಉಪಾಸನೆಮಾಡುವದೆಂಬ ನಿಷ್ಠೆಯೇ ಇಲ್ಲಿ ಮುಖ್ಯವಾಗಿ ಪ್ರತಿಪಾದಿತವಾಗಿದೆ. ಇಂಥ ಅನುಷ್ಠಾನವನ್ನು ಮಾಡುತ್ತಿರುವ ಜ್ಞಾನಿಯೇ ಮುಖ್ಯಭಕ್ತನೆಂದು ತಿಳಿಸುವದೂ ಇಂಥವನಿಗೆ ಮಾತ್ರ ಪರಮ ಪುರುಷಾರ್ಥವು ದೊರಕುವದೆಂದು ತಿಳಿಸುವದೂ ಈ ಶಾಸ್ತ್ರದ ಮುಖ್ಯೋದ್ದೇಶವಾಗಿರುತ್ತದೆ. ಇದೇ ಗೀತಾಶಾಸ್ತ್ರದ ಅರ್ಥದ ಸಂಗ್ರಹವು.

# ಶ್ರೀಮನ್ಮಧ್ವಾಚಾರ್ಯರ ಸಿದ್ಧಾಂತ

ಶ್ರೀಮಧ್ವಾಚಾರ್ಯರವರು ರಚಿಸಿರುವ ಮೂವತ್ತೇಳು ಗ್ರಂಥಗಳಲ್ಲಿ ಪ್ರತಿಪಾದಿಸಿರುವ ಸಿದ್ಧಾಂತಕ್ಕೆ ಮಧ್ವಸಿದ್ಧಾಂತವೆಂದು ಹೆಸರು. ಇವರು ದ್ವೈತ ಸಿದ್ಧಾಂತವನ್ನೇ ಬೋಧಿಸಿರುತ್ತಾರಾದರೂ ಉಳಿದ ದ್ವೈತಸಿದ್ಧಾಂತಗಳಿಗೂ ಇವರ ಮತಕ್ಕೂ ಇರುವ ತಾರತಮ್ಯವನ್ನು ಸ್ಫುಟವಾಗಿ ತೋರಿಸುವದಕ್ಕಾಗಿ ಈ ದರ್ಶನವನ್ನು ಮಧ್ವಮತ, ಪೂರ್ಣಪ್ರಜ್ಞದರ್ಶನ- ಎಂದು ಮುಂತಾಗಿ ಈ ಆಚಾರ್ಯರ ಹೆಸರಿನ ಸಂಬಂಧವನ್ನಿಟ್ಟೇ ಕರೆಯುವದು ವಾಡಿಕೆಯಾಗಿದೆ.

ಶ್ರೀಮನ್ಮಧ್ವಮತದಲ್ಲಿ ತತ್ತ್ವವನ್ನು ಸ್ವತಂತ್ರ, ಅಸ್ವತಂತ್ರ - ಎಂದು ಎರಡು ದೊಡ್ಡ ಭಾಗವಾಗಿ ವಿಂಗಡಿಸಿರುತ್ತದೆ. ಶ್ರೀಹರಿಯೇ ಸ್ವತಂತ್ರನು, ಮಿಕ್ಕದ್ದೆಲ್ಲವೂ ಆತನ ಅಧೀನವು. ಆತನು ಸತ್ಯಜ್ಞಾನಾನಂದಸ್ವರೂಪನು. ಆತನಿಗೆ ಮಾತ್ರ ಸ್ವತಂತ್ರವಾದ ಇರುವಿಕೆ; ದ್ರವ್ಯ, ಕರ್ಮ, ಕಾಲ - ಮುಂತಾದವುಗಳಿಗೆ ಆತನ ಅನುಗ್ರಹದಿಂದಲೇ ಇರುವಿಕೆ. ಆತನೊಬ್ಬನು ಮಾತ್ರ ನಿತ್ಯಜ್ಞಾನವುಳ್ಳವನು; ಚೇತನರಾದ ಜೀವರಿಗೆ ಇರುವಷ್ಟು ತಿಳಿವು ಆತನ ಅನುಗ್ರಹದಿಂದ. ಆತನಿಗಿರುವ ಅನಂತಸುಖವು ನಿತ್ಯಸಿದ್ಧವಾಗಿರುವದು; ಮಿಕ್ಕವರಿಗೆ ದೊರೆಯುವಷ್ಟು ವಿಷಯಸುಖವೂ ಮುಕ್ತಿಸುಖವೂ ಆತನ ಇಚ್ಛೆಯಿಂದಲೇ ದೊರೆಯುವವು. ಆತನು ನಿರಾಕಾರನು; ಎಂದರೆ ಅನಂತ ಆಕಾರಗಳುಳ್ಳವನು, ಇಂಥದ್ದೊಂದೆಂದು ಗೊತ್ತಾದ ಆಕಾರವಿರುವವನಲ್ಲ, ಮತ್ಸ್ಯ

ದ್ಯವತಾರಗಳನ್ನು ಮಾಡಿದಾಗ ಸಾಮಾನ್ಯರ ಕಣ್ಣಿಗೆ ಭೌತಿಕದೇಹವುಳ್ಳವನಾಗಿ ಕಂಡರೂ ಅವನು ಆಗಲೂ ಸಚ್ಚಿದಾನಂದ ಸ್ವರೂಪನಾಗಿಯೇ ಇರುತ್ತಾನೆ. ಹೀಗೆ ಸರ್ವಥಾ ಸ್ವತಂತ್ರನಾಗಿ, ಸರ್ವಜ್ಞನಾಗಿ, ಸರ್ವಶಕ್ತನಾಗಿ, ಸಕಲಗುಣಪರಿಪೂರ್ಣನಾಗಿ, ಸರ್ವ ದೋಷವರ್ಜಿತನಾಗಿರುವ ಶ್ರೀಹರಿಗೆ ಮಹಾಲಕ್ಷ್ಮಿ, ಬ್ರಹ್ಮ, ರುದ್ರ – ಮುಂತಾದವರು ಯಾರೂ ಸಮರಲ್ಲ; ಆತನಿಗಿಂತ ಅಧಿಕರಾಗಿರುವವರಂತೂ ಇಲ್ಲವೇ ಇಲ್ಲ.

ಹೀಗೆ ಸರ್ವೋತ್ತಮನಾದ ಶ್ರೀಹರಿಗೆ ಚಿತ್ಪ್ರಕೃತಿಯೆಂದೂ ಜಡಪ್ರಕೃತಿಯೆಂದೂ ಎರಡು ಪ್ರಕೃತಿಗಳಿರುವವು. ಚೇತನಪ್ರಕೃತಿಗೆ ಲಕ್ಷ್ಮಿಯೆಂದು ಹೆಸರು. ಲಕ್ಷ್ಮಿಯು ಸರ್ವ ವ್ಯಾಪಿನಿಯಾಗಿಯೂ ನಿತ್ಯಳಾಗಿಯೂ ಇರುವಳು. ಈಕೆಯೇ ಶ್ರೀ, ಭೂ, ದುರ್ಗಾ– ಎಂಬ ಹೆಸರುಗಳಿಂದ ಸತ್ತ್ವರಜಸ್ತಮೋಗುಣಗಳಿಗೆ ಅಭಿಮಾನಿದೇವತೆಯಾಗಿರುವಳು. ಈಕೆಯು ಸರ್ವಜೀವರಲ್ಲಿಯೂ ಇದ್ದುಕೊಂಡು ಅವರು ಪ್ರಾಣವನ್ನು ಧರಿಸುವದಕ್ಕೆ ಸಹಾಯಕಳಾಗಿರುತ್ತಾಳೆ. ವಿಷ್ಣುವಿನ ಜಡಪ್ರಕೃತಿಯು ತ್ರಿಗುಣಾತ್ಮಕವಾಗಿರುವದು. ಇದೂ ಚಿತ್ಪ್ರಕೃತಿಯಂತೆಯೇ ನಿತ್ಯವಾಗಿದ್ದರೂ ಇದಕ್ಕೆ ರೂಪಾಂತರವನ್ನು ಪಡೆಯುವದೆಂಬ ಮಾರ್ಪಾಡು ಉಂಟು. ಈ ಎರಡು ಪ್ರಕೃತಿಗಳೂ ಶ್ರೀಹರಿಯ ಅಧೀನದಲ್ಲಿಯೇ ಇರುವವು; ಈ ಪ್ರಕೃತಿಗಳ ಮೂಲಕವಾಗಿ ಆತನು ತನ್ನ ಸಂಕಲ್ಪದಿಂದಲೇ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮ, ಅಜ್ಞಾನ, ಜ್ಞಾನ, ಬಂಧ, ಮೋಕ್ಷ, ಸುಖ, ದುಃಖ, ತೋರಿಕೊಳ್ಳದಂತೆ ಮೋಲುಸುಕು, ತೋರಿಕೊಳ್ಳುವಂತೆ ಬೆಳಕು – ಇವುಗಳಿಗೆಲ್ಲ ಕಾರಣ ನಾಗಿರುವನು.

ಶ್ರೀಹರಿಯು ಜಗತ್ತಿನ ಸೃಷ್ಟಿಗೆ ನಿಮಿತ್ತಕಾರಣನೇ ಹೊರತು ಉಪಾದಾನ ಕಾರಣನಲ್ಲ; ಎಂದರೆ ಜಗತ್ತನ್ನು ಸೃಷ್ಟಿಮಾಡುವದಕ್ಕೆ ಆತನು ಸಂಕಲ್ಪವನ್ನು ಮಾಡುವನೇ ಹೊರತು ತಾನೇ ಜಗತ್ತಾಗಿ ಮಾರ್ಪಡುವದಿಲ್ಲ, ಜಗತ್ತಿಗೆ ಆತನ ಜಡಪ್ರಕೃತಿಯೇ ಉಪಾದಾನಕಾರಣವು. ಶ್ರೀಹರಿಯ ಸಂಕಲ್ಪದಂತೆ ಈ ಪ್ರಕೃತಿಯು ಮಹತ್ತು, ಅಹಂಕಾರ, ಬುದ್ಧಿ, ಮನಸ್ಸು, ಇಂದ್ರಿಯಗಳು, ತನ್ಮಾತ್ರೆಗಳು, ಪಂಚಭೂತಗಳು– ಎಂಬ ಬೇರೆ ಬೇರೆಯ ತತ್ತ್ವಗಳ ರೂಪನ್ನು ಪಡೆಯುವದು. ಪರಮಾತ್ಮನೇ ಜಗದ್ರೂಪವಾಗಿ ಪರಿಣಮಿಸುವನೆಂದು ಕೆಲವರು ಹೇಳುತ್ತಾರೆ; ಆದರೆ ಆತನು ನಿರ್ವಿಕಾರನಾದ್ದರಿಂದ ಅವರ ಮತವನ್ನು ಒಪ್ಪುವದಕ್ಕಿಲ್ಲವಾಗಿದೆ. ನಿತ್ಯವಾದ ಪ್ರಕೃತಿಯೂ ಅನಿತ್ಯವಾದ ಅದರ ವಿಕಾರಗಳೂ ಎರಡೂ ಆ ಭಗವಂತನ ಅಧೀನದಲ್ಲಿಯೇ ಇರುವವು. ಪ್ರಕೃತಿಯೊಂದೇ ಅಲ್ಲದೆ ಅವ್ಯಾಕೃತಾಕಾಶ, ಕಾಲ, ವೇದ – ಈ ಅಚೇನಪದಾರ್ಥಗಳೂ ಸಕಲಚೇತನರೂ

ನಿತ್ಯರೆನಿಸುವರು. ನಿತ್ಯವಾಗಲಿ, ಅನಿತ್ಯವಾಗಲಿ, ಚೇತನಾಚೇತನಾತ್ಮಕವಾದ ಸಕಲ ಪ್ರಪಂಚವೂ ಶ್ರೀಹರಿಯ ಸಂಕಲ್ಪಕ್ಕೆ ಒಳಪಟ್ಟೇ ಇರುವದರಿಂದ ಆತನೇ ಜಗತ್ತಿನ ಜನ್ಮಾದಿಗಳಿಗೆ ಕಾರಣನೆಂದೂ ಯಾರಿಗೂ ಅಧೀನವಾಗಿರದ ಸ್ವತಂತ್ರತತ್ತ್ವವೆಂದೂ ಎನಿಸಿಕೊಳ್ಳುವನು.

ಶ್ರೀಹರಿಯ ಸತ್ಯಸಂಕಲ್ಪದಿಂದ, ಸತ್ಯವಾದ ಪ್ರಕೃತಿಗಳ ಮೂಲಕ ಸೃಷ್ಟವಾಗಿರುವ ಈ ಜಗತ್ತೂ ಸತ್ಯವೇ ಆಗಿರುತ್ತದೆ. ಈ ಜಗತ್ತು ಸತ್ಯವಲ್ಲವೆಂದು ಕೆಲವರು ಹೇಳುತ್ತಾರೆ. ಈ ಅಭಿಪ್ರಾಯವು ಸರಿಯಲ್ಲ. ಏಕೆಂದರೆ ಪ್ರತ್ಯಕ್ಷ ಪ್ರಮಾಣದಿಂದಲೂ ಅನುಮಾನ ಪ್ರಮಾಣದಿಂದಲೂ ಈ ಜಗತ್ತು ಸತ್ಯವೆಂದು ತಿಳಿಯಬರುತ್ತದೆ. ಈ ಪ್ರತ್ಯಕ್ಷವು ಭ್ರಾಂತಿಯೆನ್ನುವದಕ್ಕೂ ಇಲ್ಲ; ಏಕೆಂದರೆ ಜಗತ್ತು ಅರ್ಥಕ್ರಿಯೆಯನ್ನು ಉಂಟುಮಾಡುತ್ತಿರುವದು. ಭ್ರಾಂತಿಯಿಂದ ಕಾಣುವ ವಸ್ತುಗಳು ತೋರುವ ಕಾಲದಲ್ಲಿ ಅವುಗಳಿಂದ ಅರ್ಥಕ್ರಿಯೆಯುಂಟಾಗುವದಿಲ್ಲ; ಎಂದರೆ ಅವುಗಳ ಯೋಗ್ಯತೆಗೆ ತಕ್ಕ ಕೆಲಸಕ್ಕೆ ಉಪಯೋಗವಾಗುವದಿಲ್ಲ. ಉದಾಹರಣೆಗೆ, ಕಲ್ಪಿತವಾದ ಹೋಳಿಗೆಯನ್ನು ತಿಂದು ಹಸಿವನ್ನು ಅಡಗಿಸಿಕೊಳ್ಳುವದಕ್ಕೆ ಯಾರಿಗೂ ಆಗುವದಿಲ್ಲ. ಆದರೆ ಈ ಜಗತ್ತು ಹಾಗಲ್ಲ. ಇದರಲ್ಲಿರುವ ಪ್ರತಿಯೊಂದು ವಸ್ತುವೂ ತನ್ನ ತನ್ನ ಯೋಗ್ಯತೆಗೆ ತಕ್ಕಂತೆ ಕೆಲಸಕ್ಕೆ ಬರುವದು; ಆದ್ದರಿಂದ ಇದು ಸತ್ಯವೇ. ಪ್ರತ್ಯಕ್ಷ ಸಿದ್ಧವಾದ ವಸ್ತುವಿಗೆ ಬಾಧೆಯಾದ ಹೊರತು ಅದನ್ನು ಯಾರೂ ಭ್ರಾಂತಿಯೆನ್ನುವದಿಲ್ಲ. ಪ್ರಪಂಚವು ತೋರದೆ ಹೋಗಿ 'ನಾವು ಸುಮ್ಮಸುಮ್ಮನೆ ಪ್ರಪಂಚವೆಂದು ತಪ್ಪಾಗಿ ತಿಳಿದುಕೊಂಡೆವು' ಎಂದು ಯಾರಿಗೂ ಜ್ಞಾನವಾಗುವದಿಲ್ಲ. ಆದ್ದರಿಂದಲೂ ಜಗತ್ತು ಸತ್ಯವೇ. ಇದಲ್ಲದೆ ಈ ಜಗತ್ತು ಭ್ರಾಂತಿಕಲ್ಪಿತವೆಂದಾದರೆ ಕಲ್ಪಿತವಲ್ಲದೆ ಸತ್ಯವಾಗಿರುವ ಮತ್ತೊಂದು ಪ್ರಪಂಚವಿದೆಯೆಂದು ಒಪ್ಪಿಕೊಳ್ಳಬೇಕಾಗುವದು; ಏಕೆಂದರೆ ಕಲ್ಪನೆ ಮಾಡಿಕೊಳ್ಳುವದಕ್ಕೆ ಆಧಾರವಾಗಿ ಮತ್ತೊಂದು ಸತ್ಯವಸ್ತುವು ಯಾವಾಗಲೂ ಇರುವದು. ಆದ್ದರಿಂದ ಜಗತ್ತು ಸತ್ಯವಾಗಿ ಕಾಣುವದರಿಂದ ಅದನ್ನು ಸತ್ಯವೆಂದು ಭಾವಿಸುವದು ಸರಿಯೇ ಹೊರತು, ಯಾವ ಯುಕ್ತಿಯೂ ಇಲ್ಲದೆ ಇದು ಮಿಥ್ಯೆಯೆಂದು ಹೇಳುವದು ನ್ಯಾಯವಲ್ಲ. ಶಾಸ್ತ್ರದಲ್ಲಿಯೂ ಜಗತ್ತು ಸತ್ಯವೆಂದೇ ಹೇಳಿದೆ. ಆದ್ದರಿಂದ ಜಗತ್ತು ಸತ್ಯವೇ.

ಜಗತ್ತಿನಲ್ಲಿ ಭಾವ, ಅಭಾವ –ಎಂದು ಎರಡು ಬಗೆಯ ಪದಾರ್ಥಗಳಿರುವವು. ಅಭಾವವು ಪ್ರಾಗಭಾವ, (ವಸ್ತುವು ಹುಟ್ಟುವದಕ್ಕೆ ಮುಂಚಿನ ಅಭಾವ), ಪ್ರಧ್ವಂಸಾಭಾವ (ಹಾಳಾದ ಮೇಲಿನ ಅಭಾವ), ಸದಾಭಾವ (ಎಂದೆಂದಿಗೂ ಇಲ್ಲದ್ದು) ಎಂದು

ಮೂರು ವಿಧ. ಭಾವಪದಾರ್ಥಗಳು ಚೇತನ, ಜಡ – ಎಂದು ಎರಡು ಬಗೆ. ಜೀವ, ಈಶ್ವರ – ಇಬ್ಬರೂ ಚೇತನರೇ ಆದರೂ ಜೀವನು ಕಿಂಚಿಜ್ಞನು, ಈಶ್ವರನು ಸರ್ವಜ್ಞನು; ಜೀವನು ಅಪೂರ್ಣನು, ಈಶ್ವರನು ಪೂರ್ಣನು; ಜೀವನು ಅಸ್ವತಂತ್ರನು, ಈಶ್ವರನು ಸ್ವತಂತ್ರನು. ಹೀಗೆ ಇವರಿಬ್ಬರಿಗೂ ಭೇದವಿದೆ. ಚೇತನರು ಅನೇಕರು, ಇವರೆಲ್ಲರೂ ಮಹಾ ವಿಷ್ಣುವಿಗೆ ಅಧೀನರೆ, ಆದರೆ ಲಕ್ಷ್ಮಿಯು ನಿತ್ಯಮುಕ್ತಳು, ಮಿಕ್ಕವರೆಲ್ಲರೂ ಸಂಸಾರ ಸಂಬಂಧವುಳ್ಳ ಜೀವರು. ಜೀವರೆಲ್ಲ ಸಂಸಾರಿಗಳೆಂಬ ವಿಷಯದಲ್ಲಿ ಸಮಾನರಾದರೂ ಅವರಲ್ಲಿಯೂ ಮುಂದೆ ತಿಳಿಸುವ ರೀತಿಯಲ್ಲಿ ಎಷ್ಟೋ ತಾರತಮ್ಯಗಳು ಇರುವವು. ಆದ್ದರಿಂದ ಜೀವರುಗಳಿಗೂ ಒಬ್ಬರೊಬ್ಬರಿಗೆ ಭೇದವುಂಟು. ಚೇತನವಲ್ಲವೆಂಬ ವಿಷಯ ದಲ್ಲಿಯೂ ಪರಮಾತ್ಮನ ಅಧೀನದಲ್ಲಿರುವವೆಂಬ ವಿಷಯದಲ್ಲಿಯೂ ಜಡವಸ್ತು ಗಳೆಲ್ಲವೂ ಒಂದನ್ನೊಂದು ಹೋಲುವವಾದರೂ ಇವುಗಳೊಳಗೂ ಎಷ್ಟೋ ತಾರತಮ್ಯ ವಿರುವದು. ಉದಾಹರಣೆಗೆ ಕೆಲವು ನಿತ್ಯ, ಕೆಲವು ಅನಿತ್ಯ, ಕೆಲವು ನಿತ್ಯಾನಿತ್ಯ. ಜೀವಕ್ಕೂ ಜಡಕ್ಕೂ ಮತ್ತು ಈಶ್ವರನಿಗೂ ಜಡಕ್ಕೂ ಇರುವ ಭೇದವಂತೂ ಸ್ಪಷ್ಟವಾಗಿಯೇ ಇದೆ. ಈ ಐದು ಬಗೆಯ ಭೇದಗಳೂ ಪರಮಾರ್ಥವಾಗಿವೆ; ಇತರ ವಾದಿಗಳು ಹೇಳುವಂತೆ ಉಪಾಧಿಯಿಂದಲಾಗಲಿ ಅಜ್ಞಾನದಿಂದಲಾಗಲಿ ಭೇದವು ಆಗಿರುವದಿಲ್ಲ, ಭೇದ ವೆಂಬುದು ಧರ್ಮಿಯ ಸ್ವರೂಪವೇ ಆಗಿರುವದರಿಂದ ಬರಿಯ ಭೇದವನ್ನು ಯಾರೂ ಕಂಡಿಲ್ಲವೆಂಬ ಕುತರ್ಕಕ್ಕೆ ಅವಕಾಶವಿರುವದಿಲ್ಲ.

ಲಕ್ಷ್ಮಿಯೊಬ್ಬಳನ್ನು ಬಿಟ್ಟರೆ ಮಿಕ್ಕ ಪರತಂತ್ರಚೇತನರೆಲ್ಲ ಜೀವರೆನಿಸುವರೆಂದು ಮೇಲೆಯೇ ತಿಳಿಸಿದೆಯಷ್ಟೆ, ಈ ಜೀವರಲ್ಲಿ ಕೆಲವರು ಮುಕ್ತರು. ಕೆಲವರು ಸಂಸಾರಿ ಗಳು, ಮುಕ್ತರಲ್ಲಿ ಕೆಲವರು ದೇವತೆಗಳು, ಮತ್ತೆ ಕೆಲವರು ಋಷಿಗಳು, ಬೇರೆ ಕೆಲವರು ಪಿತೃಗಳು, ಇನ್ನೂ ಕೆಲವರು ಚಕ್ರವರ್ತಿಗಳು, ಉಳಿದ ಕೆಲವರು ಸಾಮಾನ್ಯ ಮನುಷ್ಯರು. ಸಂಸಾರಿಗಳಲ್ಲಿಯೂ ಕೆಲವರಿಗೆ ಮುಕ್ತಿಯನ್ನು ಹೊಂದುವ ಯೋಗ್ಯತೆ ಇರುವದು. ಮತ್ತೆ ಕೆಲವರಿಗೆ ಅಂಧರ ತಮಸ್ಸೆಂಬ ನಿತ್ಯವಾದ ಕೇವಲ ದುಃಖಮಯ ವಾದ ಅಧೋಗತಿಯನ್ನು ಪಡೆಯುವ ಯೋಗ್ಯತೆಯಿರುವದು. ಇನ್ನೂ ಕೆಲವರು ಎಂದೆಂದಿಗೂ ಈ ಸಂಸಾರದಲ್ಲಿಯೇ ಇರತಕ್ಕವರಾಗಿರುವರು. ಹೀಗೆಲ್ಲ ಇರುವದಕ್ಕೆ ಅವರವರ ಸ್ವರೂಪ ಯೋಗ್ಯತೆಯೇ ಕಾರಣವು. ಹೇಗೆಂದರೆ ಯಾವ ಜೀವರು ಪರಮಾತ್ಮನಂತೆ ಸಚ್ಚಿದಾ ನಂದಸ್ವರೂಪರಾಗಿರುವರೋ ಅವರು ಮುಕ್ತಿಗೆ ತಕ್ಕವರು; ಯಾರು ದುಃಖಸ್ವರೂಪ ರಾಗಿರುವರೋ ಅವರು ಅಂಧಂತಮಸ್ಸಿಗೆ ತಕ್ಕವರು; ಯಾರು

ಸುಖದುಃಖಸ್ವರೂಪರಾಗಿರುವರೋ ಅವರು ನಿತ್ಯಸಂಸಾರಕ್ಕೆ ತಕ್ಕವರು. ಜೀವರೆಲ್ಲರೂ ಅಣುಗಳು, ಜ್ಞಾನಸ್ವರೂಪರು, ಜ್ಞಾನವೆಂಬ ಗುಣಗಳುಳ್ಳವರು; ಇವರು ಕರ್ತೃ ಸ್ವರೂಪರು ಎಂದರೆ ಕರ್ಮವನ್ನು ಮಾಡಿ ಅದಕ್ಕೆ ತಕ್ಕ ಫಲವನ್ನೂ ಲೋಕಾಂತರವನ್ನೂ ಅನುಭವಿಸುವವರು. ಜೀವರ ಸಚ್ಚಿದಾನಂದ ಸ್ವರೂಪವೂ ಕರ್ತೃತ್ವವೂ ಕರ್ಮಕ್ಕೆ ತಕ್ಕ ಫಲವನ್ನು ಅವರು ಅನುಭವಿಸುವದೆಂಬುದೂ ಪರಮಾತ್ಮನ ಸಂಕಲ್ಪಕ್ಕೇ ಒಳಪಟ್ಟಿರು ವದು. ಜೀವರನ್ನು ಪರಮಾತ್ಮನ ಅಂಶವೆಂದು ಶಾಸ್ತ್ರಗಳಲ್ಲಿ ಹೇಳಿದೆಯಾದರೂ ಮತ್ಸ್ಯಾದಿಗಳಂತೆ ಇವರು ಪರಮಾತ್ಮನ ಅಂಶಗಳಲ್ಲ; ಮತ್ಸ್ಯಾದಿಗಳು ಪರಮಾತ್ಮನ ಸ್ವರೂಪಾಂಶ ಜೀವರು ಭಿನ್ನಾಂಶ; ಸ್ವಲ್ಪಮಟ್ಟಿಗೆ ಎಂದರೆ ಸಚ್ಚಿದಾನಂದ ಸ್ವರೂಪರಾಗಿ ರುವರೆಂಬಷ್ಟು ಮಟ್ಟಿಗೆ ಹೋಲಿಕೆ ಇರುವದರಿಂದ ಇವರನ್ನೂ ಅಂಶರೆಂದು ಕರೆದಿದೆ.

ಜೀವರ ನಿಜವಾದ ಸ್ವರೂಪದಲ್ಲಿ ತಾರತಮ್ಯವಿರುವದರಿಂದಲೇ ಅವರಲ್ಲಿ ಜ್ಞಾನ, ಕ್ರಿಯೆ, ಆನಂದ, ಬಲ – ಮುಂತಾದವುಗಳಲ್ಲಿ ಹೆಚ್ಚು ಕಡಿಮೆಯು ಕಂಡುಬರುವುದು. ಸಂಸಾರದ ಸ್ಥಿತಿಯಲ್ಲಿ ಜೀವರ ನಿಜವಾದ ಸ್ವರೂಪದ ಮೇಲೆ ಪ್ರಕೃತಿಯ ಮುಸುಕು ಮುಚ್ಚಿಕೊಂಡಿರುವದರಿಂದ ಅದು ವ್ಯಕ್ತವಾಗಿ ತೋರಿಕೊಳ್ಳುವದಿಲ್ಲ. ಸ್ಥೂಲದೇಹ, ಲಿಂಗ ದೇಹ, ಅಜ್ಞಾನ, ಕಾಮ, ಕರ್ಮ – ಇವುಗಳು ಅನಾದಿಯಾಗಿ ಜೀವರನ್ನು ಪರಮಾತ್ಮನ ಇಚ್ಛೆಯಿಂದ ಮುಸುಕಿಕೊಂಡಿರುವವು; ಅವುಗಳಿಂದಾಗಿರುವ ಬಂಧವು ಆ ಶ್ರೀಹರಿಯ ಇಚ್ಛೆಯಿಂದಲೇ ತೊಲಗಬೇಕಾಗಿದೆ. ಆದ್ದರಿಂದ ಭಗವಂತನ ಪ್ರಸಾದವನ್ನು ಪಡೆಯು ವದಕ್ಕೆ ಎಲ್ಲರೂ ಪ್ರಯತ್ನಿಸಬೇಕು. ಭಗವಂತನ ಸ್ವರೂಪವನ್ನು ತಿಳಿದು ಆತನಲ್ಲಿ ಅನನ್ಯವಾದ ಭಕ್ತಿಯನ್ನು ಬೆಳೆಯಿಸಿಕೊಂಡು ಆತನ ಪ್ರಸಾದದಿಂದ ಮುಕ್ತಿಯನ್ನು ಪಡೆಯಲು ಎಲ್ಲಾ ವರ್ಣದವರಿಗೂ ಎಲ್ಲಾ ಆಶ್ರಮದವರಿಗೂ ಅಧಿಕಾರವುಂಟು. ಹೀಗಿ ದ್ದರೂ ಕೆಲವರಿಗೆ ಭಗವಂತನಲ್ಲಿ ಭಕ್ತಿಯೇ ಇರುವದಕ್ಕೂ ಕೆಲವರಿಗೆ ಆತನಲ್ಲಿ ದ್ವೇಷವೇ ಇರುವದಕ್ಕೂ ಅವರವರ ಸ್ವರೂಪಯೋಗ್ಯತೆಯೇ ಕಾರಣವು. ಈ ಯೋಗ್ಯತೆಯ ತಾರತಮ್ಯಕ್ಕೆ ತಕ್ಕಂತೆ ಭಕ್ತಿದ್ವೇಷಗಳ ತಾರತಮ್ಯವೂ ಮುಕ್ತಿಯಲ್ಲಿ ಆನಂದತಾರತಮ್ಯವೂ ತಮಸ್ಸಿನಲ್ಲಿ ದುಃಖತಾರತಮ್ಯವೂ ಆಗುವವು.

ಭಕ್ತಿಯಿಂದ ಪರಮಾತ್ಮನ ಅನುಗ್ರಹವನ್ನು ಪಡೆದುಕೊಂಡವರು ಸಂಚಿತ ಕರ್ಮವನ್ನು ನಾಶಗೊಳಿಸಿಕೊಂಡು ಪ್ರಾರಬ್ಧಕರ್ಮದ ಫಲವನ್ನು ಅನುಭವಿಸಿದ ಮೇಲೆ ಸುಷುಮ್ನಾನಾಡಿಯಿಂದ ಹೊರಟು ಅರ್ಚಿರಾದಿಮಾರ್ಗದಿಂದ ತಮ್ಮ ತಮ್ಮ ಯೋಗ್ಯತಾ ನುಸಾರವಾಗಿ ವೈಕುಂಠ, ಅನಂತಾಸನ, ಶ್ವೇತದ್ವೀಪ – ಮುಂತಾದ ಪರಮಾತ್ಮನ ಸ್ಥಾನ

ಗಳನ್ನು ತಲುಪಿ ಅಲ್ಲಿ ಶಾಶ್ವತವಾಗಿ ತಮ್ಮ ಸ್ವರೂಪಸುಖವನ್ನು ಅನುಭವಿಸುತ್ತಿರುವರು. ಮುಕ್ತರು ಕರ್ಮವನ್ನೂ ಭಕ್ತಿಯನ್ನೂ ಮಾಡುತ್ತಲೇ ಇರುವರು. ಅವರಿಗೆ ಬೇಕಾದದ್ದೆಲ್ಲ ಸಂಕಲ್ಪ ಮಾತ್ರದಿಂದ ದೊರೆಯುವದಾದ್ದರಿಂದ ಕರ್ಮಭಕ್ತಿಗಳಿಂದ ಅವರು ಹೊಸದಾಗಿ ಪಡೆದುಕೊಳ್ಳಬೇಕಾದುದೇನೂ ಇರುವದಿಲ್ಲ, ಆದರೂ ಕರ್ಮಭಕ್ತಿಗಳನ್ನು ಮಾಡುವದೇ ಅವರಿಗೊಂದು ಆನಂದವಾಗಿರುವದು. ಮುಕ್ತರಲ್ಲಿ ಯಾರಿಗೂ ಶ್ರೀಹರಿಸಮವಾದ ಜ್ಞಾನವಾಗಲಿ, ಆನಂದವಾಗಲಿ, ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುವ ಸ್ವಾತಂತ್ರ್ಯವಾಗಲಿ ಎಂದಿಗೂ ಬರುವದಿಲ್ಲ; ಅವರು ತಮ್ಮತಮ್ಮ ಯೋಗ್ಯತಗೆ ಮೀರಿದ ಆನಂದವನ್ನು ಬಯಸುವದೂ ಇಲ್ಲ.

ಪ್ರತ್ಯಕ್ಷ, ಅನುಮಾನ, ಶಬ್ದ - ಎಂಬ ಮೂರು ಪ್ರಮಾಣಗಳನ್ನು ಈ ಮತದಲ್ಲಿ ಒಪ್ಪಿಕೊಂಡಿರುತ್ತದೆ. ವಿಷ್ಣುವೇ ಸರ್ವೋತ್ತಮನೆನ್ನುವದಕ್ಕೂ ಆತನೇ ಸ್ವತಂತ್ರನೆನ್ನುವದಕ್ಕೂ ಆತನು ಜೀವಜಗತ್ತುಗಳೆರಡಕ್ಕಿಂತಲೂ ಬೇರೆಯಾಗಿರುವನೆನ್ನುವದಕ್ಕೂ ಶ್ರುತಿಯೇ ಪ್ರಮಾಣವು. ಯುಕ್ತಿಯನ್ನೂ ಈ ಶ್ರುತಿಗೆ ಸಹಾಯವಾಗಿ ಉಪಯೋಗಿಸಬಹುದು. "ಇದೆಲ್ಲವೂ ಬ್ರಹ್ಮವು" ಎಂಬುದೇ ಮುಂತಾದ ಶ್ರುತಿಗಳಲ್ಲಿ ಬ್ರಹ್ಮಕ್ಕೂ ಜಗತ್ತಿಗೂ ಐಕ್ಯವನ್ನು ಹೇಳಿರುವಂತೆ ತೋರುವದು; ಆದರೆ "ಇದೆಲ್ಲವೂ ಬ್ರಹ್ಮವು" ಎಂಬ ವಚನಕ್ಕೆ ಈ

ಜಗತ್ತೆಲ್ಲವೂ ಬ್ರಹ್ಮವೆಂದು ಅರ್ಥವಲ್ಲ, ಸರ್ವಗುಣಗಳೂ ಬ್ರಹ್ಮದಲ್ಲಿರುವದರಿಂದಲೂ ಸಕಲ ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುವ ಸ್ವಾತಂತ್ರ್ಯವು ಬ್ರಹ್ಮದಲ್ಲಿಯೇ ಇರುವದರಿಂದಲೂ ಸರ್ವವೂ ಬ್ರಹ್ಮವೆಂದು ಹೇಳಿದೆ. ಇದರಂತೆ 'ಅದೇ ನೀನು', 'ನಾನು ಬ್ರಹ್ಮವು' ಮುಂತಾದ ವಚನಗಳು ಜೀವಬ್ರಹ್ಮೈಕ್ಯವನ್ನು ಹೇಳುವಂತೆ ತೋರಿದರೂ ಅವಕ್ಕೆ ಅದು ತಾತ್ಪರ್ಯವಲ್ಲ; ಬ್ರಹ್ಮಗುಣಗಳೇ ಜೀವನಲ್ಲಿ ಸಾರವಾಗಿರುವದರಿಂದ ಜೀವನನ್ನು ಬ್ರಹ್ಮವೆಂದು ಈ ಶ್ರುತಿಗಳು ಹೇಳುತ್ತವೆ. ವೇದದಲ್ಲಿರುವ ಪ್ರತಿಯೊಂದು ವಾಕ್ಯಕ್ಕೂ ಮೂರು ಮೂರು ಅರ್ಥವಿರುವದು. ಅವುಗಳಲ್ಲಿ ಒಂದು ಯಾವಾಗಲೂ ವಿಷ್ಣುವನ್ನೇ ಬೋಧಿಸುವದು. ಶ್ರೀಹರಿಗೆ ವಿಷ್ಣು, ನಾರಾಯಣ, ವಾಸುದೇವ, ಬ್ರಹ್ಮ, ಈಶ್ವರ, ಪರಮಾತ್ಮ, ಭಗವಂತನ - ಮುಂತಾದ ಅನೇಕ ಹೆಸರುಗಳಿರುವದಲ್ಲದೆ, ಸಕಲ ಶಬ್ದಗಳಿಗೂ ಪರಮಮುಖ್ಯವೃತ್ತಿಯಿಂದ ಆತನೇ ವಾಚ್ಯನಾಗಿರುವನೆಂದು ಶ್ರುತಿಯು ಹೇಳುವದು. ಹೀಗೆ ಸರ್ವೋತ್ತಮನಾದ ವಿಷ್ಣುವನ್ನು ತಿಳಿಯುವದಕ್ಕೆ ವೇದವೇ ಪ್ರಮಾಣವೆಂಬುದು ಮಾತ್ರವಲ್ಲದೆ ವೇದವೆಲ್ಲವೂ ವಿಷ್ಣುವನ್ನೇ ಬೋಧಿಸುತ್ತದೆಯೆಂದೂ ತಿಳಿಯಬೇಕು.

ಖಖಖಖಖ

# ಶ್ರೀಮಧ್ವಾಚಾರ್ಯಭಾಷ್ಯಸಮೇತ ಈಶಾವಾಸ್ಯೋಪನಿಷತ್ತು

ಶ್ರೀರಾಮಾನುಜಾಚಾರ್ಯರು ಉಪನಿಷತ್ತುಗಳಿಗೇ ಬೇರೆಯಾಗಿ ಭಾಷ್ಯವನ್ನು ಬರೆದಿಲ್ಲ. ಆದರೆ ಶ್ರೀ ಮಧ್ವಾಚಾರ್ಯರವರು ಶ್ರೀಶಂಕರಾಚಾರ್ಯರಂತೆಯೇ ಉಪನಿಷತ್ತುಗಳಿಗೂ ಭಾಷ್ಯವನ್ನು ಬರೆದಿರುತ್ತಾರೆ. ಶಾಂಕರಭಾಷ್ಯದೊಡನೆ ಹೋಲಿಸಿ ನೋಡಬೇಕೆನ್ನುವವರ ಸೌಕರ್ಯಕ್ಕಾಗಿ ಇಲ್ಲಿ ಈಶಾವಾಸ್ಯೋಪನಿಷತ್ತಿನ ಭಾಷ್ಯವನ್ನು ಕೊಟ್ಟಿರುತ್ತೇನೆ. ಭಾಷ್ಯವು ಬಹುಸಂಕ್ಷಿಪ್ತವಾಗಿರುವದರಿಂದ ಮೂಲವನ್ನೂ ಕೊಟ್ಟು ಕನ್ನಡಿಸಿರುತ್ತೇನೆ.

ಮಾಧ್ವಸಿದ್ಧಾಂತದಲ್ಲಿ ಒಂಬತ್ತು ಮುಖ್ಯ ಪ್ರಮೇಯಗಳನ್ನು ಲಕ್ಷ್ಯದಲ್ಲಿಡ ಬೇಕಾಗುವದು :

1. ವಿಷ್ಣುವೇ ಸರ್ವೋತ್ತಮನು, ಸರ್ವಸ್ವತಂತ್ರನು;
2. ಜಗತ್ತು ಸತ್ಯ ;
3. ಭೇದವು ಸತ್ಯ;
4. ಜೀವರುಗಳು ವಿಷ್ಣುವಿನ ಸೇವಕರು;
5. ಜೀವರಲ್ಲಿ ನೀಚೋಚ್ಚ ಭಾವವುಂಟು;
6. ಮುಕ್ತಿಯೆಂದರೆ ಜೀವನ ಸ್ವಾಭಾವಿಕವಾದ ಸುಖದ ಅನುಭವವು;
7. ಶುದ್ಧಭಕ್ತಿಯೇ ಮುಕ್ತಿಸಾಧನವು;
8. ಪ್ರತ್ಯಕ್ಷ, ಅನುಮಾನ, ಶಬ್ದ - ಎಂಬೀ ಮೂರೂ ಪ್ರಮಾಣಗಳು;
9. ವಿಷ್ಣುವನ್ನು ಶಾಸ್ತ್ರದಿಂದಲೇ ತಿಳಿಯತಕ್ಕದ್ದು.

## ಶ್ರೀಮಧ್ವಾಚಾರ್ಯರ ಮಂಗಲಾಚರಣೆ

ನಿತ್ಯಾನಿತ್ಯಜಗದ್ಧಾತ್ರೇ ನಿತ್ಯಾಯ ಜ್ಞಾನಮೂರ್ತಯೇ
ಪೂರ್ಣಾನನ್ದಾಯ ಹರಯೇ ಸರ್ವಯಜ್ಞಭುಜೇ ನಮಃ ॥೧॥
ಯಸ್ಮಾದ್ಬ್ರಹ್ಮೇಂದ್ರರುದ್ರಾದಿದೇವತಾನಾಂ ಶ್ರಿಯೋಽಪಿ ಚ ।
ಜ್ಞಾನಸ್ಫೂರ್ತಿಃ ಸದಾ ತಸ್ಮೈ ಹರಯೇ ಗುರವೇ ನಮಃ ॥೨॥

ನಿತ್ಯವಾಗಿಯೂ ಅನಿತ್ಯವಾಗಿಯೂ ಇರುವ ತತ್ತ್ವಗಳುಳ್ಳ ಈ ಜಗತ್ತನ್ನು ಪೋಷಿಸುವನಾಗಿಯೂ ನಿತ್ಯನಾಗಿಯೂ ಜ್ಞಾನವೆಂಬ ಶರೀರವುಳ್ಳವನಾಗಿಯೂ ಪರಿಪೂರ್ಣವಾದ ಆನಂದವುಳ್ಳವನಾಗಿಯೂ ಇರುವ ಸಮಸ್ತಯಜ್ಞಗಳನ್ನೂ ಭೋಗಿಸುವವನಾದ ಹರಿಗೆ ನಮಸ್ಕಾರ! ಬ್ರಹ್ಮ ಇಂದ್ರ, ರುದ್ರ – ಮೊದಲಾದ ದೇವತೆಗಳಿಗೂ ಲಕ್ಷ್ಮಿಗೂ ಕೂಡ ಜ್ಞಾನವು ಯಾವಾತನಿಂದಲೇ ಯಾವಾಗಲೂ ತೋರಿಕೊಳ್ಳುವದೋ ಆ ಹರಿ ಯೆಂಬ ಗುರುವಿಗೆ ನಮಸ್ಕಾರ!

**ಟಿಪ್ಪಣಿ :** ಜಗತ್ತು ನಿತ್ಯಾನಿತ್ಯರೂಪವಾಗಿರುವದೆಂಬ ವಿಷಯಕ್ಕೆ 'ತತ್ತ್ವಸಂಖ್ಯಾನದ 8ನೆಯ ಶ್ಲೋಕ, ತತ್ತ್ವವಿವೇಕದ 8ನೆಯ ಶ್ಲೋಕ – ಈ ಎರಡು ಶ್ಲೋಕಗಳನ್ನೂ ನೋಡಿರಿ. ಲಕ್ಷ್ಮೀದೇವಿಯು ನಿತ್ಯಮುಕ್ತಳು; ಆಕೆಗೆ ಬ್ರಹ್ಮಾದಿಗಳಂತೆ ಮತ್ತೊಬ್ಬರಿಂದ ಜ್ಞಾನವು ಬರಬೇಕಾದದ್ದಿರುವದಿಲ್ಲವಾದರೂ ಆಕೆಯ ಜ್ಞಾನವೂ ಹರಿಯ ಅಧೀನವೇ ಆದ್ದರಿಂದ ಹರಿಯೊಬ್ಬನೇ ಮೂಲಗುರು.

## ಭಾಷ್ಯಕಾರರ ಪೀಠಿಕೆ

## (ಭಾಷ್ಯ)

**ಸ್ವಾಯಂಭುವೋ ಮನುರೇತೈರ್ಮನ್ತ್ರೈ ರ್ಭಗವನ್ತಮಾಕೂತಿಸೂನು ಯಜ್ಞನಾಮಾನಂ ವಿಷ್ಣುಂ ತುಷ್ಟಾವ ।**

ಸ್ವಾಯಂಭುವ ಮನುವು ಈ ಮಂತ್ರಗಳಿಂದ ಆಕೂತಿಯ ಮಗನಾದ ಯಜ್ಞನೆಂಬ ಹೆಸರಿನ ವಿಷ್ಣುವನ್ನು ಸ್ತುತಿಸಿದನು:

**"ಸ್ವಾಯಂಭುವಃ ಸ್ವದೌಹಿತ್ರಂ ವಿಷ್ಣುಂ ಯಜ್ಞಾಭಿದಂ ಮನುಃ ।**
**ಈಶಾವಾಸ್ಯಾದಿಭಿರ್ಮನ್ತ್ರೈ ಸ್ತುಷ್ಟಾವಾವಹಿತಾತ್ಮನಾ ॥೧॥**
**ರಕ್ಷೋಭಿರುಗ್ರೈಃ ಸಂಪ್ರಾಪ್ತಃ ಖಾದಿತುಂ ಮೋಚಿತಃ ಸದಾ ।**
**ಸ್ತೋತ್ರಂ ಶ್ರುತ್ವೈವ ಯಜ್ಞೇನ ತಾನ್ ಹತ್ವಾ ವಧ್ಯತಾಂ ಗತಾನ್ ॥೨॥**
**ಪ್ರಾದಾದ್ಧಿ ಭಗವಾಂಸ್ತೇಷಾಮವಧ್ಯತ್ವಂ ಹರಃ ಪ್ರಭುಃ ।**
**ತೈರ್ವಧ್ಯತ್ವಂ ತಥಾನ್ಯೇಷಾಮತಃ ಕೋಽನ್ಯೋ ಹರೇಃ ಪ್ರಭುಃ" ॥೩॥**

**– ಇತಿ ಬ್ರಹ್ಮಾಂಡೇ**

ಸ್ವಾಯಂಭುವಮನು ತನ್ನ ಮಗಳ ಮಗನಾದ ಯಜ್ಞನೆಂಬ ಹೆಸರಿನ ವಿಷ್ಣುವನ್ನು ಈಶಾವಾಸ್ಯವೇ ಮುಂತಾದ ಮಂತ್ರಗಳಿಂದ ಸಾವಧಾನ ಮನಸ್ಸಿನಿಂದ ಕೂಡಿರುವನಾಗಿ ಸ್ತುತಿಸಿದನು. ಆಗ ಅವನನ್ನು ತಿನ್ನುವದಕ್ಕೆ ಬಂದಿದ್ದ ಆ ಉಗ್ರರಾಕ್ಷಸರು ಅವಧ್ಯತ್ವವನ್ನು ಪಡೆದಿದ್ದರೂ ಈ ಸ್ತೋತ್ರವನ್ನು ಕೇಳಿದ ಯಜ್ಞನು ಅವರನ್ನು ಕೊಂದು ಮನುವನ್ನು ಬಿಡಿಸಿದನು. (ಅವರಿಗೆ ಪೂಜ್ಯನೂ ಪ್ರಭುವೂ ಆದ ಹರನು "ನೀವು ಯಾರಿಂದಲೂ ಹತರಾಗುವದಿಲ್ಲ, ಮಿಕ್ಕವರು ನಿಮ್ಮಿಂದ ಹತರಾಗುವರು" ಎಂದು ವರವನ್ನು ಕೊಟ್ಟಿದ್ದನು.) ಆದ್ದರಿಂದ ಹರಿಗಿಂತ ಸಮರ್ಥನು ಮತ್ತೆ ಯಾರಿದಾರೆ?- ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿರುತ್ತದೆ.

(ಭಾಷ್ಯ)

**ಭಾಗವತೇ ಚಾಯಮೇವಾರ್ಥ ಉಕ್ತಃ**

**ಭಾಗವತದಲ್ಲಿಯೂ ಈ ಅಭಿಪ್ರಾಯವನ್ನೇ (ಸ್ಕಂದ- ೮-೧ರಲ್ಲಿ) ಹೇಳಿದೆ.**

**ಟಿಪ್ಪಣಿ :** ಮಂತ್ರದ ದೇವತೆ, ಛಂದಸ್ಸು ಋಷಿ, ಅರ್ಥ - ಇವುಗಳನ್ನು ತಿಳಿದುಕೊಳ್ಳದೆ ಕರ್ಮವನ್ನು ಮಾಡಕೂಡದು, ಮಾಡಿಸಕೂಡದು; ಅಧ್ಯಯನವನ್ನು ಮಾಡಕೂಡದು, ಮಾಡಿಸಲೂ ಕೂಡದು- ಎಂದು ಶಾಸ್ತ್ರದಲ್ಲಿ ಹೇಳಿದೆ. ಆದ್ದರಿಂದ ದೇವತೆಯನ್ನು ಋಷಿಗಳನ್ನೂ ಇಲ್ಲಿ ತಿಳಿಸಿರುತ್ತಾರೆ. ಸ್ವಾಯಂಭುವಮನುವೇ ಈ ಮಂತ್ರಗಳ ಋಷಿ; ಯಜ್ಞನೆಂಬ ಹೆಸರಿನ ವಿಷ್ಣುವೇ ದೇವತೆ. ಹೀಗೆಂಬುದಕ್ಕೆ ಬ್ರಹ್ಮಾಂಡಭಾಗವತಪುರಾಣಗಳೇ ಪ್ರಮಾಣವು.

**ಓಂ ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।**
**ತೇನ ತ್ಯಕ್ತೇನ ಭುಞ್ಜೀಥಾ ಮಾಗೃಧಃ ಕಸ್ಯಸ್ವಿದ್ಧನಮ್ ॥**

ಪ್ರಕೃತಿಯಲ್ಲಿ ಇದ್ದುಕೊಂಡಿರುವ ಈ ಜಗತ್ತೆಲ್ಲವೂ ಈಶ್ವರನು ವಾಸಮಾಡುವದಕ್ಕೆ ಯೋಗ್ಯವಾಗಿರುತ್ತದೆ. ಆತನು ಕೊಟ್ಟದ್ದನ್ನೇ ಭೋಗಿಸು, ಮತ್ತೆ ಯಾರನ್ನೂ ಧನಕ್ಕಾಗಿ ಯಾಚನೆ ಮಾಡಬೇಡ.

(ಭಾಷ್ಯ)

**ಈಶಸ್ಯಾವಾಸಯೋಗ್ಯಮ್ । ಈಶಾವಾಸ್ಯಮ್ । ಜಗತ್ಯಾಂ ಪ್ರಕೃತೌ ।**
**ತೇನ- ಈಶೇನ । ತ್ಯಕ್ತೇನ - ದತ್ತೇನ ಭುಞ್ಜೀಥಾಃ ॥**

ಸ್ವತಃ ಪ್ರವೃತ್ತ್ಯಶಕ್ತತ್ವಾದೀಶಾವಾಸ್ಯಮಿದಂ ಜಗತ್ ।
ಪ್ರವೃತ್ತಯೇ ಪ್ರಕೃತಿಗಂ ಯಸ್ಮಾತ್ತತ್ಪ್ರಕೃತೀಶ್ವರಃ ॥೧॥

ತದಧೀನಪ್ರವೃತ್ತಿತ್ವಾತ್ ತದೀಯಂ ಸರ್ವಮೇವ ಯತ್
ತದ್ದತ್ತೇನೈವ ಭುಞ್ಜೀಥಾ ಅತೋ ನಾನ್ಯಂ ಪ್ರಯಾಚಯೇತ್ ॥೨॥

- ಇತಿ ಬ್ರಹ್ಮಾಣ್ಡೇ

ಈಶಾವಾಸ್ಯವೆಂದರೆ ಪರಮೇಶ್ವರ ವಾಸಕ್ಕೆ ತಕ್ಕ, ಜಗತ್ಯಾವ್ ಎಂದರೆ ಪ್ರಕೃತಿಯಲ್ಲಿ ತೇನ ಎಂದರೆ ಆ ಈಶ್ವರನಿಂದ, ತ್ಯಕ್ತೇನ- ಕೊಡಲ್ಪಟ್ಟದ್ದರಿಂದ (ತೃಪ್ತನಾಗಿ ಅದನ್ನೇ) ಭುಞ್ಜೀಥಾಃ - ಭೋಗಿಸು. "ಈ ಜಗತ್ತು ತಾನೇ ಕೆಲಸ ಮಾಡಲಾರದಾದ್ದರಿಂದ ಈ ಜಗತ್ತು ಈಶಾವಾಸ್ಯವಾಗಿರುವದು. ಪ್ರವೃತ್ತಿಯನ್ನುಂಟುಮಾಡವದಕ್ಕಾಗಿ ಪ್ರಕೃತಿಯ ಒಳಹೊಕ್ಕಿರುವದರಿಂದ ಆತನು ಪ್ರಕೃತಿಗೂ ಈಶ್ವರನಾಗಿರುವನು. ಆತನ ಅಧೀನ ವಾಗಿಯೇ ಕೆಲಸ ಮಾಡುತ್ತಿರುವದರಿಂದ ಇದೆಲ್ಲವೂ ಆತನದೇ. ಆದ್ದರಿಂದ ಆತನು ಕೊಟ್ಟದ್ದನ್ನೇ ತೃಪ್ತಿಯಿಂದ ಭೋಗಿಸಿಕೊಂಡಿರು, ಮತ್ತೊಬ್ಬರನ್ನು ಬೇಡದಿರು- ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿರುತ್ತದೆ.

## ಉಪನಿಷತ್ತು

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ ।
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ॥೨॥

೨. ಕರ್ಮಗಳನ್ನು ಮಾಡಿಕೊಂಡೇ ಇಲ್ಲಿ ನೂರು ವರ್ಷ ಜೀವಿಸಿಕೊಂಡಿರಲು ಇಚ್ಛಿಸ ಬೇಕು. ಹೀಗಿದ್ದರೆ ಸರಿ; ಇದನ್ನು ಬಿಟ್ಟು ಬೇರೆಯಾಗಿರುವ ಮನುಷ್ಯನಿಗೆ ಕರ್ಮ ಲೇಶವು ಇಲ್ಲವೆಂಬುದು ಇಲ್ಲ.

## (ಭಾಷ್ಯ)

ಅಕುರ್ವತಃ ಕರ್ಮ ನ ಲಿಪ್ಯತ ಇತಿ ನಾಸ್ತಿ ।
ಅಜ್ಞಸ್ಯ ಕರ್ಮ ಲಿಪ್ಯೇತ ಕೃಷ್ಣೋಪಾಸ್ತಿಮಕುರ್ವತಃ ।
ಜ್ಞಾನಿನೋಽಪಿ ಯತೋ ಹ್ರಾಸ ಆನನ್ದಸ್ಯ ಭವೇದ್ಧ್ರುವಮ್
ಅತೋಽಲೇಪೇಽವಿಲೇಪಃ ಸ್ಯಾದತಃ ಕಾರ್ಯೈವ ಸಾ ಸದಾ ॥

- ಇತಿ ನಾರದೀಯೇ

ಕರ್ಮವನ್ನು ಮಾಡದೆ ಇರುವವನಿಗೆ ಕರ್ಮದ ಲೇಪವಿಲ್ಲವೆಂಬುದಿಲ್ಲ. "ಕೃಷ್ಣನನ್ನು ಉಪಾಸನೆಮಾಡದೆ ಇರುವ ಅಜ್ಞನಿಗೆ ಕರ್ಮವು ಅಂಟಿಕೊಳ್ಳುವದು. ಜ್ಞಾನಿಗೂ ಕೂಡ ಕೃಷ್ಣನನ್ನು ಉಪಾಸನೆಮಾಡದೆ ಇದ್ದರೆ ಆನಂದವು ಕುಗ್ಗುವದು. ಆದ್ದರಿಂದ ಕರ್ಮದ ಲೇಪವಿಲ್ಲದಿದ್ದರೂ ಲೇಪವಾಗುವದು. ಆದ್ದರಿಂದ ಅದನ್ನು ಯಾವಾಗಲೂ ಮಾಡಬೇಕು"- ಎಂದು ನಾರದಪುರಾಣದಲ್ಲಿರುತ್ತದೆ.

**ಟಿಪ್ಪಣಿ :** ಇಲ್ಲಿ ಭಾಷ್ಯದಲ್ಲಿರುವ 'ಅಕುರ್ವತಃ' ಎಂಬ ಮಾತಿಗೆ ಕರ್ಮಗಳನ್ನು ಮಾಡದವನಿಗೆ ಎಂಬ ಅರ್ಥವನ್ನು ಅನೇಕರು ಬರೆದಿರುತ್ತಾರೆ. ಅದರಂತೆಯೇ ಮೇಲೆ ಬರೆದಿದೆ. ಆದರೆ ಭಾಷ್ಯಕಾರರು ಉದಾಹರಿಸಿರುವ ನಾರದಪುರಾಣವಾಕ್ಯದಲ್ಲಿ ಉಪಾಸನೆಯನ್ನು ಮಾಡದವನಿಗೆ ಎಂದೇ ಇದೆ. ಜ್ಞಾನಿಗೆ ಕರ್ಮದ ಲೇಪವಾಗುವ ಸಂಭವವಿಲ್ಲ, ಉಪಾಸನೆಯನ್ನು ಮಾಡದಿದ್ದರೆ ಅವನಿಗೂ ನಷ್ಟವುಂಟು; ಆದ್ದರಿಂದ ಅವನು ಉಪಾಸನೆಯನ್ನು ಮಾಡುತ್ತಲೇ ಇರಬೇಕು ಎಂದು ಹೇಳಿದೆ. ಪುರಾಣವಾಕ್ಯದಲ್ಲಿ ಉಪಾಸನೆಯನ್ನು ಮಾಡುತ್ತಲೇ ಇರಬೇಕೆಂದಿರುವಲ್ಲಿ ಶ್ರುತಿಯಲ್ಲಿ ಕರ್ಮಗಳನ್ನು ಮಾಡುತ್ತಲೇ ಇರಬೇಕು - ಎಂದು ಹೇಳಿದೆ. ಇವೆರಡಕ್ಕೂ ಏಕವಾಕ್ಯತೆ ಹೇಗೆಂಬುದನ್ನು ದೊಡ್ಡವರಿಂದ ಕೇಳಿ ತಿಳಿದುಕೊಳ್ಳಬೇಕು.

## ಉಪನಿಷತ್ತು

**ಅಸುರ್ಯಾ ನಾಮ ತೇ ಲೋಕಾ ಅನ್ಧೇನ ತಮಸಾವೃತಾಃ ।**
**ತಾಂಸ್ತೇ ಪ್ರೇತ್ಯಾಭಿಗಚ್ಛನ್ತಿ ಯೇ ಕೇಚಾತ್ಮಹನೋ ಜನಾಃ ॥೩॥**

೩. ಅಸುರ್ಯಾ ಎಂಬ ಕಗ್ಗತ್ತಲೆಯಿಂದ ಮುಸುಕುಲ್ಪಟ್ಟಿರುವ ಪ್ರಸಿದ್ಧವಾದ ಲೋಕಗಳಿವೆಯಷ್ಟೆ; ಆತ್ಮಹತ್ಯವನ್ನು ಮಾಡಿದವರು ಯಾರೇ ಆಗಲಿ ಅವರೆಲ್ಲ ಸತ್ತ ಬಳಿಕ ಆ ಲೋಕಗಳಿಗೆ ಹೋಗುತ್ತಾರೆ.

## (ಭಾಷ್ಯ)

**ಸುಷ್ಠುರಮಣವಿರುದ್ಧತ್ವಾತ್ ಅಸುರಾಣಾಂ ಪ್ರಾಪ್ಯತ್ವಾಚ್ಚ 'ಅಸುರ್ಯಾಃ'**
**'ನ ಚ ರಮನ್ತ್ಯಹೋ ಅಸದುಪಾಸನಯಾತ್ಮಹನಃ' - ಇತ್ಯುಕ್ತತ್ವಾತ್ ।**
**ಮಹಾದುಃಖೈಕಹೇತುತ್ವಾತ್ ಪ್ರಾಪ್ಯತ್ವಾದಸುರೈಸ್ತಥಾ**
**ಅಸುರ್ಯಾ ನಾಮ ತೇ ಲೋಕಾಸ್ತಾನ್ಯಾನ್ತಿ ವಿಮುಖಾ ಹರೌ ॥'**
**- ಇತಿ ವಾಮನೇ ।**

'ಯೇ ಕೇ ಚ' ಇತಿ ನಿಯಮ ಉಕ್ತಃ ।

ನಿಯಮೇನ ತಮೋ ಯಾನ್ತಿ ಸರ್ವೇಽಪಿ ವಿಮುಖಾ ಹರೌ । ಇತಿ ಚ ॥

ಚೆನ್ನಾಗಿ ಭೋಗಿಸುವದಕ್ಕೆ ವಿರುದ್ಧವಾಗಿರುವದರಿಂದಲೂ ಅಸುರರು ಪಡೆಯತಕ್ಕವಾದ್ದರಿಂದಲೂ (ಈ ಲೋಕಗಳಿಗೆ) ಅಸುರ್ಯ ಎಂದು ಹೆಸರು. ''ಅಯ್ಯೋ! ಅವರು ತಪ್ಪಾದ ಉಪಾಸನೆಯಿಂದ ಆತ್ಮಹತ್ಯವನ್ನು ಮಾಡಿಕೊಂಡು ಸುಖವನ್ನನುಭವಿಸಲಾರದೆ ಇರುತ್ತಾರಲ್ಲ!' ಎಂದು (ಭಾಗವತ 10 - ಉತ್ತರಾರ್ಧ, ಶ್ರುತಿಗೀತೆಯಲ್ಲಿ 82-22) ಹೇಳಿದೆ. ''ಹೆಚ್ಚಿನ ದುಃಖಕ್ಕೆ ಮಾತ್ರ ಕಾರಣವಾಗಿರುವದರಿಂದಲೂ ಅಸುರರು ಪಡೆಯತಕ್ಕವಾಗಿರುವದರಿಂದಲೂ ಆ ಲೋಕಗಳಿಗೆ ಅಸುರ್ಯ ಎಂದು ಹೆಸರು; ಹರಿಯಲ್ಲಿ ವಿಮುಖರಾಗಿರುವವರು ಅವುಗಳನ್ನು ಪಡೆಯುತ್ತಾರೆ'- ಎಂದು ವಾಮನಪುರಾಣದಲ್ಲಿ ಹೇಳಿದೆ. ''ಯಾರೇ ಆಗಲಿ' ಎಂಬ ಮಾತಿನಿಂದ ಆ ಲೋಕಗಳಿಗೆ ಹೋಗಿಯೇ ತೀರುತ್ತಾರೆಂದು ನಿಯಮವನ್ನು ಹೇಳಿರುತ್ತದೆ. ''ಹರಿಯಲ್ಲಿ ವಿಮುಖರಾದವರೆಲ್ಲರೂ ಗೊತ್ತಾಗಿ ತಪ್ಪದೆ ತಮಸ್ಸನ್ನೇ ಪಡೆಯುತ್ತಾರೆ" ಎಂದೂ (ವಾಮನ?) ಪುರಾಣದಲ್ಲಿ ಹೇಳಿರುತ್ತದೆ.

## ಉಪನಿಷತ್ತು

ಅನೇಜದೇಕಂ ಮನಸೋ ಜವೀಯೋ
ನೈನದ್ದೇವಾ ಆಪ್ನುವನ್ ಪೂರ್ವಮರ್ಷತ್ ।
ತದ್ಧಾವತೋಽನ್ಯಾನತ್ಯೇತಿ
ತಿಷ್ಠತ್ತಸ್ಮಿನ್ನಪೋ ಮಾತರಿಶ್ವಾ ದಧಾತಿ ॥೪॥

೪. ಆ ಪರಬ್ರಹ್ಮವು ನಡುಗುವದಿಲ್ಲ, ಒಂದೇ ಮನಸ್ಸಿಗಿಂತಲೂ ವೇಗವಾದದ್ದು. ಇದನ್ನು ದೇವತೆಗಳು ಸರಿಯಾಗಿ ಪಡೆದಿಲ್ಲ, ಅದು ಮೊದಲಿನಿಂದಲೂ ಎಲ್ಲರನ್ನೂ ಅರಿತಿರುತ್ತದೆ. ಅದು ಒಂದುಕಡೆಯಲ್ಲಿದ್ದು ಓಡುತ್ತಿರುವ ಮಿಕ್ಕವರನ್ನು ಮೀರುವದು. ಅದರಲ್ಲಿ ಮಾತರಿಶ್ವನು ಎಲ್ಲರ ಕರ್ಮಗಳನ್ನೂ ಸಮರ್ಪಿಸುತ್ತಾನೆ.

## (ಭಾಷ್ಯ)

ಅನೇಜನ್ನಿರ್ಭಯತ್ವಾತ್ತದೇಕಂ ಪ್ರಾಧಾನ್ಯತಸ್ತಥಾ ।
ಸಮ್ಯಗ್ ಜ್ಞಾತುಮಶಕ್ಯತ್ವಾದಗಮ್ಯಂ ತತ್ ಸುರೈರಪಿ ॥

ಸ್ವಯಂ ತು ಸರ್ವಾನಗಮತ್ ಪೂರ್ವಮೇವ ಸ್ವಭಾವತಃ ।
ಅಚಿನ್ತ್ಯಶಕ್ತಿತಶ್ಚೈವ ಸರ್ವಗತ್ವಾಚ್ಚ ತತ್ಪರಮ್ ।
ದ್ರವತೋಽತ್ಯೇತಿ ಸನ್ತಿಷ್ಠತ್ ತಸ್ಮಿನ್ ಕರ್ಮಾಣ್ಯಧಾನ್ಮರುತ್ ।
ಮಾರುತ್ಯೇವ ಯತಶ್ಚೇಷ್ಟಾ ಸರ್ವಾ ತಾಂ ಹರಯೇಽರ್ಪಯೇತ್ ॥

– ಇತಿ ಬ್ರಹ್ಮಾಣ್ಡೇ, ಋಷಜ್ಞಾನೇ

"ಆ ಬ್ರಹ್ಮಕ್ಕೆ ಭಯವಿಲ್ಲದ್ದರಿಂದ ಅದು ನಡುಗುವದಿಲ್ಲ; ಅದು ಮುಖ್ಯವಾದ್ದರಿಂದ ಒಂದೆನಿಸಿರುತ್ತದೆ; ಅದನ್ನು ಚೆನ್ನಾಗಿ ತಿಳಿದುಕೊಳ್ಳುವದಕ್ಕೆ ಆಗದಿರುವದರಿಂದ ದೇವತೆಗಳು ಕೂಡ ಅದನ್ನು ಅರಿಯರು; ಅದು ಮಾತ್ರ ಸ್ವಭಾವದಿಂದಲೇ ಮೊದಲಿನಿಂದಲೂ ಎಲ್ಲರನ್ನೂ ಅರಿತುಕೊಂಡಿರುವದು. ಅಚಿಂತ್ಯವಾದ ಶಕ್ತಿಯುಳ್ಳದ್ದಾದ್ದರಿಂದಲೂ ಸರ್ವವ್ಯಾಪಿಯಾಗಿರುವದರಿಂದಲೂ ಆ ಪರಮಾತ್ಮನನ್ನು ತಾನು ಇದ್ದಲ್ಲಿಯೇ ಇದ್ದುಕೊಂಡು ಮಿಕ್ಕವರು ಓಡುತ್ತಿದ್ದರೂ ಅವರನ್ನು ಮೀರಿರುವದು. ಮಾರುತನು ಅದರಲ್ಲಿ ಎಲ್ಲಾ ಕರ್ಮಗಳನ್ನೂ ಸಮರ್ಪಿಸಿರುವನು. ಎಲ್ಲಾ ವಿಧವಾದ ವ್ಯಾಪಾರವೂ ವಾಯುದೇವರ ಸಂಬಂಧದಿಂದಲೇ ಆಗತಕ್ಕದ್ದಲ್ಲವೆ? ಆದಕಾರಣ ಎಲ್ಲಾ ವ್ಯಾಪಾರವನ್ನೂ ಹರಿಗೇ ಅರ್ಪಿಸಬೇಕು?"–ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ. ಮಂತ್ರದಲ್ಲಿರುವ 'ಅರ್ಷತ್' ಎಂಬ ಮಾತು ಋಷಜ್ಞಾನೇ (ಋಷ್–ತಿಳಿ) ಎಂಬ ಧಾತುವಿನಿಂದ ಬಂದದ್ದು ಆದ್ದರಿಂದ ತಿಳಿದಿರುತ್ತದೆ ಎಂದು ಅದಕ್ಕೆ ಅರ್ಥ.

**ಟಿಪ್ಪಣಿ :** ಹರಿಯೇ ಸಕಲ ಕರ್ಮಗಳನ್ನೂ ಮಾಡುವವನು, ನಾನಲ್ಲ – ಎಂದು ಬುದ್ಧಿಯಿಂದ ಯಾವನು ಕರ್ಮಗಳನ್ನು ಮಾಡುವನೋ ಅವನ ಸತ್ಕರ್ಮಗಳನ್ನು ವಾಯುದೇವರು ಹರಿಗೆ ಸಮರ್ಪಿಸುತ್ತಾನೆ – ಎಂದದ್ದರಿಂದ ಕರ್ಮಬಂಧವಿಲ್ಲದಿರು ವದಕ್ಕೆ ಉಪಾಯವನ್ನು ಹೇಳಿದಂತೆ ಆಯಿತು.

## ಉಪನಿಷತ್ತು

ತದೇಜತಿ ತನ್ನೈಜತಿ ತದ್ದೂರೇ ತದ್ವನ್ತಿಕೇ ।
ತದನ್ತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ ॥೫॥

೫. ಆ ಪರಮಾತ್ಮನಿಗೇ ಹೆದರುತ್ತದೆ. ಆತನು (ಯಾರಿಗೂ) ಅಂಜುವದಿಲ್ಲ, ಆತನು ದೂರದಲ್ಲಿಯೂ ಇರುವನು, ಹತ್ತಿರವೂ ಇರುವನು. ಆತನು ಎಲ್ಲದರ ಒಳಗೂ ಇರುವನು, ಆತನೇ ಇದೆಲ್ಲದರ ಹೊರಗೂ ಇರುವನು.

(ಭಾಷ್ಯ)

**ತದೇಜತಿ ತತ ಏವೈಜತ್ಯನ್ಯತ್ । ತತ್ ಸ್ವಯಂ ನೇಜತಿ ॥**
**ತತೋ ಬಿಭೇತಿ ಸರ್ವೋಽಪಿ ನ ಬಿಭೇತಿ ಹರಿಃ ಸ್ವಯಮ್**
**ಸರ್ವಗತ್ವಾತ್ತದೂರೇ ಚ ಬಾಹ್ಯೇಽನ್ತಶ್ಚ ಸಮೀಪತಃ ॥**

**– ಇತಿ ತತ್ತ್ವಸಂಹಿತಾಯಾಮ್**

**'ತದೇಜತಿ'** ಎಂದರೆ ಆತನಿಗೇ ಮಿಕ್ಕದ್ದೆಲ್ಲವೂ ಅಂಜಿ ನಡುಗುತ್ತದೆ. ಆತನು ತಾನು ಮಾತ್ರ ಯಾರಿಗೂ ಅಂಜುವದಿಲ್ಲ "ಆತನಿಗೇ ಎಲ್ಲರೂ ಹೆದರುವರು, ಆದರೆ ಹರಿಯು ತಾನು ಮಾತ್ರ ಹೆದರುವದಿಲ್ಲ; ಸರ್ವವ್ಯಾಪಿಯಾಗಿರುವದರಿಂದ ಆತನು ದೂರದಲ್ಲಿಯೂ ಹತ್ತಿರದಲ್ಲಿಯೂ ಹೊರಗೂ ಒಳಗೂ ಇರುತ್ತಾನೆ" ಎಂದು ತತ್ತ್ವಸಂಹಿತೆಯಲ್ಲಿ ಹೇಳಲ್ಪಟ್ಟಿದೆ.

**ಟಿಪ್ಪಣಿ :** ತದೇಜತಿ ಎಂಬಲ್ಲಿ ತತ್ ಎಂಬ ಅವ್ಯಯಕ್ಕೆ ಆತನ ದೆಸೆಯಿಂದ (ಆತನಿಗೆ) ಎಂದರ್ಥ. ಈ ಅರ್ಥಕ್ಕೆ ತತ್ತ್ವಸಂಹಿತೆಯು ಪ್ರಮಾಣವು.

ಉಪನಿಷತ್ತು

**ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ ।**
**ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ ॥೬॥**

೬. ಯಾವಾತನು ಸಕಲ ಪ್ರಾಣಿಗಳನ್ನೂ ಪರಮಾತ್ಮನಲ್ಲಿಯೇ ಕಾಣುವನೋ ಸಕಲ ಪ್ರಾಣಿಗಳಲ್ಲಿಯೂ ಆತ್ಮನನ್ನು ಕಾಣುವನೋ ಆತನು ಹಾಗೆ ತಿಳಿದುಕೊಂಡಿರುವದರಿಂದ ತನ್ನನ್ನು ಕಾಪಾಡಿಕೊಳ್ಳಲು ಇಚ್ಛಿಸುವದಿಲ್ಲ.

(ಭಾಷ್ಯ)

**ಸರ್ವಗಂ ಪರಮಾತ್ಮಾನಂ ಸರ್ವಂ ಚ ಪರಮಾತ್ಮನಿ ।**
**ಯಃ ಪಶ್ಯೇತ್ ಸ ಭಯಾಭಾವಾನ್ನಾತ್ಮಾನಂ ಗೋಪ್ತುಮಿಚ್ಛತಿ ॥**

**– ಇತಿ ಸೌಕರಾಯಣ ಶ್ರುತಿಃ**

"ಪರಮಾತ್ಮನು ಎಲ್ಲದರಲ್ಲಿಯೂ ಇರುವನೆಂದೂ ಪರಮಾತ್ಮನಲ್ಲಿ ಎಲ್ಲವೂ ಇರುವದೆಂದೂ ಯಾವನು ಕಾಣುವನೋ ಅವನು ಭಯವಿಲ್ಲದ್ದರಿಂದ ತನ್ನನ್ನು ಕಾಪಾಡಿಕೊಳ್ಳುವದಕ್ಕೆ ಇಚ್ಛಿಸುವದಿಲ್ಲ"– ಎಂದು ಸೌಕರಾಯಣಶ್ರುತಿಯಲ್ಲಿ ಹೇಳಿದೆ.

## ಉಪನಿಷತ್ತು

ಯಸ್ಮಿನ್ ಸರ್ವಾಣಿ ಭೂತಾನ್ಯಾತ್ಮೈವಾಭೂದ್ವಿಜಾನತಃ ।
ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ ॥೭॥

೭. ಯಾವಾತನಲ್ಲಿ ಸಕಲ ಪ್ರಾಣಿಗಳೂ ಇರುವವೋ ಅವುಗಳಲ್ಲಿ ಆ ಪರಮಾತ್ಮನೇ ಇದ್ದುಕೊಂಡಿದ್ದಾನೆ- ಎಂದು ಏಕತ್ವವನ್ನು ಕಂಡುಕೊಂಡವನಿಗೆ ಯಾವ ಮೋಹವು, ಯಾವ ಶೋಕವು?

### (ಭಾಷ್ಯ)

ಯಸ್ಮಿನ್ ಪರಮಾತ್ಮನಿ ಸರ್ವಭೂತಾನಿ । ಸ ಪರಮಾತ್ಮೈವ ತತ್ರ ಸರ್ವಭೂತೇಷ್ವಭೂತ್- ಏವಂ ಸರ್ವಭೂತೇಷ್ವೇಕತ್ವೇನ ಪರಮಾತ್ಮಾನಂ ವಿಜಾನತಃ ಕೋ ಮೋಹಃ?

"ಯಸ್ಮಿನ್ ಸರ್ವಾಣಿ ಭೂತಾನಿ ಸ ಆತ್ಮಾ ಸರ್ವಭೂತಗಃ ।
ಏವಂ ಸರ್ವತ್ರ ಯೋ ವಿಷ್ಣುಂ ಪಶ್ಯೇತ್ತಸ್ಯ ವಿಜಾನತಃ ॥
ಕೋ ಮೋಹಃ ಕೋಽಥವಾ ಶೋಕಂ ಸ ವಿಷ್ಣುಂ ಪರ್ಯಗಾದ್ಯತಃ ॥
- ಇತಿ ಪಿಪ್ಪಲಾದಶಾಖಾಯಾಮ್

ಪೂರ್ವೋಕ್ತಾನುವಾದೇನ ಶೋಕಮೋಹಾಭಾವೋಽಪಿ ವಿಜಾನತ ಶ್ಚಾತ್ರೋಚ್ಯತೇ । ಅಭ್ಯಾಸತ್ವಸರ್ವಗತತ್ವಸ್ಯ ತಾತ್ಪರ್ಯದ್ಯೋತನಾರ್ಥಃ ॥

ಯಾವ ಪರಮಾತ್ಮನಲ್ಲಿ ಎಲ್ಲಾ ಪ್ರಾಣಿಗಳೂ ಇರುವವೋ ಆ ಪರಮಾತ್ಮನೇ ಎಲ್ಲಾ ಪ್ರಾಣಿಗಳಲ್ಲಿಯೂ ಇರುತ್ತಾನೆ – ಎಂದು ಸಕಲಪ್ರಾಣಿಗಳಲ್ಲಿಯೂ ಪರಮಾತ್ಮನು ಒಬ್ಬನೇ ಎಂಬುದನ್ನು ಅರಿತವನಿಗೆ ಎಂಥ ಮೋಹವು? "ಯಾವ ಪರಮಾತ್ಮನಲ್ಲಿ ಸಮಸ್ತಪ್ರಾಣಿಗಳೂ ಇರುವವೋ ಆತನು ಎಲ್ಲಾ ಪ್ರಾಣಿಗಳಲ್ಲಿಯೂ ಇರುವನು- ಎಂದು ಎಲ್ಲೆಲ್ಲಿಯೂ ಯಾವನು ವಿಷ್ಣುವನ್ನು ಕಾಣುವನೋ ಆ ಜ್ಞಾನಿಗೆ ಯಾವ ಮೋಹವಿದ್ದೀತು? ಅಥವಾ ಯಾವ ಶೋಕವಿದ್ದೀತು? ಯಾವದೂ ಇಲ್ಲ, ಏಕೆಂದರೆ ಅವನು ವಿಷ್ಣುವನ್ನೇ ಪೂರ್ಣವಾಗಿ ಹೊಂದಿರುತ್ತಾನೆ' ಎಂದು ಪಿಪ್ಪಲಾದಶಾಖೆ ಯಲ್ಲಿರುತ್ತದೆ.

ಹಿಂದಿನ ಮಂತ್ರದಲ್ಲಿ (ಬ್ರಹ್ಮಜ್ಞಾನದಿಂದ ಹೆದರಿಕೆಯು ತಪ್ಪುವದೆಂದು)

ಹೇಳಿದ್ದನ್ನು ಅನುವಾದ ಮಾಡಿಕೊಂಡು (ಅದರ ಜೊತೆಗೆ) ಶೋಕಮೋಹಗಳೂ ಜ್ಞಾನಿಗೆ ಹೋಗುವವೆಂದು ಇಲ್ಲಿ ಹೇಳಿರುತ್ತದೆ. ಬ್ರಹ್ಮವು ಸರ್ವಗತವಾಗಿರುವದೆಂದು (5ನೆಯ ಮಂತ್ರದಲ್ಲಿಯೇ ಹೇಳಿದ್ದರೂ ಅದನ್ನು) ಮತ್ತೆ ಹೇಳಿರುವದು ಪರಮಾತ್ಮನು ಎಲ್ಲೆಲ್ಲಿಯೂ ಇರುವನೆಂಬುದನ್ನು ತಾತ್ಪರ್ಯದಿಂದ ತಿಳಿಸಿಕೊಡುವದಕ್ಕೆ.

ಸ ಪರ್ಯಗಾಚ್ಛುಕ್ರಮಕಾಯಮವ್ರಣಮ
ಸ್ನಾವಿರಗ್ಂ ಶುದ್ಧಮಪಾಪವಿದ್ಧಮ್ ।
ಕವಿರ್ಮನೀಷೀ ಪರಿಭೂಃ ಸ್ವಯಂ ಭೂರ್ಯಾಥಾ
ತಥ್ಯತೋಽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ ॥೮॥

೮. ಶೋಕವಿಲ್ಲದವನಾಗಿಯೂ ಸೂಕ್ಷ್ಮಶರೀರವಿಲ್ಲದವನಾಗಿಯೂ ಸಣ್ಣತನವಿಲ್ಲದವನಾಗಿಯೂ ಸ್ಥೂಲಶರೀರವಿಲ್ಲದವನಾಗಿಯೂ ಶುದ್ಧನಾಗಿಯೂ ಪಾಪದಂಟಿಲ್ಲದವನಾಗಿಯೂ ಇರುವ ಪರಮಾತ್ಮನನ್ನು ಅವನು ಪಡೆಯುತ್ತಾನೆ. ಆ ಪರಮಾತ್ಮನು ಸರ್ವಜ್ಞನು, ಮನಸ್ಸಿಗೊಡೆಯನು, ಎಲ್ಲಕ್ಕೂ ಹೆಚ್ಚಿನವನು ತಾನು ತಾನೇ ಇರುವವನು; ಶಾಶ್ವತವಾಗಿ ಎಷ್ಟೋ ವರ್ಷಗಳಿಂದ ಯಥಾರ್ಥವಾಗಿರುವ ಪದಾರ್ಥಗಳನ್ನು ಸೃಷ್ಟಿಸಿರುತ್ತಾನೆ.

(ಭಾಷ್ಯ)

ಶುಕ್ರಂ ತಚ್ಛೋಕರಾಹಿತ್ಯಾದವ್ರಣಂ ನಿತ್ಯಪೂರ್ಣತಃ ।
ಪಾವನತ್ವಾತ್ತದಾ ಶುದ್ಧಮಕಾಯಂ ಲಿಙ್ಗವರ್ಜನಾತ್ ॥

ಸ್ಥೂಲದೇಹಸ್ಯ ರಾಹಿತ್ಯಾದಸ್ನಾವಿರಮುದಾಹೃತಮ್ ।
ಏವಂ ಭೂತೋಽಪಿ ಸಾರ್ವಜ್ಞ್ಯಾತ್ಕವಿರಿತ್ಯೇವ ಶಬ್ದ್ಯತೇ ॥

ಬ್ರಹ್ಮಾದಿಸರ್ವಮನಸಾಂ ಪ್ರಕೃತೇರ್ಮನಸೋಽಪಿ ಚ ।
ಈಶಿತೃತ್ವಾನ್ಮನೀಷೀ ಸ ಪರಿಭೂಃ ಸರ್ವತೋ ವರಃ ॥

ಸದಾನನ್ಯಾಶ್ರಯತ್ವಾಚ್ಚ ಸ್ವಯಮ್ಭೂಃ ಪರಿಕೀರ್ತಿತಃ ।
ಸ ಸತ್ಯಂ ಜಗದೇತಾದೃಙ್ನಿತ್ಯಮೇವ ಪ್ರವಾಹತಃ ॥
ಅನಾದ್ಯನನ್ತ ಕಾಲೇಷು ಪ್ರವಾಹೈಕಪ್ರಕಾರತಃ ।

ನಿಯಮೇನೈವ ಸಸೃಜೇ ಭಗವಾನ್ ಪುರುಷೋತ್ತಮಃ ॥
ಸಜ್ಜ್ಞಾನಾನನ್ದ ಶೀರ್ಷೋಽಸೌ ಸಜ್ಜ್ಞಾನಾನನ್ದ ಬಾಹುಕಃ ।
ಸಜ್ಜ್ಞಾನಾನನ್ದದೇಹಶ್ಚ ಸಜ್ಜ್ಞಾನಾನನ್ದ ಪಾದವಾನ್ ॥
ಏವಂಭೂತೋ ಮಹಾವಿಷ್ಣುರ್ಯಥಾರ್ಥಂ ಜಗದೀದೃಶಮ್ ।
ಅನಾದ್ಯನನ್ತಕಾಲೀನಂ ಸಸರ್ಜಾತ್ಮೇಚ್ಛಯಾ ಪ್ರಭುಃ ॥– ಇತಿ ವಾರಾಹೇ

ಆ ಪರಮಾತ್ಮನು ಶೋಕದಿಂದ (ಶುಕ್) ರಹಿತ(ರ)ನಾದ ಕಾರಣ ಆತನಿಗೆ 'ಶುಕ್ರ'ನೆಂದು ಹೆಸರು. ಎಂದೆಂದಿಗೂ ಪೂರ್ಣನಾಗಿರುವದರಿಂದ 'ಅವ್ರಣ'ನೆನಿಸುವನು. (ವ್ರಣ ಎಂದರೆ ಸಣ್ಣದು, ಅಲ್ಪ) ಯಾವಾಗಲೂ ಪಾವನನಾಗಿರುವದರಿಂದ 'ಶುದ್ಧನು', ಲಿಂಗ ದೇಹವಿಲ್ಲದ್ದರಿಂದ 'ಅಕಾಯನು'. ಸ್ಥೂಲದೇಹವಿಲ್ಲದ್ದರಿಂದ 'ನರಗಳಿಲ್ಲದವನು' ಎನ್ನಿಸಿಕೊಳ್ಳುತ್ತಾನೆ. ಹೀಗೆ(ಶರೀರವಿಲ್ಲದವ)ನಾದರೂ ಸರ್ವಜ್ಞನಾದ್ದರಿಂದ 'ಕವಿ' ಎನ್ನಿಸಿಕೊಂಡಿರುತ್ತಾನೆ. ಬ್ರಹ್ಮನೇ ಮೊದಲಾದವರ ಮನಸ್ಸನ್ನೂ ಪ್ರಕೃತಿಯ ಮನಸ್ಸನ್ನೂ ಆಳುವದರಿಂದ ಆತನು 'ಮನೀಷಿ'ಯು. ಎಲ್ಲಕ್ಕೂ ಹೆಚ್ಚಿನವನಾದ್ದರಿಂದ 'ಪರಿಭೂ' ಮತ್ತು ಮತ್ತೊಬ್ಬರನ್ನು ಆಶ್ರಯಿಸದೆ ಇರುವದರಿಂದ 'ಸ್ವಯಂಭೂ'. ಆ ಭಗವಂತನಾದ ಪುರುಷೋತ್ತಮನು ಸತ್ಯವಾಗಿಯೂ ಇದೇ ರೀತಿಯಲ್ಲಿ ಪ್ರವಾಹರೂಪದಲ್ಲಿ ನಿತ್ಯವಾಗಿಯೂ ಇರುವ ಈ ಜಗತ್ತನ್ನು ಒಂದೇ ಪ್ರವಾಹರೂಪದಿಂದ ನಿಯತವಾಗಿಯೇ ಅನಾದ್ಯನಂತಕಾಲಗಳಿಂದ ಸೃಷ್ಟಿಸುತ್ತಿದ್ದಾನೆ. ಆತನು ಇರವು, ಅರಿವು, ಸುಖ– ಇವುಗಳಿಂದಾದ ತಲೆಯುಳ್ಳವನು; ಆತನ ಪಾದಗಳೂ ಇರವು, ಅರಿವು, ಸುಖ– ಇವುಗಳ ಸ್ವರೂಪವಾಗಿವೆ. ಇಂಥ ಮಹಾವಿಷ್ಣುವು ಯಥಾರ್ಥವಾದ ಇಂಥ ಅನಾದ್ಯನಂತಕಾಲದಿಂದ ಇರುತ್ತಿರುವ ಈ ಜಗತ್ತನ್ನು ತನ್ನ ಇಚ್ಛೆಯಿಂದ ಸೃಷ್ಟಿಸಿದನು – ಎಂದು ವರಾಹ ಪುರಾಣದಲ್ಲಿ ಹೇಳಿದೆ.

**ಟಿಪ್ಪಣಿ :** ಜ್ಞಾನಿಯು ಪರಮಾತ್ಮನನ್ನು ಸೇರಿ ಅವನಂತೆ ಸ್ಥೂಲಸೂಕ್ಷ್ಮಶರೀರಗಳಿಲ್ಲದವನಾಗುತ್ತಾನೆ. ಆದ್ದರಿಂದಲೇ ಅವನಿಗೆ ಶೋಕಮೋಹಗಳಿರುವದಿಲ್ಲವೆಂದು ಹಿಂದೆ ಹೇಳಿದ್ದು, ಶರೀರವಿಲ್ಲದವನು ಸೃಷ್ಟಿಮಾಡುವದು ಹೇಗೆ? ಎಂಬ ಆಕ್ಷೇಪಕ್ಕೆ ಪರಿಹಾರವಾಗಿ ಸಚ್ಚಿದಾನಂದಶರೀರನಾಗಿರುತ್ತಾನೆಂಬ ವಚನವನ್ನು ಉದಾಹರಿಸಿರುತ್ತದೆ.

## ಉಪನಿಷತ್ತು

ಅನ್ಧಂ ತಮಃ ಪ್ರವಿಶನ್ತಿ ಯೇಽವಿದ್ಯಾಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂರತಾಃ ॥೯॥

ಅನ್ಯದೇವಾಹುರ್ವಿದ್ಯಯಾ ಅನ್ಯದಾಹುರವಿದ್ಯಯಾ ।
ಇತಿ ಶುಶ್ರುಮ ಧೀರಾಣಾಂ ಯೇನಸ್ತದ್ವಿಚಚಕ್ಷಿರೇ ॥೧೦॥

ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ ॥೧೧॥

೯-೧೧. ಯಾರು ಅವಿದ್ಯೆಯನ್ನು ಧ್ಯಾನಮಾಡುತ್ತಾರೋ (ಅಂದರೆ ಪರಮಾತ್ಮನ ಯಥಾರ್ಥಸ್ವರೂಪವನ್ನಲ್ಲದೆ ಬೇರೆಯ ಸ್ವರೂಪವನ್ನು ಧ್ಯಾನಮಾಡುತ್ತಾರೋ) ಅವರು ಅಂಧಂತಮಸ್ಸನ್ನು ಹೋಗುವರು. ಯಾರು ವಿದ್ಯೆಯಲ್ಲಿಯೇ ನಿರತರಾಗಿರುವರೋ (ಮಿಥ್ಯಾಜ್ಞಾನನಿಂದಕರಾಗುವದಿಲ್ಲವೋ) ಅವರು ಇನ್ನೂ ಹೆಚ್ಚಿನ ಅಂಧಂತಮಸ್ಸನ್ನು ಹೊಗುವರು. (ತಿಳಿದವರು) ವಿದ್ಯೆಯಿಂದ ಬೇರೆ (ಫಲವೇ ಆಗುವದು) ಎನ್ನುವರು; (ಅವಿದ್ಯೆಯಿಂದ ಬೇರೆ ಫಲವೇ ಆಗುವದು) ಎನ್ನುವರು. ಹೀಗೆಂದು ಜ್ಞಾನಿಗಳಿಂದ ಕೇಳಿರುತ್ತೇವೆ. ಅವರು ನಮಗೆ ಇದನ್ನು ವಿವರಿಸಿ ಹೇಳಿರುತ್ತಾರೆ. ವಿದ್ಯೆಯನ್ನೂ ಅವಿದ್ಯೆಯನ್ನೂ ಯಾವಾತನು ಒಟ್ಟಿಗೆ (ಮೋಕ್ಷಸಾಧನವೆಂದು) ಅರಿಯುತ್ತಾನೋ ಅವನು ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಮೋಕ್ಷವನ್ನು ಪಡೆಯುತ್ತಾನೆ.

## (ಭಾಷ್ಯ)

ಅನ್ಯಥೋಪಾಸಕಾ ಯೇ ತಮೋಽನ್ಧಂ ಯಾನ್ತ್ಯಸಂಶಯಮ್ ।
ತತೋಽಧಿಕಮಿವ ವ್ಯಕ್ತಂ ಯಾನ್ತಿ ತೇಷಾಮನಿನ್ದಕಾಃ ॥

ತಸ್ಮಾದ್ಯಥಾ ಸ್ವರೂಪಂ ತು ನಾರಾಯಣಮನಾಮಯಮ್ ।
ಅಯಥಾರ್ಥಸ್ಯ ನಿನ್ದಾಂ ಚ ಯೇ ವಿದುಃ ಸಹ ಸಜ್ಜನಾಃ ॥

ತೇ ನಿನ್ದಯಾಽಯಥಾರ್ಥಸ್ಯ ದುಃಖಾಜ್ಞಾನಾದಿ ರೂಪಿಣಃ ।
ದುಃಖಾಜ್ಞಾನಾದಿ ಸನ್ತೀರ್ಣಾಃ ಸುಖಜ್ಞಾನಾದಿರೂಪಿಣಃ ॥
ಯಥಾರ್ಥಸ್ಯ ಪರಿಜ್ಞಾನಾತ್ ಸುಖಜ್ಞಾನಾದಿರೂಪತಾಮ್ ॥ ಯಾನ್ತಿ ॥

"ಯಾರು ತಪ್ಪುರೀತಿಯಿಂದ ಉಪಾಸನೆ ಮಾಡುವವರೋ ಅವರು ಅಂಧಂತಮಸ್ಸನ್ನು ಪಡೆಯುವರೆಂಬುದಕ್ಕೆ ಸಂಶಯುವಿಲ್ಲ, ಅವರನ್ನು ನಿಂದಿಸದೆ ಇರುವವರು ಅದ ಕ್ಕಿಂತಲೂ ಹೆಚ್ಚಿನ (ಅಂಧಂತಮನಸ್ಸನ್ನೇ) ಪಡೆಯುವರೆಂಬುದೂ ಸ್ಪಷ್ಟವು. ಆದಕಾರಣ ನಾರಾಯಣನ ನಿಜವಾದ ನಿರ್ದುಷ್ಟವಾದ ಸ್ವರೂಪವನ್ನೂ ತಪ್ಪುತಿಳಿವಳಿಕೆಯ ನಿಂದೆ ಯನ್ನೂ ಯಾವ ಸಜ್ಜನರು ಒಟ್ಟುಗೂಡಿಸಿ ತಿಳಿಯುವರೋ ಅವರು ದುಃಖ, ಅಜ್ಞಾನ-ಮುಂತಾದ ರೂಪದ ಅಯಥಾರ್ಥವನ್ನು ನಿಂದಿಸುವದರಿಂದ ದುಃಖ, ಅಜ್ಞಾನ-ಮುಂತಾದವುಗಳನ್ನು ದಾಟಿ ಸುಖ, ಜ್ಞಾನ - ಮುಂತಾದ ಸ್ವರೂಪವುಳ್ಳ ಯಥಾರ್ಥ ವನ್ನು ತಿಳಿದುಕೊಳ್ಳುವದರಿಂದ ಅಂಥ ಸುಖ, ಜ್ಞಾನ ಮುಂತಾದ ಸ್ವರೂಪವನ್ನೇ" ಹೊಂದುವರು.

**ಟಿಪ್ಪಣಿ :** ಈ ಮೂರು ಮಂತ್ರಗಳ ಮತ್ತು ಮುಂದಿನ ಮೂರು ಮಂತ್ರಗಳ ವಿವರಣೆಯು ಕೂರ್ಮಪುರಾಣದ್ದು. ಅಯಥಾರ್ಥವನ್ನು ನಿಂದಿಸುವದೆಂದರೆ ತಪ್ಪು ತಿಳಿವಳಿಕೆಯಲ್ಲಿ ಅನಾದರವುಂಟಾಗದಂತೆ ತತ್ತ್ವಜ್ಞಾನವನ್ನು ಬೋಧಿಸಿ ತಪ್ಪು ತಿಳಿವಳಿಕೆಯ ಜನರನ್ನು ತಿದ್ದುವರು.

## ಉಪನಿಷತ್ತು

**ಅನ್ಧಂ ತಮಃ ಪ್ರವಿಶನ್ತಿ ಯೇಽಸಮ್ಭೂತಿಮುಪಾಸತೇ ।**
**ತತೋ ಭೂಯ ಇವ ತೇ ತಮೋಯ ಉ ಸಮ್ಭೂತ್ಯಾಗ್ಂರತಾಃ ॥೧೨॥**

**ಅನ್ಯದೇವಾಹುಃ ಸಮ್ಭವಾದನ್ಯದಾಹುರಸಮ್ಭವಾತ್ ।**
**ಇತಿ ಶುಶ್ರುಮ ಧೀರಾಣಾಂ ಯೇನಸ್ತದ್ವಿಚಚಕ್ಷಿರೇ ॥೧೩॥**

**ಸಮ್ಭೂತಿಂ ಚ ವಿನಾಶಂ ಚ ಯಸ್ತದ್ವೇದೋಭಯಗ್ಂ ಸಹ ।**
**ವಿನಾಶೇನ ಮೃತ್ಯುಂ ತೀರ್ತ್ವಾ ಸಮ್ಭೂತ್ಯಾಮೃತಮಶ್ನುತೇ ॥೧೪॥**

೧೨-೧೪. ಯಾರು ಪರಮಾತ್ಮನನ್ನು ಜಗತ್ತಿಗೆ ಸೃಷ್ಟಿಕರ್ತನಲ್ಲವೆಂದು ಉಪಾಸನೆ ಮಾಡುವರೋ, ಅವರು ಅಂಧಂತಮಸ್ಸನ್ನು ಹೊಗುವರು. ಯಾರು ಸೃಷ್ಟಿಕರ್ತನೆಂದು ಮಾತ್ರ ಉಪಾಸನೆಮಾಡುವರೋ ಅವರು ಇನ್ನೂ ಹೆಚ್ಚಿನ ತಮಸ್ಸನ್ನು ಸೇರುವರು. ಆತನನ್ನು ಸೃಷ್ಟಿಕರ್ತನೆಂದು ಉಪಾಸನೆಮಾಡುವದರಿಂದ ಬೇರೆ ಫಲವೇ ಆಗುವ ದೆನ್ನುವರು; ಸಂಹಾರಕರ್ತನೆಂದು ಉಪಾಸನೆಮಾಡುವದರಿಂದ ಬೇರೆ ಫಲವೆನ್ನುವರು.

ಹೀಗೆಂದು ಜ್ಞಾನಿಗಳಿಂದ ಕೇಳಿರುತ್ತೇವೆ. ಅವರು ನಮಗೆ ಇದನ್ನು ವಿವರಿಸಿ ಹೇಳಿ ರುತ್ತಾರೆ. ಸೃಷ್ಟಿಕರ್ತೃತ್ವವನ್ನೂ ಸಂಹಾರಕರ್ತೃತ್ವವನ್ನೂ ಎರಡನ್ನೂ ಮೋಕ್ಷಕ್ಕೆ ಸಾಧನ ವೆಂದು ಯಾವಾತನು ತಿಳಿಯುತ್ತಾನೋ ಅವನು ಸಂಹಾರಕರ್ತನೆಂದು ತಿಳಿದದ್ದರಿಂದ ಮೃತ್ಯುವನ್ನು ದಾಟಿ ಸೃಷ್ಟಿಕರ್ತನೆಂದು ತಿಳಿದದ್ದರಿಂದ ಮೋಕ್ಷವನ್ನು ಹೊಂದುವನು.

(ಭಾಷ್ಯ)

ಏವಂ ಸೃಷ್ಟಿಕರ್ತೃತ್ವಂ ನಾಙ್ಗೀಕುರ್ವನ್ತಿ ಯೇ ಹರೇಃ ।
ತೇಽಪಿ ಯಾನ್ತಿ ತತೋ ಘೋರಂ ತಥಾ ಸಂಹಾರಕರ್ತೃತಾಮ್ ॥

ನಾಙ್ಗೀಕುರ್ವನ್ತಿ ತೇಽಪ್ಯೇವಂ ತಸ್ಮಾತ್ ಸರ್ವಗುಣಾತ್ಮಕಮ್ ।
ಸರ್ವಕರ್ತಾರಮೀಶೇಶಂ ಸರ್ವಸಂಹಾರಕಾರಕಮ್ ।
ಯೋ ವೇದ ಸಂಹೃತಿಜ್ಞಾನಾದ್ದೇಹಬನ್ಧಾದ್ವಿಮುಚ್ಯತೇ ।
ಸುಖಜ್ಞಾನಾದಿಕರ್ತೃತ್ವಜ್ಞಾನಾತ್ತದ್ವ್ಯಕ್ತಿಮಾವ್ರಜೇತ್ ॥

ಸರ್ವದೋಷವಿನಿರ್ಮುಕ್ತಂ ಗುಣರೂಪಂ ಜನಾರ್ದನಮ್ ।
ಜಾನೀಯಾನ್ನ ಗುಣಾನಾಂ ಚ ಭಾಗಹಾನಿಂ ಪ್ರಕಲ್ಪಯೇತ್ ॥

ನ ಮುಕ್ತಾನಾಮಪಿ ಹರೇಃ ಸಾಮ್ಯಂ ವಿಷ್ಣೋರಭಿನ್ನತಾಮ್ ।
ನ ವೈ ಪ್ರಚಿನ್ತಯೇತ್ ತಸ್ಮಾದ್ಬ್ರಹ್ಮಾದೇಃ ಸಾಮ್ಯಮೇವ ವಾ ॥
ಮಾನುಷಾದಿವಿರಿಞ್ಚ್ಯಾನ್ತಂ ತಾರತಮ್ಯಂ ವಿಮುಕ್ತಿಗಮ್ ।
ತತೋ ವಿಷ್ಣೋಃ ಪರೋತ್ಕರ್ಷಂ ಸಮ್ಯಗ್ಜ್ಞಾತ್ವಾ ವಿಮುಚ್ಯತೇ ॥

"ಹೀಗೆಯೇ ಯಾರು ಹರಿಯು ಸೃಷ್ಟಿಕರ್ತನೆಂಬುದನ್ನು ಒಪ್ಪದೆ ಅವನು ಬರಿಯ ಸಂಹಾರಕನೆಂದು ಬಗೆಯುವರೋ, ಅವರು ಘೋರವಾದ ತಮಸ್ಸನ್ನೈದುವರು; ಹಾಗೂ ಆತನು ಸಂಹಾರಕರ್ತನೆಂಬುದನ್ನು ಯಾರು ಒಪ್ಪುವದಿಲ್ಲವೋ ಅವರೂ ಹೀಗೆಯೇ ತಮಸ್ಸನ್ನೈದುವರು. ಆದಕಾರಣ ಸರ್ವಗುಣಗಳುಳ್ಳವನಾಗಿಯೂ ಎಲ್ಲಕ್ಕೂ ಕರ್ತೃವಾಗಿಯೂ ಈಶರಾದವರಿಗೂ ಈಶನಾಗಿಯೂ ಎಲ್ಲವನ್ನೂ ಸಂಹಾರ ಮಾಡು ವವನನಾಗಿಯೂ ಯಾವಾತನು ತಿಳಿಯುತ್ತಾನೋ ಆತನು ಪರಮಾತ್ಮನು ಸಂಹಾರ ಕಾರಣನೆಂಬ ತಿಳಿವಳಿಕೆಯಿಂದ ದೇಹಬಂಧದ ಬಿಡುಗಡೆಯನ್ನು ಹೊಂದುತ್ತಾನೆ. ಪರಮಾತ್ಮನು ಸುಖ, ಜ್ಞಾನ ಮುಂತಾದವುಗಳ ಕರ್ತೃವೆಂದು ತಿಳಿದುಕೊಳ್ಳುವದರಿಂದ

ಅವು ಆ ಜ್ಞಾನಿಯಲ್ಲಿ ವ್ಯಕ್ತವಾಗುವವು. ಆ ಜನಾರ್ದನನು ಎಲ್ಲಾ ಗುಣಗಳನ್ನೂ ಉಳ್ಳವನೆಂದೂ ಯಾವ ದೋಷವೂ ಇಲ್ಲದವನೆಂದೂ ತಿಳಿಯಬೇಕು. ಗುಣಗಳಲ್ಲಿ ಒಂದು ಭಾಗವು ಮಟ್ಟಿಗೆ ಇರುವದೆಂದೂ ಇನ್ನೊಂದು ಭಾಗವು ಇಲ್ಲವೆಂದೂ ಕಲ್ಪಿಸಬಾರದು. ಮುಕ್ತರು ಕೂಡ ಹರಿಗೆ ಸಮಾನರಾಗುವರೆಂದಾಗಲಿ ವಿಷ್ಣುವಿಗೂ ತಮಗೂ ಭೇದವಿಲ್ಲದವರಾಗುವರೆಂದಾಗಲಿ ತಿಳಿಯಬಾರದು; ಅಥವಾ ಮುಕ್ತರು ಬ್ರಹ್ಮನೇ ಮೊದಲಾದವರಿಗೆ ಸಮಾರಾಗುವರೆಂದೂ ತಿಳಿಯಬಾರದು. ಮನುಷ್ಯರಿಂದ ಹಿಡಿದು ಬ್ರಹ್ಮನವರೆಗೂ ಮುಕ್ತರಲ್ಲಿಕೂಡ ತಾರತಮ್ಯವಿರುವದೆಂದೂ ಅವರೆಲ್ಲರಿಗಿಂತ ವಿಷ್ಣುವಿನಲ್ಲಿ ನಿರವಧಿಕವಾದ ಹೆಚ್ಚುಗಾರಿಕೆ ಇರುವದೆಂದೂ ತಿಳಿಯಬೇಕು. ಹೀಗೆ ಚೆನ್ನಾಗಿ ತಿಳಿದುಕೊಂಡರೆ ಮುಕ್ತಿಯನ್ನು ಹೊಂದುತ್ತಾನೆ"- ಎಂದು ಕೂರ್ಮ ಪುರಾಣದಲ್ಲಿದೆ.

### ಉಪನಿಷತ್ತು

ಹಿರಣ್ಮಯೇನ ಪಾತ್ರೇಽಣ ಸತ್ಯಸ್ಯಾಪಿಹಿತಂ ಮುಖಮ್ ।
ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ ॥೧೫॥
ಪೂಷನ್ನೇಕರ್ಷೇ ಯಮ ಸೂರ್ಯ ಪ್ರಾಜಾಪತ್ಯ ವ್ಯೂಹ ರಶ್ಮೀನ್
ಸಮೂಹ ತೇಜೋ ಯತ್ತೇ ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ
ಯೋಽಸಾವಸೌ ಪುರುಷಃ ಸೋಽಹಮಸ್ಮಿ ॥೧೬॥

೧೫-೧೬. ಚಿನ್ನದಂತೆ ಹೊಳೆಯುತ್ತಿರುವ ಸೂರ್ಯಮಂಡಲವೆಂಬ ಪಾತ್ರೆಯಿಂದ ಸತ್ಯಸ್ವರೂಪನಾದ ನಿನ್ನ ಮುಖವು ಮುಚ್ಚಿಕೊಂಡಿರುವದು. ಎಲೈ ಪೂಷನೆ, ಅದನ್ನು ನೀನು ಸತ್ಯಧರ್ಮನಾದ ನನಗಾಗಿ ನಿನ್ನ ದರ್ಶನವಾಗುವದಕ್ಕಾಗಿ ತೆರೆಯುವವನಾಗು. ಪೂಷನೆ. ಏಕರ್ಷಿಯೆ, ಯಮನೆ, ಸೂರ್ಯನೆ, ಪ್ರಾಜಾಪತ್ಯನೆ, ನಮ್ಮ ಸ್ವರೂಪಜ್ಞಾನವನ್ನು ವಿಸ್ತರಿಸು, ಹೊರಗಿನ ಜ್ಞಾನವನ್ನು ಹೆಚ್ಚಿಸು. ನಿನ್ನ ಮಂಗಳಕರವಾದ ರೂಪವನ್ನು ನಿನ್ನ ಪ್ರಸಾದದಿಂದ ನೋಡುವೆನು. ಪ್ರಾಣನಲ್ಲಿರುವ ಈ ಪುರುಷನುಂಟಷ್ಟೆ, ಆತನು 'ಅಹಂ' 'ಅಸ್ಮಿ' ಶಬ್ದಗಳಿಗೆ ವಾಚ್ಯನು.

### (ಭಾಷ್ಯ)

ಪಾತ್ರಂ ಹಿರಣ್ಮಯಂ ಸೂರ್ಯಮಣ್ಡಲಂ ಸಮುದಾಹೃತಮ್ ।
ವಿಷ್ಣೋಃ ಸತ್ಯಸ್ಯ ತೇನೈವ ಸರ್ವದಾಪಿಹಿತಂ ಮುಖಮ್ ॥

ತತ್ತು ಪೂರ್ಣತ್ವತಃ ಪೂಷಾ ವಿಷ್ಣುರ್ದರ್ಶಯತಿ ಸ್ವಯಮ್ ।
ಸತ್ಯಧರ್ಮಾಯ ಭಕ್ತಾಯ ಪ್ರಧಾನಜ್ಞಾನರೂಪತಃ ॥

ವಿಷ್ಣುರೇಕರ್ಷಿರ್ಜ್ಞೇಯೋ ಯತೋ ನಿಯಮನಾದ್ಧರಿಃ ।
ಸೂರ್ಯಃ ಸೂರಿಗಮ್ಯತ್ವಾತ್ ಪ್ರಾಜಾಪತ್ಯಃ ಪ್ರಜಾಪತೇಃ ॥

ವಿಶೇಷೇಣೈವ ಗಮ್ಯತ್ವಾತ್, 'ಅಹಂ'ಚಾಸಾವಹೇಯತಃ ।
ಅಸ್ಮಿ ನಿತ್ಯಾಸ್ತಿ ತಾಮಾನಾತ್ಸರ್ವಜೀವೇಷು ಸಂಸ್ಥಿತಃ ।
ಸ್ವಯಂ ತು ಸರ್ವಜೀವೇಭ್ಯೋ ವ್ಯತಿರಿಕ್ತಃ ಪರೋ ಹರಿಃ ॥
ಸಕ್ರತುರ್ಜ್ಞಾನರೂಪತ್ವಾದಗ್ನಿರಙ್ಗ ಪ್ರಣೇಕೃತ - ಇತಿ ಬ್ರಹ್ಮಾಣ್ಡೇ ॥

ಸತ್ಯಂ ಬ್ರಹ್ಮ ಹೃದಯೇ ಧಾರಯತೀತಿ ಸತ್ಯಧರ್ಮಾ ।
ಏಕೋಽಸೌ ಶಬ್ದಃ ಪ್ರಾಣೇ ಸ್ಥಿತ ಇತಿ ॥

"ಚಿನ್ನದ ಪಾತ್ರೆಯೆಂದರೆ ಸೂರ್ಯಮಂಡಲವು. ಸತ್ಯನ ಮುಖವು ಎಂದರೆ ವಿಷ್ಣುವಿನ ಶರೀರವು. ಆ ಸೂರ್ಯಮಂಡಲದಿಂದಲೇ ಪರಮಾತ್ಮನ ಮುಖವು ಯಾವಾಗಲೂ ಮುಚ್ಚಿಕೊಂಡಿರುವದು. ಅದನ್ನು ಪೂಷನು ಎಂದರೆ ಪೂರ್ಣನಾಗಿರುವ ವಿಷ್ಣುವು ಸತ್ಯಧರ್ಮನಿಗೆ ಎಂದರೆ ತನ್ನ ಭಕ್ತನಿಗೆ ತೋರಿಸುತ್ತಾನೆ. ಮುಖ್ಯ(ಏಕ)ನಾಗಿ ಜ್ಞಾನ ಸ್ವರೂಪನಾಗಿ(ಋಷಿಯಾಗಿ)ರುವದರಿಂದ ವಿಷ್ಣುವನ್ನು ಏಕರ್ಷಿಯೆಂದು ತಿಳಿಯಬೇಕು. ಎಲ್ಲರಿಗೂ ನಿಯಾಮಕನಾದ್ದರಿಂದ ಹರಿಯು ಯಮನು. ಸೂರಿಗಳಿಗೆ ಗತಿಯಾಗಿರುವ ದರಿಂದ ಅವನು ಸೂರ್ಯನು. ಹಿರಣ್ಯಗರ್ಭನಾದ ಪ್ರಜಾಪತಿಗೆ ಮುಖ್ಯವಾದ ಗತಿ ಯಾಗಿರುವದರಿಂದ ಪ್ರಾಜಾಪತ್ಯನು.

"ಆತನು ಅಹೇಯನು(ಬಿಡತಕ್ಕವನಲ್ಲ)ಆದ್ದರಿಂದ ಅವನಿಗೆ 'ಅಹಮ್' ಎಂದು ಹೆಸರು. ಎಲ್ಲಾ ಜೀವರಲ್ಲಿಯೂ ಇದ್ದುಕೊಂಡು ಅವರ ಇರುವಿಕೆಯನ್ನು (ಅಸ್ತಿತ್ವಂ) ಅಳೆಯುವ (ಮಾ) ನಾದ್ದರಿಂದ ಆತನಿಗೆ 'ಅಸ್ಮಿ' ಎಂದು ಹೆಸರು. ಆದರೆ ಪರಮಾತ್ಮ ನಾದ ಆ ಹರಿಯು ತಾನು ಮಾತ್ರ ಎಲ್ಲಾ ಜೀವರುಗಳಿಗಿಂತಲೂ ಬೇರೆಯೇ. ಆತ್ಮನು ಜ್ಞಾನರೂಪನಾಗಿರುವದರಿಂದ ಕ್ರತುವೆನಿಸುವನು. ಶರೀರ(ಅಂಗ)ಕ್ಕೆ ನಿಯಾಮಕ ನಾದ್ದರಿಂದ ಅಗ್ನಿ ಎಂದು ಹೆಸರು" ಎಂದು ಬ್ರಹ್ಮಾಂಡಪುರಾಣದಲ್ಲಿದೆ. ಸತ್ಯವೆಂದರೆ ಬ್ರಹ್ಮವು; ಅದನ್ನು ಹೃದಯದಲ್ಲಿ ಧರಿಸಿರುವದರಿಂದ ಭಕ್ತನಿಗೆ ಸತ್ಯ ಧರ್ಮನೆಂದು

ಹೆಸರು. 16ನೆಯ ಮಂತ್ರದಲ್ಲಿರುವ ಎರಡರಲ್ಲಿ ಒಂದು 'ಅಸೌ' ಎಂಬ ಶಬ್ದಕ್ಕೆ ಪ್ರಾಣನಲ್ಲಿರತಕ್ಕವನು ಎಂದರ್ಥ.

**ಟಿಪ್ಪಣಿ :** ಈ ಪುರಾಣವಚನದಲ್ಲಿ 15, 16, 17, 18 ಈ ಮಂತ್ರಗಳಲ್ಲಿರುವ ಮುಖ್ಯ ವಿಶೇಷಣಗಳನ್ನೆಲ್ಲ ವಿವರಿಸಿದೆ. 15ನೆಯ ಮಂತ್ರಕ್ಕೆ ತಾತ್ಪರ್ಯವನ್ನು ಕೊಟ್ಟಿದೆ. ಕ್ರತು, 'ಅಗ್ನಿ' ಎಂಬ ವಿಶೇಷಗಳು ಮುಂದೆ ಮಂತ್ರದಲ್ಲಿ ಬರುತ್ತವೆ. ಅವಕ್ಕೂ ಇಲ್ಲಿ ಅರ್ಥವಿದೆ. 16ನೆಯ ಮಂತ್ರದಲ್ಲಿ ರಶ್ಮಿ ಎಂದರೆ ಕಿರಣವೆಂದೂ ತೇಜಸ್ಸೆಂದರೆ ಬೆಳಕೆಂದೂ ಅರ್ಥಮಾಡಿದರೆ ತಾತ್ಪರ್ಯವು ಹೊರಡದು. ಆದ್ದರಿಂದ ಆ ಮಾತುಗಳನ್ನು ಸ್ವರೂಪ ಜ್ಞಾನ, ಬಾಹ್ಯಜ್ಞಾನ ಎಂದು– ವಿವರಿಸಿದೆ; ದೇವರನ್ನು ಕಾಣುವದಕ್ಕೆ ಆ ಜ್ಞಾನಗಳು ಹಿಗ್ಗಬೇಕು. ಈ ಮಂತ್ರದಲ್ಲಿ 'ಅಹಮ್' ಎಂದರೆ ನಾನು, 'ಅಸ್ಮಿ' ಎಂದರೆ ಆಗಿರುತ್ತೇನೆ ಎಂದು ಅರ್ಥವಲ್ಲ; ಇವೆರಡೂ ಪರಮಾತ್ಮನ ಹೆಸರುಗಳು. 'ಸೋಽಹಮಸ್ಮಿ' ಎಂದರೆ 'ನಾನು ಅವನು' ಎಂದು ಎಲ್ಲಿಯಾದರೂ ಅರ್ಥವನ್ನು ಮಾಡಿಕೊಂಡಾರೆಂದು ಪುರಾಣ ವಚನದಲ್ಲಿ ಹರಿಯು ಎಲ್ಲಾ ಜೀವರಿಗಿಂತಲೂ ಭಿನ್ನನೆಂದು ಹೇಳಿದೆ.

## ಉಪನಿಷತ್ತು

**ವಾಯುರನಿಲಮಮೃತಮಥೇದಂ ಭಸ್ಮಾನ್ತಂ ಶರೀರಮ್ ।**
**ಓಂ ಕ್ರತೋ ಸ್ಮರ ಕೃತಗ್ಂ ಸ್ಮರ ಕೃತಗ್ಂ ಸ್ಮರ ॥೧೭॥**

೧೭. ಈ ಶರೀರವು ಬೂದಿಯಲ್ಲಿ ಕೊನೆಗಾಣತಕ್ಕದ್ದು. ಆದರೂ (ಅದರೊಳಗಿನ ಪರಮಾತ್ಮನು ಸಾಯುವದಿಲ್ಲ, ಆತನು ಅಮೃತನು). ಅನಿಲವಾದ ವಾಯುವೇ ಮೃತಿ ರಹಿತನಾಗಿರುವನು. (ಹೀಗಿರುವಲ್ಲಿ ಪರಮಾತ್ಮನ ವಿಷಯದಲ್ಲಿ ಹೇಳುವದೇನಿದೆ?) ಎಲೈ ಸರ್ವವ್ಯಾಪಕನೇ, ಜ್ಞಾನಸ್ವರೂಪನೆ, ನನ್ನನ್ನು ನೆನಪಿಡು, ನನ್ನ ಕರ್ಮವನ್ನು ನೆನಪಿನಲ್ಲಿಡು.

## (ಭಾಷ್ಯ)

**ಯಸ್ಮಿನ್ನಯಂ ಸ್ಥಿತಃ ಸೋಽಪ್ಯಮೃತಃ । ಕಿಮುಪರಃ? ಅಃ ।**
**ಬ್ರಹ್ಮೈವ ನಿಲಯನಂ ಯಸ್ಯ ವಾಯೋಃ ಸೋಽನಿಲಮ್ ॥**

**ಅತಿರೋಹಿತವಿಜ್ಞಾನಾದ್ವಾಯುರಪ್ಯಮೃತಃ ಸ್ಮೃತಃ ।**
**ಮುಖ್ಯಾಮೃತಃ ಸ್ವಯಂ ರಾಮಃ ಪರಮಾತ್ಮಾ ಸನಾತನಃ ॥**

– ಇತಿ ರಾಮಸಂಹಿತಾಯಾಮ್

ಭಕ್ತಾನಾಂ ಸ್ಮರಣಂ ವಿಷ್ಣೋರ್ನಿತ್ಯಜ್ಞಪ್ತಿಸ್ವರೂಪತಃ ।
ಅನುಗ್ರಹೋನ್ಮುಖತ್ವಂ ತು ನೈವಾನ್ಯತ್ಕ್ವಚಿದಿಷ್ಯತೇ ॥ – ಇತಿ ಬ್ರಹ್ಮತರ್ಕೇ

(ಯಾವನಲ್ಲಿ ಈತನಿರುವನೋ ಆ ವಾಯುವೂ) ಮರಣರಹಿತನು. ಪರಮಾತ್ಮನು (ಮರಣರಹಿತನು, ನಿತ್ಯನು)ಎಂದು ಹೇಳತಕ್ಕದ್ದೇನಿದೆ? ಆ ಎಂದರೆ ಬ್ರಹ್ಮವೇ ನಿಲಯನ (ಸ್ಥಾನ)ವಾಗಿರುವದರಿಂದ ವಾಯುವಿಗೆ 'ಅನಿಲಮ್' ಎಂದು ಹೆಸರು. ''ತನ್ನ ಜ್ಞಾನಕ್ಕೇ (ಪ್ರಲಯದಲ್ಲಿಯೂ) ಮುಸುಕಿಲ್ಲವಾದ್ದರಿಂದ ವಾಯುವೂ ಅಮೃತನೆನಿಸುವನು. ಪರಮಾತ್ಮನೂ ಸನಾತನನೂ ಆದ ರಾಮನೊಬ್ಬನು ಮಾತ್ರ ಮುಖ್ಯ ವೃತ್ತಿಯಿಂದ ಅಮೃತನು'' – ಎಂದು ರಾಮಸಂಹಿತೆಯಲ್ಲಿ ಹೇಳಿದೆ. ''ವಿಷ್ಣುವು ನಿತ್ಯಚೈತನ್ಯಸ್ವರೂಪ ನಾಗಿರುವದರಿಂದ ಆತನ ಸ್ಮರಣೆ ಎಂದರೆ ಭಕ್ತರಿಗೆ ಅನುಗ್ರಹಮಾಡುವದಕ್ಕೆ ಅಭಿಮುಖ ವಾಗುವದೇ ಹೊರತು ಮತ್ತೇನೂ ಅಲ್ಲ'' ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ಟಿಪ್ಪಣಿ : ಜೀವನಾದ ವಾಯುವಿಗೆ ಪ್ರಲಯದಲ್ಲಿ ಮಿಕ್ಕವರಂತೆ ಜ್ಞಾನಲೋಪ ವಾಗುವದಿಲ್ಲ; ಪರಮಾತ್ಮನ ಜ್ಞಾನಕ್ಕಾಗಲಿ, ಶರೀರಕ್ಕಾಗಲಿ ಎಂದಿಗೂ ನಾಶವಿಲ್ಲ. 'ಪರಮಾತ್ಮನೆ ನೆನಪಿಡು' ಎಂದರೆ ಆತನಿಗೂ ಮರವೆಯುಂಟೆಂದು ಭಾವಿಸಬಾರದು, ನೆನಪಿಡು ಎಂದರೆ ಅನುಗ್ರಹಿಸು ಎಂದು ಅರ್ಥ.

## ಉಪನಿಷತ್ತು

ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್
ವಿಶ್ವಾನಿ ದೇವ ವಯುನಾನಿ ವಿದ್ವಾನ್ ।
ಯುಯೋಧ್ಯಸ್ಮಜ್ಜುಹುರಾಣಮೇನೋ
ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ ॥೧೮॥

೧೮. ಅಂಗನಿಯಾಮಕನಾದ ಪರಮಾತ್ಮನೆ, ನಮ್ಮನ್ನು ಮುಕ್ತಿಯೆಂಬ ಧನದ ಬಳಿಗೆ ಸರಿಯಾದ ಮಾರ್ಗದಿಂದ ಕರೆದುಕೊಂಡು ಹೋಗು. ದೇವನೆ, ನೀನು ಎಲ್ಲಾ ಜ್ಞಾನಗಳನ್ನೂ ಬಲ್ಲವನು, ಅಲ್ಪರನ್ನಾಗಿ ಮಾಡುವ ಪಾಪವನ್ನು ನಮ್ಮಿಂದ ಬಿಡಿಸು. ನಿನಗೆ ಹೆಚ್ಚಿನ ನಮಸ್ಕಾರೋಕ್ತಿಯನ್ನು ಆಚರಿಸುತ್ತೇವೆ.

(ಭಾಷ್ಯ)

**ವಯುನಮ್-ಜ್ಞಾನಮ್**

**ತ್ವದ್ದತ್ತಯಾ ವಯುನಯೇದಮಚಷ್ಟವಿಶ್ವಮ್ ॥ - ಇತಿ ವಚನಾತ್**

**ಜುಹುರಾಣಮ್ ಅಸ್ಮಾನಲ್ಪೀಕುರ್ವತ್ । ಯುಯೋಧಿ-ವಿಯೋಜಯ ॥**

**ಯದಸ್ಮಿನ್ ಕುರುತೇಽತ್ಯಲ್ಪಾಂ ಸ್ತದೇನೋಽಸ್ಮದ್ವಿಯೋಜಯ ।**

**ನಯ ನೋ ಮೋಕ್ಷವಿತ್ತಾ ಯೇತ್ಯಸ್ತೌದ್ಯಜ್ಞಂ ಮನುಃ ಸ್ವರಾಟ್ ॥**

**ಇತಿ ಸ್ಕಾನ್ದೇ ॥ ಯುಯು ವಿಯೋಗ ಇತಿ ಧಾತುಃ ।**

**ಭಕ್ತಿ ಜ್ಞಾನಾಭ್ಯಾಂ ಭೂಯಿಷ್ಠಾಂ ನಮ ಉಕ್ತಿಂ ವಿಧೇಮ ॥**

(ಈ ಮಂತ್ರದಲ್ಲಿ) ವಯುನವೆಂದರೆ ಜ್ಞಾನವು. "ನಿನ್ನಿಂದ ಕೊಡಲ್ಪಟ್ಟ ವಯುನ ದಿಂದ ವಿಶ್ವವನ್ನು (ನಿನ್ನ ಭಕ್ತನು) ಕಂಡಿರುತ್ತಾನೆ" (ಭಾಗ. 4.9.8) ಎಂಬ (ಭಾಗವತ) ವಚನವು ಇದಕ್ಕೆ ಪ್ರಮಾಣವು. ಜುಹುರಾಣಮ್ ಎಂದರೆ ನಮ್ಮನ್ನು ಅಲ್ಪರಾಗಿ ಮಾಡುವ ಎಂದರ್ಥ. ಯುಯೋಧಿ - ಬಿಡಿಸಿ ತೊಲಗಿಸು ಎಂದರ್ಥ. "ನಮ್ಮನ್ನು ಅತ್ಯಲ್ಪರಾಗಿ ಮಾಡುವ ಪಾಪವುಂಟಷ್ಟೆ, ಅದನ್ನು ನಮ್ಮಿಂದ ಬಿಡಿಸಿ ತೊಲಗಿಸು; ನಮ್ಮನ್ನು ಮೋಕ್ಷವಿತ್ತದ ಬಳಿಗೆ ಕರೆದುಕೊಂಡು ಹೋಗು - ಎಂದು ಯಜ್ಞನಾಮಕ ನಾದ ಶ್ರೀಮಹಾವಿಷ್ಣುವನ್ನು ಸಾರ್ವಭೌಮನಾದ ಮನುವು ಸ್ತುತಿಸಿದನು" ಎಂದು ಸ್ಕಾಂದಪುರಾಣದಲ್ಲಿದೆ. (ಯುಯೋಧಿ ಎಂಬ ಮಾತು) ಯುಯು-ವಿಯೋಗೇ ಎಂಬ ಧಾತುವಿನಿಂದ ಬಂದಿದೆ. ಭಕ್ತಿಜ್ಞಾನಗಳಿಂದ ಹೆಚ್ಚಿರುವ ನಮ ಉಕ್ತಿಯನ್ನು ಹೇಳುತ್ತೇವೆ. (ಎಂಬುದು ಕೊನೆಯ ವಾಕ್ಯದ ಅರ್ಥವು.)

## ಶ್ರೀಮಧ್ವಾಚಾರ್ಯರ ಮಂಗಲ

**ಪೂರ್ಣ ಶಕ್ತಿಚಿದಾನನ್ದ ಶ್ರೀತೇಜಃ ಸ್ಪಷ್ಟಮೂರ್ತಯೇ ।**

**ಮಮಾಭ್ಯಧಿಕಮಿತ್ರಾಯ ನಮೋ ನಾರಾಯಣಾಯ ತೇ ॥**

ಪೂರ್ಣವಾದ ಶಕ್ತಿ, ಜ್ಞಾನ, ಆನಂದ, ಸಂಪತ್ತು, ಕಾಂತಿ- ಎಂಬ ಸ್ಪಷ್ಟವಾದ ಶರೀರವುಳ್ಳ ನನಗೆ ಎಲ್ಲರಿಗಿಂತಲೂ ಹೆಚ್ಚಿನ ಪ್ರೀತಿಗೆ ವಿಷಯನಾಗಿರುವ ಮಿತ್ರನಾದ ನಾರಾಯಣನೆ, ನಿನಗೆ ನಮಸ್ಕಾರ!

**ಇಲ್ಲಿಗೆ ಈಶಾವಾಸ್ಯಭಾಷ್ಯವು ಮುಗಿಯಿತು.**

# ವೇದಾಂತದಲ್ಲಿ ಯೋಗದ ಸ್ಥಾನ

ಶ್ರೀಶಂಕರಭಗವತ್ಪಾದರವರು ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಅಲ್ಲಲ್ಲಿ ಯೋಗವನ್ನು ಪರಾಮರ್ಶಿಸಿರುತ್ತಾರೆ. ಅವರಿಗೆ ಸಮ್ಮತವಾದ ವೇದಾಂತದಲ್ಲಿ ಯೋಗ ಶಬ್ದಕ್ಕೆ ಅರ್ಥವೇನೆಂದು ತಿಳಿಯುವದು ಆವಶ್ಯವಾಗಿರುತ್ತದೆ. ಏಕೆಂದರೆ ಈಗಿನ ವೇದಾಂತಿಗಳು ಅನೇಕರು ಯೋಗಸಮಾಧಿಯಿಂದಲೇ ವೇದಾಂತದ ಅನುಭವವಾಗುವದೆಂಬುದು ಆಚಾರ್ಯರ ಅಭಿಪ್ರಾಯವೆಂದು ಪ್ರತಿಪಾದಿಸುತ್ತಿದ್ದಾರೆ. ಈ ಅಭಿಪ್ರಾಯವು ಸರಿಯಲ್ಲವೆಂದು ವಿಚಾರಕ್ಕೆ ಪೂರ್ವದಲ್ಲಿಯೇ ಯಾರಿಗಾದರೂ ಹೊಳೆಯುತ್ತದೆ. ಏಕೆಂದರೆ ಆಗ ವೇದಾಂತವು ಸ್ವತಂತ್ರವಾದ ಒಂದು ದರ್ಶನವಾಗಿ, ಉಳಿಯದೆ ಯೋಗಕ್ಕೆ ಒಂದು ಅಂಗವಾಗಿ ಬಿಡುತ್ತದೆ.

ಆದರೂ ಭಗವತ್ಪಾದರ ಅಭಿಪ್ರಾಯವನ್ನು ಅವರ ಸಾಕ್ಷಾದ್ವಾಕ್ಯಗಳಿಂದಲೇ ತಿಳಿಯುವದು ಒಳ್ಳೆಯದು. ಮೊಟ್ಟಮೊದಲನೆಯದಾಗಿ ಆಚಾರ್ಯರು ಸಾಂಖ್ಯ, ಯೋಗ - ಎಂಬೀ ಎರಡು ದರ್ಶನಗಳನ್ನು ಸೂತ್ರಭಾಷ್ಯದಲ್ಲಿ ಖಂಡಿಸಿರುತ್ತಾರೆಂಬುದನ್ನು ನಾವು ನೆನಪಿನಲ್ಲಿಡಬೇಕು.

''ಯೇನ ತ್ವಂಶೇನ ನ ವಿರುಧ್ಯೇತೇ ತೇನೇಷ್ಟಮೇವ ಸಾಂಖ್ಯಯೋಗಸ್ಮೃತ್ಯೋಃ ಸಾವಕಾಶತ್ವಮ್'' (ಸೂ.ಭಾ. ೨-೧-೩)

ಎಂಬ ವಾಕ್ಯದಲ್ಲಿ ವೇದವಿರುದ್ಧವಲ್ಲದ ವಿಷಯದಲ್ಲಿ ಯೋಗವನ್ನು ಗ್ರಹಿಸಬಹುದೆಂದು ಅವರು ಹೇಳಿರುತ್ತಾರೆ. ಆದ್ದರಿಂದ ನಾವೂ ವೇದಕ್ಕೆ ಅವಿರುದ್ಧವಾಗಿರುವ ಯೋಗೋಪದೇಶವನ್ನೇ ಸ್ವೀಕರಿಸಬೇಕಾಗಿರುತ್ತದೆ.

ಶ್ರೀಶಂಕರಾಚಾರ್ಯರ ಸಿದ್ಧಾಂತದಲ್ಲಿ ವೇದಾಂತವಾಕ್ಯದಿಂದುಂಟಾದ ಬ್ರಹ್ಮಜ್ಞಾನವಾದ ಬಳಿಕ ಮತ್ತೆ ಮಾಡಬೇಕಾದದ್ದು ಏನೂ ಉಳಿಯುವದಿಲ್ಲ. ಈ ವಿಷಯಕ್ಕೆ ಒಂದೆರಡು ಭಾಷ್ಯವಾಕ್ಯವನ್ನು ನೆನಪಿನಲ್ಲಿಡುವದು ಅವಶ್ಯ.

೧. ''ಯಥಾ ವಿಧಿವಿಷಯೇ ಕರ್ತ್ರಾದ್ಯನೇಕಕಾರಕೋಪಸಂಹಾರದ್ವಾರೇಣ ವಾಕ್ಯಾರ್ಥಜ್ಞಾನಕಾಲಾದನ್ಯತ್ರ ಅನುಷ್ಠೇಯೋಽರ್ಥೋಽಸ್ತಿ ಅಗ್ನಿಹೋತ್ರಾದಿ ಲಕ್ಷಣಃ ನ ತಥಾ ಇಹ ಪರವಿದ್ಯಾವಿಷಯೇ । ವಾಕ್ಯಾರ್ಥಜ್ಞಾನ ಸಮಕಾಲ ಏವ ತು ಪರ್ಯವಸಿತೋ ಭವತಿ । ಕೇವಲ ಶಬ್ದಶಕ್ತಿಪ್ರಕಾಶಿತ ಜ್ಞಾನ

ಮಾತ್ರನಿಷ್ಠಾವ್ಯತಿರಿಕ್ತಾಭಾವಾತ್ ॥ (ಮುಂ.ಭಾ. ೧-೧-೬)''.

ಈ ವಾಕ್ಯದಲ್ಲಿ ನಾವು ಹೇಳಿದ ಅಭಿಪ್ರಾಯವು ಸ್ಪಷ್ಟವಾಗಿ ಕಂಠರವದಿಂದ ಹೇಳಿರುವದು ಕಂಡುಬರುತ್ತದೆ. ವೇದಾಂತವಾಕ್ಯವೇ ಬ್ರಹ್ಮಜ್ಞಾನಕ್ಕೆ ಕಾರಣವು; ವಾಕ್ಯ ಜ್ಞಾನಕ್ಕಿಂತ ಮತ್ತೊಂದು ಮಾಡತಕ್ಕದ್ದಿರುವದೇ ಇಲ್ಲ. ಇದೇ ಅಭಿಪ್ರಾಯದ ಗೀತಾ ಭಾಷ್ಯವನ್ನು ನೋಡಿ.

೨. ''ಅಗ್ನಿ ಹೋತ್ರಾದಿವಿಧ್ಯರ್ಥಜ್ಞಾನೋತ್ತರಕಾಲಮ್ ಅಗ್ನಿಹೋತ್ರಾದಿ ಕರ್ಮ ಅನೇಕಸಾಧನೋಪಸಂಹಾರಪೂರ್ವಕಮ್ಅನುಷ್ಠೇಯಮ್ । ಕರ್ತಾಹಂ ಮಮ ಕರ್ತವ್ಯಮ್ ಇತ್ಯೇವಂಪ್ರಕಾರವಿಜ್ಞಾನವತೋಽವಿದುಷೋ ಯಥಾ ಅನುಷ್ಠೇಯಂ ಭವತಿ ನ ತು ತಥಾ ನ ಜಾಯತ ಇತ್ಯಾದ್ಯಾತ್ಮಸ್ವರೂಪ ವಿಧ್ಯರ್ಥಜ್ಞಾನೋತ್ತರಕಾಲಭಾವಿ ಕಿಂಚಿತ್ ಅನುಷ್ಠೇಯಂ ಭವತಿ ॥''

ಈ ವಚನದಲ್ಲಿಯೂ ಆತ್ಮಸ್ವರೂಪಜ್ಞಾನವನ್ನು ಹೇಳುವ ವಾಕ್ಯದರ್ಥದ ಅರಿವು ಆದ ಬಳಿಕ ಏನನ್ನೂ ಮಾಡಬೇಕಾದದ್ದಿರುವದಿಲ್ಲ ಎಂದು ಸ್ಪಷ್ಟವಾಗಿ ಹೇಳಿರುತ್ತದೆ.

ಆದ್ದರಿಂದ ಈ ವಿಷಯಕ್ಕೆ ವಿರುದ್ಧವಾಗದ ಅಂಶಗಳನ್ನೇ ಸಾಂಖ್ಯಯೋಗಗಳಿಂದ ತಿಳಿದುಕೊಳ್ಳಬೇಕು. ಗುಣತ್ರಯವಿಭಾಗವನ್ನು ಸಾಂಖ್ಯದಿಂದಲೂ ಆಸನಾದಿಗಳನ್ನು ಇಂದ್ರಿಯ ನಿಗ್ರಹವನ್ನೂ ಯೋಗದಿಂದಲೂ ಗ್ರಹಿಸದರೆ ಸಿದ್ಧಾಂತಕ್ಕೆ ಯಾವ ಹಾನಿಯೂ ಇಲ್ಲ, ವೇದಾಂತಜ್ಞಾನಕ್ಕೆ ಉಪಯೋಗವೂ ಉಂಟು. ಆದ್ದರಿಂದ ಅದನ್ನು ಸ್ವೀಕರಿಸ ಬಹುದು ಎಂದಾಯಿತು.

ಹಾಗಾದರೆ ಆಚಾರ್ಯರು ಅಲ್ಲಲ್ಲಿ ಯೋಗಮಾಹಾತ್ಮ್ಯವನ್ನು ಹೊಗಳುತ್ತಾರಲ್ಲ! ಭಗವದ್ಗೀತೆಯಲ್ಲಿ ಆರನೆಯ ಅಧ್ಯಾಯದಲ್ಲಿ ಧ್ಯಾನಯೋಗವನ್ನು ಹೇಳಿರುವದು ಜ್ಞಾನಕ್ಕೆ ಅಂತರಂಗಸಾಧನವೆಂಬ ಅಭಿಪ್ರಾಯದಿಂದ ಎಂದು ಸ್ಪಷ್ಟವಾಗಿ ಬರೆದಿರುತ್ತಾರಲ್ಲ! ಅದನ್ನು ಹೇಗೆ ಹೊಂದಿಸಿಕೊಳ್ಳಬೇಕು? ಎಂಬುದೊಂದು ಪ್ರಶ್ನೆಯು ಈಗ ಎದ್ದು ಕೊಳ್ಳುತ್ತದೆ. ಬರಿಯ ವಾಕ್ಯಶ್ರವಣದಿಂದಲೇ ಆತ್ಮಾನುಭವವುಂಟಾಗುವದಾದರೆ ವೇದಾಂತಿ ಗಳೆನಿಸಿಕೊಂಡಿರುವ ಅನೇಕ ಪಂಡಿತರುಗಳಿಗೆ ಏತಕ್ಕೆ ಆ ಅನುಭವವಾಗಿರುವದಿಲ್ಲ? ಶ್ರವಣ, ಮನನ, ನಿದಿಧ್ಯಾಸನ - ಎಂಬ ಮೂರು ಸಾಧನಗಳೆಂದು ವೇದದಲ್ಲಿಯೇ ಸ್ಪಷ್ಟವಾಗಿ ಹೇಳಿಲ್ಲವೆ? ಎಂಬ ಪ್ರಶ್ನೆಗೂ ಉತ್ತರವನ್ನು ಹೇಳಬೇಕಾಗುವದು.

ಀಀಀಀಀ

# ಯೋಗಸಮಾಧಿ

ಉಪನಿಷತ್ತುಗಳಲ್ಲಿ ಅಲ್ಲಲ್ಲಿ ಯೋಗವೆಂಬ ಶಬ್ದವು ಬರುತ್ತದೆ. ವಿಶೇಷವಾಗಿ ಶ್ವೇತಾಶ್ವತರೋಪನಿಷತ್ತಿನಲ್ಲಿ **''ತತ್ಕಾರಣಂ ಸಾಂಖ್ಯಯೋಗಾಭಿಪನ್ನಂ ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ'' (6-13)** ಎಂದು ಸ್ಪಷ್ಟವಾಗಿ ಹೇಳಿರುತ್ತದೆ. ಆದ್ದರಿಂದ ಯೋಗಸಮಾಧಿಯಿಲ್ಲದೆ ಯಾರೊಬ್ಬರಿಗೂ ವೇದಾಂತಾನುಭವವು ಉಂಟಾಗಲರಿಯದು ಎಂದು ಕೆಲವರು ಹೇಳುತ್ತಿದ್ದಾರೆ. ಗೀತೆಯ ಆರನೆಯ ಅಧ್ಯಾಯದಲ್ಲಿ ಹೇಳಿರುವ ಧ್ಯಾನಯೋಗವನ್ನೂ ಎರಡನೆಯ ಅಧ್ಯಾಯದಲ್ಲಿ ಹೇಳಿರುವ ಸ್ಥಿತಪ್ರಜ್ಞತ್ವವನ್ನೂ ಯೋಗಸಮಾಧಿಯ ವರ್ಣನೆಯೆಂದು ವ್ಯಾಖ್ಯಾನಮಾಡುವವರೂ ಇರುತ್ತಾರೆ. ಆದ್ದರಿಂದ ಇಲ್ಲಿ ಆಚಾರ್ಯರ ನಿಷ್ಕೃಷ್ಟವಾದ ಮತವು ಯಾವದು? - ಎಂಬ ಪ್ರಶ್ನೆಗೆ ಉತ್ತರವನ್ನು ಸಂಗ್ರಹವಾಗಿ ಬರೆಯುವದಕ್ಕೆ ಪ್ರಯತ್ನಿಸುವೆನು.

ಮೇಲೆ ಉದಾಹರಿಸಿರುವ ಶ್ವೇತಾಶ್ವತರವಾಕ್ಯದ ಅಭಿಪ್ರಾಯವನ್ನು ಸೂತ್ರಭಾಷ್ಯದಲ್ಲಿ ಕಾಣಬಹುದು. **''ಯತ್ತು ದರ್ಶನಮುಕ್ತಂ 'ತತ್ಕಾರಣಂ ಸಾಂಖ್ಯಯೋಗಾಭಿಪನ್ನಮ್' ಇತಿ ವೈದಿಕಮೇವ ತತ್ರಜ್ಞಾನಂ ಧ್ಯಾನಂ ಚ ಸಾಂಖ್ಯಯೋಗ ಶಬ್ದಾಭ್ಯಾಮ್ ಅಭಿಲಪ್ಯೇತೇ ಪ್ರತ್ಯಾಸತ್ತೇಃ ಇತ್ಯವಗನ್ತವ್ಯಮ್॥''** ಈ ಶ್ರುತಿಯಲ್ಲಿರುವ ಸಾಂಖ್ಯವು ವೇದೋಕ್ತವಾದ ಜ್ಞಾನವು, ಯೋಗವೆಂದರೆ ವೇದೋಕ್ತವಾದ ಧ್ಯಾನವು - ಎಂದು ಇಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ. ಆದ್ದರಿಂದ ಪಾತಂಜಲಯೋಗಕ್ಕೂ ವೇದೋಕ್ತವಾದ ಧ್ಯಾನಕ್ಕೂ ತಾರತಮ್ಯವಿದೆ; ಪಾತಂಜಲಯೋಗವನ್ನು ಇಲ್ಲಿ ಆತ್ಮಪ್ರಾಪ್ತಿಗೆ ಸಾಧನವಾಗಿ ಒಪ್ಪಿರುವದಿಲ್ಲ ಎಂದಾಯಿತು.

ಬರಿಯ ವೇದಾಂತವಾಕ್ಯಶ್ರವಣದಿಂದಾದ ಜ್ಞಾನವು ತತ್ತ್ವಜ್ಞಾನವಲ್ಲ, ಜ್ಞಾನವಾದ ಬಳಿಕ ಆ ಜ್ಞಾನವನ್ನು ಮತ್ತೆ ಮತ್ತೆ ಅಭ್ಯಾಸಮಾಡಿ ಸಮಾಧಿಯನ್ನು ಪಡೆದುಕೊಂಡರೇ ಸ್ವರೂಪದ ಸಾಕ್ಷಾತ್ಕಾರವಾಗುತ್ತದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯದಂತೆ ವೇದಾಂತವಾಕ್ಯವು ಅಪ್ರಮಾಣವು, ವಾಕ್ಯಜನ್ಯಜ್ಞಾನದ ಅಭ್ಯಾಸದಿಂದ ಚಿತ್ತನಿರೋಧವನ್ನು ಮಾಡಿಕೊಂಡರೆ ಆಗುವ ಅನುಭವವೇ ಪ್ರಮಾಣವು ಎಂದು ಹೇಳಬೇಕಾಗುತ್ತದೆ. ಈ ಹೇಳಿಕೆಯು ಭಗವತ್ಪಾದರವರ ಅಭಿಪ್ರಾಯಕ್ಕೆ ವಿರುದ್ಧವೆಂಬುದನ್ನು ಈ ಮುಂದೆ ಉದಾಹರಿಸುವ ಬೃಹದಾರಣ್ಯಕ ಭಾಷ್ಯವಚನದಿಂದ

ವುನಗಾಣಬಹುದು: **ನಿರೋಧಸ್ತರ್ಹಿ ಅರ್ಥಾನ್ತರಮಿತಿ ಚೇತ್ । ಅಥಾಪಿ ಸ್ಯಾತ್ ಚಿತ್ತವೃತ್ತಿನಿರೋಧಸ್ಯ ವೇದವಾಕ್ಯಜನಿತಾತ್ಮವಿಜ್ಞಾನಾತ್ ಅರ್ಥಾನ್ತರತ್ವಾತ್, ಶಾಸ್ತ್ರಾನ್ತರೇಷು ಚ ಕರ್ತವ್ಯತಯಾ ಅವಗತತ್ವಾತ್, ವಿಧೇಯತ್ವಮ್ ಇತಿ ಚೇತ್ ನ ॥ ಮೋಕ್ಷಸಾಧನತ್ವೇನ ಅನವಗಮಾತ್ । ನ ಹಿ ವೇದಾನ್ತೇಷು ಬ್ರಹ್ಮಾತ್ಮ ವಿಜ್ಞಾನಾತ್ ಅನ್ಯತ್ ಪರಮಪುರುಷಾರ್ಥಸಾಧನತ್ವೇನ ಅವಗಮ್ಯತೇ ॥ ಅನನ್ಯ ಸಾಧನತ್ವಾಚ್ಚ ನಿರೋಧಸ್ಯ । ನ ಹಿ ಆತ್ಮವಿಜ್ಞಾನತತ್ಸ್ಮೃತಿ ಸನ್ತಾನವ್ಯತಿರೇಕೇಣ ಚಿತ್ತವೃತ್ತಿ ನಿರೋಧಸ್ಯ ಸಾಧನಮಸ್ತಿ । ಅಭ್ಯುಪಗಮ್ಯೇದಯುಕ್ತಮ್ । ನ ತು ಬ್ರಹ್ಮಾತ್ಮ ವಿಜ್ಞಾನವ್ಯತಿರೇಕೇಣ ಅನ್ಯತ್ ಮೋಕ್ಷ ಸಾಧನಮ್ ಅವಗಮ್ಯತೇ ॥**

ಇಲ್ಲಿ ವಾಕ್ಯಜನಿತವಾದ ಆತ್ಮವಿಜ್ಞಾನಕ್ಕಿಂತ ವ್ಯತಿರಿಕ್ತವಾದ ಮೋಕ್ಷಸಾಧನವು ಇಲ್ಲವೇ ಇಲ್ಲ - ಎಂದು ಸ್ಪಷ್ಟವಾಗಿ ಹೇಳಿರುತ್ತದೆ. ಚಿತ್ತವೃತ್ತಿನಿರೋಧದಿಂದಲೇ ಮೋಕ್ಷವೆಂದು ಒಪ್ಪಿಕೊಂಡರೂ ಅದಕ್ಕೆ ವಾಕ್ಯಜನ್ಯಜ್ಞಾನವೇ ಕಾರಣವಾಗಿರುತ್ತದೆ ಎಂದು ಹೇಳಬೇಕಾಗುತ್ತದೆ; ಆದರೆ ಆ ಜ್ಞಾನಕ್ಕಿಂತ ಬೇರೆಯಾಗಿ ಯಾವ ಸಾಧನವನ್ನೂ ಒಪ್ಪಬೇಕಾದದ್ದೇ ಇಲ್ಲ ಎಂದೂ ಹೇಳಿದೆ.

ಶ್ರೀಶಂಕರಭಗವತ್ಪಾದರವರ ಪ್ರಸ್ಥಾನತ್ರಯಭಾಷ್ಯದಲ್ಲಿ ಎಲ್ಲಿ ಹುಡುಕಿದರೂ ಯೋಗಶಾಸ್ತ್ರಕ್ಕೆ ಒಪ್ಪಾದ ಅಸಂಪ್ರಜ್ಞಾತಸಮಾಧಿಯ ಸೊಲ್ಲೂ ಸಿಕ್ಕುವದಿಲ್ಲ; ಆ ಸಮಾಧಿಯುಂಟಾದವರಿಗೇ ಆತ್ಮಾನುಭವವಾಗುತ್ತದೆ ಎಂಬ ಅಭಿಪ್ರಾಯದ ವಾಕ್ಯವೂ ಸಿಕ್ಕುವದಿಲ್ಲ. ಯೋಗಶಾಸ್ತ್ರದಲ್ಲಿ ಹೇಳಿರುವ ಅಸಂಪ್ರಜ್ಞಾತಸಮಾಧಿಯೆಂಬ ಅವಸ್ಥೆಯೊಂದು ಉಂಟೆ, ಇಲ್ಲವೇ - ಎಂಬುದು ಇಲ್ಲಿ ವಿಚಾರಕ್ಕೆ ವಿಷಯವಲ್ಲ. ಆ ಅವಸ್ಥೆಯನ್ನು ಪಡೆದುಕೊಂಡಹೊರತು ಆತ್ಮಾನುಭವವಿಲ್ಲ ಎಂಬ ಮಾತು ಭಾಷ್ಯವಿರುದ್ಧ ಮತ್ತು ವೇದಾಂತಸಿದ್ಧಾಂತಕ್ಕೆ ಬಹಿರ್ಭೂತವಾದದ್ದು ಎಂದಿಷ್ಟೇ ನನ್ನ ಅಭಿಪ್ರಾಯವಾಗಿರುತ್ತದೆ.

ವಾಕ್ಯಾರ್ಥಜ್ಞಾನಮಾತ್ರದಿಂದ ಯಾರಿಗೂ ಆತ್ಮಾನುಭವವಾಗುವದಿಲ್ಲ ಎಂಬುದೂ ಭಾಷ್ಯವಿರುದ್ಧವಾದ ಅಭಿಪ್ರಾಯವು. **"ಯೇಷಾಂ ಪುನರ್ನಿಪುಣಮತೀನಾಂ ನಾಜ್ಞಾನಸಂಶಯವಿಪರ್ಯಯಲಕ್ಷಣಃ ಪದಾರ್ಥವಿಷಯಃ ಪ್ರತಿಬನ್ಧೋಽಸ್ತಿ ತೇ ಶಕ್ನುವನ್ತಿ ಸಕೃದುಕ್ತಮೇವ ತತ್ತ್ವಮಸಿವಾಕ್ಯಾರ್ಥಮನುಭವಿತುಮ್' ಇತಿ ತಾನ್‌ಪ್ರತಿ ಆವೃತ್ತ್ಯಾನರ್ಥಕ್ಯಮ್ ಇಷ್ಟಮೇವ"** **(ಸೂ.ಭಾ. 4-1-2)**

ಎಂಬಲ್ಲಿ ವಾಕ್ಯಶ್ರವಣಮಾತ್ರದಿಂದಲೂ ಅನುಭವವಾಗಬಹುದೆಂಬುದನ್ನು ಸ್ಪಷ್ಟವಾಗಿ ಭಾಷ್ಯಕಾರರು ಹೇಳಿರುತ್ತಾರೆ. ಆದ್ದರಿಂದ ವೇದಾಂತಕ್ಕೆ ಯೋಗಸಮಾಧಿಯ ಹಂಗು ಒಂದಿಷ್ಟೂ ಇಲ್ಲವೆಂದು ಸಿದ್ಧವಾಯಿತು.

# ಸಮಾಧಿ

ಸಮಾಧಿ ಎಂದರೆ ದೇಹಾದಿಗಳ ಭಾವವು ತಪ್ಪಿ ತಾನೇತಾನಾಗಿ ಕೇವಲನಾಗಿರುವದು ಎಂಬ ಅರ್ಥವು ಪ್ರಸಿದ್ಧಿಯಲ್ಲಿದೆ. ಎಲ್ಲಾ ಚಿತ್ತವೃತ್ತಿಗಳೂ ನಿರೋಧವಾಗುವದೇ ಸಮಾಧಿ ಎಂಬ ಯೋಗದವರ ಉಪದೇಶವನ್ನು ಅನುಸರಿಸುವವರಿಗೆ ಇದು ಒಪ್ಪಿತವಾಗಿಯೂ ಇದೆ.

ಆದರೆ ವೇದಾಂತದಲ್ಲಿ ಸಮಾಧಿ ಎಂದರೇನೆಂಬ ಬಗ್ಗೆ ಬೇರೊಂದು ಉಪದೇಶವಿದೆ. ಉದಾಹರಣೆಗೆ ಆತ್ಮನು ಕರ್ತೃವೇ ಆಗಿರುವನೊ, ಇಲ್ಲವೊ? ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಹಿಡಿಯಬೇಕಾಗಿರುವ ಸಂದರ್ಭದಲ್ಲಿ ಬ್ರಹ್ಮಸೂತ್ರಭಾಷ್ಯದಲ್ಲಿ ಹೀಗೆಂದು ಬರೆದಿದೆ:

**“ಯೋಽಯಮ್ ಔಪನಿಷದಾತ್ಮಪ್ರತಿಪತ್ತಿಪ್ರಯೋಜನಃ ಸಮಾಧಿರುಪದಿಷ್ಟೋ ವೇದಾನ್ತೇಷು ‘ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ’, ‘ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ’, ‘ಓಮಿತ್ಯೇವಂ ಧ್ಯಾಯತ ಆತ್ಮಾನಮ್’ - ಇತ್ಯೇವಂ ಲಕ್ಷಣಃ ಸೋಽಪಿ ಅಸತಿ ಆತ್ಮನಃ ಕರ್ತೃತ್ವೇನೋಪಪದ್ಯೇತ ” (ಸೂ.ಭಾ. ೨-೩-೩೯)**

ಈ ಭಾಷ್ಯವಾಕ್ಯದಲ್ಲಿ ನಿದಿಧ್ಯಾಸನಮಾಡಬೇಕು. ವಿಜಿಜ್ಞಾಸೆಮಾಡಬೇಕು, ಧ್ಯಾನಮಾಡಬೇಕು - ಎಂಬೀ ಉಪದೇಶಗಳಲ್ಲಿ ಆತ್ಮಧ್ಯಾನವನ್ನು ಹೇಳಿದೆಯಲ್ಲ ಅದೇ ಸಮಾಧಿ ಎಂದು ಬರೆದಿದೆ. ಇಲ್ಲಿ ಸಮಾಧಿ ಎಂದರೆ ಆತ್ಮನಲ್ಲಿ ಮನಸ್ಸನ್ನಿಟ್ಟುಕೊಳ್ಳುವದು ಎಂದೇ ಅರ್ಥವೆಂಬುದು ಸ್ಪಷ್ಟವಾಗಿದೆ. ಆದರೆ ಇಲ್ಲಿ ನಿದಿಧ್ಯಾಸನವೆಂದರೇನು? ಎಂಬ ವಿಷಯಕ್ಕೂ ವಾದಿಗಳು ಬೇರೆಬೇರೆ ಅಭಿಪ್ರಾಯಗಳನ್ನು ಕೊಟ್ಟಿರುತ್ತಾರೆ. ನಿದಿಧ್ಯಾಸನವೆಂಬ ಧ್ಯಾನದಿಂದ ಸವಿಕಲ್ಪನಿರ್ವಿಕಲ್ಪಸಮಾಧಿಗಳುಂಟಾಗುವವೆಂತಲೂ ನಿರ್ವಿಕಲ್ಪಸಮಾಧಿಯಲ್ಲಿಯೇ ಪರಮಾತ್ಮನ ಅನುಭವವಾಗುವದೆಂತಲೂ ಈಚಿನ ಕೆಲವರು

ವೇದಾಂತಿಗಳು ಬರೆದಿರುತ್ತಾರೆ. ಆದರೆ ಪ್ರಸ್ಥಾನತ್ರಯಭಾಷ್ಯದಲ್ಲಿ ಎಲ್ಲಿ ಹುಡುಕಿದರೂ ಈ ಅಭಿಪ್ರಾಯಕ್ಕೆ ಬೆಂಬಲವು ದೊರಕುವದಿಲ್ಲ.

ಭಗವದ್ಗೀತೆಯಲ್ಲಿ ಒಂದು ಶ್ಲೋಕವಿದೆ :

**ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ ।**
**ಸಮಾಧಾವಚಲಾ ಬುದ್ಧಿಸ್ತದಾ ಯೋಗಮವಾಪ್ಸ್ಯಸಿ ॥೨-೫೩॥**

ಇಲ್ಲಿ ಭಾಷ್ಯಕಾರರು ಸಮಾಧಿ ಎಂದರೆ ಆತ್ಮನು; ಆತ್ಮನಲ್ಲಿ ಅಚಲವಾದ ಬುದ್ಧಿಯು ನಿಂತರೆ ಯೋಗವು ದೊರಕಿದಂತೆ ಎಂದು ಬರೆದಿರುತ್ತಾರೆ.

# ಸಂರಾಧನ

ಯೋಗಸಮಾಧಿಗೂ ವೇದಾಂತಸಮಾಧಿಗೂ ಇರುವ ಒಂದು ಮುಖ್ಯ ತಾತ್ಪರ್ಯವನ್ನು ನಾವು ನೆನಪಿಡುವದು ಅವಶ್ಯವೆಂದು ಸ್ಪಷ್ಟಗೊಳಿಸಿರುತ್ತೇನೆ. ಯೋಗದಲ್ಲಿ ಚಿತ್ತವೃತ್ತಿಗಳ ನಿರೋಧವಾಗುತ್ತದೆ; ಆತ್ಮನು ಪ್ರಕೃತಿಯ ಸಂಬಂಧದಿಂದ ಬಿಡುಗಡೆಯನ್ನು ಹೊಂದಿ ತನ್ನಲ್ಲಿ ತಾನು ಇದ್ದುಕೊಂಡುಬಿಡುತ್ತಾನೆ. ಆದರೆ ವೇದಾಂತದಂತೆ ಆತ್ಮನಲ್ಲಿಯೇ ಮನಸ್ಸು ನಿಂತುಬಿಟ್ಟರೆ ಸಮಾಧಿಯಾಯಿತು. ಯೋಗಿಗಳು ತಮ್ಮತಮ್ಮ ಬಿಡಿಬಿಡಿಯಾದ ಆತ್ಮನನ್ನು ಸಮಾಧಿಯಲ್ಲಿ ಹಿಂಗಡಿಸಿಕೊಳ್ಳುತ್ತಾರೆ; ಆದರೆ ವೇದಾಂತಿಗಳು ಎಲ್ಲರಿಗೂ ಆತ್ಮನಾಗಿರುವ ಅದ್ವಿತೀಯನಾದ ಆತ್ಮನಲ್ಲಿಯೇ ನೆಲೆನಿಲ್ಲುತ್ತಾರೆ. ಈ ಸಮಾಧಿಯ ಸ್ಥಿತಿಗೆ 'ಸಂರಾಧನ'ವೆಂಬ ಹೆಸರೂ ಉಂಟು. ಸೂತ್ರಭಾಷ್ಯದಲ್ಲಿ ಹೀಗೆಂದು ಬರೆದಿದೆ :

**"ಅಪಿ ಚೈನಮಾತ್ಮಾನಂ ನಿರಸ್ತಸಮಸ್ತಪ್ರಪಞ್ಚಮವ್ಯಕ್ತಂ ಸಂರಾಧನಕಾಲೇ ಪಶ್ಯನ್ತಿ ಯೋಗಿನಃ । ಸಂರಾಧನಂ ಚ ಭಕ್ತಿಧ್ಯಾನಪ್ರಣಿಧಾನಾದ್ಯನುಷ್ಠಾನಮ್"**

ಯಾವ ಭೇದವೂ ಇಲ್ಲದ ಈ ಪರಮಾತ್ಮನನ್ನು ಸಂರಾಧನಕಾಲದಲ್ಲಿ ಯೋಗಿಗಳು ಕಂಡುಕೊಳ್ಳುತ್ತಾರೆ. ಸಂರಾಧನವೆಂದರೆ ಭಕ್ತಿ, ಧ್ಯಾನ, ಪ್ರಣಿಧಾನ – ಮುಂತಾದವನ್ನು ಮಾಡುವದು. ಇಲ್ಲಿ ಧ್ಯಾನವೆಂದರೆ ಸುಮ್ಮನೆ ಭಾವನೆಮಾಡುವದಲ್ಲ, ವಸ್ತುತತ್ತ್ವವನ್ನೇ ಲಕ್ಷ್ಯದಲ್ಲಿಟ್ಟು ಚಿಂತಿಸುವದು ಎಂಬುದನ್ನು ಮರೆಯದೆ ಇರಬೇಕು. ಧ್ಯಾನಮಾಡುವವನೂ ಧ್ಯೇಯನಾದ ಪರಮಾತ್ಮನೂ ಉಪಾಧಿಯಿಂದ ಭಿನ್ನರಾಗಿ ತೋರುತ್ತಿ

ದ್ದರೂ ನಿಜವಾಗಿ ಒಬ್ಬನೇ ಆತ್ಮನೇ ಆ ರೀತಿ ತೋರುತ್ತಿರುತ್ತಾನೆ ಎಂದು ಆಚಾರ್ಯರು ಬರೆದಿರುತ್ತಾರೆ.

ಇದುವರೆಗೆ ಮಾಡಿದ ವಿಚಾರದಿಂದ ಇಷ್ಟು ತೀರ್ಮಾನವಾಗುತ್ತದೆ. ಯೋಗ ಸಮಾಧಿಯು ಪ್ರಕೃತಿಯ ಹಿಡಿತದಿಂದ ತಪ್ಪಿಸಿಕೊಳ್ಳುವದನ್ನೂ ಪ್ರಕೃತಿಯ ಭಾವನೆ ಯನ್ನು ಮರೆಯುವದನ್ನೂ ತಿಳಿಸಿಕೊಡುತ್ತದೆ. ಆದರೆ ವೇದಾಂತಸಮಾಧಿಯು ಪ್ರಕೃತಿಯು ಹುಸಿತೋರಿಕೆಯೆಂಬುದನ್ನೂ ಆತ್ಮಭೇದವು ಉಪಾಧಿಕೃತವೆಂಬುದನ್ನೂ ತಿಳಿಸಿಕೊಟ್ಟು ಅದ್ವೈತಾತ್ಮದರ್ಶನಕ್ಕೆ ಸಹಾಯವನ್ನು ಮಾಡುತ್ತದೆ.

# ವೇದಾಂತಸಮಾಧಿ

**'ಸಮಾಧಿ'** ಎಂಬುದು ಆತ್ಮನಿಗೂ ಹೆಸರಾಗಬಹುದೆಂದು ಭಾಷ್ಯದ ಆಧಾರ ದಿಂದ ಆಗಲೆ ತಿಳಿಸಿರುತ್ತೇನೆ. ಮನಸ್ಸಿಗೆ ಚಾಂಚಲ್ಯವು ಸ್ವಭಾವವು. ಅದು ವಿಷಯಗಳ ಸಂಕಲ್ಪವನ್ನು ಮಾಡುತ್ತಿರುವವರೆಗೂ ಚಾಂಚಲ್ಯವನ್ನು ಬಿಡಲಾರದೆ ಇರುತ್ತದೆ. ಈ ಚಾಂಚಲ್ಯವಿರುವದರಿಂದಲೇ ಅದು ಮನಸ್ಸು ಎನಿಸಿಕೊಂಡಿರುತ್ತದೆ. ಆದರೆ ಆತ್ಮನಲ್ಲಿ ನೆಲೆನಿಂತಾಗ ಇದು ಹೋಗಿಬಿಡುತ್ತದೆ. ಆದ್ದರಿಂದಲೇ ಆತ್ಮನಿಗೆ **'ಸಮಾಧಿ'** ಎಂದು ಹೆಸರು. (ಗೀತಾಭಾಷ್ಯ, 2-53).

ಆತ್ಮನೇ ಸತ್ಯವು, ಆತ್ಮನಿಗಿಂತ ಬೇರೆ ಯಾವದೊಂದೂ ನಿಜವಾಗಿರುವದೇ ಇಲ್ಲ ಎಂಬುದನ್ನು ಶಾಸ್ತ್ರದ ಮತ್ತು ಆಚಾರ್ಯರ ಉಪದೇಶದಿಂದ ಅರಿತುಕೊಂಡರೆ, ಕಟ್ಟಿಗೆ ಯಿಲ್ಲದ ಬೆಂಕಿಯಂತೆ, ಮನಸ್ಸು ಆರಿಹೋಗುತ್ತದೆ; ಆಗ ಅದು ಅಮನಸ್ಕಾಗುತ್ತದೆ, ಎಂದರೆ ಮನಸ್ಸಿನ ರೂಪವನ್ನು ಬಿಟ್ಟು ಆತ್ಮನಲ್ಲಿ ಒಂದಾಗಿಬಿಡುತ್ತದೆ. (ಮಾಂ. ಕಾರಿಕೆ. 3-32). ಈ ರೀತಿಯಾದ ಸ್ಥಿತಿಯಲ್ಲಿ ಮನಸ್ಸೂ ಆತ್ಮನೂ ಒಂದೇ ತತ್ತ್ವವಾಗಿರುವದ ರಿಂದ ಅಂಥ ಆತ್ಮನು ಸಮಾಧಿಯೆನಿಸುವನು. (ಮಾಂ. ಕಾರಿಕಾ ಭಾಷ್ಯ 3-37). ಆ ಆತ್ಮನನ್ನು ಅರಿತ ಬಳಿಕ ಯಾವ ಸಮಾಧಿಯೇ ಮುಂತಾದ ಕರ್ತವ್ಯವೂ ಉಳಿಯು ವದಿಲ್ಲ (ಕಾ.ಭಾ. 3-36). ನಾಮರೂಪಗಳು ಯಾವವೂ ಇಲ್ಲದಿರುವ ಆ ತತ್ತ್ವವನ್ನೇ ಆಗಮಪ್ರಕರಣದಲ್ಲಿ ಶ್ರೀಗೌಡಪಾದರವರು ಅಮಾತ್ರವೂ ಅನಂತಮಾತ್ರವೂ ಆದ ಓಂಕಾರನೆಂದೂ ಶಿವನೆಂದೂ(ಮಾಂ.ಕಾ.1-29)ಕರೆದಿರುತ್ತಾರೆ. ಇದನ್ನೇ ಮಾಂಡೂಕ್ಯದ ಹನ್ನೆರಡನೆಯ ಮಂತ್ರವು ತಿಳಿಸುತ್ತದೆ.

ಈ ಸಮಾಧಿಯನ್ನು ಪಡೆಯುವದಕ್ಕಾಗಿ ವ್ಯಾವಹಾರಿಕದೃಷ್ಟಿಯಿಂದ ಶ್ರವಣ, ಮನನ, ನಿದಿಧ್ಯಾಸನ - ಎಂಬ ಮೂರು ಸಾಧನಗಳನ್ನು ಶ್ರುತಿಯಲ್ಲಿ ಹೇಳಿದೆ. ಈ ನಿದಿಧ್ಯಾಸನವನ್ನು ಅಧ್ಯಾತ್ಮಯೋಗವೆಂದು ಕಠೋಪನಿಷತ್ತಿನಲ್ಲಿ ಕರೆದಿದೆ; ಇದನ್ನೇ ಮನೋನಿಗ್ರಹವೆಂದೂ ಮಾಂಡೂಕ್ಯಕಾರಿಕೆಯ ಅದ್ವೈತಪ್ರಕರಣದಲ್ಲಿ (3-40..) ಕರೆದಿದೆ. ಗೀತೆಯ ಆರನೆಯ ಅಧ್ಯಾಯದಲ್ಲಿ ಹೇಳಿರುವ ಧ್ಯಾನಯೋಗವೂ ಇದೇ. ಇದು ವೇದೋಕ್ತವಾದ ಉಪಾಸನೆಯಲ್ಲ, ಯೋಗಶಾಸ್ತ್ರದಲ್ಲಿ ಹೇಳಿರುವ ಚಿತ್ತವೃತ್ತಿ ನಿರೋಧವೂ ಅಲ್ಲ.

# ವೇದಾಂತಿ

"ನೀವು ದ್ವೈತಿಗಳೋ, ವಿಶಿಷ್ಟಾದ್ವೈತಿಗಳೋ, ಅದ್ವೈತಿಗಳೋ?'-ಎಂದು ಒಮ್ಮೆ ನನ್ನನ್ನು ಒಬ್ಬರು ಕೇಳಿದರು. "ಈ ಮೂರು 'ತಿ'ಗಳೂ ಅಲ್ಲ ನಾನು 'ವೇದಾಂತಿ' ಯೆಂಬ ನಾಲ್ಕನೆಯ 'ತಿ'- ಎಂದು ನಾನು ಹೇಳಿದೆ. ಅದಕ್ಕೆ ಅವರು ಗಟ್ಟಿಯಾಗಿ ನಕ್ಕರು.

ದ್ವೈತಿಗಳೇ ಮುಂತಾದ 'ತಿ' ಗಳು ವಾದ, ನಂಬಿಕೆ - ಇವುಗಳನ್ನೇ ಅವಲಂಬಿಸಿ ರುತ್ತಾರೆ. ಅವರಿಗೆ ಗ್ರಂಥಗಳ ಹೆಸರು, ಗ್ರಂಥಕಾರರ ಹೆಸರು, ಕೆಲಕೆಲವು ವಚನಗಳು- ಇವುಗಳೇ ಆಧಾರವಾಗಿರುತ್ತವೆ. ಆದರೆ ನಿಜವಾದ ವೇದಾಂತಿಗಳಿಗೆ ಅನುಭವವು ಬೇಕಾಗಿರುವದು, ಜೀವನದ ತಿರುಳು ಬೇಕಾಗಿರುವದು.

ವೇದಾಂತಿಗಳೆಲ್ಲರೂ ಪರಮಾತ್ಮನು ಸಚ್ಚಿದಾನಂದಸ್ವರೂಪನೆಂಬುದನ್ನು ಬಲ್ಲರು, ಜೀವರಿಗೂ ಆತನಿಗೂ ನಿಕಟವಾದ ಸಂಬಂಧವಿರುವದೆಂಬುದನ್ನು ಬಲ್ಲರು, ಆ ಸಂಬಂಧ ವನ್ನು ಅನುಭವದಲ್ಲಿ ಕಂಡುಕೊಳ್ಳುವದೇ ಜೀವನದ ಗುರಿಯೆಂಬುದನ್ನೂ ಬಲ್ಲರು.

ಅರ್ಜುನನು ನರನು. ಶ್ರೀಕೃಷ್ಣನು ನಾರಾಯಣನು, ನರನ ರಥವನ್ನು ಯುದ್ಧ ರಂಗದಲ್ಲಿ ಸಾಗಿಸುವದಕ್ಕೆ ಒಪ್ಪಿಕೊಂಡಿದ್ದವನು ನಾರಾಯಣನು. ಈ ಜೀವನದ ರಣ ರಂಗದಲ್ಲಿ ನಮ್ಮ ರಥವು ಸಲೀಸಾಗಿ ಸಾಗಬೇಕೆಂದು ನಮಗೆ ನಿಜವಾದ ಅಭಿಲಾಷೆ ಯಿದ್ದರೆ ನಾವು ನಾರಾಯಣನನ್ನು ಸಾರಥಿಯಾಗಿ ಮಾಡಿಕೊಳ್ಳಬೇಕು. ನಾರಾಯಣನು ರಥವನ್ನು ನಡೆಸಿದ್ದಲ್ಲದೆ ಇಂಪಾದ ಗೀತೆಯನ್ನೂ ಹಾಡಿದನು, ನರನಿಗೆ ಸುಖವಾಗಿ ಜಯವಾಯಿತು. ಅದೇ ನಾರಾಯಣನು ನಮ್ಮ ಶರೀರವೆಂಬ ರಥದಲ್ಲಿ ಕುಳಿತು

ಇಂದಿಗೂ ಗೀತೆಯನ್ನು ಹಾಡುತ್ತಿದ್ದಾನೆ. ಅದನ್ನು ಕಿವಿಗೊಟ್ಟು ಕೇಳೋಣ! ನಮ್ಮ ಹೃದಯದಲ್ಲಿ ಅದನ್ನು ಮೂಡಿಸಿಕೊಳ್ಳೋಣ! ನಮಗೆ ಕಾರ್ಯ ಕ್ಷೇತ್ರದಲ್ಲಿ ಜಯವೇ ದೊರಕುವದು.

ಉಪನಿಷತ್ತುಗಳಲ್ಲಿ ಹೇಳಿರುವ ಪರಬ್ರಹ್ಮವೂ ಗೀತೆಯಲ್ಲಿ ಹಾಡಿರುವ ಭಗವಂತನೂ ಬೇರೆಯಲ್ಲ; ಬ್ರಹ್ಮಸೂತ್ರದಲ್ಲಿ ವಿಚಾರಮಾಡಿರುವದೂ ಈ ತತ್ತ್ವವನ್ನೇ, ಯಾರ ಜೀವನಯಾತ್ರೆಯಲ್ಲಿ ಈ ತತ್ತ್ವವು ಕಣ್ಮರೆಯಾಗದಿರುವದೋ ಅವರೇ ವೇದಾಂತಿಗಳು.

ಖುಖುಖುಖುಖು

# ಸರ್ವಂ ತ್ಯಜ, ದೇವಂ ಭಜ

ವೈದಿಕೋಪದೇಶದ ಸಾರವನ್ನು ಎರಡು ವಾಕ್ಯಗಳಲ್ಲಿ ಅಡಗಿಸಬಹುದು: ''ಈಶ್ವರನನ್ನು ಹೊರತು ಮಿಕ್ಕದ್ದೆಲ್ಲವನ್ನೂ ಬಿಡಿರಿ; ಈಶ್ವರನನ್ನೇ ಶರಣು ಹೊಂದಿರಿ'' ಪ್ರಪಂಚದಲ್ಲಿ ಇದುವರೆಗೆ ಹುಟ್ಟಿರುವ ಧರ್ಮಗಳಲ್ಲಿರುವ ಉಪದೇಶದ ತಿರುಳೆಂದರೆ ಇಷ್ಟೇ ಹೊರತು ಹೆಚ್ಚಿಲ್ಲ. ಧರ್ಮಗಳಲ್ಲೆಲ್ಲ ಅತ್ಯಂತ ಪ್ರಾಚೀನವೆನಿಸಿರುವ ವೈದಿಕಧರ್ಮದಲ್ಲಿ ಮೊಟ್ಟಮೊದಲು ಈ ಉಪದೇಶವನ್ನು ಅತ್ಯಂತ ನಿಸ್ಸಂದಿಗ್ಧವಾಗಿ ಹೊರಗೆಡೆವಿರುವದರಿಂದ **'ವೇದವೇ ಧರ್ಮಮೂಲವು'** ಎಂಬ ಮನ್ವಾದಿವಚನಗಳು ಬರಿಯ ಹೊಗಳಿಕೆಯ ಮಾತಲ್ಲವೆಂದು ನಾವು ನಂಬಬಹುದಾಗಿದೆ.

'ಸರ್ವವನ್ನೂ ತ್ಯಜಿಸಬೇಕು' ಎಂಬ ವಾಕ್ಯದಲ್ಲಿ ಏನೇನು ಗರ್ಭಿತವಾಗಿದೆ? ಸರ್ವವೆಂದರೆ ಯಾವದು? ಅದನ್ನು ತ್ಯಜಿಸುವದೆಂದರೆ ಹೇಗೆ?- ಎಂಬ ಪ್ರಶ್ನೆಗೆ ಈಗ ಉತ್ತರವನ್ನು ಕಂಡುಹಿಡಿಯಬೇಕಾಗಿದೆ. ಈಶ್ವರನನ್ನು ಹೊರತು ಏನಿದ್ದರೂ ಅದನ್ನೆಲ್ಲ ಬಿಟ್ಟುಬಿಡಬೇಕು. ಈಶ್ವರನು ನಮ್ಮೆಲ್ಲರ ಆತ್ಮನು. ಸಚ್ಚಿದಾನಂದ ಸ್ವರೂಪನು. ಪರಮಾರ್ಥ ದೃಷ್ಟಿಯಿಂದ ನೋಡಿದರೆ ಆತನಿಗಿಂತ ಬೇರೆಯಾಗಿ ಯಾವದೊಂದೂ ಇರುವದೇ ಇಲ್ಲ; **'ಪುರುಷ ಏವೇದಂ ಸರ್ವಮ್'** (ಇದೆಲ್ಲವೂ ಪುರುಷನೇ ಋಗ್ವೇದ 8-4-17) - ಎಂಬ ವೇದವಚನಕ್ಕೆ ಇದೇ ಅರ್ಥವು. ಆದ್ದರಿಂದ ಸರಿಯಾದ ಜ್ಞಾನವನ್ನು ಸಂಪಾದಿಸಿಕೊಂಡು ಪರಮೇಶ್ವರನಿಗಿಂತ ವ್ಯತಿರಿಕ್ತವಾಗಿ ಸ್ವತಂತ್ರಸತ್ತೆಯುಳ್ಳ ಪ್ರಪಂಚವೊಂದು ಇವೆ - ಎಂಬ ಅಭಿಮಾನವನ್ನು ನಾವು ಬಿಟ್ಟುಬಿಡಬೇಕು - ಆಗಲೇ ಸರ್ವವನ್ನೂ ಬಿಟ್ಟು ಬಿಟ್ಟಂತೆ ಆಗುತ್ತದೆ.

ನಾವು ನಮ್ಮಗಳ ಆತ್ಮನಾದ ಈಶ್ವರನಿಗಿಂತ ಬೇರೆಯಾಗಿ ಅನಾತ್ಮರೂಪವಾದ ಪ್ರಪಂಚವೊಂದು ಇದೆಯೆಂದು ಒಂದು ನಂಬಿಕೆಯನ್ನು ಇಟ್ಟುಕೊಂಡಿದೇವೆ. ಇದರಲ್ಲಿ ಕಂಡುಬರುವ ಬೇರೆಬೇರೆ ಚೇತನಾಚೇತನಪದಾರ್ಥಗಳು ಒಂದಕ್ಕೊಂದು ಭಿನ್ನವಾಗಿ ಸ್ವತಂತ್ರವಾಗಿದ್ದುಕೊಂಡು ಇರಬಲ್ಲವೆಂಬ ನಂಬಿಕೆಯನ್ನು ಇಟ್ಟುಕೊಂಡಿದೇವೆ. ಅಚೇತನ ಪದಾರ್ಥಗಳಲ್ಲಿ ಕೆಲವು ನಮಗೆ ಬೇಕು, ಮತ್ತೆ ಕೆಲವು ಬೇಡ – ಎಂಬ ನಂಬಿಕೆಯನ್ನು ಇಟ್ಟುಕೊಂಡಿದೇವೆ. ಚೇತನದಲ್ಲಿ ಸ್ಥಾವರಗಳು, ಜಂಗಮಗಳು; ಜಂಗಮಗಳಲ್ಲಿ ಮೂಕ ಜಂತುಗಳಾದ ಪಶುಪಕ್ಷಿಮೃಗಕ್ರಿಮಿಕೀಟಾದಿಗಳು, ಮಾತಾಡಬಲ್ಲ ಧರ್ಮಾಧರ್ಮಪರ ರಾದ ಮನುಷ್ಯರು, ಅತಿಮಾನುಷರಾದ ದೇವಾಸುರಾದಿಗಳು – ಎಂಬ ಬಗೆ ಬಗೆಯ ಭೇದವಿರುವದೆಂಬ ನಂಬಿಕೆಯನ್ನಿಟ್ಟುಕೊಂಡಿದೇವೆ. ಈ ಪ್ರಾಣಿಗಳಲ್ಲಿಯೂ ನಮಗೆ ಬೇಕಾದವರು, ಬೇಡದವರು, ಉದಾಸೀನರು – ಎಂಬ ಭೇದವಿರುವದೆಂಬ ನಂಬಿಕೆ ಯನ್ನಿಟ್ಟುಕೊಂಡಿದೇವೆ. ಹೀಗಿರುವ ವಿಚಿತ್ರಪ್ರಪಂಚದಲ್ಲಿ ನಮಗೆ ಬೇಕಾದ ಚೇತನಾ ಚೇತನವಸ್ತುಗಳಲ್ಲಿ ನಮ್ಮ ಮನಸ್ಸು ಆಸಕ್ತವಾಗಿರುತ್ತದೆ. ಈ ಆಸಕ್ತಿಯಿಂದ ಅವು ನಮಗೆ ಯಾವಾಗಲೂ ಇಷ್ಟವಾಗಿ ಹಿತಕಾರಿಗಳಾಗಿ ನಮ್ಮ ಹತ್ತಿರದಲ್ಲಿಯೇ ನಮ್ಮ ಅಧೀನ ವಾಗಿಯೇ ಇರಬೇಕೆಂದು ನಾವು ಹಂಬಲಿಸುತ್ತಿರುತ್ತೇವೆ. ಈ ಹಂಬಲಿಕೆಯಿಂದ ಆ ವಸ್ತುಗಳ ಕಡೆಗೆ ನಮ್ಮ ಮನಸ್ಸು ಜೋಲುತ್ತಿರುತ್ತದೆ. ಈ ಹೋಲುವಿಕೆಯೆಂಬ ಕಾಮ ದಿಂದ ನಾವು ಅವುಗಳನ್ನು ಪಡೆಯುವದು, ಕಾಪಾಡಿಕೊಳ್ಳುವದು – ಎಂಬ ಯೋಗ ಕ್ಷೇಮಗಳ ಚಿಂತೆಯನ್ನು ಹಚ್ಚಿಸಿಕೊಂಡು ಅದಕ್ಕೆ ತಕ್ಕ ಕರ್ಮಗಳನ್ನು ಮಾಡುವದ ರಲ್ಲಿಯೇ ನಿರತರಾಗಿರುತ್ತೇವೆ. **'ಸರ್ವವನ್ನೂ ತ್ಯಜಿಸಬೇಕು'** ಎಂದರೆ ಇದಿಷ್ಟನ್ನೂ ಕೈಬಿಡಬೇಕು, ಇವುಗಳ ಕಟ್ಟನ್ನು ಸಡಿಲಮಾಡಿಕೊಳ್ಳಬೇಕು – ಎಂದರ್ಥ.

**'ಸರ್ವವನ್ನೂ ತ್ಯಜಿಸು'** ಎಂದು ವೇದವು ಅಪ್ಪಣೆಮಾಡುವದಿಲ್ಲ, ಉಪದೇಶ ಮಾಡುತ್ತದೆ. ನಾವು ಬೇಕಾದರೆ ಸರ್ವತ್ಯಾಗವನ್ನು ಮಾಡಬಹುದು. ಬೇಡದಿದ್ದರೆ ಮೇಲೆ ಹೇಳಿದ ಎಲ್ಲವನ್ನು ಇಟ್ಟುಕೊಳ್ಳಬಹುದು. ಎಲ್ಲಿಯವರೆಗೆ ವಿಷಯಗಳು, ಅವು ಗಳಲ್ಲಿರುವ ಸಂಗ, ಸಂಗದಿಂದಾಗುವ ಕಾಮ, ಕಾಮದಿಂದ ನಾವು ಮಾಡುವ ಕರ್ಮ, ಕರ್ಮದಿಂದ ನಮಗೆ ಆಗುವ ಫಲ, ಫಲವು ಕೈಗೆ ಸಿಕ್ಕ ಮೇಲೆ ಆಗುವ ಅದರ ಭೋಗ – ಇಷ್ಟೂ ನಮಗೆ ಬೇಕೇ ಆಗಿರುವವೊ ಅಲ್ಲಿಯವರೆಗೆ ಈ ಉಪದೇಶವು ಕಿವಿಗೇ ಬೀಳುವದಿಲ್ಲ, ಅಥವಾ ಬಿದ್ದರೂ ಅದರ ಅರ್ಥವು ನಮಗೆ ಸರಿಯಾಗಿ ಆಗುವದಿಲ್ಲ; ಒಂದು ವೇಳೆ ಅಷ್ಟಿಷ್ಟು ಅರ್ಥವಾದರೂ ನಾವು ಈ ಉಪದೇಶವನ್ನು ಅನುಷ್ಠಾನದಲ್ಲಿ

ತರಬೇಕೆಂಬ ಲವಲವಿಕೆಯುಳ್ಳವರಾಗಿರುವದಿಲ್ಲ, ಆಗ ನಮಗೆ ಹಣಕಾಸು, ಮನೆಮಠ, ಹೆಂಡಿರುಮಕ್ಕಳು, ದನಕರು, ಹೊಲಗದ್ದೆ – ಮುಂತಾದ ಐಹಿಕವಾದ ಸಂಪತ್ತನ್ನು ಸಂಪಾದಿಸಿಕೊಳ್ಳಬೇಕೆಂಬ ಆಸೆಯು ಬಲವಾಗಿರುವದು; ದೇಹಾರೋಗ್ಯ, ರೂಪು, ಯೌವನ, ಜಾಣ್ಮೆ ಕೀರ್ತಿ– ಮುಂತಾದವುಗಳೇ ನಮಗೆ ಹೆಚ್ಚಿನ ಐಹಿಕಧ್ಯೇಯಗಳಾಗಿ ರುವವು. ಇನ್ನೂ ಸ್ವಲ್ಪ ಮುಂದುವರಿದಿದ್ದರೆ ಧರ್ಮದಿಂದ ಪುಣ್ಯವನ್ನು ಸಂಪಾದಿಸಿ ಇಹಲೋಕದ ಸಂಪತ್ತಿಲ್ಲದಿದ್ದರೂ ಪರಲೋಕದ ಸುಖವನ್ನಾದರೂ ಸಂಪಾದಿಸಿಕೊಳ್ಳ ಬೇಕೆಂಬ ಹವಣಿಕೆಯಿರುವದು. ಅಲ್ಲಿಯವರೆಗೂ **'ಸರ್ವವನ್ನೂ ತ್ಯಜಿಸು'** ಎಂಬ ಉಪದೇಶವು ನಮ್ಮ ಮನಸ್ಸಿನ ಮೇಲೆ ಪರಿಣಾಮಕಾರಿಯಾಗುವದೇ ಇಲ್ಲ; ಏಕೆಂದರೆ ನಾವು ಅದಕ್ಕೆ ಅಧಿಕಾರಿಗಳಾಗಿರುವದಿಲ್ಲ, ಭೋಗಕ್ಕೆ ಅಧಿಕಾರಿಯಾದವನು ತ್ಯಾಗಕ್ಕೆ ಅಧಿಕಾರಿಯಾಗುವದು ತಾನೆ ಹೇಗೆ?

ಆದರೆ ಒಂದಾನೊಂದು ಕಾಲದಲ್ಲಿ ನಮ್ಮಲ್ಲಿ ಕೆಲವರಿಗೆ ಈ ಭೋಗದ ಲಾಲಸೆಯು ಕಡಿಮೆಯಾಗುವದು. ಅದರಲ್ಲಿ ಅನಾದರವುಂಟಾಗುವದು, ಬೇಸರವುಂಟಾಗುವದು. ವಿಷಯಗಳಲ್ಲಿ ಕಾಮವುಂಟಾಗಿ ನಾವು ಅವನ್ನು ಸಂಪಾದಿಸಬೇಕೆಂದು ಹವಣಿಸಿದರೂ ಅನೇಕವೇಳೆ ಅವು ಸಿಕ್ಕುವದಿಲ್ಲ; ಸಿಕ್ಕಿದರೂ ಅವು ನಮಗೆ ಬೇಕಾದ ರೂಪದಲ್ಲಿ ಮತ್ತೂ ಇಷ್ಟವಾದ ಪರಿಮಾಣದಲ್ಲಿ ಸಿಕ್ಕುವುದಿಲ್ಲ. ಒಂದು ವೇಳೆ ಆ ಪರಿಮಾಣದಲ್ಲಿಯೇ ದೊರೆತರೂ ಅವು ನಮ್ಮಲ್ಲಿಯೇ ನಮ್ಮ ಅಧೀನದಲ್ಲಿಯೇ ಯಾವಾಗಲೂ ಇರುವವೆಂಬ ನಂಬಿಕೆಯಿರುವದಿಲ್ಲ, ಆಗ ನಮಗೆ ಕಾಮದಿಂದ ಕ್ರೋಧ, ಕ್ರೋಧದಿಂದ ಮೋಹ – ಹೀಗೆಲ್ಲ ಉಂಟಾಗಿ ನಾವು ಏತಕ್ಕಾಗಿ ಹೀಗೆಲ್ಲ ಪ್ರಯತ್ನಮಾಡುತ್ತಿರುವೆವೆಂಬ ಸ್ಮೃತಿಯು ಕೂಡ ಇಲ್ಲದಂತಾಗಿ ನಮಗೆ ವ್ಯವಹಾರದಲ್ಲಿ ನಿಶ್ಚಿತವಾದ ಒಂದು ಧ್ಯೇಯವೇ ಇಲ್ಲ ದಂತಾಗಿಬಿಡಬಹುದು. ಇಷ್ಟೆಲ್ಲ ಪಡುಪಾಟಲಿಗೆ ಈಡಾಗಿ ಸುವ ಈ ವಿಷಯಾಸಕ್ತಿ ಯಿಂದೇನು? ಈ ವಿಷಯ ಸಂಬಂಧವೇ ಇಲ್ಲದೆ ಬೇರೊಂದು ಬಗೆಯಲ್ಲಿ ನಮಗೆ ಸುಖವು ದೊರೆಯಲಾರದೆ – ಎಂಬ ಪ್ರಶ್ನೆಯು ನಮ್ಮಲ್ಲಿ ಮೊಳಕೆಯಾಗುವದು. ಆಗ **'ಸರ್ವವನ್ನೂ ತ್ಯಜಿಸು'** ಎಂಬ ಉಪದೇಶವು ಕಿವಿಗೆ ಬಿದ್ದರೆ ಅದು ನಮಗೆ ಪ್ರಯೋಜನಕಾರಿಯಾಗುವದು. 'ಸರ್ವವನ್ನೂ ಬಿಡಬೇಕೆಂದರೆ ಹೇಗೆ?' ಎಂದು ಕುತೂಹಲದಿಂದ ವಿಚಾರಿಸುವದಕ್ಕೆ ಹೊರಡುವೆವು.

**'ದೇವನನ್ನೇ ಭಜಿಸು'** ಎಂಬ ಎರಡನೆಯ ವೈದಿಕೋಪದೇಶವು ಈಗ ಫಲಕಾರಿ ಯಾಗುತ್ತದೆ. ಸರ್ವವನ್ನೂ ತ್ಯಜಿಸಬೇಕಾದರೆ ದೇವನನ್ನೇ ಭಜಿಸಬೇಕು. ಆಗಲೇ ನಮಗೆ

ನಿತ್ಯಾನಂದದ ಸವಿಯು ಹತ್ತುವದು ನಮಗೆ ತೋರುವದೆಲ್ಲ ನಿಜ ವಾಗಿ ಈಶ್ವರನೇ. ಆದರೂ ತಿರುಳಾದ ಕೊಬ್ಬರಿಯನ್ನು ಬಿಸುಟು ಕರಟಕ್ಕೆ ಕೈನೀಡುವ ಮೂರ್ಖರಂತೆ ನಾವು ಜಗತ್ತಿನ ತಿರುಳಾದ ಈಶ್ವರನನ್ನು ಬಿಟ್ಟು ಅನೀಶ್ವರವಾದ ಪ್ರಪಂಚವೊಂದನ್ನು ಸ್ವತಂತ್ರವಾಗಿರುವದೆಂಬ ನಂಬಿಕೆಯಿಂದ ಅದರಲ್ಲಿಯೇ ಅಭಿಮಾನವನ್ನು ನೆಟ್ಟು ಕೊಂಡುಬಿಟ್ಟಿರುತ್ತೇವೆ. ಆದ್ದರಿಂದ ನಾವು ಮೊದಲು **ಇದೆಲ್ಲವೂ ಈಶ್ವರನೆಂಬ ಭಾವನೆಯನ್ನು ಮೈಗೂಡಿಸಿಕೊಳ್ಳಬೇಕು.** ಆಗ ಸರ್ವವನ್ನೂ ತ್ಯಾಗ ಮಾಡಬಹುದು, ಆಗ ನಮ್ಮನ್ನು ನಾವು ಕಾಪಾಡಿಕೊಳ್ಳಬಹುದು. ಇದು ಅವನ ಧನ, ಇದು ನನ್ನದು; ಇದನ್ನು ಸಂಪಾದಿಸಿ, ಸುಖವನ್ನು ಹೊಂದುವೆನು' ಎಂಬ ಕೆಟ್ಟ ಹಂಬಲವನ್ನು ಆಗ ಬಿಡಿಸಿಕೊಳ್ಳಬಹುದು. ಹೀಗೆಂದು **'ಈಶಾವಾಸ್ಯಮಿದಗ್ಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ । ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯ ಸ್ವಿದ್ಧನಮ್ ॥'** (ಇದೆಲ್ಲವೂ – ಜಗತ್ತಿನಲ್ಲಿ ಸ್ಥಾವರಜಂಗಮಾತ್ಮಕವಾಗಿರುವದೇನೇನಿದೆಯೋ ಎಲ್ಲವೂ – ಈಶ್ವರನಿಂದ ಮುಚ್ಚಲ್ಪಡಬೇಕು. ಆದ್ದರಿಂದ ತ್ಯಾಗದಿಂದ ನಿನ್ನನ್ನು ನೀನು ಕಾಪಾಡಿಕೊ. ಬಯಲು ಬಯಕೆಮಾಡಬೇಡ; ನಿಜವಾಗಿ ನೋಡಿದರೆ ಧನವು ಯಾರದು? – ಶುಕ್ಲ ಯಜುರ್ವೇದ, 40-1) ಎಂದು ನಮಗೆ ವೇದವಚನವು ಸಾರುತ್ತಿರುವದು. ಈಗ ಕಾಣುವ ವಿಚಿತ್ರ ಪ್ರಪಂಚದ ವಾಸನೆಯು ಮರೆಯಾಗಬೇಕು. ಎಲ್ಲೆಲ್ಲಿಯೂ ಈಶ್ವರ ವಾಸನೆಯು ಮುಸುಕಿಕೊಳ್ಳಬೇಕು. ಹೀಗೆ ಮಾಡುವದೇ ನಮ್ಮ ಕರ್ತವ್ಯವು.

ಈಶ್ವರನನ್ನೇ ಭಜಿಸುವದೆಂದರೆ ಆತನೇ ನಮ್ಮಗಳ ಆತ್ಮನು, ನಿತ್ಯಾನಂದ ಸ್ವರೂಪನು – ಎಂಬ ಅರಿವನ್ನು ಪಡೆದು ತನ್ನಿಷ್ಠೆಯಿಂದಿರುವದು. ಆದರೆ ಇದು ಈಗಲೇ ನಮಗೆಲ್ಲರಿಗೂ ದಕ್ಕುವದಿಲ್ಲವಾದ್ದರಿಂದ ನಾವು ನಮ್ಮ ಸಾಧನಗಳಿಗೆ ವಿಷಯ ವನ್ನು ಕೇಂದ್ರವಾಗಿಟ್ಟುಕೊಳ್ಳುವದರ ಬದಲು ಈಶ್ವರನನ್ನು ಕೇಂದ್ರವಾಗಿಟ್ಟುಕೊಳ್ಳುವ ಅಭ್ಯಾಸವನ್ನು ಮಾಡಬೇಕು. ಪ್ರಪಂಚವನ್ನು ನೋಡಿದರೆ ಈಶ್ವರನ ವಿಭೂತಿಯೆಂದು ಭಾವಿಸಬೇಕು. ಕರ್ಮವನ್ನು ಮಾಡಿದರೆ ಈಶ್ವರನಿಗೆ ಅರ್ಪಣಮಾಡಬೇಕು. ಧ್ಯಾನ ವನ್ನು ಮಾಡಿದರೆ ಈಶ್ವರನನ್ನು ಚಿಂತಿಸಬೇಕು. ವಿಚಾರಮಾಡಿದರೆ ಈಶ್ವರತತ್ತ್ವದ ವಿಚಾರಮಾಡಬೇಕು. ಇದೇ ನಮ್ಮ ಅಂತಸ್ತಿಗೆ ತಕ್ಕ ಈಶ್ವರಭಜನೆ. ಇದನ್ನು ಮಾಡಿದರೆ ನಾವು ಈಶ್ವರನ ಭಕ್ತರು; ಇಲ್ಲದಿದ್ದರೆ ಪ್ರಪಂಚದಲ್ಲಿರುವ ಶಾಸ್ತ್ರಗಳನ್ನೆಲ್ಲ ಓದಿದರೂ ಎಲ್ಲಾ ಬಗೆಯ ತಪಸ್ಸನ್ನೂ ಮಾಡಿದರೂ ನಾವು ಈಶ್ವರಭಕ್ತನಲ್ಲ, ಪ್ರಪಂಚಭಕ್ತರು.

ವೇದದ ಉಪದೇಶವು ನಮ್ಮನ್ನು ಪ್ರಪಂಚದ ಕಡೆಗೆ ವಿಮುಖರಾಗಿ ಮಾಡುವದೆಂದೂ ಆದ್ದರಿಂದ ಅದು ಈಗಿನ ಜೀವನಕ್ರಮಕ್ಕೆ ವಿರುದ್ಧವಾಗಿರುವದೆಂದೂ ಕೆಲವರು ಅದನ್ನು ಆಕ್ಷೇಪಿಸುವದುಂಟು. ಈ ಆಕ್ಷೇಪದಲ್ಲಿ ನಿಜದ ಅಂಶವೂ ಸ್ವಲ್ಪವಿದೆ. ಪ್ರಪಂಚವೆಂದರೆ ಪರಮಾತ್ಮನ ಇರವಿಗಿಂತ ಬೇರೆಯಾದ ಸ್ವತಂತ್ರವಾದ ಇರವು ಉಳ್ಳದ್ದು. ಅದರ ಉಪಾಸನೆಯೇ ಸಕಲ ಪುರುಷಾರ್ಥವು – ಎಂದು ಭಾವಿಸುವ ಜೀವನಕ್ರಮಕ್ಕೆ ವೇದೋಪದೇಶವು ನಿಜವಾಗಿ ವಿರುದ್ಧವೇ ಆಗಿರುತ್ತದೆ. ಆದರೆ ಇಂಥ ಜೀವನಕ್ರಮವು ಅಸ್ವಾಭಾವಿಕವಾದದ್ದು, ಕಷ್ಟತರವಾದದ್ದು, ದುಃಖಮಯವಾದದ್ದು; ಆದ್ದರಿಂದ ಇದರಿಂದ ಹೇಗೆ ಪಾರಾದೇವು? ನಮಗೆ ನಿತ್ಯಾನಂದವು ಹೇಗೆ ದೊರತೀತು? ಎಂಬ ಜನರೂ ಅನೇಕರಿರುವರು. ಅಂಥವರಿಗೆ ವೇದವು '**ಏತಾವಾನಸ್ಯ ಮಹಿಮಾ ಅತೋ ಜ್ಯಾಯಾಂಶ್ಚ ಪೂರುಷಃ । ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥**' (ಈ ಪ್ರಪಂಚವೆಲ್ಲವೂ ಪರಮಾತ್ಮನ ವಿಭೂತಿಯೆಂದೆಣಿಸಿರಿ. ಆ ಪರಮಾತ್ಮನು ತೋರಿಕೆಯ ಈ ಚರಾಚರಪ್ರಪಂಚಕ್ಕಿಂತಲೂ ಮಿಗಿಲಾದವನು, ಆತನಲ್ಲಿ ನಿಷ್ಠೆಯನ್ನು ಪಡೆದು ಅಮೃತರಾಗಿರಿ) ಎಂದು ಬೋಧಿಸುವದು.

"**ಸರ್ವವನ್ನೂ ತ್ಯಜಿಸು, ದೇವನನ್ನು ಭಜಿಸು**" ಎಂಬ ಈ ಉಪದೇಶವು ಅತ್ಯಂತ ಪ್ರಾಚೀನವಾದ ವೇದಸಂಹಿತೆಗಳಲ್ಲಿಯೂ ಕಂಡುಬರುವದು; ಉಪನಿಷತ್ತುಗಳಲ್ಲಿ ಅತ್ಯಂತಸ್ಫುಟವಾಗಿರುವದು. ಇತಿಹಾಸಪುರಾಣಗಳಲ್ಲಿ ಅಡಿಗಡಿಗೆ ಪಲ್ಲವಿಯಾಗಿ ಇದನ್ನು ಹಾಡಿ ಹೊಗಳಿರುತ್ತದೆ. ಜಗತ್ಪ್ರಸಿದ್ಧವಾದ ಭಗವದ್ಗೀತೆಯಲ್ಲಿ ಈ ಅರ್ಥವನ್ನು ಮನೋಹರವಾದ ರೀತಿಯಿಂದ ಸಂಕ್ಷೇಪಿಸಿ ಒಂದು ಶ್ಲೋಕದಲ್ಲಿ ಕೊಟ್ಟಿರುತ್ತದೆ :

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।**
**ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥**

(ಎಲ್ಲಾ ಧರ್ಮಗಳನ್ನೂ ತ್ಯಜಿಸಿ, ನನ್ನೊಬ್ಬನನ್ನೇ ಶರಣುಹೊಂದು; ನಾನು ನಿನ್ನನ್ನು ಎಲ್ಲಾ ಪಾಪಗಳಿಂದಲೂ ಬಿಡುಗಡೆಮಾಡುವೆನು, ಶೋಕಿಸದಿರು).

# ಒಂದು ಸಲ ಬಿತ್ತಿದರೆ ಎಂದೆಂದಿಗೂ ಪೈರು

ಅಮೇರಿಕದ ಕೆನಡದೇಶದಲ್ಲಿ ಒಂದು ಬಗೆಯ ಗೋಧಿಯ ಬೀಜವನ್ನು ಸಜ್ಜು ಗೊಳಿಸಿರುವರಂತೆ. ಅದನ್ನು ಒಂದು ಸಲ ಹೊಲದಲ್ಲಿ ಬಿತ್ತಿದರೆ ಅದು ವರ್ಷ ವರ್ಷಕ್ಕೂ ಫಲವನ್ನು ಕೊಡುತ್ತಲೇ ಇರುವದಂತೆ! ವೃತ್ತಾಂತಪತ್ರಗಳಲ್ಲಿ ಪ್ರಕಟವಾಗಿರುವ ಈ ಸುದ್ದಿಯನ್ನು ಕೇಳಿದವರು ಆಶ್ಚರ್ಯಚಕಿತರಾಗಿರುತ್ತಾರೆ.

ಅಧ್ಯಾತ್ಮಕ್ಷೇತ್ರದಲ್ಲಿ ಒಂದು ಬಗೆಯ ಬೀಜವನ್ನು ಸರಿಯಾಗಿ ಬಿತ್ತಿದರೆ ಅದು ನಿತ್ಯವೂ ಫಲವನ್ನು ಕೊಡುತ್ತಲೇ ಇರುವದೆಂದು ನಮ್ಮ ಪ್ರಾಚೀನಕಾಲದ ಋಷಿಗಳು ಕಂಡುಹಿಡಿದಿರುತ್ತಾರೆ. ಇದರಲ್ಲಿ ಆಶ್ಚರ್ಯಜನಕವಾದದ್ದು ಏನೇನೂ ಇರುವದಿಲ್ಲ. ಇದನ್ನು ಯಾರು ಬೇಕಾದರೂ ಪರೀಕ್ಷೆಮಾಡಿ ನೋಡಿಕೊಳ್ಳಬಹುದು.

ಸದ್ಗುರುವಾದವನು ಯೋಗ್ಯನಾದ ಶಿಷ್ಯನ ಹೃದಯಕ್ಷೇತ್ರದಲ್ಲಿ ಬಿತ್ತಿದ ಜ್ಞಾನೋಪದೇಶವೆಂಬ ಬೀಜವು ಇಂಥದ್ದು. ಅದರಿಂದ ಯಾವಾಗಲೂ ಶಾಂತಿ, ಸುಖ ತೃಪ್ತಿ – ಎಂಬ ಫಲಗಳು ಮತ್ತೆ ಯಾವ ಆಯಾಸವೂ ಇಲ್ಲದೆ ದೊರಕುತ್ತವೆ.

ಆದರೆ ಕ್ಷೇತ್ರಕ್ಕೆ ಮೊದಲು ಸಂಸ್ಕಾರನಾಗಿರಬೇಕು – ವಿವೇಕ, ವೈರಾಗ್ಯ, ಶಮಾದಿ ಗಳು, ಮುಮುಕ್ಷುತ್ವ – ಎಂಬ ನಾಲ್ಕು ಸಾಲಿನ ಉಕ್ಕೆಯಾಗಿ ಸತ್ಸಂಗದ ಗೊಬ್ಬರವನ್ನು ತಕ್ಕ ಪ್ರಮಾಣದಲ್ಲಿ ಹಾಕಿರಬೇಕು. ಬೀಜವು ಹೃದಯದಲ್ಲಿ ಆಳವಾಗಿ ಹೋಗಿ ತಕ್ಕ ಕಾಲದಲ್ಲಿ ಮೊಳಕೆಯಾಗುವಂತೆ ಶ್ರವಣ, ಮನನ, ನಿಧಿಧ್ಯಾಸನ – ಎಂಬ ನೀರನ್ನು ಹಾಯಿಸಿಕೊಂಡಿರಬೇಕು. ಶಾಸ್ತ್ರೋಕ್ತವಾದ ಉಪಾಸನೆಯ ದೋಹದವು ಮೊದಲೇ ಆಗಿದ್ದರೆ ಪೈರು ಇನ್ನಷ್ಟು ಹುಲುಸಾಗಿ ಬೆಳೆಯುವದು.

ಹೃದಯಕ್ಷೇತ್ರದಲ್ಲಿ ಈ ಬೀಜದಿಂದ ಒಂದೇ ಒಂದು ವೃಕ್ಷವು ಬೆಳೆಯುವದು. ಅದಕ್ಕೆ **'ಪರಮಾತ್ಮಜ್ಞಾನ ಕಲ್ಪವೃಕ್ಷ'** – ಎಂದು ಹೆಸರು. ದೇವಲೋಕದಲ್ಲಿರುವದೆಂದು ಪುರಾಣಗಳಲ್ಲಿ ವರ್ಣಿಸಿರುವ ಕಲ್ಪವೃಕ್ಷವು ಕಲ್ಪನೆ ಮಾಡಿಕೊಂಡಮೇಲೆ ಬೇಕಾದ ಇಷ್ಟಾರ್ಥವನ್ನು ಕೊಡುವಂತೆ ಇದೂ ಕೊಡುವದಾದರೂ ಇದರಲ್ಲಿ ಒಂದು ವಿಶೇಷ : ಇದು ಕೊಡುವ ಫಲವು ಕಲ್ಪನೆಗೆ ಪೂರ್ವದಲ್ಲಿಯೇ ಸಿದ್ಧವಾಗಿರುತ್ತದೆ!

# ಸದ್ಗತಿ ತ್ರಯ

ಸನಾತನವೈದಿಕರು ಮೂಲಪ್ರಮಾಣವೆಂದು ಒಪ್ಪುವ ವೇದವು ಕರ್ಮಕಾಂಡವೆಂದೂ ಜ್ಞಾನಕಾಂಡವೆಂದೂ ಎರಡು ಭಾಗವಾಗಿದೆ. ಕರ್ಮಕಾಂಡದಲ್ಲಿ ಕರ್ಮವೆಂಬ ಸಾಧನದಿಂದ ಸದ್ಗತಿಯನ್ನು ಪಡೆಯುವ ರೀತಿಯನ್ನು ಹೇಳಿರುತ್ತದೆ; ಜ್ಞಾನಕಾಂಡದಲ್ಲಿ ಉಪಾಸನೆ, ಜ್ಞಾನ - ಎಂಬ ಎರಡು ಬಗೆಯ ಸಾಧನಗಳ ಮೂಲಕ ಸದ್ಗತಿಯನ್ನು ಪಡೆಯುವ ಬಗೆಯನ್ನು ತಿಳಿಸಿರುತ್ತದೆ. ಈ ಮೂರು ಬಗೆಯ ಸಾಧನಗಳನ್ನೂ ಸದ್ಗತಿಗಳನ್ನೂ ಸಂಕ್ಷೇಪವಾಗಿ ಇಲ್ಲಿ ವಿವೇಚಿಸುವೆನು.

ವೇದವು ಪುರುಷಾರ್ಥವನ್ನು ತಿಳಿಸಿಕೊಡುವುದಕ್ಕೇ ಹೊರಟದ್ದಾದರೂ ಅದರಲ್ಲಿ ಅಧಿಕಾರಿತಾರತಮ್ಯದಿಂದ ಮಾರ್ಗತ್ರಯವನ್ನು ಹೇಳಿರುತ್ತದೆ. ಹೇಗೆಂದರೆ ಲೌಕಿಕವಾದ ಉಪಾಯಗಳಿಂದಲೇ ಸುಖವನ್ನು ಹೊಂದಬಹುದೆಂತಲೂ ದುಃಖವನ್ನು ಬಗೆಹರಿಸಿಕೊಳ್ಳಬಹುದೆಂತಲೂ ಯಾವನು ಎಣಿಸಿರುವನೋ ಅವನು ಶಾಸ್ತ್ರಬಾಹ್ಯನಾಗಿರುತ್ತಾನೆ. ಅಂಥವನು ತನ್ನ ಇಷ್ಟಾರ್ಥಕ್ಕಾಗಿ ಶಾಸ್ತ್ರವನ್ನು ನೋಡುವದೂ ಇಲ್ಲ, ವೇದವು ಅವನಿಗಾಗಿ ಏನನ್ನೂ ಹೇಳಬೇಕಾದದ್ದೂ ಇರುವದಿಲ್ಲ. ಆದರೆ ಯಾವನು ಈಗ ಜನರಲ್ಲಿ ಕಂಡುಬರುವ ವಿಧವಿಧವಾದ ಶಾರೀರಕ ಮಾನಸಿಕಯೋಗ್ಯತೆಗೆ ಹಿಂದಿನ ಜನ್ಮದ ಕರ್ಮಗಳೇ ಕಾರಣವೆಂಬ ಕರ್ಮವಾದವನ್ನು ನಂಬುವ ಸ್ಥಿತಿಗೆ ಏರಿರುವನೋ ಅವನಿಗೆ ಲೋಕಾಂತರದಲ್ಲಿಯೂ ಜನ್ಮಾಂತರದಲ್ಲಿಯೂ ಪುಣ್ಯಫಲವೇ ಉಂಟಾಗುವದಕ್ಕೆ ಇಂಥ ಧರ್ಮವನ್ನು ಆಚರಿಸಬೇಕು, ಇಂಥ ಅಧರ್ಮವನ್ನು ಬಿಡಬೇಕು' - ಎಂದು ಕರ್ಮಮಾರ್ಗವನ್ನು ವೇದವು ಬೋಧಿಸುತ್ತದೆ. ಈ ವೇದೋಕ್ತವಾದ ಸತ್ಕರ್ಮದಿಂದ ಸಿಕ್ಕುವ ಉತ್ತಮಗತಿಗೆ ಸ್ವರ್ಗವೆಂದು ಹೆಸರು.

ಕರ್ಮದಿಂದ ದೊರೆಯುವ ಗತಿಯು ಹೆಚ್ಚಿನ ಸುಖವನ್ನು ಕೊಡುವದಾದರೂ ಅದರಿಂದ ಶಾಶ್ವತವಾದ ಸುಖವಾಗುವುದಿಲ್ಲ. ಸ್ವರ್ಗವೆಂಬ ಸುಖವು ಕೂಡ ತಾನು ಮಾಡಿದ ಕರ್ಮಕ್ಕೆ ತಕ್ಕಷ್ಟು ಕಾಲವೇ ಇರತಕ್ಕದ್ದು. ಆ ಸುಖವನ್ನು ಪಡೆದ ಮೇಲೆ ಜೀವನು ತಾನು ಹಿಂದೆ ಮಾಡಿರುವ ಬೇರೆ ಕರ್ಮಗಳಿಗೆ ತಕ್ಕ ಫಲವನ್ನು ಅನುಭವಿಸುವದಕ್ಕೆ ಮತ್ತೆ ಯಾವದಾದರೊಂದು ಜನ್ಮವನ್ನು ಪಡೆಯಲೇಬೇಕಾಗುವುದು - ಎಂದು ವೇದವು ಎಚ್ಚರಿಕೆಯನ್ನು ಕೊಟ್ಟೇ ಇರುತ್ತದೆ. ಯಾರು ಈ ಎಚ್ಚರಿಕೆಗೆ ಕಿವಿಗೊಡುವಷ್ಟು

ಮೇಲಿನಂತಸ್ತಿಗೆ ಏರಿರುವರೋ ಅವರು ತಮಗೆ ಶಾಶ್ವತವಾದ ಸುಖವೇ ಬೇಕು - ಎಂದು ಹಂಬಲಿಸುವದು ಸಹಜವಾಗಿದೆ. ಇಂಥ ಅಧಿಕಾರಿಗಳಿಗೆ ವೇದವು ಉಪಾಸನೆಯನ್ನು ಬೋಧಿಸುತ್ತದೆ. ಉಪಾಸನೆಯೆಂಬುದೂ ಒಂದು ಬಗೆಯ ಮಾನಸಿಕ ಕರ್ಮವೇ ಆದರೂ ವೇದದಲ್ಲಿ ಹೇಳಿರುವ ಬ್ರಹ್ಮೋಪಾಸನೆಯನ್ನು ಉತ್ತಮ ರೀತಿಯಿಂದ ಮಾಡುವವರಿಗೆ ಬ್ರಹ್ಮಲೋಕವೆಂಬ ಹೆಚ್ಚಿನ ಗತಿಯಾಗುವದು. ಅಂಥವರು ಉಪಾಸನೆಯ ಬಲದಿಂದ ಹಿಂದಿನ ಕರ್ಮವನ್ನು ನಾಶಮಾಡಿಕೊಂಡು ಮುಂದಿನ ಕರ್ಮಕ್ಕೆ ಅಂಟಿಕೊಳ್ಳದಂಥ ಸ್ಥಿತಿಯನ್ನು ಸಂಪಾದಿಸಿಕೊಳ್ಳುವರಾದ್ದರಿಂದ ಅವರು ಕರ್ಮಚಕ್ರದಿಂದ ಪಾರಾಗುತ್ತಾರೆ. ಬ್ರಹ್ಮಲೋಕವನ್ನು ಪಡೆದುಕೊಂಡ ಮೇಲೆ ಕಾಲಕ್ರಮದಲ್ಲಿ ಅವರು ಸರ್ವವಿಧವಾದ ಬಂಧನಗಳಿಂದಲೂ ಬಿಡುಗಡೆಯಾಗುತ್ತಾರೆ - ಎಂಬುದು ಶಾಸ್ತ್ರದ ಉಪದೇಶವಾಗಿರುತ್ತದೆ.

ಆದರೆ ಉಪಾಸನೆಯಿಂದ ಶಾಶ್ವತವಾದ ಫಲವನ್ನು ಈಗಲೇ ಇಲ್ಲಿಯೇ ಪಡೆಯಲಾಗುವದಿಲ್ಲ, ಸಾಯುವವರೆಗೂ ನಿರಂತರವಾಗಿ ಆದರ ಸತ್ಕಾರಗಳಿಂದ ಉಪಾಸನೆಯನ್ನು ಮಾಡುವವರಿಗೇ ಆ ಗತಿಯುಂಟಾಗುತ್ತದೆ. ಯಾರಿಗೆ ಈ ಜನ್ಮದಲ್ಲಿಯೇ ನಿತ್ಯವೂ ನಿರತಿಶಯವೂ ಆದ ಆನಂದವು ದೊರೆಯಬೇಕೆಂಬ ತವಕವಿರುವದೋ ಅಂಥ ಉತ್ತಮಾಧಿಕಾರಿಗಳಿಗೆ ಉಪಾಸನೆಯ ಮಾರ್ಗವಾಗಲಿ ಅದರಿಂದಾಗುವ ಕ್ರಮಮುಕ್ತಿಯಾಗಲಿ ತೃಪ್ತಿಯನ್ನುಂಟುಮಾಡಲಾರದು. ಅಂಥವರಿಗೆ ಬ್ರಹ್ಮಜ್ಞಾನವೆಂಬ ಮತ್ತೊಂದುರೀತಿಯ ಸಾಧನವನ್ನು ವೇದವು ಉಪದೇಶಿಸಿರುತ್ತದೆ. ವಿವೇಕ ವೈರಾಗ್ಯಗಳಿಂದ ಅತ್ಯಂತ ಪರಿಶುದ್ಧವಾಗಿರುವ ಚಿತ್ತವುಳ್ಳವರಿಗೆ ವೇದದಲ್ಲಿ ಹೇಳಿರುವ ಈ ಕಟ್ಟಕಡೆಯ ಸಾಧನದಿಂದ ಇಲ್ಲಿಯೇ ಬ್ರಹ್ಮಪ್ರಾಪ್ತಿಯಾಗಿ ಎಲ್ಲಾ ಬಂಧಗಳಿಂದಲೂ ಪೂರ ಬಿಡುಗಡೆಯಾಗಿಬಿಡುತ್ತದೆ. ಈ ಬಿಡುಗಡೆಗೆ ಸದ್ಯೋಮುಕ್ತಿಯೆಂದು ಹೆಸರು.

ಮೇಲೆ ಸಂಕ್ಷೇಪವಾಗಿ ತಿಳಿಸಿರುವ ಸದ್ಗತಿತ್ರಯವನ್ನು ಸ್ವರೂಪವಿವೇಚನೆಯೊಡನೆ ತಿಳಿಸಿರುವದೇ ವೇದದ ಮುಖ್ಯಭಾಗವಾದ ಉಪನಿಷತ್ತುಗಳು ನಮಗೆ ಮಾಡಿರುವ ಪರಮೋಪಕಾರವು.

# ವೇದೋಕ್ತ ಕರ್ಮ

ಲೋಕದಲ್ಲಿ ಪ್ರತಿಯೊಬ್ಬ ಮಾನವನೂ ಏನಾದರೊಂದು ಕೆಲಸವನ್ನು ಮಾಡುತ್ತಲೇ ಇರುವನು. ಅದರಿಂದ ಅವನಿಗೆ ಒಳ್ಳೆಯ ಅಥವಾ ಕೆಟ್ಟ ಫಲವು ಆಗುತ್ತಲೇ ಇರುವದು. ಬುದ್ಧಿಸಂಸ್ಕಾರವು ಸಾಲದೆ ಇರುವ ಜನರು ತಮಗೆ ತತ್ಕಾಲಕ್ಕೆ ಪ್ರಿಯವಾಗಿ ಕಂಡದ್ದನ್ನು ಮಾಡಿ ಆಮೇಲೆ ಇದರ ಪರಿಣಾಮವಾಗಿ ಕೆಟ್ಟ ಫಲವಾದರೆ "ಅಯ್ಯೋ, ಹೀಗಾಯಿತಲ್ಲಾ!" ಎಂದು ದುಃಖಪಡುವರು. ಸ್ವಲ್ಪ ವ್ಯವಹಾರಜ್ಞಾನ ದಿಂದ ಸಂಸ್ಕಾರವನ್ನು ಹೊಂದಿದವರು ಇವರಿಗಿಂತಲೂ ಉತ್ತಮರೀತಿಯಿಂದ ವಿವೇಚನೆ ಮಾಡಿ ಕೆಲಸ ಮಾಡುವರಾದರೂ ಲೋಕಾಂತರಜನ್ಮಾಂತರಗಳಲ್ಲಿಯೂ ಸುಖವಾಗು ವದಕ್ಕೆ ಏನು ಮಾಡಬೇಕೆಂಬುದು ಮಾನವನ ಸಾಮಾನ್ಯ ಬುದ್ಧಿಗೆ ಹೊಳೆಯಲಾರದು. ಇದಕ್ಕಾಗಿಯೇ ಶಾಸ್ತ್ರೀಯ ಕರ್ಮವು ಏರ್ಪಟ್ಟಿರುವದು.

ವೇದದಲ್ಲಿಯೂ ಅದನ್ನು ಅನುಸರಿಸಿರುವ ಸ್ಮೃತಿಗಳಲ್ಲಿಯೂ ಮನುಷ್ಯನು ಹೀಗೆ ಹೀಗೆ ಮಾಡಿದರೆ ಅವನಿಗೆ ಇಹದಲ್ಲಿ ಸುಖವೂ ಪರದಲ್ಲಿ ಗತಿಯೂ ಉಂಟಾಗು ವದೆಂದುತಿಳಿಸಿರುತ್ತದೆ. ವಿವೇಕಿಯಾದವನು ವೇದೋಕ್ತವಾದ ಕರ್ಮವನ್ನು ಮಾಡುತ್ತಲೇ ತನ್ನ ಆಯುಷ್ಯವನ್ನು ಕಳೆಯುವದಕ್ಕೆ ಪ್ರಯತ್ನಮಾಡಬೇಕು. ಸ್ವೇಚ್ಛೆಯಿಂದ ವರ್ತಿಸು ವದು ಎಷ್ಟೇ ಸುಲಭವಾಗಿ ಕಂಡರೂ 'ಮಾಡಿದ್ದುಣ್ಣೋ ಮಹಾರಾಯ' ಎಂದು ಗಾದೆ ಗನುಸಾರವಾಗಿ ಫಲಕಾಲದಲ್ಲಿ ಅದರಿಂದ ದುಃಖವೇ ಉಂಟಾಗುತ್ತದೆ. ಆದ್ದರಿಂದ ಕರ್ಮದಿಂದ ಸತ್ಫಲವನ್ನು ಪಡೆಯಬೇಕೆನ್ನುವವನು ಸೋಮಾರಿಯಾಗಿ ಸುಮ್ಮನೆ ಕೂರಲೂಬಾರದು, ತನ್ನ ಮನಬಂದಂತೆ ವರ್ತಿಸಲೂಬಾರದು; ಶಾಸ್ತ್ರದಲ್ಲಿ ಹೇಳಿರುವ ಕರ್ಮವನ್ನು ಮನಮುಟ್ಟಿ ಮಾಡುತ್ತಲೇ ಇರಬೇಕು. ಹಾಗಾದರೆ ಮಾತ್ರ ಅವನಿಗೆ ದುಷ್ಕರ್ಮದ ಫಲವು ಅಂಟುವ ಅಂಜಿಕೆಯಿಲ್ಲದಂತಾಗುತ್ತದೆ. **"ಕುರ್ವ ನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ" (ಈಶ)** ಎಂಬ ವಾಕ್ಯಕ್ಕೆ ಇದೇ ತಾತ್ಪರ್ಯವು.

ವೇದೋಕ್ತಕರ್ಮವು ಯಜ್ಞ, ದಾನ, ತಪಸ್ಸು – ಎಂದು ಮೂರು ಬಗೆಯಾಗಿ ರುತ್ತದೆ. ಯಜ್ಞವೆಂದರೆ ದೇವತೆಗಳಿಗಾಗಿ ತನ್ನ ಸ್ವತ್ತನ್ನು ವಿಧಿಯಲ್ಲಿ ಹೇಳಿರುವಂತೆ ಒಪ್ಪಿಸುವದು; ದಾನವೆಂದರೆ ತಕ್ಕವರಿಗೆ ಕಾಲದಲ್ಲಿ ಯಾವದಾದರೊಂದು ವಸ್ತುವನ್ನು ಶಾಸ್ತ್ರದಲ್ಲಿ ಹೇಳಿರುವ ರೀತಿಯಿಂದ ಒಪ್ಪಿಸುವದು; ತಪಸ್ಸೆಂದರೆ ಶಾಸ್ತ್ರೋಕ್ತವಾದ ರೀತಿಯಿಂದ ಶರೀರವನ್ನು ಹಿಡಿತದಲ್ಲಿಟ್ಟುಕೊಳ್ಳುವ ಕ್ರಮವನ್ನು ಆಚರಿಸುವದು. ಶ್ರುತಿ ಸ್ಮೃತಿಗಳಲ್ಲಿ ವಿಧವಿಧವಾದ ಯಜ್ಞಗಳನ್ನೂ ದಾನಗಳನ್ನೂ ತಪಸ್ಸುಗಳನ್ನೂ ವರ್ಣಿಸಿ

ರುತ್ತದೆ. ಇವುಗಳನ್ನು ಸರಿಯಾಗಿ ಆಚರಿಸಿದ್ದರಿಂದ ದೇವತೆಗಳು ಮೇಲನ್ನು ಪಡೆದರೆಂದೂ ಇವುಗಳನ್ನು ಮಾಡದೆ ಇದ್ದದ್ದರಿಂದ ಅಸುರರು ಕೆಳಕ್ಕೆ ಇಳಿದರೆಂದೂ ಉಪನಿಷತ್ತಿನಲ್ಲಿ ವರ್ಣಿಸಿರುತ್ತದೆ.

ಕರ್ಮಗಳಿಂದ ಪಿತೃಲೋಕವೇ ಮುಂತಾದ ಲೋಕಗಳು ಉಂಟಾಗುವವು. ಈ ಲೋಕಗಳಲ್ಲಿ ಫಲವನ್ನು ಪಡೆದ ಮೇಲೆ ಮತ್ತೆ ಭೂಲೋಕದಲ್ಲಿ ಹಿಂದೆ ಮಾಡಿದ ಕರ್ಮಕ್ಕೆ ಅನುಗುಣವಾಗಿ ಉತ್ತಮಯೋನಿಗಳಲ್ಲಿ ಜನ್ಮವನ್ನು ಹೊಂದುವರು. ಲೋಕದಲ್ಲಿ ಆಗುವ ಸುಭಿಕ್ಷಕ್ಕೂ ಜನರ ಸೌಮನಸ್ಯಕ್ಕೂ ಈ ಕರ್ಮಗಳು ಕಾರಣವಾಗಿರುತ್ತವೆ; ಕರ್ಮಗಳಿಂದ ಆಗುವ ಫಲವು ಅವಶ್ಯವಾಗಿ ಆಗಿಯೇ ತೀರುತ್ತದೆ. ಶಾಸ್ತ್ರದಲ್ಲಿ ಮಾಡಬೇಡವೆಂದು ಕರ್ಮವನ್ನು ಮಾಡಿದವನಿಗೆ ಅನಾರೋಗ್ಯ, ಆಯುಸ್ಸಿನ ಕ್ಷಯ, ಸಾಲ, ಬಡತನ, ಅಕೀರ್ತಿ ಮುಂತಾದವು ಹೇಗೆ ತಪ್ಪದೆ ಆಗುವವೋ ಪರದಲ್ಲಿ ದುರ್ಗತಿಯೂ ಸಿದ್ಧವಾಗಿರುವದೋ ಅದರಂತೆಯೇ ಶಾಸ್ತ್ರದಲ್ಲಿ ಹೇಳಿದ ವೇದಾಧ್ಯಯನ, ಸಂಧ್ಯಾ, ಅಗ್ನಿಹೋತ್ರ, ಯಜ್ಞ, ತಪಸ್ಸು, ಅತಿಥಿಪೂಜೆ, ವೈಶ್ವದೇವ ಮುಂತಾದವುಗಳನ್ನು ಮಾಡುತ್ತಾ ಬಾವಿ, ಕೆರೆ, ಕಟ್ಟೆ ಮುಂತಾದವುಗಳನ್ನು ತೋಡಿಸುವದು, ದೇವಾಲಯವೇ ಮುಂತಾದವುಗಳನ್ನು ಕಟ್ಟಿಸುವದು, ತೋಟಗಳನ್ನು ಉದ್ಯಾನವನಗಳನ್ನೂ ಏರ್ಪಡಿಸುವದು, ಹಸಿದವರಿಗೆ ಅನ್ನಛತ್ರಗಳನ್ನು ಏರ್ಪಡಿಸುವದು ಮುಂತಾದ ಶಾಸ್ತ್ರೋಕ್ತಕರ್ಮಗಳನ್ನು ಶ್ರದ್ಧೆಯಿಂದ ಮಾಡುವವನಿಗೆ ಇಹದಲ್ಲಿ ಆರೋಗ್ಯ, ಬ್ರಹ್ಮ ವರ್ಚಸ್ಸು ಆಯುರ್ವೃದ್ಧಿ ಧನಧಾನ್ಯ, ಕೀರ್ತಿ ಮುಂತಾದವುಗಳೂ ಪರದಲ್ಲಿ ಸ್ವರ್ಗದವರೆಗಿನ ಸದ್ಗತಿಯೂ ಅವಶ್ಯವಾಗಿ ಆಗುತ್ತವೆ. ಹಾಲುಕೊಡುತ್ತಿರುವ ಹಸು ತನ್ನ ಕರುವನ್ನು ಹುಡುಕಿಕೊಂಡು ಬಂದು ಅದು ಎಷ್ಟೋ ಕರುಗಳ ಗುಂಪಿನಲ್ಲಿದ್ದರೂ ಇದೇ ನನ್ನ ಕರುವೆಂದು ಕಂಡುಕೊಳ್ಳುವಂತೆ ಆಸ್ತಿಕನಾದ ಅಧಿಕಾರಿಯು ಮಾಡಿದ ಕರ್ಮವು ತನ್ನ ಫಲವನ್ನು ಕಾಲಕ್ಕೆ ಸರಿಯಾಗಿ ಅವನಿಗೆ ಕೊಟ್ಟೇ ತೀರುವದು ಎಂಬುದು ಶಾಸ್ತ್ರಸಿದ್ಧಾಂತವು.

ಕರ್ಮಕ್ಕೆ ಮುಖ್ಯವಾಗಿ ಶ್ರದ್ಧೆಯಿರಬೇಕು. ಶ್ರದ್ಧೆಯಿಲ್ಲದೆ ಮಾಡಿದ ಕರ್ಮವು ಯಾವ ಫಲವನ್ನೂ ಕೊಡುವದಿಲ್ಲವೆಂಬುದು ಲೋಕದಲ್ಲಿಯೇ ಕಂಡುಬರುತ್ತದೆ. ವೇದವು ಅಪೌರುಷೇಯವಾದ ಪ್ರಮಾಣವು ಅಥವಾ ಸರ್ವಜ್ಞನಾದ ಪರಮೇಶ್ವರನ ಕಟ್ಟಳೆಯು. ಆದ್ದರಿಂದ ಅದರಲ್ಲಿ ಹೇಳಿರುವಂತೆ ಒಂದಿಷ್ಟೂ ತಪ್ಪದೆ ಕರ್ಮಗಳನ್ನು ನೆರವೇರಿಸಬೇಕು – ಎಂಬ ಆದರವು ಕರ್ಮದ ಪ್ರತಿಯೊಂದು ಭಾಗದಲ್ಲಿಯೂ ಒಡೆದು ಮೂಡುತ್ತಿರಬೇಕು. ಹಾಗಾದರೆ ಮಾತ್ರ ಕರ್ಮವು ತನ್ನ ಫಲವನ್ನುಕೊಡುತ್ತದೆ.

# ಸಂಪೂರ್ಣ ಜೀವನ

ಜೀವನದಲ್ಲಿ ಆದಷ್ಟು ಸುಖವು ದೊರಕಬೇಕೆಂದು ನಾವೆಲ್ಲರೂ ಹಂಬಲಿಸುತ್ತಿರುತ್ತೇವೆ. ಆದರೆ ಏನೇನಿದ್ದರೆ ಸಂಪೂರ್ಣಜೀವನವಾಗುವದು? – ಇದರ ಕಲ್ಪನೆಯು ಮಾತ್ರ ನಮ್ಮಲ್ಲನೇಕರಿಗೆ ಇರುವದಿಲ್ಲ.

ಶರೀರದಲ್ಲಿ ಆರೋಗ್ಯವಿರಬೇಕು, ದಾರ್ಢ್ಯವಿರಬೇಕು, ಬಲವಿರಬೇಕು, ಇವೆಲ್ಲವೂ ಇಲ್ಲದಿದ್ದರೆ ಜೀವನವು ಪೂರ್ಣವಾಗುವದಿಲ್ಲ. ಇದು ಶಾರೀರಿಕ ಜೀವನವು. ತಿಂಡಿ, ನೀರು, ಗಾಳಿ, ಬೆಳಕು – ಮುಂತಾದವುಗಳನ್ನು ನಾವು ಬಯಸುವದೂ ವ್ಯಾಯಾಮವನ್ನು ಮಾಡುವದೂ ಈ ಜೀವನಕ್ಕಾಗಿ.

ನಮ್ಮ ಬುದ್ಧಿಯು ಉತ್ತಮಸ್ಥಿತಿಯಲ್ಲಿರಬೇಕು. ನಮಗೆ ನಿಜದರಿವಾಗಬೇಕು, ಕಲ್ಪನೆಗಳು ತೊಲಗಬೇಕು, ಬಾಹ್ಯ ವಿಷಯಗಳ ಸಂಬಂಧವಿಲ್ಲದ ಸಂಗೀತ ಸಾಹಿತ್ಯಾದಿಗಳ ಶುದ್ಧಸುಖವು ದೊರೆಯಬೇಕು. ಇದು ಮಾನಸಿಕಜೀವನವು. ನಾವು ವಿಚಾರ ಮಾಡುವದೂ, ಓದುವದು, ಬರೆಯುವದು – ಮುಂತಾದವುಗಳನ್ನು ಅಭ್ಯಾಸಮಾಡುವದೂ ಈ ಜೀವನಕ್ಕಾಗಿ.

ನಮ್ಮ ನೀತಿಯು ಮನಸ್ಸಾಕ್ಷಿಗೆ ಒಪ್ಪಾಗಿರಬೇಕು. ಕರ್ತವ್ಯಕರ್ಮವನ್ನು ಮರೆತು, ಮಿಕ್ಕವರನ್ನೆಲ್ಲ ಬಿಟ್ಟು ತಾನೇ ಬೇರೆಯಾಗಿ ನಿಂತು ಸ್ವಾರ್ಥಪರನಾದರೆ ನೈತಿಕಾನಂದವು ದೊರೆಯದು. ಇದೇ **ನೈತಿಕಜೀವನವು.** ಪರೋಪಕಾರಮಾಡುವ ದಕ್ಕಾಗಿ ಶರೀರಾದಿಗಳನ್ನು ಸವೆಸುವದೂ ಈ ಜೀವನಕ್ಕಾಗಿ.

ನಮಗೆ ಈ ಪ್ರಪಂಚದ ದೃಶ್ಯಗಳ ಮೂಲದ ಅರಿವಾಗಬೇಕು. ನಮ್ಮ ಇರವಿನ ಉದ್ದೇಶವು ಮನವರಿಕೆಯಾಗಬೇಕು. 'ನಾನು' ಎಂಬ ನಮ್ಮ ಅತ್ಯಂತ ಒಳಗಿನ ತಿರುಳು ಏನೆಂಬುದರ ಗುಟ್ಟು ರಟ್ಟಾಗಬೇಕು. ಇದು **ಆಧ್ಯಾತ್ಮಿಕ ಜೀವನವು,** ಇದಕ್ಕಾಗಿ ನಾವು ಇಂದ್ರಿಯನಿಗ್ರಹವನ್ನು ಮಾಡುವದು, ಚಿತ್ತವನ್ನು ಏಕಾಗ್ರತೆಗೊಳಿಸುವದು. ಸದ್ಗುರುವಿನ ಉಪದೇಶವನ್ನೂ ಸಚ್ಛಾಸ್ತ್ರದ ಬೋಧೆಯನ್ನೂ ಅನುಸರಿಸಿ ನಮ್ಮೊಳಕ್ಕೆ ನಾವು ಸರಿದುಕೊಂಡು ಎಲ್ಲೆಲ್ಲಿಯೂ ಇರುವ ಪರತತ್ತ್ವವನ್ನು ಕಂಡುಕೊಳ್ಳುವದಕ್ಕೆ ಯತ್ನಿಸುವದು.

ಶಾರೀರಕ, ಮಾನಸಿಕ, ನೈತಿಕ, ಆಧ್ಯಾತ್ಮಿಕ – ಈ ನಾಲ್ಕು ಜೀವನಗಳು, ಸೇರಿದರೆ **ಸಂಪೂರ್ಣಜೀವನವಾಗುವದು.** ಈ ಜೀವನಕ್ಕೆ ಜೀವಾಳವಾಗಿರುವವನೇ **ಪರಮೇಶ್ವರನು.**

ಙಙಙಙಙ

# ಭಗವತ್ಪ್ರಾಪ್ತಿಗೆ ಉಪಾಯಗಳು

ಭಗವಂತನನ್ನು ಸಾಕ್ಷಾತ್ಕಾರಮಾಡಿಕೊಳ್ಳುವದಕ್ಕೆ ಅನೇಕ ಉಪಾಯಗಳನ್ನು ಶಾಸ್ತ್ರದಲ್ಲಿ ಹೇಳಿರುತ್ತದೆ. ಅಂಥ ಉಪಾಯಗಳಲ್ಲಿ ಮುಖ್ಯವಾದ ಮೂರನ್ನು ಇಲ್ಲಿ ಆರಿಸಿ ವಾಚಕರಲ್ಲಿ ಸಮರ್ಪಿಸುತ್ತೇನೆ.

'ಈಶ್ವರನು ಸಕಲಪ್ರಾಣಿಗಳ ಹೃದಯದಲ್ಲಿಯೂ ಇರುತ್ತಾನೆ' ಎಂದು ಶಾಸ್ತ್ರಸಿದ್ಧವಾಗಿರುತ್ತದೆ; ಹಾಗಾದರೆ ಆತನು ನನ್ನ ಹೃದಯದಲ್ಲಿಯೂ ಇರಬೇಕು ಎಂದು ಸಾಧಕನು ನಿಶ್ಚಯಮಾಡಿಕೊಳ್ಳಬೇಕು. ಈ ನಂಬಿಕೆಯು ಬಲವಾದಂತೆಲ್ಲ ನಮ್ಮ ಹೃದಯವು ಶುದ್ಧಿಯಾಗುತ್ತಾ ಹೋಗುತ್ತದೆ. ಪರಮೇಶ್ವರನ ವಾಸಕ್ಕೆ ಯೋಗ್ಯವಾಗುವಂತೆ ಹೃದಯವನ್ನಿಟ್ಟುಕೊಳ್ಳಬೇಕಾದರೆ ಚಿತ್ತದಲ್ಲಿರುವ ಪಾಪವಾಸನೆಗಳನ್ನು ಕಡಿಮೆ ಮಾಡಿಕೊಳ್ಳಬೇಕು. ಶಾಸ್ತ್ರದಲ್ಲಿ ಹೇಳಿರುವಂತೆ ನಡೆಯುವದಕ್ಕೆ ಪ್ರಯತ್ನ ಮಾಡಿದರೆ ಈ ವಾಸನೆಯು ಕಡಿಮೆಯಾಗುತ್ತದೆ. ಚಿತ್ತವು ನಿರ್ಮಲವಾಗುತ್ತದೆ. ಚಿತ್ತದಲ್ಲಿರುವ ಪಾಪದ ಮಲವು ತೊಳೆದುಹೋಗುತ್ತಾ ಬಂದಂತೆ ಅದರಲ್ಲಿರುವ ಚಾಂಚಲ್ಯವು ನಮಗೆ ಹೆಚ್ಚು ಹೆಚ್ಚಾಗಿ ಮನವರಿಕೆಯಾಗುತ್ತದೆ. ವಿಷಯಗಳಲ್ಲಿ ವೈರಾಗ್ಯದಿಂದಲೂ ಮತ್ತೆ ಮತ್ತೆ ಭಗವಂತನ ಉಪಾಸನೆಗೆ ಹರಿಯುವದರಿಂದಲೂ ಚಿತ್ತದ ಚಾಂಚಲ್ಯವು ಕಡಿಮೆಯಾಗುತ್ತದೆ. ಹೀಗೆ ನಿರ್ಮಲವಾದ ಅಂತಃಕರಣದಿಂದ ಭಗವಂತನನ್ನು ಅಭ್ಯಾಸ ವೈರಾಗ್ಯಗಳ ಸಹಾಯದಿಂದ ಧ್ಯಾನಮಾಡುವದಕ್ಕೆ ಪ್ರಯತ್ನಿಸುವದು ಭಗವತ್ಪ್ರಾಪ್ತಿಗೆ ಅತ್ಯಂತ ಮುಖ್ಯವಾದ ಉಪಾಯವು.

ಹೃದಯದಲ್ಲಿರುವ ಪಾಪವಾಸನೆಯನ್ನು ಕಳೆದುಕೊಳ್ಳುವದಕ್ಕೆ ಸರ್ವಭೂತಗಳಲ್ಲಿಯೂ ಈಶ್ವರನಿರುತ್ತಾನೆ ಎಂಬ ಭಾವನೆಯು ಒಳ್ಳೆಯ ಸಹಕಾರಿಯಾಗುತ್ತದೆ. ಯಾವ ಪ್ರಾಣಿಯನ್ನು ನೋಡಿದರೂ ಅಲ್ಲಿ ಈಶ್ವರನಿರುತ್ತಾನೆಂಬ ಭಾವನೆಯನ್ನು ಮತ್ತೆ ಮತ್ತೆ ತಂದುಕೊಳ್ಳಬೇಕು. ಈ ಅಭ್ಯಾಸವು ಬಲಿತರೆ ಸಕಲ ಪ್ರಾಣಿಗಳೂ ತನ್ನಂತೆಯೇ ಎಂಬ ಭಾವವು ಹುಟ್ಟುವದು ಹಾಗಿರಲಿ, ಅವುಗಳನ್ನು ಸೇವಿಸುವದು ಈಶ್ವರನಸೇವೆಯೇ ಆಗುವದೆಂಬ ಉದಾತ್ತಕಲ್ಪನೆಯೂ ಮೊಳೆತುಕೊಳ್ಳುವದು. ಯಾವದೊಂದು ಪ್ರತ್ಯುಪಕಾರವನ್ನೂ ಬಯಸದೆ ಪ್ರಾಣಿಮಾತ್ರವನ್ನು ಈಶ್ವರಬುದ್ಧಿಯಿಂದ ಸೇವಿಸುವದು ಚಿತ್ತಮಲವನ್ನು ದೂರಮಾಡಿಕೊಳ್ಳುವದಕ್ಕೆ ಉತ್ತಮಸಾಧನವಾಗಿರುತ್ತದೆ. ವಿವೇಕಿಯಾದ

ವನು ಎಲ್ಲ ಪ್ರಾಣಿಗಳಿಗೂ ಸಂತೋಷವನ್ನುಂಟುಮಾಡುವದಕ್ಕೆ ಪ್ರಯತ್ನಿಸುವನು. ಅದೇ ಈಶ್ವರನ ಪೂಜೆಯು-ಎಂದು ಬಲ್ಲವರು ಹೇಳುತ್ತಾರೆ. ಯಾವನು ತನ್ನ ನೆರೆಯವರನ್ನೆಲ್ಲ ಈಶ್ವರಭಾವನೆಯಿಂದ ಕಾಣುವದಕ್ಕೆ ಪ್ರಯತ್ನಿಸುವನೋ ಅವನಿಗೆ ಅವರ ವಿಷಯದಲ್ಲಿ ಪಾಪಬುದ್ಧಿಯು ಹುಟ್ಟೀತೆಂಬ ಅಂಜಿಕೆಗೆ ಕಾರಣವಿರುವದೇ ಇಲ್ಲ.

ಈ ಚರಾಚರಜಗತ್ತೆಲ್ಲವೂ ಈಶ್ವರನ ಸಂಪತ್ತೇ - ಎಂದು ಭಾವಿಸಿಕೊಂಡರೆ ಬಾಹ್ಯವಿಷಯಗಳಲ್ಲಿ ಮಮತೆಯು ದೂರವಾಗುತ್ತದೆ. ವಸ್ತುಗಳಲ್ಲಿರುವ ರಾಗದ್ವೇಷ ಗಳೇ ನಮ್ಮ ಅಂತಃಕರಣದಲ್ಲಿರುವ ಪಾಪಮಲಕ್ಕೂ ಅದರ ವಿಕ್ಷೇಪ (ಚಾಂಚಲ್ಯ)ಕ್ಕೂ ಕಾರಣವಾಗಿದೆಯೆಂಬುದು ನಮ್ಮೆಲ್ಲರ ಅನುಭವದಲ್ಲಿಯೂ ಇರುತ್ತದೆ. ಯಾವದೊಂದು ವಸ್ತುವನ್ನೂ ನನ್ನದೆಂದು ಹೆಮ್ಮೆಪಡುವದಕ್ಕೆ ಕಾರಣವಿಲ್ಲ; ನಾನು ಬರುವಾಗ ಒಬ್ಬನೇ ಬಂದೆನು. ಹೋಗುವಾಗ ಒಬ್ಬನೇ ಹೋಗುತ್ತೇನೆ. ಈ ಇಡಿಯ ಜಗತ್ತಿನ ಸಂಪತ್ತನ್ನು ಸರಿಯಾಗಿ ಉಪಯೋಗಿಸಿ ಕೃತಾರ್ಥರಾಗಲೆಂದು ನಮ್ಮೆಲ್ಲರಿಗೂ ಪರಮೇಶ್ವರನು ಅದನ್ನು ಅನುಗ್ರಹಿಸಿರುತ್ತಾನೆ. ಆದ್ದರಿಂದ ಇದು ನನ್ನದು, ಅದು ಅವನದು - ಎಂದು ವೃಥಾಬುದ್ಧಿಯನ್ನು ಮಾಡಬಾರದು ಎಂಬ ತಿಳಿವಳಿಕೆಯೇ ವೈರಾಗ್ಯಕ್ಕೆ ಮೂಲವು. ಇದರಿಂದ ಚಿತ್ತದ ಚಾಂಚಲ್ಯವು ಬಹಳವಾಗಿ ಕಡಿಮೆ ಯಾಗುತ್ತದೆ. ನಮ್ಮ ಹೊರಗಿನ ಜಗತ್ತು ಮಾತ್ರವೇ ಈಶ್ವರನಲ್ಲ, ನಮ್ಮೊಳಗಿರುವ ಜ್ಞಾನ, ಬಲ, ಕ್ರಿಯೆ- ಮುಂತಾದವೂ ಈಶ್ವರನ ಸ್ವಭಾವಸಿದ್ಧವಾದ ಶಕ್ತಿಯ ಅಂಶಗಳು. ಈ ತಿಳಿವಳಿಕೆಯು ಬಲಿತರೆ ಅಹಂಕಾರವು ಕಡಿಮೆಯಾಗುತ್ತದೆ.

ಹೀಗೆ ನಿರ್ಮಮನಾಗಿ ನಿರಹಂಕಾರನಾಗಿ ಫಲಾಪೇಕ್ಷೆಯಿಲ್ಲದೆ ಲೋಕಹಿತ ವನ್ನು ಆಚರಿಸುತ್ತಾ ಪರಮೇಶ್ವರನನ್ನು ತನ್ನ ಹೃದಯದಲ್ಲಿ ನಿತ್ಯದಲ್ಲಿಯೂ ಧ್ಯಾನಿ ಸುತ್ತಿರುವವನು ಪರಮೇಶ್ವರನನ್ನು ಬೇಗನೆ ಕಂಡುಕೊಳ್ಳುವನೆಂದು ದೊಡ್ಡವರು ಹೇಳುತ್ತಾರೆ.

ಉಉಉಉಉ

# ಅಂಜಿಕೆಯ ಮೂಲ

ಬೃಹದಾರಣ್ಯಕೋಪನಿಷತ್ತಿನಲ್ಲಿ ಒಂದು ಬಹುಚಿಕ್ಕ ಕಥೆಯಿದೆ. ಈ ಜಗತ್ತು ಸೃಷ್ಟಿಯಾಗುವ ಮೊದಲು ಪ್ರಜಾಪತಿಬ್ರಹ್ಮನೊಬ್ಬನೇ ಇದ್ದನು. ಅವನು ಅತ್ತಿತ್ತ ನೋಡಿ ಮತ್ತೆ ಯಾರೊಬ್ಬರನ್ನೂ ಕಾಣದೆ ಇದ್ದನು. ಆದರೆ ಅವನು 'ನಾನು ಇದ್ದೇನೆ' ಎಂದು ಮೊದಲು ಹೇಳಿಕೊಂಡನು. ಆದ್ದರಿಂದ ಅವನಿಗೆ 'ನಾನು' ಎಂಬ ಹೆಸರಾಯಿತು. ಆದ್ದರಿಂದ ಈಗಲೂ 'ಯಾರು?'- ಎಂದು ಕೇಳಿದಾಗ ಜನರು'ನಾನು' ಎಂದು ಹೇಳಿ ಆ ಬಳಿಕವೇ ತಮ್ಮ ತಮ್ಮ ಹೆಸರನ್ನು ಹೇಳಿಕೊಳ್ಳುತ್ತಾರೆ. ಇಷ್ಟರಲ್ಲಿ ಆತನಿಗೆ ಅಂಜಿಕೆ ಯಾಯಿತು. ಆದ್ದರಿಂದ ಈಗಲೂ ಒಂಟಿಗರಾಗಿರುವಾಗ ಜನರು ಅಂಜುತ್ತಾರೆ. ಆತನು ಚೆನ್ನಾಗಿ ಯೋಚಿಸಿ ನೋಡಿದನು; 'ನನಗಿಂತ ಬೇರೊಬ್ಬರೂ ಇಲ್ಲವಲ್ಲ, ನಾನಾರಿಗೆ ಅಂಜುತ್ತಿದ್ದೇನೆ?' ಈ ಯೋಚನೆಯು ಬಂದ ಕೂಡಲೆ ಅವನ ಅಂಜಿಕೆಯು ತೊಲಗಿ ಹೋಯಿತು. ಅವನು ನಿಜವಾಗಿ ಏತಕ್ಕೆ ಹೆದರಬೇಕು? ಎರಡನೆಯವರಿಂದಲೇ ಅಲ್ಲವೆ, ಅಂಜಿಕೆಯಾಗುವದು?

ಉಪನಿಷತ್ತು ಈ ಕಥೆಯಿಂದ ನಮಗೆ ತಿಳಿಸಿಕೊಟ್ಟಿರುವ ವಿಷಯಗಳು ಎರಡು ಮೊಟ್ಟಮೊದಲನೆಯದು ಪ್ರಜಾಪತಿ ಬ್ರಹ್ಮನ ದೃಷ್ಟಿಯಿಂದ ನೋಡಿದರೆ ಈ ಇಡಿಯ ವಿಶ್ವವೆಲ್ಲ ಒಂದೇ ಆಗಿರುತ್ತದೆ. ಅದರಲ್ಲಿ ಯಾವ ಭೇದವೂ ಇರುವದಿಲ್ಲ, ಆದರೂ ಆತನು ತನ್ನನ್ನು 'ನಾನು' 'ನಾನು' ಎಂದು ಕರೆದುಕೊಂಡನು; ಅವನ ಮಕ್ಕಳಾದ ನಾವೂ ಈಗ 'ನಾನು' ಎಂದು ಒಂದೊಂದು ಸುತ್ತುಬೇಲಿಯನ್ನು ಹಾಕಿಕೊಂಡಿರುತ್ತೇವೆ. 'ನಾನು ರಾಮಣ್ಣ', 'ನಾನು ಭೀಮಣ್ಣ' – ಎಂದು ವ್ಯವಹರಿಸುವಾಗಲೆಲ್ಲ ಈ 'ನಾನು' ಎಂಬ ಬೇಲಿಯು ನಮ್ಮನ್ನು ಸುತ್ತುಗಟ್ಟಿಕೊಂಡಿರುತ್ತದೆ.

ಪ್ರಜಾಪತಿಯು 'ನಾನು' ಎಂಬ ತಿಳಿವಳಿಕೆಯನ್ನು ಮನಸ್ಸಿಗೆ ತಂದುಕೊಂಡನೊ ಇಲ್ಲವೊ, ಕೂಡಲೆ ಅವನಿಗೆ 'ನಾನೊಬ್ಬನೇ ಇದೇನೆ' ಎಂಬ ಅರಿವು ಉಂಟಾಯಿತು; ಆ ಅರಿವನ್ನು ಬೆನ್ನಂಟಿಕೊಂಡು 'ಅಯ್ಯೊ, ನನಗೆ ದಿಕ್ಕು ಯಾರು?'ಎಂಬ ಅಂಜಿಕೆಯೂ ಆಯಿತು. ನಾನು ಎಂಬ ಬೇಲಿಯ ಮಹಿಮೆಯಿದು. ಅದರಿಂದ ನಾನು ಒಂಟಿಗ ನೆಂಬ ಅರಿವೂ ಆಮೇಲೆ 'ಹಾಗಾದರೆ ಏನು ಗತಿ!' ಎಂಬ ಅಂಜಿಕೆಯೂ ಬೆಂಬಿಡದೆ ಆಗಿಯೇ ತೀರುವವು. ಇದು ಶ್ರುತಿಯ ಮೊದಲನೆಯ ಉಪದೇಶವು.

ಪ್ರಜಾಪತಿಯು ಧರ್ಮಜ್ಞಾನವೈರಾಗ್ಯಗಳ ಮೂರ್ತಿಯು. ಅವನಿಗೆ ಯಾರೊಬ್ಬರ ಉಪದೇಶವೂ ಇಲ್ಲದೆ ಹಿಂದಿನ ಜನ್ಮದಲ್ಲಿ ತಾನು ಮಾಡಿದ್ದ ಕರ್ಮೋಪಾಸನೆಗಳ ಫಲವಾಗಿ ಸೃಷ್ಟಿಯ ಮೊದಲಿನಲ್ಲಿಯೇ ಇನ್ನಿಲ್ಲವೆನ್ನುವಷ್ಟು ಹೆಚ್ಚಿನ ಧರ್ಮಾದಿಗಳುಂಟಾಗುವವೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಆದ್ದರಿಂದ ಆತನು ವಿವೇಕದಿಂದ ತನ್ನಲ್ಲಿ ತಾನೇ ಹೀಗೆಂದು ಯೋಚಿಸಿಕೊಂಡನು. "ನನಗಿಂತ ಬೇರೊಬ್ಬರು ಯಾರೂ ಇಲ್ಲ ದಿರುವಾಗ ನಾನು ಅಂಜುತ್ತಿರುವದು ಯಾರಿಗೆ?" ಈ ಯೋಚನೆಯು ಕೂಡಲೆ ಅವನ ಅಂಜಿಕೆಯನ್ನು ತೊಲಗಿಸಿತು.

ಈಗ ನಮಗೂ ಹೀಗೆಯೇ ಆಗುವದು. ಅಂಜಿಕೆಯು ಮತ್ತೊಬ್ಬರಿಂದ ಆಗಬೇಕಷ್ಟೆ. ಯಾವಾಗ ಯಾರು ನಮಗೇನು ಮಾಡಿಬಿಡವರೋ-ಎಂಬುದೇ ಅಂಜಿಕೆಯ ರೂಪವು. ಆದರೆ ನಿಜವಾಗಿ ನೋಡಿದರೆ ಇಡಿಯ ವಿಶ್ವವೇ ಒಂದಾಗಿರುತ್ತದೆ. ಈ ವಿಶ್ವದಲ್ಲಿರುವ ಸ್ಥೂಲಭೌತಿಕರಾಶಿಯನ್ನಾಗಲಿ, ಸೂಕ್ಷ್ಮಭೌತಿಕರಾಶಿಯನ್ನಾಗಲಿ ಕಡಿದು ತುಂಡು ಮಾಡಿರುವದು ಯಾವದೊಂದೂ ಇರುವದಿಲ್ಲ, ಎಲ್ಲವೂ ಒಂದೇ ಒಂದು ಸಾಗರದಂತಿರುವದು. ಆದರೂ ತಪ್ಪುತಿಳಿವಳಿಕೆಯೆಂಬ ಬಿರುಗಾಳಿಯಿಂದ ಈ ಸಾಗರದಲ್ಲಿ ಸಣ್ಣಪುಟ್ಟ ತೆರೆಗಳೂ ದೊಡ್ಡ ದೊಡ್ಡ ಅಲೆಗಳೂ ಏಳುತ್ತಿರುವವು. ಈ ತೆರೆಗಳೇ, ಈ ಅಲೆಗಳೇ 'ನಾನು'ಗಳು. ಈ 'ನಾನು'ಗಳಿಂದ ನಾನು, ನೀನು, ಅವನು, ನನ್ನವನು, ಮತ್ತೊಬ್ಬನು – ಎಂಬ ಭಾವನೆಯ ನೀರುಗುಳ್ಳೆಗಳು ನಮ್ಮ ಚಿತ್ತದಲ್ಲಿ ಏಳುತ್ತಿರುವವು. ನಮಗೆ ಎಲ್ಲಿಯೂ ಇಲ್ಲದ ದಿಗಿಲಾಗುತ್ತಿರುವದು. ಈ ದಿಗಿಲಿನ ನಿವಾರಣೆಗೆಂದು ನಾವು 'ಆತ್ಮರಕ್ಷಣೆಗೂ' 'ಶತ್ರುಭಕ್ಷಣೆಗೂ' ಸೈನ್ಯವನ್ನು ಸಂಗ್ರಹಮಾಡಿಕೊಳ್ಳುತ್ತಿರುವೆವು!

ವಾಚಕರೆ, ಚೆನ್ನಾಗಿ ಆಲೋಚನೆಮಾಡಿರಿ. ಈ ನಾನು ಎಂಬ ಸುತ್ತುಗಟ್ಟಿನ ಸ್ವರೂಪವನ್ನು ಚೆನ್ನಾಗಿ ಅರಿತುಕೊಳ್ಳಿರಿ. ಆಗ ಇದರಲ್ಲಿ ಯಾವ ಯಾವ ಹುರುಳೂ ಇಲ್ಲವೆಂಬುದು ನಿಮಗೆ ಸ್ಪಷ್ಟವಾಗುತ್ತದೆ. ಏಳಿರಿ, ಎಚ್ಚರಗೊಳ್ಳಿರಿ, ಸದ್ಗುರುಗಳನ್ನು ಸೇರಿ ನಿಮ್ಮ ಪರಮಾರ್ಥರೂಪವನ್ನು ವಿಚಾರಪೂರ್ವಕವಾಗಿ ಅರಿತುಕೊಳ್ಳಿರಿ. ಅದ್ವಿತೀಯನಾದ ಸಚ್ಚಿದಾನಂದಪರಮೇಶ್ವರನೇ ನಮ್ಮಗಳೆಲ್ಲರ ಆತ್ಮನೆಂಬ ವಿವೇಕ ಸೂರ್ಯನು ನಿಮ್ಮ ಹೃದಯದಲ್ಲಿ ಮೂಡಲಿ! ಈ 'ನಾನು' ಎಂಬ ಸುತ್ತುಗಟ್ಟು ಚಳಿಗಾಲದಲ್ಲಿ ತೋರುವ ಕಾವಳದ ಮುಸುಕಿನಂತೆ ದಟ್ಟವಾಗಿದ್ದರೂ ವಿವೇಕ ಸೂರ್ಯನು ಉದಯಿಸಿದ ಕ್ಷಣದಲ್ಲಿಯೇ ಎಲ್ಲಿಯೂ ನಿಲ್ಲಲಾರದೆ ಕಣ್ಮರೆಯಾಗಿಬಿಡುತ್ತದೆ. ಅಂಜಿಕೆಯೆಂಬುದು ಸಮೂಲನಾಗಿ ನಾಶವಾಗಿಬಿಡುತ್ತದೆ!

# ಭಗವನ್ನಾಮದ ಮಹಿಮೆ

ವೇದದಲ್ಲಿ ಹೇಳಿರುವ ಎಲ್ಲಾ ಸಾಧನಗಳನ್ನೂ ಎಲ್ಲರೂ ಎಲ್ಲಾ ಕಾಲದಲ್ಲಿಯೂ ಮಾಡುವದು ಸಾಧ್ಯವಲ್ಲ, ಆದರೆ ಎಲ್ಲರಿಗೂ ದಕ್ಕುವ ಅತ್ಯಂತ ಸುಲಭಸಾಧನಗಳನ್ನೂ ವೇದದಲ್ಲಿ ಸೂಚಿಸದೆಬಿಟ್ಟಿಲ್ಲ, ಇಂಥವುಗಳಲ್ಲಿ ನಾಮಕೀರ್ತನೆಯೆಂಬುದು ಒಂದಾಗಿರುತ್ತದೆ. ಉದಾಹರಣೆಗೆ ಒಂದು ವೇದಮಂತ್ರದಲ್ಲಿ ಹೀಗೆಂದು ಉಪದೇಶಿರುತ್ತದೆ.

**ತಮು ಸ್ತೋತಾರಃ - ಪೂರ್ವಂ ಯಥಾವಿದ ಋತಸ್ಯಗರ್ಭೇ**
**ಜನುಷಾ ಪಿಪರ್ತನ । ಆಸ್ಯ ಜಾನಂತೋ ನಾಮ ಚಿದ್ವಿವಕ್ತನ ಮಹಸ್ತೇ**
**ವಿಷ್ಣೋ ಸುಮತಿಂ ಭಜಾಮಹೇ ॥ - (ಋ.1.156-3)**

"ಎಲೈ ಸ್ತೋತೃಗಳಿರ, ಆ ಅನಾದಿಸಿದ್ಧವಾದ ಧರ್ಮದ ಗರ್ಭವಾಗಿರುವ ವಿಷ್ಣುವನ್ನೇ ತಿಳಿದುಕೊಂಡಿರುವ ಮಟ್ಟಿಗೆ ಹೊಗಳಿ ಸುಪ್ರೀತನನ್ನಾಗಿ ಮಾಡಿರಿ. ಚಿದ್ರೂಪವಾದ ಆತನ ನಾಮವನ್ನು ಅರಿತುಕೊಂಡು ಎಲ್ಲೆಲ್ಲಿಯೂ ಕೀರ್ತನ ಮಾಡಿರಿ. ಎಲೈ ವಿಷ್ಣುವೇ, ಮಹಾತ್ಮನಾದ ನಿನ್ನ ವಿಷಯವಾದ ಸದ್ವಿದ್ಯೆಯನ್ನು ನಾವು ಭಜಿಸುತ್ತೇವೆ".

ಈ ಮಂತ್ರದಲ್ಲಿ ಹೇಳಿರುವ ವಿಷಯವು ಭಕ್ತರ ಹೃದಯಕ್ಕೆ ಬಲು ಮೆಚ್ಚಾದದ್ದು. ಏಕೆಂದರೆ ಭಗವಂತನು ಭಕ್ತಿಪರವಶನಾದ್ದರಿಂದ ನಾವು ತಿಳಿದುಕೊಂಡಿರುವವಮಟ್ಟಿಗೆ ಆತನನ್ನು ಹೊಗಳಿದರೆ ಅಷ್ಟರಿಂದಲೇ ಆತನು ಸುಪ್ರೀತನಾಗುವನು. ಆತನ ನಾಮವು ಕೂಡ ಚಿದ್ರೂಪವಾದದ್ದಾದ್ದರಿಂದ ಅದನ್ನು ನಾವು ಕೀರ್ತನಮಾಡಿದರೆ ಆತನು ದಯೆಯಿಂದ ತನ್ನ ವಿಷಯವಾದ ಪರಮಜ್ಞಾನವನ್ನೇ ಅನುಗ್ರಹಿಸುತ್ತಾನೆ- ಎಂದು ಇಲ್ಲಿ ಹೇಳಿರುತ್ತದೆ. ವೇದೋಕ್ತವಾದ ಯಜ್ಞದಲ್ಲಿ ಸಾಮವೇದದಿಂದ ಮಾಡುವ ಗಾನವು, ಹೇಗೆ ಆತನಿಗೆ ಪ್ರೀತಿಯನ್ನುಂಟುಮಾಡುವದೋ ಆತನ ನಾಮಸ್ಮರಣೆಯೂ ಅಷ್ಟೇ ಆತನಿಗೆ ಪ್ರಿಯತಮವಾಗಿರುತ್ತದೆ. ನಮ್ಮಲ್ಲಿರುವವಮಟ್ಟಿನ ಜ್ಞಾನದಿಂದ ಆತನನ್ನು ಸ್ತುತಿಸಿದರೂ ಅಷ್ಟರಿಂದಲೇ ಆತನು ಪ್ರೀತನಾಗಿ ತನ್ನ ದಿವ್ಯ ಮಾಹಾತ್ಮ್ಯದ ಜ್ಞಾನವನ್ನು ತಾನೇ ನಮಗೆ ಕೊಡುತ್ತಾನೆ."

ಭಗವಂತನ ನಾಮ, ರೂಪ ಇವೆರಡರಲ್ಲಿ ರೂಪವು ಜ್ಞಾನಿಗಳಾದವರಿಗೆ ಮಾತ್ರ ದೊರೆಯತಕ್ಕದ್ದಾದರೂ ನಾಮವು ಸುಲಭವಾಗಿ ಎಲ್ಲರಿಗೂ ದೊರೆಯತಕ್ಕದ್ದಾಗಿರುತ್ತದೆ. ಆದರೆ ನಾಮವು ನಾಮಿಯಾದ ಚಿದ್ರೂಪಕ್ಕಿಂತ ಬೇರೆಯಿಲ್ಲವಾದ್ದರಿಂದ ನಾಮದ

ಮೂಲಕವಾಗಿ ನಾಮಿಯನ್ನು ಮುಟ್ಟುವದು ಒಂದು ಸುಲಭವಾದ ಉಪಾಯ ವಾಗಿರುತ್ತದೆ.

ಲೋಕದಲ್ಲಿ ಕೂಡ ನಾಮವು ವ್ಯವಹಾರದಲ್ಲಿ ನಾಮಿಯಾಗಿಬಿಡುತ್ತದೆ. ಸಕ್ಕರೆ ಯೆಂಬ ಮಾತನ್ನು ಕೇಳಿದ ಕೂಡಲೆ ಮಕ್ಕಳ ಮುಖವು ಹೇಗೆ ಅರಳುತ್ತದೆ! ನಾಲಗೆ ಯಲ್ಲಿ ಹೇಗೆ ನೀರುಬರುತ್ತದೆ! ಶಬ್ದವೂ ಪ್ರತ್ಯಯವೂ ಪದಾರ್ಥಕ್ಕೆ ನಿಕಟವಾಗಿ ಸಂಬಂಧವಾಗದೆ ಇದ್ದರೆ ಇದು ಸಾಧ್ಯವಾದೀತೆ? ವಸ್ತುವನ್ನು ಅದರ ಗುಣಗಳ ಮೂಲಕವೇ ನಾವು ಗುರುತಿಸುವೆವು. ಪ್ರತಿಯೊಂದು ಗುಣವೂ ಅದನ್ನು ಹೇಳುವ ಮತ್ತು ತಿಳಿಸುವ ಪ್ರತ್ಯಯಗಳ ಮೂಲಕವೇ ನಮ್ಮ ಚಿತ್ತದಲ್ಲಿ ನೆಲಸಿರುತ್ತದೆ. ಇದು ಅನುಭವ ಸಿದ್ಧವಾಗಿರುತ್ತದೆ. ಪರಮಾತ್ಮನ ವಿಷಯದಲ್ಲಿ ಇದು ಇನ್ನೂ ಸ್ಫುಟವಾಗಿ ರುತ್ತದೆ. ಏಕೆಂದರೆ ಲೋಕದಲ್ಲಿ ಕೇಳಿಬರುವ ಶಬ್ದಗಳೆಲ್ಲವೂ ಆ ಪರಮಾತ್ಮನ ಒಂದೊಂದು ವಿಭೂತಿಯನ್ನು ತಿಳಿಸುವವಾಗಿರುತ್ತವೆ. ಮಹರ್ಷಿಗಳು ಕಂಡುಹಿಡಿದಿರುವ ದಿವ್ಯನಾಮ ಗಳಂತೂ ಆತನ ಗುಣಕರ್ಮಲೀಲೆಗಳನ್ನು ಕಣ್ಣಿಗೆ ಕಟ್ಟಿದಂತೆ ಮಾಡಬಲ್ಲ ಅದ್ಭುತಶಕ್ತಿ ಯುಳ್ಳವವಾಗಿರುತ್ತವೆ. ಪದ್ಮಪುರಾಣದಲ್ಲಿರುವ ಒಂದು ಶ್ಲೋಕದಲ್ಲಿ ಹೇಳಿರುವದನ್ನು ನಾವು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳಬಹುದು:

**ನಾಮಚಿಂತಾಮಣಿಃ ಕೃಷ್ಣಶ್ಚೈತನ್ಯರಸವಿಗ್ರಹಃ ।**
**ಪೂರ್ಣಃ ಶುದ್ಧೋನಿತ್ಯಮುಕ್ತೋಽಭಿನ್ನತ್ವಾನ್ನಾಮನಾಮಿನೋಃ ॥**

"ನಾಮವೆಂಬುದು ಒಂದು ಚಿಂತಾಮಣಿಯು, ಅದೇ ಚೈತನ್ಯರಸವು, ಶರೀರ ವಾಗಿರುವ ಶ್ರೀಕೃಷ್ಣನು, ಪೂರ್ಣನೂ, ಶುದ್ಧನೂ, ನಿತ್ಯಮುಕ್ತನೂ ಆದ ಕೃಷ್ಣನ ನಾಮವು. ಏಕೆಂದರೆ "**ನಾಮಕ್ಕೂ ನಾಮಿಗೂ ಭೇದವಿರುವದಿಲ್ಲ**" ಎಂಬುದು ಶ್ಲೋಕದ ಅಭಿಪ್ರಾಯವು.

ಲೋಕದಲ್ಲಿ ವಿಷಯಗಳ ಹೆಸರುಗಳೂ ಭಗವಂತನ ನಾಮವೂ ತಮ್ಮ ತಮ್ಮ ನಾಮಿಗಿಂತ ಅಭಿನ್ನವಾಗಿರುವವೆಂಬುದು ನಿಜವಾದರೂ ಭಗವನ್ನಾಮದಲ್ಲಿ ಒಂದು ವಿಶೇಷವಿದೆ. ವಿಷಯಗಳ ಹೆಸರುಗಳು ವಿಷಯದ ಕಡೆಗೆ ಮನಸ್ಸನ್ನು ಸೆಳೆದು ನಮ್ಮಲ್ಲಿರುವ 'ಅಹಂ' ಬುದ್ಧಿಯನ್ನು ಮುಂದಕ್ಕೆ ತರುತ್ತದೆ. ಕರ್ತೃತ್ವಭೋಕ್ತೃತ್ವಬುದ್ಧಿಗೆಲ್ಲ ನಾನೆಂಬ ಅಭಿಮಾನವೇ ಮೂಲವೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಭಗವನ್ನಾಮವು ಈ ನಾನನ್ನು ಮುಳುಗಿಸಿಬಿಟ್ಟು ಸರ್ವಭೂತಪ್ರೇಮದ ಅಲೆಯನ್ನು

ನಮ್ಮ ಚಿತ್ತಸರೋವರದಲ್ಲಿ ಎಬ್ಬಿಸಿಬಿಡುತ್ತದೆ. ಹಸಿಶುಂಠಿಯೂ ಮಿಕ್ಕ ಆಹಾರ ಪದಾರ್ಥಗಳಂತೆಯೇ ಆಹಾರವಾದರೂ ಅದು ತಾನೂ ಅರಗಿ ಮಿಕ್ಕ ಆಹಾರವನ್ನೂ ಜೀರ್ಣಿಸುವಂತೆ ಭಗವನ್ನಾಮವು ವಿಷಯಗಳ ಪ್ರಪಂಚವನ್ನೆಲ್ಲ ಕರಗಿಸಿ ಸರ್ವಭೂತಗಳಲ್ಲಿಯೂ ಇರುವ ಪರಮಾತ್ಮನ ಪ್ರೇಮದ ಹಸಿವನ್ನು ಹೆಚ್ಚಿಸುತ್ತಾ ಹೋಗುತ್ತದೆ. ಆದ್ದರಿಂದಲೇ ಬಲ್ಲವರು ಭಗವನ್ನಾಮವನ್ನು ಹೀಗೆಂದು ಕೊಂಡಾಡುವರು:

**ಕಲ್ಯಾಣಾನಾಂ ನಿಧಾನಂ ಕಲಿಮಲಮಥನಂ ಪಾವನಂ ಪಾವನಾನಾಂ**
**ಪಾಥೇಯಂ ಯನ್ಮುಮುಕ್ಷೋಃ ಸಪದಿ ಪರಪದಪ್ರಾಪ್ತಯೇ ಪ್ರಸ್ಥಿತಸ್ಯ ।**
**ವಿಶ್ರಾಮಸ್ಥಾನಮೇಕಂ ಕವಿವರವಚಸಾಂ ಜೀವನಂ ಸಜ್ಜನಾನಾಂ**
**ಬೀಜಂ ಧರ್ಮದ್ರುಮಸ್ಯ ಪ್ರಭವತು ಭವತಾಂ ಭೂತಯೇ ರಾಮನಾಮ ॥**

"ಶ್ರೀರಾಮನಾಮವೆಂಬುದು ಕಲ್ಯಾಣಗಳ ನಿಧಿಯು. ಏಕೆಂದರೆ ಅದು ಕಲಿಕಲ್ಮಷಗಳೆನ್ನೆಲ್ಲ ನಾಶಮಾಡಿ ಚಿತ್ತಶುದ್ಧಿಯನ್ನುಂಟುಮಾಡಿ ಮುಮುಕ್ಷುಗಳಿಗೆ ಬೇಕಾದ ಸಾಧನಗಳ ಬುತ್ತಿಯನ್ನು ಕಟ್ಟಿಕೊಡುತ್ತದೆ. ಕವಿಶ್ರೇಷ್ಠರು ಮಾಡುವ ವರ್ಣನೆಯು ಇನ್ನು ಸಾಗದೆಂದು ವಿಶ್ರಾಂತಿಯನ್ನು ಹೊಂದುವ ಸ್ಥಾನವೆಂದರೆ ಇದೊಂದೇ. ಸತ್ಪುರುಷರಿಗೆ ಇದು ಜೀವನದ ಆಧಾರವಾಗಿರುತ್ತದೆ. ಧರ್ಮವೃಕ್ಷವು ಈ ನಾಮಬೀಜದಿಂದಲೇ ಬೆಳೆದು ಫಲವನ್ನು ಕೊಡುವದು. ಇಂಥ ರಾಮನಾಮವು ನಿಮ್ಮಗಳಿಗೆ ಒಳ್ಳೆಯದನ್ನುಂಟುಮಾಡಲಿ" ಎಂಬುದು ಶ್ಲೋಕದ ಭಾವಾರ್ಥವು. ಭಗವನ್ನಾಮದಿಂದ ಇಲ್ಲಿ ಹೇಳಿರುವ ಫಲಗಳನ್ನೆಲ್ಲ ಪಡೆದವರ ದೃಷ್ಟಾಂತವನ್ನು ನಾವು ಇತಿಹಾಸ ಪುರಾಣಗಳಿಂದ ಬೇಕಾದಷ್ಟು ಸಂಖ್ಯೆಯಲ್ಲಿ ಕಂಡುಕೊಳ್ಳಬಹುದಾಗಿರುತ್ತದೆ.

ಭಗವಂತನ ನಾಮವು ಉತ್ತಮಶ್ರೇಯಸ್ಸಾಧನವೆಂಬುದನ್ನು ಎಲ್ಲಾ ಧರ್ಮಗ್ರಂಥಗಳಲ್ಲಿಯೂ ಹೇಳಿರುತ್ತದೆ. ಪಾರ್ಸಿಗಳ ಅಹುರಮಜ್ದಯಸ್ತ್ ಎಂಬ ಸೂಕ್ತದಲ್ಲಿ ಭಗವನ್ನಾಮಗಳ ವಿವರಣೆಯನ್ನೂ ಫಲವನ್ನೂ ಕೊಟ್ಟಿರುತ್ತದೆ. ಯಹೋದ್ಯರ ಮತ್ತು ಕ್ರೈಸ್ತರ ಗ್ರಂಥಗಳಲ್ಲಿ ಭಗವನ್ನಾಮವನ್ನು ಕೊಂಡಾಡಿರುತ್ತದೆ. ಮುಸಲ್ಮಾನರು ಭಗವಂತನ ತೊಂಬತ್ತೊಂಬತ್ತು ಪವಿತ್ರನಾಮಗಳನ್ನು ಭಕ್ತಿಯಿಂದ ಪರಿಗಣಿಸುತ್ತಾರೆ. ಸನಾತನ ಧರ್ಮದಲ್ಲಂತೂ ದ್ವಾದಶನಾಮ, ಅಷ್ಟೋತ್ತರಶತನಾಮ, ಸಹಸ್ರನಾಮ - ಎಂದು ಮುಂತಾಗಿ ಭಗವಂತನ ನಾಮದ ಮಹಿಮೆಯನ್ನು ವರ್ಣಿಸಿರುವದು ಪ್ರಸಿದ್ಧವಾಗಿರುತ್ತದೆ.

ಹೀಗೆ ಭಗವನ್ನಾಮವೆಂಬುದು ವೇದೋಪದಿಷ್ಟವಾಗಿದೆ. ಪುರಾಣಗಳಲ್ಲಿ ಶ್ಲಾಘಿತ ವಾಗಿದೆ. ಧರ್ಮಪಂಥಗಳೆಲ್ಲದರಿಂದಲೂ ಅಂಗೀಕೃತವಾದ ಸಾಧನವಾಗಿದೆ. ಯುಕ್ತ್ಯನು ಭವಗಳಿಂದ ನೋಡಿದರೆ ಸುಲಭವೂ ಸಫಲವೂ ಆದ ಸಾರ್ವತ್ರಿಕ ಸಾಧನವೆಂದೂ ಕಂಡುಬರುತ್ತದೆ. ಇಂಥ ಉತ್ತಮ ಸಾಧನಗಳನ್ನು ಭೂಮಂಡಲದ ಈಗಿನ ಕ್ಷುಬ್ಧಸ್ಥಿತಿ ಯಲ್ಲಿ ನಾವುಗಳು ಕೈಕೊಂಡು ನಮ್ಮ ಮತ್ತು ಲೋಕದ ಕಲ್ಯಾಣವನ್ನು ಸಂಪಾದಿಸು ವದು ಕರ್ತವ್ಯವಲ್ಲವೆ?

**"ಹರಿಯ ನಾಮಕ್ಕೆ ಪಾಪವನ್ನು ಸಂಹರಿಸುವದಕ್ಕೆ ಎಷ್ಟು ಶಕ್ತಿಯಿರುವದೋ ಅಷ್ಟು ಪಾಪವನ್ನು ಮಾಡುವದಕ್ಕೆ ಶ್ವಪಚನಿಂದಲೂ ಆಗದು." - ಅನುಸ್ಮೃತಿ**

# ಜ್ಞಾನಬಂಧು

ವಸಿಷ್ಠರು ಶ್ರೀರಾಮನಿಗೆ ಮಾಡಿರುವ ಉಪದೇಶದಲ್ಲಿ ಜ್ಞಾನಿ, ಜ್ಞಾನಬಂಧು - ಇವರ ವಿವೇಕವನ್ನು ಸುಂದರವಾಗಿ ಮಾಡಿಕೊಟ್ಟಿರುತ್ತಾರೆ. ಅವರು ಹೇಳಿರುವದೇ ನೆಂದರೆ; "ಅಯ್ಯ, ರಾಮ ಯಾವಾಗಲೂ ಜ್ಞಾನಿಯಾಗಿರಬೇಕು; ಎಂದಿಗೂ ಜ್ಞಾನ ಬಂಧುವಾಗಬಾರದು. ಜ್ಞಾನಬಂಧುವಾಗಿರುವದಕ್ಕಿಂತ ಅಜ್ಞಾನಿಯಾಗಿರುವದೇ ಮೇಲು"

ಜ್ಞಾನಬಂಧುವೆಂದರೆ ಹೇಗಿರುವನು? ಜ್ಞಾನಿಯು ಹೇಗಿರುವನು? ಜ್ಞಾನ ಬಂಧುವಾಗಿದ್ದರೆ ಯಾವ ಫಲವಾಗುವದು? ಜ್ಞಾನಿಗೆ ಯಾವ ಫಲವಾಗುವದು?- ಎಂಬ ಪ್ರಶ್ನೆಗೆ ವಸಿಷ್ಠರು ಕೊಟ್ಟಿರುವ ಉತ್ತರವಿದು:

"ಯಾವನು ಶಾಸ್ತ್ರವನ್ನು ಓದುವದೂ ವ್ಯಾಖ್ಯಾನಮಾಡುವದೂ ತನ್ನ ಭೋಗ ಕ್ಕೆಂದು ತಿಳಿದಿರುವನೋ, ಯಾವನು ಸಾಧನಚತುಷ್ಟಯವನ್ನಾಗಲಿ ಷಮಸಾದಿಗಳನ್ನಾಗಲಿ ಅನುಷ್ಠಾನಮಾಡುವದಕ್ಕೆ ಪ್ರಯತ್ನಿಸುವದಿಲ್ಲವೋ ಅವನೇ ಜ್ಞಾನಬಂಧು. ಯಾವನು ಜ್ಞಾನವನ್ನು ಅನುಷ್ಠಾನರೂಪವಾಗಿ ಪರಿಣಮಿಸುವದಿಲ್ಲವೋ ಅವನು ಶಿಲ್ಪವಿದ್ಯಾಜೀವಿ ಗಳಂತೆ ತನ್ನ ಹೊಟ್ಟೆಯನ್ನು ಹೊರೆದುಕೊಳ್ಳುವದಕ್ಕಾಗಿ ತಿಳಿವಳಿಕೆಯನ್ನು ಉಪಯೋಗಿಸಿ ಕೊಳ್ಳುತ್ತಿರುವ ಜ್ಞಾನಬಂಧು. ಶಾಸ್ತ್ರಕ್ಕೆ ಫಲವು ಅನ್ನ, ಬಟ್ಟೆ ಎಂದು ಯಾರು ತಿಳಿದು ಕೊಂಡಿರುವರೋ ಅಂಥ ಶಾಸ್ತ್ರಾರ್ಥಶಿಲ್ಪಿಗಳನ್ನು ಜ್ಞಾನಬಂಧುಗಳೆಂದು ತಿಳಿಯಬೇಕು.

ಆತ್ಮಜ್ಞಾನವೇ ಜ್ಞಾನವು, ಮಿಕ್ಕವು ಜ್ಞಾನಾಭಾಸಗಳು. ಇವುಗಳಲ್ಲಿ ಸಾರವಾದದ್ದು ಯಾವದೆಂದು ತಿಳಿಯದೆ ಆತ್ಮಜ್ಞಾನವನ್ನು ಬಿಟ್ಟು ಮಿಕ್ಕ ಜ್ಞಾನಗಳಿಂದಲೇ ಯಾರು ತೃಪ್ತರಾಗಿರುವರೋ ಅಂಥವರನ್ನು ಜ್ಞಾನಬಂಧುಗಳೆಂದು ತಿಳಿಯಬೇಕು.

''ಜ್ಞಾನಾದಿಗಳ ಮತ್ತು ಜ್ಞೇಯದ ಅರಿವಿನಿಂದಾದ ಶಾಂತಿಯು ದೊರಕದೆ ಮನುಷ್ಯನು ಎಂದಿಗೂ ತುಷ್ಟನಾಗಬಾರದು. ಆದ್ದರಿಂದ ಎಲೆ ರಾಮನೇ ನೀನು ಜ್ಞಾನಬಂಧುವಾಗಿದ್ದುಕೊಂಡು ಭೋಗರೂಪವಾದ ಸಂಸಾರರೋಗಗಳಲ್ಲಿ ರತನಾಗಬೇಡ. ಕರ್ಮವನ್ನು ಆಹಾರಕ್ಕಾಗಿ ಮಾಡಬೇಕು; ಆಹಾರವು ಪ್ರಾಣಧಾರಣಕ್ಕೆ ಬೇಕು; ಜಿಜ್ಞಾಸೆಗಾಗಿ ಪ್ರಾಣಾಧಾರಣೆ ಬೇಕು. ಮತ್ತೆ ಎಂದೆಂದಿಗೂ ದುಃಖವನ್ನು ಪಡೆಯದೆ ಇರುವದಕ್ಕಾಗಿ ಜಿಜ್ಞಾಸಮಾಡಬೇಕು.''

# ಯಾರನ್ನು ನಮಸ್ಕರಿಸಬೇಕು?

ಒಂದಾನೊಂದು ಕಾಲದಲ್ಲಿ ಶ್ರೀಕೃಷ್ಣನು ಕೆಲವು ಬ್ರಾಹ್ಮಣರನ್ನು ಪೂಜಿಸುತ್ತಿದ್ದ ನಾರದ ಋಷಿಯನ್ನು ಕಂಡನು. ಆಗ ಆತನು ''ಪೂಜ್ಯರೇ, ತಾವು ಯಾರನ್ನು ಗೌರವದಿಂದ ನಮಸ್ಕರಿಸುತ್ತಿದ್ದೀರಿ? ನಾನು ಇದನ್ನು ತಿಳಿಯಬಹುದಾದರೆ ದಯವಿಟ್ಟು ಹೇಳಬೇಕು'' ಎಂದು ಕೇಳಿದನು.

ಆಗ ನಾರದ ನಿಂತೆಂದನು: ಎಲೈ ಗೋವಿಂದನೆ, ನಾನು ಯಾರನ್ನು ನಮಸ್ಕರಿಸುವೆನೆಂಬುದನ್ನು ಹೇಳುವೆನು ಕೇಳು. ವರುಣ, ವಾಯು, ಆದಿತ್ಯ, ಪರ್ಜನ್ಯ, ಅಗ್ನಿ, ಶಿವ, ಸ್ಕಂಧ, ಲಕ್ಷ್ಮೀ, ವಿಷ್ಣು, ಬ್ರಹ್ಮ, ಬೃಹಸ್ಪತಿ, ಚಂದ್ರ, ದಿಗ್ದೇವತೆಗಳು ಭೂದೇವಿ, ಸರಸ್ವತಿ – ಇವರನ್ನು ಯಾರು ನಿತ್ಯವೂ ನಮಸ್ಕರಿಸುವರೋ ಅಂಥವರನ್ನು ನಾನು ನಮಸ್ಕರಿಸುತ್ತೇನೆ. ತಪೋಧನರಾಗಿ ವೇದಗಳನ್ನು ಅಧ್ಯಯನಮಾಡಿ ಪ್ರತಿದಿನವೂ ವೇದಪಾಠಗಳನ್ನು ಮಾಡಿರುವ ಮಹಾಪೂಜ್ಯರನ್ನು ನಾನು ಯಾವಾಗಲೂ ಪೂಜಿಸುತ್ತೇನೆ. ಯಾರುಭೋಜನವನ್ನು ಮಾಡುವ ಮುಂಚೆ ದೇವಕಾರ್ಯಗಳನ್ನು ಮಾಡುವರೋ ಯಾರು ತಮ್ಮನ್ನು ತಾವು ಹೊಗಳಿಕೊಳ್ಳುವುದಿಲ್ಲವೋ, ಯಾರು ನಿತ್ಯ ತೃಪ್ತರಾಗಿರುವರೋ, ಕ್ಷಮಾಗುಣಶಾಲಿಗಳಾಗಿರುವರೋ ಅವರನ್ನು ನಾನು ವಂದಿಸುತ್ತೇನೆ. ಯಾರು ಶಾಂತರಾಗಿ ದಾಂತರಾಗಿ ಇಂದ್ರಿಯಗಳನ್ನು ಹಿಡಿದುಕೊಂಡು ವಿಧಿವತ್ತಾಗಿ

ಇಷ್ಟಿಗಳನ್ನು ಮಾಡುತ್ತಿರುವವರೋ ಸತ್ಯವನ್ನೂ ಧರ್ಮವನ್ನೂ ಪಾಲಿಸುವವರೋ, ಭೂಮಿಯನ್ನೂ ಗೋವುಗಳನ್ನೂ ದಾನಮಾಡುವವರೋ ಅಂಥವರನ್ನು ನಮಸ್ಕರಿಸುತ್ತೇನೆ. ಎಲೈ ಯಾದವನೆ, ಯಾರು ತಮ್ಮ ಪೋಷಕವರ್ಗದವರನ್ನು ಸರಿಯಾಗಿ ರಕ್ಷಿಸುವವರೋ, ಅತಿಥಿಗಳನ್ನು ನಿಯಮದಿಂದ ಆದರಿಸುವವರೋ ದೇವತೆಗಳಿಗೆ ನೈವೇದ್ಯಮಾಡಿ ಮಿಕ್ಕದ್ದನ್ನು ಭೋಜನಮಾಡುವವರೋ ಅಂಥವರಿಗೆ ನಾನು ಶರಣಾಗುವೆನು. ಯಾರು ವೇದಗಳನ್ನು ಅಳವಡಿಸಿಕೊಂಡು ಯಾರಿಗೂ ಅಂಜದೆ ವಾಗ್ಮಿಗಳಾಗಿ ಬ್ರಹ್ಮಚಾರಿಗಳಾಗಿ ಯಜ್ಞಾದಿಗಳನ್ನು ಮಾಡಿಸುವದು, ಅಧ್ಯಯನಮಾಡಿಸುವುದು ಇವುಗಳಲ್ಲಿ ನಿರತರಾಗಿರುವರೋ ಅವರನ್ನು ನಾನು ಯಾವಾಗಲೂ ಗೌರವಿಸುವೆನು. ಯಾರು ಎಲ್ಲಾ ಪ್ರಾಣಿಗಳಲ್ಲಿಯೂ ಪ್ರಸನ್ನ ಹೃದಯರಾಗಿರುವರೋ ಯಾರು ಮಧ್ಯಾಹ್ನದವರೆಗೂ ಸ್ವಾಧ್ಯಾಯಪರರಾಗಿರುವರೋ ಅಂಥವರನ್ನು ನಾನು ಪೂಜಿಸುವೆನು. ಯಾರು ಗುರುವಿನ ಅನುಗ್ರಹಕ್ಕಾಗಿಯೂ ವೇದಶಾಸ್ತ್ರಗಳ ಪ್ರಾಪ್ತಿಗಾಗಿಯೂ ಸ್ಥಿರಪ್ರಯತ್ನವನ್ನು ಮಾಡುತ್ತಿರುವರೋ, ಗುರುಗಳನ್ನು ಅಸೂಯೆಯಿಲ್ಲದೆ ಶ್ರದ್ಧೆಯಿಂದ ಶುಶ್ರೂಷೆ ಮಾಡುತ್ತಿರುವವರೋ ಅಂಥವರನ್ನು ನಾನು ನಮಸ್ಕರಿಸುತ್ತೇನೆ. ಯಾರು ಉತ್ತಮವಾದ ನಿಯಮಗಳನ್ನು ಪಾಲಿಸುತ್ತಿರುವವರೋ, ಯಾರು ಮುನಿಗಳಾಗಿರುವರೋ ಯಾರು ನಿನ್ನ ಪ್ರತಿಜ್ಞರಾದ ಬ್ರಾಹ್ಮಣರಾಗಿರುವರೋ ಯಾರು ಹವ್ಯಕವ್ಯಗಳನ್ನು ಸರಿಯಾಗಿ ಮಾಡುತ್ತಿರುವರೋ ಅವರನ್ನು ನಾನು ನಮಸ್ಕರಿಸುತ್ತೇನೆ. ಯಾರು ಬ್ರಹ್ಮಚರ್ಯೆಯಿಂದ ಶರೀರವನ್ನು ಕೃಶಗೊಳಿಸುತ್ತಾ ಗುರುಕುಲದಲ್ಲಿಯೇ ಇದ್ದುಕೊಂಡು ಸುಖವನ್ನಾಗಲಿ ಧನವನ್ನಾಗಲಿ ಲೆಕ್ಕಿಸದೆ ಇರುವರೋ ಅವರನ್ನು ನಾನು ನಮಸ್ಕರಿಸುತ್ತೇನೆ. ಎಲೈ ಕೇಶವನೆ, ಯಾರು ಮಮತ್ವವಿಲ್ಲದೆ ಯಾವ ಪ್ರತಿದ್ವಂದ್ವಗಳನ್ನೂ ಕಾಣದೆ, ಯಾವ ಲಜ್ಜೆಯ ಕೆಲಸವನ್ನೂ ಮಾಡದೆ ಯಾವದೊಂದು ಪ್ರಯೋಜನವನ್ನೂ ಬಯಸದೆ, ವೇದವನ್ನು ಅಧ್ಯಯನ ಮಾಡಿ ವಾಗ್ಮಿಗಳೂ ಬ್ರಹ್ಮಚಾರಿಗಳೂ ಆಗಿರುವರೋ, ಯಾರು ಅಹಿಂಸಾನಿರತರಾಗಿ ಸತ್ಯವ್ರತವನ್ನು ಪಾಲಿಸುತ್ತಾ ಶಾಂತರೂ ದಾಂತರೂ ಆಗಿರುವರೋ ಅವರನ್ನು ನಾನು ನಮಸ್ಕರಿಸುತ್ತೇನೆ. ಯಾವ ಬ್ರಾಹ್ಮಣರು ಶಾಸ್ತ್ರಸಂಪನ್ನರಾಗಿ ವಿಷಯ ಲೋಲುಪರಾಗದೆ ಪುಣ್ಯಶೀಲರಾಗಿರುವರೋ ಅವರನ್ನು ನಾನು ನಮಸ್ಕರಿಸುತ್ತೇನೆ. ಯಾರು ಬರಿಯ ನೀರನ್ನು ಕುಡಿದು ಅಥವಾ ಬರಿಯ ವಾಯುವನ್ನು ಕುಡಿದು, ಇಲ್ಲವೆ ಬರಿಯ ಹಾಲನ್ನು ಕುಡಿದು – ವಿವಿಧವಾದ ವ್ರತಗಳನ್ನು ಮಾಡುತ್ತಿರುವರೋ ಅಂಥವರನ್ನು ನಾನು ನಮಸ್ಕರಿಸುತ್ತೇನೆ.

ಎಲೆ ಕೃಷ್ಣನೆ, ಯಾರು ಈ ಸಲಹೆಯನ್ನು ಲೋಕಕ್ಕೆ ಹಿರಿನಾಗಿ ಕುಲಶ್ರೇಷ್ಠರಾಗಿ ಅಜ್ಞಾನವನ್ನು ಕಳೆಯುವ ಲೋಕಸೂರ್ಯರಾಗಿರುವರೋ ಅಂಥವರನ್ನು ನಾನು ನಿತ್ಯವೂ ನಮಸ್ಕರಿಸುತ್ತೇನೆ. ಅಂಥವರ ನಮಸ್ಕಾರದಿಂದ ಇಹಲೋಕದಲ್ಲಿಯೂ ಪರಲೋಕ ದಲ್ಲಿಯೂ ಸುಖವುಂಟಾಗುವದು. ಯಾರು ಗೋವುಗಳಲ್ಲಿಯೂ ಬ್ರಾಹ್ಮಣರಲ್ಲಿಯೂ ನಿತ್ಯವೂ ಸತ್ಕಾರಯುತರಾಗಿರುವರೋ ಯಾರು ನಿತ್ಯವೂ ಸತ್ಕಾರರತರಾಗಿರುವರೋ ಅವರು ಎಲ್ಲಾ ಬಗೆಯ ದುರ್ಗಗಳನ್ನೂ ದಾಟುವರು. ಯಾರು ಇಂಥವರನ್ನು ನಿತ್ಯವೂ ನಮಸ್ಕರಿಸುತ್ತಾ ದಾನಶೀಲರಾಗಿರುವರೋ ಅಂಥವರು ಎಲ್ಲಾ ಬಗೆಯ ದುರ್ಗಗಳನ್ನೂ ದಾಟುವರು. ಯಾರು ತಪಸ್ವಿಗಳಾಗಿ, ನಿತ್ಯವೂ ಬ್ರಹ್ಮಚಾರಿಗಳಾಗಿ, ದೇವತೆಗಳನ್ನೂ, ಅತಿಥಿಗಳನ್ನೂ ಪಿತೃಗಳನ್ನೂ ಅರ್ಚಿಸುತ್ತಾ ಅವರಿಗೆ ಅರ್ಪಿಸಿ ಮಿಕ್ಕ ಅನ್ನವನ್ನು ಭೋಜನ ಮಾಡುತ್ತಿರುವರೋ ಅಂಥವರು ಎಲ್ಲಾ ದುರ್ಗಗಳನ್ನೂ ದಾಟುವರು.

# ವೇದ - ಋಷಿ

ಭೂಮಂಡಲದ ಧರ್ಮಗ್ರಂಥಗಳಿಗೆ ಬೇರೆ ಬೇರೆಯ ಹೆಸರುಗಳು ಬಂದಿವೆ. ಆ ಹೆಸರುಗಳ ಅಭಿಪ್ರಾಯವೇನೆಂಬುದನ್ನು ವಿಚಾರಮಾಡುವದರಿಂದ ಪ್ರಯೋಜನ ವುಂಟು. "**ಬೈಬಲ್**" ಎಂದರೆ ಪುಸ್ತಕವೆಂದರ್ಥ. ಬೈಬಲಿನಲ್ಲಿ "ಟೆಸ್ಟ್‌ಮೆಂಟ್" ಎಂಬ ಭಾಗಗಳಿರುತ್ತವೆ. ಟೆಸ್ಟಮೆಂಟ್ ಎಂದರೆ ಒಪ್ಪಂದ ಎಂದು ಅರ್ಥ. ಮನುಷ್ಯರಿಗೂ ದೇವರಿಗೂ ಆದ ಒಪ್ಪಂದವು, ಕೌಲು, ಕರಾರು - ಹೀಗೆ ನೀವು ನಡೆದರೆ ನಾನು ನಿಮ್ಮನ್ನು ಕಾಪಾಡುವೆನು ಎಂಬ ಷರತ್ತಿನ ಒಡಂಬಡಿಕೆಯು ಟೆಸ್ಟಮೆಂಟ್ ಎನಿಸುತ್ತದೆ. ಯಹೋದ್ಯರ ಮನೋಭಾವನೆಯಲ್ಲಿ ನಮಗೂ ದೇವರಿಗೂ ಆಗಿರುವ ಒಪ್ಪಂದವನ್ನು ಧರ್ಮಗ್ರಂಥವನ್ನು ತಿಳಿಸಬೇಕೆಂದಾಯಿತು. **ಕುರಾನ್** ಎಂಬುದು ಕುರಾ-ಓದು, ಒಪ್ಪಿಸು - ಎಂಬ ಧಾತುವಿನಿಂದ ಬಂದಿದೆಯಂತೆ. ಹಾಗಾದರೆ ಕುರಾನ್ ಎಂದರೆ ಪಠ್ಯಗ್ರಂಥವೆಂದು ಅರ್ಥವಾಗುತ್ತದೆ. "**ಅವೆಸ್ಟಾ**" ಎಂದರೆ ನಿಯಮವು; "ಝೆಂಡ್ ಅವೆಸ್ಟಾ" ಎಂಬ ಮಾತಿಗೆ ಧರ್ಮನಿಯಮವನ್ನು ವಿವರಿಸುವದು ಎಂದರ್ಥ.

ಆದರೆ "ವೇದ" ಎಂದರೇನು? ವೇದ ಎಂಬ ಶಬ್ದದ ವಿದ್ ಅರಿ ಎಂಬ ಧಾತುವಿನಿಂದ ಬಂದಿರುತ್ತದೆ. ವೇದವೆಂದರೆ ತಿಳಿವಳಿಕೆ, ಅರಿವು. ಯಾವದರಿಂದ

ನಿಜವಾಗಿ ಅರಿಯಬೇಕಾದದ್ದನ್ನು ಅರಿತುಕೊಳ್ಳಬಹುದೋ ಆ ಜ್ಞಾನವೇ ವೇದವು. ವೇದವನ್ನು ಬಲ್ಲವರಿಗೆ ಋಷಿಗಳೆಂದು ಹೆಸರು. **ಋಷಿ** ಎಂಬ ಮಾತಿಗೆ ಕಂಡುಕೊಂಡ ವನು ಎಂದು ಅರ್ಥ. ತಪಸ್ಸಿನಿಂದ ತತ್ತ್ವಜ್ಞಾನವನ್ನು ಕಂಡುಕೊಂಡವರು ಋಷಿಗಳು. ವೇದಕ್ಕೆ **ಶ್ರುತಿ** ಎಂದು ಮತ್ತೊಂದು ಹೆಸರೂ ಇದೆ. ಶ್ರುತಿ ಎಂದರೆ ಕೇಳಿದ್ದು; ಇಹ ಲೋಕದ ವ್ಯಾಪಾರವನ್ನು ಸಂಪೂರ್ಣವಾಗಿ ಮರೆತು ತತ್ತ್ವಚಿಂತೆಯನ್ನೇ ಮಾಡುತ್ತಿದ್ದ ಋಷಿಗಳಿಗೆ ವೇದದ ಮಂತ್ರಗಳು ಕೇಳಬಂದವು; ಅವನ್ನೇ ಅವರು ಹಾಡಿ ಮಿಕ್ಕವರಿಗೂ ತಿಳಿಸಿಕೊಟ್ಟರು. **ಮಂತ್ರ**ವೆಂದರೆ ಮನನ ಮಾಡುವದಕ್ಕೆ ಮನಸ್ಸಿನಲ್ಲಿ ಮೆಲುಕುಹಾಕು ವದಕ್ಕೆ ಯೋಗ್ಯವಾದ ವಿಚಾರವಿರುವ ವಾಕ್ಯವು. ಋಷಿಗಳು ತಾವು ಕೇಳಿದ, ತಾವು ಮನಗಂಡ, ಜ್ಞಾನದ ವಾಕ್ಯಗಳನ್ನೇ ವೇದದಲ್ಲಿಟ್ಟಿರುವರು. ಅವರು ಮಂತ್ರದ್ರಷ್ಟೃಗಳು, ಸ್ರಷ್ಟೃಗಳಲ್ಲ! ವೇದವು ನಿತ್ಯವಾದ ಜ್ಞಾನದ ರಾಶಿಯು. ಅದರ ತುಂಡುಗಳನ್ನು ತಿಳಿಸುವವು ಮಂತ್ರಗಳು.

ಖಖಖಖಖ

# ಅಹಂಮತಿ

**ಅಹಂಮತಿ** ಎಂದರೆ ನಾನು ಎಂಬ ಬುದ್ಧಿ, ನಾನೆಂಬ ಅಭಿಮಾನ, ಲೋಕದ ವ್ಯವಹಾರವೆಲ್ಲ ನಾನು ಎಂಬುದನ್ನು ಆಶ್ರಯಿಸಿಯೇ ನಡೆಯುತ್ತಿರುವದು. ವೈದಿಕ ಕರ್ಮಗಳೂ ಶಾಸ್ತ್ರವಿಚಾರಗಳೂ **ಅಹಂ** ಎಂಬ ತಿಳಿವಳಿಕೆಯನ್ನೇ ಅವಲಂಬಿಸಿ ಉಂಟಾ ಗುವವು. ಆದರೂ ಕೋಶದಲ್ಲಿ ಅಹಂಮತಿ ಎಂದರೆ ಅವಿದ್ಯೆ ಎಂದು ಹೇಳಿರುತ್ತದೆ.

ವ್ಯವಹಾರದಲ್ಲಿ ನಾವು ಕೆಲಸಮಾಡುವಾಗಲೆಲ್ಲ ನಾನು ಎಂಬ ಅಭಿಮಾನವು ನಮಗೆ ಇರುವದಿಲ್ಲ. ಸ್ವಲ್ಪ ಲಕ್ಷ್ಯವಿಟ್ಟು ನೋಡಿದರೆ 'ನಾನು' ಎಂಬ ಅರಿವು ನಾವು ಬೇಕೆಂತ ಆವಾಹನೆಮಾಡಿಕೊಂಡಾಗ ಮಾತ್ರ ಬರುತ್ತದೆ, ಆಗ ಮಾತ್ರ ಅದು ನಮ್ಮ ಮೇಲೆ ತನ್ನ ಅಧಿಕಾರವನ್ನು ತೋರಿಸಿಕೊಳ್ಳುತ್ತದೆ; ತನ್ನಿಂದಾಗುವ ಅನರ್ಥಗಳನ್ನೆಲ್ಲ ತಂದು ಒಡ್ಡುತ್ತದೆ. ವಿದ್ಯಾವಂತನು, ಬರಹಗಾರನು, ಸಂಗೀತಗಾರನು, ಕಲಾಕುಶಲನು, ಯಾವಾಗ ನಾನು ವಿದ್ವಾಂಸನು, ನಾನು ಕವಿಯು, ನಾನು ಪ್ರಸಿದ್ಧ ಸಂಗೀತಗಾರನು, ನಾನು ಚಿತ್ರಕಲಾಕೋವಿದನು - ಎಂದು ಅಭಿಮಾನವನ್ನು ಮೈಮೇಲೆ ಹಾಕಿಕೊಳ್ಳು ವನೋ ಆಗಿನಿಂದ ಆವನ ವಿದ್ಯೆ ಅವಿದ್ಯೆಯಾಗುವದು. ಅವನ ಬರಹವು ಶಬ್ದಾಡಂಬರ

ವಾಗುವದು, ಅವನ ಸಂಗೀತವು ಏಕಸ್ವರವಾಗುವದು, ಅವನ ಚಿತ್ರವು ಪೊರಕೆಯ ಬರೆಯಾಗುವದು!

ಅಹಂಮತಿಯು ಗದ್ದುಗೆಯನ್ನೇರುತ್ತಲೂ ಕಾಮ, ಕ್ರೋಧ, ಲೋಭ, ಮದ, ಮಾತ್ಸರ್ಯ ಮುಂತಾದ ಪರಿವಾರದವರು ಪ್ರಬಲರಾಗುವರು. ಇಹಜೀವನದಲ್ಲಿ ಅಡ್ಡಿಗಳು ಲೆಕ್ಕವಿಲ್ಲದಷ್ಟು ಆಗುವವು. ಅಹಂಮತಿಯನ್ನು ಬೆಳಸಿಕೊಂಡವನು ಸುಮ್ಮನಿರುವಾಗ, ನರಳುತ್ತಿರುವಾಗ, ನಿದ್ರೆಗೈಯುತ್ತಿರುವಾಗ, ಅದು ಇಲ್ಲವೆಂದು ತೋರಬಹುದು; ಆದರೆ ಆಗ ಅದು ಏಕಾದಶಿಯ ಉಪವಾಸದಲ್ಲಿದ್ದರೂ ದ್ವಾದಶಿಯ ಪಾರಣೆಯನ್ನೇ ನಿರೀಕ್ಷಿಸಿಕೊಂಡಿರುತ್ತದೆ.

ಅಹಂಮತಿಯಿಂದ ಮಾಡಿದ ಕರ್ಮಗಳು, ಉಪಾಸನೆಗಳು, ವಿಚಾರಗಳು ಯಾವವೂ ಉತ್ತಮ ಫಲವನ್ನು ಕೊಡುವದಿಲ್ಲ, ನಾನು ಕರ್ಮಠನು ಎಂದುಕೊಂಡವನು ಕರ್ಮಿಯಲ್ಲ; ನಾನು ಭಕ್ತ ಭಾಗವತಶ್ರೇಷ್ಠನು ಎಂಬುವನು ಉಪಾಸಕನಲ್ಲ; ನಾನು ಜ್ಞಾನನಿಷ್ಠನು ಎಂದುಕೊಳ್ಳುತ್ತಿರುವವನು ಜ್ಞಾನಿಯಲ್ಲ.

ಅಹಂಮತಿಯಿರುವವರಿಗೆ ಸ್ವಾಸ್ಥ್ಯವಿರುವದಿಲ್ಲ. ಸ್ವಾಸ್ಥ್ಯವೆಂದರೆ ತನ್ನ ಸ್ವರೂಪವಾದ ಪರಮಾತ್ಮನಲ್ಲಿಟ್ಟುಕೊಂಡು ಆನಂದದಿಂದಿರುವದು. ಅಹಂಕಾರವನ್ನು ಓಡಿಸಿರಿ, ಸ್ವಾಸ್ಥ್ಯವು ಸಂಪೂರ್ಣವಾಗಿ ನಿಮ್ಮದಾಗುವದು.

# ಬಾಲಕರಿಗೆ ವಿದ್ಯಾಭ್ಯಾಸ

ಭರತಖಂಡದಲ್ಲಿ ಪ್ರಾಚೀನಕಾಲದಲ್ಲಿದ್ದ ಗುರುಕುಲಾವಾಸಪದ್ಧತಿಯು ನಿಂತು ಹೋಗಿ ಈಗ ಬಲುಮಟ್ಟಿಗೆ ಸರಕಾರದ ಸ್ಕೂಲುಗಳೂ ಕಾಲೇಜುಗಳೂ ವಿದ್ಯಾಸ್ಥಾನಗಳಾಗಿರುತ್ತವೆ. ನಮ್ಮ ದೇಶದಲ್ಲಿ ನಾನಾಮತಗಳನ್ನು ಅನುಸರಿಸುವವರೂ ಬೇರೆ ಬೇರೆಯ ಸಂಸ್ಕೃತಿಯ ಸಂಪ್ರದಾಯದವರೂ ಇರುವದರಿಂದ ವಿದ್ಯಾಲಯಗಳಲ್ಲಿ ಎಂಥ ವಿದ್ಯಾಭ್ಯಾಸಕ್ರಮವನ್ನು ಅನುಸರಿಸಬೇಕೆಂಬುದು ಒಂದು ಜಟಿಲವಾದ ಪ್ರಶ್ನೆಯಾಗಿರುತ್ತದೆ. ಸರಕಾರದವರು ಈವರೆಗೆ ಪರದೇಶದವರೂ ನಮ್ಮ ದೇಶದ ಏಳಿಗೆಯಲ್ಲಿ ಪೂರ್ಣಸಹಾನುಭೂತಿಯಿಲ್ಲದವರೂ ಆಗಿದ್ದದ್ದರಿಂದ ವಿದ್ಯಾಭ್ಯಾಸವು ಮತ್ತಷ್ಟು ತೊಡಕಿನ ಪ್ರಶ್ನೆಯಾಗಿತ್ತು. ದೈವಯೋಗದಿಂದ ನಮ್ಮಗಳಿಗೆ ಈಗ ದಾಸ್ಯದಿಂದ ವಿಮೋಚನೆ

ಯಾಗಿರುತ್ತದೆ. ಆದ್ದರಿಂದ ಈಗ ಬಾಲಕರ ವಿದ್ಯಾಭ್ಯಾಸವನ್ನು ಹೇಗೆ ನಡೆಯಿಸುವದು ಒಳ್ಳೆಯದೆಂಬುದನ್ನು ವಿವೇಚನೆಮಾಡುವದಕ್ಕೆ ಕಾಲವು ಒದಗಿರುತ್ತದೆ. ಭರತಖಂಡದ ಬಾಲಕರಿಗೆಲ್ಲ ರಾಷ್ಟ್ರೀಯಭಾವನೆಯಿಂದ ಎಂಥ ವಿದ್ಯೆಯನ್ನು ಕೊಡಬೇಕೆಂಬುದನ್ನು ದಕ್ಷರಾದ ನಿಪುಣರು ಪರಿಶೀಲಿಸುತ್ತಿದ್ದಾರೆ. ಆದರೆ ಆರ್ಯರಾದ ಸನಾತನ ಧರ್ಮಿಗಳಿಗೆ ವಿದ್ಯಾಭ್ಯಾಸವನ್ನು ಹೇಗೆ ಮಾಡಿಸಬೇಕು? ಎಂಬ ಅಂಶವನ್ನು ಮಾತ್ರ ಕುರಿತು ಇಲ್ಲಿ ನಾಲ್ಕು ಮಾತುಗಳನ್ನು ಹೇಳಬೇಕೆಂದಿರುವೆನು.

ಅಭ್ಯುದಯ, ಎಂದರೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖ ಜೀವನವನ್ನು ಮಾಡಿಕೊಂಡಿರುವದು, ಮತ್ತು ನಿಃಶ್ರೇಯಸ ಪರಮಪುರುಷಾರ್ಥವಾದ ಮೋಕ್ಷವನ್ನು ಪಡೆದು ನಿತ್ಯಾನಂದವನ್ನು ಪಡೆದುಕೊಳ್ಳುವದು ಇವೇ ವಿದ್ಯಾಭ್ಯಾಸದ ಗುರಿಯಾಗಿರಬೇಕೆಂದು ನಮ್ಮ ಹಿಂದಿನವರು ನಂಬಿದ್ದರು. ಆ ನಂಬಿಕೆಯಿರುವವರೆಗೇ ಆರ್ಯಸಂಸ್ಕೃತಿಯು ಬದುಕಿರುತ್ತದೆ. ಆದ್ದರಿಂದ ಆರ್ಯಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕಾದರೆ ಈ ಎರಡು ಬಗೆಯ ಪುರುಷಾರ್ಥಗಳನ್ನು ಗುರಿಯಾಗಿಟ್ಟುಕೊಂಡಿರುವ ವಿದ್ಯಾಭ್ಯಾಸವು ಅತ್ಯವಶ್ಯವಾಗಿರುತ್ತದೆ. ಪುರುಷಾರ್ಥಕ್ಕೆ ಧರ್ಮವೇ ಸಾಧನವೆಂದು ನಂಬಿರುವ ಸನಾತನಿಗಳಿಗೆ ಧರ್ಮಶೂನ್ಯವಾದ ಅಥವಾ ಧರ್ಮವಿರುದ್ಧವಾದ ವಿದ್ಯಾಭ್ಯಾಸವು ಎಂದಿಗೂ ವಿದ್ಯಾಭ್ಯಾಸವೆಂಬ ಹೆಸರಿಗೆ ತಕ್ಕದ್ದೆನಿಸಲಾರದು. ಆದ್ದರಿಂದ ಲೌಕಿಕವಿದ್ಯಾಭ್ಯಾಸದ ಜೊತೆಗೆ ಧಾರ್ಮಿಕಶಿಕ್ಷಣವನ್ನು ಜೋಡಿಸುವದು ಬಹಳ ಅವಶ್ಯವಾಗಿರುತ್ತದೆ.

ಧರ್ಮರಹಿತ ವಿದ್ಯಾಭ್ಯಾಸದಿಂದ ನಮ್ಮ ದೇಶದ ಬಾಲಕರಿಗೆ ಎಷ್ಟು ಹಾನಿಯಾಗಿರುತ್ತದೆ ಎಂಬುದನ್ನು ವರ್ಣಿಸುವದು ಆಗುವಹಾಗಿಲ್ಲ. ಅನ್ನಪಾನಗಳು, ಓಡಾಡುವದು, ನಿದ್ರೆ, ಅಂಜಿಕೆ, ಸ್ತ್ರೀಪುರುಷರ ಮಿಲನ ಇಷ್ಟು ಪಶುಗಳಿಗೂ ಇರುತ್ತವೆ. ಧರ್ಮವೊಂದೇ ಮನುಷ್ಯನ ಹೆಗ್ಗುರುತು. ಧರ್ಮವಿಲ್ಲದೆ ಮನುಷ್ಯನು ಮನುಷ್ಯನೆನಿಸಿಯಾನೆ? ಧರ್ಮಜ್ಞಾನವಿಲ್ಲದ ವಿದ್ಯಾಭ್ಯಾಸದಿಂದ ನಮ್ಮ ತರುಣರು ಪಶುತುಲ್ಯರಾಗಿರುವರೆಂಬುದು ಮಾತ್ರವೇ ಅಲ್ಲ; ಪಶುಗಳಲ್ಲಿಲ್ಲದ ಮಾನವ ಬುದ್ಧಿಯನ್ನು ದುರುಪಯೋಗಪಡಿಸಿಕೊಂಡು ಅವರು ಕಟ್ಟುಹರಿದ ಪಂಜಿನಂತೆ ಸ್ವೇಚ್ಛಾಚಾರಿಗಳಾಗಿಬಿಟ್ಟಿರುತ್ತಾರೆ; ಎಲ್ಲರನ್ನೂ ಧಿಕ್ಕರಿಸಿ ನಡೆಯುವದು, ನಿಷಿದ್ಧವಾದ ಚಟಗಳನ್ನು ಅಭ್ಯಾಸಮಾಡಿಕೊಳ್ಳುವದು, ಸುಳ್ಳು ಹೇಳುವದು, ಮೋಸಮಾಡುವದು, ಕಳವು

ಮಾಡುವದು, ಸೋಮಾರಿಗಳಾಗಿರುವದು ಮುಂತಾದ ದೋಷಗಳು ಅವರಲ್ಲಿ ತುಂಬಿ ತುಳುಕುತ್ತಿವೆ. ಬಾಲಕರಿಗೆ ತಕ್ಕ ವಿದ್ಯಾಭ್ಯಾಸವನ್ನು ಮಾಡಿಸುವದನ್ನು ಈಗಲೂ ನಾವು ಹಿಂದಕ್ಕೆ ಹಾಕಿದರೆ, ಆರ್ಯಸಂಸ್ಕೃತಿಯೇ ಅಳಿಸಿಹೋಗುವ ಅಂಜಿಕೆಯುಂಟು.

ಪಾಶ್ಚಾತ್ಯರು ನಮ್ಮನ್ನು ಆಳುತ್ತಿದ್ದಾಗ ಅವರು ಉಚ್ಚವರ್ಗಕ್ಕೆ ಸೇರಿದವರೆಂಬ ಭಾವವು ಸಹಜವಾಗಿಯೇ ನಮ್ಮಗಳ ಮನದಲ್ಲಿ ಮೂಡಿತು. ಪಾಶ್ಚಾತ್ಯರ ಭಾಷೆ, ವೇಷ, ನಡತೆ ಮುಂತಾದವು ನಿರ್ದುಷ್ಟವೆಂದೂ ಅನುಕರಣೀಯವೆಂದೂ ನಾವು ನಂಬಿದೆವು. ಅವುಗಳನ್ನು ಅನುಸರಿಸಿದರೆ ನಮ್ಮ ಏಳಿಗೆಯು ಬೇಗನೆ ಆಗುವದೆಂಬ ಆಶೆಯು ನಮ್ಮಲ್ಲಿ ತಲೆದೋರಿತು. ನಮ್ಮಲ್ಲಿ ಕೆಲವರಿಗೆ ದೊರಕಿದ ಅಧಿಕಾರವೂ ಧನಸಂಪತ್ತೂ ಆ ಆಶೆಯು ನಿರಾಧಾರವಲ್ಲವೆಂದು ನೆಚ್ಚುವಂತೆ ನಮ್ಮನ್ನು ಮರುಳುಗೊಳಿಸಿದವು. ಆದ್ದರಿಂದ ನಾವು ಪಾಶ್ಚಾತ್ಯರೀತಿಯ ವಿದ್ಯಾಭ್ಯಾಸವನ್ನು ನಮ್ಮ ಬಾಲಕರಿಗೆ ಮಾಡಿಸುವದಕ್ಕೆ ಮೊದಲು ಮಾಡಿದೆವು. ಕ್ರಮಕ್ರಮವಾಗಿ ನಮ್ಮ ಸಂಸ್ಕೃತಿಯ ಗುರುತುಗಳಾಗಿದ್ದ ಸಂಸ್ಕೃತಭಾಷೆಯ ಅಭ್ಯಾಸ, ಸಂಸ್ಕೃತದ ನೆಂಟತನವುಳ್ಳ ದೇಶ ಭಾಷೆಗಳ ಅಭ್ಯಾಸ, ಪಾಪಪುಣ್ಯಭೀತಿ, ಈಶ್ವರನಲ್ಲಿ ಅಚಲವಿಶ್ವಾಸ- ಮುಂತಾದವು ಕಣ್ಮರೆಯಾಗುತ್ತಾ ಬಂದವು. ಪಾಶ್ಚಾತ್ಯವಿದ್ವಾಂಸರು, ಪಾಶ್ಚಾತ್ಯವೀರರ ಮತ್ತು ಪಾಶ್ಚಾತ್ಯ ರಾಜನೀತಿಜ್ಞರ ಪರಿಚಯವು ನಮಗೆ ಹೆಚ್ಚುತ್ತಾ ಬಂದಂತೆಲ್ಲ ನಮ್ಮ ದೇಶದ ಋಷಿಗಳ, ನಮ್ಮ ದೇಶದ ಕಲಾಕೋವಿದರ ಮತ್ತು ನಮ್ಮ ದೇಶದ ರಾಜರ್ಷಿಗಳ ಸ್ವಾರ್ಥತ್ಯಾಗ ಗರ್ಭಿತವಾದ ಸಚ್ಚರಿತ್ರವು ಮರೆತು ಹೋಯಿತು! ಇದೆಲ್ಲ ಧರ್ಮದ ಸೋಂಕಿಲ್ಲದ ವಿದ್ಯಾಭ್ಯಾಸದ ಫಲವು.

ಆದದ್ದಕ್ಕೆ ಅರಿತವನು ಅಳಬಾರದು. ಇನ್ನು ಮುಂದೆ ನಾವು ಸ್ವಲ್ಪವೂ ತಡ ಮಾಡದೆ, ಬೀಳುವ ಮನೆಗೆ ಕಂಬವನ್ನಾದರೂ ಕೊಟ್ಟು ಅದನ್ನು ನಿಲ್ಲಿಸಿಕೊಳ್ಳುವಂತೆ, ಧಾರ್ಮಿಕಶಿಕ್ಷಣವನ್ನು ಉಜ್ಜೀವನಮಾಡಿಕೊಳ್ಳಬೇಕು. ನಮ್ಮ ವಿದ್ಯಾಲಯಗಳಲ್ಲಿ ಕೂಡಲೆ ಧಾರ್ಮಿಕಶಿಕ್ಷಣಕ್ಕೆ ಸ್ಥಾನವನ್ನು ಕಲ್ಪಿಸಿಕೊಳ್ಳಬೇಕು.

ಧಾರ್ಮಿಕವಿದ್ಯಾಭ್ಯಾಸಕ್ಕೆ ಮನೆಯೇ ಮೊದಲನೆಯ ವಿದ್ಯಾಲಯವು; ಮನೆಯಲ್ಲಿ ಹಿರಿಯರನ್ನು ನೋಡಿ ಕಿರಿಯವರು ನಡೆಯುವರು. ಆದ್ದರಿಂದ ನಾವು ಮೊದಲು ಧಾರ್ಮಿಕರಾಗಬೇಕು. ಪ್ರತಿಯೊಂದು ಊರಿನಲ್ಲಿಯೂ ಸನಾತನಧರ್ಮದ ಮೂಲತತ್ತ್ವಗಳನ್ನು ಉಪದೇಶದಿಂದಲೂ ಆಚರಣೆಯಿಂದಲೂ ಜನರಿಗೆ ತಿಳಿಯಪಡಿ

ಸುವ ಸಾರ್ವಜನಿಕಸಂಸ್ಥೆಗಳು ಏರ್ಪಡಬೇಕು. ಅಲ್ಲಿ ಹಿರಿಯವರಿಗೆಲ್ಲ ಗೊತ್ತಾದ ಕಾಲ ದಲ್ಲಿ ಶ್ರುತಿ, ಸ್ಮೃತಿ, ಪುರಾಣ ಇವುಗಳ ಮೂಲಕವಾಗಿ ಆರ್ಯಸಂಸ್ಕೃತಿಗೆ ಮುಖ್ಯ ವಾದ ಧರ್ಮದ ಪರಿಚಯವನ್ನು ಜನರಿಗೆ ಮೂಡಿಸಿಕೊಡಬೇಕು. ಧರ್ಮವು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ನಮಗೆ ಬಂಧುವಾಗಿರುತ್ತದೆ; ವಿಶೇಷ ವಾಗಿ ಪರಲೋಕದಲ್ಲಿ ಧರ್ಮವೊಂದೇ ನಮ್ಮನ್ನು ಕಾಪಾಡುವ ಸಾಧನವಾಗಿರುತ್ತದೆ. ಹೀಗೆಂಬ ನಂಬಿಕೆಯು ಪ್ರತಿಯೊಂದು ಕುಟುಂಬಕ್ಕೂ ಅವಲಂಬನವಾಗಿರುವಂತೆ ಏರ್ಪಡಿಸಿಕೊಳ್ಳಬೇಕು.

ಪ್ರಾಥಮಿಕ ವಿದ್ಯಾಭ್ಯಾಸವನ್ನಾದರೂ ನಾವು ಸರಕಾರದ ಸ್ಕೂಲುಗಳ ಸಹಾಯ ವನ್ನು ಬಯಸದೆ ನಡೆಯಿಸಿಕೊಳ್ಳುವದನ್ನು ಕಲಿಯಬೇಕಾಗಿದೆ. ಚಿಕ್ಕ ವಯಸ್ಸಿನಲ್ಲಿ ಮಕ್ಕಳ ಮನಸ್ಸು ಬಹಳ ಕೋಮಲವಾಗಿರುತ್ತದೆ. ಆಗ ಅವರ ಮನಸ್ಸಿನಲ್ಲಿ ಮೂಡಿಸಿದ ಭಾವನೆಗಳನ್ನು ಅಳಿಸಿಹಾಕುವದು ಸುಲಭವಲ್ಲ. ಆದ್ದರಿಂದ ಆ ವಯಸ್ಸಿನಲ್ಲಿ ಧರ್ಮದ ಬೀಜವು ಮಕ್ಕಳ ಮನಸ್ಸಿನಲ್ಲಿ ಬಿತ್ತನೆಯಾಗುವದು ಅವಶ್ಯವಾಗಿರುತ್ತದೆ; ಧಾರ್ಮಿಕ ಶಿಕ್ಷಣವೆಂದರೆ ಕೆಲವು ಧರ್ಮಗ್ರಂಥಗಳ ಶ್ಲೋಕಗಳನ್ನು ಬಾಯಿಗೆ ಗಟ್ಟಿಮಾಡಿಸು ವದೆಂದು ಅರ್ಥವಲ್ಲ. ಶುಚಿಯಾಗಿರುವದು, ಶುಚಿಯಾಗಿರುವ ಆಹಾರವನ್ನೂ ವಸ್ತ್ರ ವನ್ನೂ ಸೇವಿಸುವದು, ತಂದೆತಾಯಿಗಳೇ ಮೊದಲಾದ ಗುರುಜನಗಳ ಸೇವೆ, ಜೊತೆ ಯಲ್ಲಿರುವವರಲ್ಲಿ ಪ್ರೀತಿವಿಶ್ವಾಸಗಳಿಂದ ನಡೆದುಕೊಳ್ಳುವದು, ಈಶ್ವರಭಕ್ತಿ, ಸ್ಥಿರಪ್ರಯತ್ನ ದಿಂದ ವಿದ್ಯಾಭ್ಯಾಸ ಮಾಡುವದು - ಇವುಗಳನ್ನು ಹುಡುಗರು ಆಚರಣೆಯಲ್ಲಿ ತಂದುಕೊಳ್ಳುವಂತೆ ಏರ್ಪಡಿಸುವದೇ ಧಾರ್ಮಿಕಶಿಕ್ಷಣವು. ಮಡಿ, ಮೈಲಿಗೆ, ಎಂಜಲು, ಮುಸುರೆ, ವಿನಯ, ಭಕ್ತಿ, ಜ್ಞಾನಾರ್ಜನೆ - ಮುಂತಾದ ಭಾವಗಳು ಮನೆಯಲ್ಲಿ ತಂದೆತಾಯಿಗಳ ಮೇಲ್ವಿಚಾರಣೆಯಿಂದಲೂ ಪಾಠಶಾಲೆಯಲ್ಲಿ ಉಪಾಧ್ಯಾಯರ ಮತ್ತು ಗೆಳೆಯರಾಗಿರುವ ವಿದ್ಯಾರ್ಥಿಗಳ ಮಾದರಿಯಿಂದಲೂ ಮಕ್ಕಳ ಮನಸ್ಸಿನಲ್ಲಿ ಬಿಂಬಿಸ ಬೇಕು. ಧಾರ್ಮಿಕ ಶಿಕ್ಷಣಕ್ಕೆಂದು ಬೇರೆ ಒಂದು ಘಂಟೆಯನ್ನು ಪಾಠಶಾಲೆಗಳಲ್ಲಿ ಏರ್ಪಡಿಸುವ ಪದ್ಧತಿಯು ಒಳ್ಳೆಯದಲ್ಲ. ಉಪಾಧ್ಯಾಯರು ತಮ್ಮ ನಡೆನುಡಿ ಗಳಿಂದಲೂ ಪಠ್ಯಪುಸ್ತಕಗಳಲ್ಲಿರುವ ಆದರ್ಶಪುರುಷರ ಚರಿತ್ರೆಯನ್ನು ತಿಳಿಯಪಡಿಸುವ ದರಿಂದಲೂ ಧರ್ಮದ ಧ್ಯೇಯವನ್ನು ಹುಡುಗರ ಮನಸ್ಸಿನ ಮುಂದೆ ಇಡುತ್ತಿರಬೇಕು.

ಉಚ್ಚವಿದ್ಯಾಭ್ಯಾಸಕ್ಕೆ ಹೀಗೆ ಬೇರೆಬೇರೆಯ ವಿದ್ಯಾಶಾಲೆಗಳನ್ನು ಏರ್ಪಡಿಸಿ

ಕೊಳ್ಳುವದು ಸಾಧ್ಯವಲ್ಲ, ಇಷ್ಟವೂ ಅಲ್ಲ. ಆದರೆ ಧಾರ್ಮಿಕ ವಿದ್ಯಾಭ್ಯಾಸದ ಸಂಬಂಧ ವಿಲ್ಲದೆ ಬರಿಯ ಲೌಕಿಕ ವಿದ್ಯಾಭ್ಯಾಸವನ್ನು ಮಾತ್ರ ಎಂದಿಗೂ ಮಾಡಿಸಬಾರದು. ಈಗಿನ ಸ್ಥಿತಿಯಲ್ಲಿ ಲೌಕಿಕ ವಿದ್ಯಾಭ್ಯಾಸದಲ್ಲಿ ಎಲ್ಲೆಲ್ಲಿಯೂ ರಾಜಕೀಯ ವಿಚಾರಗಳ ಪ್ರಭಾವವೇ ಹೆಚ್ಚಾಗಿರುತ್ತದೆ. ರಾಷ್ಟ್ರಭಕ್ತಿ ಎಂಬ ಹೆಸರಿನಿಂದ ದೇಶದೇಶಗಳಿಗೂ ಮತಮತಗಳಿಗೂ ಜಾತಿಜಾತಿಗಳಿಗೂ ಪರಸ್ಪರ ದ್ವೇಷವನ್ನು ಭುಗಿಲೆನ್ನಿಸುವ ದುರುಪದೇಶವು ಅಲ್ಲಲ್ಲಿ ಸ್ವಾರ್ಥಪರರಾದವರಿಂದ ಹರಡುತ್ತಲಿದೆ. ಇದನ್ನು ತಡೆಗಟ್ಟುವದಕ್ಕೆ ನಮ್ಮ ದೇಶದ ತರುಣರಿಗೆಲ್ಲ ದಶಧರ್ಮಗಳ ಪರಿಚಯವನ್ನು ಮಾಡಿಸಿಕೊಡುವ ಬಲವಾದ ಪ್ರಯತ್ನವು ನಡೆಯಬೇಕು.

ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿನ್ದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥

ಮನಸ್ಸನ್ನೂ ಶರೀರೇಂದ್ರಿಯಗಳನ್ನೂ ಕುಸಿಯಬಿಡದಿರುವದು **ಧೃತಿ.** ಮತ್ತೊಬ್ಬರು ತನಗೆ ಅಪಕಾರವನ್ನು ಮಾಡಿದರೂ ಪ್ರತಿಯಾಗಿ ಅಪಕಾರವನ್ನು ಮಾಡು ವದಕ್ಕೆ ಹವಣಿಸದೆ ಇರುವದು **ಕ್ಷಮೆ.** ಮನಸ್ಸು ಯಾವದರಿಂದಲೂ ವಿರುಪೇರಾಗ ದಂತೆ ಹಿಡಿತದಲ್ಲಿಟ್ಟುಕೊಳ್ಳುವದು **ದಮವು,** ಅಥವಾ ಕಷ್ಟವಾಗಲಿ ಸುಖವಾಗಲಿ ಬಂದರೆ ಹೆಚ್ಚದೆ ಹಿಗ್ಗದೆ ಇರುವದು ದಮವು. ಮತ್ತೊಬ್ಬರ ಸ್ವತ್ತನ್ನು ಅವರ ಅಪ್ಪಣೆ ಯಿಲ್ಲದೆ ತೆಗೆದುಕೊಳ್ಳಲು ಮನಸ್ಸು ಮಾಡದಿರುವದು **ಅಸ್ತೇಯವು.** ಶರೀರವನ್ನೂ ಮನಸ್ಸನ್ನೂ ಶುಚಿಯಾಗಿಟ್ಟುಕೊಳ್ಳುವದು **ಶೌಚವು.** ಇಂದ್ರಿಯಗಳು ಹುರುಪಿನಿಂದ ವಿಷಯಗಳಿಗೆ ಎರಗದಂತೆ ಹಿಡಿದಿಟ್ಟುಕೊಳ್ಳುವದು **ಇಂದ್ರಿಯನಿಗ್ರಹವು.** ಶಾಸ್ತ್ರ ವಿಚಾರವೇ ಮುಂತಾದವುಗಳಿಂದ ಬುದ್ಧಿಯನ್ನು ಚುರುಕಾಗಿಟ್ಟುಕೊಳ್ಳುವದು **ಧೀ.** ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳುವದು **ವಿದ್ಯೆ.** ಇದ್ದದ್ದು ಇದ್ದಂತೆಯೇ ನುಡಿಯುವ ಅಭ್ಯಾಸವು **ಸತ್ಯವು.** ಸಿಟ್ಟಿಗೇಳುವ ಪ್ರಸಂಗದಲ್ಲಿಯೂ ಸಿಡುಮೋರೆಯನ್ನು ಮಾಡಿ ಕೊಳ್ಳದೆ ಮನಸ್ಸನ್ನು ಶಾಂತವಾಗಿಟ್ಟುಕೊಳ್ಳುವದು **ಅಕ್ರೋಧವು.** ಇವೇ ದಶಧರ್ಮ ಗಳು. ಇವುಗಳ ಅರಿವುಳ್ಳವರಿಗೆ ಸಕಲ ಪುರುಷಾರ್ಥಗಳೂ ಕೈವಶವಾಗುವವು.

# ಕುಟುಂಬದಲ್ಲಿ ಧಾರ್ಮಿಕವಿದ್ಯಾಭ್ಯಾಸ

ಧಾರ್ಮಿಕ ವಿದ್ಯಾಭ್ಯಾಸಕ್ಕೆ ಮನೆಯೇ ಮೊದಲನೆಯ ವಿದ್ಯಾಲಯವಾಗಿರ ಬೇಕೆಂದು ಹಿಂದೆ ಒಂದು ಲೇಖನದಲ್ಲಿ ಅರಿಕೆ ಮಾಡಿಕೊಂಡಿದ್ದನು. ಇಲ್ಲಿ ಆ ವಿಷಯಕ್ಕೆ ನಾಲ್ಕು ವಾಕ್ಯಗಳನ್ನು ಬರೆಯಬೇಕೆಂದಿರುವೆನು.

ಮನೆಯಲ್ಲಿ ಹಿರಿಯರು ಬೆಳಗಿನ ಜಾವದಲ್ಲಿ ಎದ್ದು ಉದಯರಾಗವನ್ನು ಹಾಡುವ ಪದ್ಧತಿಯು ನಮ್ಮ ಹಿಂದಿನ ತಲೆಮಾರಿನವರಲ್ಲಿ ಇತ್ತು. ಈಗಲೂ ಎಲ್ಲಿಯೋ ಒಂದೊಂದು ಕಡೆಯಲ್ಲಿ ಕಾಣಬರುತ್ತಿದೆ. ದೊಡ್ಡವರು ಮುಂಚಿತವಾಗಿ ಎದ್ದು ಶೌಚ, ಮುಖಪ್ರಕ್ಷಾಲನೆ ಮುಂತಾದವುಗಳನ್ನು ಮಾಡಿಕೊಂಡು ಭಗವಂತನ ಸ್ಮರಣೆಯನ್ನು ಮಾಡುತ್ತಾ ಮನೆಯ ಸುತ್ತಮುತ್ತಲಿನ ಭಾಗವನ್ನು ಶುಚಿಯಾಗಿಟ್ಟುಕೊಳ್ಳುವದು, ಮನೆಯ ಬಾಗಿಲ ಮುಂದೆ ಸಾರಿಸಿ ರಂಗವಲ್ಲಿಯನ್ನಿಡುವನು, ಸ್ನಾನಕ್ಕೆ ನೀರನ್ನು ಸಿದ್ಧ ಮಾಡಿಟ್ಟುಕೊಳ್ಳುವದು ಇವುಗಳನ್ನು ಮಾಡುತ್ತಿರುವಾಗ ಇಂಪಾದ ರಾಗದಿಂದ ಉದಯ ರಾಗವನ್ನು ಹೇಳಿಕೊಂಡರೆ ಹುಡುಗರು ಶುಭಸ್ಮರಣೆಯಿಂದ ಗದ್ದಲವಿಲ್ಲದೆ ಏಳುವ ಪದ್ಧತಿಯನ್ನು ತಾವಾಗಿ ಕಲಿತುಕೊಳ್ಳುವರು. ಮನೆಯಲ್ಲಿ ದೇವರಪೂಜೆಗೆ ಸ್ವಲ್ಪ ದೊಡ್ಡವರಾದ ಹುಡುಗರು ಹೂ, ತುಳಸಿ – ಮುಂತಾದವುಗಳನ್ನು ಅಣಿಮಾಡುವ ಪದ್ಧತಿಯೂ ಹಿಂದಿನವರಲ್ಲಿತ್ತು. ಮತ್ತೆ ಅದನ್ನು ಉಜ್ಜೀವನಗೊಳಿಸುವದು ಅವಶ್ಯವು.

ಮನೆಯ ಯಜಮಾನನು ಸ್ನಾನಮಾಡಿ, ಮಡಿಬಟ್ಟೆಗಳನ್ನುಟ್ಟು ಕುಲಾಚಾರ ಪದ್ಧತಿಯಂತೆ ದೇವರಪೂಜೆಯನ್ನು ಮಾಡುವದನ್ನು ಕ್ರಮಪಡಿಸಿ ಇಟ್ಟುಕೊಳ್ಳುವದು ಒಳ್ಳೆಯದು. ಮಕ್ಕಳು ಏಳುತ್ತಲೂ ಅವರಿಗೆ ಯಥಾಸಂಭವವಾಗಿ ಮೈತೊಳೆದು, ಅಥವಾ ಮುಖಪ್ರಕ್ಷಾಲನಾದಿಗಳನ್ನು ಮಾಡಿಸಿ, ಜಾತಿಪದ್ಧತಿಯಂತೆ ವಿಭೂತಿನಾಮಾದಿಗಳನ್ನು ಧರಿಸಿಕೊಳ್ಳುವ ರೀತಿಯನ್ನು ಅವರಿಗೆ ಹೇಳಿಕೊಡಬೇಕು. ದೇವರಿಗೆ ಮಂಗಲಾರತಿ ಯನ್ನು ಮಾಡುವ ಹೊತ್ತಿಗೆ ಮನೆಯವರೆಲ್ಲರೂ ಶುಚಿಯಾಗಿ ಸಿದ್ಧರಾಗಿರಬೇಕು; ಎಲ್ಲರೂ ಒಟ್ಟಿಗೆ ಸ್ತೋತ್ರಾದಿಗಳನ್ನು ಹೇಳಿಕೊಂಡು ಭಗವಂತನನ್ನು ನಮಸ್ಕರಿಸಬೇಕು. ಇವುಗಳು ಆದಮೇಲೆಯೇ ಅವರವರ ಅನುಕೂಲಕ್ಕೆ ತಕ್ಕಂತೆ ಮಕ್ಕಳಿಗೆ ತಿಂಡಿತೀರ್ಥ ಗಳನ್ನು ಕೊಟ್ಟು ಹೊಸ ಬಟ್ಟೆಗಳನ್ನು ಧರಿಸಿ ವಿದ್ಯಾಶಾಲೆಗೋ ಅವರವರ ಕಸುಬಿಗೋ ಹೋಗುವ ಪದ್ಧತಿಯನ್ನು ಹಾಕಬೇಕು.

ಓದುವದು, ಕೈಕೆಲಸ ಮಾಡುವದು, ಉಳುವದು, ಇಂಥ ಯಾವದೊಂದು ಉದ್ಯೋಗವನ್ನು ಪ್ರಾರಂಭಿಸುವ ಮೊದಲು ಭಗವಂತನನ್ನು ಸ್ಮರಣೆ ಮಾಡಬೇಕು - ಎಂಬುದನ್ನು ಮಕ್ಕಳಿಗೆಲ್ಲ ಹೇಳಿಕೊಡಬೇಕು. ಮನೆಯಲ್ಲಿ ಎದ್ದಾಗ ಅಥವಾ ದೇವರಿಗೆ ನಮಸ್ಕಾರವನ್ನು ಮಾಡಿದಮೇಲೆ, ಮಕ್ಕಳು ತಂದೆತಾಯಿಗಳನ್ನೂ ಹಿರಿಯರನ್ನೂ ಅಭಿವಂದನೆಮಾಡುವ ಪದ್ಧತಿಯು ಒಳ್ಳೆಯದು. ಮನೆಗೆ ಬಂದವರನ್ನು ಗೌರವದಿಂದ ಕಾಣುವದು, ಅವರಿಗೆ ಬೇಕಾದ ಪುಡಿಗೆಲಸಗಳನ್ನು ಮಾಡಿಕೊಡುವದು, ವಿರಾಮಕಾಲ ದಲ್ಲಿ ತಮ್ಮ ಕೈಯಲ್ಲಾದ ಮಟ್ಟಿಗೆ ಮನೆಗೆಲಸಗಳಿಗೆ ನೆರವಾಗುವುದು ಇವೆಲ್ಲ ಹುಡುಗರ ಕಾರ್ಯಕ್ರಮದಲ್ಲಿ ಸೇರಿರಬೇಕು. **ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ, ಅತಿಥಿದೇವೋ ಭವ** ಎಂಬ ವೇದದ ಆಣತಿಗಳನ್ನು ವೇದಾಧ್ಯನವನ್ನು ಮಾಡುವವರೂ ಮಾಡದವರೂ ಸಮವಾಗಿಯೇ ಪಾಲಿಸುವದು ಒಂದು ದೊಡ್ಡ ಶ್ರೇಯಃಸಾಧನವು. ಎಲ್ಲೆಲ್ಲಿಯೂ ಈಶ್ವರಭಾವವನ್ನು ಮಾಡುವ ಪದ್ಧತಿಯೇ ಆರ್ಯಸಂಸ್ಕೃತಿಯ ಗುರುತು. ಈ ವಿನಯಾಧಾನವನ್ನು ತಾಯಿ ತಂದೆ ಗಳು ಎಂದಿಗೂ ಮರೆಯಬಾರದು.

ಸಾಯಂಕಾಲದಲ್ಲಿ ಹಿರಿಯುವರು ತಮ್ಮ ತಮ್ಮ ಉದ್ಯೋಗಗಳಿಂದ ಹಿಂತಿರುಗಿದ ಮೇಲೆ, ಮಕ್ಕಳೂ ತಮ್ಮತಮ್ಮ ವಿದ್ಯಾಶಾಲೆಗಳಿಂದ ಹಿಂತಿರುಗಿದ ಬಳಿಕ, ಎಲ್ಲರೂ ಕೈ ಕಾಲುಗಳನ್ನು ತೊಳೆದುಕೊಂಡು ಶುಚಿಯಾಗಿ ಸಾಧ್ಯವಾದರೆ ಬೇರೆಯ ಬಟ್ಟೆಗಳನ್ನು ಹಾಕಿಕೊಂಡು ಇನ್ನೊಂದು ಸಲ ಈಶ್ವರಭಜನೆಯನ್ನು ಮಾಡಬೇಕು. ದೇವರನಾಮ ಗಳನ್ನೂ ಉಪಯುಕ್ತವಾದ ಭಜನೆಗಳನ್ನೂ ದೊಡ್ಡವರು ಹಾಡುವದೂ, ಅವರನ್ನು ಅನುಸರಿಸಿ ಮಕ್ಕಳೂ ರಾಗತಾಳಗಳಿಂದ ಹಾಡುವದೂ ನರ್ತನ ಮಾಡುವದೂ, ಒಂದು ಉತ್ತಮವಾದ ಪದ್ಧತಿಯು. ಪರಮೇಶ್ವರನ ಚಿತ್ರಗಳು, ಮಹಾತ್ಮರ ಚಿತ್ರಗಳು ಮುಂತಾದ ಪ್ರತೀಕಗಳನ್ನಿಟ್ಟುಕೊಂಡು, ಯಥಾಶಕ್ತಿಯಾಗಿ ದೀಪವನ್ನು ಹತ್ತಿಸುವದು, ಮಂಗಲಾರತಿ ಮಾಡುವದು, ಸ್ತೋತ್ರಗಳನ್ನು ಹೇಳುವದು ಮುಂತಾದ ರೀತಿಯಿಂದ ಈಶ್ವರಭಾವನೆ ಯನ್ನು ಮನೆಯವರೆಲ್ಲರೂ ಮನಸ್ಸಿಗೆ ತಂದುಕೊಳ್ಳಬೇಕು.

ವಿರಾಮವಿರುವ ದಿನಗಳಲ್ಲಿ ಹತ್ತಿರವಿರುವ ದೇವಾಲಯವೊಂದಕ್ಕೆ ಹೋಗಿ ದೇವರ ದರ್ಶನವನ್ನು ಮಾಡುವದು, ಪುರಾಣ ಹರಿಕೀರ್ತನೆಯೇ ಮುಂತಾದ ಸಮಾರಂಭಗಳಿಗೆ ಹೋಗಿಬರುವದು ಮುಂತಾದ ಸಂದರ್ಭಗಳಲ್ಲಿ ಮಕ್ಕಳಿಗೆ ಅಧ್ಯಾತ್ಮ ವಿಷಯದ ತಿಳಿವಳಿಕೆಯನ್ನು ಆಗಾಗ್ಗೆ ಕೊಡುತ್ತಿರಬಹುದು. ಮನೆಯಲ್ಲಿ ಪ್ರಹ್ಲಾದ,

ಧ್ರುವ, ಮಾರ್ಕಂಡೇಯ ಮುಂತಾದ ಚಿಕ್ಕವಯಸ್ಸಿನ ಭಕ್ತರ ಕಥೆಗಳನ್ನು ಹೇಳುವದು, ದೊಡ್ಡವರು ಯಾರಾದರೂ ಬಂದರೆ ಅವರಿಂದ ಬುದ್ಧಿವಾದದ ಉಪದೇಶಗಳನ್ನು ಹೇಳಿಸುವದು ಮನೆಯವರೆಲ್ಲರೂ ಸೇರಿ ಅಂಥ ಉಪದೇಶಗಳನ್ನು ಕೇಳುವದು, ಹಬ್ಬ ಹರಿದಿನಗಳಲ್ಲಿ ಯಥಾಶಕ್ತಿಯಾಗಿ ಪೂಜಾದಾನಗಳನ್ನು ಮಾಡಿಸುವದು - ಇವೆಲ್ಲ ಮಕ್ಕಳ ಮನಸ್ಸಿನ ಮೇಲೆ ಉತ್ತಮ ಪರಿಣಾಮವನ್ನು ಮಾಡುವವು.

ಊಟವನ್ನು ಮಾಡುವಾಗ ಅಥವಾ ಯಾವದಾದರೊಂದು ತಿಂಡಿಯನ್ನು ತಿನ್ನುವಾಗ ಶುಚಿಯಾದ ಸ್ಥಳದಲ್ಲಿ ಶುಚಿಯಾದ ಮನಸ್ಸಿನಿಂದ ತೆಗೆದುಕೊಳ್ಳಬೇಕೆಂಬುದನ್ನು ತಂದೆತಾಯಿಗಳು ತಮ್ಮ ಮಾದರಿಯ ನಡತೆಯಿಂದ ಮಕ್ಕಳಿಗೆ ಕಲಿಸಿಕೊಡಬೇಕು. ಹಸಿವು ಆಗಿರಲಿ, ಆಗದಿರಲಿ, ನಾಲಗೆಯ ಚಟಕ್ಕಾಗಿ ಯಾರಾದರೊಬ್ಬರೂ ಒಂದು ಹೋಟಲಿನಿಂದ ತರಿಸಿರುವ ತಿಂಡಿಗಳನ್ನು ತಾವು ಉಟ್ಟಿರುವ ಮೈಲಿಗೆಯ ಬಟ್ಟೆಯಲ್ಲಿಯೇ ಕೈಗಳನ್ನು ತೊಳೆದುಕೊಳ್ಳದೆ ತಿನ್ನುವದು, ನೀರನ್ನು ಹಾಕಿ ಕೈಗಳನ್ನು ತೊಳೆದುಕೊಳ್ಳದೆ ಕೈಗಳನ್ನು ಕೊಡವಿಕೊಳ್ಳುವದು, ಅಥವಾ ಕಾಗದದಿಂದ ಒರಸಿಕೊಳ್ಳುವದು ಇಂತ ಅನಾಚಾರಗಳು ಇತ್ತೀಚೆಗೆ ನಮ್ಮ ದೇಶದಲ್ಲಿ ಹರಡುತ್ತಿವೆ. ರೈಲ ಮೇಲೆ ಊರಿಂದೂರಿಗೆ ತಿರುಗುವ ವ್ಯಾಪಾರೀ ಜನಗಳು, ಇಂಥ ಆಚಾರಗಳನ್ನು ಅನುಸರಿಸಿರುತ್ತಾರೆ. ಅದನ್ನು ಕಂಡು ಕುಟುಂಬಗಳಲ್ಲಿಯೂ ಇಂಥ ನಡತೆಯೇ ಯೋಗ್ಯವೆಂದು ಜನರು ಭಾವಿಸುವ ಅಪಾಯವು ಉಂಟಾಗಿರುತ್ತದೆ. ಅಶುಚಿಯಾದ ಆಹಾರದಿಂದ ಅಶುಚಿಯಾದ ಮನಸ್ಸೂ ಅಶುಚಿಯಾದ ಮನಸ್ಸಿನಿಂದ ಅಶುಚಿಯಾದ ಕೃತ್ಯವೂ ಫಲಿಸುವವು. ಆರ್ಯಸಂಸ್ಕೃತಿಗೆ ಇದೊಂದು ದೊಡ್ಡ ಕೊಡಲಿಯ ಪೆಟ್ಟು. ಆದ್ದರಿಂದ ಶುಚಿಯಾದ ಆಹಾರವನ್ನು ಗೊತ್ತಾದ ವೇಳೆಯಲ್ಲಿ ಶುಚಿಯಾಗಿರುವ ದೇಹದಿಂದಲೂ ಮನಸ್ಸಿನಿಂದಲೂ ಕೂಡಿ ಭಗವಂತನಿಗೆ ನಿವೇದನಮಾಡಿ ಪ್ರಸಾದ ಬುದ್ಧಿಯಿಂದ ತೆಗೆದುಕೊಳ್ಳುವ ಪದ್ಧತಿಯನ್ನು ಕಲಿಸಬೇಕು.

**ಉತ್ತಮವಾದ ಆಹಾರ, ಶುಚಿಯಾದ ದೇಹ ಮತ್ತು ಶುಚಿಯಾದ ಬಟ್ಟೆ ಶುಚಿಯಾದ ಮನಸ್ಸು, ಶುದ್ಧವಾದ ನಡೆನುಡಿಗಳು,** ಇವು ಪರಮೇಶ್ವರನ ಅನುಗ್ರಹದಿಂದಲೇ ದೊರಕುವವು. ಅವು ಯಾರಿಗೆ ದೊರಕುವವೋ ಅವರೇ ಆರ್ಯರೆಂಬ ಘನವಾದ ಹೆಸರಿಗೆ ತಕ್ಕವರು.

ಖುಖುಖುಖುಖು

# ಶುಚಿಯಾಗುವದು ಹೇಗೆ?

ಶ್ರುತಿ, ಸ್ಮೃತಿ, ಸದಾಚಾರ ಮತ್ತು ತನಗೆ ಒಗ್ಗುವದು - ಈ ನಾಲ್ಕನ್ನೂ ಧರ್ಮಕ್ಕೆ ಪ್ರಮಾಣವೆಂದು ಹಿಡಿಯಬೇಕು - ಎಂದು ದೊಡ್ಡವರು ಹೇಳುತ್ತಾರೆ; **ಶ್ರುತಿಯು** ಎಲ್ಲಕ್ಕಿಂತಲೂ ಮೇಲುಮಟ್ಟದ ಪ್ರಮಾಣವು; ಏಕೆಂದರೆ ಅದು ಅನುಭವಾನುಸಾರವಾದ ತತ್ತ್ವವನ್ನು ಲೆಕ್ಕಕ್ಕೆ ಹಿಡಿದು ಹೇಳುತ್ತದೆಯೇ ಹೊರತು ಯಾವನೊಬ್ಬ ಪುರುಷನ ಬುದ್ಧಿಗೆ ತೋಚುವದನ್ನು ಹೇಳುವದಿಲ್ಲ. **ಸ್ಮೃತಿಯು** ಮಹಾತ್ಮರಾದವರು ಶ್ರುತ್ಯರ್ಥವನ್ನು ಮನದಂದುಕೊಂಡು ರಚಿಸಿದ್ದಾದ್ದರಿಂದ ಎರಡನೆಯ ಪ್ರಮಾಣವು. **ಸದಾಚಾರವೆಂದರೆ** ಶ್ರುತಿಸ್ಮೃತಿಗಳನ್ನನುಸರಿಸಿ ತಮ್ಮ ನಡೆ ನುಡಿಗಳನ್ನು ರೂಪಿಸಿಕೊಂಡಿರುವ ಸತ್ಪುರುಷರ ಅನುಷ್ಠಾನದಲ್ಲಿರುವ ನಡೆನುಡಿಗಳು. ಇದು ಮೂರನೆಯ ಪ್ರಮಾಣವು. ಆಸ್ತಿಕನಾಗಿ ಶ್ರುತಿಸ್ಮೃತ್ಯಾದಿಗಳನ್ನು ಅನುಸರಿಸುವ ಬುದ್ಧಿಯುಳ್ಳವನಿಗೆ ಇದು ಸರಿಯಾದದ್ದೆಂದು ತೋರುತ್ತದೆ ಎಂದು ಹೃದಯಕ್ಕೆ ಮೆಚ್ಚಾದ ಆಚಾರವೂ ಸರಿಯಾಗಿಯೇ ಇರುವ ಸಂಭವವು ಹೆಚ್ಚಾಗಿದೆ. ಆದ್ದರಿಂದ ಇದು ನಾಲ್ಕನೆಯ ಪ್ರಮಾಣವು.

ಮಡಿ, ಮೈಲಿಗೆ - ಇವುಗಳ ವಿವೇಕವು ಸದಾಚಾರದಲ್ಲಿ ಹೆಚ್ಚಿನ ಸ್ಥಾನವನ್ನು ಪಡೆದಿರುತ್ತದೆ. 'ಆಚಾರ ಹೀನನಾದವನನ್ನು ವೇದಗಳೂ ಪಾವನಗೊಳಿಸಲಾರವು' ಎಂಬುದೊಂದು ಬಲ್ಲವರ ಸೂಕ್ತಿ. ಮಡಿಯಾಗಿರುವ ಮನಸ್ಸು, ಮಡಿಯಾಗಿರುವ ವಾಕ್ಕು, ಮಡಿಯಾಗಿರುವ ಕಾಯ - ಹೀಗೆ ತ್ರಿಕರಣಗಳಲ್ಲಿಯೂ ಮಡಿಯಾಗಿರುವವನ ಮನಸ್ಸಿನಲ್ಲಿ ಧರ್ಮಜ್ಞಾನಭಕ್ತಿವೈರಾಗ್ಯಗಳ ವಿಷಯದ ಉತ್ತಮವಿಚಾರಗಳು ಆಗಾಗ್ಗೆ ಹೊಳೆಯುತ್ತಲೇ ಇರುತ್ತವೆ. ದೊಡ್ಡವರು ಮಾಡುವ ಸದುಪದೇಶಗಳ ಭಾವವೂ ಮನಸ್ಸಿನಲ್ಲಿ ನಾಟುತ್ತದೆ. ಆದ್ದರಿಂದ ತ್ರಿಕರಣಗಳಲ್ಲಿಯೂ ಮಡಿಯಾಗುವದು ಹೇಗೆ?- ಎಂಬುದನ್ನು ಮೊದಲು ವಿಚಾರಮಾಡುವದು ಒಳ್ಳೆಯದು.

ಸ್ನಾನ, ಮಡಿಯಾದ ಬಟ್ಟೆಗಳನ್ನು ಧರಿಸುವದು, ಶುಚಿಯಾಗಿರುವ ಏಕಾಂತವಾದ ಸ್ಥಳವನ್ನು ಆರಿಸಿಕೊಳ್ಳುವದು - ಇವೆಲ್ಲ ಮಡಿಗೆ ಬೇಕೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಇವುಗಳ ಜೊತೆಗೆ ಇನ್ನೊಂದೂ ಇರಬೇಕೆಂದು ಬಲ್ಲವರು ಹೇಳುತ್ತಾರೆ:

**ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ ।**
**ಯಃ ಸ್ಮರೇತ್ ಪುಣ್ಡರೀಕಾಕ್ಷಂ ಸ ಬಾಹ್ಯಾಭ್ಯನ್ತರಃ ಶುಚಿಃ ॥**

ಶರೀರದಲ್ಲಿ ಯಾವದಾದರೂ ಕಾರಣದಿಂದ ಮೈಲಿಗೆಯಾಗಿದ್ದು ಹೊರಗಿನ ಸಾಧನಗಳಿಂದ ಮಡಿಯಾಗುವದಕ್ಕೆ ಸೌಕರ್ಯವಿಲ್ಲದಾಗಲೂ ಮಡಿಯಾಗುವದಕ್ಕೆ ಒಂದು ಉಪಾಯವಿದೆ. ಭಗವಂತನು ನಿತ್ಯಶುದ್ಧನು, ಆತನಿಗೂ ನಮಗೂ ನಿತ್ಯ ಸಂಬಂಧವಿದೆಯಾದರೂ ಮನಸ್ಸು ವಾಕ್ಕು ಕಾಯ - ಎಂಬ ನಮ್ಮ ಕರಣಗಳು ಹೊರಗಿನ ವಿಷಯಗಳ ಸಂಪರ್ಕದಿಂದ ಮೈಲಿಗೆಯಾಗುತ್ತಿರುತ್ತದೆ. ಆದ್ದರಿಂದ ಭಗವಂತನನ್ನು ಸ್ಮರಣೆಮಾಡಿಕೊಂಡರೆ ನಮ್ಮ ನಿತ್ಯಶುದ್ಧತೆಯ ಅರಿವು ಕೂಡಲೆ ಆಗುವದು; ನಾವು ಮೈಲಿಗೆಯಲ್ಲಿದ್ದೇವೆಂಬ ಭಾವನೆಯು ಹಾರಿಹೋಗುವದು. ಬೇಕೆಂತ ಶರೀರಾದಿಗಳನ್ನು ಕೊಳೆಮಾಡಿಕೊಂಡು ಭಗವಂತನ ನಾಮವನ್ನು ಉಚ್ಚರಿಸಿದರೆ ಸಾಕೆಂದು ಇದರ ಅರ್ಥವಲ್ಲ, ಯತ್ನವಿಲ್ಲದೆ ನಮ್ಮ ತ್ರಿಕರಣವು ಅಶುಚಿಯಾಗಿದ್ದರೂ ಭಗವಂತನ ಸ್ಮರಣೆಯಿಂದ ಶುಚಿಯಾಗುತ್ತದೆ ಎಂದು ತಿಳಿಯಬೇಕು.

ನಾವು ಸ್ನಾನಾದಿಗಳಿಂದ ಮಡಿಯಾದ ಮೇಲೂ ಅವಶ್ಯವಾಗಿ ಭಗವಂತನನ್ನು ಸ್ಮರಿಸಿಕೊಳ್ಳಬೇಕು. ಸ್ನಾನವೇ ಮುಂತಾದ ಬಾಹ್ಯ ಶೌಚವು ಎಷ್ಟಿದ್ದರೂ ಮನಸ್ಸು ಶುಚಿಯಾಗಲಾರದು; ಮನಸ್ಸು ಶುಚಿಯಾದ ಹೊರತು ಇನ್ನೆರಡು ಕರಣಗಳಲ್ಲಿ ನಿಜವಾದ ಶುಚಿತ್ವವು ಹೊರಹೊಮ್ಮದು.

'ಆಚಾರವೇ ಮೊದಲನೆಯ ಧರ್ಮವು; ಧರ್ಮಕ್ಕೆ ಅಚ್ಯುತನೇ ಪ್ರಭು' ಎಂಬುದೊಂದು ದೊಡ್ಡವರ ಸೂಕ್ತಿ. ಆದ್ದರಿಂದ ಆಚಾರಕ್ಕೂ ಭಗವಂತನಿಗೂ ಸಂಬಂಧವಿದ್ದರೆ ನಾವು ಧರ್ಮದ ಹಾದಿಯಲ್ಲಿದ್ದಂತೆ.

ಭಗವಂತನ ಸ್ಮರಣೆಯು ಅನುಷ್ಠಾನದ ಕಾಲಕ್ಕೆ ಶುಚಿಯಾಗುವದಕ್ಕೆ ಮಾತ್ರ ಎಂದು ಭಾವಿಸಬಾರದು. ಸಂತತವಾಗಿ, ಅಥವಾ ನಮಗೆ ಅವಕಾಶವು ಸಿಕ್ಕಿದಾಗಲೆಲ್ಲ ಭಗವಂತನ ಸ್ಮರಣೆಯನ್ನು ಮಾಡುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು. ಇದರಿಂದ ನಮ್ಮ ಕರಣಗಳು ಹೆಚ್ಚು ಹೆಚ್ಚು ಶುಚಿಯಾಗುವವು. ನಿತ್ಯಶುದ್ಧನಾದ ಭಗವಂತನೂ ನಮಗೆ ಹೆಚ್ಚು ಹೆಚ್ಚು ಹತ್ತಿರವಾಗುವನು.

# ಮಡಿ, ಮೈಲಿಗೆ

ಮಡಿಮೈಲಿಗೆಯ ತತ್ತ್ವವೇನು? ಮಡಿಮೈಲಿಗೆಯನ್ನು ಪಾಲಿಸುವದರಿಂದ ಪ್ರಯೋಜನವುಂಟೆ, ಇಲ್ಲವೆ? ಅದರಿಂದ ಹಾನಿಯೇ ಇರುವದೋ? ಈ ಪ್ರಶ್ನೆಯು ಆಗಾಗ್ಗೆ ಸಾಧಕರ ಮನಸ್ಸಿನಲ್ಲಿ ಎದ್ದುಕೊಳ್ಳುತ್ತಿರುವದು. ಮಡಿಮೈಲಿಗೆಯನ್ನು ವಿವೇಚಿಸಿ ನಡೆದುಕೊಳ್ಳದಿದ್ದರೆ ಧಾರ್ಮಿಕತನಕ್ಕೆ ಹಾನಿ ಅವಶ್ಯವಾಗಿ ತಟ್ಟುವದೆಂದು ಕೆಲವರ ಮತ; ಆ ವಿವೇಚನೆಯೇ ಜನತೆಯ ನೆಮ್ಮದಿಗೆ ಭಂಗವನ್ನು ತರುವದೆಂದೂ ಅದು ಅವಿವೇಕದ ಹೆಗ್ಗುರುತೆಂದೂ ಕೆಲವರ ಮತ. ಬರಿಯ ಚರ್ಚೆಯಿಂದ ಮನಸ್ಸನ್ನು ಕದಡಿಕೊಳ್ಳುವವರಿಗೂ ಮತ್ತೊಬ್ಬರನ್ನು ಜರಿದು ಬಾಯಿ ಮುಚ್ಚಿಸಬೇಕೆನ್ನುವವರಿಗೂ ಈ ವಿಚಾರದಿಂದ ಹೆಚ್ಚು ಪ್ರಯೋಜನವಾಗಲಾರದು. ಆದರೆ ನಿಜವನ್ನು ತಿಳಿದು ನಡತೆಗೆ ಹೊಂದಿಸಿಕೊಳ್ಳಬೇಕೆನ್ನುವವರಿಗೆ ಇದು ಅತ್ಯವಶ್ಯವಾಗಿರುವದು. ಆದ್ದರಿಂದ ಅಂಥವರಿಗಾಗಿ ನನ್ನ ತಿಳಿವಳಿಕೆಯಂತೆ ಈ ಪ್ರಶ್ನೆಗೆ ಉತ್ತರವನ್ನು ಹೇಳಲು ಯತ್ನಿಸುವೆನು.

ಮಡಿ, ಮೈಲಿಗೆ – ಎಂಬ ವಿಂಗಡವು ಎರಡು ದೃಷ್ಟಿಯ ಜನರಿಗೆ ಕಾಣುವದಿಲ್ಲ. ಪರಮಾರ್ಥದೃಷ್ಟಿಯಿಂದ ನೋಡಿ ಎಲ್ಲವೂ ನಿತ್ಯಶುದ್ಧವಾದ ಬ್ರಹ್ಮವೇ ಎಂಬ ಅನುಭವವನ್ನು ತಂದುಕೊಂಡಿರುವ ಜ್ಞಾನಿಗಳಿಗೆ ಯಾವ ಮಡಿಮೈಲಿಗೆಗಳೂ ಇರುವದಿಲ್ಲ. ಹುಟ್ಟಿದ್ದು ಹುಟ್ಟಿದಂತೆ ಇದ್ದು ಇದು ಶುಚಿ, ಇದು ಅಶುಚಿ ಎಂಬ ವಿವೇಕವಿಲ್ಲದೆ ಪಶುಗಳಂತೆ ವರ್ತಿಸುತ್ತಾ ಕಂಡಲ್ಲಿ ತಿಂದು ಕುಡಿದು ಮನಬಂದಂತೆ ವ್ಯವಹರಿಸುವ ಪಾಮರರಿಗೂ ಅವು ಇರುವದಿಲ್ಲ. ಮಿಕ್ಕ ಅಂತಸ್ತಿನವರಿಗೆ ಇದು ಶುಚಿ, ಅದು ಅಶುಚಿ; ಅಶುಚಿಯಿಂದ ದೂರವಿರಬೇಕು, ಶುಚಿಯಾದದ್ದನ್ನು ಆದರಿಸಬೇಕು– ಎಂಬ ಭಾವನೆ ಇದ್ದೇ ಇರುತ್ತದೆ. ಆ ಭಾವನೆಯವರೇ ಮಡಿಮೈಲಿಗೆಗಳ ವಿವೇಚನೆಯನ್ನು ಮಾಡುವದಕ್ಕೆ ಅಧಿಕಾರಿಗಳು.

ಮಡಿಮೈಲಿಗೆಗಳನ್ನು ಒಳಗಿನ ದೃಷ್ಟಿ ಹೊರಗಿನ ದೃಷ್ಟಿ – ಎಂಬ ಎರಡು ದೃಷ್ಟಿಕೋಣಗಳಿಂದ ಬಿಡಿಸಿ ನೋಡಬಹುದು. ಹೊರಗಿನ ದೃಷ್ಟಿಯು ಶುಚಿಯಾಗಿ ಕಾಣುವದನ್ನು ಮಡಿಯೆಂದು ಭಾವಿಸುವದು, ಇಲ್ಲದ್ದನ್ನು ಮೈಲಿಗೆಯೆನ್ನುವದು. ಅಗಸರವನು ಉಬ್ಬೆ ಹಾಕಿ ತಂದಿರುವ ಬಟ್ಟೆಗಳನ್ನೂ ಮಡಿಯೆಂದು ನಾವು ಉಟ್ಟು ಕೊಳೆಯಾಗಿರುವ ಬಟ್ಟೆಗಳನ್ನು ಮೈಲಿಗೆಯೆಂದೂ ನಾವು ಕರೆಯುವದು ಈ ದೃಷ್ಟಿಯಿಂದಲೇ. ಆದರೆ ಒಳಗಿನ ದೃಷ್ಟಿಯು ಮನಸ್ಸಿಗೆ ಪ್ರಸನ್ನತೆಯನ್ನು ತರುವ ಶುದ್ಧ

ವಸ್ತುಗಳು ಮಡಿಯೆಂದೂ ಅದನ್ನು ಬಗ್ಗಡವಾಗಿ ಮಾಡುವ ಅಶುದ್ಧವಸ್ತುಗಳು ಮೈಲಿಗೆಯೆಂದೂ ಭಾವಿಸುವದು. ಈ ದೃಷ್ಟಿಯಿಂದ ಮನಸ್ಸಿಗೆ ನೈಶ್ಚಲ್ಯ, ಏಕಾಗ್ರತೆ, ಉತ್ತಮ ವಿಚಾರ, ಶಾಂತಿ, ಸುಖ-ಇವುಗಳನ್ನು ಕೊಡುವ ವಸ್ತುವನ್ನು ಮಡಿಯೆಂದೂ ಚಾಂಚಲ್ಯ, ವಿಕ್ಷೇಪ, ಕೆಟ್ಟ ವಿಚಾರ, ಕಾಮ, ಕ್ರೋಧ, ದುಃಖ – ಮುಂತಾದವುಗಳನ್ನು ಒದಗಿಸುವ ವಸ್ತುವನ್ನು ಮೈಲಿಗೆಯೆಂದೂ ಹೇಳಬೇಕಾಗುವದು.

ಒಳಗಿನ ದೃಷ್ಟಿಯಿಂದ ನೋಡಿದಾಗ ಅದೇ ವಸ್ತುವೇ ಒಂದು ಕಾಲದಲ್ಲಿ ಮನಸ್ಸಿಗೆ ಪ್ರಸನ್ನತೆಯನ್ನೂ ಮತ್ತೊಂದು ಕಾಲದಲ್ಲಿ ಕಾಲುಷ್ಯವನ್ನೂ ಉಂಟುಮಾಡುತ್ತದೆ ಎಂಬುದು ನಮ್ಮೆಗಳೆಲ್ಲರ ಅನುಭವದಲ್ಲಿದೆ. ಅದರಲ್ಲಿಯೂ ಅಧ್ಯಾತ್ಮ ವಿಚಾರವಾಗಲಿ ಅಧ್ಯಾತ್ಮ ಸಾಧನವಾಗಲಿ ಇಲ್ಲದಿರುವ ಜನರು ಹೊರಗಿನ ಸನ್ನಿವೇಶದಲ್ಲಿ ಒಂದಿಷ್ಟು ಮಾರ್ಪಾಡು ಆದರೂ ಅಷ್ಟರಿಂದಲೇ ಉದ್ವೇಗವನ್ನು ಹೊಂದುವರು. ನಾಲಗೆಯಲ್ಲಿ ಅರೋಚಕವಾಗಿರುವ ರೋಗಿಯು ಆಹಾರವನ್ನು ಜರಿಯುವಂತೆ ಅಂಥವರು ಹೊರಗಿನ ವಸ್ತುಗಳನ್ನು ಕೆಟ್ಟವೆಂದೂ ಒಳ್ಳೆಯವೆಂದೂ ವಿಂಗಡಿಸಿಕೊಂಡು ನೋಡಿದರೆ ಅಚ್ಚರಿಯಲ್ಲ, ಇಂಥವರು ತಮ್ಮ ಮನಸ್ಸನ್ನು ಮಡಿಮಾಡಿಕೊಂಡರೆ ಅಷ್ಟರಿಂದಲೇ ಇಡಿಯ ಜಗತ್ತೂ ಮಡಿಯಾಗುವದು. ಅಲ್ಲಿಯವರೆಗೆ ವಸ್ತುಗಳಲ್ಲಿ ಇಲ್ಲದ 'ಒಳ್ಳೆಯ, ಕೆಟ್ಟ' – ಎಂಬ ವಿಶೇಷಣಗಳು ಅವರಿಗೆ ಗೋಚರವಾಗುತ್ತಲೇ ಇರುವವು.

ಆದ್ದರಿಂದ ಮನಸ್ಸಿನ ನೈರ್ಮಲ್ಯವೇ ಮಡಿ ಎಂದು ತಾನೇ ಏರ್ಪಡುತ್ತದೆ. ಆದರೆ ಈ ಮನೋನೈರ್ಮಲ್ಯವನ್ನು ಹೊಂದುವದು ಹೇಗೆ? ಅದಕ್ಕೇನಾದರೂ ಸಾಧನವುಂಟೆ? –ಎಂಬ ಪ್ರಶ್ನೆಯು ಎದ್ದುಕೊಳ್ಳುತ್ತದೆ. ಧರ್ಮಶಾಸ್ತ್ರಕಾರರು ಉಪದೇಶಿಸಿರುವ ಮಡಿಮೈಲಿಗೆಗಳ ವಿವೇಚನೆಯು ಇದಕ್ಕೆ ಉತ್ತರವಾಗಿರುತ್ತದೆ.

ಹೊರಗಿನ ವಸ್ತುಗಳಲ್ಲಿ ಪರಮಾರ್ಥದೃಷ್ಟಿಯಿಂದ ಯಾವ ಮೈಲಿಗೆಯೂ ಇಲ್ಲದಿದ್ದರೂ ಸಾರ್ವತ್ರಿಕವಾಗಿ ಯಾವ ಕೊಳೆಯ ವಸ್ತುಗಳ ಸೋಂಕಿನಿಂದ ಮನಸ್ಸು ಕೆಡುವದೋ, ಯಾವ ಆಹಾರದಿಂದ ಮನಸ್ಸಿಗೆ ಸಾಮಾನ್ಯವಾಗಿ ಕ್ಷೋಭೆಯುಂಟಾಗುವದೋ, ಯಾವ ಜನರ ಸಹವಾಸದಿಂದ ಮನಸ್ಸು ಉತ್ತಮ ವಿಚಾರಕ್ಕೆ ಒಲಿಯದೆ ಕೆಳಕ್ಕೇ ಜಾರುತ್ತಿರುವದೋ, ಯಾವ ನಾಡಿನಿಂದ ಅಥವಾ ನಡೆಯಿಂದ ಅಥವಾ ವಿಚಾರದಿಂದ ಅದು ಕದಡಿ ನಿಂತಲ್ಲಿ ನಿಲ್ಲದೆ ಸಂಸಾರ ದುಃಖವನ್ನೇ ಹೆಚ್ಚಿಸುವದೋ

ಅಂಥದ್ದೆಲ್ಲವೂ ಅಶುಚಿ, ಮೈಲಿಗೆ. ಈ ಮೈಲಿಗೆಯನ್ನುದೂರವಿರಿಸುವದಕ್ಕೆ ಪ್ರಯತ್ನ ಮಾಡಬೇಕೆನ್ನುವವರು ಇದಕ್ಕೆ ವಿರುದ್ಧವಾಗಿ ಮನಸ್ಸನ್ನು ಪ್ರಸನ್ನಗೊಳಿಸುವ, ಏಕಾಗ್ರತೆ ಗೊಳಿಸುವದಕ್ಕೆ ನೆರವಾಗುವ, ಉತ್ತಮವಿಚಾರಕ್ಕೆ ತಿರುಗಿಸುವ, ಸುಖಶಾಂತಿಗಳ ಮೊಳಕೆಯನ್ನುಂಟುಮಾಡುವ, ವಸ್ತುಗಳನ್ನೂ ಆಹಾರವನ್ನೂ ಜನರನ್ನೂ ನುಡಿಯನ್ನೂ ನಡೆಯನ್ನೂ ಮಡಿಯೆಂದು ಭಾವಿಸಿ ಅದನ್ನು ಆದರಿಸಬೇಕು.

ಮೇಲಿನ ಸಾಮಾನ್ಯ ನಿಯಮವನ್ನು ಕೆಳಗಿನ ಅಂತಸ್ತಿನಲ್ಲಿರುವ ನಮ್ಮಂಥವರು ಸ್ವತಂತ್ರವಾಗಿ ವ್ಯವಹಾರದಲ್ಲಿ ಆಚರಣೆಗೆ ತರುವದಕ್ಕೆ ಶಕ್ತರಲ್ಲ. ಆದ್ದರಿಂದ ಈ ವಿಷಯ ದಲ್ಲಿ ಶಾಸ್ತ್ರಕಾರರ, ಶಿಷ್ಟರ ಅಥವಾ ಅಧ್ಯಾತ್ಮಸಾಧನೆಯಲ್ಲಿ ದೊಡ್ಡವರಾಗಿ ನಮ್ಮ ಅಣ್ಣಂದಿರೆನಿಸಿಕೊಂಡಿರುವವರ, ಉಪದೇಶವನ್ನು ಹೊಂದಿ ಅದರಿಂದ ಲಾಭವನ್ನು ಪಡೆಯಬೇಕು. ಮಡಿಮೈಲಿಗೆಯೆಂಬುದು ಏರ್ಪಟ್ಟಿರುವದು "ನಾನು ಮಡಿ, ನೀನು ಮೈಲಿಗೆ' ಎಂದು ಅಭಿಮಾನವನ್ನೂ, ದಾಂಭಿಕತನವನ್ನೂ ಬೆಳೆಯಿಸಿಕೊಳ್ಳುವದಕ್ಕಲ್ಲ. ನಿತ್ಯನಿರ್ಮಲನಾಗಿರುವ ಪರಮಾತ್ಮನೇ ನಮ್ಮ ಆತ್ಮನೆಂದು ತಿಳಿಯುವದಕ್ಕೆ ಸಾಧನ ವಾಗಿ ಮೊದಲಿನ ಅಂತಸ್ತಿನಲ್ಲಿ ಕೈಕೊಳ್ಳಬೇಕಾಗಿರುವ ಭಾವನೆಯದು.

# ಅನುಷ್ಠಾನದ ತಿರುಳು

ಶಾಸ್ತ್ರದಲ್ಲಿ ಹೇಳಿರುವಂತೆ ಕರ್ಮಗಳನ್ನು ಮಾಡುವದೇ ಅನುಷ್ಠಾನವು. ಶಾಸ್ತ್ರ ದಲ್ಲಿ ಇಂಥ ಕರ್ಮವನ್ನು ಇಂಥ ಕಾಲದಲ್ಲಿ, ಇಂಥ ಸ್ಥಲದಲ್ಲಿ, ಈ ರೀತಿಯಾಗಿ ಮಾಡ ಬೇಕೆಂದು ತಿಳಿಸಿರುತ್ತದೆ. ಆ ಕರ್ಮವನ್ನು ಹಾಗೆ ಮಾಡಿದರೆ ಅದರ ಅನುಷ್ಠಾನ ವಾಗುತ್ತದೆ. ಇಲ್ಲದಿದ್ದರೆ ಅದು ಅನುಷ್ಠಾನವಲ್ಲ.

ಅನುಷ್ಠಾನದ ತಿರುಳು ಯಾವದು? ಅನುಷ್ಠಾನವು ಸಜೀವವೆನಿಸಬೇಕಾದರೆ ಏನೇನಿರಬೇಕು? ಎಂಬ ವಿಚಾರವೇ ಈ ದಿನದ ಉಪನ್ಯಾಸಕ್ಕೆ ವಿಷಯ. ಕರ್ಮಕ್ಕೆಲ್ಲ ಮುಖ್ಯವಾಗಿ ಶ್ರದ್ಧೆಯಿರಬೇಕು. ಶ್ರದ್ಧೆಯಿಲ್ಲದೆ ಮಾಡಿದ ಹೋಮವಾಗಲಿ, ತಪಸ್ಸಾ ಗಲಿ, ದಾನವಾಗಲಿ ಈ ಲೋಕದಲ್ಲಿ ಅಥವಾ ಪರಲೋಕದಲ್ಲಿ ತನ್ನ ಫಲವನ್ನು ಕೊಡುವ ಹಾಗಿಲ್ಲ. ಶಾಸ್ತ್ರವಾಕ್ಯದಲ್ಲಿ ಶ್ರದ್ಧೆ, ಕರ್ಮವು ಫಲವನ್ನು ಕೊಟ್ಟೇ ತೀರುವದೆಂಬ ಶ್ರದ್ಧೆ ಇವೆರಡೂ ಇಲ್ಲದಿದ್ದರೆ ಕರ್ಮವು ಕರ್ಮವೇ ಆಗುವದಿಲ್ಲ. ಆದರೆ ಶ್ರದ್ಧೆಯೆಂದರೆ

ಶಾಸ್ತ್ರದಲ್ಲಿ ಹೇಳಿರುವದನ್ನು ತಿಳಿದು ಉಂಟಾಗಿರಬೇಕೇ ಹೊರತು, ತಾನೇ ಕಲ್ಪಿಸಿಕೊಂಡ ಅಥವಾ ತಿಳಿಯದವರು ಯಾರೋ ಹೇಳಿದ ವಾಕ್ಯದ ಆಧಾರದ ಮೇಲೆ ನಿಂತಿರುವ ಅಂಧಶ್ರದ್ಧೆಯಾಗಿರಬಾರದು. ಅಂಧಶ್ರದ್ಧೆಯು ಎಷ್ಟೋ ಸಲ ವಿಪರೀತ ಫಲವನ್ನೇ ಕೊಡುತ್ತದೆ.

ಕರ್ಮವನ್ನು ಕಾಮ್ಯಕರ್ಮವೆಂದೂ ನಿತ್ಯಕರ್ಮವೆಂದೂ ಎರಡು ಮುಖ್ಯ ವರ್ಗಗಳಾಗಿ ವಿಂಗಡಿಸಬಹುದು. ಇಂಥ ಫಲಕ್ಕೆಂದು ಶಾಸ್ತ್ರದಲ್ಲಿ ವಿಧಿಸಿರುವ ಕರ್ಮವು ಕಾಮ್ಯಕರ್ಮವು. ವರ್ಣಾಶ್ರಮಾದಿಗಳನ್ನು ಉದ್ದೇಶಿಸಿ ಮಾಡಬೇಕೆಂದು ವಿಧಿಸಿರುವದು ನಿತ್ಯಕರ್ಮವು. ಮನಸ್ಸಿನ ಭಾವದ ಭೇದದಿಂದ ಕಾಮ್ಯಕರ್ಮವು ಕಾಮ್ಯವಲ್ಲದೆ ಹೋಗ ಬಹುದು, ನಿತ್ಯಕರ್ಮವೂ ಕಾಮ್ಯವಾಗಿ ಮಾರ್ಪಡಬಹುದು. ಸಂಧ್ಯಾವಂದನೆಯನ್ನು ಮಾಡುವಾಗ ನಾವು ಗಾಯತ್ರಿಯನ್ನು ಜಪಿಸುತ್ತಿರುವದು ವಿಧಿಗೆ ಬದ್ಧವಾಗಿ; ಆದ್ದರಿಂದ ಅದು ನಿತ್ಯಕರ್ಮಕ್ಕೆ ಸೇರಿದ್ದು. ಆದರೆ ಗಾಯತ್ರಿಯನ್ನು ಪುರಶ್ಚರಣಮಾಡಿ ನಮ್ಮ ಇಷ್ಟಾರ್ಥಗಳನ್ನು ಪಡೆಯುವ ವಿಧಾನವನ್ನೂ ಶಾಸ್ತ್ರದಲ್ಲಿ ಹೇಳಿರುತ್ತದೆ. ಆಗ ನಾವು ಫಲಕ್ಕಾಗಿ ಮಾಡುವ ಆ ಕರ್ಮವು ಕಾಮ್ಯಕರ್ಮವಾಗುವದು. ಇದರಂತೆ ಇಲ್ಲಿ ನಾವು ನಡೆಯಿಸುತ್ತಿರುವ ಅನುಷ್ಠಾನವೂ ಒಂದು ಬಗೆಯ ಕಾಮ್ಯಕರ್ಮವೇ. ಏಕೆಂದರೆ ಈ ಅನುಷ್ಠಾನವನ್ನು ಒಂದೊಂದು ಮನೆಯಲ್ಲಿಯೂ ಒಂದೊಂದು ಮುಖ್ಯ ಫಲ ವನ್ನು ಕೋರಿಯೇ ಸಾಮಾನ್ಯವಾಗಿ ನಡೆಯಿಸುತ್ತಿರುತ್ತೇವೆ. ಆದರೆ ಕಾರ್ಯಾಲಯ ದಲ್ಲಿ ನಡೆಯುತ್ತಿರುವಂಥ ಅನುಷ್ಠಾನದ ಪರಿ ಬೇರೆ. ಇಲ್ಲಿ ಅನುಷ್ಠಾನಕರ್ತರು ತಮ್ಮ ವ್ಯಕ್ತಿಗತವಾದ ಸುಖವನ್ನು ಮುಖ್ಯವಾಗಿ ಮನಸ್ಸಿನಲ್ಲಿಟ್ಟಿರುವದಿಲ್ಲ, ಮಹಾಜನರ ಕಲ್ಯಾಣ ಕ್ಕಾಗಿ ಈ ಅನುಷ್ಠಾನದಲ್ಲಿ ಅವರು ತೊಡಗಿರುತ್ತಾರೆ. ಸುಭಾಷಿತಕಾರನು ಹೇಳುವಂತೆ "ಮಮಕಾರವನ್ನು ಸರ್ವಥಾ ಬಿಡಬೇಕು; ಹಾಗೆ ಬಿಡುವದು ಆಗದೆ ಹೋದರೆ ಮಮಕಾರವನ್ನು ಮಾಡಬಹುದು, ಆದರೆ ಅದನ್ನು ಎಲ್ಲೆಲ್ಲಿಯೂ ಮಾಡಬೇಕು". ಸಾರ್ವಜನಿಕದೃಷ್ಟಿಯಿಂದ ಮಾಡುವ ಇಂಥ ಅನುಷ್ಠಾನಗಳೂ ಋಷಿಗಳು ಮಾಡುವ ತಪಸ್ಸು ಮುಂತಾದವುಗಳೂ ಸ್ವಾರ್ಥಕತೆಯಿಲ್ಲದ ಮಹನೀಯರು ಮಾಡುವ ಗ್ರಂಥ ರಚನೆಯೂ ಈ ಹೆಚ್ಚಿನ ಮಟ್ಟದ ಕಾಮ್ಯಕರ್ಮಗಳೆನ್ನಬಹುದು.

ಕಾಮ್ಯಕರ್ಮವನ್ನು ಹಿಗ್ಗಿಸಿ ಉತ್ತಮವಾದ ಅನುಷ್ಠಾನವಾಗಿ ಮಾರ್ಪಡಿಸುವ ರೀತಿಯಿಂದಲೇ ನಿತ್ಯಕರ್ಮವನ್ನೂ ಮಾಡುವದಕ್ಕೆ ಅವಕಾಶವಿರುತ್ತದೆ. ಸಾಮಾನ್ಯವಾಗಿ

ನಿತ್ಯಕರ್ಮವನ್ನು ಮೀಮಾಂಸಕರ ದೃಷ್ಟಿಯಿಂದ ನೋಡಿದರೆ ಅದು ಮಾಡಿದರೆ ಫಲ ವಿಲ್ಲ, ಬಿಟ್ಟರೆ ಪಾಪ ಇಂಥ ಕರ್ಮವಾಗಿರುತ್ತದೆ. ಇನ್ನೂ ಸ್ವಲ್ಪ ಆಳವಾಗಿ ನೋಡಿದರೆ ನಿತ್ಯಕರ್ಮದಿಂದ ನಮ್ಮ ಹಿಂದಿನ ಪಾಪರಾಶಿಯಲ್ಲಿ ಒಂದಿಷ್ಟು ನಾಶವಾಗುತ್ತದೆ. ಪಾಪ ನಾಶವು ನಮಗೆ ಕಾಣುವದಲ್ಲವಾದ್ದರಿಂದ ನಿತ್ಯಕರ್ಮವು ಸಾಮಾನ್ಯಬುದ್ಧಿಯವರಿಗೆ ಅಷ್ಟೇನೂ ಆಕರ್ಷಕವಾಗಿರುವದಿಲ್ಲ, ಬಡತನದಿಂದ, ಅಶಕ್ತಿ, ಆಲಸ್ಯ - ಮುಂತಾದ ನಿಮಿತ್ತಗಳಿಂದ ಅದನ್ನು ಮಾಡದೆ ಇರುವ ಕಡೆಗೇ ನಮ್ಮ ಚಿತ್ತವು ಒಲಿಯುತ್ತಿರುತ್ತದೆ. ಹೇಗೋ ಮನಸ್ಸನ್ನು ಬಿಗಿಹಿಡಿದುಕೊಂಡು ಮಾಡಿದರೂ ಅದು ಅಂಗವೈಕಲ್ಯವಿಲ್ಲದೆ ಪೂರ್ಣವಾಗಿ ಆಗುವದು ಬಹಳ ಕಷ್ಟ. ಆದರೆ ಇಂಥ ನಿತ್ಯ ಕರ್ಮದ ಅನುಷ್ಠಾನವು ಪುಷ್ಟವಾಗಿ ಅದರಿಂದ ಹೆಚ್ಚಿನ ಪ್ರಯೋಜನವು ನಮಗೆ ದೊರೆಯುವಂತೆ ಮಾಡುವದಕ್ಕೆ ಒಂದು ಉಪಾಯವನ್ನು ದೊಡ್ಡವರು ಹೇಳಿರುತ್ತಾರೆ. ಈ ಕರ್ಮವನ್ನು ನಮ್ಮ ಕೈಯ ಲ್ಲಾದಷ್ಟು ಮಟ್ಟಿಗೆ ಕಾಲ, ದೇಶ, ಸಾಮಗ್ರಿ, ಮಂತ್ರ, ತಂತ್ರಾದಿಗಳ ಲೋಪವು ಬಾರ ದಂತೆ ನೋಡಿಕೊಂಡು ಮಾಡುವದು, ಕೊನೆಯಲ್ಲಿ ಪರಮೇಶ್ವರನ ನಾಮವನ್ನು ಸ್ಮರಿಸುವದು ಈ ಎರಡು ಸಂಗತಿಗಳನ್ನು ನಾವು ನೆನಪಿಟ್ಟರೆ ನಿತ್ಯಕರ್ಮವು ನಮಗೆ ಸುಖದಾಯಕವಾಗುತ್ತದೆ. ನಾವು ಮಾಡುವ ಕರ್ಮವು ನಮ್ಮ ಪ್ರಯತ್ನದಿಂದಲೇ ಪೂರ್ಣವಾಗಿ ನೆರವೇರಿ ನಮ್ಮ ದುರಿತವನ್ನು ಕಳೆಯುವ ಹಾಗಾಗುವದು ಕಷ್ಟವೇ ಸರಿ. ಆದರೆ ಈ ಕರ್ಮವು ಪರಮೇಶ್ವರನಿಗೆ ಪ್ರೀತಿಯನ್ನುಂಟುಮಾಡಿ, ನನ್ನ ದುರಿತವನ್ನು ಸವೆಯಿಸುವಂತಾಗಲಿ!-ಎಂಬ ಹಾರೈಕೆಯಿಂದ ಕರ್ಮವನ್ನು ಮಾಡಿದರೆ ಅದಕ್ಕೆ ಹೆಚ್ಚಿನ ಮೆರುಗು ಬರುತ್ತದೆ. "**ಮಮ ಉಪಾತ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯ ರ್ಥಮ್**" (ನಾನು ಕೂಡಿಹಾಕಿಕೊಂಡಿರುವ ದುರಿತವು ಸವೆಯುವದರ ಮೂಲಕ ಶ್ರೀಪರಮೇಶ್ವರನ ಪ್ರೀತಿಯಾಗುವದಕ್ಕೆಂದು) ಈ ಕರ್ಮವನ್ನು ಮಾಡುತ್ತೇನೆ ಎಂದು ನಿತ್ಯಕರ್ಮಗಳಲ್ಲಿ ನಾವು ಮಾಡುವ ಸಂಕಲ್ಪದ ಅರ್ಥವಿದೆ. ಯಾರೊಬ್ಬರೂ ಪಾಪ ಕರ್ಮದಿಂದ ಸಂಕಟಪಡಬಾರದು, ಎಲ್ಲರೂ ಸುಖಿಗಳಾಗಿರಬೇಕು - ಎಂಬುದು ಈಶ್ವರನ ಸತ್ಸಂಕಲ್ಪವಾಗಿರುತ್ತದೆ. ನಾವು ಇದನ್ನು ನೆನಪಿನಲ್ಲಿಟ್ಟುಕೊಂಡು ಕರ್ಮವನ್ನು ಮಾಡಿದರೆ ಕರ್ಮದ ಅಂತಸ್ತು ಮೇಲ್ತರದ್ದಾಗುತ್ತದೆ. ಅಲ್ಲಿ ಪರಮೇಶ್ವರನು ನಮ್ಮ ಸಹಾಯಕ್ಕಾಗಿ ಬರುತ್ತಾನೆ. ಕೊನೆಯಲ್ಲಿ ನಾವು ಮಾಡಿದ ಕರ್ಮಗಳಲ್ಲಿ ಲೋಪ ದೋಷಗಳ ಪ್ರಾಯಶ್ಚಿತ್ತವಾಗಿ '**ಅಚ್ಯುತ**' '**ಅನಂತ**' '**ಗೋವಿಂದ**' - ಎಂದು ನಾವು ಮಾಡುವ ನಾಮತ್ರಯ ಮಂತ್ರದ ಜಪವು ಹೃದಯಪೂರ್ವಕವಾಗಿ ನಡೆದರೆ ಸಾರು,

ಹುಳಿ-ಮುಂತಾದವುಗಳಿಗೆ ಒಗ್ಗರಣೆಯಿಂದ ಸವಿಕೂಡಿಕೊಳ್ಳುವಂತೆ ಕರ್ಮಕ್ಕೆ ಸಾದ್ಗುಣ್ಯ ವುಂಟಾಗುತ್ತದೆ. ಅಚ್ಯುತ ಎಂದರೆ ಎಂದಿಗೂ ಜಾರಿಬೀಳದ ತತ್ತ್ವವು; ಅನಂತ ಎಂದರೆ ದೇಶಕಾಲ ನಿಮಿತ್ತಗಳ ಅಂತವಿಲ್ಲದ, ಎಲ್ಲೆಕಟ್ಟಿಲ್ಲದ ತತ್ತ್ವವು; ಗೋವಿಂದನೆಂದರೆ ಜ್ಞಾನಸ್ವರೂಪವಾಗಿರುವ ತತ್ತ್ವವು. ಈ ನಾಮತ್ರಯದ ಜಪದಿಂದ ನಮ್ಮ ಕರ್ಮಫಲಕ್ಕೆ ಚ್ಯುತಿಯಿಲ್ಲದಂತಾಗುವದು, ಅದು ಅನಂತವಾದ ಸತ್ತ್ವವೃದ್ಧಿಗೆ ಕಾರಣವಾಗುವದು, ಉತ್ತಮವಾದ ಜ್ಞಾನವು ಅಂಕುರವಾಗುವದಕ್ಕೆ ಅವಕಾಶವಾಗುವದು.

ಇದುವರೆಗೆ ಹೇಳಿದ್ದು ನಮ್ಮಂಥ ಸಾಮಾನ್ಯರಿಗೂ ಉಪಯೋಗವಾಗುವ ಅನುಷ್ಠಾನವು. ಇಲ್ಲಿ ನಿತ್ಯಕರ್ಮದಲ್ಲಿಯೂ ಕಾಮ್ಯಕರ್ಮದಲ್ಲಿಯೂ ಪರಮೇಶ್ವರನ ಉಪಾಸನೆಯು ಕರ್ಮಕ್ಕೆ ಅಂಗವಾಗಿರುತ್ತದೆ. ಆದರೆ ಮುಮುಕ್ಷುಗಳಾದವರು ಮಾಡುವ ಕರ್ಮವು ಉಪಾಸನೆಗೇ ಅಂಗವಾಗಿರುತ್ತದೆ ಎಂಬುದನ್ನು ಲಕ್ಷ್ಯದಲ್ಲಿಡಬೇಕು. "**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ**" ಎಂಬ ಗೀತೋಕ್ತಿಯಂತೆ ಮುಮುಕ್ಷುಗಳು ಮಾಡುವ ಕರ್ಮವು ಪರಮೇಶ್ವರನ ಆರಾಧನೆಯ ರೂಪವಾಗಿರುತ್ತದೆ. ಅವರು ಮಾಡಿದ ಕರ್ಮವು ಬರಿಯ ವರ್ಣಾಶ್ರಮಕರ್ಮವಲ್ಲ. ಅವರವರ ವರ್ಣಾಶ್ರಮಕರ್ಮವನ್ನು ಮಾಡಿದರೆ ಇಹದಲ್ಲಿ ಪಾಪಕರ್ಮದ ಭೀತಿಯು ತಪ್ಪುತ್ತದೆ. ಪರದಲ್ಲಿ ಸುಖವೂ ದೊರೆಯುತ್ತದೆ. ಆದರೆ ಮುಮುಕ್ಷುಗಳು ಮಾಡುವ ಕರ್ಮವು ಬರಿಯ ಕರ್ಮವಲ್ಲ, ಅದು ಕರ್ಮಯೋಗವು. ಅವರ ಅನುಷ್ಠಾನದಿಂದ ಚಿತ್ತಶುದ್ಧಿಯಾಗುತ್ತದೆ, ಈಶ್ವರನ ಉಪಾಸನೆಯ ಹಸಿವು ಹೆಚ್ಚುತ್ತದೆ; ಕೇವಲೋಪಾಸನೆಯಲ್ಲಿಯೇ ಮುಳುಗಿ ಪರಮಾತ್ಮನ ತತ್ತ್ವವನ್ನೇ ವಿಚಾರಮಾಡಿ ಪರಮಾರ್ಥಜ್ಞಾನದಿಂದ ಮೋಕ್ಷವನ್ನು ಪಡೆಯುವ ಉತ್ತಮಲಾಭಕ್ಕೂ ದಾರಿಯಾಗುತ್ತದೆ.

ಅನುಷ್ಠಾನದ ತಿರುಳು ಏನು? ಯಾವ ಕರ್ಮವನ್ನೇ ನಾವು ಮಾಡಲಿ, ಶ್ರದ್ಧಾ ತಾತ್ಪರ್ಯಗಳಿಂದ ಅದರಲ್ಲಿಯೇ ನಮ್ಮ ಚಿತ್ತವು ನೆಟ್ಟುಕೊಳ್ಳಬೇಕು; ನಾವು ಅನುಷ್ಠಾನಕ್ಕಿಂತ ಬೇರೆಯಾಗಿ ನೋಟಕರಾಗಬಾರದು. ಅನುಷ್ಠಾನದಲ್ಲಿ ಮುಳುಗಿಬಿಡಬೇಕು. ಪರಮೇಶ್ವರನ ಚಿಂತೆಯ ನೆರವನ್ನು ಯಾವಾಗಲೂ ತೆಗೆದುಕೊಳ್ಳುತ್ತಿರಬೇಕು, ಹಾಗಾದರೆ ನಾವು ಯಾವ ಕರ್ಮವನ್ನು ಅನುಷ್ಠಾನಮಾಡಿದರೂ ಕಳೆಕಟ್ಟುತ್ತದೆ, ಅದು ಜೀವಂತವಾಗುತ್ತದೆ, ವೀರ್ಯವತ್ತರವಾಗುತ್ತದೆ, ಪೂರ್ಣವಾದ ಫಲವನ್ನು ಕೊಡುತ್ತದೆ.

# ಸಾರ್ವಜನಿಕಹಿತಕ್ಕಾಗಿ ಅನುಷ್ಠಾನ

ಹಿತವೆಂದರೆ ಪರಿಣಾಮದಲ್ಲಿಯೂ ಸುಖವನ್ನೇ ಕೊಡತಕ್ಕದ್ದು. ಸಾರ್ವಜನಿಕ ಹಿತಕ್ಕಾಗಿ ಮಾಡುವ ಅನುಷ್ಠಾನವು ಭಗವಂತನನ್ನೇ ಲಕ್ಷ್ಯದಲ್ಲಿಟ್ಟುಕೊಂಡಿರಬೇಕು. ಶಾಸ್ತ್ರದಲ್ಲಿ ಹೇಳಿರುವದನ್ನೇ ಮುಖ್ಯವಾಗಿ ಮನಸ್ಸಿಗೆ ತಂದುಕೊಳ್ಳಬೇಕು. ಇಂಥ ಅನುಷ್ಠಾನಗಳನ್ನು ಪೂರ್ವದಲ್ಲಿ ಧರ್ಮಿಷ್ಠರಾದ ರಾಜರುಗಳೂ ಗುರುಪೀಠದವರೂ ಮಾಡಿಸಿ ಸಾರ್ವಜನಿಕರನ್ನು ಧರ್ಮದ ಕಡೆಗೆ ತಿರುಗಿಸುತ್ತಿದ್ದರು. ಈಗ್ಗೆ ರಾಷ್ಟ್ರದ ನಾಯಕರುಗಳು ರಾಜ್ಯವು ಧರ್ಮನಿರಪೇಕ್ಷವಿರುತ್ತದೆ ಎನ್ನುತ್ತಾರೆ; ಗುರುಪೀಠಗಳಲ್ಲಿ ಅನುಷ್ಠಾನಗಳು ಆಗುತ್ತಿದ್ದರೂ ಜನರು ಅವೆಲ್ಲ ತಮ್ಮ ಹಿತಕ್ಕಾಗಿ ಆಗುತ್ತಿವೆ ಎಂಬುದನ್ನು ಮನಸ್ಸಿಗೆ ಹತ್ತಿಸಿಕೊಳ್ಳುವಂತೆ ಆಗುತ್ತಿಲ್ಲವೆಂದು ಹೇಳಬೇಕಾಗಿದೆ. ಹೀಗಿರುವದರಿಂದ ಸಾರ್ವಜನಿಕಹಿತವಾಗುವ ಅನುಷ್ಠಾನಗಳು ಈಗ್ಗೆ ಮಹಾಜನರಿಂದಲೇ ಆಗಬೇಕಾಗಿರುತ್ತದೆ.

ಮಹಾಜನರೆಂದರೆ ಏನೂ ಅರಿಯದ ಪ್ರಾಕೃತರಲ್ಲ, ಅನುಷ್ಠಾನದಲ್ಲಿರುವ ಮಹಿಮೆಯನ್ನು ಅರಿತು ನಿಃಸ್ವಾರ್ಥತೆಯಿಂದ ಅದನ್ನು ಮಾಡುವದಕ್ಕೆ ಸಿದ್ಧರಾಗಿರುವ ಮಹಾತ್ಮರೇ ಇಲ್ಲಿ ಮಹಾಜನರು. ಇಂಥವರನ್ನು ಆರಿಸಿ ಉತ್ತಮರೀತಿಯಿಂದ ಅನುಷ್ಠಾನವನ್ನು ಸಾಗಿಸುವಂತೆ ಪ್ರೇರಿಸುವದಕ್ಕೆ ಶ್ರೀಮಂತರೂ ಧರ್ಮಕಾಮರೂ ಆಗಿರುವ ಲೌಕಿಕರು ಅತ್ಯವಶ್ಯವಾಗಿ ಬೇಕಾಗಿರುತ್ತಾರೆ. ಅಂಥ ಉದಾರಾಶಯರಿಗೆ ಶಾಸ್ತ್ರವಿಧಿಗಳು ಗೊತ್ತಿಲ್ಲದೆ ಇರಬಹುದಾದರೂ ಧರ್ಮದ ಕಡೆಗೆ ಒಲವು ಇರುತ್ತದೆ.

'ಯೇ ಶಾಸ್ತ್ರವಿಧಿಮುತ್ಸೃಜ್ಯ ಯಜನ್ತೇ ಶ್ರದ್ಧಯಾ ನ್ವಿತಾಃ'

ಎಂದರೆ ತಮಗೆ ವಿಧಿಯು ಗೊತ್ತಿಲ್ಲದಿದ್ದರೂ ಶಾಸ್ತ್ರಕ್ರಮವನ್ನು ಬಲ್ಲ ಮಹನೀಯರನ್ನು ಅವರು ಆರಿಸಿಕೊಂಡು ಪ್ರೋತ್ಸಾಹಿಸುವವರಾಗಿರಬೇಕು. ಅಂಥ ಧರ್ಮಾತ್ಮರೂ ನಿಃಸ್ವಾರ್ಥಿಗಳೂ ಆಗಿರುವ ಮಹಾತ್ಮರನ್ನು ನಾಯಕರನ್ನಾಗಿ ಮಾಡಿದರೆ ಅವರು ಅನುಷ್ಠಾನಕ್ಕೆ ತಕ್ಕವರನ್ನೇ ಆರಿಸಿಕೊಳ್ಳುತ್ತಾರೆ; ಕರ್ಮವು ಸಾಂಗವಾಗುವಂತೆ ನೋಡಿಕೊಳ್ಳುತ್ತಾರೆ. ಅನುಷ್ಠಾನವು ಹೋಮ, ಜಪ, ಅರ್ಚನೆ, ಧ್ಯಾನ, ಭಜನೆ – ಮುಂತಾದ ಯಾವ ರೂಪದಲ್ಲಿಯಾದರೂ ಇರಬಹುದು; ಅನುಷ್ಠಾತೃಗಳು ಮಾತ್ರ ಆಯಾ ಶಾಖೆಯ ಅನುಷ್ಠಾನದಲ್ಲಿ ನಿಷ್ಣಾತರಾಗಿದ್ದು ಶ್ರದ್ಧಾಭಕ್ತಿಗಳಿಂದ ಕೂಡಿ ತತ್ಪರತೆಯಿಂದ ಮಾಡುವವರಾಗಿರಬೇಕೆಂದು ಸ್ಪಷ್ಟವಾಗಿರುತ್ತದೆ.

ಇಂಥ ಅನುಷ್ಠಾನಗಳಿಗೆ ಭಗವಂತನ ಸಾಂನಿಧ್ಯದ ಪ್ರಭಾವವು ಮನಸ್ಸಿಗೆ ಹತ್ತುವಂಥ ದೇವಾಲಯಗಳು, ಕ್ಷೇತ್ರಗಳು, ನದೀತೀರ - ಮುಂತಾದ ಪವಿತ್ರಸ್ಥಾನಗಳು ಬೇಕು. ಆಯಾ ಸ್ಥಳದ ಅನುಷ್ಠಾತೃಗಳಿಗಿಂತ ಪರಸ್ಥಳಗಳಿಂದ ಅದೇ ಕೆಲಸಕ್ಕಾಗಿ ತಮ್ಮ ಪೂರ್ಣಕಾಲವನ್ನು ವಿನಿಯೋಗಿಸುವದಕ್ಕೆ ಸಿದ್ಧರಾಗಿರುವವನು ಸಿಕ್ಕಿದರೆ ಹೆಚ್ಚಿನ ವೀರ್ಯವು ಅನುಷ್ಠಾನಕ್ಕೆ ಒದಗುತ್ತದೆ.

ಶಾಸ್ತ್ರವಿಹಿತವಾದ ಪ್ರಕಾರಗಳನ್ನು ಯಥಾಶಕ್ತಿಯಾಗಿ ಸರ್ವವಿಧದಿಂದಲೂ ಅನುಸರಿಸಬೇಕು; ವಿತ್ತಶಾಠ್ಯವನ್ನು ಮಾಡಬಾರದು, ಲೌಕಿಕವನ್ನು ಅನುಷ್ಠಾನದಲ್ಲಿ ಬೆರೆಯಿಸಬಾರದು. ಸ್ಥಲವೂ, ಅನುಷ್ಠಾತೃಗಳೂ ತಕ್ಕಂತಿರಬೇಕಷ್ಟೆ. ಅದರಂತೆ ಸೌಮ್ಯವಾದ ಕಾಲವೂ ದೊರೆತರೆ ಅನುಷ್ಠಾನಕ್ಕೆ ಮತ್ತಷ್ಟು ಹೆಚ್ಚಿನ ತೇಜಸ್ಸು ಲಭಿಸುವದು.

ಈ ಎಲ್ಲಾ ಅಂಗಗಳಿಂದಲೂ ಪರಿಪೂರ್ಣವಾಗಿದ್ದರೂ ಮನುಷ್ಯ ಸಾಮಾನ್ಯಕ್ಕೆ ಇರುವ ಪ್ರಮಾದದಿಂದ ಕರ್ಮದಲ್ಲಿ ಲೋಪವಾಗಬಹುದು. ಆದರೆ ಸರ್ವಕರ್ಮಗಳಿಗೂ ಅಧ್ಯಕ್ಷನಾಗಿರುವ ಭಗವಂತನ ನಾಮಸ್ಮರಣೆಯೇ ಮುಂತಾದವುಗಳಿಂದ ಆ ಲೋಪವನ್ನು ತಿದ್ದಿಕೊಳ್ಳುವದಕ್ಕೆ ಅವಕಾಶವಿರುತ್ತದೆ.

ಇಂಥ ಸಾರ್ವಜನಿಕಾನುಷ್ಠಾನಗಳು ದಂಭಾಹಂಕಾರವಿಲ್ಲದ, ನಿಜವಾಗಿಯೂ ಲೋಕಹಿತಕ್ಕಾಗಿಯೇ ಆಗುವ ಅನುಷ್ಠಾನಗಳು - ಅಲ್ಲಲ್ಲಿ ಜರುಗುವಂತೆ ಭಗವಂತನ ಅನುಗ್ರಹವಾಗಲೆಂದು ನಾವೆಲ್ಲರೂ ಪ್ರಾರ್ಥಿಸೋಣ !

ಶ್ರೀಶ್ರೀಗಳವರು ಅನುವಾದ : ಅನುಷ್ಠಾನಗಳಿಂದಾಗುವ ದೃಷ್ಟ ಫಲಗಳಾಗಲಿ ಅದೃಷ್ಟಫಲಗಳಾಗಲಿ ಯಾವ ಪ್ರಕಾರದಿಂದ ಆಗುವವೆಂಬುದು ನಮ್ಮಂಥ ಪರಿಚ್ಛಿನ್ನ ಬುದ್ಧಿಯವರಿಗೆ ತಿಳಿಯದೆ ಹೋಗಬಹುದು. ಆದರೆ ಶ್ರದ್ಧಾ ತಾತ್ಪರ್ಯಗಳಿಂದ ಆಸ್ತಿಕರು ಮಾಡುವ ಅನುಷ್ಠಾನಗಳಿಗೆ ಮುಂದೆ ಯಾವಾಗಲಾದರೂ ಯಾವ ಫಲವು ಹೇಗೇ ಆಗಲಿ, ತತ್ಕಾಲದಲ್ಲಿಯಂತು ಅನುಷ್ಠಾನದಲ್ಲಿ ಭಾಗವನ್ನು ತೆಗೆದುಕೊಳ್ಳುವ ಶ್ರದ್ಧಾಲುಗಳೆಲ್ಲರಿಗೂ ಹೃದಯದಲ್ಲಿ ಆಗಿರುವ ಮನಶ್ಶಾಂತಿಯನ್ನೂ ಭಗವಂತನ ಸಾಂನಿಧ್ಯದಲ್ಲುಂಟಾಗಿರುವ ಅಚಲ ಶ್ರದ್ಧೆಯನ್ನೂ ಅಲ್ಲಗಳೆಯುವದು ಯಾರಿಂದಲೂ ಆಗಲಾರದು. ಯಜ್ಞ, ದಾನ, ತಪಸ್ಸು - ಮುಂತಾದ ಮಹಾಮಹಾ ಅನುಷ್ಠಾನಗಳು ಈಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಸಾಧ್ಯವಾಗದೆ ಇರಬಹುದು; ಆದರೆ ಭಗವಂತನನ್ನು ಸ್ಮರಣೆಮಾಡುವ ಅನುಷ್ಠಾನವು ಯಾವಾಗಲೂ ಸಾಧ್ಯವಿದೆ.

# ವಾಗಿಂದ್ರಿಯಜಯ

ಶರೀರ, ವಾಕ್ಕು ಮನಸ್ಸು - ಇವು ತ್ರಿಕರಣಗಳೆನಿಸುತ್ತವೆ. ಭಗವಂತನ ಸೇವೆಗೆ ಇವು ಮೂರನ್ನೂ ಮೀಸಲಾಗಿಟ್ಟುಕೊಳ್ಳುವವರು ಮುಮುಕ್ಷುಗಳು. ಅವರ ಧರ್ಮವು ನಿವೃತ್ತಿಧರ್ಮವೆನಿಸುವದು. 'ನಿವೃತ್ತಿ' ಎಂದರೆ ಹೊರಗಡೆಗೆ ತಿರುಗಿರುವ ಮನಸ್ಸಿನ ಜೋಲನ್ನು ಹಿಂತಿರುಗಿಸಿ ಎಲ್ಲಕ್ಕೂ ಆತ್ಮನಾಗಿರುವ ಪರಮಾತ್ಮನ ಕಡೆಗೆ ಹಿಂತಿರುಗಿಸುವದು.

ಶರೀರವನ್ನು ಗುರುಹಿರಿಯರ, ಸಾಧುಜನರ, ನೆರೆಯವರ, ದೀನಬಧಿರಾಂಧರ ಸೇವೆಗೆ ನಿಲ್ಲಿಸಿಕೊಂಡರೆ, ಅವರಲ್ಲೆಲ್ಲ ಪರಮಾತ್ಮನು ಹುದುಗಿಕೊಂಡಿರುವನೆಂಬ ಭಾವನೆಯಿಂದ ಅವರ ಸೇವೆಗಾಗಿ ಶರೀರವು ದುಡಿಯುವಂತೆ ಮಾಡಿದರೆ, ನಿವೃತ್ತಿ ಧರ್ಮಕ್ಕೆ ಮೊದಲಾಯಿತು.

ಆ ಬಳಿಕ ಇಂದ್ರಿಯಗಳನ್ನು ಭಗವಂತನ ಸೇವೆಗೆ ತಿರುಗಿಸಬೇಕು. ಲೋಕ ವ್ಯಾಪಾರದಲ್ಲಿ ಮುಳುಗಿರುವವರ ಇಂದ್ರಿಯಗಳೆಲ್ಲವೂ - ಸ್ವಾರ್ಥಪ್ರವೃತ್ತಿಯ ವಾಸನೆಯಿಂದಲೇ ಕೂಡಿರುವವು. ಅವರ ಜ್ಞಾನೇಂದ್ರಿಯಗಳೂ ಕರ್ಮೇಂದ್ರಿಯಗಳೂ - 'ಯಾವದನ್ನು ಕಂಡರೂ ಏನನ್ನು ಮಾಡಿದರೂ ಇದರಿಂದ ನನಗೆ ಯಾವ ಪ್ರಯೋಜನವಾದೀತು?' ಎಂದೇ ಅವರು ಚಿಂತಿಸುತ್ತಿರುವರು. ಅವರ ವಾಗಿಂದ್ರಿಯವಂತೂ ಸ್ವಾರ್ಥದ ಮಾತುಗಳನ್ನೇ ಆಡುವದರಲ್ಲಿ ತೊಡಗಿರುತ್ತದೆ. ವೃತ್ತಾಂತಪತ್ರಿಕೆಗಳನ್ನು ಓದುವದು, ತಮಗೆ ಸಂಬಂಧವಿಲ್ಲದ ವಿಷಯಗಳಲ್ಲಿ ಜೊತೆಯವರೊಡನೆ ಕೂಡಿಕೊಂಡು ಬೀಳು ಮಾತುಗಳನ್ನಾಡುತ್ತಿರುವದು - ಮುಂತಾದವುಗಳಿಂದ ಅವರ ವಾಗಿಂದ್ರಿಯವು ಹೂಲೆಗೆಟ್ಟಿರುವದು. ಇಂಥವರಿಗೆ ಕ್ರಮಕ್ರಮವಾಗಿ ನಿವೃತ್ತಿಧರ್ಮದ ಸವಿಯು ಮನಸ್ಸಿಗೆ ಹತ್ತಲೆಂದು ಧಾರ್ಮಿಕವ್ರತಗಳು, ಮೌನ, ಕ್ಷೇತ್ರಯಾತ್ರೆಗಳ ಸಂಚಾರ - ಮುಂತಾದವುಗಳನ್ನು ಪುರಾಣಾದಿಗಳಲ್ಲಿ ಹೇಳಿದೆ. ದ್ವಿಜರಾದವರಿಗೆ ವಿಹಿತವಾಗಿರುವ ಕರ್ಮಗಳಲ್ಲಿ ಮಂತ್ರಪಠನವನ್ನೂ ಸೇರಿಸಿರುತ್ತದೆ.

ಆದರೆ ಇವುಗಳನ್ನು ಕೂಡ ವ್ಯವಹಾರನಿರತರಾದವರು ಅನೇಕರು ಯಾಂತ್ರಿಕವಾಗಿ ಮಾಡುತ್ತಾರಾದ್ದರಿಂದ ಇವುಗಳಿಂದಾಗಬೇಕಾದ ಆಧ್ಯಾತ್ಮಿಕಲಾಭವು ಅವರಿಗೆ ದೊರಕದೆ ಇರುತ್ತದೆ. ಅಂಥವರು ಮುಖ್ಯವಾಗಿ ವಾಗಿಂದ್ರಿಯವನ್ನು ಹಿಡಿತದಲ್ಲಿಟ್ಟು

ಕೊಳ್ಳುವದಕ್ಕೆ ಪ್ರಯತ್ನಿಸಬೇಕು. ನಾಲಗೆಯು ಜಿಹ್ವೇಂದ್ರಿಯವೆಂಬ ಜ್ಞಾನೇಂದ್ರಿಯವೂ ಆಗಿದೆ, ವಾಗಿಂದ್ರಿಯವೆಂಬ ಕರ್ಮೇಂದ್ರಿಯವೂ ಆಗಿದೆ. ಜಿಹ್ವಾಚಾಪಲ್ಯವನ್ನು ಗೆದ್ದು ಕೊಂಡರೆ ಜ್ಞಾನೇಂದ್ರಿಯಗಳೆಲ್ಲವನ್ನೂ ಗೆದ್ದುಕೊಂಡಂತೆಯೇ; ಹಾಗೆಯೇ ವಾಗಿಂದ್ರಿಯ ವನ್ನು ಗೆದ್ದುಕೊಂಡರೆ ಕರ್ಮೇಂದ್ರಿಯಗಳೆಲ್ಲವನ್ನೂ ಗೆದ್ದುಕೊಂಡಂತೆಯೇ. ಅಥವಾ ನಾಲಗೆಯೆಂಬುದೇ ಮನುಷ್ಯನ ಸರ್ವೇಂದ್ರಿಯಗಳಿಗೂ ಉಪಲಕ್ಷಣವೆಂದೂ ಹೇಳ ಬಹುದು. ಆದ್ದರಿಂದಲೇ ಪರಮಾತ್ಮತತ್ತ್ವವು 'ವಾಕ್ಕುಗಳಿಗೆ ಗೋಚರವಲ್ಲ, ಮನಸ್ಸಿಗೂ ಗೋಚರವಲ್ಲ' ಎಂಬ ಶ್ರುತಿಗೆ ಇಂದ್ರಿಯಗಳಿಗಾಗಲಿ ಮನಸ್ಸಿಗಾಗಲಿ ಅದು ವಿಷಯ ವಾಗಲಾರದು ಎಂದು ಬಲ್ಲವರು ವ್ಯಾಖ್ಯಾನ ಮಾಡಿರುತ್ತಾರೆ.

ಹೇಗೇ ಆಗಲಿ. ನಿವೃತ್ತಿಧರ್ಮವನ್ನು ಅವಲಂಬಿಸುವದಕ್ಕೆ ಯತ್ನಿಸುವವರು ಮೊಟ್ಟಮೊದಲು ವಾಗಿಂದ್ರಿಯವನ್ನು ಹಿಡಿತದಲ್ಲಿಟ್ಟುಕೊಳ್ಳಬೇಕೆಂಬ ಮಾತಿಗೆ ಎರಡಿಲ್ಲ. ವ್ಯರ್ಥವಾಗಿ ಮಾತನಾಡುವದು, ಭಂಡಮಾತುಗಳನ್ನಾಡುವದು, ಮತ್ತೊಬ್ಬರ ಮನಸ್ಸನ್ನು ನೋಯಿಸುವ ಮಾತನ್ನಾಡುವದು, ತನ್ನ ಹೆಚ್ಚುಗಾರಿಕೆಯನ್ನು ಕೊಚ್ಚಿಕೊಳ್ಳುವದು - ಮುಂತಾದ ದುರ್ವ್ಯಸನಗಳನ್ನು ಬಿಡುವದು, ಮೃದು ಮಧುರವೂ ಸತ್ಯವೂ ಪ್ರಿಯವೂ ಹಿತವೂ ಆದ ಮಾತನ್ನಾಡುವದಕ್ಕೆ ಮೊದಲುಮಾಡುವದು - ಇವುಗಳು ವಾಗಿಂದ್ರಿಯ ಸಂಯಮಕ್ಕೆ ಮೊದಲಿನ ಹೆಜ್ಜೆ. ಆದರೆ ವಾಗಿಂದ್ರಿಯದ ನಿಜವಾದ ನಿವೃತ್ತಿಧರ್ಮವು ಪ್ರಾರಂಭವಾಗುವದು ಅದನ್ನು ಭಗವಂತನಿಗೆ ಸಂಬಂಧಿಸಿಕೊಂಡಾಗಲೇ. ವೇದಶಾಸ್ತ್ರ ಪುರಾಣಾದಿಗಳನ್ನೂ ಭಕ್ತರ ಜೀವನಚರಿತ್ರೆಗಳನ್ನೂ ಭಗವಂತನ ಗುಣಕರ್ಮಲೀಲೆಗಳನ್ನೂ ಬಲ್ಲವರ ಅನುಗ್ರಹದಿಂದ ಅರಿತುಕೊಂಡು ಮತ್ತೊಬ್ಬರಿಗೆ ಹೇಳಿ ನಲಿಯುವದು, ಭಗವನ್ನಾಮವನ್ನು ಜಪಿಸುತ್ತಿರುವದು, ಅನುಭವಿಗಳು ಮಾಡಿರುವ ಭಗವಂತನ ಸ್ತೋತ್ರ ಗಳನ್ನೂ ಪದಪದ್ಯಗಳನ್ನೂ ಹೇಳಿಕೊಳ್ಳುತ್ತಿರುವದು, ಅಧ್ಯಾತ್ಮಸಾಧನೆಗೆ ಒಲಿಯುವ ಚಿತ್ತ ವುಳ್ಳವರ ಜೊತೆಯಲ್ಲಿ ಪ್ರೇಮಪೂರ್ವಕವಾಗಿ ಭಗವಂತನ ನಾಮದ ಕೀರ್ತನೆಯನ್ನು ಮಾಡುತ್ತಿರುವದೂ ವಾಙ್ಮಯವಾದ ತಪಸ್ಸೆನಿಸುತ್ತದೆ.

ತಪ್ಪಲೆಯನ್ನು ಕಾಯಿಸುವ ಮೂಲಕವಾಗಿಯೇ ಅದರಲ್ಲಿ ಹಾಕಿರುವ ನೀರು ಕಾಯುತ್ತದೆ, ಆ ನೀರು ಕುದಿಯುವದರಿಂದ ಅಕ್ಕಿಯೂ ಬೆಂದು ಅನ್ನವಾಗುತ್ತದೆ. ಅಲ್ಲವೆ? ಇದರಂತೆಯೇ ವಾಗಿಂದ್ರಿಯವು ತಪಸ್ಸಿನಿಂದ ಶುದ್ಧವಾದಂತೆಲ್ಲ ಮಿಕ್ಕ ಇಂದ್ರಿಯಗಳೂ ಮನಸ್ಸೂ ಶುದ್ಧವಾಗುವವು. ವಾಗಿಂದ್ರಿಯದ ವ್ಯಾಪಾರವೆಲ್ಲ ಭಗವನ್ಮಯವಾದರೆ

ಇಂದ್ರಿಯಗಳ ವ್ಯಾಪಾರವೂ ಮನೋವ್ಯಾಪಾರವೂ ಭಗವನ್ಮಯವಾಗುವದು. ಭಗವದ್ಭಕ್ತರ ಸತ್ಸಂಗದಿಂದಲೂ ಸಂಭಾಷಣೆಯಿಂದಲೂ ವಾಗಿಂದ್ರಿಯವನ್ನು ಸುಲಭವಾಗಿ ವಶಕ್ಕೆ ತೆಗೆದುಕೊಳ್ಳಬಹುದೆಂದು ದೊಡ್ಡವರು ಹೇಳುತ್ತಾರೆ.

# ಎಚ್ಚರಿಕೆಯಿಂದಿರು

ರಾಗ : ಅಟತಾಳ :

ಎಚ್ಚರಿಕೆಯೊಳಿರು ನೆಚ್ಚದಿರಾರನು ಬಿಚ್ಚುನುಡಿಯ ಕೇಳು ಮರುಳಯ್ಯ ॥ಪ॥
ಹುಚ್ಚಾಟವ ಬಿಟ್ಟು ನಿಚ್ಚವು ನೆನೆನೀ ಸಚ್ಚಿದಾನಂದನ ಮರುಳಯ್ಯ ॥ಅಪ॥

ಪುತ್ರಮಿತ್ರಬಂಧುಭೃತ್ಯರು ಇಹರೆಂದು ಮತ್ತೆನಾಗದಿರು ಮರುಳಯ್ಯ ।
ಕತ್ತಲೆಮನೆಯೊಳಗೊತ್ತರಿಸುತ ನಿನ್ನ ನೆತ್ತಲೊ ಸರಿವರು ಮರುಳಯ್ಯ ॥೧॥

ಧನಧಾನ್ಯತುಂಬಿದೆ ಮನೆಯೊಳಗೆನ್ನುತ ಕೊನೆಯತಲಿರುವೆಯ ಮರುಳಯ್ಯ
ಹಣಹೊಲಮನೆಯೆಲ್ಲವನು ಬಿಟ್ಟು ಕೊನೆಗೆ ನೀ ಹೆಣವಾಗುವೆಯಲ್ಲೊ ॥೨॥
ಚಿನ್ಮಯ ಶಂಕರಗುರುವಿನ ನಾಮವನೊಮ್ಮನದಲಿ ನೆನೆ ಮರುಳಯ್ಯ ।
ಜನ್ಮಕರ್ಮಬಂಧನಿರ್ಮುಕ್ತನಾಗುತ ಬ್ರಹ್ಮವೆ ಆಗುವೆ ಮರುಳಯ್ಯ ॥೩॥

**ವಿವರಣೆ :** ಈ ಪದವನ್ನು ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಯು ಮೈಸೂರಿಗೆ ಶಂಕರ ಸಪ್ತಾಹಕ್ಕೆಂದು ಬಂದಾಗ ಒಂದು ದಿನ ಮನೆಯಲ್ಲಿ ಕತ್ತಲೆಯಾಗಿದ್ದು ಒಬ್ಬರೇ ಕುಳಿತಿದ್ದಾಗ ಹಾಡಿಕೊಂಡರಂತೆ. ಇದನ್ನು ವಾಚಕರು ಓದಿ ಮನನ ಮಾಡಿಕೊಂಡರೆ ಪರಪ್ರಾಪ್ತಿಗೆ ಸಾಧಕವಾದೀತೆಂದು ಇಲ್ಲಿ ಪ್ರಕಟಿಸಿರುತ್ತೇನೆ.

ಮನುಷ್ಯನು ವ್ಯವಹಾರವೇ ಸ್ಥಿರವೆಂದು ನಂಬಿಕೊಂಡು ಪರತತ್ತ್ವದ ನೆನಪನ್ನು ಮಾಡಿಕೊಳ್ಳದೆ ಅಜ್ಞಾನದ ಕತ್ತಲೆಯಲ್ಲಿ ಕುಳಿತಿರುತ್ತಾನೆ. ಅಂಥವನನ್ನು 'ಮರುಳಯ್ಯ' ಎಂಬ ಹೆಸರಿನಿಂದ ಸಂಬೋಧಿಸಿ ಅವನಿಗೆ ಇಲ್ಲಿ ಬುದ್ಧಿವಾದವನ್ನು ಹೇಳಿದೆ. ಒಂದೊಂದು ಸಾಲಿನ ಕೊನೆಯಲ್ಲಿಯೂ 'ಮರುಳಯ್ಯ' ಎಂದಿರುವ ಸಂಬೋಧನೆಯ ಸಾರವಿದು.

ನಮ್ಮ ಮಕ್ಕಳು, ಗೆಳೆಯರು, ಆಳುಕಾಳು - ಮೊದಲಾದವರು ಸಮಯಕ್ಕೆ ಒದಗುವರೆಂಬ ಭ್ರಾಂತಿಯಿಂದ ಮರುಳಾಗಬಾರದು. ಅವರೆಲ್ಲರೂ ತಮ್ಮತಮ್ಮ ಕಾರ್ಯದಲ್ಲಿ ವ್ಯಗ್ರರಾಗಿರುತ್ತಾರೆ. ನಮಗೆ ಉಂಟಾದ ಮಬ್ಬನ್ನು ನೀಗಿಸುವದಕ್ಕೆ ಅವರಿಂದ ಸಹಾಯವು ಎಂದಿಗೂ ಆಗಲಾರದು. ಮನೆಯಲ್ಲಿ ಹಣ, ದವಸ- ಮುಂತಾದದ್ದು ಬೇಕಾದಷ್ಟು ಇರಬಹುದು. ಆದರೆ ಅವೆಲ್ಲವನ್ನೂ ಬಿಟ್ಟು ನಾವು ಈ ಶರೀರವನ್ನೂ ಬಿಡಬೇಕಾಗುವದು. ಆದ್ದರಿಂದ ಶ್ರೀಶಂಕರಭಗವತ್ಪಾದರ ಅನುಗ್ರಹದಿಂದ ಜ್ಞಾನವನ್ನು ಸಂಪಾದಿಸಿಕೊಂಡು ಸಂಸಾರದಿಂದ ಮುಕ್ತನಾಗುವ ಬಗೆಯನ್ನು ಎಚ್ಚರದಿಂದ ಚಿಂತಿಸುತ್ತಿರಬೇಕು.

ಉಉಉಉಉ

# ಮನುಷ್ಯನ ಅಧೋಗತಿಗೂ ಉತ್ತಮಗತಿಗೂ ಕಾರಣ

ವಿಹಿತಸ್ಯಾನನುಷ್ಠಾನಾತ್ ನಿನ್ದಿತಸ್ಯ ಚ ಸೇವನಾತ್ ।
ಅನಿಗ್ರಹಾಚ್ಚೇನ್ದ್ರಿಯಾಣಾಂ ನರಃ ಪತನಮೃಚ್ಛತಿ ॥

ವಿಹಿತಸ್ಯ ಸ್ವನುಷ್ಠಾನಾತ್ ನಿನ್ದಿತಸ್ಯ ತ್ವಸೇವನಾತ್ ।
ಸುನಿಗ್ರಹಾಚ್ಚೇನ್ದ್ರಿಯಾಣಾಂ ನರೋಽಭ್ಯುದಯಮೃಚ್ಛತಿ ॥

ಇಲ್ಲಿ ಹೇಳಿರುವ ವಿಷಯವು ಮನುಷ್ಯ ಮಾತ್ರವನ್ನು ಉದ್ದೇಶಿಸಿ ಹೇಳಿದ್ದಾಗಿದೆ. ಗಂಡಸಾಗಲಿ, ಹೆಂಗಸಾಗಲಿ, ಹುಡುಗನಾಗಲಿ, ಮುದುಕನಾಗಲಿ, ಬ್ರಾಹ್ಮಣನಾಗಲಿ ಬ್ರಾಹ್ಮಣೇತರರಾಗಲಿ - ಈ ಭೇದಗಳನ್ನು ಗಮನಿಸದೆ ಮನುಷ್ಯಮಾತ್ರದವನಿಗೆ ಹೇಳಿದ್ದಾಗಿದೆ. ವಿಹಿತವಾದ ಕರ್ಮವನ್ನು ಮಾಡದೇ ಇರುವದರಿಂದ ಅಂದರೆ ಯಾರಿಗೆ ಯಾವದು ಶಾಸ್ತ್ರವೋ ಅಂದರೆ ಆರ್ಯರಿಗೆ ವೇದ, ಸ್ಮೃತಿ ಪುರಾಣ, ಸೂತ್ರ- ಇತ್ಯಾದಿಗಳು ಶಾಸ್ತ್ರವು; ಕ್ರಿಶ್ಚಿಯನ್‌ರಿಗೆ ಬೈಬಲ್ ಶಾಸ್ತ್ರವು; ಮಹಮ್ಮದೀಯರಿಗೆ ಖುರಾನು ಶಾಸ್ತ್ರವು. ಆಯಾ ಶಾಸ್ತ್ರದಿಂದ ವಿಹಿತವಾದದ್ದು ಎಂದರೆ :

1. ಸರ್ವರಿಗೂ ಉಪಕಾರವನ್ನು ಶಕ್ತಿಯನ್ನು ಮೀರಿ ಮಾಡಬೇಕು.
2. ಪ್ರಾಣವನ್ನು ಕಳೆದುಕೊಳ್ಳುವ ಸಂದರ್ಭ ಬಂದಾಗಲೂ ಸತ್ಯವನ್ನೇ ಹೇಳಬೇಕು.

3. ದಾನವನ್ನು ಮಾಡಬೇಕು.
4. ಯಾವದನ್ನು ಮಾಡಿದರೂ ಶ್ರದ್ಧೆಯಿಂದಲೇ ಮಾಡಬೇಕು. (ಶ್ರದ್ಧೆ ಎಂದರೆ ಶಾಸ್ತ್ರಾದಿಗಳಲ್ಲಿ ನಂಬಿಕೆ)
5. ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳಬೇಕು.
6. ಧರ್ಮವನ್ನು ಅನುಸರಿಸಬೇಕು.

ಇವೇ ಮುಂತಾದದ್ದು. ಇವನ್ನು ಶ್ರದ್ಧೆಯಿಂದ ಮಾಡದೇ ಇರುವದರಿಂದ ಅಧೋಗತಿಯಾಗುವದು. ಇಲ್ಲಿ ಒಂದು ವಿಷಯವನ್ನು ತಿಳಿಸತಕ್ಕದ್ದು – ಮನುಷ್ಯನು ಮನೋವಾಕ್ಕಾಯಗಳಿಂದ ಏನನ್ನೂ ಮಾಡದೇ ಇರಲು ಸಾಧ್ಯವಿಲ್ಲ. ಶಾರೀರಕ ಕರ್ಮವನ್ನು ಬಿಟ್ಟಿದ್ದರೂ 'ನಾನು ಇವತ್ತು ಏನನ್ನೂ ಮಾಡುವದಿಲ್ಲ'ವೆಂದು ಹೇಳುವದು ವಾಚನಿಕಕರ್ಮವನ್ನು ಮಾಡಿದಂತಾಯಿತು. ನಾನು ಏನನ್ನೂ ಮಾಡುವದಿಲ್ಲವೆಂದು ಯೋಚಿಸಿದರೆ ಮಾನಸಿಕಕರ್ಮವನ್ನು ಮಾಡಿದಂತಾಯಿತು. ಗಾಢನಿದ್ರೆಯ ಕಾಲವನ್ನು ಬಿಟ್ಟು ಬಾಕಿ ಕಾಲದಲ್ಲಿ ಯಾವ ಕರ್ಮವನ್ನೂ ಮಾಡದೇ ಇರುವದು ಸಾಧ್ಯವೇ ಇಲ್ಲವೆಂದ ಮೇಲೆ ಶಾಸ್ತ್ರವಿಹಿತಕರ್ಮವನ್ನು ಮಾಡಲಿಲ್ಲವೆಂದರೆ ಶಾಸ್ತ್ರನಿಷಿದ್ಧ ಕರ್ಮವನ್ನು ಮಾಡಿದಂತಾಗುತ್ತದೆ ಎಂಬುದು ಸಿದ್ಧವೇ ಆಯಿತು. ಮಾಡಬಾರದ್ದನ್ನು ಮಾಡಿದರೆ ಆಗಬಾರದ್ದು ಆಗಲೇ ಬೇಕಲ್ಲವೆ?

**'ನಿನ್ದಿತಸ್ಯ ಚ ಸೇವನಾತ್'** ಶಾಸ್ತ್ರವು ಯಾವದನ್ನು ಮಾಡಬಾರದೆಂದು ಹೇಳಿದೆಯೋ ಆ ಕರ್ಮವು ನಿಂದಿತಕರ್ಮ, ಅದನ್ನು ಮಾಡುವದರಿಂದಲೂ ಅಂದರೆ ಯಾವಾಗಲೂ ಇತರರಿಗೆ ಅಪಕಾರವನ್ನೇ ಮಾಡುವದು, ಇತರರನ್ನು ಹೊಡೆಯುವದು, ಬಯ್ಯುವದು, ತೊಂದರೆಕೊಡುವದು ಮತ್ತು ಕೊಲ್ಲುವದು – ಮುಂತಾದದ್ದನ್ನು ಮಾಡುವದರಿಂದಲೂ ಎಂದರ್ಥ. ಇದಕ್ಕೆ ಇಲ್ಲಿ ಒಂದು ದೃಷ್ಟಾಂತವನ್ನು ಕೊಡುತ್ತೇನೆ.

ಊರಿನಲ್ಲಿ ಒಬ್ಬ ದುಷ್ಟ ಮನುಷ್ಯನು ಯಾವಾಗಲೂ ಆ ಊರಿನವರಿಗೆಲ್ಲರಿಗೂ ಏನಾದರೂ ತೊಂದರೆಯನ್ನು ಕೊಡುತ್ತಲೇ ಇದ್ದನಂತೆ. ಅವರಿಗೆ ತೊಂದರೆಯಾದದ್ದನ್ನು ನೋಡಿ ಸಂತೋಷಪಡುತ್ತಿದ್ದನಂತೆ. ಅವನಿಗೆ ಬಹಳ ಕಾಯಿಲೆಯಾಗಿ ಸಾಯುವ ಹೊತ್ತು ಬಂದಿತಂತೆ. ಆಗ ಅವನು ''ನಾನು ಸತ್ತು ಹೋಗುತ್ತೇನೆ. ಈ ಊರಿನವರೆಲ್ಲರೂ ಸುಖವಾಗಿರುತ್ತಾರಲ್ಲ! ಇವರಿಗೆ ಮುಂದೆಯೂ ಹಿಂಸೆಯಾಗುವಂತೆ ಮಾಡಿಯೇ ಹೋಗಬೇಕು' ಎಂದು ಯೋಚಿಸಿ, ಆ ಊರಿನ ಮುಖ್ಯಸ್ಥರನ್ನು ಕರೆಯಿಸಿ 'ನಾನು

ನಿವುಗೆಲ್ಲ ತೊಂದರೆಯನ್ನು ಕೊಟ್ಟ ಪಾಪಿಯು. ಇನ್ನು ಮುಂದೆ ಇನ್ನು ಯಾರೂ ನನ್ನಂತೆ ಪರರಿಗೆ ಹಿಂಸೆಯನ್ನು ಕೊಡದಂತೆ ಇರುವದಕ್ಕೆ ನಾನು ಸತ್ತಮೇಲೆ ನನ್ನ ಶವ ವನ್ನು ಊರು ಮುಂದಿನ ಅರಳೀಮರಕ್ಕೆ ತಲೆಕೆಳಗಾಗಿ ನೇತುಹಾಕಿ ಮಳೆ ಬಡಿದು 'ಪರಹಿಂಸಕರಿಗೆ ಆಗುವ ಗತಿ ಇದು!' ಎಂದು ಉದ್ಘೋಷಿಸಿರಿ. ನೀವು ಹೀಗೆ ಮಾಡು ತ್ತೇವೆಂದರೆ ನಾನು ಸುಖವಾಗಿ ಪ್ರಾಣಬಿಡುತ್ತೇನೆ' ಎಂದು ಹೇಳಿದನಂತೆ. ಆ ಮುಖಂಡರು ಅವನ ಸಾಯುವಕಾಲ ಪ್ರಾರ್ಥನೆಯನ್ನು ಮುಗಿಸೋಣ. ಈಗ ಒಳ್ಳೆಯ ಬುದ್ಧಿ ಬಂದಿರಬೇಕು–ಎಂದು ಯೋಚಿಸಿ ಒಪ್ಪಿಕೊಂಡು ಹಾಗೆಯೇ ಮಾಡಿದ ರಂತೆ. ಇವನು ಸಾಯುವದಕ್ಕೆ ಮೊದಲೇ ಪೊಲೀಸಿನವರಿಗೆ "ನನ್ನನ್ನು ತಲೆಕೆಳಗಾಗಿ ಮರಕ್ಕೆ ಕಟ್ಟಿ ಮಳೆ ಹೊಡೆದು ಪ್ರಾಣವನ್ನು ಈ ಊರಿನವರು ತೆಗೆಯುತ್ತಾರೆ" ಎಂದು ಅರ್ಜಿಯನ್ನು ಹಾಕಿದ್ದನಂತೆ. ಊರಿನವರು ಶವವನ್ನು ನೇತುಹಾಕಿ ಮಳೆಹೊಡೆಯುತ್ತಿ ರುವ ಹೊತ್ತಿಗೆ ಸರಿಯಾಗಿ ಪೋಲಿಸಿನವರು ಬಂದು ಕೇಸ್ ಮಾಡಿ ಬಹು ದಿನಗಳ ವರೆಗೆ ಊರಿನವರಿಗೆಲ್ಲ ಹಿಂಸೆಕೊಟ್ಟರಂತೆ. ಇರುವಾಗಲೂ ಸತ್ತಮೇಲೂ ಇತರರಿಗೆ ಹಿಂಸೆ ಕೊಡುವ ಕರ್ಮವೇ ನಿಂದಿತಕರ್ಮ. ಇದನ್ನು ಆಚರಿಸುವುದರಿಂದಲೂ **"ಅನಿಗ್ರಹಾಚ್ಚ ಇಂದ್ರಿಯಾಣಾಂ"** ತ್ವಕ್, ಚಕ್ಷುಸ್, ಶ್ರೋತ್ರ, ಜಿಹ್ವಾ, ಘ್ರಾಣ – ಇವು ಜ್ಞಾನೇಂದ್ರಿಯಗಳು, ವಾಕ್ಪಾದಪಾಣಿಪಾಯೂಪಸ್ಥಗಳು ಕರ್ಮೇಂದ್ರಿಯಗಳು, ತ್ವಕ್ ಸ್ಪರ್ಶ ಸುಖವನ್ನು ಬಯಸುತ್ತದೆ, ನಾಲಿಗೆ ರುಚಿಸುಖವನ್ನು ಬಯಸುತ್ತದೆ. ಮೂಗು ವಾಸನೆಯ ಸುಖವನ್ನು ಬಯಸುತ್ತದೆ. ಕಣ್ಣು ರೂಪಸುಖವನ್ನು ಬಯಸುತ್ತದೆ. ಕಿವಿಯು ಶಬ್ದ ಸುಖವನ್ನು ಬಯಸುತ್ತದೆ. ಕರ್ಮೇಂದ್ರಿಯಗಳು ತಮ್ಮ ತಮ್ಮ ವಿಷಯ ಗಳ ಸುಖವನ್ನು ಬಯಸುತ್ತವೆ. ಮನಸ್ಸು ಮೇಯದ ಸುಖವನ್ನು ಬಯಸುತ್ತದೆ. ಈ ಇಂದ್ರಿಯಗಳಿಗೆ ಸೋತರೆ ಅಂದರೆ ಅವುಗಳ ಇಚ್ಛೆಯಂತೆ ವಿಷಯಸುಖವನ್ನೇ ಅನುಭವಿಸುವದಕ್ಕೆ ಹೋದರೆ ಅಂದರೆ ಈ ಇಂದ್ರಿಯಗಳನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳದೇ ಇದ್ದರೂ **'ನರಃ ಪತನಮೃಚ್ಛತಿ'** ಮನುಷ್ಯನು ಕೆಳಗೆ ಬೀಳುತ್ತಾನೆ. ಸತ್ತ ಮೇಲೆ ಮೃಗಪಕ್ಷಿಗಳ ಜನ್ಮವನ್ನೋ ಕ್ರಿಮಿಕೀಟಗಳ ಜನ್ಮವನ್ನೋ ಸ್ಥಾವರಜನ್ಮವನ್ನೋ ಅಥವಾ ನರಕದಲ್ಲಿ ಬೀಳುವಿಕೆಯನ್ನೋ ಪಡೆಯುತ್ತಾನೆ. ಬದುಕಿದ್ದಾಗ ಎಲ್ಲರಿಂದಲೂ ಬೈಸಿಕೊಳ್ಳುತ್ತಾನೆ. ಆದ್ದರಿಂದ ಮನುಷ್ಯನು ಮೇಲುಮೇಲಕ್ಕೆ ಹೋಗಬೇಕಾದರೆ ಏನನ್ನು ಮಾಡಬೇಕೆಂಬುದನ್ನು ಮುಂದೆ ವಿವರಿಸುವೆನು.

# ಅಭ್ಯುದಯ ಸಾಧನ

ವಿಹಿತಸ್ಯ ಸ್ವನುಷ್ಠಾನಾನ್ನಿಷಿದ್ಧಸ್ಯ ತ್ವಸೇವನಾತ್ ।
ಸುನಿಗ್ರಹಾಚ್ಚೇನ್ದ್ರಿಯಾಣಾಂ ನರೋಽಭ್ಯುದಯಮೃಚ್ಛತಿ ॥

ಶಾಸ್ತ್ರವು ಸತ್ಯವನ್ನು ಹೇಳುವದು, ಧರ್ಮವನ್ನು ಆಚರಿಸುವದು – ಮುಂತಾದದ್ದು ಮನುಷ್ಯನ ಅಭ್ಯುದಯಕ್ಕೆ ಸಾಧನವೆಂದು ಜ್ಞಾಪಿಸುತ್ತವೆ. ಮನುಷ್ಯನು ಇದನ್ನು ತಿಳಿದು ಇದರಂತೆ ನಡೆದರೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಉತ್ತಮ ಸ್ಥಿತಿಯನ್ನು ಪಡೆಯುತ್ತಾನೆ. ಇದಕ್ಕೆ ಉದಾಹರಣೆಯು ಹರಿಶ್ಚಂದ್ರ ಮಹಾರಾಜನೇ, ಅವನು ವಿಶ್ವಾಮಿತ್ರರಿಗೆ ಅವರು ಕೇಳಿದಷ್ಟು ಹಣವನ್ನು ಕೊಡುತ್ತೇನೆಂದು ಹೇಳಿದ ಮಾತನ್ನು ಉಳಿಸಿಕೊಳ್ಳಲು ರಾಜ್ಯಭ್ರಷ್ಟನಾದನು; ಹೆಂಡತಿ ಮಕ್ಕಳನ್ನು ಅಡವಿಟ್ಟನು; ಕೊನೆಯಲ್ಲಿ ತನ್ನನ್ನೇ ಸ್ಮಶಾನಾಧಿಪತಿಯಾದ ವೀರಬಾಹುವಿಗೆ ಮಾರಿಕೊಂಡು ಆಡಿದ ವಾಕ್ಯವನ್ನು ಸತ್ಯವಾಕ್ಯವನ್ನಾಗಿ ಉಳಿಸಿಕೊಂಡನು. ಅದರ ಫಲವಾಗಿ ಇಹಪರಗಳೆರಡು ಲೋಕಗಳಲ್ಲಿಯೂ ಅಭ್ಯುದಯವನ್ನು ಪಡೆದನು!

ಬಲಿಚಕ್ರವರ್ತಿಯು ವಾಮನನಿಗೆ ಅವನ ಹೆಜ್ಜೆಯಲ್ಲಿ ಮೂರು ಹೆಜ್ಜೆಯನ್ನು ಕೊಡುತ್ತೇನೆಂದು ವಾಗ್ದಾನಮಾಡಿದನು. ಗುರುಗಳಾದ ಶುಕ್ರಾಚಾರ್ಯರು "ಅವನು ವಿಷ್ಣುವು, ಒಂದು ಹೆಜ್ಜೆಯಿಂದ ಈ ಲೋಕವನ್ನು ಮತ್ತೊಂದು ಹೆಜ್ಜೆಯಿಂದ ಪರ ಲೋಕವನ್ನು ಆಕ್ರಮಿಸುತ್ತಾನೆ. ಮೂರನೆಯ ಹೆಜ್ಜೆಯನ್ನು ಕೊಡುವದಕ್ಕೆ ನಿನಗೇ ಇಲ್ಲ ವಲ್ಲ? ಹೇಗೆ ಕೊಡುತ್ತೀಯೆ? ನಿನ್ನ ಸರ್ವಸ್ವವಾದ ಈ ಲೋಕ ಮತ್ತು ಪರಲೋಕ ಗಳನ್ನು ಕೊಟ್ಟರೂ ಮೂರು ಹೆಜ್ಜೆಯನ್ನು ಕೊಟ್ಟಂತಾಗುವದಿಲ್ಲ. ಆದ್ದರಿಂದ ಒಂದು ಹೆಜ್ಜೆಯನ್ನೂ ಕೊಡಲೇಬೇಡ. ಹೇಗಿದ್ದರೂ ಕೊಟ್ಟ ಮಾತನ್ನು ನಡೆಸುವದು ಸಾಧ್ಯ ವಿಲ್ಲ"– ಎಂದು ಹೇಳಿದರು. ಆತನು ಗುರುಗಳ ಮಾತಿಗೂ ಬೆಲೆಕೊಡದೆ ರಾಜ್ಯವನ್ನು ಕಳೆದುಕೊಂಡು ಆಡಿದ ಮಾತನ್ನು ಉಳಿಸಿಕೊಂಡು ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಶ್ರೇಯಸ್ಸನ್ನೂ ಪಡೆದನು ಎಂಬುದು ಲೋಕವಿಖ್ಯಾತವಾಗಿದೆ.

ಇನ್ನು ರಾಮಾಯಣವನ್ನು ಎಲ್ಲರೂ ಕೇಳಿದ್ದೀರಿ. ದಶರಥನು ರಾಕ್ಷಸರೊಡನೆ ಯುದ್ಧಕಾಲದಲ್ಲಿ ದೇವೇಂದ್ರನಿಗೆ ಸಹಾಯಮಾಡಲು ಹೋದಾಗ ಅವನ ಪ್ರಾಣಗಳಿಗೇ ಅಪಾಯವು ಬಂದೊದಗಿದ ಕಾಲದಲ್ಲಿ ಆತನ ಕಿರಿಯ ಹೆಂಡತಿಯಾದ ಕೈಕೇಯಿಯು ಆತನನ್ನು ಎತ್ತಿಕೊಂಡು ಹೋಗಿ ಸಂರಕ್ಷಿಸಿದಾಗ ದಶರಥನು ಅವಳ ಸಾಹಸಕ್ಕೆ ಮೆಚ್ಚಿ

ಸಂತೋಷದಿಂದ 'ಎರಡು ವರಗಳನ್ನು ಕೊಟ್ಟಿದ್ದೇನೆ. ಬೇಕಾದದ್ದನ್ನು ಕೇಳಿಕೊ' ಎಂದು ಹೇಳಲು ಕೈಕೇಯಿಯು 'ನನಗೆ ಬೇಕಾದಾಗ ಕೇಳಿಕೊಳ್ಳುತ್ತೇನೆ'- ಎಂದು ಹೇಳಿದಳು. ದಶರಥನು ಅದಕ್ಕೆ ಒಪ್ಪಿದನು. ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕವನ್ನು ಮಾಡ ಬೇಕೆಂದು ದಶರಥನು ಪ್ರಯತ್ನಿಸಿದಾಗ ಕೈಕೇಯಿಯ ಸೇವಕಿಯಾದ ಸ್ವಾರ್ಥ ಪರಾಯಣಳಾದ ಮಂಥರೆಯು ಕೈಕೇಯಿಗೆ 'ಪೂರ್ವದಲ್ಲಿ ಕೊಟ್ಟಿದ್ದ ಎರಡು ವರ ಗಳನ್ನು ಈಗ ಕೇಳಿಕೊ' ಎಂದು ಪ್ರೇರಿಸಿದಳು. ಅವಳ ಪ್ರೇರಣೆಯಿಂದ ಕೈಕೇಯಿಯು ಒಂದು ವರದಿಂದ ಶ್ರೀರಾಮನಿಗೆ ಹದಿನಾಲ್ಕು ವರ್ಷಗಳ ವನವಾಸವನ್ನು ಎರಡನೆಯ ವರದಿಂದ ಭರತನಿಗೆ ಪಟ್ಟಾಭಿಷೇಕವನ್ನೂ ಕೇಳಿಕೊಂಡಳು. ದಶರಥನು ಈ ಮಾತನ್ನು ಕೇಳಿ ಮೂರ್ಛಿತನಾಗಿ ತಾನೇ ಎದ್ದು ಎಷ್ಟೆಷ್ಟೋ ವಿಧದಲ್ಲಿ ಕೈಕೇಯಿಯನ್ನು ಕುರಿತು ರಾಮನ ವನವಾಸವನ್ನು ಬಿಟ್ಟು ಬೇರೆ ಏನನ್ನಾದರೂ ಕೇಳಿಕೋ ಕೊಡುತ್ತೇನೆಂದು ಹೇಳಿದರೂ ಕೇಳದೆ ಇದ್ದಾಗ ರಾಮನ ವನವಾಸದಿಂದ ತನ್ನ ಮರಣವು ಖಂಡಿತ- ಎಂಬುದನ್ನು ತಿಳಿದು ಕೂಡ ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಕೊಟ್ಟ ಮಾತನ್ನು ಉಳಿಸಿ ಕೊಳ್ಳುವದೇ ನ್ಯಾಯವೆಂದು ಯೋಚಿಸಿ ರಾಮನನ್ನು ಕರೆಯಿಸಿ ಅವನಿಗೆ ಹದಿನಾಲ್ಕು ವರ್ಷ ವನವಾಸವನ್ನು ಮಾಡುವಂತೆ ಹೇಳಿ ಪ್ರಾಣಬಿಟ್ಟನಲ್ಲವೆ? ಇದರಿಂದ ಸುಳ್ಳು ಹೇಳಿ ತನ್ನ ಪ್ರಾಣವನ್ನು ಉಳಿಸಿಕೊಳ್ಳುವದಕ್ಕಿಂತ ಸತ್ಯವನ್ನು ರಕ್ಷಿಸಿಕೊಳ್ಳುವದಕ್ಕಾಗಿ ಪ್ರಾಣ ವನ್ನಾದರೂ ಬಿಡಬೇಕೆಂಬುದು ಸ್ಪಷ್ಟವಾಗುತ್ತದೆ. ವೇದವು **'ಸತ್ಯಂ ವದ'** ಎಂದು ಉದ್ಘೋಷಿಸುತ್ತದೆ. ಸತ್ಯವದನವು ಅಭ್ಯುದಯಕ್ಕೆ ಕಾರಣ -ಎಂದು ಅರ್ಥ.

ಮನುಷ್ಯನ ಸ್ವಭಾವವು ಸತ್ಯವನ್ನು ನುಡಿಯುವದೇ. ಆದರೆ ಕಾಮವಶ ನಾದಾಗ ಸತ್ಯದಿಂದ ಚ್ಯುತನಾಗುತ್ತಾನೆ.

ಒಬ್ಬ ಮನುಷ್ಯನು ತನ್ನ ಆಸ್ತಿಯನ್ನು ಖರೀದಿಗೆ ಕೊಟ್ಟು ಪತ್ರವನ್ನು ಬರೆದು ಕೊಟ್ಟಿರುತ್ತಾನೆ. ಅದೇ ಮನುಷ್ಯನೇ ಕಾಮವಶನಾದರೆ ಅಂದರೆ 'ಈ ರುಜು ನನ್ನದಲ್ಲ ಎಂದು ಕೋರ್ಟಿನಲ್ಲಿ ಸಾಧಿಸಿದರೆ ಆ ಆಸ್ತಿಯು ತನಗೇ ಬರುತ್ತದೆ' - ಎಂಬ ಆಶೆಗೆ ಒಳಗಾದರೆ ಕೋರ್ಟಿನಲ್ಲಿ ಕೇಳಿದಾಗ ನನ್ನ ರುಜುವಲ್ಲವೆಂದು ಹೇಳುತ್ತಾನೆ. ಕಾಮ ವಶನಾಗದಿದ್ದರೆ 'ತನ್ನದೇ ಈ ರುಜು' ಎಂದು ಹೇಳಿ ಜನಗಳ ಸ್ತೋತ್ರಕ್ಕೆ ಪಾತ್ರ ನಾಗುತ್ತಾನೆ; ಮತ್ತು ಇಹಪರಗಳಲ್ಲಿ ಅಭ್ಯುದಯವನ್ನು ಪಡೆಯುತ್ತಾನೆ. ಆದ್ದರಿಂದ ಸತ್ಯವದನವು ಇಹಪರದ ಅಭ್ಯುದಯಕ್ಕೆ ಕಾರಣವು ಎಂಬುದು ಸಿದ್ಧವಾಯಿತು.

# ಭಗವದ್ಭಕ್ತಿ

ಭಗವಂತನು ನಿರ್ಗುಣನೂ, ನಿರಾಕಾರನೂ, ನಿಷ್ಕ್ರಿಯನೂ ಆಗಿದ್ದರೂ ಭಕ್ತರ ರಕ್ಷಣೆಗಾಗಿ ಸಾಕಾರನೂ ಸಗುಣನೂ ಸಕ್ರಿಯನೂ ಆಗಿ ತೋರಿಕೊಳ್ಳುತ್ತಾನೆ. ಆದ್ದರಿಂದ ಭಗವಂತನನ್ನು ಕಾಣುವದು ಸ್ವಲ್ಪವೂ ಕಷ್ಟವಿಲ್ಲ, ಅವನಲ್ಲಿ ಪ್ರೇಮವನ್ನು ತೋರಿಸಿದ ಮಾತ್ರದಿಂದಲೇ ಅವನು ನಮ್ಮ ಆತ್ಮನೇ ಆಗಿದ್ದು ನಮ್ಮ ಭಕ್ತಿಗೆ ಮೆಚ್ಚಿ ನಮ್ಮ ಆಹ್ವಾನವನ್ನು ಮನ್ನಿಸಿ ನಮಗೆ ದರ್ಶನವನ್ನು ಕೊಡುತ್ತಾನೆ.

ಅಹಲ್ಯಾದೇವಿಯು ಎಂತಹ ಪಾಪಕರ್ಮವನ್ನು ಮಾಡಿದವಳು! ಆದರೂ ಪರಮಾತ್ಮನಲ್ಲಿಯೇ ನೈಜವಾದಪ್ರೇಮವನ್ನಿಟ್ಟಿದ್ದರಿಂದ ಪೂತಳಾಗಿ ಪುನಃ ಗೌತಮ ಋಷಿಯನ್ನು ಸೇರಲಿಲ್ಲವೇ?

ವಿವೇಕಶೂನ್ಯನಾದ ಗಜರಾಜನು ಒಂದು ಬಾರಿ ಅನನ್ಯ ಪ್ರೇಮದಿಂದ 'ಭಗವಂತ, ನೀನೇ ಗತಿ, ನೀನೇ ನನ್ನನ್ನು ಉದ್ಧರಿಸಬೇಕು' - ಎಂದು ಸ್ತೋತ್ರಮಾಡಿದ ಮಾತ್ರದಿಂದ ಭಗವಂತನಿಂದ ರಕ್ಷಿಸಲ್ಪಡಲಿಲ್ಲವೇ?

ಚಿಕ್ಕ ಮಗುವಾದ ಅಂದರೆ ಐದು ವರ್ಷದ ಹುಡುಗನಾದ ಧ್ರುವನು ಭಗವಂತನಲ್ಲಿ ಅನನ್ಯವಾದ ಭಕ್ತಿಯನ್ನು ತೋರಿಸಿದ್ದರಿಂದ ಅವನಿಗೆ ಭಗವಂತನು ಸಾಕಾರನಾಗಿ ದರ್ಶನವನ್ನು ಕೊಡಲಿಲ್ಲವೇ?

ಆದ್ದರಿಂದ ಯಾರೇ ಆಗಲಿ, ನಿಷ್ಕಳಂಕವಾದ ಹೃದಯದಲ್ಲಿ ವಿಷಯಗಳ ಆಶೆಯೆಂಬ ಕೊಳೆಯನ್ನು ಹೋಗಲಾಡಿಸಿದ ನಿರ್ಮಲವಾದ ಹೃದಯದಲ್ಲಿ ಬೆಳ್ಳಿಯ ಬೆಟ್ಟದಂತೆ ಬೆಳ್ಳಗಿರುವ, ಮನೋಹರವಾದ ಚಂದ್ರನನ್ನು ಶಿರೋಭೂಷಣವನ್ನಾಗಿ ಮಾಡಿ ಕೊಂಡಿರುವ, ತ್ರಿಶೂಲ, ಡಮರುಗಳನ್ನು ಕೈಯಲ್ಲಿ ಹಿಡಿದುಕೊಂಡಿರುವ, ತಲೆಯಲ್ಲಿ ಗಂಗೆಯನ್ನು ಧರಿಸಿರುವ, ಅಭಯಹಸ್ತವನ್ನು ತೋರುತ್ತಿರುವ, ನಾಗರಾಜನನ್ನೇ ವರ ಭೂಷಣವನ್ನಾಗಿ ಮಾಡಿಕೊಂಡಿರುವ, ಸಕಲಅಂಗಗಳನ್ನೂ ಭಸ್ಮದಿಂದ ಬಳಿದುಕೊಂಡಿ ರುವ, ತತ್ತ್ವನಿಷ್ಠನಾದ ವಿರಕ್ತಶಿರೋಮಣಿಯಾದ ಆದರೂ ಸಕಲೈಶ್ವರ್ಯವನ್ನೂ ಅನುಗ್ರಹಿಸುವಂತಹ ಅರ್ಧನಾರೀಶ್ವರನಾದ-ಅಂದರೆ ಜಗತ್ತಿನ ಉಪಾದಾನ ಕಾರಣನೂ ಮತ್ತು ನಿಮಿತ್ತಕಾರಣನೂ ಆದ - ಪರಮೇಶ್ವರನನ್ನು ಸಂತತವಾಗಿ ಧ್ಯಾನಿಸಬೇಕು.

ಒಬ್ಬ ಭಕ್ತನು ಹೀಗೆಂದು ಹೇಳಿದ್ದಾನೆ: "ನನಗೆ ಧರ್ಮವನ್ನು ಮಾಡಬೇಕೆಂಬ ಆಶೆಯಿಲ್ಲ, ಧನರಾಶಿಯನ್ನು ಸಂಪಾದಿಸಬೇಕೆಂಬ ಆಶೆಯಿಲ್ಲ, ಭೋಗಗಳನ್ನು ಭೋಗಿಸಬೇಕೆಂಬ ಆಶೆಯಿಲ್ಲ, ನನ್ನ ಕರ್ಮಗಳಿಗೆ ತಕ್ಕಂತೆ ಯಾವ ಯಾವದು ಬರುತ್ತದೆಯೋ ಬರಲಿ, ಆದರೆ ಮಾತ್ರ ನನಗೆ ಜನ್ಮಜನ್ಮಾಂತರಗಳಲ್ಲಿಯೂ ನಿನ್ನ ಪಾದ ಕಮಲಗಳಲ್ಲಿ ಅಚಲವಾದ ಭಕ್ತಿಯೊಂದು ಮಾತ್ರ ಸ್ಥಿರವಾಗಿರಲಿ"

ಇದನ್ನು ಕೇಳಿದರೆ ಭಕ್ತಿಯ ಮಹಿಮೆಯು ಎಷ್ಟು ದೊಡ್ಡದು! ಎಂಬುದು ವಿದಿತವಾಗುತ್ತದೆ. ಆದ್ದರಿಂದ ಸರ್ವರೂ ಭಗವದ್ಭಕ್ತರಾಗಿ ನಿಶ್ರೇಯಸ್ಸಿಗೆ ಭಾಗಿಗಳಾಗಲಿ! ಸ್ವಸ್ತ್ಯಸ್ತು .

# ಪರಮಾತ್ಮನ ನಾಮಸ್ಮರಣೆಯ ಮಹಿಮೆ

ಈ ಕಲಿಯುಗದಲ್ಲಿ ಮನುಷ್ಯರಿಗೆ ವೇದೋಕ್ತಯಜ್ಞಾದಿಕರ್ಮಗಳನ್ನುಮಾಡಿ ಶುದ್ಧಚಿತ್ತರಾಗಿ ಹೊಂದಿ ಜ್ಞಾನವನ್ನು ಪಡೆದು ಅದರಿಂದ ನಿತ್ಯಾನಂದ ಸ್ವರೂಪದಲ್ಲಿ ನಿಲ್ಲಲು ಶಕ್ತಿಯು ಕುಂದಿಹೋಗಿದೆ. ಆದರೆ ನಿತ್ಯಾನಂದವನ್ನು ಪಡೆಯಬೇಕೆಂಬ ಇಚ್ಛೆಯು ಮಾತ್ರ ಎಲ್ಲರಿಗೂ ಇದ್ದೇ ಇದೆ. ಈ ಆಶೆಯು, ಕುಂಟನು ಓಡುವ ಆಟದಲ್ಲಿ ಗೆಲ್ಲಬೇಕೆಂಬ ಆಶೆಯುಳ್ಳವನಾದರೆ ಹೇಗೆ ಸಾಧ್ಯವಿಲ್ಲವೋ ಹಾಗಾಯಿತಲ್ಲ! ಎಂದರೆ, ಹಾಗೇನೂ ಇಲ್ಲ, ಅಶಕ್ತರಾದವರಿಗೂ ಮೇಲಕ್ಕೇಳುವದಕ್ಕೆ ಸುಲಭವಾದ ಸಾಧನ ಒಂದಿದೆ. ಅದು ಯಾವದು? ಎಂದರೆ ಪರಮಾತ್ಮನ ನಾಮಸ್ಮರಣೆಯೇ.

ಲೋಕದಲ್ಲಿ ಮಹತ್ಕಾರ್ಯವನ್ನು ಮಾಡಿ ಪ್ರಸಿದ್ಧಿಯನ್ನು ಪಡೆದ ಮನುಷ್ಯನು ಕಣ್ಮರೆಯಾದರೂ ಅವನ ಹೆಸರು ಸ್ಥಿರವಾಗಿರುವದನ್ನು ನೋಡುತ್ತಿದ್ದೇವೆ. ಉದಾಹರಣೆಗೆ ಸರ್. ಎಮ್. ವಿಶ್ವೇಶ್ವರಯ್ಯನವರು ಈಗ ಕಣ್ಮರೆಯಾಗಿದ್ದರೂ ಕನ್ನಂಬಾಡಿ ಕಟ್ಟೆಯನ್ನು ನೋಡಿದಾಗ ಅವರ ಹೆಸರನ್ನು ಹೇಳದೆ ಇರುವವರು ಯಾರು? ಹಾಗೆಯೇ ಭಗವಂತನ ಅವತಾರರೂಪಗಳಾದ ರಾಮ, ಕೃಷ್ಣ ಎಂಬ ನಾಮಗಳು ಮಾತ್ರ ಸದಾ ಕಾಲದಲ್ಲಿಯೂ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡು ಇದ್ದೇ ಇರುತ್ತವೆ.

ಆ ನಾಮಗಳು ಕೂಡ ವಿಷಯಗಳಲ್ಲವೆ? ವಿಷಯಿಯಾದ ಚಿನ್ಮಾತ್ರನಾದ ಪರಮಾತ್ಮನಿಗೆ ಅವು ಹೇಗೆ ಸಂಬಂಧಿಸಿಯಾವು? - ಎಂದರೆ ವಸ್ತುತಃ ಸಂಬಂಧವು

ಯಾವ ರೀತಿಯಲ್ಲಿಯೂ ಹೊಂದದಿದ್ದರೂ ಅವನಲ್ಲಿಯೇ ಅಜ್ಞಾನದಿಂದ ಕಲ್ಪಿತ ವಾಗಿವೆ. ಕಲ್ಪಿತವಾದದ್ದು ಕಲ್ಪನೆಗೆ ಆಧಾರವಾದ ವಸ್ತುವಿಗಿಂತ ಬೇರೆಯಾಗಿರಲು ಸಾಧ್ಯವಿಲ್ಲ. ಅಂದಮೇಲೆ ಭಗವಂತನಲ್ಲಿ ಕಲ್ಪಿತವಾದ ನಾಮರೂಪಗಳು ಭಗವಂತ ನಿಗಿಂತ ಬೇರೆಯಲ್ಲ ಮತ್ತು ಅವು ಭಗವಂತನೇ. ಹಗ್ಗದಲ್ಲಿ ಕಲ್ಪಿತವಾದ ಹಾವು ಎಂಬ ರೂಪವೂ ಹಾವು ಎಂಬ ನಾಮವೂ ಪರಮಾರ್ಥವಾಗಿ ಹಗ್ಗವೇ ಅಲ್ಲವೆ? ಅದರಂತೆ ಪರಮಾತ್ಮನ 'ರಾಮ', 'ಕೃಷ್ಣ' ಎಂಬ ನಾಮಗಳೂ ಪರಮಾತ್ಮನೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದ್ದರಿಂದ ಯಾವಾತನು ವಿಷಯ ವಿಮುಖನಾಗಿ ಸದಾ ಆ ಪರಮಾತ್ಮನ 'ರಾಮ', 'ಕೃಷ್ಣ' ಎಂಬ ನಾಮಗಳನ್ನೇ ಸ್ಮರಿಸುತ್ತಿರುತ್ತಾನೋ ಅವನು ನಿಷ್ಕಲ್ಮಷನಾಗಿ ಜ್ಞಾನವನ್ನು ಪಡೆದು ನಿತ್ಯಾನಂದಸ್ವರೂಪವನ್ನು ಪಡೆದೇ ಪಡೆಯುತ್ತಾನೆ. ಆದ್ದರಿಂದ ಸರ್ವರೂ ಭಗವನ್ನಾಮ ಸ್ಮರಣೆಯನ್ನು ಮಾಡಿ ಸುಖಿಗಳಾಗಲಿ ಎಂದು ಹಾರೈಸುತ್ತೇನೆ.

ಖಖಖಖಖ

# ಉಪಾಸನೆ - 1

ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥ ಗೀ. ೧೨-೮

ಅಂತಃಕರಣವು (1) ಚಿತ್ತ (2) ಅಹಂಕಾರ, (3) ಮನಸ್ಸು (4) ಬುದ್ಧಿ - ಎಂಬ ನಾಲ್ಕು ವೃತ್ತಿಗಳನ್ನುಳ್ಳದ್ದಾಗಿದೆ.

**1) ಚಿತ್ತ**ವೆಂದರೆ ಹೊರಗಿನ ಪದಾರ್ಥಗಳ ಸಾಮಾನ್ಯವಾದ ತಿಳಿವಳಿಕೆ. ಇದು ನಿಶ್ಚಯಾತ್ಮಕವೂ ಅಲ್ಲ, ವಿವೇಕಾತ್ಮಕವೂ ಅಲ್ಲ, ಸಾಮಾನ್ಯವಾದ ಅರಿವು. ಈ ಅರಿವು ಗಿಡ ಮರಬಳ್ಳಿಗಳಿಗೂ ಇರುತ್ತದೆ. ಮನನಮಾಡದೆ ಸಾಮಾನ್ಯವಾಗಿ ತಾನಾಗಿಯೇ ಬರುವ ತಿಳಿವಳಿಕೆ. ಇದಕ್ಕೆ ಯೋಗಿಗಳು ಪ್ರಾಧಾನ್ಯವನ್ನು ಕೊಟ್ಟು ಚಿತ್ತವೃತ್ತಿಯನ್ನು ನಿರೋಧಿಸ ಬೇಕೆಂದು ಹೇಳುತ್ತಾರೆ. ಆದರೆ ಒಂದು ವಿಧವಾದ ವೃತ್ತಿಯನ್ನು ತಡೆಗಟ್ಟಿದರೆ ಇನ್ನೊಂದು ವಿಧವಾದ ವೃತ್ತಿಯು ಎದ್ದುಕೊಳ್ಳುತ್ತದೆ.

**2) ಅಹಂಕಾರ :** ನಮಗಿಂತ ಹೊರಗಿನದಾದ ಹಣ, ಮನೆ, ಹೊಲ ಇವುಗಳಲ್ಲಿ ತಾದಾತ್ಮ್ಯವನ್ನು ಹೊಂದಿ ನಾನು ಹಣವಂತ, ವಿದ್ಯಾವಂತ, ಬಲಿಷ್ಠ

ಎಂದುಮುಂತಾಗಿ ಅಭಿಮಾನವುಳ್ಳವರಾಗಿರುತ್ತೇವೆ. ಈ ಅಭಿಮಾನವೇ ಅಹಂಕಾರ. ಇದು ಸರ್ವರನ್ನೂ ಆಶ್ರಯಿಸಿಕೊಂಡಿದೆ.

**3) ಮನಸ್ಸು :** ಎಂದರೆ ಇದು ಹಗ್ಗವೊ? ಹಾವೊ? - ಎಂದು ಸಂಕಲ್ಪ ವಿಕಲ್ಪಾತ್ಮಕವಾದದ್ದು. ಇದು ಪ್ರತಿಯೊಬ್ಬರನ್ನೂ ಆಶ್ರಯಿಸಿದೆ. ಶ್ರೀರಾಮನು ಕಾಣದ ಹಾಗೆ ನಿಂತುಕೊಂಡು ವಾಲಿಯನ್ನು ಹೊಡೆದದ್ದು ಸರಿಯೆ? ಎಂದು ಈಗಲೂ ಜನರು ಸಂಶಯಪಡುತ್ತಲೇ ಇದ್ದಾರೆ. ತಾರ್ಕಿಕರು ಇದಕ್ಕೆ ಪ್ರಾಧಾನ್ಯವನ್ನು ಕೊಟ್ಟಿರುತ್ತಾರೆ.

**4) ಬುದ್ಧಿ : 'ನಿಶ್ಚಯಾತ್ಮಿಕಾವೃತ್ತಿಃ ಬುದ್ಧಿಃ'** ಮೊದಲು ಬಂದ ಸಂದೇಹವನ್ನು ವಿಚಾರಮಾಡಿ ಕಳೆದುಕೊಂಡು ಇದು ಹೀಗೆಯೇ ಸರಿ- ಎಂದು ವಿವೇಕಮಾಡಿ ನಿರ್ಣಯಮಾಡುವ ವೃತ್ತಿ , ಸಾಂಖ್ಯರು ಈ ಬುದ್ಧಿಗೆ ಪ್ರಾಧಾನ್ಯವನ್ನು ಕೊಟ್ಟು ಪ್ರಕೃತಿಯು ಪುರುಷನಲ್ಲ, ಪುರುಷನು ಪ್ರಕೃತಿಯಲ್ಲ, ಇವೆರಡನ್ನೂ ಒಂದನ್ನು ಮತ್ತೊಂದನ್ನಾಗಿ ತಿಳಿಯುವದು ಅವಿವೇಕ. ಪ್ರಕೃತಿಗೂ ಪುರುಷನಿಗೂ ಸಂಬಂಧವಿಲ್ಲವೆಂದು ನಿಶ್ಚಯಿಸಿ ಕೊಳ್ಳುವ ವೃತ್ತಿಯೇ ಬುದ್ಧಿ ಎಂದು ಹೇಳುತ್ತಾರೆ.

(1) ಅದ್ವೈತವೇದಾಂತಿಗಳು ಈ ನಾಲ್ಕು ವಿಧವಾದ ವೃತ್ತಿಗಳನ್ನೂ ಜಯಿಸಿ ಪರಮಾತ್ಮನ ಕಡೆಗೇ ಇವು ಹರಿಯುವಂತೆ ಮಾಡಬೇಕೆನ್ನುತ್ತಾರೆ. ಚಿತ್ತವನ್ನು ಜಯಿಸ ಬೇಕಾದರೆ ಹೊರಗಿನ ವಿಷಯಗಳನ್ನು ಧ್ಯಾನಿಸದೆ ಪರಮಾತ್ಮನನ್ನೇ ಧ್ಯಾನಿಸುವಂತೆ ಪ್ರಯತ್ನಮಾಡಬೇಕು.

(2) ಅಹಂಕಾರವನ್ನು ಜಯಿಸಬೇಕಾದರೆ ಹೊರಗಿನ ವಸ್ತುಗಳಿಗೂ ನನಗೂ ಏನೂ ಸಂಬಂಧವಿಲ್ಲವೆಂದು ವಿಚಾರದಿಂದ ತಿಳಿದು ಅಮಾನಿತ್ವ ಅದಂಭಿತ್ವ ಮುಂತಾದ ಪ್ರತಿಪಕ್ಷಭಾವನೆಗಳನ್ನು ಸಾಧಿಸಬೇಕು.

(3) ಮನಸ್ಸನ್ನು ಜಯಿಸಲು ವಿಷಯಗಳ ಚಿಂತನೆಯನ್ನು ಸರ್ವಥಾ ತ್ಯಾಗ ಮಾಡಿ ಭಗವಂತನನ್ನೇ ಧ್ಯಾನಮಾಡುವದಕ್ಕೆ ಉಪಕ್ರಮಿಸಿದರೆ, ಮನಸ್ಸು ಭಗವಂತನಲ್ಲಿ ಕರಗಿಹೋಗುತ್ತದೆ.

(4) ಬುದ್ಧಿಯನ್ನು ಜಯಿಸಲು, **"ಇದಂ ಶರೀರ ಕೌನ್ತೇಯ ಕ್ಷೇತ್ರಮಿತ್ಯ ಭಿಧೀಯತೇ"** ಎಂದು ಹೇಳಿರುವಂತೆ, ಆತ್ಮವ್ಯತಿರಿಕ್ತವಾದದ್ದೆಲ್ಲವೂ ಕ್ಷೇತ್ರ ಅಂದರೆ ವಿಷಯ. ಅದಕ್ಕೆ ಸ್ವತಂತ್ರಸತ್ತೆಯೇ ಇಲ್ಲ, ಆತ್ಮನ ಸತ್ತೆಯನ್ನು ತೆಗೆದುಕೊಂಡು ನಾನು

ಇದ್ದೇನೆ. ಎಂದು ಅನ್ನುತ್ತದೆ. ಆತ್ಮನನ್ನು ವಿಷಯದಿಂದ ಬೇರ್ಪಡಿಸಿದರೆ ವಿಷಯ ವಿರುವದೇ ಇಲ್ಲ ಆತ್ಮನೊಬ್ಬನೇ ಇರುತ್ತಾನೆ ಎಂದು ಮುಂತಾದ ವಿಚಾರದಿಂದ ಆತ್ಮೈಕತ್ವವನ್ನೇ ನಿಶ್ಚಯಿಸಿದರೆ ಬುದ್ಧಿಯು ಆತ್ಮನಲ್ಲಿಯೇ ಲಯವಾಗುತ್ತದೆ. ಇದನ್ನೇ ಭಗವಂತನು ನನ್ನಲ್ಲಿಯೇ ಮನಸ್ಸನ್ನಿಡು, ನನ್ನಲ್ಲಿಯೇ ಬುದ್ಧಿಯನ್ನೂ ಇಡು. ಅನಂತರ ನೀನು ನನ್ನ ಸ್ವರೂಪದಲ್ಲಿಯೇ ನಿಸ್ಸಂಶಯವಾಗಿ ನಿಲ್ಲುತ್ತೀಯೆ – ಎಂದು ಉಪದೇಶಿಸಿರುತ್ತಾನೆ.

# ಉಪಾಸನೆ - 2

ಪರಮೇಶ್ವರನು ನಿರ್ಗುಣನಿರಾಕಾರನಾಗಿ ಸರ್ವವ್ಯಾಪಿಯಾಗಿದ್ದರೂ ಉಪಾಸ ಕರ ಇಷ್ಟದಂತೆ ಸಗುಣಸಾಕಾರನಾಗಿ ತೋರಿಕೊಳ್ಳುತ್ತಾನೆ. ಉಪಾಸನೆ – ಎಂದರೆ ಭಾವನೆ, ಮನಸ್ಸಿನ ವೃತ್ತಿ. ಮನಸ್ಸು ಸದಾ ಮನೆ, ಮಠ, ಹೊಲ, ಹಣ, ಮಕ್ಕಳು, ದುಡ್ಡುಕಾಸು – ಇತ್ಯಾದಿಗಳನ್ನು ಭಾವಿಸುತ್ತಲೇ ಇರುತ್ತದೆ. ಯಾವ ಭಾವನೆಯನ್ನೂ ಮಾಡದೆ ಒಂದು ಕ್ಷಣವೂ ಸುಮ್ಮನೆ ಇರುವದಕ್ಕೆ ಮನಸ್ಸಿಗೆ ಸಾಧ್ಯವೇ ಇಲ್ಲ. ಈ ಭಾವನೆಗಳು ಮನುಷ್ಯನನ್ನು ಕೆಳಕ್ಕೆ ಇಳಿಸತಕ್ಕ ಭಾವನೆಗಳಾಗಿರುತ್ತವೆ. ಯಾವಾತನು ಈ ವಿಷಯಗಳ ಭಾವನೆಯನ್ನು ಬಿಟ್ಟು ಭಗವಂತನ ಭಾವನೆಯನ್ನು ಪ್ರಾರಂಭಿಸುತ್ತಾನೋ ಆಗ ಅವನು ಮನುಷ್ಯತ್ವಕ್ಕಿಂತ ಉತ್ತಮಸ್ಥಿತಿಯನ್ನು ಪಡೆಯಲು ಸಿದ್ಧನಾಗುತ್ತಾನೆ.

ಭಗವದ್ಭಾವನೆಯನ್ನು ಮಾಡುವದಕ್ಕೆ ಮೊದಲು ಭಾವನೆಗೆ ಆಶ್ರಯವಾದ ಮನಸ್ಸನ್ನು ಸಂಸ್ಕರಿಸಬೇಕು. ಸಂಸ್ಕಾರವೆಂದರೆ ಅದರಲ್ಲಿರತಕ್ಕ ದೋಷವನ್ನು ಕಳೆಯು ವದು ಮತ್ತು ಗುಣಗಳನ್ನು ಹೆಚ್ಚಿಸುವದು. ಮನಸ್ಸಿನಲ್ಲಿರತಕ್ಕ ದೋಷಗಳು ಕಾಮ ಕ್ರೋಧಾದಿಗಳು. ಇವುಗಳನ್ನು ಪ್ರತಿಪಕ್ಷಭಾವನೆಯಿಂದ ಜಯಿಸಬೇಕು. ಗುಣಗಳು ಎಂದರೆ ಸದ್ಗುರುವಿನ ಉಪದೇಶದಲ್ಲಿ ನಂಬಿಕೆ, ಭಗವಂತನಲ್ಲಿ ಭಕ್ತಿ – ಮುಂತಾದವು ಗಳನ್ನು ಬೆಳೆಯಿಸಬೇಕು. ಹೀಗೆ ದೋಷಗಳನ್ನು ಕಳೆಯಲು ಗುಣಗಳನ್ನು ಹೆಚ್ಚಿಸಲು ಮಹಾತ್ಮರ ಸೇವೆಯನ್ನು ಮಾಡಬೇಕು. ಮಹಾತ್ಮರು ಎಂದರೆ ಸರ್ವವ್ಯಾಪಕನಾದ ಪರ ಬ್ರಹ್ಮವನ್ನು ತಮ್ಮ ಆತ್ಮನನ್ನಾಗಿ ತಿಳಿದವರು, ಸರ್ವರಲ್ಲೂ ದಯಾಮಯರಾಗಿರುವ ವರು. ಇತರರ ದುಃಖವನ್ನು ನೋಡಿದರೆ ಕನಿಕರಪಡತಕ್ಕವರು. ಇಂಥವರ ಸೇವೆ ಯಿಂದ ಮನಸ್ಸು ಶುದ್ಧವಾಗುತ್ತದೆ.

ಅನಂತರ ಶುದ್ಧವಾದ ಮನಸ್ಸಿನಿಂದ **'ತಂ ಯಥಾ ಯಥೋಪಾಸತೇ ತತ್ತ ದೇವ ಭವತಿ'** ಎಂಬಂತೆ ಪರಮೇಶ್ವರನ ಗುಣ, ರೂಪ – ಇವುಗಳನ್ನು ಮೊದಲು ಧ್ಯಾನಮಾಡುವದಕ್ಕೆ ಉಪಕ್ರಮಿಸಿದರೆ ಸಗುಣರೂಪಭಗವಂತನ ಸಾಕ್ಷಾತ್ಕಾರವಾಗುತ್ತದೆ. ಅನಂತರ ನಿರ್ಗುಣನಿರಾಕಾರವಾದ ಬ್ರಹ್ಮವನ್ನು ಸಂತತವಾಗಿ ಧ್ಯಾನಮಾಡುವ ಶಕ್ತಿಯು ಬರುತ್ತದೆ.

ಈ ಉಪಾಸನೆಯನ್ನು ಒಂದು ದಿನದಲ್ಲಿ ಯಾವಾಗಲೋ ಒಂದು ಕ್ಲಿಪ್ತ ಕಾಲ ದಲ್ಲಿ ಮಾಡಿದರೆ ಸಾಲದು. ಉಪಾಸನೆಯು ಬಲಿಯಬೇಕಾದರೆ ಸದಾಕಾಲದಲ್ಲೂ ಇನ್ನೊಂದು ವಿಷಯವಿಚಾರವನ್ನು ಮನಸ್ಸಿಗೆ ತಂದುಕೊಳ್ಳದೆ ಪರಬ್ರಹ್ಮವನ್ನೇ ಚಿಂತಿಸ ಬೇಕು. ಹೀಗೆ ಚಿಂತಿಸಿದರೆ ಆ ಪರಬ್ರಹ್ಮವು ತನ್ನ ಆತ್ಮವೇ ಆಗಿರುತ್ತದೆ – ಎಂಬ ಜ್ಞಾನವು ಉದಯಿಸುತ್ತದೆ. ಶ್ರೀಶಂಕರಾಚಾರ್ಯರು ಉಪಾಸನೆಯ ಲಕ್ಷಣವನ್ನು ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದ ಮೂರನೆಯ ಶ್ಲೋಕದ ಭಾಷ್ಯದಲ್ಲಿ ಹೀಗೆ ಹೇಳಿರುತ್ತಾರೆ :

**'ಉಪಾಸನಂ ನಾಮ ಯಥಾಶಾಸ್ತ್ರಂ ಉಪಾಸ್ಯಸ್ಯ ಅರ್ಥಸ್ಯ ವಿಷಯೀ ಕರಣೇನ ಸಾಮೀಪ್ಯಮುಪಗಮ್ಯ ತೈಲಧಾರಾವತ್ ಸಮಾನಪ್ರತ್ಯಯಪ್ರವಾಹೇಣ ದೀರ್ಘಕಾಲಂ ಯದಾಸನಂ ತದುಪಾಸನಮ್ ಆಚಕ್ಷತೇ'**

ಶಾಸ್ತ್ರದಲ್ಲಿ ಹೇಳಿರುವಂತೆ ಉಪಾಸ್ಯನಾದ ಪರಮಾತ್ಮನನ್ನು ಧ್ಯಾನದಿಂದ ವಿಷಯೀಕರಿಸಿಕೊಳ್ಳುವದರಿಂದ ಸಾಮೀಪ್ಯವನ್ನು ಹೊಂದಿ ತೈಲಧಾರೆಯು ಅವಿಚ್ಛಿನ್ನ ವಾಗಿ ಪ್ರವಹಿಸುವಂತೆ ಭಗವಂತನನ್ನು ಧ್ಯಾನಿಸುವ ಪ್ರತ್ಯಯವನ್ನು ಪ್ರವಾಹದಂತೆ ಅವಿಚ್ಛಿನ್ನವಾಗಿ ಹರಿಸಿ ಬಹುಕಾಲ ಇರುವದೇ ಉಪಾಸನೆಯು– ಎಂದೇ ಹೇಳಿರುತ್ತಾರೆ.

# ತ್ವಮೇವ ಸರ್ವಂ ಮಮ ದೇವ ದೇವ

'ಭಗವಂತನೆ, ನೀನೇ ನನಗೆ ತಾಯಿ, ತಂದೆ, ಬಂಧು, ಸ್ನೇಹಿತ, ವಿದ್ಯೆ, ಹಣ ಎಲ್ಲವೂ ಆಗಿರುತ್ತೀಯೆ; ಏಕೆಂದರೆ ಎಲ್ಲವೂ ನೀನೇ' ಎಂಬ ಶ್ಲೋಕವನ್ನು ನೀವೆಲ್ಲರೂ ಕೇಳಿರುತ್ತೀರಿ. ಈ ಶ್ಲೋಕದಲ್ಲಿ ಅಡಗಿರುವ ವೇದಾಂತಸಿದ್ಧಾಂತವನ್ನು ಕುರಿತು ಇಲ್ಲಿ ವಿಚಾರಮಾಡೋಣ.

ಲೋಕದಲ್ಲಿ ತಾಯಿ ಎಂಬುದು ದೊಡ್ಡ ವಸ್ತು. ತಾಯಿಯ ಅನುಗ್ರಹವಿಲ್ಲದೆ ನಮಗೆ ಈ ಶರೀರವೇ ಬರುವಂತಿಲ್ಲ; ಚಿನ್ನವೇ ಇಲ್ಲದೆ ಹೇಗೆ ಒಡವೆಯಾಗಲಾರದೋ ಹಾಗೆ ತಾಯಿಯಿಲ್ಲದೆ ಜನ್ಮವೇ ಇರಲಾರದು. ಇಲ್ಲಿ ಭಗವಂತನೇ ತಾಯಿ ಎಂದರೆ ಜಗತ್ತಿಗೆ ಉಪಾದಾನಕಾರಣನಾಗಿರುತ್ತಾನೆ ಎಂದಭಿಪ್ರಾಯ. ಉಪನಿಷತ್ತುಗಳಲ್ಲಿಯೂ 'ಬ್ರಹ್ಮವೇ ಬಹುವಾಗಬೇಕೆಂದು ಬಯಸಿತು; ಅದು ತಾನೇ ಸತ್ತೂ ತ್ಯತ್ತೂ ಆಯಿತು. ಎಲ್ಲವೂ ಆಯಿತು, ಎಂದು ಹೇಳಿದೆ. ಶ್ರೀಬಾದರಾಯಣರೂ ತಮ್ಮ ಸೂತ್ರಗಳಲ್ಲಿ **'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾನ್ತಾನುಪರೋಧಾತ್'** ಎಂಬುದಾಗಿ ಬ್ರಹ್ಮವೇ ಜಗತ್ತಿಗೆ ಉಪಾದಾನಕಾರಣವೆಂದು ಸವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಬ್ರಹ್ಮವನ್ನು 'ಭೂತ ಯೋನಿ'ಯೆಂದೂ ಮತ್ತೊಂದು ಉಪನಿಷತ್ತಿನಲ್ಲಿ ಕರೆದಿದೆ. ಹೀಗೆ ವಿಚಾರ ಮಾಡಿ ದಂತೆಲ್ಲ ಬ್ರಹ್ಮವೇ ಜಗದುಪಾದಾನ ಕಾರಣವೆಂಬುದು ದೃಢವಾಗುವದು.

ಇನ್ನು 'ತಂದೆಯು ಭಗವಂತನು' ಎಂದರೇನು?ಎಂಬುದನ್ನು ವಿಚಾರಿಸೋಣ. ದೃಷ್ಟಾಂತದಲ್ಲಿ ಚಿನ್ನವಿಲ್ಲದೆ ಒಡವೆಯಾಗಲಾರದೆಂದು ತಿಳಿಸಿದ್ದೇನಷ್ಟೆ! ಆದರೆ ಬರಿಯ ಚಿನ್ನವು ತಾನಾಗಿಯೇ ತಾನಿದ್ದಲ್ಲೇ ಒಡವೆಯಾಗಲಾರದು. ಅದನ್ನು ಒಡವೆಯಾಗಿ ಮಾರ್ಪಡಿಸುವ ಅಕ್ಕಸಾಲಿಗನು ಬೇಕು; ಅವನು ಆಭರಣನಿರ್ಮಾಣ ಕುಶಲನೂ ಆಗಿರಬೇಕು. ಹಾಗೆ ಇಲ್ಲಿ ಯಾರು ಜಗತ್ತಿಗೆ ನಿಮಿತ್ತಕಾರಣನು? ಎಂದು ಹೇಳಿದರೆ ಅದೂ ಪರಮೇಶ್ವರನೇ ಎಂದು ತಿಳಿಸುತ್ತಾರೆ. ಆದ್ದರಿಂದಲೇ ಅವನು ಜಗತ್ತಿಗೆ ತಂದೆ ಯಾಗಿದ್ದಾನೆ. ಸರ್ವಜ್ಞನೂ ಸರ್ವಶಕ್ತನೂ ಆದ ಭಗವಂತನು ತನ್ನ ಲೀಲಾ ಮಾತ್ರದಿಂದ ಈ ಜಗತ್ತೆಲ್ಲವನ್ನೂ ಸೃಷ್ಟಿಸಬಲ್ಲನು. **'ಲೋಕವತ್ತು ಲೀಲಾಕೈವಲ್ಯಮ್'** ಎಂಬ ಸೂತ್ರದಲ್ಲಿ ಬಾದರಾಯಣರು ಇದನ್ನು ವಿವರಿಸಿದ್ದಾರೆ.

ಹೀಗೆ ತಂದೆಯೂ ತಾಯಿಯೂ ಆದ ಪರಮೇಶ್ವರನೇ ಉಳಿದೆಲ್ಲವೂ ಆಗಿರು ತ್ತಾನೆಂದರೆ ಆಶ್ಚರ್ಯವೇನೂ ಇಲ್ಲ. ಒಂದುಮಗುವಿಗೆ ತಂದೆತಾಯಿಗಳಿದ್ದರೆ ಸಾಕು. ಉಳಿದದ್ದೆಲ್ಲವೂ ಅವರೇ ಆಗುತ್ತಾರೆ. ಆ ಮಗುವಿಗೆ ಆಹಾರ, ನಿದ್ರೆ, ಶರೀರ ಪೋಷಣೆ, ಬೆಳವಣಿಗೆ, ವಿದ್ಯಾಭ್ಯಾಸ, ಹಣಕಾಸು, ಎಲ್ಲವೂ ತಂದೆತಾಯಿಗಳೇ ಆಗಿರುತ್ತಾರೆ ಎಂದರೆ ಎಲ್ಲವನ್ನೂ ನಿರ್ವಹಿಸುತ್ತಾರೆ. ಹಾಗೆಯೇ ಇಡಿಯ ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯ, ಆಗತಿ, ಗತಿ, ವಿದ್ಯೆ, ಅವಿದ್ಯೆ ಎಲ್ಲವೂ ಭಗವಂತನಿಂದಲೇ. ಆದ್ದರಿಂದ ಅವನಿಗಿಂತ ಬೇರೆ ಯಾರೂ ಈ ಜಗತ್ತಿಗೆ ತಂದೆತಾಯಿಗಳಿರುವದಿಲ್ಲ. ಆದ್ದರಿಂದಲೇ ಅವನೇ ಸರ್ವವೂ ಆಗಿರುತ್ತಾನೆಂದು ಈ ಶ್ಲೋಕದಲ್ಲಿ ತಿಳಿಸಿದೆ.

ಇಲ್ಲಿ ಒಂದು ಶಂಕೆ; ಸೃಷ್ಟಿಯಲ್ಲಿ ತಂದೆ, ತಾಯಿ, ಸ್ನೇಹಿತ, ಹಣ, ವಿದ್ಯೆ - ಮುಂತಾಗಿ ಎಲ್ಲವೂ ಬೇರೆಬೇರೆಯಾಗಿರುತ್ತದೆ. ಆದ್ದರಿಂದ ವ್ಯವಹಾರದಲ್ಲೇನೂ ತೊಡಕಿರುವದಿಲ್ಲ, ವೇದಾಂತಸಿದ್ಧಾಂತದಂತೆ ಎಲ್ಲವೂ ಒಬ್ಬ ದೇವನೇ ಎಂದಾದರೆ ವ್ಯವಹಾರ ಸಾಗುವದು ಹೇಗೆ? ವ್ಯಾವಹಾರಿಕವಾದ ಅನುಭವಕ್ಕೆ ವಿರುದ್ಧವಾಗಿ ಕಂಡು ಬರುತ್ತಿರುವ ಈ ಸಿದ್ಧಾಂತವೇ ತಪ್ಪಾಗಿರಬಹುದಲ್ಲವೆ? ಎಲ್ಲವೂ ಒಂದೇ ಎಂಬ ಅನುಭವ ಯಾರಿಗೂ ಕಂಡುಬರುತ್ತಿಲ್ಲ, ಹೀಗಿರುವದರಿಂದ ಈ ಉಪದೇಶವನ್ನು ನಂಬುವದು ಹೇಗೆ? ಎಂದು ಯಾರಿಗಾದರೂ ಸಂಶಯವು ಬರಬಹುದಾಗಿದೆ. ಇದಕ್ಕೆ ಉತ್ತರವೇನೆಂದರೆ: ವೇದಾಂತಸಿದ್ಧಾಂತವು 'ಪರಮೇಶ್ವರನು ಒಬ್ಬನೇ ಎಲ್ಲವೂ'- ಎಂದು ಹೇಳುತ್ತಿದೆಯೇ ಹೊರತು ಆ ಪರಮೇಶ್ವರನು ತನ್ನ ಮಾಯಾಶಕ್ತಿಯಿಂದ ವಿಚಿತ್ರವಾದ ನಾಮರೂಪಗಳಾಗಿ ಹೊರತೋರಿಕೊಂಡು ಜಗತ್ತಿನ ವ್ಯವಹಾರಗಳಿಗೆಲ್ಲ ಆಶ್ರಯನಾಗಿರುವನೆಂಬುದನ್ನೇನೂ ಅಲ್ಲಗಳೆಯುತ್ತಿಲ್ಲ, ಉಪನಿಷತ್ತು ತಿಳಿಸುವಂತೆ **ಯಸ್ಯೈಷ ಮಹಿಮಾ ಭುವಿ** ಈ ಸೃಷ್ಟಿಯೆಂಬ ವಿಚಿತ್ರವೆಲ್ಲವೂ ಆ ಭಗವಂತನ ಮಹಿಮೆಯೇ ಆಗಿರುವದರಿಂದ ಸಿದ್ಧಾಂತಕ್ಕೇನೂ ಬಾಧೆಯಾಗಲಾರದು. ಉದಾ ಹರಣೆಗೆ ಒಬ್ಬನೇ ಮಾಯಾವಿಯು ತಾನೊಬ್ಬನೇ ಇದ್ದುಕೊಂಡಿದ್ದರೂ ತನಗಿಂತ ಬೇರೆಯಾದ ಜನರು, ವಸ್ತುಗಳು, ಹಣ ಎಲ್ಲವೂ ಆಗಿದ್ದುಕೊಂಡು ಆಕಾಶದಲ್ಲಿ ಏಣಿ ಹಾಕಿ ಹತ್ತಿ ಯುದ್ಧಮಾಡಿದಂತೆ ಯಕ್ಷಿಣಿ ತೋರಿಸುವದಿಲ್ಲವೆ? ಅದೆಲ್ಲ ಅವನಿಗಿಂತ ನಿಜವಾಗಿ ಬೇರೆಯಿತ್ತೆ? ಹಾಗೆಯೇ ಮಹಾಮಾಯಾವಿಯಾದ ಪರಮೇಶ್ವರನೂ ಕೂಡ ತನ್ನ ಮಾಯಾಪ್ರಕೃತಿಯ ವ್ಯಾಪಾರದಿಂದ ಅಖಿಲಾಂಡಕೋಟಿಬ್ರಹ್ಮಾಂಡಗಳನ್ನು ಸೃಷ್ಟಿ ಮಾಡಿ ತನ್ನ ಲೀಲೆಯನ್ನು ತೋರ್ಪಡಿಸಿ ಕೊನೆಗೆ ತಾನೊಬ್ಬನೇ ಇದ್ದುಕೊಂಡಿರುವನು. ಆದ್ದರಿಂದ ಎಲ್ಲವೂ ಪರಮೇಶ್ವರನೇ ಎಂಬುದು ತಪ್ಪೇನೂ ಇಲ್ಲ,

ಈ ಸಿದ್ಧಾಂತವನ್ನೊಪ್ಪದ ಸಾಂಖ್ಯರೂ, ನೈಯಾಯಿಕರೂ, ಉಳಿದ ದರ್ಶನ ಕಾರರೂ ಸಹ ಪರಮೇಶ್ವರನನ್ನು ಕೇವಲ ನಿಮಿತ್ತಕಾರಣನೆಂದೋ, ಉಪಾಸೀನನೆಂದೋ ಪ್ರತಿಪಾದಿಸುತ್ತಾರೆ. ಆದರೆ ಆ ದರ್ಶನಗಳೆಲ್ಲ ಪರಸ್ಪರವಿರುದ್ಧವಾಗಿದ್ದು ತರ್ಕದ ಮೇಲೆ ನಿಂತಿರುವದರಿಂದ ನೆಲೆಯಿಲ್ಲದವುಗಳಾಗಿವೆ. ಉಪನಿಷತ್ ಸಿದ್ಧಾಂತವನ್ನು ಶ್ರುತಿ ಯುಕ್ತ್ಯನುಭವಾನುಸಾರವಾಗಿ ಚಿಂತನೆಮಾಡುವವರಿಗೆ ಉಳಿದ ದರ್ಶನಗಳ ದೌರ್ಬಲ್ಯವೂ ವೇದಾಂತೋಪದೇಶಗಳ ಅಸಾಧಾರಣತತ್ವವೂ ಮನದಟ್ಟಾಗುವದು. ಸಾಮಾನ್ಯರಾದ

ವರು ದೊಡ್ಡವರು ತಿಳಿಸಿದಂತೆ 'ಎಲ್ಲವೂ ನನಗೆ ಆ ಭಗವಂತನೇ' ಎಂಬ ಅನುಸಂಧಾನ ವನ್ನು ಹೃತ್ಪೂರ್ವಕವಾಗಿ ಮಾಡುತ್ತಿದ್ದರೆ ಭಗವಂತನ ತತ್ತ್ವವು ಅವರ ಮನದಲ್ಲೇ ಮಿಂಚುವದು.

ಉಉಉಉಉ

# ಕರ್ತವ್ಯೋ ಧರ್ಮಸಂಗ್ರಹಃ

**ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ ।**
**ನಿತ್ಯಂ ಸಂನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ ॥**

ಈ ಶ್ಲೋಕವನ್ನು ತಾವು ಎಲ್ಲಿಯಾದರೂ ಕೇಳಿರಬಹುದು. ಇದರ ಅರ್ಥವೂ ಸುಲಭವಾಗಿದೆ. ಆದರೂ ಈ ಶ್ಲೋಕವನ್ನು ಅನುಗ್ರಹಿಸಿರುವ ಋಷಿಗಳ ಅಭಿಪ್ರಾಯ ವೇನೆಂಬುದನ್ನು ಮನನಮಾಡುವದರಿಂದ ತುಂಬ ಲಾಭವಿದೆ. ಆದ್ದರಿಂದ ವಿಚಾರ ಮಾಡೋಣ.

ಮೊದಲನೆಯದಾಗಿ 'ಶರೀರಗಳು ಅನಿತ್ಯ' ಎಂದಿರುತ್ತಾರೆ. ಇಲ್ಲಿರುವ 'ಶರೀರಾಣಿ' ಎಂಬ ಬಹುವಚನವು ಜೀವನಿಗೆ ಅನೇಕ ಶರೀರಗಳು ಬಂದು ಹೋಗು ತ್ತವೆಯೆಂದೂ ಜೀವನು ಮಾತ್ರ ನಿತ್ಯನೆಂದೂ ತಿಳಿಸುತ್ತದೆ. ಆದರೂ ಯಾವ ಯಾವ ಶರೀರಗಳು ಬರುತ್ತವೆಯೋ ಅವುಗಳೆಲ್ಲದರಿಂದಲೂ 'ಧರ್ಮಸಂಗ್ರಹ'ವನ್ನು ಮಾಡಲು ಸಾಧ್ಯವಾಗುವದಿಲ್ಲ. ಉದಾಹರಣೆಗೆ ಜೀವನಿಗೆ ಹಸು, ಕತ್ತೆ, ನಾಯಿ – ಮುಂತಾದ ಶರೀರಗಳು ಬಂದಾಗ ಏನುತಾನೆ ಧರ್ಮವನ್ನು ಮಾಡಲಾದೀತು? ಆದ್ದರಿಂದ ಮನುಷ್ಯ ಶರೀರವೊಂದನ್ನು ಬಿಟ್ಟರೆ ಉಳಿದವುಗಳೆಲ್ಲ ಕರ್ಮಫಲಭೋಗಕ್ಕಾಗಿ ಸೃಷ್ಟ ವಾಗಿವೆಯಾದ್ದರಿಂದ ಅಂಥ ಶರೀರಗಳಿಂದ ಜೀವನಿಗೆ ಯಾವ ಸದ್ಗತಿಯೂ ಉಂಟಾ ಗಲು ಅವಕಾಶವೇ ಇರುವದಿಲ್ಲ. ಇನ್ನು ಮನುಷ್ಯ ಶರೀರಗಳೇ ಅನೇಕಬಾರಿ ಬರಬಹು ದಲ್ಲ! ಎಂದರೆ ಆಗಬಹುದು. ಆದರೇನು? ಅವೂ ಅನಿತ್ಯಗಳು. ಏಕೆಂದರೆ ಪರಮಾವಧಿ ನೂರುವರ್ಷ ಆಯುಸ್ಸೆಂತ ಇಟ್ಟುಕೊಂಡರೂ ಅನಂತರ ಇಲ್ಲವಾಗುವವು. ಆದರೆ ಮಾಡಬೇಕಾದ ಧರ್ಮವು ಬಹಳವಾಗಿರುತ್ತವೆ. ಆದ್ದರಿಂದಲೇ ಶ್ರುತಿಯು 'ಶಾಸ್ತ್ರೀಯ ಕರ್ಮಗಳನ್ನು ಮಾಡಿಕೊಂಡೇ ನೂರು ವರ್ಷಗಳು ಬದುಕಿರಲೆಳಸಬೇಕು' ಎಂದು ತಿಳಿಸುತ್ತಿದೆ. ಅಂತೂ ಮನುಷ್ಯಶರೀರವು ಇದ್ದುಕೊಂಡಿದ್ದಾಗ, ಅದು ಧರ್ಮಾನುಷ್ಠಾನಕ್ಕೆ ತಕ್ಕದ್ದಾಗಿರುವಾಗ ಉಪಯೋಗಿಸಿಕೊಳ್ಳುವವನು ಜಾಣನು ಎಂದರ್ಥ.

ಆದರೆ ಧರ್ಮಾನುಷ್ಠಾನಮಾಡಲು ಶರೀರವೊಂದೇ ಸಾಲದು, ಐಶ್ವರ್ಯವೂ ಬೇಕು ಎಂಬುದು ನಿಜ. ಮನುಷ್ಯನಿಗೆ ಪ್ರತಿಯೊಬ್ಬನಿಗೂ ತಾನು ಅನುಕೂಲವಂತನಾಗಿ ಬಾಳಬೇಕೆಂದೇ ಆಶೆಯಿರುತ್ತದೆ. ಅದಕ್ಕಾಗಿಯೇ ಶ್ರಮಪಟ್ಟು ದುಡಿಯುತ್ತಾನೆ. ಆದರೂ ಎಲ್ಲರೂ ಧನವಂತರಾಗಿ ಬಾಳಲು ಸಾಧ್ಯವಾಗಿಲ್ಲ. ನಮ್ಮ ದೇಶದಲ್ಲಿ ಧನವಂತರ ಹಾಗೂ ಬಡವರ ಸರಾಸರಿ ಪ್ರಮಾಣವನ್ನು ನೋಡಿದರೇ ಇದು ಗೊತ್ತಾಗುವದು. ಈಚೆಗೆ ಸರ್ಕಾರದವರೂ ಈ ತಾರತಮ್ಯವನ್ನು ಹೋಗಲಾಡಿಸಲು ಪ್ರಯತ್ನಪಡುತ್ತಿದ್ದಾರೆ. ಆದರೆ ಅನುಕೂಲವಂತನಾಗಿ ಬಾಳಲು ಪೂರ್ವಪುಣ್ಯವೂ ಮುಖ್ಯಕಾರಣವಾಗಿರುತ್ತದೆಯೆಂತೆ ಋಷಿಗಳು ತಿಳಿಸಿರುತ್ತಾರೆ. ಒಂದು ವೇಳೆ ಧನವಂತನಾಗಿದ್ದವನೂ ಕೂಡ ಕೆಲವು ಕಾಲದ ಅನಂತರ ಬಡವನಾಗಿಬಿಡಬಹುದು. ಆದ್ದರಿಂದ ಐಶ್ವರ್ಯವು ಶಾಶ್ವತವಲ್ಲ; ಅದು ಇದ್ದುಕೊಂಡಿರುವಾಗಲೇ ಧರ್ಮವನ್ನು ಮಾಡಿರಿ ಎಂದು ಇಲ್ಲಿ ಎಚ್ಚರಿಸಿರುತ್ತದೆ. ಧನವಂತನಾದವನು 'ದೇವರು ನನಗೆ ಹಿಂದೆ ಮಾಡಿದ ಧರ್ಮದ ಫಲವಾಗಿ ಈ ಐಶ್ವರ್ಯವನ್ನು ಕೊಟ್ಟಿರುತ್ತಾನೆ. ಮುಂದೆಯೂ ನಾನು ಧನವಂತನಾಗಿಯೇ ಇದ್ದುಕೊಂಡಿರಲು, ಬಡವನಾಗದೆ ಇರಲು ಈಗ ಧರ್ಮವನ್ನೇ ಮಾಡಬೇಕು. ಧರ್ಮವೊಂದೇ ನನಗೆ ಉಳಿಯುವ ಶಾಶ್ವತಸಂಪತ್ತು' ಎಂದು ಭಾವಿಸಿ ಸಾಧ್ಯವಾದಷ್ಟು ಧಾರಾಳಬುದ್ಧಿಯಿಂದ ತನ್ನವಿಭವವನ್ನು ಧರ್ಮವೆಂಬ ರೂಪದಲ್ಲಿ ಹಂಚಿ ವಿನಿಯೋಗಿಸಬೇಕೆಂದು ಇಲ್ಲಿ ತಿಳಿಸಿದೆ.

ಇನ್ನು 'ನಿಧಾನವಾಗಿ ಧರ್ಮವನ್ನು ಮಾಡೋಣ; ಈಗ ಧನಸಂಪಾದನೆಯೇ ಆಗಲಿ!' ಎಂದು ಮಾತ್ರ ಧರ್ಮ ಕಾರ್ಯಗಳನ್ನು ಮುಂದಕ್ಕೆ ಹಾಕಬಾರದು. ಏಕೆಂದರೆ ಮೃತ್ಯುವು ಆಗಲೇ ಸಂನಿಹಿತನಾಗಿರುತ್ತಾನೆ. ಮನುಷ್ಯನಿಗೆ ಮೃತ್ಯುವು ಯಾವಾಗ ಎರಗಿಬರುತ್ತಾನೆಂಬುದು ತಿಳಿದಿರುವದಿಲ್ಲ. ಅವನು ಯಾವಾಗಲೂ ಈ ಪ್ರಾಣಿಯ ಜುಟ್ಟನ್ನು ಹಿಡಿದುಕೊಂಡೇ ಇರುತ್ತಾನೆಂದು ಭಾವಿಸಬೇಕು. ಹೀಗಿದ್ದರೂ ಕೆಲವರು ನಾವು ಶಾಶ್ವತವಾಗಿರುವೆವೆಂದೂ ನಮ್ಮ ಐಶ್ವರ್ಯವೂ ನಿತ್ಯವಾಗಿರುವದೆಂದೂ ನಂಬಿ ಧರ್ಮವಿಮುಖರಾಗಿರುತ್ತಾರೆ. ಹಾಗೂ ಕಾಮುಗಳನ್ನು ಬೆನ್ನುಹತ್ತಿ ಹೋಗುತ್ತಿರುತ್ತಾರೆ. ಅಂಥವರನ್ನು 'ಬಾಲ'ರೆಂದೂ ಹರಡಿರುವ ಮೃತ್ಯುವಿನ ಬಲೆಗೆ ವಶರಾಗತಕ್ಕವರೆಂದೂ ಉಪನಿಷತ್ತಿನಲ್ಲಿ ತಿಳಿಸಿರುತ್ತದೆ. ಆದರೆ ವಿವೇಕಿಗಳು ಎಂದೂ ಹೀಗೆ ಮಾಡಲಾರರು. ಸಮಯ ಸಿಕ್ಕಿದಾಗಲೆಲ್ಲ ಧರ್ಮವನ್ನೇ ಮಾಡಿ ಮೃತ್ಯುವಿನಿಂದ ಬಿಡುಗಡೆಹೊಂದಲು ಪ್ರಯತ್ನಮಾಡುತ್ತಿರುವರು.

ಅಂತೂ ಧರ್ಮಾನುಷ್ಠಾನವನ್ನು ಮಾಡಲು ತಕ್ಕ ಶರೀರವೂ, ಐಶ್ವರ್ಯವೂ, ವಿವೇಚನೆಯೂ ಬೇಕೆಂದಾಯಿತು. ಇದರ ಜೊತೆಗೆ ಸೇರಿಸಬೇಕಾದದ್ದು ಮತ್ತೊಂದಿದೆ. ಅದೇನೆಂದರೆ: ಶ್ರದ್ಧೆ. ಶ್ರದ್ಧೆಯಿಲ್ಲದವನಿಗೆ ಮೇಲಿನವು ಯಾವವು ಇದ್ದರೂ ಪ್ರಯೋಜನ ವಿಲ್ಲ. ಕಾಳಿದಾಸನು ತನ್ನ 'ಶಾಕುಂತಲ' ನಾಟಕದ ಕಡೆಯಲ್ಲಿ ದುಷ್ಯಂತನೂ ಶಕುಂತಲೆಯೂ ಅವರ ಮಗುವೂ ಒಂದುಗೂಡಿದಾಗ **'ಶ್ರದ್ಧಾವಿತ್ತಂವಿಧಿಶ್ಚೇತಿ ತ್ರಿತಯಂ ತತ್ಸಮಾಗ ತವತ್'** ಎಂದು ಹೇಳಿರುತ್ತಾನೆ. ಅದರಂತೆ ಶ್ರದ್ಧೆಯೂ ವಿತ್ತವೂ ಕೂಡಿದ ಮೇಲೂ ವಿಧಿ ಎಂದರೆ ಧರ್ಮಾನುಷ್ಠಾನ ಮಾಡುವ ಕ್ರಮವೂ ಬೇಕೆಂದಾಯಿತು. ಇದರ ಜೊತೆಗೆ ಹಿಂದೆ ತಿಳಿಸಿದಂತೆ ಶರೀರಾದಿಗಳು ಅವಶ್ಯವೆಂದು ಹೇಳಬೇಕಾಗಿಯೇ ಇಲ್ಲ. ಎಲ್ಲವೂ ಸೇರುವದು ಅಪರೂಪವೇ ಸರಿ. 'ಮೂರೂ ಕೂಡಿದರೆ ಪೂರ್ವಜನ್ಮದ ಸುಕೃತ' ಎಂಬ ಗಾದೆಯನ್ನು ಕೇಳಿದ್ದೀರಲ್ಲವೆ? ಇಷ್ಟು ವಿಚಾರಗಳನ್ನು ಮೇಲಿನ ಶ್ಲೋಕದಲ್ಲಿ ಸಂಗ್ರಹ ವಾಗಿ ತಿಳಿಸಿದೆ. ಧರ್ಮವನ್ನೇ ಗುರಿಯಾಗಿ ಮಾಡಿಕೊಳ್ಳುವ ಜೀವನವನ್ನು ನಾವು ಈಗಲಾದರೂ ಪ್ರಾರಂಭಿಸೋಣ.

# ಕಲ್ಪಸೂತ್ರಗಳು

ವೇದಕ್ಕೆ ಶೀಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ - ಎಂಬ ಆರು ಅಂಗಗಳುಂಟೆಂದು ಪ್ರಸಿದ್ಧಿಯಿದೆಯಷ್ಟೆ. ಈ ಲೇಖನದಲ್ಲಿ ಕಲ್ಪದ ವಿಷಯವಾಗಿ ಎರಡು ಮಾತುಗಳನ್ನು ಬರೆಯುವೆನು.

ಕಲ್ಪವೆಂಬ ಹೆಸರು ಬಹು ಪುರಾತನವಾದದ್ದು. ಮುಂಡಕೋಪನಿಷತ್ತಿನಲ್ಲಿ ಪರ ವಿದ್ಯೆ, ಅಪರವಿದ್ಯೆ - ಎಂದು ವಿದ್ಯೆಯನ್ನು ಎರಡು ವಿಭಾಗವಾಗಿ ಮಾಡಿ ಅಪರ ವಿದ್ಯೆ ಯಲ್ಲಿ ನಾಲ್ಕು ವೇದಗಳನ್ನೂ ಆರು ವೇದಾಂಗಗಳನ್ನೂ ಹೆಸರಿಟ್ಟು ಹೇಳಿರುವದರಿಂದ ಕಲ್ಪವೆಂಬುದು ಆ ಶ್ರುತಿಯ ಕಾಲದಲ್ಲಿ ಸುಪ್ರಸಿದ್ಧವಾಗಿತ್ತೆಂದು ಹೇಳಬೇಕಾಗುತ್ತದೆ. ಪಾಣಿನಿಯ ವ್ಯಾಕರಣದಲ್ಲಿ **"ಪುರಾಣಪ್ರೋಕ್ತೇಷು ಬ್ರಾಹ್ಮಣ ಕಲ್ಪೇಷು" (4.3. 105)** ಎಂಬ ಸೂತ್ರವಿದೆ. ಆ ಸೂತ್ರದಲ್ಲಿ ಕೆಲವು ಬ್ರಾಹ್ಮಣಗಳೂ ಕಲ್ಪಗಳೂ ಪುರಾಣ - ಪೂರ್ವಕಾಲದವು-ಎಂದೂ ಮತ್ತೆ ಕೆಲವು ಈಚಿನವೆಂದೂ ಅಭಿಪ್ರಾಯವಿರುವದರಿಂದ ಕೆಲವು ಕಲ್ಪಗಳು ಬ್ರಾಹ್ಮಣಸಮಕಾಲದವೆಂದೂ ಭಾವಿಸಬೇಕಾಗಿರುತ್ತದೆ. ಪ್ರತಿಯೊಂದು

ಗ್ರಂಥಕ್ಕೂ ಕ್ರಿಸ್ತಶಕವನ್ನು ಅಂಟಿಸುವ ಚಟವಿರುವ ಈಗಿನ ಶೋಧಕರು ಅತ್ಯಂತ ಆಧುನಿಕವಾಗಿರುವ ಕಲ್ಪಸೂತ್ರಗಳು ಕೂಡ ಕ್ರಿಸ್ತಪೂರ್ವ ನಾಲ್ಕನೆಯ ಶತಮಾನಕ್ಕಿಂತ ಹಿಂದೆಯೇ ರಚಿತವಾಗಿರುವವೆಂದು ಹೇಳುತ್ತಾರೆ.

ಕಲ್ಪಸೂತ್ರಗಳಲ್ಲಿ ಶ್ರೌತ, ಗೃಹ್ಯ, ಧರ್ಮ ಎಂಬ ಮೂರು ಮುಖ್ಯ ವಿಭಾಗ ಗಳುಂಟು. ಶ್ರೌತಸೂತ್ರಗಳಲ್ಲಿ ಆಯಾ ವೇದಾಶಾಖೆಯ ಸಂಹಿತೆಯ ಸಾರವನ್ನು ತೆಗೆದು, ವೈದಿಕಾಗ್ನಿಗಳಲ್ಲಿ ಮಾಡಬೇಕಾದ ಹೋಮಕರ್ಮಾದಿಗಳನ್ನು ಮಾಡುವ ವಿಧಾನವನ್ನು ತಿಳಿಸುತ್ತದೆ. ಗೃಹ್ಯಸೂತ್ರಗಳಲ್ಲಿ ಉಪನಯನ, ವಿವಾಹ, ಶ್ರಾದ್ಧ ಮುಂತಾದ ಕರ್ಮ ಗಳನ್ನು ಗೃಹ್ಯಾಗ್ನಿಯ ಮೂಲಕವಾಗಿ ನೆರವೇರಿಸುವ ಕ್ರಮವನ್ನು ತಿಳಿಸಿರುತ್ತದೆ. ಧರ್ಮ ಸೂತ್ರಗಳಲ್ಲಿ ವರ್ಣಾಶ್ರಮಧರ್ಮಗಳನ್ನು ಕುರಿತ ಶಿಷ್ಟಾಚಾರವನ್ನು ತಿಳಿಸಿರುತ್ತದೆ.

ಮೇಲೆ ಹೇಳಿರುವಂತೆ ಮೂರು ಭಾಗಗಳನ್ನೂ ಪೂರ್ಣವಾಗಿ ತಿಳಿಸುವ ಕಲ್ಪ ಸೂತ್ರಗಳು ಎಲ್ಲಾ ವೇದಗಳ ಎಲ್ಲಾ ಶಾಖೆಗಳಿಗೂ ಸದ್ಯದಲ್ಲಿ ಕಂಡುಬರುವದಿಲ್ಲ. ಹಾರೀತ, ಕೌತ್ಸ ಮಾಂಡೂಕೇಯ - ಮುಂತಾದ ಎಷ್ಟೋ ಸೂತ್ರಕಾರರ ಅಭಿಪ್ರಾಯ ಗಳನ್ನು ಈಗಿರುವ ಸೂತ್ರಗಳಲ್ಲಿ ಉದಾಹರಿಸಿರುವದರಿಂದ ಇಂಥ ಕಲ್ಪಸೂತ್ರಗಳು ಇನ್ನೂ ಬಹಳವಾಗಿ ಹಿಂದೆ ಇದ್ದವೆಂದು ತಿಳಿಯಬೇಕಾಗಿದೆ. ಈಗ್ಗೆ ಋಗ್ವೇದಕ್ಕೆ ಶಾಂಖಾಯನ, ಆಶ್ವಲಾಯನ; ಸಾಮವೇದಕ್ಕೆ, ಲಾಟ್ಯಾಯನ, ದ್ರಾಹ್ಯಾಯಣ, ಗೋಭಿಲ, ಖಾದಿರ, ಗೌತಮ; ಶುಕ್ಲಯಜುರ್ವೇದಕ್ಕೆ ಕಾತ್ಯಾಯನ, ಪಾರಸ್ಕರ, ಕೃಷ್ಣಯಜುರ್ವೇದಕ್ಕೆ ಆಪಸ್ತಂಬ, ಬೋಧಾಯನ, ಭಾರದ್ವಾಜ, ಸತ್ಯಾಷಾಢ, ಹಿರಣ್ಯಕೇಶಿ - ಇಷ್ಟು ಸೂತ್ರ ಗಳು ಸಿಕ್ಕುತ್ತವೆ. ಜೈಮಿನಿಸೂತ್ರ, ಪರಶುರಾಮ ಕಲ್ಪಸೂತ್ರ - ಮುಂತಾದ ಕೆಲವು ಸೂತ್ರ ಗಳೂ ಈಚೆಗೆ ಹೊರಕ್ಕೆ ಬರುತ್ತಿವೆ.

ಮೈಸೂರು ದೇಶದಲ್ಲಿ ಆಪಸ್ತಂಬ, ಅಶ್ವಲಾಯನ, ಬೌಧಾಯನ- ಈ ಮೂರು ಸೂತ್ರಗಳನ್ನು ಅನುಸರಿಸುವವರೇ ಹೆಚ್ಚು ಮಂದಿ. ಆಶ್ವಲಾಯನಕ್ಕೆ ಶ್ರೌತ, ಗೃಹ್ಯ - ಇವೆರಡು ಭಾಗಗಳು ಮಾತ್ರವೇ ಇರುತ್ತವೆ. ಬೌಧಾಯನ, ಆಪಸ್ತಂಬ ಇವೆರಡೂ ಸಮಗ್ರವಾಗಿ ಮೂರು ವಿಭಾಗದ ಸೂತ್ರಗಳನ್ನೂ ಒಳಗೊಂಡಿವೆ. ಆಪಸ್ತಂಬರು ದಕ್ಷಿಣ ದಲ್ಲಿಯೇ ಇದ್ದರೆಂದು ಶೋಧಕರನೇಕರ ಅಭಿಪ್ರಾಯವಿರುತ್ತದೆ. ಬೌಧಾಯನ ಸೂತ್ರ ಗಳಂತೆ ಅವುಗಳಲ್ಲಿ ಪ್ರಕ್ಷಿಪ್ತಭಾಗಗಳಿವೆಯೆಂದು ಯಾರೂ ಊಹಿಸಿರುವದಿಲ್ಲ. ಈ ಎಲ್ಲಾ ಕಾರಣಗಳಿಂದ ಆಪಸ್ತಂಬಸೂತ್ರವನ್ನೇ ಕಲ್ಪಸೂತ್ರಗಳಿಗೆ ಉದಾಹರಣೆಯಾಗಿ ತೆಗೆದು ಕೊಂಡು ವಿಚಾರಮಾಡುವದು ಲಾಭದಾಯಕವಾಗಿರುತ್ತದೆ.

ಆಪಸ್ತಂಬರ ಗ್ರಂಥದಲ್ಲಿ ಒಟ್ಟು ಮೂವತ್ತು ಪ್ರಶ್ನೆಗಳಿರುತ್ತವೆ. ಇವುಗಳಲ್ಲಿ ಮೊದಲನೆಯ ಇಪ್ಪತ್ತುನಾಲ್ಕು ಪ್ರಶ್ನೆಗಳಲ್ಲಿ ಶ್ರೌತಕರ್ಮಗಳ ವಿಚಾರವಿದೆ. ಇಪ್ಪತ್ತೈದನೆಯ ಪ್ರಶ್ನೆಯಲ್ಲಿ **ಪರಿಭಾಷೆಗಳು** – ಇಂಥಿಂಥ ಸಂಕೇತಶಬ್ದಕ್ಕೆ ಇಂಥಿಂಥ ಅರ್ಥವೆಂಬ ವಿವರ –**ಪ್ರವರಕಾಂಡ, ಹೌತ್ರಕ**– ಹೋತೃಗಳು ಹೇಳಬೇಕಾದ ಮಂತ್ರಗಳು– ಇಷ್ಟು ವಿಷಯ ಗಳಿವೆ. ಇಪ್ಪತ್ತಾರನೆಯ ಪ್ರಶ್ನೆಯಲ್ಲಿ **ಗೃಹ್ಯಕರ್ಮ**ಗಳಲ್ಲಿ ಉಪಯೋಗಿಸುವ ಮಂತ್ರ ಗಳನ್ನು ತಿಳಿಸಿದೆ; ಇದಕ್ಕೇ **ಏಕಾಗ್ನಿಕಾಂಡ**ವೆಂದು ಹೆಸರು. ಇಪ್ಪತ್ತೇಳನೆಯ ಪ್ರಶ್ನೆಯಲ್ಲಿ **ಗೃಹ್ಯಸೂತ್ರ**ಗಳನ್ನು ಹಿಂದಿನ ಪ್ರಶ್ನೆಯಲ್ಲಿ ಹೇಳಿರುವ ಮಂತ್ರಗಳ ಕ್ರಮುವನ್ನು ಅನುಸರಿಸಿ ಬರೆದಿರುತ್ತದೆ. ಮುಂದಿನ ಎರಡು ಪ್ರಶ್ನೆಗಳು **ಧರ್ಮಸೂತ್ರ**. ಮೂವತ್ತನೆಯ ಪ್ರಶ್ನೆ **ಶುಲ್ಬಸೂತ್ರ**ವೆಂದು ಹೆಸರು. ಇವುಗಳಲ್ಲಿ ಯಜ್ಞದ ವೇದಿಗಳನ್ನು ಕಟ್ಟುವದಕ್ಕೆ ಬೇಕಾದ ಕ್ಷೇತ್ರಗಣಿತದ ನಿಯಮಗಳೇ ಮುಂತಾದನ್ನು ತಿಳಿಸಿರುತ್ತದೆ. ಆಪಸ್ತಂಬಕೃತವಾದ ಪಿತೃ ಮೇಧಸೂತ್ರವೆಂಬ ಎರಡು ಪ್ರಶ್ನೆಗಳ ಸೂತ್ರಗ್ರಂಥವೊಂದು ಬೇರೆ ಇದೆ. ಆದರೆ ಇದರ ಪ್ರಚಾರವು ಬಹು ಕಡಿಮೆ.

ಸೂತ್ರಗಳಲ್ಲಿ ಕೆಲವು ವಿಶೇಷಶಬ್ದಗಳನ್ನು ಪ್ರಯೋಗಿಸಿರುತ್ತದೆ. ವಾಕ್ಯ ಅನ್ವಯವೂ ಕೆಲವು ಕಡೆ ಸ್ಫುಟವಾಗುವಂತಿಲ್ಲ, ಆದ್ದರಿಂದ ಅವುಗಳನ್ನು ಅರ್ಥಮಾಡಿಕೊಳ್ಳುವದಕ್ಕೆ ವ್ಯಾಖ್ಯಾನಗಳ ಸಹಾಯವೂ ಬೇಕಾಗಿದೆ. ಆಪಸ್ತಂಬ ಶ್ರೌತಸೂತ್ರಕ್ಕೆ ರುದ್ರದತ್ತನ ವ್ಯಾಖ್ಯಾನವೂ; ಗೃಹ್ಯಧರ್ಮಸೂತ್ರಗಳಿಗೆ ಹರದತ್ತನ ವ್ಯಾಖ್ಯಾನವೂ ಪರಿಭಾಷಾಪಟಲ, ಪಿತೃಮೇಧ – ಇವುಗಳಿಗೆ ಕಪರ್ದಿಸ್ವಾಮಿಯ ವ್ಯಾಖ್ಯಾನವೂ ಇರುತ್ತವೆ.

ಕಲ್ಪಸೂತ್ರಗಳನ್ನು ಸನಾತನಧರ್ಮಿಗಳು ಮುಖ್ಯವಾಗಿ ಕರ್ಮಾನುಷ್ಠಾನಕ್ಕಾಗಿ ನೋಡುತ್ತಾರಷ್ಟೆ, ಐತಿಹಾಸಿಕದೃಷ್ಟಿಯಿಂದ ನೋಡಿದರೆ ಇಪ್ಪತ್ತೈದು ಶತಮಾನಗಳ ಕೆಳಗೆ ಜನರ ಸಮಾಜಸ್ಥಿತಿಯು ಹೇಗಿತ್ತು ಎಂಬ ಬಗ್ಗೆ ಎಷ್ಟೋ ವಿಷಯಗಳ ತಿಳಿವಳಿಕೆಯು ಈ ಗ್ರಂಥದಿಂದ ಉಂಟಾಗುವಂತಿದೆ. ಉದಾಹರಣೆಗೋಸ್ಕರ ಗೃಹ್ಯಸೂತ್ರದಿಂದಲೂ ಧರ್ಮ ಸೂತ್ರದಿಂದಲೂ ಕೆಲವು ವಾಕ್ಯಗಳನ್ನು ಇಲ್ಲಿ ಆರಿಸಿಕೊಡುವೆನು. ಗೃಹ್ಯಸೂತ್ರ ಒಂದನೆಯ ಖಂಡದಲ್ಲಿ ವಿವಾಹದ ವಿಷಯದಲ್ಲಿ ಈ ಅಭಿಪ್ರಾಯಗಳಿವೆ; "ಬಂಧುಗಳಿರುವ, ಶೀಲ ವತಿಯಾದ, ಶುಭಲಕ್ಷಣಗಳಿಂದ ಕೂಡಿದ, ಆರೋಗ್ಯವಂತೆಯಾದ ಕನ್ಯೆಯನ್ನು ಮದುವೆ ಯಾಗಬೇಕು"–(19). "ಬಂಧುಗಳು, ನಡತೆ, ಶುಭಲಕ್ಷಣ – ಇವುಗಳಿಂದೊಡಗೂಡಿ ಚೆನ್ನಾಗಿ ಓದಿದ ಆರೋಗ್ಯವಂತನಾಗಿರಬೇಕೆಂಬುದೇ ವರಸಂಪತ್ತು" (20). "ಯಾವ ಕನ್ಯೆಯಲ್ಲಿ ಮನಸ್ಸೂ ಕಣ್ಣೂ ಕಟ್ಟುಬೀಳುವವೋ ಆಕೆಯಿಂದ ಅಭಿವೃದ್ಧಿಯುಂಟು;

ಮಿಕ್ಕದ್ದನ್ನು ಆದರಿಸಬೇಕಾದದ್ದಿಲ್ಲ - ಎಂದು ಕೆಲವರೆನ್ನುವರು" (21). "ಮಂತ್ರವೇತ್ತರಾದ ಸ್ನೇಹಿತರನ್ನು ಒಟ್ಟುಗೂಡಿಸಿ ಕನ್ಯೆಯನ್ನು ವರಣಮಾಡುವದಕ್ಕೆ ಕಳುಹಿಸಬೇಕು" (2-1). ವಿವಾಹದ ವಿಷಯದಲ್ಲಿ ವಧೂವರರನ್ನು ಆರಿಸುವಾಗ ಮುಖ್ಯವಾಗಿ ಯಾವ ಗುಣಗಳನ್ನು ಆ ಕಾಲದಲ್ಲಿ ಲಕ್ಷ್ಯದಲ್ಲಿಟ್ಟುಕೊಂಡಿರುತ್ತಿದ್ದರೆಂಬುದು ಈ ಸೂತ್ರಗಳಿಂದ ವ್ಯಕ್ತವಾಗುತ್ತದೆ. ಆಗಿನ ಕಾಲದಲ್ಲಿ ಕನ್ಯೆಯನ್ನು ವರನು ಆರಿಸುವನೇ ಹೊರತು ಈಗಿನಂತೆ ಕನ್ಯೆಯ ಪಿತೃಗಳು ವರನನ್ನು ಹುಡುಕಿಕೊಂಡು ಹೋಗುವ ಪದ್ಧತಿಯಿರಲಿಲ್ಲವೆಂದೂ ಗೊತ್ತಾಗುತ್ತದೆ.

ಧರ್ಮಸೂತ್ರದಲ್ಲಿ ಬ್ರಹ್ಮಚಾರಿಯ ವಿಷಯವಾಗಿ ಈ ಅಭಿಪ್ರಾಯದ ಸೂತ್ರಗಳಿರುತ್ತವೆ; "ಉಪನಯನವಾದ ಮೇಲೆ ಆಚಾರ್ಯರ ಮನೆಯಲ್ಲಿ ವೇದಾಭ್ಯಾಸಕ್ಕಾಗಿ ವಾಸಮಾಡಿಕೊಂಡಿರಬೇಕು' (11). "ಕನಿಷ್ಠಪಕ್ಷಕ್ಕೆ ಹನ್ನೆರಡು ವರ್ಷ (ಒಂದೊಂದು ವೇದಕ್ಕೆ ಮೂರು ಮೂರು ವರ್ಷದಂತೆ) ಆಚಾರ್ಯರ ಮನೆಯಲ್ಲಿರತಕ್ಕದ್ದು", "ವಿದ್ಯಾರ್ಥಿಯಾದ ಬ್ರಹ್ಮಚಾರಿಯು ಆಚಾರ್ಯರ ಮನೆಯನ್ನು ಬಿಟ್ಟು ಮತ್ತೊಬ್ಬರ ಮನೆಯಲ್ಲಿ ವಾಸಮಾಡತಕ್ಕದ್ದಲ್ಲ' (17). "ಪತಿತನಾಗುವ ಕರ್ಮಗಳ ವಿಷಯದಲ್ಲಿ ಹೊರತು ಮಿಕ್ಕ ವಿಷಯಗಳಲ್ಲೆಲ್ಲ ಆಚಾರ್ಯನಿಗೆ ಅಧೀನನಾಗಿರಬೇಕು" (19). "ಗುರುವಿನ ಮುಂದೆ ಇರುವಾಗ ಕೆಳಮಟ್ಟದ ಆಸನದಲ್ಲಿರಬೇಕು. ಶ್ರಾದ್ಧಾರ್ಥವಾದ ಅಥವಾ ದೇವತಾರ್ಥವಾಗಿರುವ ಅನ್ನವನ್ನು ತಾನು ಭೋಜನಮಾಡಬಾರದು. ಹಗಲು ನಿದ್ರೆಮಾಡಬಾರದು. ಪರಿಮಳವಸ್ತುಗಳನ್ನುಪಯೋಗಿಸಬಾರದು. ಸ್ತ್ರೀಸಮಾಚಾರಕ್ಕೆ ಹೋಗಬಾರದು. ಮುಖವನ್ನು ಹೊಳಪಿನ ಪುಡಿ ಮುಂತಾದವುಗಳಿಂದ ಮೆರುಗು ಮಾಡಿಕೊಳ್ಳಬಾರದು. ಜಟೆಯನ್ನು ಧರಿಸಿರಬೇಕು; ಅಥವಾ ಜುಟ್ಟು ಹೊರತು ಮಿಕ್ಕ ತಲೆ ಕೂದಲನ್ನು ಬೋಳಿಸಿಕೊಳ್ಳಬೇಕು. ನರ್ತನವನ್ನು ನೋಡಬಾರದು. ಜೂಜಿನ ಮನೆಗೆ ಹೋಗಬಾರದು. ಉತ್ಸವಗಳಲ್ಲಿಯೂ ಅಂಥ ಸಮಾಜಗಳಲ್ಲಿಯೂ ಸೇರಬಾರದು. ಲೋಕವಾರ್ತೆಯಲ್ಲಿ ಹೆಚ್ಚಿನ ಮನಸ್ಸಿಡಬಾರದು. ಆದಷ್ಟು ಕಾಲ ಏಕಾಂತವಾಸವನ್ನು ಮಾಡಬೇಕು. ಶಾಂತನಾಗಿ ದಾಂತನಾಗಿ ನಾಚಿಕೆಯಿಂದಲೂ ಉತ್ಸಾಹದಿಂದಲೂ ಕೂಡಿರಬೇಕು. ಕ್ರೋಧವನ್ನೂ ಅಸೂಯೆಯನ್ನೂ ಬಿಟ್ಟಿರಬೇಕು". ಇವೇ ಮುಂತಾದ ಸೂತ್ರಗಳಿಂದ ಆ ಕಾಲದಲ್ಲಿ ವಿದ್ಯಾರ್ಥಿಗಳನ್ನು ಹೇಗೆ ಇಟ್ಟಿದ್ದರೆಂಬುದು ತಿಳಿಯಬರುತ್ತದೆ.

# ಆಶ್ರಮವಿಷಯಕ್ಕೆ ಆಪಸ್ತಂಬರ ಅಭಿಪ್ರಾಯ

ಈಗ್ಗೆ ವರ್ಣಾಶ್ರಮಧರ್ಮಗಳು ಸಂಕರವಾಗಿರುತ್ತವೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೂ ಸ್ಮೃತಿಕಾರರು ಇವುಗಳ ವಿಷಯವಾಗಿ ಏನು ಹೇಳಿದ್ದರೆಂಬುದನ್ನು ತಿಳಿದುಕೊಳ್ಳುವದರಲ್ಲಿ ಪ್ರಯೋಜನವುಂಟು. ಆಪಸ್ತಂಬಧರ್ಮಸೂತ್ರಗಳಲ್ಲಿರುವ ವಿಷಯವನ್ನು ಇಲ್ಲಿ ಸಂಗ್ರಹವಾಗಿ ತಿಳಿಯಪಡಿಸಲು ಪ್ರಯತ್ನಿಸುವೆನು.

ಆಶ್ರಮಗಳು ನಾಲ್ಕು: ಗಾರ್ಹಸ್ಥ್ಯ, ಆಚಾರ್ಯಕುಲ, ಮೌನ, ವಾನಪ್ರಸ್ಥ – ಇವೇ ಆ ನಾಲ್ಕು. ಆ ನಾಲ್ಕರಲ್ಲಿಯೂ ಶಾಸ್ತ್ರಾನುಸಾರವಾಗಿ ಮನಸ್ಸಮಾಧಾನವನ್ನು ಹೊಂದಿ ಇರುವಾತನು ಕ್ಷೇಮವನ್ನು ಹೊಂದುತ್ತಾನೆ ಎಂದು ಆಪಸ್ತಂಬರು ಬರೆದಿರುತ್ತಾರೆ. ಇಂಥ ಆಶ್ರಮದಲ್ಲಿದ್ದರೇ ಮೋಕ್ಷಪ್ರಾಪ್ತಿ ಎಂಬ ನಿಯಮವಿಲ್ಲ; ಆಶ್ರಮಧರ್ಮಗಳನ್ನು ಕಾಪಾಡಿಕೊಂಡಿದ್ದರೆ ಯಾವ ಆಶ್ರಮದಲ್ಲಿದ್ದರೂ ಮುಕ್ತಿಯುಂಟು ಎಂಬುದು ಅವರ ಅಭಿಪ್ರಾಯವೆಂತ ತೋರುತ್ತದೆ. ಯಾವ ಆಶ್ರಮವೇ ತಮಗೆ ಬೇಕಾಗಿರಲಿ, ಎಲ್ಲರೂ ಆಚಾರ್ಯಕುಲದಲ್ಲಿದ್ದು ವಿದ್ಯೆಯನ್ನು ಸಂಪಾದಿಸಿಕೊಳ್ಳಬೇಕು; ಆಶ್ರಮಕರ್ಮಗಳನ್ನು ಅರಿತುಕೊಂಡು ಯಾವ ಆಶ್ರಮವು ಬೇಕೋ ಅದನ್ನು ಆರಂಭಿಸಬಹುದು ಎಂಬುದು ಆಪಸ್ತಂಬರ ಮತವು.

ಬ್ರಹ್ಮಚಾರಿಗಳಲ್ಲಿ ಉಪಕುರ್ವಾಣ, ನೈಷ್ಠಿಕ ಎಂದು ಎರಡು ಬಗೆ. ಉಪಕುರ್ವಾಣರು ವಿದ್ಯೆಯನ್ನು ಮುಗಿಸಿ ಆಶ್ರಮಾಂತರವನ್ನು ಹೊಂದುವರು. ಆದರೆ ನೈಷ್ಠಿಕರು ಗುರುಗಳ ಮನೆಯಲ್ಲಿಯೇ ದೇಹವಿರುವವರೆಗೂ ವಾಸಮಾಡಿಕೊಂಡು ಇರುವರು; ಬ್ರಹ್ಮಚಾರಿಗಳ ವಿಷಯದಲ್ಲಿ ಹಿಂದೆಯೇ ಆಪಸ್ತಂಬರ ಕೆಲವು ಅಭಿಪ್ರಾಯಗಳನ್ನು ಬರೆದಿರುತ್ತೇನೆ. ಆದ್ದರಿಂದ ಈಗ ಸಂನ್ಯಾಸಿಗಳ ವಿಷಯಕ್ಕೆ ಅವರು ಬರೆದಿರುವದನ್ನು ತಿಳಿಸುವೆನು.

"ಈ ಬ್ರಹ್ಮಚರ್ಯಾಶ್ರಮದಿಂದಲೇ ಪ್ರವ್ರಜನವನ್ನು ಮಾಡಬೇಕು" ಎಂಬ ಸೂತ್ರಕ್ಕೆ ಹರದತ್ತಮಿಶ್ರರು ಬರೆದಿರುವ ವ್ಯಾಖ್ಯಾನದ ಸಾರವೇನೆಂದರೆ : ಬ್ರಹ್ಮಚರ್ಯದಿಂದಲೇ ನೇರಾಗಿ ಸಂನ್ಯಾಸವನ್ನು ಮಾಡಬೇಕು. ಈ ಲೋಕದ ಸುಖ ಪರಲೋಕದ ಸುಖಕ್ಕಾಗಿ ಜನರು ಮಾಡುವ ಕರ್ಮಗಳನ್ನೆಲ್ಲ ಕೈಬಿಟ್ಟು ಆತ್ಮಲಾಭಕ್ಕಾಗಿ ಯಾರು ಸಂನ್ಯಾಸಾಶ್ರಮವನ್ನು ಹೊಂದುವರೋ ಅವರು ಪರಿವ್ರಾಜಕರು. ಶ್ರುತಿಯಲ್ಲಿ ಬ್ರಹ್ಮಚರ್ಯದಿಂದಲೇ ಸಂನ್ಯಾಸಾಶ್ರಮಕ್ಕೆ ಹೋಗಬೇಕು – ಎಂದು ಹೇಳಿರುವದು ಬ್ರಹ್ಮ

ಚರ್ಯಕ್ಕೆ ಒಂದಿಷ್ಟೂ ಕುಂದಿಲ್ಲದವರು ಆತ್ಮಜ್ಞಾನಕ್ಕೆ ಹೆಚ್ಚು ಅರ್ಹರೆಂದು ತಿಳಿಸುವದಕ್ಕೆ. ವಿರಕ್ತರಾದವರು ಗ್ರಹಸ್ಥಾಶ್ರಮದಿಂದಲೂ ವಾನಪ್ರಸ್ಥಾಶ್ರಮದಿಂದಲೂ ಸಂನ್ಯಾಸಕ್ಕೆ ಹೋಗಬಹುದು. ಆದರೂ ಬ್ರಹ್ಮಚರ್ಯಾಶ್ರಮದಿಂದಲೇ ಈ ಆಶ್ರಮವನ್ನು ಪಡೆಯುವವರು ಹೆಚ್ಚಿನ ಯೋಗ್ಯತೆಯುಳ್ಳವರು.

ಸಂನ್ಯಾಸಿಯ ಧರ್ಮಗಳು ಯಾವವೆಂದರೆ, ಬ್ರಹ್ಮಚಾರಿಯೇ ಮುಂತಾದವರಿಗಿರುವಂತೆ ಅಗ್ನಿಯ ದ್ವಾರದಿಂದ ಮಾಡುವ ಯಾವ ಕರ್ಮವೂ ಅವನಿಗೆ ಇರುವದಿಲ್ಲ, ಅವನಿಗೆ ತನ್ನದಾದ ವಾಸಸ್ಥಾನವಿರಬಾರದು. ಅವನು ಯಾವ ವಿಷಯಸುಖವನ್ನೂ ಬಯಸಬಾರದು. ಅವನು ಯಾರನ್ನೂ ಶರಣೆಂದು ಆಶ್ರಯಿಸಿರಬಾರದು; ಯಾರಿಗೂ ತಾನು ಶರಣಾಗಿ ತನ್ನ ಆಸರೆಯಲ್ಲಿಟ್ಟುಕೊಳ್ಳುವ ಗೋಜಿಗೆ ಹೋಗಬಾರದು. ಪ್ರಣವಾದಿಗಳ ಜಪದಲ್ಲಿ ಮಾತ್ರ ಮಾತಾಡುವವನಾಗಿ ಮಿಕ್ಕ ಸಂದರ್ಭಗಳಲ್ಲಿ ಮೌನಿಯಾಗಿರಬೇಕು. ಪ್ರಾಣವೃತ್ತಿಗಾಗಿ ಭಿಕ್ಷಾಚರ್ಯವನ್ನು ಮಾಡುತ್ತಾ ಭಿಕ್ಷಾಕಾಲವನ್ನು ಬಿಟ್ಟರೆ ಮಿಕ್ಕ ಕಾಲದಲ್ಲಿ ಊರಿನ ಹೊರಗೆ ವಾಸಮಾಡುತ್ತಿರಬೇಕು. ಈ ಲೋಕದ ಸುಖಕ್ಕಾಗಿ ಕೃಷ್ಯಾದಿಗಳನ್ನಾಗಲಿ, ಪರಲೋಕದ ಸುಖಕ್ಕಾಗಿ ಜಪಹೋಮಾದಿಗಳನ್ನಾಗಲಿ, ಮಾಡದೆ ಸಂಚಾರಶೀಲನಾಗಿರಬೇಕು. ಅವನಿಗೆ ಮತ್ತೊಬ್ಬರು ತೆಗೆದುಹಾಕಿರುವ ಬಟ್ಟೆಯೇ ಹೊದಿಕೆಯಾಗಿರಬೇಕು.

''ಸಂನ್ಯಾಸಿಗೆ ಇದನ್ನು ಮಾಡಬೇಕು. ಇದನ್ನು ಬಿಡಬೇಕು ಎಂಬ ವಿಧಿನಿಷೇಧಗಳ ಕಟ್ಟಿಲ್ಲ, ಸತ್ಯಾನೃತಗಳನ್ನೂ ಸುಖದುಃಖಗಳನ್ನೂ ವೇದಾಧ್ಯಯನವನ್ನೂ ಈ ಲೋಕವನ್ನೂ ಪರಲೋಕವನ್ನೂ ಬಿಟ್ಟು ಆತ್ಮನನ್ನೇ ಹುಡುಕುತ್ತಿರಬೇಕು. ಆತ್ಮಜ್ಞಾನದಿಂದಲೇ ಅವನಿಗೆ ಮುಕ್ತಿಯಾಗುವದು.'' ಎಂಬುದು ಕೆಲವರ ಮತವು. ಆದರೆ ಇದು ಶಾಸ್ತ್ರಗಳಲ್ಲಿಯೇ ನಿಷಿದ್ಧವಾಗಿರುತ್ತದೆ. ಜ್ಞಾನಿಯಾದ ಮಾತ್ರದಿಂದಲೇ ಕ್ಷೇಮವನ್ನು ಹೊಂದುವ ಹಾಗಿದ್ದರೆ ಈ ಲೋಕದಲ್ಲಿಯೇ ದುಃಖವನ್ನನುಭವಿಸದೆ ಇರಬೇಕು; ಆದರೆ ಹಾಗಿಲ್ಲ, ಇನ್ನು ಪರಲೋಕದಲ್ಲಿಯೂ ಸ್ವೈರಚಾರಿಗಳಿಗೆ ದುಃಖವುಂಟೆಂಬುದನ್ನು ಹೇಳಬೇಕಾಗಿಯೇ ಇಲ್ಲ – ಎಂದು ಆಪಸ್ತಂಬರು ಬರೆದಿರುತ್ತಾರೆ. ಈ ಸೂತ್ರಗಳಲ್ಲಿ **''ಜ್ಞಾನಮಾತ್ರದಿಂದ ಮುಕ್ತಿ''**ಎಂದು ವಾದಿಸುತ್ತಿದ್ದವರ ಪಕ್ಷವನ್ನು ಖಂಡಿಸಿರುವದರಿಂದ ಆ ವಾದವೂ ಹಿಂದಿನಿಂದಲೂ ಬಂದಿತ್ತು ಎಂದು ಸಿದ್ಧವಾಗುತ್ತದೆ. ಉಪನಿಷತ್ತುಗಳಲ್ಲಿ ಜ್ಞಾನಮಾತ್ರದಿಂದ ಮುಕ್ತಿಯಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಿರುವದರಿಂದ ಆ ಸಿದ್ಧಾಂತಕ್ಕೆ

ವಿರುದ್ಧವಾಗಿ ಇಲ್ಲಿ ಆಪಸ್ತಂಬರು ಬರೆದಿರುತ್ತಾರೆಂದು ಭಾವಿಸುವದಕ್ಕೆ ಬರುವದಿಲ್ಲ. ಜ್ಞಾನಿಯು ಆತ್ಮಸ್ವರೂಪವೇ ಆಗಿರುವದರಿಂದ ಅವರಿಗೆ ವಿಧಿನಿಷೇಧ ಗಳಿಲ್ಲ ಎಂಬ ಉತ್ತಮ ಸಿದ್ಧಾಂತವನ್ನು ಅಜ್ಞರಾದವರು ತಪ್ಪಾಗಿ ಅರ್ಥವನ್ನು ಮಾಡಿ ಕೊಂಡು ದೇಹದ ಭೋಗಗಳನ್ನು ಒದಗಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿದ್ದದ್ದನ್ನು ನಿಂದಿಸುವದಕ್ಕಾಗಿ ಈ ಸ್ವೇಚ್ಛಾಚಾರಿಗಳ ಮತವನ್ನು ಖಂಡಿಸಿದೆ ಎಂದು ತೋರುತ್ತದೆ. "ಯಾವಾಗ ಹೃದಯ ದಲ್ಲಿರುವ ಕಾಮಗಳೆಲ್ಲ ಬಿಡುಗಡೆಯಾಗುವವೋ ಆಗ ಮರ್ತ್ಯನು ಅಮೃತನಾಗುವನು, ಇಲ್ಲಿಯೇ ಬ್ರಹ್ಮವನ್ನು ಪಡೆಯುವನು' ಎಂಬ ಶ್ರುತಿಯೂ ಈ ಅಭಿಪ್ರಾಯಕ್ಕೆ ಸಾಧಕ ವಾಗಿರುತ್ತದೆ.

ವಾನಪ್ರಸ್ಥರ ಧರ್ಮವನ್ನು ಸನ್ಯಾಸಿಗಳ ವಿಚಾರವಾದ ಬಳಿಕ ಆಪಸ್ತಂಬರು ಬರೆದಿರುತ್ತಾರೆ. ವಾನಪ್ರಸ್ಥನು ಏಕಾಗ್ನಿಯಲ್ಲಿ (?) ಅಗ್ನಿಕಾರ್ಯವನ್ನು ಮಾಡುತ್ತಿರ ಬೇಕು. ಕಾಡಿನಲ್ಲಿರುವ ಚರ್ಮ, ನಾರು ಮುಂತಾದವುಗಳ ಬಟ್ಟೆಯನ್ನು ಧರಿಸಬೇಕು. ಕಂದಮೂಲಾದಿಗಳಿಂದ ಕೆಲವುಕಾಲ, ಆಮೇಲೆ ನೀರು, ಗಾಳಿ – ಇವುಗಳಿಂದ ಕೆಲವು ಕಾಲ ಜೀವಿಸಿದ್ದು ಕೊನೆಗೆ ಯಾವ ಆಹಾರವನ್ನೂ ತೆಗೆದುಕೊಳ್ಳದೆ ಇರಬೇಕು. ವಾನ ಪ್ರಸ್ಥಾಶ್ರಮಕ್ಕೆ ಬ್ರಹ್ಮಚರ್ಯಾಶ್ರಮದಿಂದಾದರೂ ಗೃಹಸ್ಥಾಶ್ರಮದಿಂದಾದರೂ ಬರಬಹುದು. ಅವನು ಅಗ್ನಿಗಾಗಿ ಮನೆಯನ್ನು ಮಾಡಿಕೊಂಡು ತಾನು ಬಯಲಿನಲ್ಲಿಯೇ ವಾಸ ಮಾಡಬೇಕು, ಬರಿಯ ನೆಲದ ಮೇಲೆಯೇ ಮಲಗಬೇಕು, ಇವೇ ಮುಂತಾದ ಶರೀರ ಶೋಷಣಪ್ರಧಾನವಾದ ಕರ್ಮಗಳನ್ನು ವಾನಪ್ರಸ್ಥನಿಗೆ ಹೇಳಿರುತ್ತಾರೆ.

ಇನ್ನು ಆಶ್ರಮಗಳಲ್ಲಿ ಯಾವದು ಶ್ರೇಷ್ಠವು? ಎಂಬ ಬಗ್ಗೆ ಆಪಸ್ತಂಬರ ಮತವೇ ನೆಂಬುದನ್ನು ಸ್ವಲ್ಪದರಲ್ಲಿ ತಿಳಿಸುವೆನು. "ಎಂಬತ್ತೆಂಟುಸಾವಿರ ಋಷಿಗಳು ಪ್ರಜಾಸಂತತಿ ಯನ್ನು ಬಯಸಿದರು; ಅವರು ದಕ್ಷಿಣಮಾರ್ಗದಿಂದ ಪರಲೋಕವನ್ನು ಹೊಂದಿ ಕೊನೆಗೂ ಶ್ಮಶಾನಗಳನ್ನೇ ಪಡೆದರು. ಎಂಬತ್ತೆಂಟು ಸಾವಿರ ಋಷಿಗಳು ಪ್ರಜಾ ಸಂತತಿ ಯನ್ನು ಬಯಸಲಿಲ್ಲ; ಅವರು ಉತ್ತರಾಯಣಮಾರ್ಗದಿಂದ ಅಮೃತತ್ವವನ್ನು ಹೊಂದಿ ದರು' ಎಂದು ಗಾರ್ಹಸ್ಥ್ಯಕ್ಕಿಂತ ಬೇರೆಯಾದ ಮೂರು ಆಶ್ರಮಗಳನ್ನೂ ಹೊಗಳುವ ಪುರಾಣವಾಕ್ಯವನ್ನು ಈ ಸೂತ್ರಕಾರರು ಉದಾಹರಿಸಿರುತ್ತಾರೆ. ಅನಾವೃಷ್ಟಿಯ ಕಾಲಕ್ಕೆ ಮಳೆ ಬರುವಂತೆ, ಪ್ರಜಾಸಂತತಿಯಿಲ್ಲದವರಿಗೆ ಮಕ್ಕಳಾಗುವಂತೆ, ದೂರದಲ್ಲಿದ್ದದ್ದೂ ತಮಗೆ ಕಾಣುವಂತೆ, ಮನೋವೇಗದಿಂದ ಲೋಕಾಂತರವನ್ನು ಮುಟ್ಟುವಂತೆ ಇವೇ ಮುಂತಾದ ಸಂಕಲ್ಪಗಳು, ಈ ಮೂರು ಆಶ್ರಮದವರಿಗೂ ಸಿದ್ಧಿಯಾಗುವದು ಪ್ರತ್ಯಕ್ಷಾ

ನುಭವದಲ್ಲಿದೆ; ಆದ್ದರಿಂದ ಆ ಮೂರು ಆಶ್ರಮಗಳೇ ಹೆಚ್ಚಿನವೆಂದು ಕೆಲವರ ಮತವು. ಆದರೆ ತ್ರೈವಿದ್ಯವೃದ್ಧರಾದವರು ಶಾಸ್ತ್ರದಲ್ಲಿ ವಿಧಿಸಿರುವ ಯಜ್ಞಾದಿಕರ್ಮಗಳಿಂದಲೇ ಗೃಹಸ್ಥಾಶ್ರಮವು ಹೆಚ್ಚಿನದೆಂದೂ ಮಿಕ್ಕ ಆಶ್ರಮಗಳನ್ನು ಅನುಸರಿಸುವದು ವೇದವಿರುದ್ಧ ವೆಂದೂ ಸಿದ್ಧವಾಗುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಅವರ ಮತದಲ್ಲಿ ಗೃಹಸ್ಥ ರಿಗೆ ಶ್ಮಶಾನವು ಸಿಕ್ಕುವದು' ಎಂಬ ವಚನಕ್ಕೆ ಅವರಿಗೆ ಪಿತೃಮೇಧವೆಂಬ ಉತ್ತರಸಂಸ್ಕಾರ ವುಂಟು ಎಂದು ಅರ್ಥ; ಆದ್ದರಿಂದಲೇ ಅವರಿಗೆ ಅನಂತವಾದ ಸ್ವರ್ಗವು ಫಲವೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ; ಪುಣ್ಯಾತ್ಮರಾದ ಗೃಹಸ್ಥರ ಶರೀರಗಳು ಈಗಲೂ ಥಳಥಳಿಸು ತ್ತಿರುವ ನಕ್ಷತ್ರಗಳಾಗಿ ಮಿಣುಗುತ್ತಿರುವವು. ಊರ್ಧ್ವರೇತಸ್ಕರಿಗೆ ಅಂತವುಳ್ಳಲೋಕವೂ ಸಂಕಲ್ಪಸಿದ್ಧಿಯೂ ಆಗಬಹುದು; ಆದರೆ ಅಷ್ಟರಿಂದಲೇ ಅವರ ಆಶ್ರಮಗಳು ಶ್ರೇಷ್ಠ ವೆಂದು ಹೇಳುವದಕ್ಕೆ ಆಗುವದಿಲ್ಲ ಎಂದು ವೇದವೃದ್ಧರ ಮತವನ್ನೂ ಆಪಸ್ತಂಬರು ಬರೆದಿರುತ್ತಾರೆ.

ಕೊನೆಯಲ್ಲಿ ಗೃಹಸ್ಥರನ್ನೇ ಹೊಗಳಿರುವದರಿಂದ ಗೃಹಸ್ಥಾಶ್ರಮವನ್ನೇ ಈ ಸೂತ್ರ ಕಾರರು ಹೆಚ್ಚಿನದೆಂದು ಹೇಳಿರುತ್ತಾರೆ – ಎಂದು ಕೆಲವರು ಅಭಿಪ್ರಾಯಪಟ್ಟಿರುತ್ತಾರೆ. ಹಿಂದೆಯೇ ಹೇಳಿರುವಂತೆ "ನಾಲ್ಕು ಆಶ್ರಮಗಳಲ್ಲಿ ಯಾವದರಲ್ಲಿದ್ದರೂ ಶಾಸ್ತ್ರದಲ್ಲಿ ಉಪದೇಶಮಾಡಿರುವಂತೆ ನಡೆದುಕೊಂಡವನಿಗೆ ಮುಕ್ತಿಯಾಗುವದು" ಎಂಬಲ್ಲಿ ನಿಷ್ಪಕ್ಷಪಾತವಾದ ತಮ್ಮ ಅಭಿಪ್ರಾಯವನ್ನು ಆಗಲೆ ಕೊಟ್ಟಿರುವದರಿಂದ ಶಾಸ್ತ್ರೋಕ್ತ ಧರ್ಮಗಳನ್ನು ಅನುಸರಿಸುವವನು ಯಾವ ಆಶ್ರಮದಲ್ಲಿದ್ದರೂ ಮುಕ್ತನಾಗುವನು ಎಂಬುದೇ ಈ ಗ್ರಂಥಕಾರರ ಸಿದ್ಧಾಂತವೆಂದು ಮತ್ತೆ ಕೆಲವರು ಹೇಳಿರುತ್ತಾರೆ. ಈ ಎರಡನೆಯ ಅಭಿಪ್ರಾಯವೇ ಯುಕ್ತತರವೆಂದು ಕಾಣುತ್ತದೆ.

# ಆಪಸ್ತಂಬಸೂತ್ರದಲ್ಲಿ ಅಧ್ಯಾತ್ಮವಿದ್ಯೆ

ಆಪಸ್ತಂಬರು ಮುಖ್ಯವಾಗಿ ಕರ್ಮವಿಚಾರದಲ್ಲಿ ಸೂತ್ರವನ್ನು ಬರೆದವರು. ಆದರೂ ಅವರು ಅಧ್ಯಾತ್ಮವಿದ್ಯೆಯ ವಿಷಯದಲ್ಲಿ ಹೇಳಿರುವ ಕೆಲವು ವಾಕ್ಯಗಳು ಮುಮುಕ್ಷುಗಳಿಗೆ ಮನನೀಯವಾಗಿರುತ್ತವೆ. ಇಲ್ಲಿ ನಾವು ಉದಾಹರಿಸಿರುವ ಸೂತ್ರ ಗಳು ಪತನೀಯಕರ್ಮಗಳಿಗೆ ಪ್ರಾಯಶ್ಚಿತ್ತವನ್ನು ಹೇಳುವ ಸಂದರ್ಭದಲ್ಲಿ ಬಂದಿರು

ತ್ತವೆ. ಈ ಭಾಗಕ್ಕೆ ಅಧ್ಯಾತ್ಮ ಪಟಲವೆಂಬ ಹೆಸರು ಬಂದಿರುತ್ತದೆ. ಶ್ರೀಶಂಕರಾಚಾರ್ಯರ ಹೆಸರಿನಲ್ಲಿ ಇದಕ್ಕೊಂದು ವ್ಯಾಖ್ಯಾನವು ಪ್ರಸಿದ್ಧವಾಗಿದೆ.

**''ಆಧ್ಯಾತ್ಮಿಕಾನ್ ಯೋಗಾನನುತಿಷ್ಠೇನ್ನ್ಯಾಯ ಸಗ್ಂಹಿತಾನನೈಶ್ಚಾರಿಕಾನ್''** ಎಂಬುದು ಮೊದಲನೆಯ ಸೂತ್ರವು. ಆತ್ಮಪ್ರಾಪ್ತಿಗೆ ಅನುಕೂಲವಾಗಿರುವ ಯೋಗಗಳನ್ನು ಅನುಷ್ಠಾನಮಾಡಬೇಕು. ಅವು ಯುಕ್ತಿಯುಕ್ತವಾಗಿರುತ್ತವೆ; ಅನೈಶ್ಚಾರಿಕವಾಗಿರುತ್ತವೆ, ಎಂದರೆ ಚಿತ್ತವು ಹೊರಕ್ಕೆ ಹರಿದಾಡುವದಕ್ಕೆ ಬರುವದಿಲ್ಲ. ಆದ್ದರಿಂದ ಆ ಯೋಗಗಳೆಂಬ ಉಪಾಯಗಳನ್ನು ಅನುಷ್ಠಾನಮಾಡತಕ್ಕದ್ದು ಎಂಬುದು ವಾಕ್ಯದ ಅಭಿಪ್ರಾಯವು.

**''ಆತ್ಮಲಾಭಾನ್ನಪರಂ ವಿದ್ಯತೇ''** ಆತ್ಮನ ಲಾಭಕ್ಕಿಂತ ಹೆಚ್ಚಿನ ಲಾಭವು ಇನ್ನೊಂದಿಲ್ಲ. ಆತ್ಮನನ್ನು ಬಿಟ್ಟು ಇಡಿಯ ಜಗತ್ತನ್ನೇ ಸಂಪಾದಿಸಿಕೊಂಡರೂ ಅದೊಂದು ಲಾಭವೆನಿಸುವದಿಲ್ಲ; ಏಕೆಂದರೆ ಆತ್ಮನೇ ಜಗತ್ತಿಗೆಲ್ಲ ತಿರುಳು. ಆತ್ಮನನ್ನು ಬಿಟ್ಟು ಮಿಕ್ಕದ್ದನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನಿಸುವದಕ್ಕೆ ಹವಣಿಸುವರು, ತಿರುಳನ್ನು ಬಿಸುಟು ಚಿಪ್ಪನ್ನು ಇಟ್ಟುಕೊಳ್ಳುವ ಪ್ರಯತ್ನವಾಗಿರುತ್ತದೆ.

**''ತತ್ರಾತ್ಮಲಾಭೀಯಾಂಛ್ಲೋಕಾನುದಾಹರಿಷ್ಯಾಮಃ''** ಇಲ್ಲಿ ಆತ್ಮಪ್ರಾಪ್ತಿಗೆ ಸಾಧನವನ್ನು ತಿಳಿಸುವ ಮಂತ್ರಗಳನ್ನು ಉದಾಹರಿಸುವೆವು ಎಂದು ಪ್ರತಿಜ್ಞೆಮಾಡಿ ಕೆಲವು ಮಂತ್ರಗಳನ್ನು ಉದಾಹರಿಸಿರುತ್ತಾರೆ. ಆದರೆ ಅವು ಈಗ ಪ್ರಸಿದ್ಧವಾಗಿರುವ ಉಪನಿಷತ್ತುಗಳಲ್ಲಿ ಕಂಡುಬರುವದಿಲ್ಲ. ಈ ವಾಕ್ಯಗಳನ್ನು ತಮ್ಮ ಭಾಷ್ಯಗಳಲ್ಲಿ ಉದಾಹರಿಸಿರುವ ಆಚಾರ್ಯರೂ ಇವುಗಳನ್ನು ಶ್ರುತಿಗಳೆಂದು ಉದಾಹರಿಸಿರುವದು ಕಂಡುಬರುವದಿಲ್ಲ. ಆದ್ದರಿಂದ ಇವುಗಳ ಮೂಲದ ವಿಷಯದ ಚರ್ಚೆಯನ್ನು ಶೋಧಕರಿಗೆ ಬಿಟ್ಟು ವಾಕ್ಯಗಳ ಅಭಿಪ್ರಾಯವನ್ನು ಮಾತ್ರ ಇಲ್ಲಿ ಕೊಡುವೆನು.

**''ಪೂಃ ಪ್ರಾಣಿನಃ ಸರ್ವ ಏವ ಗುಹಾಶಯಸ್ಯ ಅಹನ್ಯಮಾನಸ್ಯ ವಿಕಲ್ಮಷಸ್ಯ । ಅಚಲಂ ಚಲನಿಕೇತಂ ಯೇಽನುತಿಷ್ಠನ್ತಿ ತೇಽಮೃತಾಃ ॥''** ಪರಮಾತ್ಮನು ಸರ್ವರ ಹೃದಯಗುಹೆಯಲ್ಲಿ ವಾಸಮಾಡಿಕೊಂಡಿರುವಾತನು. ಆತನಿಗೆ ಎಲ್ಲಾ ಪ್ರಾಣಿಗಳ ಶರೀರಗಳೂ ಪುರಗಳು, ಎಂದರೆ ಕೋಟೆಗಳು, ಆತನು ಸರ್ವಗತನಾದ್ದರಿಂದ ಅಚಲನು; ಚಲವಾದ ಶರೀರಗಳಲ್ಲಿ ವಾಸವಾಗಿರುತ್ತಾನೆ. ಆತನನ್ನು ಜ್ಞಾನಧ್ಯಾನಾದಿಗಳ ಬಲದಿಂದ ಸಾಕ್ಷಾತ್ಕರಿಸಿಕೊಂಡವರು ಅಮೃತರಾಗುತ್ತಾರೆ.

**"ಯದಿದಮಿದಿಹೇದಿಹ ಲೋಕೇ ವಿಷಯಮುಚ್ಯತೇ । ವಿಧೂಯ ಕವಿ ರೇತದನುತಿಷ್ಠೇದ್ಗುಹಾಶಯಮ್ ॥"** ಈ ಲೋಕದಲ್ಲಿ ಇದು ಇಂಥದ್ದು ಇದು ಅಂಥದ್ದು -ಎಂದು ವಿಷಯವನ್ನು ಮೂಢರು ವರ್ಣಿಸುತ್ತಿರುವರಷ್ಟೆ; ಅದನ್ನು ಅತ್ತತಳ್ಳಿ ವಿವೇಕಿಯಾದವನು ಈ ಗುಹಾಶಯನಾದ ಪರಮಾತ್ಮನನ್ನು ಉಪಾಸನೆಮಾಡಬೇಕು.

**"ಆತ್ಮನ್ಯೇವಾಹಮಲಬ್ಧ್ವೈತದ್ಧಿತಗ್ಂ ಸೇವಸ್ವ ನಾಹಿತಮ್ । ಅಥಾನ್ಯೇಷು ಪ್ರತೀಚ್ಛಾಮಿ ಸಾಧುಷ್ಠಾನಮನಪೇಕ್ಷಯಾ ॥ ಮಹಾನ್ತಂ ತೇಜಸ್ಕಾಯಗ್ಂ ಸರ್ವತ್ರ ನಿಹಿತಂ ಪ್ರಭುಮ್ ॥"** ಮಹಾತ್ಮನಾಗಿ ಸ್ವಯಂಪ್ರಕಾಶನಾಗಿ ಸರ್ವಗತನಾಗಿ ಈ ಪ್ರಭು ವನ್ನು ನಾನು, ನನ್ನಲ್ಲಿಯೇ ಪಡೆದುಕೊಳ್ಳಲಾರದೆ, ಮಿಕ್ಕ ಇಂದ್ರಿಯಾದಿಗಳಲ್ಲಿ ಹುಡುಕು ತ್ತಿದ್ದೆನು. ಈಗ ನಾನು ಇಲ್ಲಿಯೇ ಕಂಡುಕೊಂಡಿರುವೆನು. ಆದ್ದರಿಂದ ನೀನು ಈ ಹಿತ ವಾದ ಸಾಧುಮಾರ್ಗವನ್ನೇ ಅನುಸರಿಸು, ಅಹಿತವಾದ ವಿಷಯಗಳನ್ನು ಬೆನ್ನಟ್ಟದಿರು.

**"ಸರ್ವಭೂತೇಷು ಯೋ ನಿತ್ಯೋ ವಿಪಶ್ಚಿದಮೃತೋ ಧ್ರುವಃ । ಅನಜ್ಯೋಽಶಬ್ದೋಽಶರೀರೋಽಸ್ಪರ್ಶಶ್ಚ ಮಹಾಂಚ್ಛುಚಿಃ ॥ ಸ ಸರ್ವಂ ಪರಮಾ ಕಾಷ್ಠಾ ಸ ವೈಷುವತಗ್ಂ ಸ ವೈ ವೈಭಾಜವಂ ಪುರಮ್ ॥"** ಆತನು ಎಲ್ಲಾ ಭೂತಗಳಲ್ಲಿಯೂ ಅವರು ನಾಶವಾದರೂ ತಾನು ನಾಶವಾಗದೆ ಇರುವನು. ಆತನು ಸರ್ವಜ್ಞನು, ಅಮೃತನು, ಒಂದೇ ರೂಪದಲ್ಲಿರುವವನು. ಆತನು ಅಶರೀರನು. ಶಬ್ದ ಸ್ಪರ್ಶಾದಿಭೂತ ಗುಣಗಳಿಲ್ಲದವನು, ಸೂಕ್ಷ್ಮಶರೀರರಹಿತನು, ಅತ್ಯಂತ ಶುದ್ಧನು, ಆತನು ಸರ್ವರೂಪನು, ಆತನೇ ಕೊನೆಯ ಗತಿ. ಸಂವತ್ಸರದ ನಡುವೆ ಇರುವ ವಿಷುವಂತವೆಂಬ ದಿನದಂತೆ, ಆತನು ಅಂಗಗಳ ನಡುವೆ ಇರುವ ಆತ್ಮನು, ಆತನೇ ವಿವಿಧ ಮಾರ್ಗಗಳಿಂದ ಭಜನೀಯವಾದ ಪುರವಾಗಿರುತ್ತಾನೆ.

**"ತಂ ಯೋಽನುತಿಷ್ಠೇತ್ಸರ್ವತ್ರ ಪ್ರಾಧ್ವಂ ಚಾಸ್ಯ ಸದಾ ಚರೇತ್ । ದುರ್ದರ್ಶಂ ನಿಪುಣಂ ಯುಕ್ತೋ ಯಃ ಪಶ್ಯೇತ್ ಸಮೋದೇತ ವಿಷ್ಟಪೇ ॥"** ಹೀಗಿರುವ ಆ ಪರಮಾತ್ಮನನ್ನು ಯಾವನು ಉಪಾಸನೆಮಾಡುವನೋ ಯಾವಾಗಲೂ ಆ ಪರಮಾತ್ಮಪ್ರಾಪ್ತಿಗೆ ಅನುಕೂಲವಾಗಿಯೇ ಆಚರಣೆಯನ್ನಿಟ್ಟುಕೊಂಡಿವನೋ, ದರ್ಶನಕ್ಕೆ ಸುಲಭವಾಗಿ ಸಿಕ್ಕದ, ಸೂಕ್ಷ್ಮನಾದ ಆತನನ್ನು ಯೋಗದಿಂದ ದರ್ಶನಮಾಡಿಕೊಳ್ಳು ವನೋ ಅವನು ಯಾವ ತಾಪವೂ ಇಲ್ಲದ ಸ್ವಮಹಿಮೆಯಲ್ಲಿದ್ದುಕೊಂಡು ಆನಂದಿಸುವನು.

"ಆತ್ಮನ್ ಪಶ್ಯನ್ಸರ್ವಭೂತಾನಿ ನ ಮುಹ್ಯೇತ್ ಚಿನ್ತಯನ್ಕವಿಃ । ಆತ್ಮಾನಂ ಚೈವ ಸರ್ವತ್ರ ಯಃ ಪಶ್ಯೇತ್ಸವೈ ಬ್ರಹ್ಮಾನಾಕಪೃಷ್ಠೇ ವಿರಾಜತಿ ॥" ಎಲ್ಲಾ ಪ್ರಾಣಿಗಳನ್ನೂ ತನ್ನಲ್ಲಿಯೇ ಕಾಣುತ್ತಾ ಯಾವ ಜಾಣನು ಮೋಹವನ್ನು ಹೊಂದದೆ ಇರುವನೋ, ಯಾವನು ತನ್ನನ್ನು ಎಲ್ಲೆಲ್ಲಿಯೂ ಕಾಣುತ್ತಿರುವನೋ ಅವನೇ ಬ್ರಾಹ್ಮಣನು. ಸ್ವರ್ಗಪ್ರದೇಶವಾದ ತನ್ನ ಸ್ವರೂಪದಲ್ಲಿದ್ದುಕೊಂಡು ಬೆಳಗುತ್ತಿರುವನು.

"ನಿಪುಣೋऽಣೀಯಾನ್ ಬಿಸೋರ್ಣಾಯಾಯಃ ಸರ್ವಮಾವೃತ್ಯ ತಿಷ್ಠತಿ । ವರ್ಷೀಯಾಗ್ಂಶ್ಚ ಪೃಥಿವ್ಯಾ ಧ್ರುವಃ ಸರ್ವಮಾರಭ್ಯ ತಿಷ್ಠತಿ ॥ ಸ ಇನ್ದ್ರಿಯೈರ್ಜಗತೋऽಸ್ಯ ಜ್ಞಾನಾದನ್ಯೋऽನನ್ಯಸ್ಯಜ್ಞೇಯಾತ್ ಪರಮೇಷ್ಠೀ ವಿಭಾಜಃ ತಸ್ಮಾತ್ ಕಾಯಾಃ ಪ್ರಭವನ್ತಿ ಸರ್ವೇ ಸ ಮೂಲಗ್ಂ ಶಾಶ್ವತಿಕಃ ಸ ನಿತ್ಯಃ ॥"

ಆತನು ಸೂಕ್ಷ್ಮನು, ಕಮಲದ ದಂಟಿನ ಎಳೆಗಿಂತಲೂ ಸೂಕ್ಷ್ಮನು; ಆದರೂ ಎಲ್ಲವನ್ನೂ ವ್ಯಾಪಿಸಿಕೊಂಡು ಇರುತ್ತಾನೆ. ಅವನು ಪೃಥಿವಿಗಿಂತಲೂ ದೊಡ್ಡವನು. ಎಲ್ಲವನ್ನೂ ಎತ್ತಿಹಿಡಿದುಕೊಂಡಿರುವನು, ಏಕರೂಪನಾಗಿರುವನು, ಇಂದ್ರಿಯಗಳಿಂದ ಆಗುವ ವಿಷಯಜ್ಞಾನ, ಮತ್ತು ವಿಷಯ – ಇವುಗಳಿಗಿಂತ ಬೇರೆಯಾಗಿರುವ ಪರಮೇಷ್ಠಿಯು, ಪರಮಸ್ಥಾನದಲ್ಲಿರುವವನು, ಆತನು ತಾನೇ ತನ್ನನ್ನು ವಿಧವಿಧವಾಗಿ ವಿಂಗಡಿಸಿಕೊಂಡಿರುವನು. ಆತನಿಂದಲೇ ಎಲ್ಲಾ ಶರೀರಗಳೂ ಉಂಟಾಗುವವು; ಆತನೇ ಮೂಲಕಾರಣನು, ಶಾಶ್ವತನು, ನಿತ್ಯನು.

ಹೀಗೆ ಆತ್ಮಸ್ವರೂಪವನ್ನು ವರ್ಣಿಸಿದ ಬಳಿಕ ಆಪಸ್ತಂಬರು ಅದರ ಪ್ರಾಪ್ತಿಗಾಗಿ ಯೋಗಗಳನ್ನು ಹೇಳಿರುತ್ತಾರೆ. ಯೋಗಗಳಿಂದ ಭೂತದಾಹೀಯ ದೋಷಗಳನ್ನು ನಾಶಪಡಿಸಿಕೊಂಡರೆ ಆತ್ಮಪ್ರಾಪ್ತಿಯಾಗುತ್ತದೆ ಎಂದು ಅವರ ಅಭಿಪ್ರಾಯ. ಕ್ರೋಧ, ಹರ್ಷ, ರೋಷ, ಲೋಭ ಮುಂತಾದವು ಪ್ರಾಣಿಗಳನ್ನು ಸುಡುವ ದೋಷಗಳು; ಅವುಗಳು ನಾಶವಾಗುವದಕ್ಕೆ ಅಕ್ರೋಧ, ಅಹರ್ಷ, ಅರೋಷ, ಅಲೋಭ ಮುಂತಾದ ಯೋಗಗಳನ್ನು ಎಂದರೆ ಉಪಾಯಗಳನ್ನು ಸಾಧನಮಾಡಬೇಕು. ಮತ್ತೊಬ್ಬರು ತನ್ನನ್ನು ಬಯ್ದರೆ ಆಗುವ ಮನೋವಿಕಾರವು ಕ್ರೋಧವು; ಅದು ಆಗದಂತೆ ಪ್ರಯತ್ನಪಡುವದು ಅಕ್ರೋಧವು. ಹೀಗೆಯೇ ಅಹರ್ಷ, ಅರೋಷ, ಅಲೋಭ, ಅಮೋಹ, ಅದಂಭ, ಅದ್ರೋಹ – ಮುಂತಾದವುಗಳನ್ನೂ ಪ್ರಯತ್ನಪೂರ್ವಕವಾಗಿ ಮಾಡಬೇಕು. ಸತ್ಯವನ್ನೇ ನುಡಿಯುವದು, ಅತಿಯಾಗಿ ತಿನ್ನದಿರುವದು, ಚಾಡಿಯನ್ನು ಹೇಳದಿರುವದು, ಅಸೂಯೆಯಿಲ್ಲ

ದಿರುವದು, ದಾನ, ತ್ಯಾಗ, ಋಜುಭಾವ, ಮೃದುಭಾವ, ಶಮ, ದಮ ಇವೇ ಮುಂತಾದ ಹಲವು ಸಾಧನಗಳನ್ನು ಉಪದೇಶಿಸಿದ ಮೇಲೆ ಕೊನೆಯಲ್ಲಿ : "**ಇತಿ ಸರ್ವಾಶ್ರಮಾಣಾಗ್ಂ ಸಮಯಪದಾನಿ ತಾನ್ಯನುತಿಷ್ಠನ್ ವಿಧಿನಾ ಸಾರ್ವಗಾಮೀ ಭವತಿ**" ಇವು ಎಲ್ಲಾ ಆಶ್ರಮದವರೂ ಮಾಡತಕ್ಕವು. ಅವುಗಳನ್ನು ಅನುಷ್ಠಾನಮಾಡಿದರೆ ಎಲ್ಲರಿಗೂ ಹಿತವನ್ನು ಕೊಡುವ ಪರಮಾತ್ಮನನ್ನು ಪಡೆಯುತ್ತಾನೆ ಎಂದು ಈ ಪ್ರಕರಣವನ್ನು ಉಪಸಂಸಾರಮಾಡಿರುತ್ತಾರೆ.

ಅಧ್ಯಾತ್ಮವಿದ್ಯೆಯು ಉತ್ಪನ್ನವಾಗುವದಕ್ಕೆ ಕರ್ಮದಿಂದಾಗುವ ಚಿತ್ತಶುದ್ಧಿಯು ಅವಶ್ಯವೆಂಬುದನ್ನು ಎಲ್ಲರೂ ಒಪ್ಪಿರುತ್ತಾರೆ. ಕರ್ಮಕಾಂಡದಲ್ಲಿ ಹೇಳಿರುವ ಕರ್ಮಗಳು ವೀರ್ಯವಂತವಾಗುವದಕ್ಕೆ ಅಧ್ಯಾತ್ಮಭಾವನೆಗಳು, ಅತ್ಯವಶ್ಯವೆಂದು ಧರ್ಮಶಾಸ್ತ್ರಕಾರರುಗಳು ಭಾವಿಸಿದ್ದರೆಂಬುದಕ್ಕೆ ಆಪಸ್ತಂಬ ಧರ್ಮಸೂತ್ರವು ಒಂದು ಉತ್ತಮವಾದ ಸಾಕ್ಷಿಯಾಗಿರುತ್ತದೆ.

ಕರ್ಮ, ಉಪಾಸನೆ, ಜ್ಞಾನ-ಎಲ್ಲಕ್ಕೂ ಶ್ರದ್ಧೆಯೂ ಮನಸ್ಸಿನ ನೈರ್ಮಲ್ಯವೂ ಅತ್ಯವಶ್ಯವೆಂದು ನಮ್ಮ ಧರ್ಮಗ್ರಂಥಗಳಲ್ಲಿ ಸಾರಿರುತ್ತದೆ. ಅಧ್ಯಾತ್ಮವಿದ್ಯೆಯು ಬರಿಯ ಬುದ್ಧಿಶಕ್ತಿಯಿಂದ ತಿಳಿದುಕೊಳ್ಳಬಹುದಾದದ್ದೆಂಬ ಭಾವನೆಯು ಮಾತ್ರ ಯಾವ ಗ್ರಂಥದಲ್ಲಿಯೂ ಇರುವದಿಲ್ಲ. ಅಧ್ಯಾತ್ಮವಿದ್ಯೆಯ ಪರಿಣಾಮವು ವ್ಯಕ್ತಿಯ ಜೀವನದಲ್ಲಿಯೂ ಸಮಾಜದ ಜೀವನದಲ್ಲಿಯೂ ಎಂಥ ಪ್ರಭಾವಶಾಲಿ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಋಋಋಋಋ

# ಶ್ರೀಶ್ರೀಗಳ ಕಾಲಡಿಯಾತ್ರೆ

ಶ್ರೀಶ್ರೀಗಳವರು ಕಾಲಡಿಗೆ ಹೋಗಿಬರಬೇಕೆಂದು ಭಗವತ್ಪಾದಾಚಾರ್ಯರ ಪ್ರೇರಣೆಯಂತೆ (ತಾ.10.1.1960 ಪುಷ್ಯ ಶುದ್ಧ ದ್ವಾದಶಿ) ಭಾನುವಾರದ ಸಾಯಂಕಾಲ ಮಿತಪರಿವಾರಸಮೇತ ಹೊರಟರು. ಬೆಳಗ್ಗೆ ಕೊಯಮುತ್ತೂರಿಗೆ ತಲುಪುವ ಹೊತ್ತಿಗೆ ಸರಿಯಾಗಿ ಮೈಸೂರು ಬ್ಯಾಂಕು ಮ್ಯಾನೇಜರ್ ಶ್ರೀ. ಕೃಷ್ಣಸ್ವಾಮಿರಾವ್ ಮತ್ತು ಮಠದ ಏಜಂಟರವರಾದ ಶ್ರೀ ನಾರಾಯಣ ಅಯ್ಯರ್ ರವರು ಸ್ಟೇಷನ್‌ಬಳಿ ಶ್ರೀಗಳನ್ನು ಸ್ವಾಗತಿಸಿ ಶ್ರೀಶಂಕರಮಠಕ್ಕೆ ಕರೆದೊಯ್ದರು.

ಮಠದಲ್ಲಿ ಧರ್ಮಾಧಿಕಾರಿಗಳಾದ ಶ್ರೀ ಕೆ. ರಾಮಸ್ವಾಮಯ್ಯನವರು, ಎಮ್. ಎ., ಬಿ.ಟಿ., ಯವರು ಮತ್ತು ಕೆಲವು ಜನ ಮಹಾಶಯರು ಶ್ರೀಗಳ ದರ್ಶನವನ್ನು ಮಾಡಿದರು. ಅಯ್ಯರ್‌ರವರೂ ಶ್ರೀಗಳ ಭಿಕ್ಷಾದಿಗಳಿಗೆ ಬೇಕಾದ ಸೌಕರ್ಯವನ್ನೆಲ್ಲ ಏರ್ಪಡಿಸಿದ್ದರು. ಮಠದಲ್ಲಿ ಬೆಳಗ್ಗೆ ಮತ್ತು ಸಾಯಂಕಾಲ - ಎರಡು ಹೊತ್ತೂ ಸತ್ಕಾಲಕ್ಷೇಪಕ್ಕೆ ಏರ್ಪಾಡಾಗಿತ್ತು. ಮಠವೂ ಸಭಾಂಗಣವೂ ವಿಶಾಲವಾಗಿದ್ದು ಹಿಂದಿನ ಭಾಗದಲ್ಲಿ ಆಗಂತುಕ ಭಕ್ತರ ಸೌಕರ್ಯಗಳಿಗೂ ಏರ್ಪಾಡಿದೆ.

ಆ ದಿನ ಬೆಳಗ್ಗೆಯೇ ಬ್ಯಾಂಕುಮ್ಯಾನೇಜರವರು ಸಾಯಂಕಾಲ ಶ್ರೀಶ್ರೀ ಗಳವರ ಉಪದೇಶವಾಗುವದೆಂದು ಜನಗಳಲ್ಲಿ ಪ್ರಕಟನೆಯ ಮೂಲಕ ತಿಳಿಸಿದ್ದರು. ಸಾಯಂಕಾಲ ಶ್ರೀಶ್ರೀಗಳು 5 ಘಂಟೆಯಿಂದ **ಶಂಕರಭಗವತ್ಪಾದರವರ ಉಪದೇಶಗಳನ್ನು** ಕುರಿತು ಇಂಗ್ಲಿಷಿನಲ್ಲಿ ಒಂದು ಭಾಷಣಮಾಡಿದರು. ಅದರ ಸಾರಿವಿದು :

"ಸುಮಾರು 50 ವರ್ಷಗಳ ಮೇಲೆ ಶ್ರೀಶಂಕರ ಭಗವತ್ಪಾದರವರ ಜನ್ಮ ಭೂಮಿಯ ದರ್ಶನವನ್ನು ಮಾಡಿಕೊಂಡು ಬರಬೇಕೆಂದು ಮನಸ್ಸಿನಲ್ಲಿ ಮತ್ತೆ ಪ್ರೇರಣೆಯಾಗಿರುತ್ತದೆ. ಇಲ್ಲಿಯ ಆಚಾರ್ಯಭಕ್ತರ ಅಭಿಪ್ರಾಯದಂತೆ ನನಗೂ ನಿಮಗೂ ಪರಕೀಯವಾಗಿರುವ ಇಂಗ್ಲಿಷಿನಲ್ಲಿ ಮಾತನಾಡಲು ಒಪ್ಪಿರುತ್ತೇನೆ. ಸದ್ಯಕ್ಕೆ ಭಾರತ ದೇಶದ ಬೇರೆಬೇರೆಯ ಪ್ರಾಂತ್ಯದವರು ಅಭಿಪ್ರಾಯವಿನಿಮಯ ಮಾಡಿಕೊಳ್ಳುವದಕ್ಕೆ ಇಂಗ್ಲಿಷು ಭಾಷೆಯೊಂದೇ ಸಾಧನವಾಗಿರುವದೊಂದು ದುರ್ದೈವ. ನಮ್ಮ ಎಲ್ಲಾ ದೇಶ ಭಾಷೆಗಳಿಗೂ ಜನನಿ, ಅಥವಾ ಧಾತ್ರಿಯಾಗಿರುವ ಸಂಸ್ಕೃತವಾಣಿಗೆ ನಮ್ಮ ದೇಶ ದಲ್ಲಿಯೇ ಈ ಸ್ಥಾನವು ದೊರೆಯದಿರುವದು ನಮ್ಮ ಜನನಾಯಕರ ಉಪೇಕ್ಷೆಯಿಂದ

ಆಗಿರುತ್ತದೆ. ಆಚಾರ್ಯರ ಉಪದೇಶಗಳನ್ನು ಇಂದಿಗೂ ನಮ್ಮೆಲ್ಲರಿಗೂ ಅವರ ಲೇಖನಿಯಿಂದ ಬಂದಂತೆಯೇ ಜೀವಂತವಾಗಿಟ್ಟುಕೊಂಡಿರುವ ಆ ಭಾಷೆಯಲ್ಲಿಯೇ ನಾವುಗಳು ಆ ಮಹನೀಯರನ್ನು ಕುರಿತು ಮಾತನಾಡುವಂತಿದ್ದರೆ ಎಷ್ಟು ಉಚಿತವೂ ಸುಬೋಧವೂ ಆಗಿರುತ್ತಿತ್ತು! ಇದಂತಿರಲಿ. ಈ ದಿನ ನಾನು ಬಳಸುವ ಇಂಗ್ಲಿಷ್ ಭಾಷೆಯ ಶಬ್ದಸೌಷ್ಠವ, ವ್ಯಾಕರಣ ಸಂಮತತ್ವ- ಮುಂತಾದವುಗಳ ಕಡೆಗೆ ತಾವು ಹೆಚ್ಚಿನ ಲಕ್ಷ್ಯವನ್ನು ಕೊಡದೆ ವಿಷಯವನ್ನೇ ಮುಖ್ಯವೆಂದೆಣಿಸುತ್ತೀರೆಂದು ನಂಬುತ್ತೇನೆ. ಏಕೆಂದರೆ ಶ್ರೀಶಂಕರಭಗವತ್ಪಾದರವರ ಉಪದೇಶದಂತೆ ವೇದಾಂತಾರ್ಥವಾಗಿರುವ ಪರಬ್ರಹ್ಮತತ್ತ್ವವು ವಾಙ್ಮನಸ್ಸುಗಳಿಗೆ ಆಗೋಚರವಾದದ್ದಾಗಿರುತ್ತದೆ.

ಈ ವೇದಾಂತಸಿದ್ಧಾಂತವನ್ನು ಆಚಾರ್ಯರೇನೂ ಹೊಸದಾಗಿ ಜನರಿಗೆ ಬೋಧಿಸಲಿಲ್ಲ, ಅವರಿಗಿಂತ ಮೊದಲೇ ಹಲವು ಅದ್ವೈತವೇದಾಂತಪ್ರಕ್ರಿಯೆಗಳು ಪ್ರಚಾರದಲ್ಲಿದ್ದವು. ಆದರೆ ಅವರು ಭರತಖಂಡದಲ್ಲೆಲ್ಲ ಸಂಚಾರಮಾಡಿ ಗ್ರಂಥಗಳ ಮೂಲಕವಾಗಿ ಆಚಂದ್ರಾರ್ಕವಾಗಿ ನೆಲೆನಿಲ್ಲುವಂತೆ ಮಾಡಿದ ಒಂದಾನೊಂದು ಸಾಂಪ್ರದಾಯಿಕ 'ಪ್ರಕ್ರಿಯೆಯ ಸ್ಫುಟಬೋಧನಪ್ರಕಾರಕ್ಕೆ ನಾವೆಲ್ಲರೂ ಇಂದಿಗೂ ಆ ಮಹನೀಯರಿಗೇ ಚಿರಋಣಿಗಳಾಗಿರುತ್ತೇವೆ. ಶಂಕರರು ಉಪದೇಶಿಸಿದ ವೇದಾಂತಸಿದ್ಧಾಂತವು ಯಾವುದು? – ಎಂಬುದನ್ನು ತಿಳಿಸುವದಕ್ಕೆ ವ್ಯಾಖ್ಯಾನಕಾರರು ಹೊರಟು ಮುಖ್ಯವಾಗಿ ಹಲವು ಬಗೆಯಿಂದ ಅದನ್ನು ವಿವರಿಸಿರುತ್ತಾರೆ. ಈ ವ್ಯಾಖ್ಯಾನಪ್ರಕಾರಗಳನ್ನು **ವಾರ್ತಿಕ ಪ್ರಸ್ಥಾನ, ಭಾಮತೀಪ್ರಸ್ಥಾನ, ವಿವರಣಪ್ರಸ್ಥಾನ** – ಎಂದು ಮೂರು ಬಗೆಗಳಲ್ಲಿ ಅಡಕ ಮಾಡಬಹುದಾಗಿರುತ್ತದೆ. ವ್ಯಾಖ್ಯಾನಗಳು ಆಚಾರ್ಯರ ಮೂಲಭಾಷ್ಯದ ಅಭಿಪ್ರಾಯವನ್ನೇ ಹೊರಗೆಡಹುವದಕ್ಕೆ ಪ್ರಯತ್ನಿಸಿದ್ದರೂ ಅದನ್ನು ವರ್ಣಿಸಿರುವ ಪ್ರಕ್ರಿಯೆಗಳು ಕೆಲವು ಪ್ರಧಾನವಿಚಾರಗಳಲ್ಲಿ ಪರಸ್ಪರ ವಿರುದ್ಧವಾಗಿಯೇ ಇರುತ್ತವೆ. ಇಂತ ಸಂದರ್ಭದಲ್ಲಿ, ಆಚಾರ್ಯರ ಮೂಲಭಾಷ್ಯಗಳೇ ನಮ್ಮ ಮುಂದೆ ಅಚ್ಚಳಿಯದೆ ಅವರು ಉಪದೇಶಿಸಿದಂತೆಯೇ ಇರುವದು ಎಂಥ ಸೌಭಾಗ್ಯ!

ಆಚಾರ್ಯರು ವೇದಾಂತಗಳ ಎಂದರೆ ಉಪನಿಷತ್ತುಗಳ ಉದ್ದೇಶವನ್ನು ಸಂಗ್ರಹಿಸಿ ಒಂದು ಸಾರವತ್ತಾದ ವಾಕ್ಯದಲ್ಲಿ ನಮ್ಮಗಳಿಗೆಲ್ಲ ತಿಳಿಯ ಹೇಳಿರುತ್ತಾರೆ;

**"ಅಸ್ಯಾನರ್ಥಹೇತೋಃ ಪ್ರಹಾಣಾಯ ಆತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ"**

ಈ ಅನರ್ಥಹೇತುವಾದ ಅವಿದ್ಯೆಯನ್ನು ನಾಶಗೊಳಿಸುವದಕ್ಕಾಗಿ, ಆತ್ಮೈಕತ್ವ ವಿದ್ಯಾಪ್ರಾಪ್ತಿಗಾಗಿ, ಸಕಲವೇದಾಂತಗಳು ಬಂದಿರುತ್ತವೆ – ಎಂಬುದು ವಾಕ್ಯದ ಅರ್ಥ. ಇಲ್ಲಿ ಅವಿದ್ಯೆಯನ್ನು ನಾಶಮಾಡುವದರ ಮೂಲಕ ಆತ್ಮೈಕತ್ವವಿದ್ಯೆಯನ್ನು ಪಡೆದುಕೊಳ್ಳ ಬೇಕೆಂದರ್ಥವೊ ಅಥವಾ ಆತ್ಮೈಕತ್ವಜ್ಞಾನವನ್ನು ಸಂಪಾದಿಸಿಕೊಳ್ಳುವದರ ಮೂಲಕ ಅವಿದ್ಯೆಯನ್ನು ತೊಲಗಿಸಿಕೊಳ್ಳಬೇಕೆಂದರ್ಥವೊ?– ಎಂಬುದು ವಿಚಾರಣೀಯವಾಗಿದೆ. ಕೆಲವರ ಅಭಿಪ್ರಾಯದಲ್ಲಿ ಆತ್ಮೈಕತ್ವವಿದ್ಯಾಪ್ರಾಪ್ತಿಯೇ ಗುರಿಯಾಗಿರಬೇಕು. ಅದರಿಂದ ಅವಿದ್ಯಾನಾಶವು ತನಗೆತಾನೇ ಆಗುತ್ತದೆ – ಎಂದು ಅವರ ಮತ. ಆದರೆ ಆಚಾರ್ಯರ ಹೃದಯವನ್ನು ಒಳಹೊಕ್ಕು ನೋಡುವವರಿಗೆ ಇದು ಸರಿಯೆನಿಸುವದಿಲ್ಲ, ಏಕೆಂದರೆ ಆತ್ಮನು ಸ್ವಯಂಸಿದ್ಧನಾಗಿರುತ್ತಾನೆ. ತನ್ನನ್ನು ತಾನು ಸಿದ್ಧಮಾಡಬೇಕೆಂದು ಯಾವನೂ ಪ್ರಮಾಣವನ್ನು ಹುಡುಕುವಹಾಗಿಲ್ಲ; ಏಕೆಂದರೆ ವಿಚಾರಮಾಡುವ ಮುಂಚೆಯೇ ಆತ್ಮನು ಇದ್ದುಕೊಂಡಿರುತ್ತಾನೆ. ಆದ್ದರಿಂದ ಈ ವಾಕ್ಯದ ತಾತ್ಪರ್ಯವು ಎಲ್ಲಿದೆ? – ಎಂದರೆ ಆತ್ಮನಿದ್ದಾನೆಂಬುದು ಗೊತ್ತು; ಆದರೆ ಆತ್ಮನು ಒಬ್ಬನೇ ಎಂಬ ತಿಳಿವಳಿಕೆ – ಆತ್ಮೈಕತ್ವವಿದ್ಯೆಯು – ವೇದಾಂತದಿಂದ ಬರಬೇಕಾಗಿದೆ.

ಆತ್ಮನ ವಿಷಯದಲ್ಲಿ ನಮಗೆ ಅನೇಕ ವಿರುದ್ಧಾಭಿಪ್ರಾಯಗಳಿರುತ್ತವೆ. ನಮ್ಮಲ್ಲಿ ಒಬ್ಬೊಬ್ಬರಿಗೂ ಒಬ್ಬೊಬ್ಬ ಆತ್ಮನಿರುತ್ತಾನೆ; ಪ್ರತಿಯೊಬ್ಬ ಆತ್ಮನಿಗೂ ಅವನವನ ಶರೀರ, ಇಂದ್ರಿಯಗಳು, ಮನಸ್ಸು – ಇವು ಬೇರೆಬೇರೆಯಾಗಿರುತ್ತವೆ. ಒಬ್ಬೊಬ್ಬರಿಗೂ ಬೇರೆ ಬೇರೆಯ ಪದಾರ್ಥಗಳೂ ಜನರೂ ಇಷ್ಟವಾಗಿರುತ್ತಾರಾದ್ದರಿಂದ ತನತನಗೆ ಬೇಕಾದ ಇಷ್ಟವನ್ನು ಸಂಪಾದಿಸಿಕೊಳ್ಳುವದಕ್ಕೂ ಅನಿಷ್ಟವನ್ನು ಪರಿಹರಿಸಿಕೊಳ್ಳುವದಕ್ಕೂ ಪ್ರತಿ ಯೊಬ್ಬನೂ ಹವಣಿಸುತ್ತಿರುತ್ತಾನೆ. ವ್ಯಕ್ತಿಗಳಿಗೆ ಹೇಗೋ ಹಾಗೆಯೇ ಜನರ ತಂಡತಂಡ ಗಳಿಗೂ ಸುಖದುಃಖಗಳಿಗೆ ಸಾಧನವಾಗಿರುವ ಇಷ್ಟಾನಿಷ್ಟಗಳು ಬೇರೆಬೇರೆಯಾಗಿರುತ್ತವೆ ಎಂದೇ ನಮ್ಮ ಭಾವನೆ. ಈ ಭಾವನೆಯಿಂದಲೇ ನಾವು ಒಬ್ಬರಲ್ಲೊಬ್ಬರು ರಾಗದ್ವೇಷ ಗಳಿಂದ ವರ್ತಿಸುತ್ತಾ ಸಂಸಾರದುಃಖವನ್ನು ಅನುಭವಿಸುತ್ತಿರುತ್ತೇವೆ. ಇದು ಅವಿದ್ಯೆ. ಏಕೆಂದರೆ ಹೀಗೆ ಅನೇಕರು ಆತ್ಮರುಗಳಿದ್ದಾರೆಂಬುದಕ್ಕೆ ಯಾವ ಪ್ರಮಾಣವೂ ಇರುವದಿಲ್ಲ. ಸರಿಯಾಗಿ ನೋಡಿದರೆ ಒಬ್ಬ ಆತ್ಮನೇ ಎಲ್ಲರಿಗೂ ಆತ್ಮನಾಗಿರುತ್ತಾನೆ. ಎಲ್ಲಾ ಮನುಷ್ಯ ರಿಗೆ ಮಾತ್ರ ಆತ್ಮನು ಒಬ್ಬನೆಂದು ಅಭಿಪ್ರಾಯವಲ್ಲ; ಸರ್ವಪ್ರಾಣಿಗಳಿಗೂ ಆತ್ಮನು ಒಬ್ಬನೇ ಆಗಿರುತ್ತಾನೆ. '**ಏಕೋ ದೇವಃ ಸರ್ವಭೂತೇಷು ಗೂಢಃ**' ಒಬ್ಬ ದೇವನೇ ಸರ್ವಭೂತಗಳಿಗೂ ಆತ್ಮನಾಗಿದ್ದುಕೊಂಡಿರುತ್ತಾನೆ. ನಮ್ಮ ತಪ್ಪುತಿಳಿವಳಿಕೆಯನ್ನು ನಾವು

ಈ ವಿದ್ಯೆಯಿಂದ ತೊಲಗಿಸಿಕೊಳ್ಳಬೇಕು - ಎಂಬುದೇ ವೇದಾಂತದ ಉಪದೇಶವೆಂದು ಆಚಾರ್ಯರು ನಮಗೆಲ್ಲ ಈ ವಾಕ್ಯದಿಂದ ಹೇಳಿಕೊಡುತ್ತಿದ್ದಾರೆ.

ನಾವು ಬೇರೆಬೇರೆ ಎಂಬಿದು ಅವಿದ್ಯೆ, ತಪ್ಪುತಿಳಿವಳಿಕೆ - ಎಂಬುದನ್ನು ಹೇಗೆ ಮನದಟ್ಟುಮಾಡಿಕೊಳ್ಳಬೇಕು? - ಎಂದು ನೀವು ಕೇಳಬಹುದು. ಇದಕ್ಕೆ ಉತ್ತರವೇ ನೆಂದರೆ, 'ನಾನೊಬ್ಬ ವ್ಯಕ್ತಿಯು; ನಾನು ಕರ್ಮವನ್ನು ಮಾಡಿ ಅದರ ಫಲವನ್ನು ಪಡೆದುಕೊಳ್ಳುತ್ತಿರುವೆನು; ನಾನು ಪ್ರಮೇಯವನ್ನು ಇಂದ್ರಿಯಗಳಿಂದ ಅರಿತುಕೊಳ್ಳುವ ಪ್ರಮಾತೃವು. ನನಗೆ ಇಂದ್ರಿಯಗಳಿಗಾಶ್ರಯವಾಗಿರುವ ಶರೀರವೊಂದುಂಟು' ಎಂಬೀ ಭಾವನೆಯು ನಮಗೆಲ್ಲರಿಗೂ ಸ್ವಾಭಾವಿಕವಾಗಿದ್ದುಕೊಂಡಿರುವದಾದರೂ ಇದಕ್ಕೆ ಯಾವ ಅನುಭವದ ಆಧಾರವೂ ಇರುವದಿಲ್ಲ. ನಾನು ಅರಿಯುವಾತನು, ಕರ್ಮವನ್ನು ಮಾಡುವಾತನು, ಫಲವನ್ನು ಅನುಭವಿಸುವಾತನು - ಎನ್ನುವಾಗಲೆ ಮೊದಲನೆಯ ದಾಗಿ ಶರೀರವೂ ಇಂದ್ರಿಯಗಳೂ ನನಗೆ ಇವೆ ಎಂದು ಅವಿಚಾರದಿಂದ ಇಟ್ಟುಕೊಂಡೇ ಹೊರಡಬೇಕಾಗುತ್ತದೆ. ನನಗಿಂತ ಬೇರೆಯಾಗಿ ನನ್ನ ನೆರಳೊಂದು ಇದೆ ಎಂದು ಅವಿವೇಕ ದಿಂದ ಜನರು ಭಾವಿಸುವಂತೆಯೇ, ನನಗಿಂತ ಬೇರೆಯಾಗಿ ಶರೀರೇಂದ್ರಿಯಗಳ ಸಂಘಾತವೊಂದು ನನಗೆ ಸಂಬಂಧಿಸಿಕೊಂಡಿದೆ ಎಂದೇ ಅವಿಚಾರ ದಶೆಯಲ್ಲಿಟ್ಟು ಕೊಂಡು ಬಿಟ್ಟಿರುವರು. ಆದರೆ ಸುಷುಪ್ತಿಯೇ ಮುಂತಾದ ಅವಸ್ಥೆಗಳಲ್ಲಿ ಈ ಶರೀರೇಂದ್ರಿಯಗಳ ಗುಂಪಿನ ಸಂಬಂಧವು ನನಗೆ ಎಳ್ಳಷ್ಟೂ ಇರುವದಿಲ್ಲವೆಂಬುದು ಸರ್ವಾನುಭವಸಿದ್ಧವು. ಆದ್ದರಿಂದ ನಾನು ಶರೀರಿಯು, ನಾನು ಪ್ರಮಾತೃವು, ನಾನು ಸಂಸಾರಿಯು ಎಂಬಿದು ಅವಿದ್ಯಾಮಾತ್ರವೆಂದಾಯಿತು.

ಕನಸಿನ ಉದಾಹರಣೆಯಿಂದಲೂ ಈ ಅಭಿಪ್ರಾಯವನ್ನು ಪುಷ್ಟಿಗೊಳಿಸಿಕೊಳ್ಳ ಬಹುದು. ಹೇಗೆಂದರೆ ಕನಸಿನಲ್ಲಿಯೂ ನಮಗೆ ಶರೀರೇಂದ್ರಿಯಗಳ ಗುಂಪೊಂದು ಇರುವಂತೆ ತೋರುತ್ತಿರುತ್ತದೆ. ಆದರೆ ಆ ಶರೀರವು ಇದಲ್ಲ, ಆ ಇಂದ್ರಿಯಗಳು ಇವಲ್ಲ; ಅಲ್ಲಿಯ ಅರಿವಾಗಲಿ, ಕರ್ಮಗಳಾಗಲಿ ಫಲಭೋಗವಾಗಲಿ ಒಂದೂ ಈ ಎಚ್ಚರದಲ್ಲಿಲ್ಲ, ಅವೆಲ್ಲ ಬರಿಯ ಹುಸಿತೋರಿಕೆಯೆಂದು ನಮಗೆ ಈಗ ನಿಸ್ಸಂಶಯವಾಗಿ ಗೊತ್ತಾಗಿಬಿಟ್ಟಿದೆ. ಆದರೂ ಆ ಕಾರ್ಯಕರಣಸಂಘಾತವು ನಿಜವಾದದ್ದೆಂದೂ ನಮ್ಮ ಜ್ಞಾತೃತ್ವವೂ ಕರ್ತೃತ್ವಭೋಕ್ತೃತ್ವವೂ ಆಗ್ಗೆ ನಿಜವೆಂದೂ ತೋರಿತು. ಅಲ್ಲವೆ? ಅಲ್ಲಿ ಅನೇಕರು ನಮ್ಮಂಥ ಕರ್ತೃಭೋಕ್ತೃಗಳಿದ್ದಾರೆಂದೂ ಆಗ್ಗೆ ನಿಜವಾಗಿ ತೋರುತ್ತಿತ್ತು. ಆ ಕನಸಿನ ಪ್ರಪಂಚಕ್ಕೆ ನನ್ನ ಆತ್ಮನೊಬ್ಬನೇ ಆತ್ಮನಾಗಿದ್ದನು. ಅನೇಕ ಆತ್ಮರು ನಿಜವಾಗಿರಲಿಲ್ಲ.

ಅವರಲ್ಲಿ ತೋರುತ್ತಿದ್ದ ಶುತ್ರಮಿತ್ರಾದಿಭಾವಗಳೂ ನಿಜವಾಗಿರಲಿಲ್ಲ, ಅಲ್ಲವೆ? ಅದರಂತೆ ಈಗಲೂ ನಮಗೆ ನಿಜವೆಂದು ತೋರುವ ಕರ್ತೃತ್ವಾದಿಗಳೂ ಹುಸಿಯೆಂದೇ ನಿಶ್ಚಯಿಸ ಬೇಕು. ನಮ್ಮಂತೆ ಅನೇಕ ಆತ್ಮರು ಬೇರಬೇರೆಯಿರುವರೆಂಬುದೂ ಹುಸಿಯೆಂದೇ ನಿಶ್ಚಯಿಸಬೇಕು. ನಮಗೆಲ್ಲರಿಗೂ ಒಬ್ಬನೇ ನಿಜವಾದ ಆತ್ಮನಿರುತ್ತಾನೆ ಎಂಬುದೇ ನಿಜ ವಾದ ತಿಳಿವು. ಇದೇ **ಆತ್ಮೈಕತ್ವವಿದ್ಯೆ;** ಇದನ್ನು ಅರಿತುಕೊಳ್ಳುವದೇ ಪರಮಪುರುಷಾರ್ಥ – ಎಂಬಿದು ಭಗವತ್ಪಾದಾಚಾರ್ಯರ ಮತದಲ್ಲಿ ವೇದಾಂತೋಪದೇಶ.

ತಾ.12.1.60 ಪುಷ್ಯ ಶುದ್ಧ 14 ಮಂಗಳವಾರ ಬೆಳಗ್ಗೆ ಕೊಯಮುತ್ತೂರಿನಿಂದ ಹೊರಟು ಮಧ್ಯಾಹ್ನ ಮೂರು ಘಂಟೆಗೆ ಪ್ರಂಗುನವ್ ಎಂಬ ಸ್ಟೇಷನ್ನಿಗೆ ಬಂದೆವು. ಅಲ್ಲಿ ಶ್ರೀ ಟಿ.ಬಿ.ಸೀತಾರಾವ್ ಪುಷ್ಪಗಿರಿ (ಚಂದ್ರಚೂಡ) ಇವರ ಮನೆಗೆ ಬಂದೆವು. ಶ್ರೀಯುತರು ತಮ್ಮ ಕಾರನ್ನು ಸ್ಟೇಷನ್ನಿಗೆ ಕಳುಹಿಸಿದ್ದರು. ಆ ಅಯ್ಯರನ್ನು ಗಣಪತಿ ಅಯ್ಯರ್ ಎಂದೂ ಕರೆಯುತ್ತಾರೆ. ಅವರು ಆದರದಿಂದ ಎಲ್ಲರನ್ನೂ ಬರಮಾಡಿಕೊಂಡು ಶ್ರೀಗಳಿಗೂ ಪರಿವಾರದವರಿಗೂ ವಸತಿಯೇ ಮುಂತಾದ ಸೌಕರ್ಯಗಳನ್ನು ಕಲ್ಪಿಸಿ ಕೊಟ್ಟರು. ಅದೇ ದಿನ ಸಾಯಂಕಾಲ 3 ರಿಂದ 4.30 ಘಂಟೆಯವರೆಗೂ ಶ್ರೀರಾಮ ಕೃಷ್ಣಾಶ್ರಮಶಾಖೆಯಲ್ಲಿ ಈಶ್ವರಾನಂದಜೀಯವರೊಡನೆ ಶ್ರೀಗಳು ವಿಚಾರ ವಿನಿಯಮ ಮಾಡಿದರು. ಈಶ್ವರಾನಂದರು ಬರೆದಿದ್ದ "God Realization" ಈಶ್ವರ ಸಾಕ್ಷಾತ್ಕಾರದ ವಿಷಯವಾಗಿ ಚರ್ಚೆ ನಡೆಯಿತು. ಅಲ್ಲಿದ್ದ ಪ್ರಕಾಶಾನಂದಜಿಯವರೂ ಸಂಸ್ಕೃತದಲ್ಲಿ ಮಾತನಾಡುತ್ತಾ ಚರ್ಚೆಯಲ್ಲಿ ಭಾಗವಹಿಸಿದ್ದರು. ಸಾಯಂಕಾಲ ಬಂದು ಸ್ನಾನಾಹ್ನಿಕ ಗಳನ್ನು ಮಾಡಿದೆವು.

ರಾತ್ರೆ ಸುಮಾರು 1-30 ಘಂಟೆಗೆ ಶ್ರೀ ಸೀತಾರಾಮರವರ ಕಾರಿನಲ್ಲಿ ಗುರುವಾಯೂರಿಗೆ ಹೋದೆವು; ಅಲ್ಲಿ ಕೊಳದಲ್ಲಿ ಸ್ನಾನಮಾಡಿ ಶ್ರೀಕೃಷ್ಣದರ್ಶನ ಮಾಡಿ ಕೊಂಡೆವು. ಗುರುವಾಯೂರಿನಲ್ಲಿ ದೂರದೇಶದಿಂದ ಬಂದ ಭಕ್ತರು ನೂರು ಗಟ್ಟಲೆ ಯಾಗಿ ಬಂದು ಶ್ರೀಕೃಷ್ಣದರ್ಶನಕ್ಕಾಗಿ ನಾರಾಯಣನಾಮಸ್ಮರಣೆಮಾಡಿಕೊಂಡು ನಿಂತಿದ್ದ ದೃಶ್ಯವು ನೋಡುವಂತೆ ಇತ್ತು. ಗುರುವಾಯೂರಿನಿಂದ ಹಿಂತಿರುಗಿ ಬರುವಾಗ ಶ್ರೀರಾಮಕೃಷ್ಣಮಠದ ಮುಖ್ಯಸ್ಥಾನಕ್ಕೆ ಶ್ರೀ ಈಶ್ವರಾನಂದಜಿಯವರ ಕೋರಿಕೆಯಂತೆ ಹೋದೆವು. ಆಶ್ರಮದ ಕಟ್ಟಡವು ವಿಶಾಲವಾಗಿದೆ. ಅದಕ್ಕೆ ಸೇರಿದಂತೆ ಹೈಸ್ಕೂಲು ಒಂದು ಇದೆ. ಆಶ್ರಮದ ಭಾಗಗಳನ್ನೆಲ್ಲ ಶ್ರೀಗಳಿಗೆ ತೋರಿಸಿದ ಬಳಿಕ ಶ್ರೀಪ್ರಕಾಶಾನಂದಜಿಯವರೂ ಶ್ರೀ ಈಶ್ವರಾನಂದಜಿಯವರೂ ಸ್ಕೂಲು ವಿದ್ಯಾರ್ಥಿಗಳಿಗೆ ಶ್ರೀಗಳ ದರ್ಶನಮಾಡಿಸಿ

ಅದರ ಸತ್ಕಾರಪೂರ್ವಕವಾಗಿ ಬೀಳ್ಕೊಟ್ಟರು. ಬೆಳಗ್ಗೆ ಸುಮಾರು 7 ಘಂಟೆಗೆ ಮನೆಗೆ ಬಂದೆವು.

ಸ್ನಾನವಾದ ಮೇಲೆ ವೃಷಭಾಚಲದರ್ಶನಕ್ಕೆ ಹೋದೆವು. ಶಂಕರಾಚಾರ್ಯರು ಅಂತರ್ಧಾನವಾದದ್ದು ವೃಷಭಾಚಲದಲ್ಲಿ ಎಂತ ಒಂದು ಕಥಯಿದೆ. ಅಲ್ಲಿ ವೃಷಭಾ ಚಲೇಶ್ವರ (ಈ ಹೆಸರು ಅಲ್ಲಿ ಬಹುಜನರಿಗೆ ತಿಳಿಯದು ಬಡಗುದಿಕ್ಕಿನ ಒಡೆಯ ಎಂಬರ್ಥದ ತಮಿಳು ಹೆಸರಿನಿಂದ ದೇವರನ್ನು ಕರೆಯುತ್ತಾರೆ.) ಗಣಪತಿ, ಕೃಷ್ಣ ಶಂಕರನಾರಾಯಣ, ರಾಮದೇವರು, ಪಾರ್ವತಿ, ಶಾಸ್ತಾ – ಇಷ್ಟು ದೇವರುಗಳನ್ನು ನೋಡಿಕೊಂಡು ಬಂದೆವು. ದೇವಾಲಯದ ಹೊರಭಾಗದಲ್ಲಿ ಒಂದು ವೃಂದಾವನವಿದೆ. ಅಲ್ಲಿ ಶಿಲೆಯ ಶಂಖಚಕ್ರಗಳೂ ಇವೆ. (ಆ ಸ್ಥಳವು ಆಚಾರ್ಯರ ಸಮಾಧಿ ಎಂದು ಒಬ್ಬರು ಹೇಳಿದರು.) ಮನೆಗೆ ಬಂದ ಮೇಲೆ ದೀಕ್ಷಾವಿಸರ್ಜನೆಯಾಯಿತು. ಕೊಳದಲ್ಲಿ ಸ್ನಾನಮಾಡಿ ಈಶ್ವರ ಮತ್ತು ರಾಮದೇವರ ದರ್ಶನವನ್ನು ಮಾಡಿಕೊಂಡು ಬಂದು ಭಿಕ್ಷೆಯನ್ನು ಸ್ವೀಕರಿಸಿದರು.

ಸಾಯಂಕಾಲ 6.30 ಘಂಟೆಗೆ ರಾಮಕೃಷ್ಣಾಶ್ರಮದಲ್ಲಿ **ಈಶ್ವರಭಕ್ತಿಯ** ವಿಷಯ ವಾಗಿ ಶ್ರೀಗಳವರ ಉಪದೇಶವಾಯಿತು. ಅದರ ಸಾರವನ್ನು ಕೆಳಗೆ ಕೊಟ್ಟಿದೆ: ಭಕ್ತಿ ಯೆಂಬ ಭಾವನೆಯು ಅನೇಕಮತಗಳಲ್ಲಿರುತ್ತದೆಯಾದರೂ ಸನಾತನ ಧರ್ಮಗಳಲ್ಲಿ ಆ ಶಬ್ದಕ್ಕೆ ವ್ಯಾಪಕವಾದ ಅರ್ಥವಿಶೇಷವಿರುತ್ತದೆ. ಶಾಂಡಿಲ್ಯರು ಬರೆದಿರುವ ಭಕ್ತಿಸೂತ್ರ ಗಳಲ್ಲಿ **'ಸಾ ಪರಾನುರಕ್ತಿರೀಶ್ವರೇ'** ಈಶ್ವರನಲ್ಲಿರುವ ಹೆಚ್ಚಿನ ಅನುರಕ್ತಿಯೇ ಭಕ್ತಿ – ಎಂದಿರುತ್ತಾರೆ. ಪರಮೇಶ್ವರನ ವೈಭವವನ್ನು ಅರಿತುಕೊಂಡ ಮೇಲೆ ಆತನಲ್ಲಿ ಉಂಟಾ ಗುವ ಪರಮಾನುರಾಗವದು. ಇಂಗ್ಲಿಷಿನಲ್ಲಿರುವ ಲವ್ (Love) ಎಂಬ ಶಬ್ದವನ್ನು ಕೀಳ್ತರದ ಪ್ರೇಮಕ್ಕೂ ಉಪಯೋಗಿಸುತ್ತಾರೆ. ಸಂಸ್ಕೃತದಲ್ಲಿ ಹಾಗಿಲ್ಲ. ನಮಗಿಂತ ದೊಡ್ಡವರಾದವರ ವಿಷಯಕ್ಕೆ ಇರುವ ಪ್ರೇಮವು ಮಾತ್ರ ಭಕ್ತಿಯೆನಿಸುವದು.

ಪ್ರಪಂಚಕ್ಕೆಲ್ಲ ಆಧಾರವಾಗಿರುವ ಪರಮಾರ್ಥವೇ ಬ್ರಹ್ಮ ಆತ್ಮ – ಮುಂತಾದ ಶಬ್ದಗಳಿಂದ ಹೇಳಲ್ಪಡುತ್ತದೆ. ನಿಜವಾಗಿ ಅದು ಶಬ್ದವಾಚ್ಯವಲ್ಲವಾದರೂ ಅದು ಪೂಜ್ಯ ವೆಂದು ತಿಳಿಸುವದಕ್ಕಾಗಿ ಭಗವಂತ, ವಾಸುದೇವ, ನಾರಾಯಣ, ಎಂಬ ಹೆಸರು ಗಳಿಂದ ಕರೆಯುವರು. ತರ್ಕದಿಂದ ತತ್ತ್ವವನ್ನು ಸಿದ್ಧಮಾಡಲಾಗಲಾರದು; ಯಾವ ಪ್ರತ್ಯಯವೂ ಅದನ್ನು ಹಿಡಿಯಲಾರದು. ಆಧ್ಯಾತ್ಮಿಕ, ಆಧಿಭೌತಿಕ – ಈ ಎರಡಕ್ಕೂ

ಆಧಾರವಾಗಿರುವ, ಅವುಗಳ ತಿರುಳನ್ನೇ ನಾವು ಪರಮಾರ್ಥ, ವಾಸುದೇವ - ಎಂದು ಕರೆಯುವದು. ಆ ತತ್ತ್ವದ ಮಹಿಮೆಯನ್ನು ತಿಳಿದ ಬಳಿಕ (ಅನು) ಉಂಟಾಗುವ ಭಕ್ತಿಯೇ ಪ್ರೇಮವೇ ಭಕ್ತಿ ಶಬ್ದಕ್ಕೆ ಅರ್ಹವಾದದ್ದು. ವಾಸುದೇವ ಎಂಬ ಶಬ್ದವು ಎಲ್ಲೆಲ್ಲಿಯೂ ವ್ಯಾಪಿಸಿರುವವೆಂದು ಹೇಳುತ್ತದೆ. ಜ್ಯೋತಿಗಳು, ಭುವನಗಳು, ವನಗಳು, ಗಿರಿಗಳು - ಮುಂತಾಗಿ ಎಲ್ಲವೂ ಆತನೇ ಎಂದು ಪುರಾಣವು ಹೇಳುತ್ತಿರುವದು. ಎಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದ ಆತನಿಗೆ ಸರ್ವನೆಂದೂ ಹೆಸರು. ನಮಗೆ ಕಾಣುತ್ತಿರುವದೆಲ್ಲವೂ ಸರ್ವವು; ಅದರ ತಿರುಳು ವಾಸುದೇವನು, ವಾಸುದೇವನೇ. ಸರ್ವವೆಂದು ಅರಿತಿರುವವನು ಮಹಾತ್ಮರು ಎಂದು ಗೀತೋಕ್ತಿ.

ಪರಮಾತ್ಮನ ನಿರ್ಗುಣರೂಪಕ್ಕೂ ಸಗುಣರೂಪಕ್ಕೂ ಯಾವ ಭೇದವೂ ಇಲ್ಲ, ಆದ್ದರಿಂದಲೇ ಆತ್ಮಾರಾಮರೂ ಆತನಲ್ಲಿ ಭಕ್ತಿಯನ್ನು ಮಾಡುತ್ತಾರೆ. **'ಇತ್ಥಂ ಭೂತ ಗುಣೋ ಹರಿಃ'**- ಇಂಥ ಗುಣವುಳ್ಳವನು ಹರಿಯು ಎಂದು ಶುಕರು ಹೇಳಿರುತ್ತಾರೆ. ನಾರಾಯಣಭಗವಂತನ ಗುಣಗಳಾದ ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ, ತೇಜಸ್ಸು - ಇವುಗಳು ಆತನಲ್ಲಿ ಸದಾ ಇರುತ್ತವೆ ಎಂದು ಆಚಾರ್ಯರು ಹೇಳಿರುವದರಿಂದ ಗುಣಿಯಾದ ಭಗವಂತನಿಗಿಂತ ಗುಣಗಳಾದ ಜ್ಞಾನಾದಿಗಳು ಎಂದಿಗೂ ಬೇರೆಯಲ್ಲ ಎಂದು ಅರಿಯಬೇಕಾಯಿತು. ಸೂರ್ಯನಿಗಿಂತ ಪ್ರಕಾಶವು ಹೇಗೆ ಭಿನ್ನವಲ್ಲವೋ ಹಾಗೆಯೇ ಆ ಪರಮತತ್ತ್ವವೇ ಬಹುವಾಗುವೆನು ಎಂದು ಸಂಕಲ್ಪಿಸಿ ದ್ರಷ್ಟ್ರಾದ್ಯವತಾರಗಳನ್ನು ಪಡೆದಿರುತ್ತದೆ. ವಸುದೇವನ ಮಗನಾಗಿ ಪರಿಚ್ಛಿನ್ನನಂತೆ ಕಾಣುವವನೇ ಆಗಲೇ ಸರ್ವವ್ಯಾಪಕನಾದ ವಾಸುದೇವನಾಗಿರುತ್ತಿದ್ದನೆಂಬುದು ಆತನ ಮಹಿಮೆಯಿಂದ ಭಕ್ತರಿಗೆ ಗೊತ್ತಾಯಿತು.

ಹೀಗೆ ಭಗವತ್ತತ್ತ್ವದ ಜ್ಞಾನವನ್ನು ಸಂಪಾದಿಸಿಕೊಂಡು ಮಾಡುವ ಪ್ರೇಮವು ಉತ್ತಮತರದ್ದಾದರೂ ಎಲ್ಲರಿಗೂ ಸಾಧ್ಯವಲ್ಲ, ಆದ್ದರಿಂದ ಸ್ವಕರ್ಮದಿಂದ ಆತನನ್ನು ಅಭ್ಯರ್ಚನೆಮಾಡುವ ಗೌಣಭಕ್ತಿಯನ್ನು ಭಗವಂತನು ಉಪದೇಶಿಸಿರುತ್ತಾನೆ. ಗೌಣಭಕ್ತಿಯನ್ನು ಮಾಡುವವರಿಗೆ ಜ್ಞಾನನಿಷ್ಠಾರೂಪವಾದ ಪರಭಕ್ತಿಯು ಕಟ್ಟಿಟ್ಟಬುತ್ತಿ. ಆದರೆ ಸ್ವಾರ್ಥಪರರಾದವರಿಗೆ ಗೌಣಭಕ್ತಿಯ ಮಾರ್ಗವೇ ಇಲ್ಲ; ಇನ್ನು ಭಗವತ್ಪ್ರಾಪ್ತಿಯೆಲ್ಲಿಯದು? ಇದನ್ನು ತಿಳಿದು ಭಕ್ತಿಮಾರ್ಗವನ್ನು ಹಿಡಿದು ಕೃತಾರ್ಥರಾಗಬೇಕು.

ತಾ.14.1.1960ರ ಬೆಳಿಗ್ಗೆ ಭಿಕ್ಷೆ ತೀರಿಸಿಕೊಂಡ ಬಳಿಕ ಶ್ರೀಗಳು ಕಾಲಡಿಗೆ ಹೊರಟರು. ಮಧ್ಯಾಹ್ನಕ್ಕೆ ಕಾಲಡಿಗೆ ಬಂದು ತಲುಪಿದೆವು. ಬಸ್ಸಿನವರು ಸ್ವಲ್ಪ ದೂರ ದಲ್ಲಿಯೇ ಬಸ್ಸು ನಿಲ್ಲಿಸಿದ್ದರಿಂದ ಕೂಲಿಯವರ ಸಹಾಯವಿಲ್ಲದೆ, ನಾವೇ ಸಾಮಾನು ಗಳನ್ನು ತೆಗೆದುಕೊಂಡು ಶ್ರೀಶಂಕರಮಠವನ್ನು ಸೇರಿದೆವು. ದಾರಿಯಲ್ಲಿ ಅಲ್ಲಿಯ ಮಹಾವಿದ್ಯಾಲಯದ ಅದ್ವೈತಪ್ರಾಧ್ಯಾಪಕರಾದ ಬ್ರ.ಶ್ರೀ.ಕೃಷ್ಣಶಾಸ್ತ್ರಿಗಳವರು ಎದುರು ಗೊಂಡು ನಮ್ಮನ್ನು ಮಠಕ್ಕೆ ಕರೆದುಕೊಂಡು ಹೋದರು. ವೇದಾಂತಿವಿದ್ಯಾರ್ಥಿ ಶ್ರೀ ಶ್ರೀನಿವಾಸಯ್ಯ ಎಂಬವರು ನಮ್ಮನ್ನು ಸರಿಯಾದ ಸ್ಥಳದಲ್ಲಿ ಇಳಿಸಿ ಬೇಕಾದ ಅನುಕೂಲ್ಯಗಳನ್ನೆಲ್ಲ ಕಲ್ಪಿಸಿಕೊಟ್ಟರು.

ಶ್ರೀಗಳು ಪ್ರಯಾಣದಿಂದ ಬಹಳ ಆಯಾಸಪಟ್ಟಿದ್ದರಾದರೂ ಶ್ರೀಶಂಕರ ಭಗವತ್ಪಾದರವರ ಜನ್ಮಭೂಮಿಯಿಂದ ಕಾಲಡಿಯನ್ನು ಕಂಡು ಬಹಳ ಹರ್ಷಿತರಾದರು. ಪೂರ್ಣಾನದಿಯಲ್ಲಿ ಘಟ್ಟದ ಮೆಟ್ಟಿಲುಗಳನ್ನು ಇಳಿಯುವದು ಅವರಿಗೆ ಸ್ವಲ್ಪ ಕಷ್ಟ ವಾಯಿತು. ವಿದ್ಯಾರ್ಥಿ ಶ್ರೀನಿವಾಸಯ್ಯನವರು ಶ್ರೀಗಳಿಗೆ ಸಹಾಯಮಾಡಿ ಸರಿಯಾದ ಸ್ಥಳದಲ್ಲಿ ಇಳಿಸಿದರು. ಆ ದೇಶದಲ್ಲಿ ಬ್ರಾಹ್ಮಣೇತರರೂ ಪ್ರತಿ ದಿನವೂ ಸ್ನಾನ ಮಾಡುತ್ತಾರೆ; ದೇವರ ದರ್ಶನ ಮಾಡುತ್ತಾರೆ. ಈ ಶುಚಿಯಾದ ಆಚಾರವು ನಮ್ಮ ದೇಶಕ್ಕೂ ಬಂದರೆ ಒಳ್ಳೆಯದಾದೀತು.

ಪೂರ್ಣಾನದಿಯ ಸ್ನಾನವೇ ನಮಗೆ ಬಹಳ ಆನಂದವನ್ನುಂಟುಮಾಡಿತು. ಆ ನದಿಯಲ್ಲಿ ನೀರು ಆಳವಾಗಿರುತ್ತದೆ; ಅಲ್ಲಿ ಮೊಸಳೆಯೊಂದು ಆಚಾರ್ಯರ ಕಾಲನ್ನು ಹಿಡಿದುಕೊಂಡದ್ದರ ವ್ಯಾಜದಿಂದ ಅವರು ಸಂನ್ಯಾಸಕ್ಕೆ ತಾಯಿಯ ಅನುಜ್ಞೆಯನ್ನು ಪಡೆದರೆಂಬುದು ನಿಜವಾಗಿರಬಹುದೆಂದು ಊಹಿಸುವದಕ್ಕೆ ಅವಕಾಶವಿದೆ.

ಕೃಷ್ಣದರ್ಶನ, ಶಕ್ತಿಗಣಪತಿ ದರ್ಶನ, ಆಚಾರ್ಯರ ಮಾತೃಸಮಾಧಿಯ ದರ್ಶನ - ಇವುಗಳನ್ನು ಮಾಡಿಕೊಂಡು ಶ್ರೀ ಆಚಾರ್ಯರ ಅರ್ಚನವನ್ನು ಯಥಾ ಶಕ್ತಿಯಾಗಿ ನೆರವೇರಿಸಿದೆವು. ಶ್ರೀಗಳು ರಚಿಸಿದ್ದ "**ಮಾಂಡೂಕ್ಯರಹಸ್ಯ ವಿವೃತಿಃ**"ಯ ಭಾಗವನ್ನು ನಾನು ಓದಿದೆನು; ಶ್ರೀಗಳವರು ಅದರ ಅಭಿಪ್ರಾಯವನ್ನು ವಿವರಿಸಿದರು. **ಶ್ರೀಶಾರದಾದೇವಿಯ ಅರ್ಚನೆಯನ್ನು ಮಾಡಿಸಿದೆವು. ಶ್ರೀಗಳು ಅಲ್ಲಿ ಶ್ರೀಸಚ್ಚಿದಾ ನಂದ ಶಿವಾಭಿನವನೃಸಿಂಹಭಾರತೀಸ್ವಾಮಿಗಳವರು ಸುಮಾರು 50 ವರ್ಷಗಳ ಹಿಂದೆ ತಮಗೂ ಮತ್ತು ಕೆಲವರು ಮಿತ್ರರಿಗೂ ಭಾಷ್ಯಶಾಂತಿಯನ್ನು ಮಾಡಿಸಿ**

ತತ್ತ್ವೋಪದೇಶವನ್ನು ಮಾಡಿದ ಸುಮುಹೂರ್ತವನ್ನು ನೆನಪಿಗೆ ತಂದುಕೊಂಡರು.

ತಾರೀಖು 15.1.1960ನೆಯ ಶುಕ್ರವಾರ ಶ್ರೀಗಳವರ ಭಿಕ್ಷೆಯಾದ ಮೇಲೆ ಬ್ರಾಹ್ಮಣರಿಗೆ ಹಸ್ತೋದಕವನ್ನು ಹಾಕಿ ಪ್ರಯಾಣಕ್ಕೆ ಸಿದ್ಧರಾದೆವು. ಕಾಲಡಿಯಲ್ಲಿ ಮಠದ ಮ್ಯಾನೇಜರ್ ಶ್ರೀರಾಮಮೂರ್ತಿಗಳ ಮತ್ತು ವಿದ್ವಾನ್ ಕೃಷ್ಣಶಾಸ್ತ್ರಿಗಳ ಸಹಾಯವು ನಮಗೆ ಎಲ್ಲಾ ಸೌಕರ್ಯಗಳನ್ನೂ ಮಾಡಿಕೊಟ್ಟಿತು. ವಿದ್ಯಾರ್ಥಿ ಶ್ರೀನಿವಾಸಯ್ಯನವರ ಸಾದರಸೇವೆಯ ವಿಷಯವನ್ನು ಆಗಲೆ ತಿಳಿಸಿರುತ್ತೇನೆ.

ಕೊಯಮತ್ತೂರಿಗೆ ರೈಲುಮಾರ್ಗವಾಗಿ ಬಂದು ರಾತ್ರೆಗೆ ಶ್ರೀಶಂಕರಮಠವನ್ನು ಸೇರಿದೆವು. ಆ ದಿವಸ ಪ್ರಯಾಣವು ಸ್ವಲ್ಪ ಆಯಾಸಕರವಾಗಿತ್ತಾದರೂ ಮಾರನೆಯ ದಿನ ಬೆಳಗಿನಜಾವಕ್ಕೇ ಹೊರಟು ಅಣ್ಣೂರಿಗೆ ಬಸ್ಸಿನ ಮೇಲೆ ಪ್ರಯಾಣಮಾಡಿದೆವು. ದಾರಿಯಲ್ಲಿ ಭವಾನೀನದಿಯಲ್ಲಿ ಸ್ನಾನಮಾಡಿಕೊಂಡು ಚಾಮರಾಜನಗರವನ್ನು ಸೇರಿದೆವು. ಆ ಊರಲ್ಲಿ ಇಳಿಯಬೇಕೆಂದು ಮೊದಲು ಸಂಕಲ್ಪಿಸಿತ್ತು. ಆದರೆ ಮೈಸೂರಿಗೆ ಟ್ಯಾಕ್ಸಿ ಸಿಕ್ಕಿದ್ದರಿಂದ ನೇರಾಗಿ ಪ್ರಯಾಣ ಮಾಡಿಬಿಟ್ಟೆವು. ರಾತ್ರೆ ಶ್ರೀ ತಿಮ್ಮಪ್ಪಯ್ಯನವರು ನಮಗೆ ಬೇಕಾದ ಸೌಕರ್ಯಗಳನ್ನೆಲ್ಲ ಮಾಡಿಕೊಟ್ಟರು. 17ನೇ ತಾರೀಖು ಭಾನುವಾರ ಶ್ರೀ ತಿಮ್ಮಪ್ಪಯ್ಯನವರು ಶ್ರೀಗಳಿಗೆ ಪಾದಪೂಜೆಯನ್ನೂ ಭಿಕ್ಷೆಯನ್ನೂ ಮಾಡಿಸಿದರು. ಆ ಬಳಿಕ ಶ್ರೀಗಳು ಎಲ್ಲರಿಗೂ ನಾರಾಯಣಸ್ಮರಣೆಯನ್ನು ತಿಳಿಸಿ ಬೆಂಗಳೂರಿಗೆ ಪ್ರಯಾಣ ಮಾಡಿದರು.

ಇಂತಹ ಯಾತ್ರೆಯಿಂದಾಗುವ ಪ್ರಯೋಜನವೆಂದರೆ : ಸಂಸಾರದಲ್ಲಿ ನಾವೆಲ್ಲರೂ ಒಂದಾನೊಂದು ಯಾತ್ರೆಗೆ ಹೊರಟಿರುತ್ತೇವೆ. ಭಗವಂತನು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತಾನಾದರೂ ನಾವು ಹಲವು ದೇವತೆಗಳ ದರ್ಶನದಿಂದಲೂ ಪೂಜೆಯಿಂದಲೂ ಕೃತಾರ್ಥರಾದವೆಂದು ತಿಳಿಯುತ್ತಿದ್ದೇವೆ. ಆದರೆ ನಮಗೆ ಜನ್ಮಜನ್ಮಾಂತರಗಳು ಎಂದರೂ ನಮ್ಮ ಯಾತ್ರೆಯು ಮುಗಿಯುವಂತಿರುವದಿಲ್ಲ ಕಟ್ಟಕಡೆಗೆ ಶ್ರೀಗುರುವೆಂಬ ಭಗವನ್ಮೂರ್ತಿಯ ದರ್ಶನವು ಹೇಗೋ ನಮಗೆ ದೊರಕುವದು. ಆತನ ಪೂಜೆಯನ್ನು ಮಾಡಿ ಪ್ರಸಾದವನ್ನು ಸ್ವೀಕರಿಸಿದರೆ ನಮ್ಮ ಜೀವನಯಾತ್ರೆಯು ಮುಗಿದಂತಾಗುವದು. ಭಗವಂತನ ಸ್ಥಾನದಲ್ಲಿ ನಮಗೆ ನಿತ್ಯಶಾಂತಿಯು ದೊರಕುವದು.

ಐಐಐಐಐ

# ಶ್ರೀಶ್ರೀಗಳವರ ದಕ್ಷಿಣದೇಶ ಪ್ರವಾಸ

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ದಕ್ಷಿಣಪ್ರಾಂತ್ಯದಲ್ಲಿರುವ ತಪೋವನವೇ ಮುಂತಾದ ಪವಿತ್ರಸ್ಥಳಗಳ ದರ್ಶನಕ್ಕಾಗಿ ತಾವು ಹೊರಡುವದಾಗಿಯೂ ತಮ್ಮ ಜೊತೆಯಲ್ಲಿರುವದಕ್ಕೆಂತ ನನಗೂ ಒಂದು ಪತ್ರವನ್ನು ಮೈಸೂರಿಗೆ ಹಾಕಿದರು. ಅಷ್ಟರೊಳಗೆ ನಾನು ನನ್ನ ಬಂಧುಗಳೊಬ್ಬರ ಮನೆಯಲ್ಲಾಗುವ ವಿವಾಹದ ನಿಮಿತ್ತ ಬೆಂಗಳೂರಿಗೆ ಹೊರಟಿದ್ದೆನು. ಆದ್ದರಿಂದ ಅವರನ್ನು ಬೆಂಗಳೂರಿಗೇ ಬರುವಂತೆ ಕೇಳಿಕೊಂಡೆನು. ಶ್ರೀಗಳವರು ತಾ.10.11.1965ನೆಯ ಬುಧವಾರ ನಾನಿದ್ದಲ್ಲಿಗೆ ಬರಬೇಕೆಂದು ಪತ್ರವ್ಯವಹಾರದಿಂದ ನಿಶ್ಚಯವಾಯಿತು. ಶ್ರೀಗಳವರನ್ನು ಬರಮಾಡಿಕೊಳ್ಳುವದಕ್ಕೆಂದು ನಾನು ಶ್ರೀಸೀತಾರಾಮಯ್ಯನವರು, ಅವರ ಮಕ್ಕಳು, ತಮ್ಮಂದಿರು, ಶ್ರೀ ಶ್ರೀಕಂಠಯ್ಯನವರು ಮತ್ತು ಮಕ್ಕಳು, ಶ್ರೀದೇವರಾಯಕುಲಕರ್ಣಿ ಮುಂತಾದವರು ಸ್ಟೇಷನ್ ಬಳಿಗೆ ಬಂದೆವು. ಅಷ್ಟರಲ್ಲಿ ಶ್ರೀ ಬಿ.ಹೆಚ್. ರಾಮನಾಥಸ್ವಾಮಿಗಳವರು ಶ್ರೀ ಖೋಡೆ ಲಕ್ಷ್ಮಣಸಾರವರ ಮೋಟಾರುಕಾರನ್ನು ತೆಗೆದುಕೊಂಡುಬಂದರು. ಸಂಜೆಗೆ ಗವೀಪುರದಲ್ಲಿದ್ದ ಶ್ರೀ ಸೀತಾರಾಮಯ್ಯನವರ ಮನೆಗೆ ಬಂದು ಸೇರಿದೆವು.

### 11.11.1965 ಗುರುವಾರ

ಆದಿನ ರಾತ್ರೆ ನಿರ್ಣಯವಾದದ್ದರಲ್ಲಿ ತಪೋವನಕ್ಕೆ ಹೋಗುವ ಬಸ್ಸುಗಳು ಪ್ರಯಾಣಕ್ಕೆ ಅಷ್ಟು ಸೌಕರ್ಯವಿಲ್ಲವೆಂದೂ ರೈಲಿನಲ್ಲಿಯೇ ಹೋಗತಕ್ಕದ್ದೆಂದೂ ಆಯಿತಾದ್ದರಿಂದ ನಾನು ಮೊದಲು ಏರ್ಪಡಿಸಿಕೊಂಡಿದ್ದ ಕಾರ್ಯಕ್ರಮದಲ್ಲಿ ಸ್ವಲ್ಪ ಮಾರ್ಪಾಡಾಯಿತು. ಆದರೆ ಇದೂ ಮಾರನೆಯ ದಿನ ಮಾರ್ಪಾಡಾಗಿ ಶ್ರೀಗಳು, ಶ್ರೀಮತಿ ಲಕ್ಷ್ಮಮ್ಮನವರು ಮತ್ತು ನಾನು–ಈ ಮೂವರೇ ಹೊರಡಬೇಕೆಂದಾಯಿತು. ರೈಲು ಮೂಲಕ ಹೋಗುವ ಪ್ರಯಾಣವೂ ನಮ್ಮ ಕಾರ್ಯಕ್ರಮಕ್ಕೆ ಅಷ್ಟು ಅನುಕೂಲಿಸಲಾರದೆಂದು ತೋರಿದ್ದರಿಂದ ಶ್ರೀಮಾನ್ ಲಕ್ಷ್ಮಣಸಾರವರು ಆ ದಿನ ಬೆಂಗಳೂರಿನಲ್ಲಿಯೇ ವಿಶ್ರಮಿಸಿಕೊಳ್ಳಬೇಕೆಂದೂ ಮಾರನೆಯ ದಿನ ಒಂದು ಕಾರನ್ನೇ ಶ್ರೀಗಳ ಪ್ರಯಾಣಕ್ಕೆ ಸಿದ್ಧಪಡಿಸಿಕೊಡುವದಾಗಿಯೂ ಹೇಳಿದರು. ಅದೇ ದಿನ ಹಿಂದೆ ಆಂಧ್ರ ಪ್ರವಾಸದಲ್ಲಿ ಶ್ರೀಗಳ ಜೊತೆಯಲ್ಲಿ ಬಂದು ಸಹಾಯಮಾಡಿದ್ದ **ಶ್ರೀನಿಖಿಲಾನಂದ ಗುಪ್ತರು** ತಾವು ಸ್ಥಾಪಿಸಿಕೊಂಡಿದ್ದ ಪರಮಾರ್ಥಸಂಘಕ್ಕೆ ಶ್ರೀಗಳನ್ನು ಕರೆದೊಯ್ದರು. ಶ್ರೀಗುಪ್ತರು 'ಭಗವದ್ಗೀತಾಸಮಾಜ' 'ಯೋಗನಿಷ್ಠಾಸಮಾಜ' – ಮುಂತಾದ ಸಂಘ

ಗಳನ್ನು ಸ್ಥಾಪಿಸಿ ಹೆಸರುಗೊಂಡಿದ್ದರೆಂದು ನನಗೆ ಅಧ್ಯಾತ್ಮಪ್ರಕಾಶಪತ್ರಿಕೆಯ ಮೂಲಕ ತಿಳಿದಿತ್ತು. ಆದರೆ ಜನರನ್ನು ಅಧ್ಯಾತ್ಮಸಾಧನೆಗೆ ಸಂಘಟನೆಮಾಡುವ ಅಸಾಧಾರಣ ಶಕ್ತಿಯೂ ಗ್ರಂಥರಚನಾದಿಗಳಲ್ಲಿ ಹೆಚ್ಚಿನ ಆಸಕ್ತಿಯೂ ಅವರಲ್ಲಿ ಇದೆಯೆಂಬುದು ಈ ದಿನ ಚೆನ್ನಾಗಿ ಮನವರಿಕೆಯಾಯಿತು. ಅವರ ಮನೆಯಲ್ಲಿ ಪರಮಾರ್ಥಸಂಘದ ಸದಸ್ಯರಾದ ಮಹಿಳೆಯರೂ ಅಲ್ಲದೆ ಇನ್ನೂ ಅನೇಕರು ಸ್ತ್ರೀಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಶ್ರೀ ಗುಪ್ತರು ತಾವು ರಚಿಸಿದ್ದ ಎರಡುಗ್ರಂಥಗಳನ್ನು ಸಮರ್ಪಿಸಿ ಶ್ರೀಶ್ರೀಗಳವರ ಪರಿಚಯವನ್ನು ನೆರೆದಿದ್ದ ಮಹಾ ಜನರಿಗೆಲ್ಲ ಮಾಡಿಕೊಟ್ಟ ಬಳಿಕ ಸಮಾಜದ ಸ್ತ್ರೀಯರು ವಿವಿಧವಾದ ಪದಪದ್ಯಗಳನ್ನು ಹಾಡಿದರು. ಭಗವದ್ಗೀತೆಯ ಹದಿನೈದನೆಯ ಅಧ್ಯಾಯವನ್ನು ಒಟ್ಟಾಗಿ ಹಾಡಿದರು. ಆ ಬಳಿಕ ಗುಪ್ತರ ಪ್ರಾರ್ಥನೆಯಂತೆ ಶ್ರೀಶ್ರೀಗಳವರು **ಗೀತೆಯ ಹದಿನೈದನೆಯ ಅಧ್ಯಾಯದ ಸಾರಾಂಶವನ್ನು** ಸಂಕ್ಷೇಪವಾಗಿ ಉಪದೇಶಿಸಿದರು; ಗುಪ್ತರು ಪ್ರತಿವಾಕ್ಯವನ್ನೂ ತೆಲುಗಿನಲ್ಲಿ ಪರಿವರ್ತನೆ ಮಾಡಿ ತಿಳಿಸುತ್ತಿದ್ದರು.

**ಉಪದೇಶದ ಸಾರವೇನೆಂದರೆ :** ಈ ವ್ಯಾವಹಾರಿಕಪ್ರಪಂಚವೆಲ್ಲವೂ ನಿತ್ಯಶುದ್ಧ ಬುದ್ಧಮುಕ್ತಸ್ವಭಾವವುಳ್ಳ ಮಾಯಾಶಕ್ತಿಯಿಂದೊಡಗೂಡಿದ ಪರಮಾತ್ಮನಿಂದಲೇ ಹೊರ ತೋರಿಕೊಂಡಿದೆ. ಮಾಯಾಮಯವಾದ ಈ ಸಂಸಾರದಲ್ಲಿ ವಿರಕ್ತರಾದವರು ಇದಕ್ಕೆ ಮೂಲವಾಗಿರುವ ಆ ಪರಮಪುರುಷನನ್ನು ಶರಣುಹೊಂದುವರು. ಲೋಕದಲ್ಲಿ ಜೀವರೆಂದು ತೋರುತ್ತಿರುವವರೆಲ್ಲರೂ – ಗಂಡಸರು, ಹೆಂಗಸರು, ಹಿರಿಯರು, ಕಿರಿಯರು; ಉತ್ತಮ ವರ್ಣದವರು, ಇತರರು, ವರ್ಣವಿಭಾಗವೇ ಇಲ್ಲದವರು. ಹೆಚ್ಚೇಕೆ? ಸ್ಥಾವರಜಂಗಮಪ್ರಾಣಿಗಳೆಲ್ಲವೂ– ಆ ಭಗವಂತನದೇ ಆಗಿರುವ ಅಂಶವಾಗಿರುತ್ತಾರೆ. ಸೂರ್ಯನ ಪ್ರತಿಬಿಂಬಗಳು ಸೂರ್ಯನೇ ಆಗಿರುವಂತೆ ನಾವೆಲ್ಲರೂ ಆ ಪರಮಾತ್ಮನನ್ನು ಅವಲಂಬಿಸಿಯೇ ಜೀವರಾಗಿ ತೋರಿಕೊಳ್ಳುತ್ತಿದ್ದೇವೆ. ಬೇರೆಬೇರೆಯ ಶರೀರದಲ್ಲಿದ್ದುಕೊಂಡು ಇಂದ್ರಿಯಗಳ ಮೂಲಕ ವಿಷಯಗಳನ್ನು ಸೇವಿಸುತ್ತಿರುವಾಗಲೂ ಪ್ರಾಣೋತ್ಕ್ರಮಣಕಾಲದಲ್ಲಿ ಶರೀರವನ್ನು ಬಿಟ್ಟುಹೋಗುವಾಗಲೂ ನಾವು ನಿಜವಾಗಿ ಪರಮಾತ್ಮಸ್ವರೂಪವನ್ನು ಬಿಟ್ಟು ಕದಲಿರುವದಿಲ್ಲ, ನಮ್ಮ ಆ ಉತ್ತಮಸ್ವರೂಪವು ಯಾವಾಗಲೂ ವ್ಯಾಕೃತಾವ್ಯಾಕೃತರೂಪವಾಗಿರುವ ಈ ಪ್ರಪಂಚಕ್ಕಿಂತ ಅತ್ಯಂತ ವಿಲಕ್ಷಣವಾಗಿಯೇ ಇರುತ್ತದೆ. ಆ ಸ್ವರೂಪವನ್ನು ತಿಳಿದುಕೊಂಡು ಸರ್ವಜ್ಞನಾದ ಭಗವಂತನ ಸ್ವರೂಪದಲ್ಲಿ ನಿಂತು ಕೃತಕೃತ್ಯರಾಗುವದಕ್ಕಾಗಿ ಆತನನ್ನೇ ನಾವೆಲ್ಲರೂ ಅನನ್ಯಭಾವದಿಂದ ಭಜಿಸುತ್ತಿರಬೇಕು.

ಉಪದೇಶಾನಂತರದಲ್ಲಿ ಶ್ರೀ ದೇವರಾಯಕುಲಕರ್ಣಿಯವರು ನೆರೆದಿದ್ದವರಿಗೆ ಕಾರ್ಯಾಲಯದ ಪರಿಚಯವನ್ನು ಮಾಡಿಕೊಟ್ಟರು. ಶ್ರೀಗಳನ್ನು ಸತ್ಕರಿಸಿ ಎಲ್ಲರೂ ಯಥಾಶಕ್ತಿಕಾಣಿಕೆಯನ್ನು ಒಪ್ಪಿಸಿದರು. ಬಳಿಕ ನಾವುಗಳು ಹಿಂತಿರುಗಿ ಮನೆಗೆ ಬಂದೆವು. ರಾತ್ರೆ ಎಂಟುಘಂಟೆಯ ಹೊತ್ತಿಗೆ ಶ್ರೀದೇವರಾಯರು ತಮಗಾಗಿ ವೈಶ್ಯಭಕ್ತರು ನಿರ್ಮಾಣಮಾಡಿಸಿಕೊಟ್ಟಿದ್ದ ಹೊಸಮನೆಗೆ ಶ್ರೀಗಳನ್ನು ಪರಿವಾರ ಸಮೇತ ಕರೆದು ಕೊಂಡುಹೋಗಿ ಭಜನಾದಿಗಳನ್ನು ಮಾಡಿ ಸಂತೋಷಪಡಿಸಿದರು.

13.11.1965, ಶನಿವಾರ ಮಾರನೆಯ ದಿನ ಶ್ರೀಸೀತಾರಾಮಯ್ಯನವರು ಶ್ರೀಗಳಿಗೆ ಪಾದಪೂಜೆ ಭಿಕ್ಷೆಗಳನ್ನು ನೆರವೇರಿಸಿದ ಬಳಿಕ ನಾವು ಮೂರು ಜನವೂ ಶ್ರೀಮಾನ್ ಲಕ್ಷ್ಮಣಸಾರವರು ಕಾಲಕ್ಕೆ ಸರಿಯಾಗಿ ಕಳುಹಿಸಿಕೊಟ್ಟ ಮೋಟಾರುಕಾರಿನಲ್ಲಿ ಪ್ರಯಾಣ ಮಾಡಿ ಮಧ್ಯಾಹ್ನ ಸುಮಾರು 3.30 ಘಂಟೆಗೆ ತಿರುವಣ್ಣಾಮಲೈಗೆ ತಲುಪಿದೆವು. ಅಲ್ಲಿದ್ದ ರಮಣಾಶ್ರಮದಲ್ಲಿ ಶ್ರೀರಮಣಮಹರ್ಷಿಗಳ ಮತ್ತು ಅವರ ತಾಯಿಯವರ ಸಮಾಧಿಗಳ ದರ್ಶನವನ್ನು ಮಾಡಿಕೊಂಡು ಅಲ್ಲಿನ ಪುಸ್ತಕ ವಿಕ್ರಯ ಶಾಲೆಯಲ್ಲಿ "Five Hyms to Arunachala" ಎಂಬ ಪುಸ್ತಕವನ್ನು ಕೊಂಡೆವು. ಅದರಲ್ಲಿ 'ಅರುಣಾಚಲ'ನ ವಿಷಯದ ಐದು ಸ್ತೋತ್ರಗಳಿವೆ. ಮೊದಲನೆಯ ನಾಲ್ಕೂ ತಮಿಳಿನಲ್ಲಿಯೂ ಐದನೆಯದು ಸಂಸ್ಕೃತದಲ್ಲಿಯೂ ಇದ್ದು ಅದನ್ನು ಈಗ ಇಂಗ್ಲಿಷಿಗೆ ಅನುವಾದಮಾಡಲಾಗಿದೆ.

ಸಾಯಂಕಾಲ ಎಂಟು ಘಂಟೆಗೆ ತಿರುಕೋಯಿಲೂರು ಬಳಿ ಇರುವ ತಪೋವನಕ್ಕೆ ಬಂದು ಸೇರಿದೆವು. ಅಲ್ಲಿ ವಿಚಾರಿಸಲಾಗಿ ಹೊಳೆನರಸೀಪುರಕ್ಕೆ ಬಂದಿದ್ದ ಶ್ರೀವಿದ್ಯಾನಂದಗಿರಿಸ್ವಾಮಿಗಳವರು ಆಶ್ರಮದಲ್ಲಿಯೇ ಇರುತ್ತಾರೆಂತ ತಿಳಿದುಬಂತು. ಅವರು ಬಹಳ ಆದರದಿಂದ ಶ್ರೀಗಳನ್ನು ಬರಮಾಡಿಕೊಂಡು ಅವರಿಗಾಗಿ ಒಂದು ಸ್ಥಳವನ್ನು ಗೊತ್ತುಮಾಡಿಕೊಟ್ಟರು. ಸ್ನಾನವಾದ ಬಳಿಕ ಮದ್ರಾಸಿನ ಎ.ಎಮ್. ಜೈನ ಕಾಲೇಜಿನ ಸಂಸ್ಕೃತ ಪ್ರೊಫೆಸರ್ ಆಗಿರುವ ಶ್ರೀ ಆರ್. ರಾಮಕೃಷ್ಣಾಚಾರ್ ಎಮ್.ಎ., ಮತ್ತು ಸಿಯಾಲ ಕಾಲೇಜಿನ ಸಂಸ್ಕೃತ ಪ್ರೊಫೆಸರ್ ಆಗಿರುವ ಆರ್. ಸುಬ್ರಹ್ಮಣ್ಯಮ್ ಎಮ್. ಎ., ಇವರು ಇಬ್ಬರ ಪರಿಚಯವನ್ನು ಮಾಡಿಕೊಟ್ಟರು. ಮಾರನೆಯ ದಿನ ಬೆಳಗಿನ ಜಾವ ಸುಮಾರು ನಾಲ್ಕು ಘಂಟೆಯ ಹೊತ್ತಿಗೆ ತಪೋವನದ ಪ್ರಧಾನ ಸ್ವಾಮಿಗಳಾದ ಶ್ರೀಜ್ಞಾನಾನಂದಗಿರಿಗಳ ದರ್ಶನವಾಯಿತು. ಈ ಮಹಾತ್ಮರು 128 ವರ್ಷಗಳಿಗಿಂತ ಹೆಚ್ಚು ವಯಸ್ಸಿನವರೆಂದು ಹೇಳುತ್ತಾರೆ. ಅವರ ಹೆಸರಿನಲ್ಲಿ ಬೇರೆ

ಬೇರೆಯ ಮೂರು ನಾಲ್ಕು ಕಡೆಗಳಲ್ಲಿ ಆಶ್ರಮಗಳಿವೆಯಂತೆ. ನಾನು ಸುಮಾರು ಹತ್ತು ವರ್ಷಗಳ ಹಿಂದೆ ನೋಡಿದಾಗ ಅವರು ಎಷ್ಟು ದೃಢಗಾತ್ರರಾಗಿದ್ದರೋ ಅಷ್ಟೇ ಈಗಲೂ ಕಾಣುತ್ತಿದ್ದರು. ಅವರ ಆಯುಸ್ಸನ್ನು ಶರೀರದ ಸ್ಥಿತಿಯಿಂದ ನಿರ್ಣಯಿಸುವದು ಆಗು ವಂತಿಲ್ಲವೆಂದೇ ಹೇಳಬೇಕು. ನಾವು ಹೋದಾಗ ಅನೇಕರು ಮಹಿಳೆಯರೂ ಪುರುಷರೂ ಅವರ ಮುಂದೆ ಕುಳಿತುಕೊಂಡು ಭಜನೆಮಾಡುತ್ತಿದ್ದರು. ಈ ನಡುವೆಯೇ ನಾವೂ ಹೋಗಿ ನಮಸ್ಕರಿಸಿ ಅವರ ಬಳಿ ಕುಳಿತುಕೊಂಡೆವು. ಶ್ರೀಗಳ ಪರಿಚಯವನ್ನು ಅವರಿಗೆ ಹೇಳಲಾಗಿ ಸ್ವಚ್ಛವಾದ ಕನ್ನಡದಲ್ಲಿಯೇ ಅವರು ಉತ್ತರಕೊಟ್ಟರು. ಶ್ರೀಗಳು ಬರೆದಿರುವ ಭಾಷ್ಯದ ಅನುವಾದಗಳೆಲ್ಲ ಅವರ ಬಳಿ ಇವೆಯೆಂದು ತಿಳಿದುಬಂದಿತು. ಶ್ರೀಗಳ ವಿಷಯದಲ್ಲಿ ಬಹಳ ಆದರವನ್ನು ತೋರಿಸಿದರು.

**14.11.1965 ಭಾನುವಾರ**

ಈ ದಿನ ಬೆಳಗ್ಗೆ ಭಿಕ್ಷೆಯಾದ ಬಳಿಕ ಶ್ರೀಜ್ಞಾನಾನಂದರವರ ಅನುಜ್ಞೆಯನ್ನು ಪಡೆಯುವದಕ್ಕೆಂದು ಅವರ ಸನ್ನಿಧಿಗೆ ಹೋದೆವು. ಆಗ್ಗೆ ಅಲ್ಲಿ ಒಬ್ಬ ವಿದ್ವಾಂಸರು ಭಾಗವತದಲ್ಲಿ ಉದ್ಧವಗೀತೆ ಮತ್ತು ಅವಧೂತಗೀತೆಗಳನ್ನು ಓದಿ ಪ್ರವಚನಮಾಡುತ್ತಿದ್ದರು; ಶ್ರೀಜ್ಞಾನಾನಂದಸ್ವಾಮಿಗಳು ಅದರ ಅನುವಾದವನ್ನು ಮಾಡಿ ಶ್ರೀಶ್ರೀಗಳವರನ್ನು ಕೊಂಡಾಡಿ ಇಂಥ ವಿದ್ವಾಂಸರೂ ಜ್ಞಾನಿಗಳೂ ಇಂದು ದರ್ಶನವನ್ನು ಕೊಟ್ಟಿದ್ದು ನಮ್ಮ ಮತ್ತು ನಿಮ್ಮ ಪುಣ್ಯದ ಫಲ – ಎಂದು ಹೇಳಿ, **'ಅವರಿಗೆ ತೀರ್ಥಯಾತ್ರೆಯಿಂದ ಆಗ ಬೇಕಾಗಿರುವ ಪ್ರಯೋಜನವೇನೂ ಇಲ್ಲದಿದ್ದರೂ ಬಾಹ್ಯದೃಷ್ಟಿಯಿಂದ ಅದರಲ್ಲಿ ತೊಡಗಿರುತ್ತಾರೆ'** ಎಂದು ಪ್ರಶಂಸಿಸಿ ಯಾತ್ರೆಯಲ್ಲಿ ನೋಡಬೇಕಾದ ಒಂದೆರಡು ಸ್ಥಳ ಗಳನ್ನೂ ನಮಗೆ ತಿಳಿಸಿಕೊಟ್ಟರು. ಶ್ರೀವಿದ್ಯಾನಂದಗಿರಿಗಳವರೂ ಅವರ ಅನುಮತಿ ಯಿಂದ ನಮ್ಮೊಡನೆ ಬರುವದಕ್ಕೆ ಸಿದ್ಧರಾದರು; ಆ ಪ್ರಾಂತ್ಯದ ಸ್ಥಲಗಳ ಪರಿಚಯವು ಅವರಿಗೇ ಹೆಚ್ಚಾಗಿದ್ದದ್ದರಿಂದ ಅವರ ಸಾಹಸಚರ್ಯವು ನಮಗೊಂದು ಪರಮಲಾಭ ವಾಯಿತು. ಪ್ರಯಾಣದ ಕಾರ್ಯಕ್ರಮವನ್ನು ಶ್ರೀವಿದ್ಯಾನಂದಗಿರಿಗಳೇ ಗೊತ್ತುಪಡಿಸಿ ಕೊಂಡುಬಂದಿದ್ದರು.

ದಾರಿಯಲ್ಲಿ ವೃದ್ಧಾಚಲದೇವಾಲಯವನ್ನು ಪ್ರದಕ್ಷಿಣೆಮಾಡಿಕೊಂಡು ಚಿದಂಬರಕ್ಕೆ ಬಂದುತಲುಪಿದೆವು. ಅಲ್ಲಿ ಅಣ್ಣಾಮಲೈಯ ವಿಶ್ವವಿದ್ಯಾಲಯದ ಪ್ರಧಾನಾಧ್ಯಕ್ಷರಾದ ಡಾ.ಸಿ.ಎಸ್. ವೆಂಕಟರಾಮನ್ ಎಮ್.ಎ.ಪಿಹೆಚ್.ಡಿ. ಮತ್ತು ಸಂಸ್ಕೃತವಿಭಾಗದ ಪ್ರೊಫೆಸರ್ ಶ್ರೀ ವಿ. ಸುಬ್ರಹ್ಮಣ್ಯಶಾಸ್ತ್ರಿಗಳವರು, ವೇದಾಂತ ಶಿರೋಮಣಿ – ಇವರಿಬ್ಬ

ರನ್ನೂ ಸಂಧಿಸಿದೆವು. ಸಾಯಂಕಾಲಕ್ಕೆ ನಟರಾಜನ ದರ್ಶನಕ್ಕೆ ಹೋದೆವು; ಅಲ್ಲಿಂದ ಬರುವಾಗ ದಾರಿಯಲ್ಲಿ ಪ್ರಸಿದ್ಧ ಶೈವದೇವಾಲಯವಾದ 'ವೈದ್ಯನಾಥಾಲಯ'ವನ್ನು ನೋಡಿಕೊಂಡು ಸಾಯಂಕಾಲ 8.30 ಘಂಟೆಗೆ ಮಾಯಾವರಕ್ಕೆ ಬಂದೆವು. ಅಲ್ಲಿ ಶ್ರೀ ವಿ. ಸುಬ್ರಹ್ಮಣ್ಯಯ್ಯರ್ ಬಿ.ಎ., ಬಿ.ಎಲ್., ಅಡ್ವೋಕೇಟ್‌ರವರ ಮನೆಯಲ್ಲಿ ತಂಗಿದ್ದು ಬೆಳಗ್ಗೆ ಕಾವೇರಿಯಲ್ಲಿ ಸ್ನಾನಮಾಡಿದೆವು. ಆ ದಿನವೇ ತುಲಾಸಂಕ್ರಮಣದ ಕೊನೆಯ ದಿನ.

### 15.11.1965 ಸೋಮವಾರ

ಬೆಳಗ್ಗೆ ಸ್ನಾನವಾದ ಬಳಿಕ ತಿರುವರಮರಡೂರು ಮಾರ್ಗವಾಗಿ ತಂಜಾವೂರಿಗೆ ಹೊರಟೆವು. ಕುಂಭಕೋಣದಲ್ಲಿ ಕುಂಭೇಶ್ವರದರ್ಶನವನ್ನು ಮಾಡಿಕೊಂಡು ತಂಜಾವೂರಿಗೆ ತಲುಪಿದೆವು; ಅಲ್ಲಿಗೆ ತಲುಪುವ ಹೊತ್ತಿಗೆ 9 ಘಂಟೆಯಾಗಿತ್ತು. 11.45 ಘಂಟೆಗೆ ಶ್ರೀರಾಜರಾಜೇಶ್ವರಿದೇವಸ್ಥಾನಕ್ಕೆ ಹೋಗಿ ಬಂಗಾರಕಾಮಾಕ್ಷಿ ದೇವತಾದರ್ಶನ ವನ್ನು ಮಾಡಿಕೊಂಡು ಬಂದೆವು. ಮಧ್ಯಾಹ್ನ 1 ಘಂಟೆಯಿಂದ 2.30ರವರಿಗೆ ಬ್ರ.ಶ್ರೀ. ಮುತ್ತುಕೃಷ್ಣಶಾಸ್ತ್ರಿಗಳವರು, ವೇದಾಂತಶಿರೋಮಣಿ ಮುಂತಾದ ಇಬ್ಬರು ಮೂವರು ವಿದ್ವಾಂಸರೊಡನೆ ಸಂಭಾಷಣೆಯಾಯಿತು. ಶ್ರೀಶಂಕರಭಗವತ್ಪಾದರವರು ತಮ್ಮ ಕಾಲ ಕ್ಕಿಂತ ಹಿಂದೆಯೇ ಇದ್ದ ಅದ್ವೈತಿಗಳ ಪ್ರಕ್ರಿಯೆಯನ್ನು ಖಂಡಿಸಿರುತ್ತಾರಾದ್ದರಿಂದ ಅವರ ಕಾಲಕ್ಕೆ ದ್ವೈತವಿಶಿಷ್ಟಾದ್ವೈತಾದಿಸಿದ್ಧಾಂತಗಳು ಪ್ರಚಾರದಲ್ಲಿರಲಿಲ್ಲ ಎಂಬ ವಿಷಯವು ಚರ್ಚೆಗೆ ಬಂದಿತ್ತು. ಸಂಭಾಷಣೆಯ ಪ್ರಚಾರದಲ್ಲಿರಲಿಲ್ಲ ಎಂಬ ವಿಷಯವು ಚರ್ಚೆಗೆ ಬಂದಿತ್ತು. ಸಂಭಾಷಣೆಯ ನಡುವೆ ತಿರುಚಿನಾಪಲ್ಲಿಯಲ್ಲಿ ಶ್ರೀ ಎ.ವಿ. ಗೋಪಾಲಾಚಾರ್, ಬಿ.ಎ., ಬಿ.ಎಲ್., ಎಂಬುವರು 'ಶಂಕರಭಾಷ್ಯವು ವಿಶಿಷ್ಟಾದ್ವೈತಪರವಾಗಿದೆ' ಎಂಬ ವಿಷಯಕ್ಕೆ ಒಂದು ಗ್ರಂಥವನ್ನು ರಚಿಸಿರುವರೆಂಬ ವಿಚಿತ್ರವಾರ್ತೆಯೊಂದು ತಿಳಿದು ಬಂದಿತು!

ಬಳಿಕ ಅಲ್ಲಿಯವರ ಪ್ರಾರ್ಥನೆಯಂತೆ ಶ್ರೀಗಳವರು ಉಪದೇಶವನ್ನು ಮಾಡಿ ದರು. **ಇಂದ್ರಿಯಗಳು, ಮನಸ್ಸು**, ಮತ್ತು **ಅನುಭಾವ** – ಈ ಮೂರೇ ಜ್ಞಾನಕ್ಕೆ ದ್ವಾರ ಗಳು. ಹೊರಗಿನ ಪ್ರಪಂಚದಲ್ಲಿ ವಿಷಯಜ್ಞಾನಕ್ಕೆ ಇಂದ್ರಿಯಗಳು ಕರಣ; ತರ್ಕವನ್ನು ಮಾಡಿ ಅನುಮಾನದಿಂದ ವಿಷಯನಿರ್ಧಾರವನ್ನು ಮಾಡುವದಕ್ಕೆ ಮನಸ್ಸು ಕರಣ; ಇವೆರಡನ್ನೂ ಮೀರಿದ ಅತೀಂದ್ರಿಯವಾದ ಆತ್ಮತತ್ತ್ವವನ್ನು ತಿಳಿಯುವದಕ್ಕೆ ಅನುಭವ

ವೊಂದು ಸಾಧನ. ಈ ಅನುಭವದ ಆಧಾರದಿಂದ ತರ್ಕವನ್ನು ಉಪಯೋಗಿಸಿಕೊಂಡು ಪರಮಸಿದ್ಧಾಂತವನ್ನು ತೋರಿಸಿಕೊಡುವದೇ ಉಪನಿಷತ್ತುಗಳ ಮಾರ್ಗ. ಹೀಗೆಂಬುದನ್ನು ಶ್ರೀಶಂಕರರು ಮಾತ್ರ ಸ್ಫುಟವಾಗಿ ಉಪದೇಶಿಸಿರುತ್ತಾರೆ. ಇದ್ದದ್ದನ್ನು ಇದ್ದಂತೆ ತಿಳಿಸಿ ಫಲರೂಪವಾದ ಅನುಭವದಲ್ಲಿ ಜಿಜ್ಞಾಸೆಯನ್ನು ಪರಿಸಮಾಪ್ತಿಮಾಡಿ, ಪ್ರಮಾಣ ವ್ಯವಹಾರವನ್ನೆಲ್ಲ ಆವಿದ್ಯಕವೆಂದು ತೋರಿಸಿಕೊಡುವದರಿಂದ ಶ್ರುತಿಯು ಅಂತ್ಯ ಪ್ರಮಾಣವೆನಿಸಿರುತ್ತದೆ. ಹೀಗಿರುವದರಿಂದ ಬರಿಯ ವಾಕ್ಯಪ್ರಮಾಣವನ್ನು ಶ್ರದ್ಧೆಯಿಂದ ನಂಬುವದಾಗಲಿ, ಕೇವಲ ತರ್ಕದಿಂದ ತತ್ತ್ವನಿರ್ಧಾರಣೆಗೆ ಹೊರಡುವದಾಗಲಿ ಆಚಾರ್ಯಸಮ್ಮತವಾದ ವೇದಾಂತಮಾರ್ಗವಲ್ಲ ಎಂಬುದು ಉಪದೇಶದ ಸಾರವಾಗಿತ್ತು.

ಅನಂತರ ಬೃಹತೀಶ್ವರದರ್ಶನವನ್ನು ಮಾಡಿಕೊಂಡು ಮಹಾದಾನಪುರಕ್ಕೆ ಹೊರಟೆವು. ದಾರಿಯಲ್ಲಿ ತಿರುಚನಾಪಳ್ಳಿ ಉಚ್ಚಪುಳ್ಳೆಯಾರ್ ದರ್ಶನವಾಯಿತು. ಮಹಾದಾನಪುರಕ್ಕೆ ಸಾಯಂಕಾಲ 7 ಘಂಟೆಗೆ ತಲುಪಿದೆವು. ಅಲ್ಲಿ ಅಧಿಷ್ಠಾನದಲ್ಲಿ ನೆಲಮಾವು ಮಠದ ಶ್ರೀಕಮಲಾನಂದಸ್ವಾಮಿಗಳು ಶ್ರೀರಾಮಾನಂದ ಸ್ವಾಮಿಗಳ ಮತ್ತು ಅವರ ಶಿಷ್ಯರ ಸಮಾಧಿಗಳನ್ನು ನೋಡಿಕೊಂಡು ರಾತ್ರೆ ಶ್ರೀ ವಿ.ಎಸ್. ವೆಂಕಟೇಶ್ವರಯ್ಯರ್ ಎಂಬುವರ ಮನೆಯಲ್ಲಿ ವಿಶ್ರಮಿಸಿಕೊಂಡೆವು.

**16-11-1965, ಮಂಗಳವಾರ** ಬೆಳಗ್ಗೆ; ವಿಶ್ರಾಂತ ಅಡ್ವೋಕೇಟ್ ವಿ.ಎಸ್. ವೆಂಕಟೇಶ್ವರಯ್ಯರ್‌ರವರ ಮನೆಯಲ್ಲಿ ಸೇರಿದ್ದ ಮಹಾಜನರ ಪ್ರಾರ್ಥನೆಯಂತೆ ಶ್ರೀಶ್ರೀಗಳವರು **ಆತ್ಮಜ್ಞಾನವು ವೇದಾಂತಪ್ರಮಾಣದಿಂದ ಹೇಗೆ ಆಗುವದೆಂಬ** ವಿಷಯವನ್ನು ಕುರಿತು ಉಪದೇಶವನ್ನು ಅನುಗ್ರಹಿಸಿದರು. ಪರಬ್ರಹ್ಮನೆಂಬುದು ನಮ್ಮೆಲ್ಲರಿಗೂ ಆತ್ಮನೇ ಆಗಿರುವದರಿಂದ ಗೌಣಬ್ರಹ್ಮಗಳಂತೆ ಉಪಾಸ್ಯವಲ್ಲ, ಅದು ಯಾವಾಗಲೂ ಅಪರೋಕ್ಷವಾಗಿಯೇ ಇರುತ್ತದೆ; ಆದ್ದರಿಂದ ಅದನ್ನು ದೇಶಕಾಲಾದಿವ್ಯವಹಿತವಾಗಿರುವ ವಸ್ತುವಿನಂತೆ ಪ್ರಯತ್ನಪೂರ್ವಕವಾಗಿ ಸಾಕ್ಷಾತ್ಕಾರಮಾಡಿಕೊಳ್ಳಬೇಕಾದದ್ದಿಲ್ಲ. ದೇಹಾದಿಗಳಂತೆ 'ನಾನು' ಎಂಬ ಬುದ್ಧಿಗೆ ವಿಷಯವಾಗಿರುವದರಿಂದ ಮಾತ್ರವೇ ಆತ್ಮನೆನಿಸುವದಿಲ್ಲ. ದೇಹ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ – ಇವುಗಳು ಒಂದಕ್ಕಿಂತ ಒಂದು ಒಳಗೆ ಇದ್ದು, ಒಂದಕ್ಕಿಂತ ಒಂದು ಹೆಚ್ಚು ವ್ಯಾಪಕವಾಗಿರುವದರಿಂದ ಅವುಗಳಲ್ಲಿ ಒಂದಕ್ಕಿಂತ ಒಂದು ಆತ್ಮನೆಂಬ ಬುದ್ಧಿ ಹೆಚ್ಚು ಹೆಚ್ಚು ಅರ್ಹವಾಗಿರುತ್ತದೆ. ಈ ಬ್ರಹ್ಮವೊ,

ಎಂದರೆ ಎಲ್ಲಕ್ಕಿಂತಲೂ ತೀರ ಒಳಗೆ ಇರುವ ನಮ್ಮ ಆತ್ಮನಾಗಿರುತ್ತದೆ; ಆದ್ದರಿಂದ ಪರಮಾತ್ಮ ನಿಜವಾಗಿಯೂ ಆತ್ಮನೇ ಆಗಿರುತ್ತದೆ. ಈ ನಮ್ಮ ಆತ್ಮನು ಸ್ವಲ್ಪವೂ ದೂರವಿಲ್ಲ.

ಈ ಆತ್ಮನು ಅತ್ಯಂತಪ್ರಸಿದ್ಧನಾಗಿರುವದರಿಂದ ಅವನನ್ನು ಹೊಸದಾಗಿ ಅರಿತುಕೊಳ್ಳಬೇಕಾದದ್ದೇನೂ ಇರುವದೇ ಇಲ್ಲ. ಅವನು ನಿತ್ಯಚೈತನ್ಯಸ್ವರೂಪನಾಗಿರುತ್ತಾನೆ; ಆತನ ಬೆಳಕಿನಿಂದಲೇ ಒಳಗಿರುವ ಅಹಂಕಾರ, ಬುದ್ಧಿ, ಮನಸ್ಸು, ಇಂದ್ರಿಯಗಳು, ಪ್ರಾಣ, ದೇಹ – ಇವುಗಳೇ ಅಲ್ಲದೆ ಹೊರಗಿರುವ ಎಲ್ಲಾ ದೃಶ್ಯಗಳೂ ತೋರಿಕೊಳ್ಳುತ್ತಿರುತ್ತವೆ. ಸೂರ್ಯನ ಬೆಳಕಿನಲ್ಲಿಯೇ ಓಡಾಡುತ್ತಿರುವವರು ಬೆಳಕೆಂಬುದು ಯಾವದೆಂಬುದನ್ನು ಲಕ್ಷ್ಯವಿಟ್ಟು ನೋಡದೆ ಇರುವದರಿಂದ ಅದನ್ನು ಗುರುತಿಸದೆ ಇರುವಂತೆ, ಸಾಮಾನ್ಯಜನರು ಹೊರಗಿನ ವಿಷಯಗಳ ವ್ಯವಹಾರದಿಂದಲೇ ಕಾಲವನ್ನು ಕಳೆಯುತ್ತಿರುವದರಿಂದ ಈ ಪರಮಾತ್ಮನು ಅಪ್ರಸಿದ್ಧನಾದಂತೆ ಇರುತ್ತಾನೆ; ಜನರ ಆತ್ಮನಿಗಿಂತ ಬೇರೆಯಿರುವಂತೆ ತೋರುತ್ತಿದ್ದಾನೆ; ತಮಗಿಂತ ಎಲ್ಲಿಯೋ ದೂರದಲ್ಲಿರಬೇಕೆಂದೂ ಅವನನ್ನು ಯಾವದಾದರೊಂದು ಹೆಚ್ಚಿನ ಸಾಧನದಿಂದ ಸಾಕ್ಷಾತ್ಕಾರಮಾಡಿಕೊಳ್ಳಬೇಕಾಗಿದೆಯೆಂದೂ ಜನರು ಭಾವಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಪರಮಾತ್ಮನನ್ನು ಅರಿಯುವದಕ್ಕೆ ಯಾವದಾದರೊಂದು ಪ್ರಮಾಣವು ಬೇಕೆಂದೂ ಅವರು ನಂಬುತ್ತಿದ್ದಾರೆ.

ಆದರೆ ಗುರುಶಾಸ್ತ್ರೋಪದೇಶದ ಸಾಂಪ್ರದಾಯಿಕಕ್ರಮವನ್ನು ಅರಿತವರಿಗೆ ಪರಮಾತ್ಮನನ್ನು ಅರಿತುಕೊಳ್ಳುವದಕ್ಕೆ ಯಾವ ಆಯಾಸವೂ ಇರುವದಿಲ್ಲ. ಶಾಸ್ತ್ರವು ಪರಮಾತ್ಮನನ್ನು ತಿಳಿಸಿಕೊಡುವ ಬಗ್ಗೆ ಹೇಗೆಂದರೆ, ನಾವು ಆತ್ಮನೆಂದು ತಪ್ಪಾಗಿ ಭಾವಿಸಿಕೊಂಡಿರುವ ಅನಾತ್ಮವಸ್ತುಗಳೆಲ್ಲವೂ ಕಲ್ಪಿತವೆಂಬುದನ್ನು ವಿಚಾರದಿಂದ ನಿಶ್ಚಯಿಸಿಕೊಂಡು ನಮ್ಮ ಆತ್ಮನಲ್ಲಿಯೇ ನೆಲೆನಿಂತುಕೊಳ್ಳುವಂತೆ **'ಅಸ್ಥೂಲಮನಣು ಸ ಏಷ ನೇತಿ ನೇತ್ಯಾತ್ಮಾ'** ಮುಂತಾದ ವಾಕ್ಯಗಳು ಬೋಧಿಸುತ್ತದೆ. ಗುರುವಾಗಲಿ ಶ್ರುತಿಯಾಗಲಿ ನಮ್ಮ ಆತ್ಮನನ್ನು ತಿಳಿಸಿಕೊಡುವ ಹೊಸ ಜ್ಞಾನವನ್ನೇನೂ ಮಾಡಿಕೊಡುವದಿಲ್ಲ; ಅವನಲ್ಲಿ ಅಧ್ಯಾರೋಪಿತವಾಗಿರುವ ಅನಾತ್ಮವನ್ನು ಮಾತ್ರ ಅಲ್ಲಗಳೆಯುತ್ತವೆ – ಎಂಬುದು ಉಪದೇಶದ ಸಾರವಾಗಿತ್ತು.

ಶ್ರೀವೆಂಕಟರಾಮಯ್ಯನವರು 'ಹೀಗೆ ಯುಕ್ತಿಯಿಂದ ತಿಳಿದುಕೊಂಡ ಆತ್ಮಸ್ವರೂಪದ ಅನುಭವಕ್ಕೆ ಅಥವಾ ಈ ಜ್ಞಾನವು ಗಟ್ಟಿಯಾಗುವದಕ್ಕೆ ಏನುಮಾಡಬೇಕು'

ಎಂದು ಕೇಳಿದರು. ಶ್ರೀಗಳು "ಇದು ಯುಕ್ತಿಯಿಂದ ಬಂದ ಜ್ಞಾನವಲ್ಲ, ನಮ್ಮ ಆತ್ಮ ನಲ್ಲಿ ಆತ್ಮನೆಂಬ ಬುದ್ಧಿಯು ಸ್ವಭಾವದಿಂದಲೇ ನಮಗೆ ಇರುತ್ತದೆ. ಆದರೆ ಅನಾತ್ಮವಾಗಿ ರುವ ದೇಹಾದಿಗಳನ್ನು ಅನಾದ್ಯವಿದ್ಯೆಯಿಂದ ಜನರು ಅದರಲ್ಲಿ ಹುಟ್ಟುಗಟ್ಟಿಕೊಂಡಿ ರುತ್ತಾರೆ. ಈ ಅಧ್ಯಾರೋಪವನ್ನು ತೊಲಗಿಸಿಕೊಳ್ಳುವದಕ್ಕೆ ಅನುಭವಾನುಸಾರವಾದ ಯುಕ್ತಿಯನ್ನು ಆರಿಸಿಕೊಳ್ಳಬೇಕಾಗಿದೆ ಅಷ್ಟೆ ಈ ಆತ್ಮಾನುಭವವನ್ನು ಸಮಾಧಿಯೇ ಮುಂತಾದ ಯಾವದಾದರೊಂದು ಅವಸ್ಥೆಯಲ್ಲಿ ತಂದುಕೊಳ್ಳಬೇಕೆಂದು ಕೆಲವರು ಭಾವಿಸಿಕೊಂಡಿರುತ್ತಾರೆ. ಅದು ಸರಿಯಲ್ಲ, ಏಕೆಂದರೆ ಶ್ರುತಿಯಲ್ಲಿ 'ಅದೇ ನೀನಾಗಿ ರುವೆ' ಎಂದು ಹೇಳಿದೆಯೇ ಹೊರತು 'ಯಾವದಾದರೊಂದು ಅವಸ್ಥೆಯಲ್ಲಿ ನೀನು ಅದಾಗುವೆ'- ಎಂದೇನೂ ಹೇಳಿಲ್ಲ, ನಮ್ಮ ಆತ್ಮವು ಅಪರೋಕ್ಷವಾಗಿಯೇ ಇರುವದ ರಿಂದಲೂ, ಅದು ಅಪರೋಕ್ಷವಾಗಿದೆ ಎಂಬುದರಲ್ಲಿ ನಮಗೆ ಯಾವ ಸಂಶಯವೂ ಇಲ್ಲವಾದ್ದರಿಂದಲೂ, ಜ್ಞಾನವು ಗಟ್ಟಿಯಾಗಬೇಕೆಂದು ನಿರೀಕ್ಷಿಸುವದಕ್ಕೆ ಕಾರಣವೂ ಇಲ್ಲ' ಎಂದು ತಿಳಿಯಪಡಿಸಿದರು.

ಶ್ರೀವೆಂಕಟರಾಮಯ್ಯನವರ ಮನೆಯಲ್ಲಿ ಭಿಕ್ಷೆಯನ್ನು ತೀರಿಸಿಕೊಂಡು ಶ್ರೀಗಳ ವರು ಹೊರಟರು. ದಾರಿಯಲ್ಲಿ 'ಭಾಷ್ಯಸ್ವಾಮಿ'ಗಳೆಂದು ಪ್ರಸಿದ್ಧರಾಗಿದ್ದ ಶ್ರೀಸಚ್ಚಿದಾ ನಂದಸರಸ್ವತೀಸ್ವಾಮಿಗಳ ದರ್ಶನವನ್ನು ಮಾಡಿಕೊಂಡು ಮಧ್ಯಾಹ್ನಾತ್ತರ ಎರಡು ಘಂಟೆಗೆ ನೆರೂರಿನಲ್ಲಿದ್ದ ಶ್ರೀ ಸದಾಶಿವಬ್ರಹ್ಮೇಂದ್ರರ ಸಮಾಧಿಯ ದರ್ಶನವನ್ನು ಪಡೆದೆವು. ಅಲ್ಲಿ ಸಮಾಧಿಯ ಸುತ್ತಲಿನ ಸ್ಥಲವನ್ನು ಈಗ ವ್ಯವಸ್ಥೆಮಾಡುತ್ತಿದ್ದಾರೆ. ಸಾಯಂಕಾಲ 6 ಘಂಟೆಯ ಹೊತ್ತಿಗೆ ಮಧುರೆಯನ್ನು ಸೇರಿ ಸಾಯಂಕಾಲ 8 ಘಂಟೆಯ ಹೊತ್ತಿನಲ್ಲಿ ಮೀನಾಕ್ಷೀದೇವಿಯ ದರ್ಶನವನ್ನು ಮಾಡಿದೆವು. ಆ ರಾತ್ರೆ ವೈದ್ಯನಾಥ ಅಯ್ಯರ್ (N.C.C officer) ಇವರ ಮನೆಯಲ್ಲಿ ವಿಶ್ರಮಿಸಿಕೊಂಡೆವು.

**17.11.1965 ಬುಧವಾರ**

ಶ್ರೀವೈದ್ಯನಾಥ ಅಯ್ಯರ್‌ರವರ ಮನೆಯಲ್ಲಿ ಭಿಕ್ಷೆಯಾದ ಬಳಿಕ 10 ಘಂಟೆಗೆ ತಿರುನಲ್ವೇಲಿಯ ಮಾರ್ಗವಾಗಿ ಕನ್ಯಾಕುಮಾರಿಗೆ ಹೊರಟೆವು. ಅಲ್ಲಿಗೆ ಸೇರುವ ಹೊತ್ತಿಗೆ, ಸಾಯಂಕಾಲ- 4-30 ಘಂಟೆಯಾಗಿತ್ತು. ಸಮುದ್ರಸ್ನಾನಕ್ಕೆ ಹೋದಾಗ ಅಲ್ಲಿ ಶ್ರೀಶಂಕರಾಚಾರ್ಯರ, ಮತ್ತು ಸ್ವಾಮಿ ವಿವೇಕಾನಂದರ ವಿಗ್ರಹಗಳು ಪ್ರತಿಷ್ಠೆಯಾಗಿ ರುವದನ್ನು ಕಂಡೆವು. ಸ್ನಾನವಾದಬಳಿಕ ಕನ್ಯಕಾಪರಮೇಶ್ವರಿಯ ದರ್ಶನವನ್ನು ಮಾಡಿ ಕೊಂಡು ಹಿಂತಿರುಗಿಬಂದೆವು. ಶ್ರೀವಿದ್ಯಾನಂದಗಿರಿಯವರು ಅಲ್ಲಿದ್ದ ಸ್ಮಾರ್ತಬ್ರಾಹ್ಮಣ

ಸಮಾಜದ ಕಟ್ಟಡದಲ್ಲಿ ಇಳಿದುಕೊಳ್ಳುವದಕ್ಕೆ ಏರ್ಪಾಡುಮಾಡಿಸಿದರು. ಸಾಯಂಕಾಲ ವಿವೇಕಾನಂದ ಕಾಲೇಜಿನ ಅಧ್ಯಕ್ಷರು ಮತ್ತು ಅನಾಥಾಲಯವನ್ನು ನಡೆಯಿಸುತ್ತಿದ್ದ ಶ್ರೀಮತಿ ಅಲಮೇಲಮ್ಮನವರ ಮಕ್ಕಳು ಶ್ರೀ ಶಿವರಾಮಕೃಷ್ಣನ್ ಇವರು ಶ್ರೀಗಳ ದರ್ಶನವನ್ನು ಮಾಡಿಕೊಂಡು ತಾವು ನಡೆಯಿಸುತ್ತಿರುವ ಸಂಸ್ಥೆಗಳ ವೃತ್ತಾಂತವನ್ನು ತಿಳಿಸಿದರು. ಅನಾಥಾಲಯದವರು ಅನಾಥರಾದ ಹೆಣ್ಣುಮಕ್ಕಳಿಗೆ ಬೇಕಾದ ಸೌಕರ್ಯ ವನ್ನು ಕಲ್ಪಿಸಿ ವಿದ್ಯಾಭ್ಯಾಸಕ್ಕೂ ಏರ್ಪಾಡುಮಾಡುತ್ತಿದ್ದಾರೆ. ಅವರ ಸಂಸ್ಥೆಯ ಚಟುವಟಿಕೆಗಳು ಕ್ರಿಸ್ತಿಯನ್ ಮಿಷನರಿಗಳ ಕುವ್ಯಾಪಾರವನ್ನು ತಡೆಗಟ್ಟುವದಕ್ಕೆ ಸಹಾಯಕವಾಗಿವೆಯಂತೆ ತಿಳಿದುಬಂದಿತು. ಶ್ರೀಗಳವರು ಆ ಸಂಸ್ಥೆಯ ಅಭ್ಯುದಯಕ್ಕೆ ಬೇಕಾದ ಕೆಲವು ಸೂಚನೆಗಳನ್ನು ಕೊಟ್ಟರು.

ಮಾರನೆಯ ದಿನ **(18.11.1965 ಗುರುವಾರ)** ಭಿಕ್ಷೆಯಾದ ಮೇಲೆ ತಿರುವ ನಂತಪುರಕ್ಕೆಂದು ಹೊರಟೆವು. ದಾರಿಯಲ್ಲಿ ಶುಚೀಂದ್ರೇಶ್ವರದರ್ಶನವಾಯಿತು; ಅಲ್ಲಿ ವಿಗ್ರಹವು ವಿಷ್ಣು, ಬ್ರಹ್ಮ, ಈಶ್ವರ - ಮೂರು ರೂಪದಲ್ಲಿಯೂ ಇದೆ. ಅಲ್ಲಿರುವ ಅಂಜನೇಯಸ್ವಾಮಿ 28 ಅಡಿಗಳಷ್ಟು ಎತ್ತರವಾಗಿದೆ. ಅಲ್ಲಿಂದ ಮುಂದಕ್ಕೆ ತಿರುವ ನಂತಪುರಕ್ಕೆ ಹೋದೆವು. ಅಲ್ಲಿ ಸಂಸ್ಕೃತಕಾಲೇಜಿನಲ್ಲಿದ್ದ ವೇದಾಂತ ಪ್ರೊಫೆಸರ್ ಎಸ್.ವಿ. ಗುರುಸ್ವಾಮಿ ಶಾಸ್ತ್ರಿಗಳನ್ನು ಮಧ್ಯಾಹ್ನಾತ್ಪರ ಎರಡೂವರೆ ಘಂಟೆಗೆ ಕಂಡು ಅವರ ಮನೆಗೆ ಹೋದೆವು. ಅಲ್ಲಿ ಶ್ರೀಗಳಿಗೂ ಶಾಸ್ತ್ರಿಗಳಿಗೂ ವೇದಾಂತವಿಚಾರದಲ್ಲಿ ಸ್ವಲ್ಪಹೊತ್ತು ಸಂಭಾಷಣೆಯಾಯಿತು. ಸ್ನಾನವನ್ನು ಮಾಡಿಕೊಂಡು ಸಾಯಂಕಾಲ ಆರು ಘಂಟೆಗೆ ಪದ್ಮನಾಭನ ದರ್ಶನವನ್ನು ಮಾಡಿಕೊಂಡು ಕೊಟ್ಟಾಯಮ್‌ಗೆ ಹೊರಟೆವು. ಅಲ್ಲಿಗೆ ಹೋಗಿ ತಲುಪುವ ಹೊತ್ತಿಗೆ ಹಲವು ಕಾರಣಗಳಿಂದ ರಾತ್ರಿ 9 ಘಂಟೆಯಷ್ಟು ತಡ ವಾಯಿತು. ಶ್ರೀ ರಾಜಗೋಪಾಲ ಅಯ್ಯಂಗಾರ್ಯರ ಮನೆಯಲ್ಲಿ (Burma Shell and Estate Agent) ಉಳಿದುಕೊಂಡೆವು. ಅವರು ತಮಗೆ ಆದ ಅಚಿಕಿತ್ಸ್ಯರೋಗ ನಿವಾರಣೆಯ ನಿಮಿತ್ತದಿಂದ ಅಯ್ಯಪ್ಪರ ಪರಮ ಭಕ್ತರೂ ಆಗಿರುತ್ತಾರೆ. ಶ್ರೀಗಳನ್ನು ಶ್ರದ್ಧಾಭಕ್ತಿಪೂರ್ವಕವಾಗಿ ಸತ್ಕರಿಸಿದರು.

ಮಾರನೆಯ ಬೆಳಗ್ಗೆ **(19.11.1965 ಶುಕ್ರವಾರ)** ಸ್ನಾನವನ್ನು ಮಾಡಿಕೊಂಡು ತಿರುಪಣತ್ತರಕ್ಕೆ ಹೊರಟೆವು. ಕೊಟ್ಟಾಯದಲ್ಲಿ ಮಹಾದೇವ, ಮತ್ತು ಅಯ್ಯಪ್ಪರ್- ಈ ದೇವರುಗಳ ದರ್ಶನವಾಯಿತು; ಶ್ರೀಅಯ್ಯಂಗಾರ್ಯರು ಅಲ್ಲಿಯವರೆಗೂ ನಮ್ಮನ್ನು ಕಳುಹಿಸುವದಕ್ಕೆ ಬಂದಿದ್ದರು. ಅಯ್ಯಪ್ಪರವರಲ್ಲಿ ಅವರ ಭಕ್ತಿಯು ಉತ್ಸಾಹಪೂರಿತ

ವಾಗಿತ್ತೆಂದು ಕಂಡುಬಂದಿತು. ನಾವು ಮುಂದೆ ಎಟ್ಟುಮಾನೂರಿನಲ್ಲಿ ಅಘೋರೇಶ್ವರನ ದರ್ಶನವನ್ನೂ, ವೈಕೋಮ್‌ನಲ್ಲಿ ವ್ಯಾಘ್ರಪುರೇಶ್ವರನ ದರ್ಶನವನ್ನೂ ಮಾಡಿಕೊಂಡು ಸಾಯಂಕಾಲ 10 ಘಂಟೆಗೆ ತಿರುಪಣಿತ್ತುರವನ್ನು ಮುಟ್ಟಿದೆವು. ಅಲ್ಲಿ ಶ್ರೀ ಜಿ. ಬಾಲಕೃಷ್ಣ ಅಯ್ಯರ್ (Furnace & Refractory Works) ಎಂಬ ಮಹಾಶಯರ ಆತಿಥ್ಯ ವನ್ನು ಸ್ವೀಕರಿಸಿದ್ದಾಯಿತು. ಆ ಮಹಾಶಯರು ಸಂಸ್ಕೃತಮೂಲನಿಧಿಗೆ ಒಂದು ನೂರು ರೂಪಾಯಿಗಳನ್ನು ಕೊಟ್ಟರು. ಅವರು ಮನೆಯಲ್ಲಿ ನಿತ್ಯವೂ ಭಜನೆಗೆ ಏರ್ಪಾಡು ಮಾಡಿಸುತ್ತಾರೆ; ಬಹಳ ಶ್ರದ್ಧಾಲುಗಳು, ಶನಿವಾರ ಏಕಾದಶಿಯ ದಿನಗಳಲ್ಲಿ ವಿಶೇಷ ಭಜನೆಯನ್ನೂ ವರ್ಷಕ್ಕೊಮ್ಮೆ ರಾಮೋತ್ಸವವನ್ನೂ ನಡೆಯಿಸುತ್ತಾರಂತೆ. ಆ ದಿನ ಮೂರೂವರೆ ಘಂಟೆಗೆ ಜ್ಞಾನಾಶ್ರಮಕ್ಕೆಂದು ಹೊರಟೆವು. ಸಾಯಂಕಾಲ 'ವಡ ಕಾಂಚೇರಿ' ರೈಲ್ವೇಸ್ಟೇಷನ್‌ಗೆ ತಲುಪಿದೆವು. ಅಲ್ಲಿಪ್ಪ ಫ್ಯಾಕ್ಟರಿಯ (Steel Rolling Factory) ಮನೆಯಲ್ಲಿ ಸಾಯಂಕಾಲ ಇಳಿದುಕೊಂಡಿದ್ದೆವು. ಪಾರ್ಲಿಕಾಡಿಗನಲ್ಲಿರುವ ಜ್ಞಾನಾಶ್ರಮದವರಿಗೆ ನಾವು ಬಂದ ಸುದ್ದಿಯನ್ನು ಕೊಡುವವರು ಯಾರೂ ದೊರೆಯಲಿಲ್ಲ; ಆಶ್ರಮವು ಒಂದು ಗುಡ್ಡದ ಮೇಲೆ ಇದ್ದದ್ದರಿಂದ ನಮ್ಮ ಕಾರು ಅಲ್ಲಿಗೆ ಹೋಗುವದೂ ಆಗಲಿಲ್ಲ, ಆದ್ದರಿಂದ ಮುಂದಕ್ಕೆ ಪ್ರಯಾಣಮಾಡಬೇಕಾಯಿತು.

ಮಾರನೆಯ ದಿನ **(20.11.1965 ಶನಿವಾರ)** ಪಾಲುಘಾಟಿನಿಂದ ಒಂಬತ್ತು ಮೈಲಿಗಳ ದೂರದಲ್ಲಿರುವ ನಲ್ಲಿಕ್ಕೇರಿ ಎಂಬ ಹಳ್ಳಿಯಲ್ಲಿದ್ದು ಕಂಚಿಕ್ಕೋಡು ಎಂಬಲ್ಲಿಗೆ ತಲುಪಿದೆವು. ಅಲ್ಲಿ ಒಂದು ಛತ್ರದಲ್ಲಿ ಇಳಿದುಕೊಂಡು ಕೊಳದಲ್ಲಿ ಸ್ನಾನಮಾಡಿದೆವು. ಸ್ಥಳವು ಬಹಳ ಶಾಂತವಾಗಿದೆ. ಹಿಂದಕ್ಕೆ ಅಲ್ಲಿ ಯಾತ್ರಿಕರಿಗೆ ಶ್ರಮಪರಿಹಾರದ ಏರ್ಪಾಡು ಇತ್ತೆಂದು ತಿಳಿದುಬಂದಿತು. ಅಲ್ಲಿ ಬೆಳಗ್ಗೆ ಭಿಕ್ಷೆಯಾದ ಬಳಿಕ ಕೋಯಮುತ್ತೂರಿಗೆ ಹೊರಟು ಸಾಯಂಕಾಲ 3 ಘಂಟೆಗೆ ಸೇರಿದೆವು. ಶ್ರೀ ಕೆ.ಎಸ್. ಸಾಂಬಮೂರ್ತಿ ಅಯ್ಯರ್ ಎಂಬ ಅಡ್ವೋಕೇಟ್‌ರ ಮನೆಯಲ್ಲಿ ಇಳಿದುಕೊಂಡೆವು. ಅಲ್ಲಿ ಕೆಲವರು ಗೃಹಸ್ಥರು ಶ್ರೀಗಳನ್ನು ಸತ್ಕರಿಸಿದರು. ಮಾರನೆಯ ದಿನ ಅಲ್ಲಿಂದ ನೀಲಗಿರಿಯ ಮಾರ್ಗವಾಗಿ ಹೊರಟು ನಂಜನಗೂಡಿನಲ್ಲಿ ಶ್ರೀಕಂಠೇಶ್ವರನ ದರ್ಶನವನ್ನು ಮಾಡಿಕೊಂಡು ಮೈಸೂರಿಗೆ ಬಂದೆವು. ಮೈಸೂರಿನಲ್ಲಿ ಒಂದು ರಾತ್ರೆ ತಂಗಿದ್ದು ಮಾರನೆಯದಿನ ಶ್ರೀಗಳವರು ಮತ್ತು ಲಕ್ಷ್ಮೀದೇವಮ್ಮನವರು ಹೊಳೆನರಸೀಪುರವನ್ನು **ತಾ.22.11.1965** ನೆಯ ಸೋಮವಾರ ಸೇರಿದರು.

ಉಉಉಉಉ

# ಶ್ರೀಶ್ರೀಗಳವರ ವಿಶ್ವಭಾರತಪ್ರವಾಸ

ಶ್ರೀಶ್ರೀಪರಮಹಂಸಪರಿವ್ರಾಜಕ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು (ತಾ.29.9.1966) ಭಾದ್ರಪದ ಶುಕ್ಲಪೂರ್ಣಿಮಾ ಗುರುವಾರ ಚಾತುರ್ಮಾಸ್ಯ ಸಂಕಲ್ಪವನ್ನು ಪೂರೈಸಿ ಸೀಮೋಲ್ಲಂಘನನಿಮಿತ್ತವಾಗಿ ಪ್ರವಾಸವನ್ನು ಆರಂಭಿಸಿ ಮಿತಪರಿವಾರದೊಡನೆ ಹಾಸನಕ್ಕೆ ದಯಮಾಡಿಸಿದರು. ಸಾಮಾನ್ಯವಾಗಿ ವೇದಾಂತ ಸಿದ್ಧಾಂತದ ವಿಷಯವಾಗಿಯೂ – ಅದರಲ್ಲಿಯೂ ತಾವು ಹೊಸದಾಗಿ ರಚಿಸಿದ್ದ **'ಪಂಚಪಾದಿಕಾ ಪ್ರಸ್ಥಾನಪರಿಶೀಲನಮ್'** ಎಂಬ ಸಂಸ್ಕೃತಗ್ರಂಥದ ವಿಷಯವಾಗಿಯೂ ಅಲ್ಲಲ್ಲಿ ದೊರೆಯಬಹುದಾದ ವೇದಾಂತವಿದ್ವಾಂಸರೊಡನೆಯೂ ಪ್ರೊಫೆಸರುಗಳೊಡನೆಯೂ ವಿಚಾರ ವಿನಿಮಯವನ್ನು ಮಾಡಿಕೊಳ್ಳುವದು ಈ ಪ್ರವಾಸದ ಒಂದು ಗುರಿಯಾಗಿತ್ತು.

ಸಾಯಂಕಾಲ 6–15 ಘಂಟೆಗೆ ಹಾಸನವನ್ನು ತಲುಪಿ ಶ್ರೀಶಂಕರಮಠದಲ್ಲಿ ಉಳಿದುಕೊಂಡೆವು. ಅಲ್ಲಿ ಗೀತಾ (11 ಮತ್ತು 15ನೆಯ ಅಧ್ಯಾಯಗಳ) ಪಠನವಾದ ಬಳಿಕ ಶ್ರೀಗಳವರು 'ವಿಶ್ವರೂಪಯಾತ್ರೆ' ಎಂದರೆ ವಿಶ್ವವೆಲ್ಲ ಭಗವಂತನೇ ಎಂಬ ದೃಷ್ಟಿಯಿಂದ ಸಂಚರಿಸುವದು ಎಂಬ ಅಭಿಪ್ರಾಯವುಳ್ಳ ಒಂದು ಸಣ್ಣ ಉಪದೇಶವನ್ನು ಮಾಡಿದರು.

ಮಾರನೆಯ ದಿನ ತಾ. 30–9–1966 ಬೆಳಗ್ಗೆ ಒಂಬತ್ತು ಘಂಟೆಗೆ ಶಂಕರ ಮಠದಲ್ಲಿ ಉಪಾಧ್ಯಾಯರಾಗಿರುವ ವೇ||ಹಳ್ಳಿ ಮೈಸೂರು ವೆಂಕಟಕೃಷ್ಣಾವಧಾನಿಗಳು ಮಾಡಿದ ಸ್ಥಾಲೀಪಾಕಪಕ್ಷಹೋಮದ ದರ್ಶನವನ್ನು ಮಾಡಿಕೊಂಡೆವು. ಆಗ ವೇ|| ಬ್ರ||ಶ್ರೀ ಹೆಚ್.ಎಸ್.ರಾಮಸ್ವಾಮಿಶಾಸ್ತ್ರಿಗಳವರು ಬ್ರಹ್ಮತ್ವವನ್ನು ವಹಿಸಿದ್ದರು; ಅನಂತಪುರದಿಂದ ದಯಮಾಡಿಸಿದ್ದ ಶ್ರೀಶ್ರೀಈಶ್ವರಾನಂದಭಾರತೀಸ್ವಾಮಿಗಳೂ ಸಾಕ್ಷಿಭೂತರಾಗಿ ಸಂನಿಹಿತರಾಗಿದ್ದರು.

ಸಾಯಂಕಾಲ ಶ್ರೀಗಳ ಉಪದೇಶವಾಯಿತು. ಸಂಸ್ಕೃತಭಾಷೆಯ ಮಹಿಮೆಯೇ ಮುಂತಾದ ಐದು ವಿಷಯಗಳನ್ನು ಕುರಿತ ಉಪದೇಶವದು.

**'ಸಂಸ್ಕೃತಂ ಚ ಸದಾಚಾರಃ ಸತ್ಸಙ್ಗಃ ಸತ್ಯಧರ್ಮತಾ । ಸಹಸ್ರ ನಾಮಪಠನಂ ಸಕಾರಾಃ ಪಞ್ಚ ಪಾನ್ತು ವಃ ॥''**

(ಸಂಸ್ಕೃತ, ಸದಾಚಾರ, ಸತ್ಸಂಗ, ಸತ್ಯಧರ್ಮಪರತೆ, ಸಹಸ್ರನಾಮಪಠನ, ಎಂಬ ಐದು ಸಕಾರಗಳು ನಿಮ್ಮನ್ನು ಕಾಪಾಡಲಿ!) ಎಂದು ನೆರೆದಿದ್ದ ಜನಗಳಿಗೆ ಶುಭವನ್ನು ಕೋರಿದರು.

**ತಾ. 1.10.1966 ಶನಿವಾರ**

ಮಾರನೆಯ ದಿನ ಹಾಸನದ ಅಧ್ಯಾತ್ಮಸಂಸ್ಕೃತಪಾಠಶಾಲೆಯವರು ವಿದ್ಯಾರ್ಥಿಗಳಿಗೆ ಶ್ರೀಗಳ ಹಸ್ತದಿಂದ ಪಾರಿತೋಷಕಪ್ರಧಾನವನ್ನು ಮಾಡಿಸಿದರು ಆ ದಿನ.

ಶ್ರೀಶ್ರೀಗಳವರು ದಕ್ಷಿಣಭಾರತದಲ್ಲಿ ಸಂಚರಿಸಿ ಬಂದಿರುವದರ ವೃತ್ತಾಂತವನ್ನು ಈ ಪತ್ರಿಕೆಯ ಮೂಲಕ ಆಗಲೆ ವಿವರಿಸಿದ್ದಾಗಿರುವದರಿಂದ ಮಿಕ್ಕ ಪ್ರಾಂತ್ಯಗಳಲ್ಲಿ ಮಾಡಿದ ಸಂಚಾರಕ್ರಮವನ್ನು ವಿಶ್ವಭಾರತಪ್ರವಾಸವೆಂಬ ಹೆಸರಿನಿಂದಲೇ ಕರೆದಿರುತ್ತೇನೆ.

**ತಾ.3.10.1966 ಸೋಮವಾರ**

ಮೊದಲು ಹಾಸನದಿಂದ ಮುಂದಕ್ಕೆ ಅರಸೀಕೆರೆಗೆ ಹೋಗಿ ಅಲ್ಲಿಂದ ರೈಲು ಮಾರ್ಗವಾಗಿ ಪ್ರಯಾಣಮಾಡಬೇಕೆಂದು ಸಂಕಲ್ಪವಿತ್ತು. ಆದರೆ ಶ್ರೀಯುತ ದೇವರಾಯಕುಲಕರ್ಣಿಯವರ ಮೂಲಕವಾಗಿ ಬೆಂಗಳೂರಿನ ಶ್ರೀ ರಾಮಪ್ಪನವರೇ ಮುಂತಾದ ಕೆಲವರು ಪ್ರಾರ್ಥಿಸಿಕೊಂಡಂತೆ ಬೆಂಗಳೂರಿಗೆ ಹೋಗಿ ಅಲ್ಲಿಂದಲೇ ಸಂಚಾರಕ್ರಮವನ್ನು ನಿರ್ಣಯಿಸಬೇಕೆಂದು ಏರ್ಪಾಡಾಯಿತು. ಅದರಂತೆ ಅಲ್ಲಿಯವರು ಬೆಂಗಳೂರಿಗೆ ಶ್ರೀಗಳನ್ನು ಕರೆಯಿಸಿಕೊಂಡು ಗಾಂಧಿನಗರದ ಅನಂತಪ್ಪ ಮಹಾರಾಜರ ಆಶ್ರಮದಲ್ಲಿ ಬಿಡಾರವನ್ನು ಮಾಡಿಸಿದರು.

ಸಾಯಂಕಾಲ ಶ್ರೀ ದೇವರಾಯ ಕುಲಕರ್ಣಿಯವರು ಶ್ರೀಗಳವರನ್ನು ಸಭೆಯಲ್ಲಿ ನೆರೆದಿದ್ದ ಪರಿಚಯಮಾಡಿಕೊಡುತ್ತಾ 'ಶ್ರೀಗಳು ಯಾರಲ್ಲಿ ಗುರುಭಾವನೆಯನ್ನಿಟ್ಟಿದ್ದರೋ ಆ ದಿವಂಗತ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರು ಪೂಜ್ಯಬುದ್ಧಿಯಿಂದ ಕಾಣುತ್ತಿದ್ದ ಶ್ರೀ ಅನಂತಪ್ಪ ಮಹಾರಾಜರವರ ಆಶ್ರಮವಿದು' ಎಂದು ಪ್ರಾರಂಭಿಸಿ ಅಧ್ಯಾತ್ಮವಿದ್ಯಾಪ್ರಸಾರದ ಕ್ಷೇತ್ರದಲ್ಲಿ ಶ್ರೀಗಳವರು ಅಧ್ಯಾತ್ಮಪ್ರಕಾಶಕಾರ್ಯಾಲಯದ ಮೂಲಕ ಮಾಡಿರುವ ಲೋಕೋಪಕಾರವನ್ನು ಸ್ತುತಿಸಿದರು. ಆಮೇಲೆ ಶ್ರೀಗಳವರು ಮುಂದಿನ ದಿನಗಳಲ್ಲಿ ಮಾಡುವ ಉಪದೇಶಮಾಲಿಕೆಗೆ ಪೀಠಿಕೆಯಾಗಿ –

**ನ ವಾಸುದೇವಾತ್ ಪರಮಸ್ತಿ ಮಙ್ಗಲಂ**

**ನ ವಾಸುದೇವಾತ್ ಪರಮಸ್ತಿ ಪಾವನಮ್ ।**
**ನ ವಾಸುದೇವಾತ್ ಪರಮಸ್ತಿ ದೈವತಂ**
**ತಂ ವಾಸುದೇವಂ ಪ್ರಣಮನ್ ನ ಸೀದತಿ ॥**

ಎಂಬ ಅನುಸ್ಮೃತಿಯ ಶ್ಲೋಕದ ಅಭಿಪ್ರಾಯವನ್ನು ವಿವರಿಸಿದರು. ಇತರ ಮತಗಳಲ್ಲಿ ದೇವರನ್ನು ವರ್ಣಿಸಿರುವ ಕ್ರಮಕ್ಕೂ ಸನಾತನಧರ್ಮದಲ್ಲಿ ವರ್ಣಿಸಿರುವ ಕ್ರಮಕ್ಕೂ ಇರುವ ಒಂದು ಮುಖ್ಯ ವೈಲಕ್ಷಣ್ಯವೆಂದರೆ 'ಬ್ರಹ್ಮ' ಎಂಬ ಹೆಸರಿನಿಂದ ಪರಮೇಶ್ವರನನ್ನು ಕರೆದಿರುವದು. ಮಿಕ್ಕವರು ದೇವರನ್ನು ಎಷ್ಟು ದೊಡ್ಡವನನ್ನಾಗಿ ಮಾಡಿದರೂ ಪರಿಚ್ಛಿನ್ನನಾಗಿಯೇ ಮಾಡಿರುತ್ತಾರೆ. ನಮ್ಮವರು ಬ್ರಹ್ಮ, ವಾಸುದೇವ, ನಾರಾಯಣ, ಪುರುಷೋತ್ತಮ ಮುಂತಾದ ಹೆಸರುಗಳಿಂದ ಪರಮಾತ್ಮನಿಗೆ ದೇಶ ಕಾಲವಸ್ತುಕೃತ ಪರಿಚ್ಛೇದವಿಲ್ಲವೆಂಬುದನ್ನು ಸ್ಪಷ್ಟಗೊಳಿಸಿರುತ್ತಾರೆ. ವಾಸುದೇವನೆಂದರೆ ಜಗತ್ತ್ರಯವನ್ನೂ ವ್ಯಾಪಿಸಿರುವಾತನು. ವೇದಾಂತಿಗಳು ಜಗತ್ತನ್ನು ಮಿಥ್ಯೆ, ಮಾಯೆ ಎಂದು ಮುಂತಾಗಿ ಕರೆಯುವ ಅಶುಭದೃಷ್ಟಿಯವರು ಎಂದು ಅನೇಕರು ತಪ್ಪು ಹೊರಿಸುತ್ತಿರುತ್ತಾರೆ. ಆದರೆ ನಿಜವು ಹಾಗಿಲ್ಲ; ಎಲ್ಲ ಜಗತ್ತೂ ವಾಸುದೇವನೇ, ಜಗತ್ತೆಲ್ಲವೂ ವಾಸುದೇವನೆನ್ನುವುದರಿಂದ ಪರಮಮಂಗಲದೃಷ್ಟಿಯಿದು; ಈ ದೃಷ್ಟಿಯಿಂದ ಅಮಂಗಲವೇ ಇಲ್ಲ; ವಾಸುದೇವನಿಗಿಂತ ಪಾವನವಾದದ್ದು ಮತ್ತೊಂದಿಲ್ಲ; ಅವನು ನಿತ್ಯಶುದ್ಧಬುದ್ಧಮುಕ್ತಸ್ವಭಾವದವನು. ವಾಸುದೇವನಿಗಿಂತ ಮಿಗಿಲಾದ ದೇವತೆಯಿಲ್ಲ; ಅವನು ಸರ್ವವ್ಯಾಪಿ, ನಮ್ಮ ಶುಭಪ್ರಚೋದನೆಯನ್ನು ಅನುಗ್ರಹಿಸ ಬಲ್ಲಾತನು; ಸರ್ವದೇವಮಯನಾದ ದಿವ್ಯಜ್ಯೋತಿಸ್ಸ್ವರೂಪನಾದ ದೇವತೆಯಾತನು. ಈಗಿನ ಲೌಕಿಕವಿದ್ಯೆಯು ವಾಸುದೇವವಿದ್ಯೆಗೆ ಹೋಲಿಸಿದಾಗ ಅವಿದ್ಯೆಯಾಗುವದು. ವಿಷಯಾಕಾರವಾಗಿರುವ ದೃಶ್ಯಗಳ ಚಿಂತೆಯನ್ನು ಬಿಟ್ಟು ವಾಸುದೇವಸ್ಮರಣೆಯನ್ನು ಮಾಡುವ ಅಭ್ಯಾಸವನ್ನು ಮಾಡಿಕೊಳ್ಳಬೇಕು. ಆತನು ನಿರ್ಗುಣನೂ ಸಗುಣನೂ ಆಗಿರುತ್ತಾನೆ. ಆ ಪರಮಾತ್ಮನಿಗೆ ನಮಸ್ಕಾರವನ್ನು ಮಾಡಿದವನು ಎಂದಿಗೂ ಕೆಳಕ್ಕೆ ಜಾರನು. **'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ' 'ಸರ್ವಂ ಖಲ್ವಿದಂ ಬ್ರಹ್ಮ'** ಮುಂತಾದ ವೇದಾಂತವಾಕ್ಯಗಳು ಈ ರಹಸ್ಯವನ್ನು ಹೊರಗೆಡಹುತ್ತಿವೆ ಎಂಬುದು ಉಪದೇಶದ ಸಾರ.

### ತಾ.4.10.1966ನೇ ಮಂಗಳವಾರ

ಈ ಸಾಯಂಕಾಲ ಶ್ರೀಗಳು "**ಶಾಂಕರವೇದಾಂತದ ಸಂಪ್ರದಾಯ**"ದ ವಿಚಾರವಾಗಿ ಉಪದೇಶವನ್ನು ಮಾಡಿದರು. ಶ್ರೀಗಳ ಈ ಉಪದೇಶಮಾಲಿಕೆಯನ್ನೇ ಶ್ರೀ

ರಾಮಪ್ಪನವರು ಟೇಪ್‌ರಿಕಾರ್ಡಿನಲ್ಲಿ ಹಿಡಿದಿಟ್ಟುಕೊಂಡಿರುತ್ತಾರೆ. ನಾನು ಇಲ್ಲಿ ಉಪದೇಶಗಳ ಸಾರಸಂಗ್ರಹವನ್ನು ಮಾತ್ರ ಬರೆಯುವೆನು. ಶಂಕರಭಗವತ್ಪಾದರು ತಿಳಿಸಿ ಕೊಟ್ಟಿರುವ ವೇದಾಂತಸಂಪ್ರದಾಯವು ಯಾವದು?-ಎಂಬುದನ್ನು ಎಚ್ಚರಿಕೆಯಿಂದ ತಿಳಿದುಕೊಳ್ಳಬೇಕು. ಆಸಂಪ್ರದಾಯವೇ ಈಗ ಸಂಪ್ರದಾಯದ ಹೆಸರಿನಲ್ಲಿ ಮರೆ ಯುತ್ತಿದೆ! ವೇದಾಂತಕ್ಕೆ ಅನುಭವವೇ ಪ್ರಮಾಣ; ಬ್ರಹ್ಮಜ್ಞಾನವು ಅನುಭವದಲ್ಲಿಯೇ ಕೊನೆಗಾಣಬೇಕಾಗಿರುತ್ತದೆ ಎಂಬುದು ಆಚಾರ್ಯರ ಮತ. ಸುರೇಶ್ವರಾಚಾರ್ಯರು 'ಬ್ರಹ್ಮವು ಸ್ವಪ್ರಮಾಣ'ವೆಂದು ಹೇಳಿರುವದಕ್ಕೆ ಇದೇ ಅರ್ಥ. ಅದ್ವೈತಸಿದ್ಧಿಯು ವಿತಂಡಾವಾದದಿಂದ ದ್ವೈತವನ್ನು ಖಂಡಿಸುವದರಿಂದ ಏರ್ಪಡುತ್ತದೆ ಎಂದು ಹೇಳುವ ಈಗಿನ ವೇದಾಂತಿಗಳ ಮತಕ್ಕೂ ತರ್ಕವು ಅನುಭವಾನುಸಾರಿಯಾಗಿರಬೇಕೆಂಬ ಆಚಾರ್ಯರ ಮತಕ್ಕೂ ಬಹಳ ವೈಲಕ್ಷಣ್ಯವಿದೆ. ಆಚಾರ್ಯರ ಮತದಲ್ಲಿ ತರ್ಕವೂ ಅನುಭವಾನುಸಾರಿಯಾಗಿರಬೇಕು ಅನುಭವಕ್ಕೆ ಅಂಗವಾಗಿರಬೇಕು.

ಪ್ರತ್ಯಯಗಳು, ಭಾಷೆ ಇವೆರಡಕ್ಕೂ ಅನುಭವವು ಹಿಂತಡಿಕೆಯಾಗಿರುತ್ತದೆ. ಅವಿದ್ಯೆಯೆಂಬುದೂ ಸ್ವಾಭಾವಿಕವಾಗಿರುವ ಒಂದು ಬಗೆಯ ಅನುಭವ; ಅದನ್ನು ಹೊಡೆದುಹಾಕುವ ಆಗಂತುಕವಾದ ವಿದ್ಯೆಯೂ ಒಂದು ಅನುಭವವೇ. ಅವಿದ್ಯಾ ಕಾಮಕರ್ಮಗಳು ಸಂಸಾರಕ್ಕೆ ಕಾರಣವಾಗಿವೆ; ಅಮಾನಿತ್ವಾದಿಸಾಧನಗಳಿಂದ ವಿದ್ಯೆ ಯನ್ನು ಪಡೆದುಕೊಳ್ಳಬೇಕಾಗಿರುತ್ತದೆ. ವಿದ್ಯೆಯಿಂದ ಹೃದಯಗ್ರಂಥಿಯು ಬಿಚ್ಚಿಕೊಳ್ಳು ವದು. ಮರ್ತ್ಯನು ಅಮೃತನಾಗುವನು - ಎಂಬುದು ಅನುಭವದಲ್ಲಿಯೇ ಕಾಣಬರ ಬೇಕು. **ಅವಿದ್ಯೆಯನ್ನು ಕಳೆದುಕೊಂಡು ವಿದ್ಯೆಯಿಂದ ಜೀವನ್ಮುಕ್ತನಾಗಿ ಬಾಳುವ ಪರಿಯನ್ನು ವೇದಾಂತವು ಕಲಿಸಿಕೊಡುತ್ತದೆ.**

**5.10.1966 ಬುಧವಾರ**

ಈ ದಿನ ಸಾಯಂಕಾಲ ಶ್ರೀಗಳು **''ಆತ್ಮದರ್ಶನಕ್ಕೆ ಶ್ರವಣಾದಿಗಳು ಸಾಧನ ವೆಂದರೆ ಹೇಗೆ?''** ಎಂಬ ವಿಷಯವನ್ನು ವಿಶದಪಡಿಸಿದರು. ಇಲ್ಲಿ ದರ್ಶನ ವೆಂದರೆ ಅನುಭವವೇ. ಆತ್ಮನು ಅಪ್ರಮೇಯನು, ಆದ್ದರಿಂದ ಅವನು ಯಾವ ಪ್ರಮಾಣ ದಿಂದಲೂ ತಿಳಿಯಬರುವವನಲ್ಲ, ಅನುಭವಪ್ರಮಾಣವನ್ನೇ ಆಧಾರಮಾಡಿಕೊಂಡು ಉಪದೇಶಮಾಡಬೇಕು; ಶ್ರವಣಾದಿಗಳನ್ನು ಹಾಗೆಯೇ ಸಾಧನಮಾಡಬೇಕು. ಭಗವಂತನು ಅರ್ಜುನನಿಗೆ ಮಾಡಿದ ಉಪದೇಶದಲ್ಲಿ ಆತ್ಮನು ಅನುಭವರೂಪದಿಂದ ಅವಿಕ್ರಿಯನಾಗಿಯೇ ಇರುತ್ತಾನೆ; ಆದರೂ ಅವನಲ್ಲಿ ಹೇಗೆ ಬಾಲ್ಯಾದವಸ್ಥೆಗಳು ಕಲ್ಪಿತ

ವಾಗಿರುತ್ತವೆ? ಎಂಬುದನ್ನು ತಿಳಿಸಿರುತ್ತಾನೆ; ಸ್ಥೂಲಸೂಕ್ಷ್ಮಶರೀರಗಳು ಅವನಲ್ಲಿ ಹೇಗೆ ಕಲ್ಪಿತವಾಗಿವೆ ಎಂಬುದನ್ನೂ ತಿಳಿಸಿಕೊಟ್ಟಿರುತ್ತಾನೆ. ಆತ್ಮನು ಪರಿಣಾಮಿನಿತ್ಯನೆಂಬ ಭ್ರಮೆಯನ್ನು ಕಳೆದಿರುತ್ತಾನೆ. ಆತ್ಮನು ಸದ್ರೂಪನು, ಅನಾತ್ಮನು ಅಸದ್ರೂಪವು ಎಂಬುದನ್ನು ಅನುಭವದ ಬಲದಿಂದಲೇ ಮನಗಾಣಿಸಿಕೊಟ್ಟಿರುತ್ತಾನೆ. ಅಸತ್ತಾಗಿರುವ ಕಲ್ಪಿತವಾಗಿರುವ ಅನಾತ್ಮದೃಶ್ಯಗಳೆಲ್ಲವನ್ನೂ ಆತ್ಮನು ವ್ಯಾಪಿಸಿಕೊಂಡಿರುತ್ತಾನೆ ಎಂಬುದನ್ನು ಆಚಾರ್ಯರು ಅನುಭವಾನುಸಾರವಾಗಿ ತೋರಿಸಿದ ಮೇಲೂ ಈಗಿನ ವೇದಾಂತಿಗಳು ಕಲ್ಪಿತವಾದ ವಸ್ತುಗಳು ಹುಟ್ಟಿ ನಾಶವಾಗುವವೆಂಬ ಅನುಭವವಿರುದ್ಧವಾದ ತರ್ಕವನ್ನು ತೆಗೆದಿರುತ್ತಾರೆ! ಅವಿದ್ಯೆಯೇ ಪರಮಾರ್ಥವಾಗಿಲ್ಲವೆಂಬುದನ್ನು ಆಚಾರ್ಯರು ತೋರಿಸಿಕೊಟ್ಟಮೇಲೂ ಅವಿದ್ಯೆಗೆ ಆಶ್ರಯ, ವಿಷಯ - ಮುಂತಾದವುಗಳು ಯಾವವೆಂಬ ಬಗೆಗೆ ಚರ್ಚೆಯನ್ನು ತೆಗೆದಿರುತ್ತಾರೆ. ಅನುಭವಾತ್ಮಕನಾದ ಆತ್ಮನು ಬ್ರಹ್ಮವೇ ಎಂಬುದು ಹೇಗೆ ಎಂಬುದನ್ನು ಶ್ರವಣಾದಿಗಳಿಂದ ಅನುಭವಕ್ಕೆ ತಂದುಕೊಳ್ಳಬೇಕು. ಆತ್ಮನನ್ನೇ ಪರಮಾತ್ಮನೆಂದು ಅನುಭವಕ್ಕೆ ತಂದುಕೊಳ್ಳುವ ಅಧ್ಯಾತ್ಮವಿದ್ಯೆಯೇ ಶಂಕರ ಸಂಪ್ರದಾಯಕ್ಕೆ ಸೇರಿದ್ದು - ಎಂಬುದನ್ನು ಶ್ರೀಗಳು ವಿಧವಿಧವಾಗಿ ತಿಳಿಸಿಕೊಟ್ಟರು.

**ತಾ.6.10.1966 ಗುರುವಾರ**

ಈ ಸಾಯಂಕಾಲ ಶ್ರೀಗಳು **"ವೇದಾಂತದಲ್ಲಿ ಅನುಭವವೇ ಸಾಧನ, ಅನುಭವವೇ ಫಲ"** ಎಂಬುದು ಹೇಗೆಂಬುದನ್ನು ವಿವರಿಸಿ ತಿಳಿಸಿದರು. ವಿಷಯಗಳನ್ನು ಇಂದ್ರಿಯಗಳಿಂದಲೂ ಇಂದ್ರಿಯಗಳನ್ನು ಮನಸ್ಸಿನಿಂದಲೂ ತಿಳಿಯುವಂತೆ ಮನಸ್ಸನ್ನು ಏತರಿಂದ ತಿಳಿಯುವೆವೋ ಅದೇ ಅನುಭವ. ಈ ಅನುಭವವನ್ನು ಪ್ರಮಾಣವಾಗಿಟ್ಟುಕೊಂಡು ಅದಕ್ಕೆ ಗೋಚರವಾಗುವ ಬೇರೆಬೇರೆಯ ಅನುಭೂತಾಂಶಗಳನ್ನು ಒಟ್ಟುಗೂಡಿಸಿ ಹೊಂದಿಸಿನೋಡುವದೇ ಇಲ್ಲಿ ತರ್ಕ. ಅನುಭವ, ತರ್ಕ ಎಂಬ ಈ ಎರಡರ ನೆರವಿನಿಂದ ನಮಗೆ ಫಲಭೂತವಾದ ಅನುಭವವುಂಟಾಗುತ್ತದೆ. ಆಗ ಶ್ರೋತೃವು ತನ್ನ ಸ್ವರೂಪದಲ್ಲಿಯೇ ನಿಂತುಬಿಟ್ಟಿರುತ್ತಾನೆ. **'ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾ'** ಎಂಬ ಶ್ರುತಿಯಲ್ಲಿ ಹೇಳಿರುವಂತೆ ಈ ಅನುಭವವಾದಮೇಲೆ ಯಾವ ಸಂಶಯವೂ ಉಂಟಾಗುವದಕ್ಕೆ ಅವಕಾಶವಿರುವದಿಲ್ಲ.

ಯಾರು ವೇದಾಂತವಾಕ್ಯಶ್ರವಣಮಾಡಿ, ಎಂದರೆ ಅನುಭವಕ್ಕೆ ಹೊಂದಿಸಿ ನೋಡಿರಿ ಅಷ್ಟುಮಾತ್ರದಿಂದಲೇ ಇದು ಸರಿ ಎಂಬ ನಿಶ್ಚಯಕ್ಕೆ ಬರುವದೋ ಅವರು ಕೃತಕೃತ್ಯರು. ಆದರೆ ಅಷ್ಟರಿಂದಲೇ ತೃಪ್ತಿಯುಂಟಾಗದಿದ್ದರೆ **ಮನನವು** ಬೇಕು; ಮನನ

ವೆಂಬುದೂ ಅನುಭವದ ಆಧಾರದಿಂದಲೇ ಆಗಬೇಕಾಗಿರುತ್ತದೆ. ಅನುಭವದ ಆಧಾರದಿಂದಲೇ ತತ್ತ್ವವನ್ನು ತಿಳಿಸುವವನು ಗುರು; ಅದನ್ನು ಅನುಭವಕ್ಕೆ ಹೊಂದಿಸಿ ನೋಡಿಕೊಳ್ಳುವವನೇ ಶಿಷ್ಯ. ಹೀಗೆ ಗುರುಶಿಷ್ಯಪರಂಪರೆಯಿಂದ ತಿಳಿದುಕೊಂಡ ವಿಷಯವನ್ನು ಮತ್ತೊಬ್ಬರಿಗೆ ತಿಳಿಸುವವನು **ಆಗಮ**ವುಳ್ಳ ಗುರುವೆನಿಸುವನು. ಆತ್ಮನು ನಿತ್ಯನಾಗಿರುತ್ತಾನೆ, ಅನಾತ್ಮವು ಆಗಮಾಪಾಯಯಾಗಿರುತ್ತದೆ ಎಂಬುದನ್ನು ನೇರಾಗಿ ಅನುಭವದ ಆಧಾರದಿಂದ ನೋಡಿದರೆ ಆತ್ಮನೇ ಸತ್ಯವೆಂಬುದು ಸ್ಪಷ್ಟವಾಗಿ ಗೊತ್ತಾಗುವದು.

ಈ ಮನನಕ್ರಮದಿಂದಲೂ ತತ್ತ್ವವು ಅನುಭವಕ್ಕೆ ತಿಳಿಯದೆ ಇರುವಾಗ **ನಿದಿಧ್ಯಾಸನ**ದಿಂದ ಅರಿತುಕೊಳ್ಳಬೇಕಾಗುವದು. ಮನುಷ್ಯನ ಬುದ್ಧಿಯು ಅತ್ತಿತ್ತ ಚಲಿಸದೆ ಆತ್ಮಸ್ವರೂಪದಲ್ಲಿಯೇ ನಿಂತು ಆತ್ಮನಲ್ಲಿಯೇ ಯಾವ ವಿಕಲ್ಪವೂ ಇಲ್ಲದಂತೆ ಮುಳುಗಿಬಿಟ್ಟರೆ ಆ ನಿದಿಧ್ಯಾಸನದಿಂದ ವಿವೇಕಪ್ರಜ್ಞಾರೂಪವಾದ ಅನುಭವವುಂಟಾಗಿಬಿಡುವದು. ಇಂಥ ಪ್ರಜ್ಞೆಯುಳ್ಳವನನ್ನೇ ಗೀತೆಯಲ್ಲಿ **ಸ್ಥಿತಪ್ರಜ್ಞನು** ಎಂದು ಕರೆದಿದೆ. ಆತ್ಮಸತ್ಯಾನುಬೋಧದಿಂದ ಮನಸ್ಸು ಅಮನಸ್ಸು ಆಗುವದು. ಗ್ರಾಹ್ಯಗ್ರಾಹಕಭೇದವೇ ಇಲ್ಲದಿರುವದು ನೇರಾಗಿ ತಿಳಿಯುವ ಮಾರ್ಗ. ಆದರೆ ಯಾರಿಗೆ ಈ ಅಮನೀಭಾವವು ನೇರಾಗಿ ದಕ್ಕುವದಿಲ್ಲವೋ ಅವರು **ಮನೋನಿಗ್ರಹವನ್ನು** ಅಥವಾ ನಿದಿಧ್ಯಾಸನವನ್ನು ಮಾಡಬೇಕು. ಈ ಕ್ರಮವನ್ನು ಗೌಡಪಾದರು ತಿಳಿಸಿಕೊಟ್ಟಿರುತ್ತಾರೆ. ಆ ಕ್ರಮವನ್ನು ಅನುಸರಿಸಿ ಮನಸ್ಸನ್ನು ಲಯ, ವಿಕ್ಷೇಪ, ಕಾಷಯ - ಎಂಬ ದೋಷಗಳಿಲ್ಲದಂತೆ ಮಾಡಿಕೊಂಡರೆ ಮನಸ್ಸು ಬ್ರಹ್ಮವೇ ಆಗಿಬಿಡುತ್ತದೆ. ಹೀಗೆ ನೇರಾಗಿ ಶ್ರವಣಮಾತ್ರದಿಂದ ಸಾಂಖ್ಯರೀತಿಯಲ್ಲಾಗಲಿ ಅಥವಾ ಮನನನಿದಿಧ್ಯಾಸನಗಳ ಸಹಾಯದಿಂದಲಾಗಲಿ ಆತ್ಮಾನುಭವವನ್ನು ಪಡೆದುಕೊಳ್ಳಬೇಕು ಎಂದು ಸಾಧನಗಳ ಗುಟ್ಟನ್ನು ಬಿಚ್ಚಿ ತಿಳಿಸಿದರು.

**ತಾ. 7.10.1966 ಶುಕ್ರವಾರ**

ಈ ಸಾಯಂಕಾಲ ಶ್ರೀಗಳವರು ಅವಸ್ಥಾತ್ರಯಪ್ರಕ್ರಿಯೆಗೆ ಪೀಠಿಕೆಯಾಗಿ **''ವಿವಿಧ ವ್ಯವಹಾರಗಳ ವಿಚಾರ''**ವನ್ನು ವಿವರಿಸಿದರು. ಜನರು ಎಚ್ಚರದ ಅವಸ್ಥೆಯನ್ನೇ ಪ್ರಧಾನವಾಗಿಟ್ಟುಕೊಂಡಿರುತ್ತಾರೆ. ಇದು ಯುಕ್ತವೂ ಆಗಿದೆ; ಏಕೆಂದರೆ ನಾವು ಯಾವ ಲೌಕಿಕ ವೈದಿಕಸಾಧನಗಳನ್ನಾಗಲಿ ಎಚ್ಚರದಲ್ಲಿ ಮಾಡಿಯೇ ಫಲವನ್ನು ಪಡೆದುಕೊಳ್ಳ ಬೇಕಾಗಿರುತ್ತದೆ. ಆದರೆ ಅದು ಪೂರ್ಣದೃಷ್ಟಿಯಲ್ಲ.

ಶ್ರುತಿಯಲ್ಲಿ ಹೇಳಿರುವದೇನೆಂದರೆ : **'ಸಧೀಃ ಸ್ವಪ್ನೋ ಭೂತ್ವೇಮಂ ಲೋಕ ಮತಿಕ್ರಾಮತಿ ಮೃತ್ಯೋ ರೂಪಾಣಿ'** ಅಂತಃಕರಣದೊಡನೆ ಸ್ವಪ್ನವನ್ನು ಅನುಭವಿಸುವವನಾಗಿ ಈ ಲೋಕವನ್ನು ದಾಟುತ್ತಾನೆ; ಮೃತ್ಯುವಿನ ರೂಪಗಳನ್ನು ದಾಟುತ್ತಾನೆ. ಈ ಲೋಕವೆಂದರೆ ಜಾಗ್ರದವಸ್ಥೆ. ಈ ಆತ್ಮನು ಅಂತಃಕರಣದಂತೆಯೇ ಆಗಿಬಿಟ್ಟು ಲೌಕಿಕ ವ್ಯವಹಾರಗಳಿಗೂ ಶಾಸ್ತ್ರೀಯವ್ಯವಹಾರಗಳಿಗೂ ಆಶ್ರಯವಾಗಿರುವ ಈ ಲೋಕವನ್ನು ದಾಟುತ್ತಾನೆ; ಆಗ ಮೃತ್ಯುವಿನ ರೂಪಗಳಾದ - ಎಂದರೆ ಅವಿದ್ಯಾಕಾಮಗಳ ರೂಪಗಳಾಗಿರುವ ಶರೀರವನ್ನೂ ಇಂದ್ರಿಯಗಳನ್ನೂ ದಾಟುತ್ತಾನೆ ಎಂಬುದು ಶ್ರುತಿಯ ಅರ್ಥ.

ಅವಿದ್ಯೆ ಎಂದರೇನು? ಲೋಕವ್ಯವಹಾರವೆಂದರೇನು? ವೈದಿಕವ್ಯವಹಾರವೆಂದರೇನು?-ಎಂಬುದನ್ನು ಅರಿತುಕೊಳ್ಳಬೇಕು. **ಅವಿದ್ಯೆ** ಎಂದರೆ ಶರೀರೇಂದ್ರಿಯ ಮನಸ್ಸುಗಳನ್ನು ತಾನೆಂದು ಭಾವಿಸಿಕೊಂಡು ಅವೇ ನಾನು, ನಾನೇ ಅವು - ಎಂದು ಅನ್ಯೋನ್ಯಾಧ್ಯಾಸಮಾಡಿಕೊಳ್ಳುವದೇ ಆಗಿರುತ್ತದೆ. ದೇಹೇಂದ್ರಿಯಗಳೇ ಅವಿದ್ಯಾ ಮೃತ್ಯುವಿನ ರೂಪಗಳು. ಇವುಗಳನ್ನು ಅವಲಂಬಿಸಿಕೊಂಡು, ನಾನು, ನನ್ನದು - ಎಂದು ತಿಳಿಯುವದು, ಅದರಂತೆ ಮಾತನಾಡುವದು, ನಡೆಯುವದು - ಎಂಬಿವೇ ವ್ಯವಹಾರ. ಈ ವ್ಯವಹಾರವು ಎಚ್ಚರಕ್ಕೆ ಮಾತ್ರ ಸಂಬಂಧಿಸಿರುತ್ತದೆ. ಆತ್ಮನು ಶರೀರಾದಿಗಳ ಸಂಬಂಧವಿಲ್ಲದೆ ಯಾವ ಕರ್ಮವನ್ನೂ ಮಾಡುವಂತಿಲ್ಲ; ಫಲವನ್ನನುಭವಿಸುವದೂ ಇಲ್ಲ. ವ್ಯವಹಾರದೃಷ್ಟಿಯಿಂದಲೇ ನಾವು ಲೌಕಿಕವ್ಯವಹಾರವನ್ನು ಮಾಡುವದು, ಶಾಸ್ತ್ರೀಯವ್ಯವಹಾರವನ್ನು ಮಾಡಿ ಸ್ವರ್ಗಾದಿಗಳನ್ನು ಪಡೆಯುವದು, ಜೀವೇಶ್ವರ ವ್ಯವಹಾರದಿಂದ ಉಪಾಸನೆಮಾಡುವದು, ನಮಗೆ ಶರೀರಾದಿಗಳಿವೆ ಎಂದು ತಿಳಿದುಕೊಂಡು ಪ್ರಮಾಣಪ್ರಮೇಣವ್ಯವಹಾರಮಾಡುವದು, ಕರ್ಮವನ್ನು ಮಾಡಿ ಫಲವನ್ನು ಪಡೆಯುವದೂ ಎಲ್ಲವೂ ವ್ಯವಹಾರವೇ. ಈ ವ್ಯವಹಾರವು ಎಚ್ಚರದಲ್ಲಿರುವ ಪ್ರಪಂಚವನ್ನೇ ಆಶ್ರಯಿಸಿರುತ್ತದೆ. ವ್ಯವಹಾರವೆಲ್ಲವೂ ಅವಿದ್ಯೆಯಿಂದಲೇ ಸಾಗುತ್ತಿರುತ್ತದೆ.

ಅನುಭವದ ದೃಷ್ಟಿಯಿಂದ ನೋಡಿದರೆ, ಅವಸ್ಥೆಯೂ ಪ್ರಪಂಚವೂ ಆತ್ಮನಿಗೆ ದೃಶ್ಯವಾಗಿರುತ್ತದೆ. ಆದ್ದರಿಂದ ಅವನು ಸರ್ವವ್ಯವಹಾರತೀತನಾಗಿರುತ್ತಾನೆ. ಈ ನಮ್ಮ ಸ್ವರೂಪವಾದ ಆತ್ಮನಿಗಿಂತ ಪ್ರಪಂಚವಾಗಲಿ ಅದರಲ್ಲಿರುವ ಜೀವರುಗಳಾಗಲಿ ಬೇರೆಯಾಗಿರುವಂತೆಯೇ ಇಲ್ಲ. ಆತ್ಮನಿಗೆ ಪ್ರಪಂಚವು ಎರಡನೆಯದಲ್ಲ; ಏಕೆಂದರೆ ಆತ್ಮನಾಗಲಿ ಪ್ರಪಂಚವಾಗಲಿ ದೇಶಕಾಲಗಳ ಆಧಾರದಲ್ಲಿಲ್ಲ; ಆದ್ದರಿಂದ ಆತ್ಮನು ಒಬ್ಬನು, ಪ್ರಪಂಚವು ಅವನಿಗೆ ಎರಡನೆಯದು - ಎಂಬುದು ಅನುಭವವಿರುದ್ಧ. ಆದ್ದರಿಂದ

ಅನುಭವದ ಕಣ್ಣಿನಿಂದ ನೋಡಿದರೆ ಆತ್ಮನು ಧರ್ಮಾಧರ್ಮವ್ಯವಹಾರವನ್ನೂ ಕಾರ್ಯ ಕಾರಣವ್ಯವಹಾರವನ್ನೂ ಕಾಲವ್ಯವಹಾರವನ್ನೂ ದಾಟಿರುತ್ತಾನೆಂದು ಗೊತ್ತಾಗುತ್ತದೆ. ಇಷ್ಟರಿಂದಲೇ ಉತ್ತಮಾಧಿಕಾರಿಗಳಾದವರು ತಮ್ಮ ಆತ್ಮನು, ಅವಸ್ಥಾತ್ರಯಾದಿ ಸರ್ವ ವ್ಯವಹಾರಾತೀತನಾದವನು. ಅದ್ವಿತೀಯನು – ಎಂಬುದನ್ನು ಮನದಟ್ಟು ಮಾಡಿಕೊಳ್ಳ ಬಹುದು ಎಂಬುದು ಉಪದೇಶದ ಸಾರವು.

**ತಾ.8.10.1966 ಶನಿವಾರ**

ಈ ಸಾಯಂಕಾಲ ಶ್ರೀಗಳು **'ಅವಸ್ಥಾತ್ರಯವಿಚಾರವನ್ನು'** ಮುಂದುವರಿಸಿ ಹೀಗೆಂದು ಉಪದೇಶಿಸಿದರು; ಸ್ವಪ್ನವೂ ಜಾಗ್ರತ್ತಿನಂತೆ ಒಂದು ಅವಸ್ಥೆ. ಅದು ಎಚ್ಚರ ದಂತೆಯೇ ತನ್ನ ಕಾಲಕ್ಕೆ ಕಾಣಿಸಿಕೊಳ್ಳುತ್ತದೆ. ಆದರೂ ಅದು ಮಿಥ್ಯೆಯಾಗಿರುವದರಿಂದ ಜಾಗ್ರತ್ತಿಗೆ ಅದಕ್ಕಿಂತ ಯಾವ ಹೆಚ್ಚಿನ ಬೆಲೆಯೂ ಇಲ್ಲವೆಂದು ಏರ್ಪಡುತ್ತದೆ. ಈ ಕಾರಣದಿಂದಲೇ ಜಾಗ್ರತ್ಸ್ವಪ್ನಸುಷುಪ್ತಿಗಳೂ, ಸಷ್ಟಿಸ್ಥಿತಿಲಯಗಳೂ ಮಾಯಾಮಾತ್ರ ವೆಂದು ಭಾಗವತ ಪುರಾಣದಲ್ಲಿ ಹೇಳಿರುತ್ತದೆ.

ಸುಷುಪ್ತಿಯಲ್ಲಿ ಜೀವನು, ಪರಮಾತ್ಮನಲ್ಲಿ ಒಂದಾಗಿಬಿಟ್ಟಿರುತ್ತಾನೆಂದು ಶ್ರುತಿ ಯಲ್ಲಿದೆ. ಅಲ್ಲಿ ಅದ್ವೈತಸ್ಥಿತಿಯಲ್ಲಿಯೇ ನಾವು ಇರುತ್ತೇವಾದರೂ ಅದನ್ನು ಅರಿತು ಕೊಳ್ಳದ್ದರಿಂದ ಎಚ್ಚತ್ತಕೂಡಲೆ ಮೊದಲು ಜೀವರು ಯಾವಯಾವ ಶರೀರದಿಂದ ಕೂಡಿರುತ್ತಿದ್ದರೋ ಅದೇ ಶರೀರದಿಂದ ಕೂಡಿಕೊಂಡು ಮತ್ತೆ ವ್ಯವಹರಿಸುತ್ತಾರೆ – ಎಂದು ಶ್ರುತಿ ಹೇಳುತ್ತಿದೆ. ಜಾಗ್ರತ್ಸ್ವಪ್ನಗಳಿಗೆ ತಾರತಮ್ಯವನ್ನು ಕಲ್ಪಿಸುವದು ಜಾಗ್ರತ್ಪ್ರ ಧಾನದೃಷ್ಟಿಯಿಂದಲೇ ಹೊರತು ಪರಮಾರ್ಥದೃಷ್ಟಿಯಿಂದಲ್ಲ, ಜಾಗ್ರತ್ಸ್ವಪ್ನಗಳೆರಡನ್ನೂ ಅವಕ್ಕೆ ಹೊರಚ್ಚಾಗಿದ್ದುಕೊಂಡು ನೋಡುತ್ತಿರುವ ಆತ್ಮನು ಮಹಾಂತನು, ವಿಭುವು; ಅವನ ತತ್ತ್ವವನ್ನು ಅರಿತರೆ ಯಾವ ಶೋಕವೂ ಇರುವದಿಲ್ಲ ಎಂದು ಕಠಶ್ರುತಿಯು ಹೇಳುತ್ತಿದೆ.

ಸುಷುಪ್ತಿಯನ್ನು ಅನುಭವದ ಕಣ್ಣಿನಿಂದ ನೋಡಿದರೆ ಅಲ್ಲಿ ಆತ್ಮನು ಅದ್ವಯ ವಾಗಿ, ಪ್ರಜ್ಞಾನಘನನಾಗಿರುತ್ತಾನೆ, ಆನಂದಮಯನಾಗಿರುತ್ತಾನೆ – ಎಂದು ಶ್ರುತಿಯು ಹೇಳುವದರ ನಿಜವು ಮನದಟ್ಟಾಗುವದು. ಅವಸ್ಥೆಗಳನ್ನೆಲ್ಲ ನಮ್ಮ ಅನುಭವವು ವ್ಯಾಪಿಸಿಕೊಂಡಿರುತ್ತದೆ; ಎಲ್ಲವನ್ನೂ ವ್ಯಾಪಿಸಿಕೊಂಡಿರುವದೇ ಅವಿನಾಶಿಯಾದ ಸದ್ರೂಪ ವಾದ ಆತ್ಮತತ್ತ್ವವು ಎಂದು ಗೀತೆಯು ಸಾರುತ್ತಿದೆ. ಆದ್ದರಿಂದ ನಿಜವಾಗಿ ನೋಡಿದರೆ

ಅವಸ್ಥಾತ್ರಯವೆಂಬುದೇ ಇಲ್ಲ; ನಮ್ಮ ಆತ್ಮನು ಅಜನು, ಅನಿದ್ರನು, ಅಸ್ವಪ್ನನು, ಅದ್ವೈತ ಸ್ವರೂಪನು ಎಂಬುದೇ ಪರಮಾರ್ಥವು.

**ತಾ.9.10.1966 ಭಾನುವಾರ**

ಈ ದಿನ ಸಾಯಂಕಾಲ ಶ್ರೀಗಳವರು "**ಸತ್ಯಾನೃತವಿವೇಕ**"ವನ್ನು ಕುರಿತು ಹೀಗೆಂದು ಉಪದೇಶಮಾಡಿದರು; ವೇದಾಂತದ ಸಾರವನ್ನು ಸಂಗ್ರಹಿಸಿ ಹೇಳುವ ಶ್ಲೋಕಾರ್ಧವೊಂದು ಸುಪ್ರಸಿದ್ಧವಾಗಿದೆ: "**ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ।**" ಈಗ ಇದು ವೇದಾಂತಡಿಂಡಿಮದಲ್ಲಿ ಸಿಕ್ಕುತ್ತದೆ. ಇದರ ಅಭಿಪ್ರಾಯವೇನೆಂಬುದನ್ನು ಈಗ ವಿಚಾರಮಾಡೋಣ.

ಬ್ರಹ್ಮವು ಸತ್ಯ, ಜಗತ್ತು ಮಿಥ್ಯೆ - ಎಂಬುದು ಎರಡು ವಾಕ್ಯಗಳೆಂದು ತಿಳಿದರೆ ಅದು ಅದ್ವೈತವಾಗಲಾರದು; ಅದ್ವಿತೀಯವಾದ ಬ್ರಹ್ಮದ ಪಕ್ಕದಲ್ಲಿ ಮಿಥ್ಯೆಯಾದ ಜಗತ್ತಾದರೂ ಹೇಗೆ ಕುಳಿತೀತು? 'ಅದ್ವೈತ' ಎಂಬಲ್ಲಿ ದ್ವೈತದ ಅಭಾವ, ದ್ವೈತಕ್ಕಿಂತ ಭಿನ್ನ, ಅಥವಾ ದ್ವೈತವಿರುದ್ಧ - ಎಂದು ನಞ್ ಪದಕ್ಕೆ ಅರ್ಥವನ್ನು ಮಾಡಬಾರದು. ಏಕೆಂದರೆ ಪರಮಾರ್ಥಕ್ಕಿಂತ ವ್ಯತಿರಿಕ್ತವಾಗಿರುವ ದ್ವೈತವೆಂಬುದು ಇಲ್ಲವೇ ಇಲ್ಲ, ಪರಮಾರ್ಥವನ್ನೇ ಜನರು ಜಗತ್ತೆಂದು ವ್ಯವಹರಿಸುತ್ತಿದ್ದಾರೆ.

ಸತ್ಯ, ಮಿಥ್ಯೆ - ಎಂಬ ಶಬ್ದಗಳಿಗೆ ಲೋಕದಲ್ಲಿ ರೂಢಿಯಲ್ಲಿರುವ ಅರ್ಥಗಳನ್ನು ತೆಗೆದುಕೊಳ್ಳಬಾರದು; ಏಕೆಂದರೆ ಪರಮಾರ್ಥಸತ್ಯವೇ 'ಸತ್ಯ, ಅನೃತ' ಎಂಬ ವಿಂಗಡ ದಿಂದ ತೋರುತ್ತಿದೆ ಎಂದು ಶ್ರುತಿ ಹೇಳುತ್ತಿದೆ. ಆದ್ದರಿಂದ ಬ್ರಹ್ಮದ ಜೊತೆಗೆ ಮಿಥ್ಯೆ ಎಂಬುದು ಬೇರೆ ಇರುವದೇ ಇಲ್ಲ, ಮಿಥ್ಯೆಯಿಲ್ಲ ಎಂದರೆ ಅಭಾವವುಂಟು ಎಂದು ಅರ್ಥಮಾಡುವವರೂ ಇದ್ದಾರೆ; ಅಭಾವವನ್ನು ಒಪ್ಪಿದರೂ ಅದ್ವೈತಕ್ಕೆ ಹಾನಿಯಿಲ್ಲ - ಎಂದು ಅದರ ಅಭಿಪ್ರಾಯ. ಆದರೆ ಅಭಾವವಾದರೂ ಜಗತ್ತಿನೊಳಗೆ ಸೇರದೆ ಬೇರೆ ಯೆಲ್ಲಿದ್ದೀತು? 'ಅದ್ವೈತವು ನಿತ್ಯ' ಎಂದು ಕೆಲವರು; ಆದರೆ ನಿತ್ಯವಾದದ್ದು ಕಾಲಾಧಾರವುಳ್ಳದ್ದಾಗಿರುವದರಿಂದ ಕಾಲದಲ್ಲಿ ಅದ್ವೈತತತ್ತ್ವವಿದೆ ಎಂದಂತೆ ಆಗುತ್ತದೆ. ಆದ್ದರಿಂದ ದ್ವೈತವೆಲ್ಲವೂ ಮಾಯಾಮಾತ್ರ; ಅದ್ವೈತವೇ ಪರಮಾರ್ಥ. ಮಾಯೆ ಎಂಬುದು ಅದ್ವೈತಕ್ಕಿಂತ ಬೇರೆಯಿಲ್ಲ; ಜಗತ್ತೆಲ್ಲವೂ ನಿಜವಾಗಿ ಬ್ರಹ್ಮವೇ ಎಂಬುದೇ ಸಿದ್ಧಾಂತ. ಸುಷುಪ್ತಿಯಲ್ಲಿರುವಂತೆ ಯಾವ ವಿಭಾಗವೂ ಇಲ್ಲದ ಅಖಂಡವಾದ ತತ್ತ್ವವೇ ಪರಮಾರ್ಥ. ಅದನ್ನು '**ಅದ್ವೈತ**' ಎಂದು ಕರೆಯುವದು ದ್ವೈತದ ಪರಮಾರ್ಥವೂ ಅದೇ ಎಂದು ಹೇಳುವದಕ್ಕೇ ಹೊರತು ಮತ್ತೆ ಬೇರೆಯಿಲ್ಲ.

**ತಾ 10.10.1966 ಬೆಂಗಳೂರು ಓಣಿ ಅಂಜನೇಯಸ್ವಾಮಿ ದೇವಸ್ಥಾನ**

ಈ ದಿವಸ ಸಾಯಂಕಾಲ ಶ್ರೀಗಳು "ಬಂಧಮೋಕ್ಷಗಳ ಸ್ವರೂಪ"ವನ್ನು ಶಾಂಕರ ಸಿದ್ಧಾಂತದಲ್ಲಿ ಹೇಗೆ ಹೇಳಿದೆ ಎಂಬುದನ್ನು ಕುರಿತು ಉಪದೇಶಮಾಡಿದರು. ಶಾಂಕರೇತರಸಂಪ್ರದಾಯದ ಅದ್ವೈತಿಗಳು 'ಬಂಧವು ಕಾರಣವಿಶೇಷದಿಂದ ಆಗಿದ್ದು ಆ ಕಾರಣವನ್ನು ತೆಗೆದುಹಾಕಿದರೆ ಮೋಕ್ಷವಾಗುತ್ತದೆ' ಎಂದು ಹೇಳುತ್ತಿದ್ದರು. ಆದರೆ ಕಾರಣದಿಂದ ಉಂಟಾದದ್ದು ಹೋಗಲೂಬಹುದು; ಹೋದರೆ ಮತ್ತೆ ಬರಲೂ ಬಹುದು - ಎಂಬುದನ್ನು ಅವರು ಮನಸ್ಸಿಗೆ ತಂದುಕೊಂಡಿರಲಿಲ್ಲ.

ಈಗಲೂ ಅದ್ವೈತಿಗಳಲ್ಲದವರು ಬಂಧಕ್ಕೂ ಮೋಕ್ಷಕ್ಕೂ ಕಾರಣವನ್ನು ಹೇಳುತ್ತಿರುತ್ತಾರೆ. ಜೀವನಿಗೆ ಬಂಧವು ಪರಮೇಶ್ವರನಿಂದಲೇ ಆಗಿರುತ್ತದೆ ಎಂದು ಕೆಲವರು ಹೇಳುತ್ತಿದ್ದಾರೆ. ಇದು ನಿಜವಾದರೆ ಸ್ವತಂತ್ರನಾದ ಈಶ್ವರನು ಜೀವರನ್ನು ಮತ್ತೆ ಬಂಧದಲ್ಲಿಡುವದಿಲ್ಲವೆನ್ನುವದಕ್ಕೆ ಭರವಸೆಯೇನೂ ಇರುವದಿಲ್ಲ.

ಅಜ್ಞಾನದಿಂದ ಬಂಧವಾಗಿರುತ್ತದೆ. ಜ್ಞಾನದಿಂದ ಮೋಕ್ಷವಾಗುತ್ತದೆ -ಎಂಬುದು ಶಾಂಕರಸಿದ್ಧಾಂತದ ತಿರುಳು. ಅಜ್ಞಾನವೆಂದರೇನು?- ಎಂಬ ವಿಷಯಕ್ಕೆ ಈಗ್ಗೆ ಶಂಕರರ ಅನುಯಾಯಿಗಳಲ್ಲಿಯೂ ಅಭಿಪ್ರಾಯಭೇದಗಳಿರುತ್ತವೆ. ನಿಜವಾಗಿ ಅಜ್ಞಾನ ಅಥವಾ ಅವಿದ್ಯೆ ಎನ್ನುವದು ಒಂದಾನೊಂದು ಸ್ವತಂತ್ರಶಕ್ತಿವಿಶೇಷವಲ್ಲ. ಬಂಧಮೋಕ್ಷವ್ಯವಹಾರವು ಎಚ್ಚರದವಸ್ಥೆಗೆ ಸೇರಿದ್ದು; ಶರೀರೇಂದ್ರಿಯಗಳನ್ನು 'ನಾನು', 'ನನ್ನದು' ಎಂದು ತಿಳಿಯುವದೇ ಅವಿದ್ಯೆ; ಅದರಿಂದಲೇ ಬಂಧವಾಗಿರುತ್ತದೆ. ಸರಿ ಯಾಗಿ ನೋಡಿದರೆ ಎಂದೆಂದಿಗೂ ನಾವು ನಮ್ಮ ಸ್ಥಿತಿಯಲ್ಲಿಯೇ ಇರುತ್ತೇವೆ. ಇದನ್ನು ವಿವೇಕದಿಂದ ಅರಿತು ಕೊಂಡರೆ ನಾವು ನಿತ್ಯಮುಕ್ತರು. 'ನಾನು' ಎಂಬ ಹುಸಿರೂಪವನ್ನು ನಾವು ನಮಗೆ ಇರುವಂತೆ ಭಾವಿಸಿಕೊಂಡಿರುವದು ಅಜ್ಞಾನವು; ಅದರಿಂದಲೇ ಬಂಧವಾಗಿದೆ. ಅದನ್ನು ನಿತ್ಯವಾಗಿ ನೋಡುತ್ತಿರುವ ಸಾಕ್ಷಿರೂಪನಾದ ಆತ್ಮನು ಎಲ್ಲಾ ಪ್ರಾಣಿಗಳಿಗೂ ಸಮಾನವಾಗಿರುತ್ತಾನೆ. ಆತನೇ ನಮ್ಮ ಆತ್ಮನು ಎಂದು ತಿಳಿದುಕೊಂಡರೆ ಆ ಸ್ವಾಸ್ಥ್ಯವೇ ಮೋಕ್ಷ.

ಸರಿಯಾಗಿ ನೋಡಿದರೆ - **'ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ । ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ ॥"**

ಎಂಬಂತೆ ಸೃಷ್ಟಿಪ್ರಲಯಗಳಾಗಲಿ, ಬಂಧಮೋಕ್ಷಗಳಾಗಲಿ ಇಲ್ಲವೇ ಇಲ್ಲ - ಎಂಬ ಜ್ಞಾನದಿಂದಲೇ ನಿತ್ಯಮುಕ್ತರು ನಾವೆಂಬ ನಿಶ್ಚಯವುಂಟಾಗುವದು - ಎಂಬುದು ಉಪದೇಶದ ಸಾರ.

**ತಾ.11.10.1966 ಬೆಂಗಳೂರು ಓಣಿ ಆಂಜನೇಯಸ್ವಾಮಿ ದೇವಸ್ಥಾನ**

ಈ ದಿನ ಸಾಯಂಕಾಲ ವ್ಯವಹಾರಬಂಧದಿಂದ ಬಿಡುಗಡೆಹೊಂದುವದಕ್ಕೆ ಬೇಕಾದ "**ಸಂನ್ಯಾಸ ಸ್ವರೂಪ**"ವನ್ನು ಶ್ರೀಗಳು ಉಪದೇಶಿಸಿದರು.

**'ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ' (ಕಠ. 1. 3.4)** ಎಂಬಂತೆ ಶರೀರ, ಇಂದ್ರಿಯ, ಮನಸ್ಸು - ಇವುಗಳಿಂದ ಕೂಡಿರುವವನೇ ಕರ್ತೃಭೋಕ್ತೃವಾಗಿರುತ್ತಾನೆ. ನಮ್ಮ ಮನಸ್ಸು 'ನಮಗೆ ಶರೀರವಿದೆ' - ಎಂದು ನಿತ್ಯವೂ ಹೇಳುತ್ತಿರುತ್ತದೆ. ಆದರೆ ನಮ್ಮೊಳಗೆ ನಾವು ಇಣುಕಿ ನೋಡಿದರೆ, ವ್ಯವಹಾರದಲ್ಲಿ ನಮಗೆ ಆಗಿರುವ ಸಂಸಾರಬಂಧದಿಂದ ಬಿಡುಗಡೆಯಾದೀತು. ವ್ಯವಹಾರವೆಂದರೆ ಮನಸ್ಸಿನಲ್ಲಿ ಆಲೋಚಿಸುವದು, ಅದರಂತೆ ನುಡಿಯುವದು ಮತ್ತು ನಡೆಯುವದು.

ಮನಸ್ಸೆಂದರೆ ಮನನಮಾಡುವ ಸ್ವಭಾವವು. ನಮಗೆ ಬೇರೆಯಾಗಿ ಒಂದು ಮನಸ್ಸಿದೆ ಎಂಬ ಭಾವನೆಯೇ ನಮಗೆ ಸಂಸಾರಬಂಧವನ್ನುಂಟುಮಾಡಿರುತ್ತದೆ. ಮನಸ್ಸಿನ ಸ್ವಭಾವವನ್ನು ಪರೀಕ್ಷಿಸಿದರೆ ಅದು ನಿಜವಾಗಿ ಆತ್ಮನೇ ಆಗಿರುತ್ತದೆ. ಆತ್ಮನೇ ಎಲ್ಲಕ್ಕೂ ತಿರುಳು, ಆತ್ಮನಿಗಿಂತ ಬೇರೆಯಾಗಿ ಏನೂ ಇಲ್ಲ - ಎಂಬುದನ್ನು ಅರಿತು ಕೊಂಡರೆ ಮನಸ್ಸು ಅಮನಸ್ಸಾಗಿಬಿಡುತ್ತದೆ. ಆದರೆ ಸ್ವಭಾವವಾಗಿ ಜನಗಳು ಮನಸ್ಸಿನ ಉಪಟಳಕ್ಕೆ ವಶರಾಗಿರುತ್ತಾರೆ. ಇದಕ್ಕೆ ತಕ್ಕ ಯೋಗ್ಯತೆಯಿಲ್ಲದ ಮಧ್ಯಮಾಧಿಕಾರಿಗಳಿಗೆ ಮನೋನಿಗ್ರಹ, ಅಥವಾ ಆತ್ಮಜ್ಞಾನನಿಷ್ಠಾ ಎಂಬ ಉಪಾಯವನ್ನು ಶಾಸ್ತ್ರದಲ್ಲಿ ಹೇಳಿರುತ್ತದೆ.

ಏಕಾಂತವಾಸವನ್ನು ಮಾಡುತ್ತಾ ಶರೀರಮನಸ್ಸುಗಳನ್ನು ಬಿಗಿಹಿಡಿದುಕೊಂಡು ವೈರಾಗ್ಯವನ್ನು ಆಶ್ರಯಿಸಿ ನಿತ್ಯವೂ ಧ್ಯಾನಯೋಗವನ್ನು ಮಾಡುತ್ತಾ ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ, ಪರಿಗ್ರಹ - ಎಲ್ಲವನ್ನೂ ಬಿಟ್ಟು ಶಾಂತನಾದರೆ ಬ್ರಹ್ಮಭಾವ ವನ್ನು ಪಡೆಯುತ್ತಾನೆ. ಇದೇ ಸಂಪೂರ್ಣವಾದ ಸಂನ್ಯಾಸ. ಇದರಿಂದ ಭಗವಂತನಲ್ಲಿ ಭಕ್ತಿಯುಂಟಾಗುತ್ತದೆ. ಅದರಿಂದ ಪರಮಾತ್ಮತತ್ತ್ವದ ಅನುಭವವಾಗಿ ಅದರಲ್ಲಿಯೇ ಸೇರಿಹೋಗುತ್ತಾನೆ - ಎಂಬುದೇ ಉಪದೇಶದ ಸಾರವು.

## ತಾ.12.10.1966 ಬೆಂಗಳೂರು ರಾಜಾಜಿನಗರದ ರಾಮಮಂದಿರ

ಈ ದಿನ ಸಾಯಂಕಾಲದಲ್ಲಿ ಶ್ರೀರಾಮಮಂದಿರದ ಭಕ್ತಮಂಡಲಿಯವರು ಮಂದಿರದ ವಿಷಯದ ವರದಿಯನ್ನು ಶ್ರೀಗಳಿಗೆ ಒಪ್ಪಿಸಿದರು.

ಶ್ರೀಗಳು ಹೀಗೆಂದು ಉಪದೇಶಮಾಡಿದರು; ಈಗ್ಗೆ ದೇವಸ್ಥಾನಗಳೂ ಮಂದಿರಗಳು ಅಲ್ಲಲ್ಲಿ ಹೆಚ್ಚುತ್ತಿವೆಯಾದರೂ ನಮ್ಮ ಮಕ್ಕಳಿಗೆ ಶ್ರದ್ಧಾಭಕ್ತಿಗಳು ಕಡಿಮೆಯಾಗುತ್ತಿವೆ. ರಾಮನೆಂದರೆ ಯಾರು? ಎಂದು ಕೇಳುವ ಹುಡುಗರು ಹುಟ್ಟುವ ಕಾಲವು ಸಮೀಪಿಸುವಂತಿದೆ. 'ಈ ದೇಶದಲ್ಲಿ ಹುಟ್ಟಿದ ಬ್ರಾಹ್ಮಣನಿಂದ ಮಿಕ್ಕ ದೇಶದವರೆಲ್ಲರೂ ಅಧ್ಯಾತ್ಮ ವಿದ್ಯೆಯನ್ನು ಕಲಿಯುವರು' ಎಂದು ಮನುಸ್ಮೃತಿಯಲ್ಲಿರುವದು ಅಲ್ಲಿಯೇ ಉಳಿದು ಕೊಂಡಿದೆ. ನಾವು ಪಾಶ್ಚಾತ್ಯರ ಅನುಕರಣೆಗೆ ಹೊರಟಿರುತ್ತೇವೆ. ಬ್ರಾಹ್ಮಣರು ಸರಿಯಾದ ತಿಳಿವಳಿಕೆಯನ್ನು ಎಲ್ಲರಲ್ಲಿಯೂ ಹರಡುವವರಾಗಬೇಕು. ಸ್ಕೂಲುಗಳಲ್ಲಿ ಈಗ ಮತನೀತಿಗಳಿಗೆ ಬೋಧೆಯಿರುವದಿಲ್ಲ, ಮನೆಯವರು ಸ್ನಾನ, ಧ್ಯಾನ, ಜಪ, ಅತಿಥಿಸತ್ಕಾರ – ಮುಂತಾದವುಗಳನ್ನು ತಾವೂ ಮಾಡುತ್ತಾ ಮಕ್ಕಳಿಗೂ ಉಪದೇಶಿಸುವದು ಅತ್ಯವಶ್ಯವಾಗಿರುತ್ತದೆ. ವಿದ್ಯಾಭ್ಯಾಸವೆಂದರೆ ಹೃದಯಪರಿವರ್ತನೆ, **'ತತ್ಕರ್ಮ ಯನ್ನ ಬನ್ಧಾಯ ಸಾ ವಿದ್ಯಾ ಯಾ ವಿಮುಕ್ತಯೇ'** – ಎಂದಿರುವಂತೆ ಶ್ರೀರಾಮನೇ ನಮ್ಮನ್ನು ಕಾಮಕ್ರೋಧಾದಿಗಳಿಂದ ಬಿಡುಗಡೆಮಾಡುವ ಪರಮಪುರುಷನು ಎಂಬ ಜ್ಞಾನವನ್ನು ನಮ್ಮ ಮಕ್ಕಳಿಗೆ ಕೊಡಬೇಕು.

ಶ್ರೀರಾಮಚಂದ್ರನು ತನ್ನ ಅವತಾರವನ್ನು ಉಪಸಂಹಾರಮಾಡಿಕೊಂಡು ಹೋದರೂ ತನ್ನ ಕೀರ್ತಿಯನ್ನು ಎಲ್ಲೆಲ್ಲಿಯೂ ಹರಡಿ ಜನರು ಅದರ ಶ್ರವಣಾದಿಗಳಿಂದ ಪಾಪಮುಕ್ತರಾಗುವಂತೆ ಮಾಡಿರುತ್ತಾನೆ. ಇನ್ನು ಮೇಲೆ ದೇವಸ್ಥಾನಗಳು ವಿನೋದ ಸ್ಥಾನಗಳಾಗದೆ ಇರಬೇಕು, ಶ್ರದ್ಧಾಭಕ್ತಿಗಳಲ್ಲಿ ಆದರವುಂಟಾಗುವಂತೆ ಅಲ್ಲಿ ಅರ್ಚಕರ ತಪೋಬಲವು ಬೆಳೆದುಕೊಳ್ಳಬೇಕು. ಈ ಮಂದಿರದಲ್ಲಾಗುವ ರಾಮಸೇವೆಯಿಂದ ಜನರ ಅಂತಃಕರಣದ ಪರಿವರ್ತನೆಯಾಗಲಿ, ಸರ್ವರ ಮನಸ್ಸಿನಲ್ಲಿಯೂ ಭಕ್ತಿಯು ಉಕ್ಕಲಿ! – ಎಂದು ಹಾರೈಸಿದರು.

ಬೆಂಗಳೂರಿನ ಭಕ್ತರು ಶ್ರೀಗಳ ಯಾತ್ರೆಗೆ ಸೌಕರ್ಯವನ್ನು ಕಲ್ಪಿಸಿ ಒಂದು ಕಾರನ್ನು ಏರ್ಪಡಿಸಿಕೊಟ್ಟಿದ್ದರಿಂದ ಅಲ್ಲಿಂದ ಹೊರಟು ಅರಸೀಕೆರೆಗೆ ಹೋದೆವು. ಅಲ್ಲಿ ಅಹೋಬಲರಾಯರ ಛತ್ರದಲ್ಲಿ ಇಳಿದುಕೊಂಡೆವು. ಅಲ್ಲಿ ಬ್ರಾಹ್ಮಣಸಂಘದವರ ಕೋರಿಕೆಯಂತೆ ಶ್ರೀಗಳು ಉಪದೇಶವನ್ನು ಮಾಡಿದರು.

**ತಾ.13.10.1966 ಅರಸೀಕೆರೆಯಲ್ಲಿ ಅಹೋಬಲರಾಯರ ಛತ್ರ**

ಪರಮಾತ್ಮತತ್ತ್ವದ ಜ್ಞಾನಕ್ಕೆ ಅಹಂಕಾರವೇ ಅಡ್ಡಿಯಾಗಿರುತ್ತದೆ. ಸದ್ಗುರುಗಳನ್ನು ಶರಣುಹೊಕ್ಕು ಅವರ ಅನುಗ್ರಹದಿಂದ ಭಕ್ತಿಯನ್ನು ಸಂಪಾದಿಸಿಕೊಂಡರೆ ಅವಶ್ಯವಾಗಿ ಈಶ್ವರಾನುಗ್ರಹದಿಂದ ಜ್ಞಾನಪ್ರಾಪ್ತಿಯಾಗುವದು. ವ್ಯವಹಾರದಲ್ಲಿ ಅಹಂಕಾರದ ಹಿಂತಡಿಕೆಯಲ್ಲಿ ನಾವು ಮುಂದುಮುಂದಕ್ಕೆ ಹೋಗುತ್ತಾ ಇರುವೆವು. ಆದರೆ ಅಧ್ಯಾತ್ಮ ಜ್ಞಾನದ ಮಾರ್ಗದಲ್ಲಿ ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ - ಮುಂತಾದವು ಗಳನ್ನೆಲ್ಲ ಬಿಟ್ಟು ಹಿಂದು ಹಿಂದಕ್ಕೆ - ಎಂದರೆ ನಮ್ಮ ಒಳಕ್ಕೇ - ಸರಿದುಕೊಂಡರೆ ಪರಮಾತ್ಮನ ಜ್ಞಾನವಾಗುವದು. **ಜ್ಞಾನನಿಷ್ಠೆಯೇ ಪರಭಕ್ತಿ** - ಎಂಬುದು ಉಪದೇಶದ ಸಾರ.

ಅರಸೀಕೆರೆಯಿಂದ ಬುಕ್ಕಾಂಬುಧಿಗೆ ಹೋದೆವು. ಅಲ್ಲಿ ಉಬ್ರಾಣಿ ಶ್ಯಾನುಭೋಗರು ಶ್ರೀ ತಿಮ್ಮಪ್ಪಯ್ಯನವರ ಮನೆಯಲ್ಲಿ ಇಳಿದುಕೊಂಡೆವು.

**ತಾ.14.10.1966 ಬುಕ್ಕಾಂಬುಧಿಯ ಕೇಶವದೇವಸ್ಥಾನ**

ಬೆಳಗ್ಗೆ ; **ಸರ್ವಾಪೇಕ್ಷಾ ಚ ಯಜ್ಞಾದಿಶ್ರುತೇರಶ್ವವತ್** (3.4.26) ಎಂಬ ಬ್ರಹ್ಮಸೂತ್ರದ ಭಾಷ್ಯದ ಅಭಿಪ್ರಾಯವನ್ನು ನಾನು ಪ್ರವಚನಮಾಡಿದೆನು. ಆಶ್ರಮ ಕರ್ಮಗಳನ್ನು ಮಾಡುವದರಿಂದ ವಿವಿದಿಷೆ(ಪರಮಾತ್ಮ ತತ್ತ್ವವನ್ನು ಅರಿತುಕೊಳ್ಳ ಬೇಕೆಂಬ ಇಚ್ಛೆ)ಯುಂಟಾಗುತ್ತದೆ ಎಂದು ಶ್ರುತಿಯಲ್ಲಿದೆ; ಕರ್ಮಗಳಿಂದ ಮನಸ್ಸಿನಲ್ಲಿ ರುವ ಕಷಾಯವು ಪಕ್ವವಾಗಲಾಗಿ ಚಿತ್ತಶುದ್ಧಿಯಾಗಿ ಜ್ಞಾನವುಂಟಾಗುವದು ಎಂದು ಸ್ಮೃತಿಯಿದೆ. ಆದ್ದರಿಂದ ಜ್ಞಾನಕ್ಕೆ ಸಾಧನವಾಗಿ ಕರ್ಮಗಳನ್ನು ಮಾಡಬೇಕು- ಎಂದು ಭಾಷ್ಯದ ಅರ್ಥ.

ಶ್ರೀಗಳು ಅನುವಾದದಲ್ಲಿ ವರ್ಣಾಶ್ರಮಧರ್ಮಗಳು ನಮ್ಮ ದೇಶದಲ್ಲಿ ಮಾತ್ರ ಇವೆ. ಇವುಗಳನ್ನು ಅನುಷ್ಠಾನಮಾಡುವದರಲ್ಲಿ ಈಗ ಶೈಥಿಲ್ಯವುಂಟಾಗಿರುತ್ತದೆ ಯಾದರೂ ಅಧಿಕಾರಿಗಳಾದವರು ಶಕ್ಯವಿದ್ದಷ್ಟುಮಟ್ಟಿಗೆ ಮಾಡಿ ಅದರ ಲಾಭವನ್ನು ಪಡೆಯಬೇಕು. ಅದರ ಸಹಾಯವಿಲ್ಲದವರು ನಾಮಸ್ಮರಣೆಯೇ ಮುಂತಾದ ಸಾಧನ ಗಳಿಂದ ಬುದ್ಧಿಶುದ್ಧಿಯನ್ನು ಸಂಪಾದಿಸಿಕೊಳ್ಳಬೇಕು- ಎಂದು ಉಪದೇಶಿಸಿದರು.

ಸಾಯಂಕಾಲ : ಶ್ರೀಗಳು ನಮ್ಮ ದೇಶದ ಸಂಸ್ಕೃತಿಯನ್ನು ಅರಿಯದೆ ಹುಡುಗರು ಹೇಗೆ ಪರದೇಶದವರ ಅನುಕರಣೆಮಾಡುತ್ತಿರುತ್ತಾರೆಂಬುದನ್ನು ಕುರಿತು ಕನಿಕರವನ್ನು ತೋರಿಸಿ ವೇದ, ರಾಮಾಯಣ, ಭಾರತ, ಅಧ್ಯಾತ್ಮವಿಚಾರ, ಆಚಾರ ವಿಚಾರಗಳು – ಇವುಗಳನ್ನು ಕುರಿತ ತಿಳಿವಳಿಕೆಯನ್ನು ಅವರಿಗೆ ಉಂಟುಮಾಡಿ ಕೊಡುವವದರ ಆವಶ್ಯಕತೆಯನ್ನು ತಿಳಿಸಿದರು.

**ತಾ.15.10.1966**

ಬೆಳಗ್ಗೆ : ನಾನು **ಇತರವ್ಯಪದೇಶಾದ್ಧಿತಾಕರಣಾದಿದೋಷಪ್ರಸಕ್ತಿಃ'',''ಅಧಿಕಂ ತು ಭೇದನಿರ್ದೇಶಾತ್ (1.2.1,2)** ಎಂಬ ಬ್ರಹ್ಮಸೂತ್ರಗಳ ಭಾಷ್ಯದ ಅರ್ಥವನ್ನು ಪ್ರವಚನಮಾಡಿದೆನು. ಈ ಜಗತ್ತನ್ನು ಪರಮಾತ್ಮನು ಸೃಷ್ಟಿಸಿದ್ದಾನೆ ಎಂದು ಒಪ್ಪಿದರೆ ಜಗತ್ತನ್ನು ಸೃಷ್ಟಿಸಿ ಅದರೊಳಕ್ಕೆ ತಾನೇ ಸಂಸಾರಿಯಾದ ಜೀವವಾಗಿ ಪ್ರವೇಶಿಸಿರುತ್ತಾನೆಂದು ಶ್ರುತಿಯಲ್ಲಿರುವದರಿಂದ ಆತ್ಮನು ತನಗೆ ತಾನೇ ಅಹಿತವನ್ನು ಮಾಡಿಕೊಂಡಿರುವನೆಂದಾಗುವದಲ್ಲ! – ಎಂಬ ಶಂಕೆಗೆ ಇಲ್ಲಿ ಪರಿಹಾರವನ್ನು ಹೇಳಿದೆ. ಭಗವಂತನು ಯಾವಾಗಲೂ ತನ್ನ ಸ್ವರೂಪದಲ್ಲಿಯೇ ಇರುತ್ತಾನಾದ್ದರಿಂದ ಅವನಲ್ಲಿ ಯಾವ ದೋಷವೂ ಇಲ್ಲ; ಜೀವನು ಜಗತ್ತನ್ನು ಸೃಷ್ಟಿಸಿದನೆಂದೇನೂ ಶಾಸ್ತ್ರದಲ್ಲಿ ಹೇಳಿಲ್ಲ. ಜೀವನು ನಿಜವಾಗಿ ಪರಮಾತ್ಮನೇ ಅಲ್ಲವೆ? ಎಂದರೆ ವೇದಾಂತೋಪದೇಶದಿಂದ ಈ ತತ್ತ್ವವನ್ನು ಅರಿತಾಗ ಪರಮಾರ್ಥವಾಗಿ ಸೃಷ್ಟಿಯೇ ಇರುವದಿಲ್ಲವಾದ್ದರಿಂದ ಯಾವ ದೋಷವೂ ಇಲ್ಲ – ಎಂಬುದು ಪರಿಹಾರ.

ಶ್ರೀಗಳು ಅನುವಾದದಲ್ಲಿ ಹೀಗೆಂದರು: ಪರಮಾತ್ಮನು ಅದ್ವಿತೀಯನೆಂಬುದು ಪರಮಾರ್ಥದೃಷ್ಟಿ, ಜೀವರುಗಳಾದ ನಮಗಿಂತ ವಿಲಕ್ಷಣನಾದ ಪರಮೇಶ್ವರನೊಬ್ಬನಿದ್ದಾನೆ; ಅವನನ್ನು ಆರಾಧಿಸಿ ಪುರುಷಾರ್ಥವನ್ನು ಪಡೆಯಬೇಕು – ಎಂಬುದು ವ್ಯವಹಾರದೃಷ್ಟಿಯಿಂದ ಹೇಳುವ ಮಾತು. ಇವೆರಡಕ್ಕೂ ವಿರೋಧವೇನೂ ಇಲ್ಲ. ಆಕಾಶದಲ್ಲಿ ಒಬ್ಬನೇ ಸೂರ್ಯನಿದ್ದರೂ ಜಲಾಶಯಗಳಲ್ಲಿ ಅವನ ಪ್ರತಿಬಿಂಬಗಳು ಅನೇಕವಿರಬಹುದು. ಅವುಗಳಲ್ಲಿ ಕೆಲವು ಉಪಾಧಿಯ ಚಲನೆಯಿಂದ ಚಲಿಸುತ್ತಿರಬಹುದು. ಮಿಕ್ಕವು ಹಾಗೆಯೇ ಇರಬಹುದು. ಅಷ್ಟುಮಾತ್ರದಿಂದ ಸೂರ್ಯನಿಗೇತರ ಕೊರತೆ! ನಾವು ಅವಿದ್ಯೆಯನ್ನು ಕಳೆದುಕೊಳ್ಳುವವರೆಗೂ ಜೀವೇಶ್ವರಭೇದವ್ಯವಹಾರವಿರುತ್ತದೆ. ಪರಮಾರ್ಥದೃಷ್ಟಿಯಿಂದ ಆತ್ಮನು ನಿತ್ಯಶುದ್ಧಬುದ್ಧಮುಕ್ತಸ್ವಭಾವನಾಗಿರುತ್ತಾನೆ.

ಉಉಉಉಉ

# ಕೆಲವು ವ್ರತಗಳೂ ಅನುಷ್ಠಾನಗಳೂ

ಶ್ರಾವಣಭಾದ್ರಪದಮಾಸಗಳಲ್ಲಿ ಬರುವ ಕೆಲವು ವ್ರತಗಳ ಆಚರಣೆಯಲ್ಲಿ ಅಡಗಿರುವ ತತ್ತ್ವವನ್ನು ಮನಸ್ಸಿನಲ್ಲಿ ಆಲೋಚಿಸಿಕೊಳ್ಳುವದರಿಂದ ಪ್ರಯೋಜನ ವುಂಟು. ಅದರಿಂದ ಆರ್ಯಸಂಸ್ಕೃತಿಯ ಮಹತ್ತ್ವವು ಮನಸ್ಸಿಗೆ ತಟ್ಟುವಂತಿದೆ.

**1. ಉಪಾಕರ್ಮ** – ಇದು ಬ್ರಾಹ್ಮಣರಿಗೇ ವಿಶೇಷವಾಗಿ ಅನ್ವಯಿಸತಕ್ಕದ್ದಾದರೂ ಸನಾತನ ಧರ್ಮಕ್ಕೆಲ್ಲ ತಳಹದಿಯಾಗಿರುವ ವೇದಗಳ ಅಧ್ಯಯನವನ್ನು ಪ್ರಾರಂಭ ಮಾಡುವ ದಿನವೆಂದು ಪ್ರಸಿದ್ಧವಾಗಿದ್ದದ್ದು ಈಗ ವರ್ಷಕ್ಕೊಮ್ಮೆ ಹೋಮ, ಋಷಿಪೂಜೆ, ತರ್ಪಣ, ಯಜ್ಞೋಪವೀತ ಧಾರಣೆ – ಇಷ್ಟರಲ್ಲಿ ಮುಗಿಯುವ ಅನುಷ್ಠಾನವಾಗಿ ಪರಿಣಮಿಸಿದೆ. 'ಬ್ರಾಹ್ಮಣರು ಯಾವ ಪ್ರಯೋಜನವನ್ನೂ ಬಯಸದೆ ವೇದಾಧ್ಯಯನ ವನ್ನು ಮಾಡತಕ್ಕದ್ದು' ಎಂಬ ವಿಧಿಯು ಹೀಗೆ ಕಣ್ಮರೆಯಾಗಿದೆಯಲ್ಲ, ಇದಕ್ಕೇನೂ ಉಜ್ಜೀವನೋಪಾಯವಿಲ್ಲವೆ? ಬ್ರಾಹ್ಮಣ್ಯವೆಂಬುದು ಸನಾತನವೈದಿಕ ಧರ್ಮದ ಮತ್ತು ಆರ್ಯಸಂಸ್ಕೃತಿಯ ಹೆಗ್ಗುರುತು. ಇದರ ರಕ್ಷಣೆಗೆ ಸಂಸ್ಕೃತಿಯ ಅಭಿಮಾನಿಗಳು ಏನು ಮಾಡಬೇಕು? ವೇದಗಳು, ಸ್ಮೃತಿಗಳು, ಪುರಾಣಗಳು – ಇವುಗಳ ಸಾರವಾದರೂ ನಮ್ಮ ತರುಣರಿಗೆ ತಿಳಿದಿರಬೇಕಲ್ಲವೆ?

**2. ಶ್ರೀಕೃಷ್ಣಜನ್ಮಾಷ್ಟಮಿ** – ಶ್ರೀಮಹಾವಿಷ್ಣುವಿನ ಅವತಾರಗಳಲ್ಲಿ ಅತ್ಯಂತ ಪ್ರಸಿದ್ಧ ವಾಗಿರುವ ಶ್ರೀಕೃಷ್ಣಾವತಾರದ ಕಥೆ, ಶ್ರೀಕೃಷ್ಣ ಭಗವಂತನ ಲೀಲೆಗಳು, ಶ್ರೀಕೃಷ್ಣ ಭಗವಂತನು ಅರ್ಜುನನಿಗೆ ಮಾಡಿರುವ ಭಗವದ್ಗೀತೋಪದೇಶದ ಸಾರ – ಇಷ್ಟೂ ತಿಳಿಯದಿದ್ದರೆ ನಮ್ಮ ದೇಶದ ಸಂಸ್ಕೃತಿಯ ಜ್ಞಾನದಲ್ಲಿ ನಮಗೆ ಉಳಿಯುವದು ಅತ್ಯಲ್ಪವೇ. ಭಗವಂತನು ಸರ್ವವ್ಯಾಪಕನು, ಸರ್ವರ ಆತ್ಮನು, ನಿರ್ಗುಣನೂ ಸಗುಣನೂ ಆಗಿರುವವನು, ಭಕ್ತಾನುಗ್ರಹತತ್ಪರನು, **'ವೇದಾಂತಕೃದ್ ವೇದವಿದೇವ ಚಾಹಮ್'** ಎಂದು ಆತನು ನಮಗೆ ಎಚ್ಚರಿಕೆಯನ್ನು ಕೊಟ್ಟಿರುತ್ತಾನೆ. ಕರ್ಮ, ಯೋಗ, ಭಕ್ತಿ, ಜ್ಞಾನಗಳ ಸಾರವು ಭಗವದ್ಗೀತೆಯಲ್ಲಿ ಸಂಗ್ರಹವಾಗಿದೆ ಎಂದು ಎಲ್ಲಾ ಸನಾತನಿಗಳೂ ನಂಬುತ್ತಾರೆ.

**'ಭಗವದ್ಗೀತಾ ಕಿಞ್ಚಿದಧೀತಾ ಗಙ್ಗಾಜಲಲವಕಣಿಕಾ ಪೀತಾ ।**
**ಸಕೃದಪಿ ಯೇನ ಮುರಾರಿಸಮರ್ಚಾ ಕ್ರಿಯತೇ ತಸ್ಯ ಯಮೇನ ನ ಚರ್ಚಾ ॥'**

ಭಗವದ್ಗೀತೆಯನ್ನು ಸ್ವಲ್ಪವಾದರೂ ಅಧ್ಯಯನಮಾಡುವದು, ಗಂಗಾಜಲವನ್ನು ಒಂದು ತೊಟ್ಟನ್ನಾದರೂ ಕುಡಿದಿರುವದು, ಶ್ರೀಕೃಷ್ಣಭಗವಂತನ ಪೂಜೆಯನ್ನು ಒಂದು ಸಲ ವಾದರೂ ಮಾಡಿರುವದು - ಇವಿಷ್ಟೂ ಇರುವವನಿಗೆ ಮೃತ್ಯುವಿನ ಭೀತಿಯಿಲ್ಲ - ಎಂದು ದೊಡ್ಡವರ ಉಪದೇಶ. ಶ್ರೀಕೃಷ್ಣಜಯಂತಿಯು ಇದನ್ನು ನಮಗೆ ನೆನಪಿಗೆ ಕೊಡುವದಕ್ಕೆ ನಾವೇನು ಮಾಡಬೇಕು?

**3. ಸಿದ್ಧಿವಿನಾಯಕವ್ರತ** - ಗಣಪತಿಯು ನಿರ್ವಿಘ್ನಕಾರಿಯಾದ ದೇವತೆ ಎಂಬುದು ಆಸ್ತಿಕರಾದ ಹಿಂದುಗಳ ನಂಬಿಕೆ. ಯಾವ ಅನುಷ್ಠಾನವನ್ನು ಮಾಡಿದರೂ ಮೊದಲು ಗಣಪತಿಯ ಪೂಜೆಯನ್ನು ಮಾಡಿಯೇ ತೀರುವರು. ಆರ್ಯರ ಸಂಸ್ಕೃತಿಯ ಅವಶೇಷಗಳು ಇನ್ನೂ ಇವೆ. ಅವುಗಳ ಉಜ್ಜೀವನಕ್ಕೂ ಬೆಳವಣಿಗೆಗೂ ಯಾವ ವಿಘ್ನವೂ ಬಾರದಂತೆ ವಿಘ್ನೇಶ್ವರನ ಭಕ್ತಿಯನ್ನು ಹೆಚ್ಚಿಸುವದು ಉತ್ತಮವಲ್ಲವೆ? ಭಗವಂತನನ್ನು ಮರೆತು ಕೇವಲ ಬಾಹ್ಯವಿಷಯಗಳ ಆಸಕ್ತಿಯಿಂದಲೇ ಚಿತ್ತವು ಅಪಹಾರವಾಗಿ ರುವದರಿಂದಲೇ ಅಲ್ಲವೆ, ಸಾತ್ತ್ವಿಕಕಾರ್ಯಗಳಲ್ಲಿ ಮನಸ್ಸು ನಿಲ್ಲದೆ, ಸದಾಚಾರ ಸದ್ವಿಚಾರಗಳಿಗೆ ವಿಘ್ನಗಳು ಬರುತ್ತಿರುವವು?

**4. ಋಷಿಪಂಚಮೀವ್ರತ** - ಇದು ವಿಶೇಷವಾಗಿ ವಯಸ್ಕರಾದ ಮಹಿಳೆಯರು ಆಚರಿಸುವ ವ್ರತ. ಶುದ್ಧಾಚಾರದ ರಕ್ಷಣೆಗೆ, ಋಷಿಗಳನ್ನು ಪೂಜಿಸುವ ವ್ರತದಲ್ಲಿ - ಮಹಿಳೆಯರಿಗೆ, ಉಪಾಕರ್ಮದಲ್ಲಿ ಬ್ರಾಹ್ಮಣಪುರುಷರಿಗೆ ಹೇಗೋ ಹಾಗೆಯೇ - ಹೆಚ್ಚಿನ ಆದರವನ್ನು ಉಂಟುಮಾಡುವದು ಭಾರತದೇಶದವರ ಸಂಸ್ಕೃತಿಗೆಲ್ಲ ತಳಪಾಯ ವನ್ನು ಹಾಕಿಕೊಟ್ಟಿರುವ ಪ್ರಾತಸ್ಸ್ಮರಣೀಯರಾದ ಋಷಿಗಳ ಸ್ಮಾರಕವಲ್ಲವೆ? ಋಷಿಗಳ ಸಂಕ್ಷಿಪ್ತಪರಿಚಯವನ್ನು ಪುಸ್ತಕರೂಪವಾಗಿ ಪ್ರಕಟಿಸಿ ಅವರ ಸವಿನೆನಪನ್ನು ನಮ್ಮ ದೇಶದವರಿಗೆ ಕೊಡುವದು ವಿವೇಕಿಗಳಾದ ಭಾರತ ನಿವಾಸಿಗಳ ಕರ್ತವ್ಯವಲ್ಲವೆ?

**5. ಅನಂತಪದ್ಮನಾಭವ್ರತ** - 'ಅನಂತ'ನೆಂಬ ಹೆಸರಿನಿಂದ ಭಗವಂತನನ್ನು ಆರಾಧಿ ಸುವದು ನಮ್ಮ ದೇಶದಲ್ಲಿ ಮಾತ್ರ ಇದೆ. ಪರಿಚ್ಛಿನ್ನಬುದ್ಧಿಯ ಸಂಸಾರದಿಂದ ಪಾರಾಗು ವದಕ್ಕೆ 'ಅನಂತ'ನಾದ ಭಗವಂತನ ಆರಾಧನೆಯೇ ಮಾರ್ಗವೆಂಬುದನ್ನು ತಿಳಿಸುವ ಈ ವ್ರತದ ತತ್ತ್ವವು ನಮ್ಮ ದೇಶದ ಆಸ್ತಿಕರ ಹೃದಯಕ್ಕೆ ಮುಟ್ಟುವಂತೆ ಮಾಡುವದು ಈ ಕಾಲಕ್ಕೆ ಅತ್ಯವಶ್ಯವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಭಗವಂತನ ವಿಷಯಕ್ಕೆ ಪರಾಙ್ಮುಖರಾಗಿರುವದರಿಂದಲೇ ನಮಗೆ ಜೀವನದಲ್ಲಿ ಬಗೆಬಗೆಯ ತೊಡರುಗಳು

ಅಡ್ಡಬರುತ್ತಿವೆ. ಪರಿಚ್ಛಿನ್ನಬುದ್ಧಿಯೂ, ಸ್ವಾರ್ಥಬುದ್ಧಿಯೂ ರಾಗದ್ವೇಷಗಳನ್ನು ಬೆಳೆಯಿಸಿ ಮನುಷ್ಯನನ್ನು ಪುರುಷಾರ್ಥದಿಂದ ವಂಚಿತನನ್ನಾಗಿ ಮಾಡುವವು. ಸಂಸಾರದ ಗಹ್ವರ ವಾದ ಗುಹೆಗಳಲ್ಲಿ ತೊಳಲುತ್ತಿರುವವರಿಗೆಲ್ಲ ಪರಮಾತ್ಮನು ಅನಂತನು, ಸರ್ವಜ್ಞನು, ಸರ್ವಶಕ್ತನು – ಎಂಬುದನ್ನು ನೆನಪಿಗೆ ತರುವದಕ್ಕೆ ಈ ವ್ರತದ ಕಥೆಯೊಂದು ಅಮೋಘವಾದ ಸಾಧವವಾಗಿದೆ ಎನ್ನಬಹುದು.

**6. ಭಾದ್ರಪದಮಾಸದಲ್ಲಿಯೇ ಪಿತೃಗಳ ಸ್ಮರಣೆಯನ್ನು ಮಾಡುವ 'ಪಿತೃಪಕ್ಷವು'** ಬರುತ್ತದೆ. ದೇವತೆಗಳು, ಋಷಿಗಳು, ಪಿತೃಗಳು – ಇವರ ಸ್ಮರಣೆಯು ಆರ್ಯ ಸಂಸ್ಕೃತಿಯ ಒಂದು ಗುರುತು. ಪಿತೃಗಳ ಆರಾಧನೆಯನ್ನು ಮಾಡುವ ಆಸ್ತಿಕರು ಇನ್ನೂ ನಮ್ಮ ದೇಶದಲ್ಲಿ ಹಲವರು ಇರುತ್ತಾರೆ.

# ಶ್ರೀಕೃಷ್ಣಜನ್ಮಾಷ್ಟಮಿ

**ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।**
**ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥**

ಅಧ್ಯಾತ್ಮಪ್ರಕಾಶದ ಈ ವರ್ಷದ ಮೊದಲನೆಯ ಸಂಚಿಕೆಯು ಕೃಷ್ಣ ಜನ್ಮಾಷ್ಟಮಿಯ ದಿನ ಹೊರಕ್ಕೆ ಬಂದು ಕಾಣಿಸಿಕೊಂಡಿರುವದು ನಿಜವಾಗಿಯೂ ಒಂದು ಶುಭಚಿಹ್ನೆಯಾಗಿದೆ. ಏಕೆಂದರೆ ಈ ದಿವಸವು ಶ್ರೀಕೃಷ್ಣನು ವಸುದೇವ ದೇವಕಿಯರ ಕೈಕಾಲ ಬೇಡಿಯನ್ನು ಕಳಚಿ ಅವರಿದ್ದ ಸೆರೆಮನೆಯಲ್ಲಿ ಅವರು ಎಂದೆಂದಿಗೂ ಕಾಣದೆ ಇದ್ದ ಒಂದು ವಿಚಿತ್ರವಾದ ಪುಣ್ಯಜ್ಯೋತಿಯನ್ನು ಬೆಳಗಿಸಿದ ಪರಮಮಂಗಳವಾದ ದಿನವಾಗಿರುತ್ತದೆ. ಈ ದಿನದಿಂದ ಮೊದಲಾಗಿ ಮುಂದೆ ಮುಂದೆ ಹೋಗುತ್ತಾ ಕಂಸನ ಕಡೆಯ ಅಸುರರಿಗೆ ಸೋಲು ಆಗುತ್ತಾ ಬಂದಿತು. ಭೂದೇವಿಯು ಇನ್ನು ಮೇಲೆ ತಾನು ದುಷ್ಟರ ಭಾರವನ್ನು ಹೊರತಕ್ಕ ದುಃಖವು ಇರುವದಿಲ್ಲವೆಂಬ ನಿರೀಕ್ಷಣೆಯಿಂದ ನಲಿಯಲು ಆರಂಭಿಸಿದಳು. ಶ್ರೀಕೃಷ್ಣನು ಅವತರಿಸಿ ಒಂದು ಯುಗವೇ ಆಗಿ ಹೋಗಿದ್ದರೂ ಭರತಖಂಡದ ಎಲ್ಲಾ ಪ್ರಾಂತ್ಯದವರೂ ಈ ದಿನವನ್ನು ತಪ್ಪದೆ ಪ್ರತಿವರ್ಷವೂ ಉತ್ಸವದಿನವಾಗಿ ಎಣಿಸುತ್ತಾ ಬರುತ್ತಿದ್ದಾರೆ.

ಕೃಷ್ಣಜನ್ಮವನ್ನು ಉಪವಾಸದಿನವಾಗಿ ಎಣಿಸುವವರೇ ಬಹುಮಂದಿ. ಎಲ್ಲಿಯೋ ಕೆಲವರು ಇದನ್ನು ಊಟದ ಹಬ್ಬವಾಗಿ ಆಚರಿಸುವವರು. ಇದು ಹೇಗಾದರೂ ಈ ಎರಡು ಪಂಗಡದವರೂ ಈ ದಿನ ಕೃಷ್ಣನ ಆರಾಧನೆಯನ್ನು ಮಾಡುವದೂ, ಅವನು ಮಾಡಿದ ಲೋಕೋಪಕಾರವನ್ನೂ ಧರ್ಮೋದ್ಧಾರವನ್ನೂ ನೆನಸಿಕೊಂಡು ಸಂತೋಷ ಪಡುವದೂ, ಪೂಜೆ, ದಾನ, ಧರ್ಮ- ಮುಂತಾದವುಗಳಿಂದ ಸತ್ಕಾಲಕ್ಷೇಪವನ್ನು ಮಾಡುವದೂ ತಮಗೆಲ್ಲರಿಗೂ ಶ್ರೇಯಸ್ಕರವೆಂದು ನಂಬಿರುತ್ತಾರೆ. ಈ ಶುಭದಿವಸದ ಮುಹೂರ್ತವನ್ನು ಗೊತ್ತುಮಾಡುವದರಲ್ಲಿ ಸ್ವಲ್ಪ ಮತಭೇದವುಂಟು. ಶ್ರಾವಣ ಮಾಸದ ಕೃಷ್ಣಪಕ್ಷದಲ್ಲಿ ಅಷ್ಟಮಿಯ ದಿನ ರೋಹಿಣೀನಕ್ಷತ್ರದಲ್ಲಿ ಅರ್ಧರಾತ್ರೆಯಲ್ಲಿ ಚಂದ್ರೋದಯ ವಾಗುತ್ತಲೂ ಕೃಷ್ಣನ ಜನ್ಮವಾಯಿತೆಂಬ ಕಾರಣದಿಂದ ಕೆಲವರು ತಿಥಿಗೆ ಪ್ರಾಧಾನ್ಯವನ್ನು ಕೊಟ್ಟು ಶ್ರೀಕೃಷ್ಣಜನ್ಮಾಷ್ಟಮಿಯನ್ನು ಗೊತ್ತುಪಡಿಸುವರು. ಮತ್ತೆ ಕೆಲವರು ಮಾಸವು ಶ್ರಾವಣವೇ ಆಗಲಿ ಭಾದ್ರಪದವೇ ಆಗಲಿ ಅಷ್ಟಮಿಯ ದಿನ ರೋಹಿಣೀನಕ್ಷತ್ರವು ಎಂದು ಬರುವದೋ ಆ ದಿನವನ್ನು ಅಥವಾ ಸೌರಮಾನದಿಂದ ಈ ಮಾಸಕ್ಕೆ ಸಮಾನ ವಾಗುವ ಸಿಂಹಮಾಸದಲ್ಲಿ ರೋಹಿಣೀನಕ್ಷತ್ರವು ಎಂದಿರುವದೋ ಆ ದಿನವನ್ನು **'ಶ್ರೀಕೃಷ್ಣಜಯಂತೀ'** ಎಂಬ ಹೆಸರಿನಿಂದ ಕರೆಯುವರು. ಈ ದಿನ ಆರಾಧನೆ ಮಾಡುವ ವರು ಬೆಳಗ್ಗೆ ಉಷಃಕಾಲದಲ್ಲಿಯೇ ಎದ್ದು ಮಹಾವಿಷ್ಣುವನ್ನು ಸ್ಮರಣೆಮಾಡುತ್ತಾ ನಿತ್ಯಕರ್ಮಗಳನ್ನು ಮಾಡಿ ಶ್ರೀಕೃಷ್ಣನ ಮಹಿಮೆಗಳನ್ನೇ ಎಣಿಸಿಕೊಳ್ಳುತ್ತಾ ಕಾಲವನ್ನು ಕಳೆಯುತ್ತಿದ್ದು ರಾತ್ರಿಯಲ್ಲಿ ವ್ರತಕ್ಕೆ ಅಂಗವಾಗಿ ಮತ್ತೆ ಸ್ನಾನಮಾಡಿ ಪರಿವಾರ ಸಮೇತ ನಾದ ಶ್ರೀಕೃಷ್ಣನಿಗೆ ಆವಾಹನಾದಿಷೋಡಶೋಪಚಾರಪೂಜೆಯನ್ನು ಮಾಡುವರು. ದೇವಕಿಯ ಸಮೀಪದಲ್ಲಿರುವ ಶ್ರೀಕೃಷ್ಣನ ಪ್ರತಿಮೆಯನ್ನೂ ಲಕ್ಷ್ಮೀ, ವಸುದೇವ, ನಂದ, ಯಶೋಧ, ಗೋಪಿಯರು, ಗೋಪಾಲಕರು, ಬಲರಾಮ, ಚಂಡಿಕಾ - ಮುಂತಾ ದವರ ಪ್ರತಿಮೆಗಳನ್ನೂ ಕುಲಾಚಾರದಂತೆ ಮಾಡಿಸಿ ಅವುಗಳನ್ನು ಪೂಜಿಸುವರು. ಅರ್ಧರಾತ್ರೆಯಲ್ಲಿ ಚಂದ್ರನಿಗೂ ಶ್ರೀಕೃಷ್ಣನಿಗೂ ಅರ್ಘ್ಯವನ್ನು ಕೊಟ್ಟು ರಾತ್ರಿಯೆಲ್ಲಾ ಉಪವಾಸವಾಗಿದ್ದು ಶ್ರೀಕೃಷ್ಣಸ್ಮರಣ, ಧ್ಯಾನ, ಕೀರ್ತನ - ಮುಂತಾದ ಸತ್ಕರ್ಮಗಳಿಂದ ಜಾಗರಣವನ್ನು ಮಾಡುವರು. ಉಪವಾಸವನ್ನು ಮಾಡುವದಕ್ಕೆ ಸಾಗದವರು ಫಲಾ ಹಾರವನ್ನು ಮಾಡುವರು. ಜಯಂತೀಪದ್ಧತಿಯವರಲ್ಲಿ ಕೆಲವರು ಉತ್ಸವವಾದ ಮೇಲೆ ಈ ರಾತ್ರಿಯೇ ಪಾರಣೆಯನ್ನು ಮಾಡುವರು.

ಶ್ರೀಕೃಷ್ಣಾವತಾರವಾಗಿ ಹೀಗೆ ಎಷ್ಟೋ ಶತಮಾನಗಳಾಗಿದ್ದರೂ ಕಂಸನೇ ಮುಂತಾದ ರಾಕ್ಷಸರ ಭೀತಿಯು ಈಗ ನಮ್ಮಗಳಿಗೆ ಯಾರಿಗೂ ಏನೂ ಇಲ್ಲದೇ ಇದ್ದರೂ, ಕೃಷ್ಣ ಜನ್ಮಾಷ್ಟಮಿಯ ಉತ್ಸವವನ್ನು ಮಾತ್ರ ಚಾಚೂತಪ್ಪದೆ ನಡೆಸಿಕೊಂಡು ಬಂದಿರುವದರಲ್ಲಿ ನಮ್ಮ ಹಿರಿಯರ ಆಶಯವು ಏನಿರಬಹುದು? - ಎಂಬುದು ವಿಚಾರಣೆಗೆ ಅರ್ಹ ವಾಗಿದೆ. ಕೃಷ್ಣಾಷ್ಟಮಿಯ ದಿನ ಬಗೆಬಗೆಯ ತಿಂಡಿಗಳನ್ನು ಏರ್ಪಡಿಸುವದೇ ಮುಖ್ಯ ವಾಗಿ ನಡೆದಿರುವದರಿಂದ ಈ ಹಬ್ಬವು ಯಾರೋ ತಿಂಡಿಪೋತರು ಏರ್ಪಡಿಸಿದ್ದೆಂದು ಈಗಿನವರಲ್ಲಿ ಕೆಲವರು ಹಾಸ್ಯಮಾಡುವರು. ಆದರೆ ನಿಜವಾಗಿ ನೋಡಿದರೆ ಕೃಷ್ಣಾ ಷ್ಟಮಿಯಲ್ಲಿ ಶ್ರದ್ಧೆಯುಳ್ಳವರು ಈ ದಿನ ಪೂರ್ಣ ಉಪವಾಸವನ್ನೇ ಮಾಡುತ್ತಾರೆ. ಮಾರನೆಯ ದಿನ ಪಾರಣೆಯು ಕ್ಲಿಪ್ತವಾಗಿ ಬೆಳಗ್ಗೆಯೇ ನಡೆಯುತ್ತದೆಯೆಂಬುದೂ ನಿಯಮವಿಲ್ಲ. ತಮ್ಮೆದುರಿಗೇ ಬಗೆಬಗೆಯ ಭಕ್ಷ್ಯಗಳಿರುವಾಗ ಹೀಗೆ ಉಪವಾಸ ವಿರುವ ಜನರನ್ನು ತಿಂಡಿಪೋತರೆಂದು ಕರೆಯುವದು. ಹೋಟೆಲ್ ತಿಂಡಿಯ ವಾಸನೆಯು ಹೆಚ್ಚಾಗಿರುವವರಿಗೆ ಒಪ್ಪೀತೇ ಹೊರತು ಯುಕ್ತಿ ಯಿಂದ ವಿಷಯಗಳನ್ನು ಪರಿಶೀಲಿಸುವವರಿಗೆ ಎಂದಿಗೂ ಒಗ್ಗದು.

ಶ್ರೀಕೃಷ್ಣನಿಗೆ ಅರ್ಘ್ಯವನ್ನು ಕೊಡುವ ಮಂತ್ರದ ಅರ್ಥವನ್ನು ನೋಡಿದರೆ ಕೃಷ್ಣಜನ್ಮಾಷ್ಟಮಿಯ ಮಹತ್ತ್ವವನ್ನು ನಮ್ಮ ಪೂರ್ವಿಕರು ಎಷ್ಟರಮಟ್ಟಿಗೆ ಮನಸ್ಸಿನಲ್ಲಿ ಇಟ್ಟುಕೊಂಡಿದ್ದರೆಂಬುದು ಎದ್ದು ಕಾಣುವದು. "ಕಂಸಾದಿಗಳನ್ನು ಕೊಂದು ಭೂಮಿಯ ಹೊರೆಯನ್ನು ಕೆಳಕ್ಕಿಳಿಸಿದ ಮತ್ತು ಪಾಂಡವಾದಿಗಳನ್ನು ರಕ್ಷಿಸಿ ಧರ್ಮವನ್ನು ಸಂಸ್ಥಾಪಿಸಿದ ಶ್ರೀಕೃಷ್ಣನೆ, ನಿನಗೆ ಅರ್ಘ್ಯವು; ಸರ್ವಪಾಪಗಳನ್ನೂ ಸರ್ವದುಃಖಗಳನ್ನೂ ಸರ್ವರೋಗ ಗಳನ್ನೂ ಪರಿಹಾರಮಾಡುವ, ಜನ್ಮಜನ್ಮಾಂತರದ ಪುಣ್ಯಗಳನ್ನೂ ಹೆಚ್ಚಿಸುವ ಶ್ರೀ ಕೃಷ್ಣನೆ, ನಿನಗೆ ಅರ್ಘ್ಯವು" ಎಂಬ ತಾತ್ಪರ್ಯವು ಈ ಅರ್ಘ್ಯಶ್ಲೋಕಗಳಲ್ಲಿ ಅಡಗಿ ರುವುದು. ಕಂಸನೇ ಮುಂತಾದ ವ್ಯಕ್ತಿಗಳು ದ್ವಾಪರದಲ್ಲಿಯೇ ಆಗಿಹೋದರೆಂಬುದು ನಿಜ; ಆದರೆ ಶ್ರೀಕೃಷ್ಣನು ಯಾವ ಅಸುರರ ತತ್ತ್ವವನ್ನು ಧ್ವಂಸಮಾಡುವದಕ್ಕೆ ಅವತರಿ ಸಿದ್ದನೋ ಆ ತತ್ತ್ವಗಳು ಈಗಲೂ ಲೋಕದಲ್ಲಿ ಬೇಕಾದಹಾಗೆ ಹಬ್ಬಿಕೊಂಡಿದೆ. ಈಗಲೂ ಅವುಗಳನ್ನು ನಾವು ಶ್ರೀಕೃಷ್ಣಸ್ಮರಣೆಯಿಂದಲೂ ಭಕ್ತಿಯುಕ್ತವಾದ ಪೂಜೆಯಿಂದಲೂ ಆತನು ಉಪದೇಶಿಸಿರುವ ಧರ್ಮಗಳ ಆಚರಣೆಯಿಂದಲೂ ನಾಶಗೊಳಿಸಿಕೊಳ್ಳ ಬೇಕಾಗಿದೆ.

ವಾಚಕರೆ, ಕಂಸನಿಗೆ 'ಅಸ್ತಿ', 'ಪ್ರಾಪ್ತಿ',* ಎಂದು ಇಬ್ಬರು ಹೆಂಡಿರೆಂದು ಭಾಗವತದಲ್ಲಿ ಹೇಳಿದೆ. ಈ ಭಾವನೆಗಳು ಬಲವಾಗಿ ಬೇರೂರಿರುವವರ ಹೃದಯ ದಲ್ಲೆಲ್ಲಾ ಕಂಸನ ಆವೇಶವು ಸಂಪೂರ್ಣವಾಗಿರುವದು. ಈ ಕಂಸನಾಶವು ಆಗುವದಕ್ಕೆ ಶ್ರೀಕೃಷ್ಣನ ಅವತಾರವು ಅವರ ಹೃದಯದಲ್ಲಿ ಅವಶ್ಯವಾಗಿ ಆಗಬೇಕು. ಶ್ರೀಕೃಷ್ಣನ ಅತವಾರವು ಮುಂದೆ ಆಗುವದೆಂಬ ಸುದ್ದಿಯನ್ನು ಕೇಳಿದ ಕೂಡಲೆ ಕಂಸನು ತನ್ನ ಕಡೆಯ ಅಸುರರನ್ನು ಒಂದು ಸಭೆ ಸೇರಿಸಿ ಮುಂದೆ ಏನು ಮಾಡಬೇಕೆಂದು ಮಂತ್ರಾ ಲೋಚನೆ ಮಾಡಿದನಂತೆ. ಆ ಮಂತ್ರಿಗಳು "ಎಲೈ ರಾಜೇಂದ್ರನೆ, ನಮ್ಮ ಶತ್ರುಗಳಾದ ದೇವತೆಗಳಿಗೆಲ್ಲಾ ವಿಷ್ಣುವೇ ಮೂಲವು. ಆತನು ಮುಖ್ಯವಾಗಿ ಬ್ರಾಹ್ಮಣರಲ್ಲಿಯೂ, ಬ್ರಹ್ಮಾದಿಗಳಲ್ಲಿಯೂ, ತಪಸ್ವಿಗಳಲ್ಲಿಯೂ, ಯಜ್ಞಯಾಗಾದಿಗಳನ್ನು ಮಾಡುವವರಲ್ಲಿಯೂ, ಗೋವುಗಳಲ್ಲಿಯೂ ನೆಲಸಿರುವನು. ಬ್ರಾಹ್ಮಣರು, ಗೋವುಗಳು, ವೇದಗಳು, ತಪಸ್ಸು ಸತ್ಯ, ದಮ, ಶಮ, ಶ್ರದ್ಧೆ ತಿತಿಕ್ಷೆ ಯಜ್ಞಗಳು ಇವೇ ಶ್ರೀಹರಿಯ ಶರೀರವು. ಆದ್ದರಿಂದ ಇವೆಲ್ಲವೂ ಇರುವ ಋಷಿಗಳನ್ನು ಕೊಲ್ಲುವುದೇ ವಿಷ್ಣುವಿನ ವಧೋಪಾಯವು. ನಾವು ಈ ಕೆಲಸವನ್ನು ಕೂಡಲೆ ಕೈಕೊಳ್ಳೋಣ" ಎಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದರಂತೆ. ಮನುಷ್ಯನ ಹೃದಯದಲ್ಲಿ ಅತ್ಯಂತ ಪ್ರಿಯರಾಗಿ ಯಾವಾಗಲೂ ನೆಲಸಿಕೊಂಡಿರುವ ಈ 'ಅಸ್ತಿ, ಪ್ರಾಪ್ತಿ' ಗಳಲ್ಲಿ ಯಾವನು ಅತಿವ್ಯಾಮೋಹದಿಂದ ಹಿಂದೂ ಮುಂದೂ ಕಾಣದಷ್ಟು ಕುರುಡನಾಗಿ ವರ್ತಿಸುತ್ತಿರುವನೋ, ಅಂಥಾ ಅಸುರಬುದ್ಧಿಯ ವನಿಗೆ ಈಗಲೂ ಧರ್ಮ, ಸತ್ಯ, ಶಮ, ದಮ – ಮುಂತಾದವುಗಳಲ್ಲಿ ಕಂಸನ ಹಾಗೆಯೇ ಪರಮದ್ವೇಷವು ಉಂಟಾಗುವದು. ಅಂಥವನಿಗೆ ಈ ಲೋಕದಲ್ಲಿಯಾಗಲಿ, ಪರಲೋಕದಲ್ಲಿಯಾಗಲಿ ಎಂದಿಗೂ ಸದ್ಗತಿಯುಂಟಾಗಲಾರದು. ಮನುಷ್ಯನು ತಾನು ಹುಟ್ಟಿದ್ದು ಸಾರ್ಥಕವಾಗಬೇಕಾದರೆ ಮರೆಯದೆ ಈ 'ಅಸ್ತಿ, ಪ್ರಾಪ್ತಿ' ಗಳನ್ನು ಮಟ್ಟು ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಿಕೊಳ್ಳಬೇಕು. ಇದಕ್ಕಾಗಿ ಸತ್ಯ, ಧರ್ಮ, ಮುಂತಾದ ಅಧ್ಯಾತ್ಮಸಾಧನಗಳನ್ನು ಮರೆಯದೆ ಕೈಕೊಳ್ಳಬೇಕು. ಯಾವನು ವಸುದೇವ ದೇವಕೀದೇವಿಯರಂತೆ ಅನನ್ಯವಾದ ಭಕ್ತಿಯಿಂದ ಎಡೆಬಿಡದೆ ಪರಮಾತ್ಮನಲ್ಲಿಯೇ ಮೊರೆಯಿಡುವನೋ ಅಂಥವನ ಹೃದಯದಲ್ಲಿ ಶ್ರೀಕೃಷ್ಣನು ಅವಶ್ಯವಾಗಿ ಅವತರಿಸಿ ಅವರಲ್ಲಿರುವ ಅಜ್ಞಾನದ ಕತ್ತಲೆಯನ್ನು ಸಂಪೂರ್ಣವಾಗಿ ಈ ಅಧ್ಯಾತ್ಮಸಾಧನಗಳ

---

* ಇಷ್ಟು ನನಗೆ ಇದೆ ಎಂಬುದೇ 'ಅಸ್ತಿ', ಇನ್ನಷ್ಟು ಆಗಬೇಕೆಂಬುದೇ 'ಪ್ರಾಪ್ತಿ'.

ಪ್ರಕಾಶದಿಂದ ಹೋಗಲಾಡಿಸುವನು. ಪರಮಾತ್ಮನಿಗೆ ಕಾಲದೇಶಗಳ ಕಟ್ಟಿಲ್ಲ, ಯಾವಾಗ ಎಂದರೆ ಆ ಕಾಲದಲ್ಲಿ, ಎಲ್ಲಿ ಎಂದರೆ ಆ ಸ್ಥಳದಲ್ಲಿ ಅವನು ಅವತರಿಸಿ ಪ್ರಕಟನಾಗು ವನು ಧರ್ಮ, ಜ್ಞಾನ, ವೈರಾಗ್ಯಾದಿಗಳು ಎಲ್ಲಿರುವವೋ ಅಲ್ಲಿ ಅವನಿಗೆ ಪರಮ ಪ್ರೇಮ. ಕೃಷ್ಣಾಷ್ಟಮಿಯ ದಿನ ಅವನು ಅವತರಿಸಿದನೆಂಬುದು ದ್ವಾಪರಯುಗದ ಅಸುರರ ಹಾವಳಿಯನ್ನು ತೊಲಗಿಸಿ ಲೋಕಕ್ಕೆ ಶಾಂತಿಯನ್ನು ಕೊಡುವುದಕ್ಕೆ ನಿಮಿತ್ತ ಮಾತ್ರವಾಗಿತ್ತು. ಆದರೆ ಆ ದಿನವನ್ನು ಪುಣ್ಯದಿನವಾಗಿ ಭಾವಿಸಿ ಆತನ ಸ್ಮರಣೆಗೆ ಸರ್ವಾಂತಃಕರಣವನ್ನೂ ಧಾರೆಯೆರೆಯುವ ಪುಣ್ಯಾತ್ಮನಿಗೆ ಪ್ರತಿದಿನವೂ ಶ್ರೀಕೃಷ್ಣ ಜನ್ಮಾಷ್ಟಮಿಯೇ. ಮಿಕ್ಕ ಅಜ್ಞರಿಗೆ ಮಧ್ಯಾಹ್ನದಲ್ಲಿಯೂ ಅಜ್ಞಾನವೆಂಬ ಅರ್ಧರಾತ್ರೆಯ ಕಗ್ಗತ್ತಲೆಯು ಕವಿದಿರುವದು; ಆದ್ದರಿಂದ ಕೃಷ್ಣಜನ್ಮಾಷ್ಟಮಿ ಎಂದರೆ ಅವರಿಗೆ ಬರಿಯ ಕುರುಕಲು ತಿಂಡಿಯ ದಿನವೆಂದೇ ಭಾವನೆಯಾಗುವದು. ಆದರೆ ಈ ಮಹಾತ್ಮರಿಗೆ ಮಾತ್ರ ಶುಕ್ಲಪಕ್ಷ ಕೃಷ್ಣಪಕ್ಷಗಳೆಂಬ ಭೇದವೇ ಇಲ್ಲದೆ ಅರ್ಧರಾತ್ರಿಯಲ್ಲಿಯೂ ಅಧ್ಯಾತ್ಮ ಚಂದ್ರನ ಪೂರ್ಣಪ್ರಕಾಶವು ಬೆಳಗುತ್ತಾ ಯಾವಾಗಲೂ ಪೂರ್ಣಶಾಂತಿಯನ್ನು ಕೊಡುತ್ತಿರುವುದು.

# ಭೀಷ್ಮಾಚಾರ್ಯರು

ಮಾಘಶುದ್ಧ ಅಷ್ಟಮಿಯ ಭೀಷ್ಮಾಷ್ಟಮಿಯು. ತಂದೆಯು ಜೀವಂತನಾಗಿರು ವಾತನು ಕೂಡ ಭೀಷ್ಮನಿಗೂ ಯಮನಿಗೂ ತರ್ಪಣಕೊಡಬೇಕೆಂದು ಸ್ಮೃತಿವಚನ ವಿರುವದು. ಭೀಷ್ಮನು ಕ್ಷತ್ರಿಯನಾದರೂ ಆಚಾರ್ಯನೆಂದೂ ಎಲ್ಲರೂ ತರ್ಪಣ ಕೊಡ ಬೇಕಾದಷ್ಟು ಮಾನ್ಯನೆಂದೂ ಎಣಿಸಲ್ಪಟ್ಟಿರುವದಕ್ಕೆ ಆತನಲ್ಲಿದ್ದ ಗುಣಾತಿಶಯವೇನೆಂಬು ದನ್ನು ತಿಳಿದುಕೊಳ್ಳುವದು ಈಗಿನ ಕಾಲಕ್ಕೆ ಬಹಳ ಉಪಯೋಗಕರವೆಂದು ನಾನು ಭಾವಿಸುತ್ತೇನೆ.

ಭೀಷ್ಮನು ಬ್ರಹ್ಮಚಾರಿಯಾಗಿಯೇ ತನ್ನ ಬಾಳನ್ನೆಲ್ಲ ಕಳೆದದ್ದು ಒಂದು ನಾವೆಲ್ಲರೂ ನೆನಪಿಡಬೇಕಾದ ಸಂಗತಿಯು. ತಂದೆಯಾದ ಶಂತನು ರಾಜನಿಗೆ ಸತ್ಯವತಿಯ ಮೇಲೆ ಪ್ರೇಮವು ಕೂರಲು, ಅವರಿಬ್ಬರೂ ಮದುವೆಯಾಗುವದಕ್ಕೆ ಭೀಷ್ಮನೇ ಅಡಚಣೆ

ಯಾಗಿದ್ದನು. ಭೀಷ್ಮನಾಗಲಿ ಅವನ ಮಕ್ಕಳು ಮೊಮ್ಮಕ್ಕಳಾಗಲಿ ಇರುವವರೆಗೆ ತನ್ನ ಮಗಳಾದ ಸತ್ಯವತಿಯ ಸಂತತಿಯವರಿಗೆ ರಾಜ್ಯವು ದಕ್ಕಲಾರದೆಂದು ಆಕೆಯ ತಂದೆಯು ಬಗೆದನು. ಆದರೆ ಭೀಷ್ಮನು ತನಗೆ ರಾಜ್ಯವು ಬೇಕಿಲ್ಲವೆಂದೂ ತಾನು ಮದುವೆಯನ್ನೇ ಆಗುವದಿಲ್ಲವೆಂದೂ ಉಗ್ರಪ್ರತಿಜ್ಞೆಯನ್ನು ತೊಟ್ಟನು. ಮುಂದೆ ಈ ಪ್ರತಿಜ್ಞೆಯನ್ನು ಮುರಿಯಬೇಕಾದ ಎಷ್ಟೋ ಕಟ್ಟಿನ ಘಟನೆಗಳು ಬಂದೊದಗಿದವು; ಆದರೆ ಭೀಷ್ಮನು ತನ್ನ ಗುರುವಾದ ಪರಶುರಾಮನ ಕಟ್ಟಪ್ಪಣೆಯನ್ನು ಮೀರುವ ಪ್ರಸಂಗವು ಬಂದೊದಗಿದಾಗ ಕೂಡ ತನ್ನ ಮೊದಲನೆಯ ಪ್ರತಿಜ್ಞೆಯನ್ನು ಬಿಡದೆ ಕಾಪಾಡಿಕೊಂಡು ಲೋಕಕ್ಕೆಲ್ಲ ಮೆಚ್ಚಾದನು.

ಬ್ರಹ್ಮಚರ್ಯದ ಫಲವಾಗಿ ಭೀಷ್ಮನಲ್ಲಿದ್ದ ಧೈರ್ಯಶೌರ್ಯಗಳನ್ನೂ ತಾನು ಮುದುಕನಾದರೂ ಪಾಂಡವರ ಸೈನ್ಯದಲ್ಲಿ ಯಾವ ವೀರನೂ ತನ್ನನ್ನು ಎದುರಿಸಲಾರ ದಂತೆಯೂ ಶ್ರೀಕೃಷ್ಣನೂ ತಲೆದೂಗುವಂತೆಯೂ ಯುದ್ಧಮಾಡಿದ ಒಲುಮೆಯನ್ನೂ ನಮ್ಮ ದೇಶದ ಯುವಕರು ಎಂದಿಗೂ ಮರೆಯಬಾರದು. ಆಟದ ಕೈಗೊಂಬೆಗಳ ಹಾಗೆ ಇನ್ನೂ ಚಿಕ್ಕವರಾಗಿರುವಾಗಲೇ ಮದುವೆಯಾಗಿ ತಮ್ಮ ದೇಹಾರೋಗ್ಯವನ್ನು ಕಾಪಾಡಿ ಕೊಳ್ಳುವದಕ್ಕೂ ಶಕ್ತಿ ಸಾಲದೆ ಜೀವನೋಪಾಯಕ್ಕೆ ಹೇಗೆಂದು ಕಣ್ಣುಕಣ್ಣು ಬಿಡುತ್ತಿರು ವವರು ಆಗಾಗ್ಗೆ ಭೀಷ್ಮನ ನಾಮಸ್ಮರಣೆಮಾಡುವದು ಒಳ್ಳೆಯದಲ್ಲವೆ?

ಭೀಷ್ಮನಲ್ಲಿದ್ದ ಮಿಗಿಲಿಲ್ಲದ ಜ್ಞಾನವು ಆತನನ್ನು ಆಚಾರ್ಯಪದವಿಗೇರಿಸಿರು ವದು. ಧರ್ಮರಾಯನು ಕೌರವರನ್ನೆಲ್ಲ ಕೊಂದು ಪಟ್ಟಾಭಿಷಿಕ್ತನಾದಮೇಲೆ ಧರ್ಮಾ ಧರ್ಮಗಳ ಸೂಕ್ಷ್ಮವನ್ನರಿಯದೆ, ತನ್ನವರನ್ನೆಲ್ಲ ತುಳಿದು ರಾಜ್ಯವನ್ನು ಗಳಿಸಿಕೊಂಡದ್ದು ಪಾಪವಲ್ಲವೆ? - ಎಂದು ದುಮ್ಮಾನಪಡುತ್ತಿದ್ದಾಗ ಶ್ರೀಕೃಷ್ಣಭಗವಂತನೇ ಅವನನ್ನು ಭೀಷ್ಮನು ಮಲಗಿದ್ದ ಬಳಿಗೆ ಕರೆದುಕೊಂಡು ಹೋಗಿ ಆತನಿಂದ ಧರ್ಮರಾಯನಿಗೆ ಉಪದೇಶಮಾಡಿಸಿದನು. ಭಾರತದಲ್ಲಿರುವ ಮೋಕ್ಷಧರ್ಮವೆಲ್ಲ ಭೀಷ್ಮನು ಧರ್ಮ ರಾಯನಿಗೆ ಮಾಡಿದ ಉಪದೇಶವೇ. ಆ ಅಗಾಧವಾದ ಜ್ಞಾನೋಪದೇಶದ ಫಲವು ಧರ್ಮರಾಯನಿಗೂ ಅಲ್ಲಿ ನೆರೆದಿದ್ದ ಅನೇಕ ಋಷಿಗಳಿಗೂ ದೊರೆಯಿತು; ಅದನ್ನು ಬರೆದಿಟ್ಟ ವೇದವ್ಯಾಸರ ಅನುಗ್ರಹದಿಂದ ನಮ್ಮೆಲ್ಲರಿಗೂ ಸಿಕ್ಕುವಂತಾಯಿತು. ಭೀಷ್ಮನು ಯೋಗದ ಬಲವನ್ನು ಅವಲಂಬಿಸಿ ಉತ್ತರಾಯಣವು ಬರುವವರೆಗೂ ಪ್ರಾಣವನ್ನು ಹಿಡಿದಿದ್ದು ಒಳ್ಳೆಯ ಮುಹೂರ್ತದಲ್ಲಿ ಶ್ರೀಕೃಷ್ಣ ಪರಮಾತ್ಮನ ದರ್ಶನವನ್ನು ಮಾಡುತ್ತಲೇ ದೇಹವನ್ನು ಬಿಟ್ಟಿದ್ದು ಆತನ ಮಹಿಮೆಯನ್ನು ಮತ್ತಷ್ಟು ಹೆಚ್ಚಿಸುವದು.

ಈ ಎಲ್ಲಾ ಕಾರಣಗಳಿಂದ 'ಭೀಷ್ಮನು' ಎಂದು ಏಕವಚನವನ್ನು ಉಪಯೋಗಿಸುವದಕ್ಕೆ ನಮ್ಮ ನಾಲಿಗೆಯು ಹಿಂಜರಿಯುತ್ತಿರುವದೂ 'ಭೀಷ್ಮಾಚಾರ್ಯರು' ಎಂಬ ಗೌರವದ ಅಭಿಧಾನದಿಂದಲೇ ನಾವೆಲ್ಲರೂ ಆತನನ್ನು ಕರೆಯುತ್ತಿರುವದೂ ಏನು ಆಶ್ಚರ್ಯ?

ಖಲಖಲಖಲ

# ಶಿವರಾತ್ರಿ

ಪ್ರತಿ ವರ್ಷದ ಮಾಘ ಕೃಷ್ಣ ತ್ರಯೋದಶಿಯಂದು ಭರತಖಂಡದಲ್ಲಿ ಲಕ್ಷಗಟ್ಟಲೆಯ ಹಿಂದುಗಳು ಶಿವರಾತ್ರಿಯ ವ್ರತವನ್ನು ಆಚರಿಸುವರು. ಪದ್ಧತಿಯಂತೆ ಉಪವಾಸ, ಜಾಗರಣೆ – ಮುಂತಾದ ನಿಯಮಗಳನ್ನೂ ನಡೆಸುವರು. ಈಶ್ವರನ ಆರಾಧನೆಯನ್ನು ಎಂದು ಮಾಡಿದರೂ ಪುಣ್ಯಪ್ರದವೇ, ಸುಖಪ್ರದವೇ; ಆದರೂ ವರ್ಷಕ್ಕೊಂದು ರಾತ್ರಿಯನ್ನು ಇದಕ್ಕಾಗಿ ಮೀಸಲು ಕಟ್ಟಿರುವದೇಕೆಂದು ಕೆಲವರಿಗೆ ಯೋಚನೆ ಬರಬಹುದು; ಈ ದಿನ ರಾತ್ರಿಯಲ್ಲಿಯೇ ದೇವರ ಅರ್ಚನೆ ಯನ್ನು ಮಾಡುವದೇಕೆಂದೂ ತಿಳಿಯುವ ಕುತೂಹಲವೂ ಉಂಟಾಗಬಹುದು.

ಆದರೆ ಉಪವಾಸಜಾಗರಣೆಗಳಿಂದ ಕೂಡಿ ಭಗವಚ್ಚಿಂತನೆಯನ್ನು ಮಾಡುವ ವಾಡಿಕೆಯೂ ಇದಕ್ಕಾಗಿ ಕ್ಲಿಪ್ತಕಾಲವನ್ನು ಕಾದಿಡುವ ವಾಡಿಕೆಯೂ ಸನಾತನ ವೈದಿಕ ಧರ್ಮದವರಲ್ಲಿಯೇ ಅಲ್ಲದೆ ಜೈನ, ಬೌದ್ಧ, ಪಾರ್ಸಿ, ಕ್ರೈಸ್ತ, ಮುಹಮ್ಮದೀಯ – ಮುಂತಾದ ಎಲ್ಲಾ ಧರ್ಮಪಂಥದವರಲ್ಲಿಯೂ ಕಂಡುಬರುತ್ತದೆ. ಗೊತ್ತಾದ ಕಾಲಗಳಲ್ಲಿ ಹದವರಿತು ಮಾಡುವ ಉಪವಾಸದಿಂದ ದೇಹಾರೋಗ್ಯವೂ ಮನಸ್ಸಿಗೆ ಸ್ವಾಸ್ಥ್ಯವೂ ಉಂಟಾಗುವದೆಂಬುದನ್ನು ಈಗ ಎಷ್ಟೋ ಜನರು ಮನಗಂಡಿರುತ್ತಾರೆ. ಏಕಾಂತದಲ್ಲಿ ಕುಳಿತು ಪರಮಾತ್ಮನನ್ನು ಮನಃಪೂರ್ವಕವಾಗಿ ಪ್ರಾರ್ಥನೆ ಮಾಡುವದರಿಂದ ವ್ಯವಹಾರದ ಗಡಿಬಿಡಿಯ ಕ್ಲೇಶಗಳೆಲ್ಲ ನೀಗಿ ಮನಸ್ಸಿನ ತಳಮಳವು ನಿಂತು ಆನಂದವು ದೊರಕುವದೆಂಬುದನ್ನೂ ಜೀವನಸಂಗ್ರಾಮದಲ್ಲಿ ಬಂದೊದಗಬಹುದಾದ ಎಡರುಗಳಿಗೆಲ್ಲ ಎದೆಗೊಡುವ ದಿಟ್ಟತನವು ಪ್ರಾರ್ಥನೆಯ ಫಲವನ್ನು ದೊರಕಿಸಿಕೊಂಡಾತನಲ್ಲಿ ನೆಲೆಗೊಳ್ಳುವದೆಂಬುದನ್ನೂ ಹಿಂದೆ ಅನೇಕ ಮಹನೀಯರೂ ಹಾಡಿ ಹೊಗಳಿರುತ್ತಾರೆ; ಈಗಲೂ ಇದರ ಸವಿಯನ್ನು ಬಲ್ಲ ಮಹಾತ್ಮಾ ಗಾಂಧಿಯವರಂಥವರೂ ಲೋಕಕ್ಕೆಲ್ಲ ಸಾರುತ್ತಿದ್ದಾರೆ. ಇದನ್ನು ಮರೆತಿರಬಹುದಾದವರಿಗೆ ಈಶ್ವರಚಿಂತೆಯನ್ನು ನಿಯಮದಿಂದ ಇನ್ನು

ಮೇಲಾದರೂ ಕೈಕೊಳ್ಳುವೆನೆಂದು ಸಂಕಲ್ಪಮಾಡಿ ಜೀವನದಲ್ಲಿ ಮಾರ್ಪಾಡುಮಾಡಿ ಕೊಳ್ಳಲು ನೆನಪಿಗೆ ತರುವದು ಶಿವರಾತ್ರಿಯ ದಿನವು.

ಲೋಕಕ್ಕೆಲ್ಲ ಒಡೆಯನಾದ ಪರಶಿವನು ಜ್ಯೋತಿರ್ಲಿಂಗರೂಪದಿಂದ ಮಾಘ ಬಹುಳ ಚತುರ್ದಶಿಯ ರಾತ್ರಿ ಸರಿಹೊತ್ತಿನಲ್ಲಿ ದೇವತೆಗಳಿಗೆ ದರ್ಶನವನ್ನು ಕೊಟ್ಟದ್ದ ರಿಂದ ಆ ರಾತ್ರಿಗೆ ಶಿವರಾತ್ರಿಯೆಂಬ ಹೆಸರು ಬಂದಿತೆಂದು ಪುರಾಣದ ಕಥೆ. ಜ್ಯೋತಿ ರ್ಲಿಂಗದ ಮೊದಲನ್ನಾಗಲಿ ಕೊನೆಯನ್ನಾಗಲಿ ಕಾಣಲರಿಯದೆ ದೇವತೆಗಳು ಅಂದು ತಬ್ಬಿಬ್ಬಾಗಿರುವಾಗ ಆ ಮಹಾದೇವನು ಮರುಕದಿಂದ ಅವರಿಗೆಲ್ಲ ತನ್ನ ತತ್ತ್ವವನ್ನು ತಾನೇ ಉಪದೇಶಿಸಿದನಂತೆ. ಇದು ಹೇಗಾದರೂ ಇರಲಿ. ಪರಮೇಶ್ವರನು ಈ ಜಗತ್ತಿನ ರೂಪದಲ್ಲಿಯೇ ನಮ್ಮ ಮುಂದೆ ಕಾಣಿಸಿಕೊಂಡಿರುತ್ತಾನೆ; ಈ ಕಾಣಿಸಿಕೊಂಡಿರುವ ರೂಪದ ಆದಿಯನ್ನಾಗಲಿ ಅಂತವನ್ನಾಗಲಿ, ಆ ಪರಮೇಶ್ವರಸ್ವರೂಪದ ನಿಜವನ್ನಾಗಲಿ, ನಮ್ಮ ಅಲ್ಪಬುದ್ಧಿಯಿಂದ ನಾವು ಅರಿಯಲಾರೆವು. ಆ ಶಿವನೇ ಅನುಗ್ರಹಮಾಡಿ ವೇದ, ಮತ್ತು ಅದಕ್ಕೆ ಅನುಗುಣವಾದ ಸದ್ಗುರು ವಚನ – ಎಂಬ ತನ್ನ ದಿವ್ಯವಾಣಿಯಿಂದ ನಮಗೆ ತನ್ನ ತತ್ತ್ವವನ್ನು ಬಿಚ್ಚಿಟ್ಟರೆ, ಆತನ ಅನುಗ್ರಹದ ಬೆಳಕು ನಮ್ಮ ಹೃದಯದ ಗವಿಯಲ್ಲಿ ಕಾಣಿಸಿಕೊಂಡರೆ, ಆಗ ಮಾತ್ರ ನಾವು ಅಜ್ಞಾನನಿದ್ರೆಯಿಂದ ಎಚ್ಚೆತ್ತು, ಸಂಸಾರದ ಕೆಟ್ಟಕನಸುಗಳ ಹಾವಳಿಯಿಂದ ಪಾರದೇವು. ಇದನ್ನೂ ನೆನಪಿಗೆ ತರುವದು ಶಿವರಾತ್ರಿ.

ಸರಿಯಾಗಿ ನೋಡಿದರೆ ಪರಶಿವನು ನಮ್ಮೆಲ್ಲರ ಆತ್ಮನೇ ಆಗಿರುವನೆಂದೂ ಅವನು ತನಗೆ ತಾನೇ ಬೆಳಗುವದರಿಂದ ಆತನನ್ನು ಅರಿಯುವದಕ್ಕೆ ಮತ್ತೇತರ ಬೆಳಕೂ ಬೇಕಿಲ್ಲವೆಂದೂ ಶ್ರುತಿಗಳು ಮೊರೆಯಿಡುತ್ತಿರುವವು. ಹೀಗಿದ್ದರೂ ಕತ್ತಲೆಯಲ್ಲಿ ಮಟ್ಟಿಗೆ ಕಣ್ಣು ಕಾಣುವ ಗೂಗೆಗಳು ಸೂರ್ಯನನ್ನು ಹಳಿಯುವಂತೆ, ವ್ಯವಹಾರವೆಂಬ ಕಗ್ಗತ್ತಲೆ ಯೊಂದರಲ್ಲಿಯೇ ನಡೆದಾಡಬಲ್ಲ ಮಾನವನು ಈ ವ್ಯವಹಾರವೆಲ್ಲ ಕನಸೆಂದೂ, ಈ ಅವಿದ್ಯಾ ರಾತ್ರಿಯ ನಿದ್ರೆಯ ಗೊರಕೆಯನ್ನು ಹೋಗಲಾಡಿಸಿಕೊಂಡು ಎಚ್ಚತ್ತರೆ ಪರಮೇಶ್ವರನ ಕೋಟಿಸೂರ್ಯಪ್ರಕಾಶದ ಹಗಲಿನ ಸುಖದಲ್ಲಿ ಸಂಚರಿಸಬಹುದೆಂದೂ ಯಾರಾದರೂ ಹೇಳಿದರೆ ಅತ್ತ ಕಡೆಗೆ ಮನಸ್ಸನ್ನೇ ಹಾಕದೆ ಇರುವನು. ಹೀಗೆ ಹಗಲನ್ನು ರಾತ್ರೆಯೆಂದು ರಾತ್ರೆಯನ್ನು ಹಗಲೆಂದೂ ತಲೆಕೆಳಗಾಗಿ ತಿಳಿದಿರುವ ನಾವು ನಿಜವಾದ ಸುಖವನ್ನು ನೋಡಬೇಕಾದರೆ ಈಗಿನ ತಿಳಿವಳಿಕೆಯನ್ನು ಪೂರ ವಿರುದ್ಧವಾಗಿ ಬದಲಾಯಿಸಿಕೊಳ್ಳಬೇಕೆಂಬುದನ್ನೂ ನೆನಪು ಕೊಡುವದು ಶಿವರಾತ್ರಿ.

ಆದ್ದರಿಂದ ರಾತ್ರಿ ನಿದ್ದೆಗೆಡುವದೇ ಜಾಗರಣೆಯೆಂದೂ ಮಾರನೆಯ ದಿನ ಹಬ್ಬದೂಟವನ್ನು ಉಂಡು ನಲಿದಾಡುವದೇ ಪಾರಣೆಯೆಂದೂ ಎಣಿಸಿ ಬರಿಯ ಸ್ಥೂಲಾರ್ಥದಲ್ಲಿಯೇ ನಿಲ್ಲಬಾರದು. ಮನಸ್ಸಿಟ್ಟು ಮಾಡಿದ ವ್ರತವೇ ನಿಜವಾದ ವ್ರತವೆಂಬುದನ್ನು ಲಕ್ಷ್ಯದಲ್ಲಿಡಬೇಕು. ವ್ಯವಹಾರವನ್ನು ಮರೆತು ಪರಮಾತ್ಮಚಿಂತನೆಯಲ್ಲಿರುವದೆಂಬ ಜಾಗರಣವನ್ನು ಮಾಡಿ ಆ ಚಿಂತನೆಯಿಂದ ಕಂಡುಕೊಂಡ ತತ್ತ್ವದಲ್ಲಿ ನೆಲೆನಿಲ್ಲುವದರಿಂದಾಗುವ ನಿತ್ಯತೃಪ್ತಿಯೆಂಬ ಪಾರಣೆಯನ್ನು ಮಾಡುವದಕ್ಕೆ ಎಲ್ಲಾ ಬಗೆಯಿಂದಲೂ ಯತ್ನಿಸಬೇಕು. ಆಗಲೇ ಮಹಾಶಿವರಾತ್ರಿಯ ವ್ರತದ ಮುಖ್ಯೋದ್ದೇಶವು ಕೈಗೂಡಿದಂತಾಗುವದು. ಅವನನ್ನು ಹೀಗೆ ಅರ್ಥಿಸಬೇಕು –

**ನ ವಯಂ ತವ ಚರ್ಮಚಕ್ಷುಷಾ ಪದವೀಮಪ್ಯುಪವೀಕ್ಷಿತುಂ ಕ್ಷಮಾಃ ।**
**ಕೃಪಯಾಭಯದೇನ ಚಕ್ಷುಷಾ ಸಕಲೇನೇಶ ವಿಲೋಕಯಾಶು ನಃ ॥**

ಎಲೈ ಒಡೆಯನೆ, ನಾವು ನಮ್ಮ ತೊಗಲಿನ ಕಣ್ಣಿನಿಂದ ನಿನ್ನ ದಾರಿಯನ್ನು ಕೂಡ ನೋಡುವದಕ್ಕೆ ಶಕ್ತರಲ್ಲ; ಕೃಪೆಯಿಟ್ಟು ನೀನು ಅಭಯವನ್ನೀವ ನಿನ್ನ ಪೂರ್ಣ ದೃಷ್ಟಿಯಿಂದ ನಮ್ಮನ್ನು ನೋಡುವವನಾಗು.

ಪಾರಣೆಯ ಮಂತ್ರದ ಅರ್ಥವನ್ನು ನೋಡಿದರೆ ಇದು ಸ್ಪಷ್ಟವಾಗುವದು;

**"ಸಂಸಾರಕ್ಲೇಶದಗ್ಧಸ್ಯ ವ್ರತೇ ನಾನೇನ ಶಂಕರ ।**
**ಪ್ರಸೀದ ಸುಮುಖೋ ನಾಥ ಜ್ಞಾನದೃಷ್ಟಿಪ್ರದೋ ಭವ ॥"**

ಎಲೈ ಶಂಕರನೆ, ಸಂಸಾರದ ತೊಂದರೆಗಳಿಂದ ಬೆಂದುಹೋಗಿರುವ ನನ್ನಲ್ಲಿ ಈ ವ್ರತದ ಕಾರಣದಿಂದ ಪ್ರಸನ್ನನಾಗಿ ಸುಮುಖನಾಗು; ಜ್ಞಾನವೆಂಬ ಕಣ್ಣನ್ನು ಕೊಡುವವನಾಗು.

# ಅನಂತನ ವ್ರತ

ವರ್ಷವರ್ಷವೂ ಭಾದ್ರಪದಮಾಸದಲ್ಲಿ ನಡೆಯುವ ವ್ರತಗಳು ಬೇಕಾದಷ್ಟಿರುವವು. ವರಸಿದ್ಧಿವಿನಾಯಕವ್ರತ, ಋಷಿಪಂಚಮೀವ್ರತ, ದೂರ್ವಾಷ್ಟಮಿ, ಸಿದ್ಧಿಲಕ್ಷ್ಮೀ ವ್ರತ, ವಾಮನಜಯಂತಿ – ಇವುಗಳೆಲ್ಲ ಈ ಮಾಸದಲ್ಲಿಯೇ ಬರುತ್ತವೆ; ಆದರೆ ಇಂಥ ವ್ರತಗಳಲ್ಲೆಲ್ಲ ಈ ಮಾಸದ ಶುದ್ಧ ಚತುರ್ದಶಿಯ ದಿನ ಬರುವ ಅನಂತವ್ರತಕ್ಕೆ ಇರುವ

ಪ್ರಾಶಸ್ತ್ಯವು ಯಾವದಕ್ಕೂ ಇಲ್ಲ, "ವ್ರತಗಳಲ್ಲೆಲ್ಲ ಇದು ಮುಖ್ಯವ್ರತವು" **(ವ್ರತಾನಾ ಮುತ್ತಮಂ ವ್ರತಂ)** ಎಂಬ ಅರ್ಥವಾದವು ಪ್ರತಿಯೊಂದು ವ್ರತದ ವರ್ಣನೆಯಲ್ಲಿಯೂ ಕಂಡುಬರುತ್ತದೆ; ಆದರೆ ಅನಂತನ ವ್ರತದ ವಿಷಯದಲ್ಲಿ ಇದು ಅರ್ಥವಾದವಲ್ಲ, ಅನ್ವರ್ಥವಾದ.

ಲೋಕದಲ್ಲಿ ಪರಮಾತ್ಮನನ್ನು ಬೇರೆ ಬೇರೆ ನಾಮರೂಪಗಳಿಂದ ಉಪಾಸಕರು ಪೂಜಿಸಿರುವದು ಕಂಡುಬರುತ್ತದೆ. ಆದರೆ "**ಅನಂತ**" ನೆಂಬ ಹೆಸರೂ ಅನಂತನ ರೂಪವೂ ಜಗತ್ತಿನ ಇತಿಹಾಸದಲ್ಲಿ ಭರತಖಂಡದಲ್ಲೊಂದೆಡೆಯಲ್ಲೇ ಉಪಾಸಕರ ಬುದ್ಧಿಗೆ ಹೊಳೆದಂತೆ ತೋರುವದು. ಅನಂತನೆಂದರೆ ದೇಶದ, ಕಾಲದ ಅಥವಾ ವಸ್ತುವಿನ ಅಂತವು (ಗಡಿಯು, ಮಿತಿಯು) ಇಲ್ಲದ ಪರಮಾತ್ಮನು; ಪರಮಾತ್ಮನು 'ಇಂಥವನು', 'ಅಂಥವನು' – ಎಂದು ಬಣ್ಣಿಸಿ ಆಯಾ ಸ್ವರೂಪದಿಂದ ಪೂಜಿಸುವಷ್ಟರಿಂದ ನಮ್ಮ ಪೂರ್ವಜರಿಗೆ ತೃಪ್ತಿಯಾಗಲಿಲ್ಲ, ಅವನು ಅಂಥವನಿಂಥವನೆಂದು ಗೊತ್ತುಮಾಡಿ ಹೇಳಲಿಕ್ಕಾಗದ 'ಅನಂತನು' ಎಂದು ಆತನನ್ನು ಚಿಂತಿಸುವದು ಒಂದು ಉತ್ತಮವಾದ ಆರಾಧನೆಯೆಂದು ಅವರಿಗೆ ತೋರಿತು. ಅನಂತನ ರೂಪವೂ ಹಾಗೆಯೇ. ಅನಂತನೆಂಬುದು ಪುರಾಣಗಳಲ್ಲಿ ಆದಿಶೇಷನ ಹೆಸರು. ಮಿಕ್ಕದ್ದೆಲ್ಲವೂ ಮತ್ತೊಂದರ ಮೇಲೆ ನಿಲ್ಲತಕ್ಕ ಆಧೇಯವಾಗಿರುವಲ್ಲಿ, ಪರಮಾತ್ಮನು ಮಾತ್ರ ಎಲ್ಲಕ್ಕೂ ಆಧಾರನಾಗಿ ಉಳಿದುಕೊಂಡಿರುವನಾದ್ದರಿಂದ ಇವನಿಗೆ 'ಶೇಷ' ನೆಂದು ಹೆಸರು; ಮಿಕ್ಕದ್ದೆಲ್ಲವೂ ಸಾಂತವಾಗಿರುವದು. ಕಾಲದೇಶಗಳಿಂದೊಡಗೂಡಿದ ಪ್ರಪಂಚವೆಂಬ ತೋರಿಕೆಗೇ ಆಧಾರನಾಗಿ ಆದಿಶೇಷನಾಗಿರುವ ಪರಮಾತ್ಮನು 'ಅನಂತನು', ಈ ಅಭಿಪ್ರಾಯದಿಂದ ಪರಮಾತ್ಮನನ್ನು ಈ ವ್ರತದಲ್ಲಿ ಶೇಷರೂಪದಿಂದ ಪೂಜೆಮಾಡುತ್ತಾರೆ.

ಈ ವ್ರತವನ್ನು ಹೆಂಗಸರು, ಗಂಡಸರು – ಇಬ್ಬರೂ ಮಾಡಬಹುದು. ಕೌಂಡಿನ್ಯನ ಹೆಂಡತಿಯಾದ ಶೀಲೆಯು ಯಮುನೆಯ ದಡದಲ್ಲಿ ಎಷ್ಟೋ ಜನ ಮಹಿಳೆಯರು ಸೇರಿ ಈ ವ್ರತವನ್ನು ಮಾಡುತ್ತಿದ್ದದ್ದನ್ನು ನೋಡಿ ತಾನೂ ವ್ರತವನ್ನು ಮಾಡಲುಪಕ್ರಮಿಸಿದಳು; ಅನಂತನ ಪ್ರಸಾದದಿಂದ ಕೌಂಡಿನ್ಯನ ಆಶ್ರಮದಲ್ಲಿ ಧನಧಾನ್ಯ ಸಮೃದ್ಧಿಯೂ ಗೋವುಗಳ ಮಂದೆಯ ಅಭಿವೃದ್ಧಿಯೂ ದಿನದಿನಕ್ಕೆ ಹೆಚ್ಚುತ್ತಾ ಬಂದವು. ಕೌಂಡಿನ್ಯನು ಈ ಗುಟ್ಟನ್ನರಿಯದೆ ತನ್ನ ಹೆಂಡತಿಯು ಯಾವದೋ ಪತಿವಶ್ಯದ ಮಾಟವನ್ನು ಮಾಡುತ್ತಿದ್ದಾಳೆಂದು ತಿಳಿದನು; ಆಕೆಯು ಕಟ್ಟಿಕೊಂಡಿದ್ದ ಅನಂತನ ದಾರವನ್ನು ಕಿತ್ತು ಬೆಂಕಿಯಲ್ಲಿ ಹಾಕಿದನು; ಆ ದಾರದ ಜೊತೆಯಲ್ಲಿಯೇ ಅವನ ಮನೆಯ

ಅತ್ಯುಲೈಶ್ವರ್ಯವೂ ಸುಟ್ಟು ಬೂದಿಯಾಯಿತು. ಮೊದಲಿನಂತೆ ದರಿದ್ರಲಕ್ಷ್ಮಿಯು ಅವನ ಗುಡಿಸಲನ್ನು ಹೊಕ್ಕಳು. ಶರೀರದಲ್ಲಿ ರೋಗ, ಮನಸ್ಸಿನಲ್ಲಿ ಚಿಂತೆ, ಸ್ವಜನರಲ್ಲಿ ಕಲಹ – ಇವೆಲ್ಲ ಹೆಚ್ಚಿಕೊಂಡವು.

ಆಗ ಕೌಂಡಿನ್ಯನ ಕಣ್ಣು ಪರೆಯು ಹರಿಯಿತು. ಯಾವಾತನ ಕಡೆಗೆ ಮನಸ್ಸು ತಿರುಗಿದ ಮಾತ್ರದಿಂದ ಸಕಲ ಸಂಪತ್ತುಗಳೂ ಒದಗಿದ್ದವೋ, ಯಾವಾತನಿಂದ ವಿಮುಖನಾಗಲು ತಮಗೆ ಈ ವಿಪತ್ತುಗಳೆಲ್ಲವೂ ಗಂಟುಬಿದ್ದವೋ, ಅಂಥ ಅನಂತನನ್ನು ಕಂಡಲ್ಲದೆ ಮನೆಯ ಹೊಸ್ತಿಲನ್ನು ಮತ್ತೆ ತುಳಿಯುವದಿಲ್ಲ – ಎಂದು ಸ್ಥಿರಪ್ರತಿಜ್ಞೆಯನ್ನು ತೊಟ್ಟುಕೊಂಡು ಹೊರಕ್ಕೆ ಹೊರಟನು. ಅವನಿಗೆ ಮೈಮೇಲೆ ಸ್ಮರಣೆಯೇ ಇರಲಿಲ್ಲ; ಅವನು ದಾರಿಯಲ್ಲಿ ಕಂಡ ಗಿಡಮರಗಳು, ಹಸು, ಎತ್ತು, ಕೆರೆ, ಕೊಳ – ಇವುಗಳನ್ನೆಲ್ಲ "ಅನಂತನನ್ನು ಕಂಡಿರಾ?" ಎಂದು ಕೇಳುತ್ತಾ ಸಿಕ್ಕ ಸಿಕ್ಕ ಕಡೆಗೆ ಹೋಗುತ್ತಿದ್ದನು. ಮನಸ್ಸಿನ ಕಳವಳವೊಂದು ಕಡೆ, ಹಸಿವು ಬಾಯಾರಿಕೆಗಳ ಬಾಧೆಯೊಂದು ಕಡೆ, ದಾರಿಯನ್ನು ನಡೆದುನಡೆದು ಆಗಿದ್ದ ಬಳಲಿಕೆಯೊಂದು ಕಡೆ ಇವೆಲ್ಲ ಸೇರಿ ಕೌಂಡಿನ್ಯನು ಬಹುದುಃಖದಿಂದ ಮೈಮರೆತು ಒಂದು ಕಡೆ ದೊಪ್ಪನೆ ಬಿದ್ದುಬಿಟ್ಟನು.

ಅನಂತನು ಇಂಥ ಕಡೆಯಲ್ಲಿರುವನು, ಇಂಥಲ್ಲಿ ಇಲ್ಲ – ಎಂಬ ನಿಯಮವೇನೂ ಇಲ್ಲ, ಅಂತವುಳ್ಳ ವಸ್ತುಗಳ ಮೇಲೆ ನಮಗಿರುವ ಮೋಹವು ತಪ್ಪುವದು, ಆತನ ಸ್ಮರಣೆಯು ಬಲವಾಗಿ ಹತ್ತುವದು ಇಷ್ಟಾದರೆ ಸಾಕು. ಅವನು ಯಾವಾಗಲೂ ನಮ್ಮಲ್ಲಿಯೇ ನಮ್ಮ ಆತ್ಮನಾಗಿಯೇ ಇದ್ದು ಬಿಟ್ಟಿರುವದರಿಂದ ಕೂಡಲೇ ಪ್ರಸನ್ನನಾಗಿ ಕಾಣಿಸಿಕೊಳ್ಳುವನು. ಕೌಂಡಿನ್ಯನು ದುಃಖಸಂತಪ್ತನಾಗಿ ಮೂರ್ಛೆಹೋಗುತ್ತಲೂ ದಯಾಘನನಾದ ಪರಮಾತ್ಮನು ಒಬ್ಬ ಮುದಿಬ್ರಾಹ್ಮಣನ ರೂಪದಿಂದ ಅಲ್ಲಿಯೇ ಕಾಣಿಸಿಕೊಂಡು 'ಇತ್ತ ಬಾರಯ್ಯ' ಎಂದು ಬಲಗೈಹಿಡಿದು ಒಂದು ಗುಹೆಯಲ್ಲಿ ಹೊಕ್ಕು ತನ್ನ ನಿಜಧಾಮವನ್ನು ತೋರಿಸಿದನು; ಅನಂತನ ವಿಭೂತಿಗಳಿಂದ ಈ ಜಗತ್ತೆಲ್ಲವನ್ನೂ ಬೆಳಗುತ್ತಿರುವ ಅನಂತಸ್ವಾಮಿಯನ್ನು ಕಂಡು ಕೌಂಡಿನ್ಯನು ಕಣ್ಣೀರಿಡುತ್ತಾ ಗದ್ಗದಸ್ವರದಿಂದ ತನ್ನ ತಪ್ಪುಗಳನ್ನೆಲ್ಲವನ್ನೂ ಮನ್ನಿಸಿ ಕಾಪಾಡಬೇಕೆಂದು ಅಡ್ಡಬಿದ್ದು ಬೇಡಿಕೊಂಡನು. ತನಗೊದಗಿರುವ ಸಂಕಟಗಳೆಲ್ಲವನ್ನೂ ಬಿಚ್ಚಿ ಹೇಳಿಕೊಂಡನು.

ಕರುಣಾಸಮುದ್ರನಾದ ಅನಂತನು "ಅಯ್ಯ, ಹೆದರದಿರು; ನೀನು ತಡಮಾಡದೆ ಮನೆಗೆ ಹೋಗು, ಹೆಂಡತಿಯೊಡನೆ ಅನಂತವ್ರತವನ್ನು ಮಾಡು, ನಿನ್ನ ದುಃಖಗಳೆಲ್ಲವೂ ಪರಿಹಾರವಾಗುವವು" ಎಂದು ಅವನನ್ನು ಸಂತೈಸಿದನು.

ಕೌಂಡಿನ್ಯನು ತಾನು ಅರಣ್ಯದಲ್ಲಿ ಅಲೆದಾಡುತ್ತಿರುವಾಗ ಕಂಡ ಕೆಲವು ನೋಟಗಳ ಕಾರಣವನ್ನು ತಿಳಿಯಬೇಕೆಂದು ಭಗವಂತನನ್ನು ಪ್ರಶ್ನೆ ಮಾಡಿದನು. ಸರ್ವಜ್ಞನಾದ ಪರಮಾತ್ಮನು ಅವುಗಳನ್ನೆಲ್ಲಾ ಅವನಿಗೆ ಹೀಗೆಂದು ವಿವರಿಸಿ ತಿಳಿಸಿದನು; ''ದಾರಿಯಲ್ಲಿ ಒಂದು ಮಾವಿನಮರವನ್ನು ಕಂಡೆಯಷ್ಟೆ; ಅದರಲ್ಲಿ ಹೂ ಹಣ್ಣುಗಳು ಜಗಿಯುತ್ತಿದ್ದರೂ ಪಕ್ಷಿಗಳು ಅದರಲ್ಲಿ ಒಂದು ಹಣ್ಣನ್ನು ಕೂಡ ಮುಟ್ಟದಿರುವವಲ್ಲವೆ? ಅದು ಪೂರ್ವದಲ್ಲಿ ಬ್ರಾಹ್ಮಣನಾಗಿತ್ತು; ಆ ಬ್ರಾಹ್ಮಣನು ಶಿಷ್ಯರಿಗೆ ಒಬ್ಬರಿಗೂ ಒಂದಿಷ್ಟು ವಿದ್ಯೆಯನ್ನೂ ದಾನಮಾಡಲಿಲ್ಲ. ಹುಲ್ಲುಗಾವಲಿನ ನಡುವೆಯಿದ್ದರೂ ಒಂದಿಷ್ಟೂ ಮೇಯದೆ ಅತ್ತಿತ್ತ ಓಡಾಡುತ್ತಿದ್ದ ಹಸುವನ್ನು ಕಂಡೆಯಷ್ಟೆ; ಅದು ಪೂರ್ವದಲ್ಲಿ ಕಂಡವರ ಧಾನ್ಯವನ್ನು ಕದಿಯುತ್ತಿದ್ದ ಒಬ್ಬ ಹೆಂಗಸಾಗಿತ್ತು. ನೀನು ಕಂಡ ಆ ಎತ್ತು ಹಿಂದಿನ ಜನ್ಮದಲ್ಲಿ ಧರ್ಮವನ್ನು ಕ್ರಯಕ್ಕೆ ಮಾರುತ್ತಿದ್ದ ಬ್ರಾಹ್ಮಣನಾಗಿದ್ದಿತು. ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ – ಹೀಗೆ ತಮ್ಮ ತಮ್ಮಲ್ಲಿಯೇ ನೀರನ್ನು ವಿನಿಮಯಮಾಡಿಕೊಳ್ಳುತ್ತಿದ್ದ ಆ ಕೊಳಗಳು ಹಿಂದೆ ತಮುತಮುಗೇ ದಾನ ಮಾಡಿಕೊಳ್ಳುತ್ತಿದ್ದ ಅಕ್ಕತಂಗಿಯರು. ನೀನು ಒಂದು ಕತ್ತೆಯನ್ನು ಕಂಡೆಯಷ್ಟೆ; ಅದು ಪೂರ್ವದಲ್ಲಿ ಮಹಾಕೋಪಿಷ್ಠನಾಗಿದ್ದಿತು. ಆನೆಯು ಹಿಂದಿನ ಜನ್ಮದಲ್ಲಿ ಮಹಾಮದದಿಂದ ಮೆರೆಯುತ್ತಿದ್ದ ಮನುಷ್ಯನಾಗಿದ್ದಿತು. ಮುಖ್ಯವಾಗಿ ಯಾರು ಪರಮಾತ್ಮನು ಅನಂತನೆಂದೂ ಎಲ್ಲೆಲ್ಲಿಯೂ ಇರುವನೆಂದೂ ತಿಳಿಯದೆ, ದಾನಧರ್ಮ ಪರೋಪಕಾರಗಳನ್ನು ಮಾಡದೆ ಸ್ವಾರ್ಥಬುದ್ಧಿಯಿಂದ ಬೀಗುವರೋ, ಅವರೆಲ್ಲರೂ ಸಂಸಾರದ ಕಷ್ಟವನ್ನನುಭವಿಸುವರು. ಯಾರು ಪರಮಾತ್ಮನು ಸರ್ವಪ್ರಾಣಿಗಳಲ್ಲಿಯೂ ಸಮನಾಗಿರುವನೆಂದು ತಿಳಿದು ಸಕಲರನ್ನೂ ಪ್ರೇಮದಿಂದ ಕಾಣುತ್ತ ಕಾಮಕ್ರೋಧಲೋಭ ಮೋಹಮದಮಾತ್ಸರ್ಯಗಳನ್ನು ಬಿಟ್ಟಿರುವರೋ ಅವರು ಸಂತೋಷದಿಂದ ಜೀವಿಸುವರು.''

ಅನಂತನ ದಾರದಲ್ಲಿ ಹದಿನಾಲ್ಕು ಗಂಟುಗಳಿರುವವು. ಇದನ್ನು ಪೂಜಿಸಿ ವ್ರತದ ಕೊನೆಯಲ್ಲಿ ಬ್ರಾಹ್ಮಣರಿಗೆ ದಾನಾದಿಗಳನ್ನು ಮಾಡಿ ಸತ್ಕರಿಸಿದ ಮೇಲೆ ಹಳೆಯ ದಾರವನ್ನು ತೆಗೆದುಹಾಕಿ ಹೊಸ ದಾರವನ್ನು ಕಟ್ಟಿಕೊಳ್ಳುವರು. ಕರ್ಮೇಂದ್ರಿಯಗಳು ಐದು, ಜ್ಞಾನೇಂದ್ರಿಯಗಳು ಐದು, ಮನೋಬುದ್ಧಿಚಿತ್ತಾಹಂಕಾರಗಳು ನಾಲ್ಕು– ಈ ಹದಿನಾಲ್ಕನ್ನೂ ಬಿಗಿದು ಕಟ್ಟಿ ಸ್ವಾರ್ಥಬುದ್ಧಿಯನ್ನು ತ್ಯಜಿಸಿರುವೆನೆಂದೂ ಅನಂತ ಪರಮಾತ್ಮನ ಭಕ್ತನು ತಾನಾಗಿರುವೆನೆಂದೂ ಸಂಕಲ್ಪಿಸಿದ್ದರ ಗುರುತು ಇದು. ಸಂಕಲ್ಪವು

ಸಡಿಲವಾಗದಂತೆ ವರ್ಷವರ್ಷವೂ ಅದನ್ನು ಮಾಡುತ್ತ ಮನಸ್ಸಿಗೆ ಬಲವನ್ನು ತಂದು ಕೊಳ್ಳುವದಕ್ಕೆ ವ್ರತವನ್ನು ಮತ್ತೆ ಮತ್ತೆ ಮಾಡಬೇಕು; ವರ್ಷದಲ್ಲಿ ಪ್ರತಿದಿನವೂ ಅನಂತನ ಸ್ಮರಣೆಯಿಂದ ವ್ಯವಹಾರವನ್ನು ಮಾಡುತ್ತಾ ಕಾಲವನ್ನು ಕಳೆಯಬೇಕು- ಎಂಬುದನ್ನು ಈ ದೋರಬಂಧನ ಮಂತ್ರವು ತಿಳಿಸುವದು –

**ಸಂಸಾರ ಗಹ್ವರಗುಹಾಸು ಸುಖಂ ವಿಹರ್ತುಂ ।**
**ವಾಞ್ಛನ್ತಿ ಯೇ ಕುರುಕುಲೋದ್ವಹ ಶುದ್ಧಸತ್ತ್ವಾಃ ॥**
**ಸಂಪೂಜ್ಯ ಚ ತ್ರಿಭುವನೇಶಮನನ್ತದೇವಂ ।**
**ಬಧ್ನನ್ತಿ ದಕ್ಷಿಣಕರೇ ವರದೋರಕಂ ತೇ ॥**

**ಭಾವಾರ್ಥ :** ಸಂಸಾರದಲ್ಲಿ ಗಹನವಾದ ಗುಹೆಗಳಲ್ಲಿ ಸುಖವಾಗಿ ಓಡಾಡಿ ಕೊಂಡಿರಬೇಕೆಂದು ಯಾರು ಬಯಸುವರೋ ಅವರು ಮೂರು ಲೋಕಕ್ಕೂ ಒಡೆಯ ನಾದ ಅನಂತದೇವನನ್ನು ಸರಿಯಾಗಿ ಪೂಜಿಸಿ ಬಲಗೈಯಲ್ಲಿ ಅನಂತನ ದಾರವನ್ನು ಕಟ್ಟಿಕೊಳ್ಳುವರು.

# ಉಪಾಕರ್ಮ

ಪ್ರತಿವರ್ಷವೂ ಶ್ರಾವಣಮಾಸದಲ್ಲಿ ಉಪಾಕರ್ಮವನ್ನು ಮಾಡುವ ರೂಢಿಯು ದ್ವಿಜರಲ್ಲಿ ಕಂಡುಬರುತ್ತದೆ. ಆದರೂ ಈ ಕರ್ಮದ ತತ್ತ್ವವು ಜನರಿಗೆ ಸ್ವಲ್ಪ ಹೆಚ್ಚು ಕಡಿಮೆ ಮರೆತೇ ಹೋಗಿರುತ್ತದೆನ್ನಬಹುದು. ಬಹುಜನರು ದೇವಸ್ಥಾನವೇ ಮುಂತಾದ ಒಂದು ಕಡೆಯಲ್ಲಿ ಸೇರುವದು. ಅಲ್ಲಿ ಒಬ್ಬರನ್ನು ಆಚಾರ್ಯಪುರುಷರಾಗಿ ಭಾವಿಸಿ, ಅವರಿಂದ ಬ್ರಹ್ಮಯಜ್ಞವನ್ನು ಹೇಳಿಸಿಕೊಂಡು ಅನುಷ್ಠಾನಮಾಡುವದು, ಋಷಿಪೂಜೆಯನ್ನು ಮಾಡಿ 'ಸತ್ತುಗದ ಹಿಟ್ಟು' ಎಂಬ ಹೆಸರಿನಿಂದ ಅಕ್ಕಿಹಿಟ್ಟು ಬೆಲ್ಲ, ಅಥವಾ ಹಿಟ್ಟು ಮೊಸರು – ಇವುಗಳನ್ನು ಕಲಸಿದ ಒಂದು ಹವ್ಯವನ್ನು ನಿವೇದನೆಮಾಡಿ ಸ್ವೀಕಾರ ಮಾಡುವದು – ಇಷ್ಟರಲ್ಲಿ ಬಹು ಜನರ ಉಪಾಕರ್ಮವು ಸಮಾಪ್ತಿಯಾಗುತ್ತಲಿದೆ. ಋಷಿತರ್ಪಣ, ಮಾರನೆಯ ದಿನ ಗಾಯತ್ರೀಜಪ – ಇವುಗಳನ್ನೂ ಕೆಲವರು ಮಾಡುತ್ತಾರೆ. ಶ್ರದ್ಧೆಯಿಂದ ಇಷ್ಟನ್ನಾದರೂ ನಡೆಯಿಸುವದು. ಶ್ರೇಯಸ್ಕರವೇ ಆದರೂ ಉಪಾಕರ್ಮದ ತತ್ತ್ವವನ್ನು ತಿಳಿದುಕೊಂಡರೆ ಅದರಿಂದ ಇನ್ನೂ ಹೆಚ್ಚಿನ ಲಾಭವುಂಟು.

ಉಪಾಕರ್ಮವೆಂಬುದು ವೇದಾಧ್ಯಯನವನ್ನೂ ಪ್ರಾರಂಭಿಸುವ ಕರ್ಮವು. ಹಿಂದಕ್ಕೆ ವೇದವನ್ನು ಅಧ್ಯಯನಮಾಡುವವರು ಇಂತಿಷ್ಟು ಕಾಲದವರೆಗೆ ಒಂದು ಭಾಗವನ್ನು ಅಧ್ಯಯನಮಾಡಿದ ಮೇಲೆ ಅಲ್ಲಿಂದ ಮುಂದಕ್ಕೆ ಇರುವ ಭಾಗವನ್ನು ಪ್ರಾರಂಭಮಾಡುವದಕ್ಕೆ ಈ ಕಾಲವನ್ನು ಉಪಯೋಗಿಸುತ್ತಿದ್ದರು. ಓದಿ ಕಲಿತಾಗಿರುವ ಭಾಗದ ಅಧ್ಯಯನವನ್ನು ಬಿಡುವದು ಉತ್ಸರ್ಜನವು, ಹೊಸ ಭಾಗವನ್ನು ಪ್ರಾರಂಭಿಸುವುದು ಉಪಾಕರ್ಮವು, ಆಗ್ಗೆ ಆರು ತಿಂಗಳು ವೇದವನ್ನೋದಿ ಆರು ತಿಂಗಳು ಶಾಸ್ತ್ರ ವಿಚಾರವನ್ನು ಮಾಡುತ್ತಿದ್ದರು. ಈಗ ನಮ್ಮ ದುರದೃಷ್ಟದಿಂದ ವೇದಗಳ ಉತ್ಸರ್ಜನವು ಎಲ್ಲೆಲ್ಲಿಯೂ ಅಕ್ಷರಶಃ ನಡೆದಿರುತ್ತದೆ. ಸಂಸ್ಕೃತದ ಭಾಷೆಗೇ ಬಹಿಷ್ಕಾರವನ್ನು ಹಾಕುತ್ತಿರುವ ಈ ಕಾಲಕ್ಕೆ ವೇದವು ಅಧ್ಯಯನ ಮಾಡತಕ್ಕದ್ದೆಂಬುದು ಸೊಗಸದೆ ಹೋದರೆ ಆಶ್ಚರ್ಯವೇನೂ ಇಲ್ಲ. ನಮ್ಮ ಈಗಿನ ವಿದ್ಯಾಪೀಠಗಳಲ್ಲಿ ಬಿ.ಎ, ಎಮ್. ಎ. ಮುಂತಾದ ಪರೀಕ್ಷೆಗಳಿಗೆ ಓದುವವರಿಗೆ ಮಾತ್ರ ವೇದದ ಕೆಲವು ಭಾಗಗಳನ್ನು ಪಠ್ಯಗ್ರಂಥಗಳಲ್ಲಿ ಸೇರಿಸುತ್ತಾರೆ. ಋಗ್ವೇದದ ಕೆಲವು ಮಂತ್ರಗಳನ್ನು ಆರಿಸಿ ಅವುಗಳ ಕಾಲ, ರಚಿಸಿದ ಋಷಿ, ಮುಂತಾದ ವಿಚಾರಗಳನ್ನು ತುಲನಾತ್ಮಕ ಭಾಷಾಶಾಸ್ತ್ರ ತುಲನಾತ್ಮಕ ಪುರಾಣಶಾಸ್ತ್ರ ಇವುಗಳ ದೃಷ್ಟಿಯಿಂದ ಕಲಿಯಿಸುತ್ತಾರೆ. ಅಲ್ಲಿ ತರಬಿಯತ್ತಾಗುವವರಿಗೆ ಅನೇಕರಿಗೆ ಧರ್ಮವೆಂದರೆ ವಿನೋದಮಾತ್ರವಾಗಿರುತ್ತದೆ. ನೀತಿಯೆಂಬುದು ಉಪನ್ಯಾಸಕ್ಕೆ ವಿಷಯವೇ ಹೊರತು ಅನುಷ್ಠಾನಕ್ಕಲ್ಲವೆಂಬ ಭಾವನೆಯು ಅನೇಕರ ಹೃದಯದಲ್ಲಿ ಬಲವಾಗಿ ಬೇರೂರುತ್ತಿದೆ.

ಸಂಸ್ಕೃತಪಾಠಶಾಲೆಗಳಲ್ಲಿ ಎಲ್ಲಿಯೋ ಒಂದೊಂದು ಕಡೆಯಲ್ಲಿ ಮಾತ್ರವೇ ವೇದದ ಅಧ್ಯಯನವನ್ನು ಮಾಡಿಸುತ್ತಿದ್ದಾರೆ; ಅಲ್ಲಿಯೂ ಅರ್ಥವಿಚಾರದ ಆವಶ್ಯಕತೆಯು ಬಹುಜನರಿಗೆ ಹೊಳೆದೇ ಇರುವಂತಿಲ್ಲ. ವೇದವನ್ನು ಅಧ್ಯಯನಮಾಡಿ ಅರ್ಥವನ್ನು ಹೇಳುವ ವಿದ್ವಾಂಸರು ಬಹು ವಿರಳರಾಗಿರುವರು; ಬಹು ಸಂದರ್ಭಗಳಲ್ಲಿ ವ್ಯಾಕರಣ, ತರ್ಕ – ಈ ಶಾಸ್ತ್ರಗಳಲ್ಲಿ ಉತ್ತಮಪಂಡಿತರೆನಿಸಿಕೊಂಡಿರುವವರಿಗೆ ಕೂಡ ವೇದದ ಅಧ್ಯಯನವೇ ಆಗಿರುವದಿಲ್ಲ. ಇದು ಹೊಲವನ್ನು ಉತ್ತು ಬೀಜವನ್ನು ಹಾಕದೆ ಕಳೆಗಳನ್ನೇ ಬೆಳೆಯುವದಕ್ಕೆ ಬಿಡುವ ಮೂಢರ ಮಾರ್ಗವಲ್ಲದೆ ಮತ್ತೇನು?

ವೇದಾಧ್ಯಯನವನ್ನು ಮಾಡಿದ ಕೆಲವರು ಬ್ರಾಹ್ಮಣರು ಈಗಲೂ ಅಲ್ಲಲ್ಲಿ ಸಿಕ್ಕುತ್ತಾರೆ. ಸಂಸ್ಕೃತಗ್ರಂಥಗಳನ್ನು ಸೈನ್ಯದ ಕುದುರೆಗಳಿಗೆ ಹುರುಳಿಬೇಯಿಸುವ ಒಲೆಗೆ ಉಪಯೋಗಿಸಿದ ರಾಜರುಗಳೂ ಹಿಂದೆ ಆಗಿಹೋದರೆಂದು ಕೇಳುತ್ತೇವೆ; ಆಗಿನ

ಕಾಲದಲ್ಲಿ ಇಂಥ ಬ್ರಾಹ್ಮಣರ ಸಹಾಯದಿಂದಲೇ ವೇದವು ಉಳಿದುಕೊಂಡಿತು. ಈಗಲೂ ಅವರ ಸಹಾಯದಿಂದ ವೇದ, ಅದರ ಪದಪಾಠ, ಜಟೆ, ಘನ - ಮುಂತಾದವುಗಳ ಅಧ್ಯಯನವು ಇನ್ನೂ ಉಳಿದುಕೊಂಡಿವೆ. ಆದರೆ ಅವರನ್ನು ಆದರದಿಂದ ಕಾಣುವವರೇ ವಿರಳರಾಗಿರುತ್ತಾರೆ. ಆದ್ದರಿಂದ ವೈದಿಕರು ಪ್ರಯೋಗಕ್ಕೆ ತಕ್ಕಷ್ಟು ಮಂತ್ರಗಳನ್ನು ಕಲಿತು ಮಿಕ್ಕ ಹೊತ್ತನ್ನು ಬೇರೆ ಕಡೆ ವಿನಿಯೋಗಿಸುತ್ತಿದ್ದಾರೆ. ಹೀಗಿರುವಲ್ಲಿ ಮುಂದಿನ ತಲಾಂತರಕ್ಕೆ ವೇದಾಧ್ಯಯನದ ಅಭ್ಯಾಸವು ಉಳಿಯುವದಕ್ಕೆ ಅವಕಾಶವೆಲ್ಲಿ ಬಂತು?

ನಿಜವಾಗಿ ನೋಡಿದರೆ ವೇದವೆಂಬುದು ಭರತಖಂಡದ ಸಂಸ್ಕೃತಿಯೆಂಬ ಕಟ್ಟಡದ ಭದ್ರವಾದ ಅಡಿಗಲ್ಲು. ಅದರಿಂದಲೇ ಈಗಿನ ಹಿಂದೂಮತ, ಬೌದ್ಧಮತ ಮತ್ತು ಪ್ರಾಚೀನದರ್ಶನಗಳು ಉತ್ಪನ್ನವಾಗಿರುತ್ತವೆ. ಹಿಂದೂಸಂಸ್ಕೃತಿಯು ಸರ್ವ ಶಾಖೆಗಳಲ್ಲಿಯೂ ಪೂರ್ವಕಾಲದಲ್ಲಿ ಅಭಿವೃದ್ಧಿಯಾಗಲು ವೇದವೇ ಮೂಲಕಾರಣ; ಹಿಂದಿನ ಕಾಲದಲ್ಲಿ ಸಮಾಜದ ಮತ್ತು ವ್ಯಕ್ತಿಗಳ ಜೀವನದ ತೊಂದರೆಗಳನ್ನೆಲ್ಲ ಬಿಡಿಸಿ ಜೀವನಕ್ಕೆ ಮೆರುಗು ಕೊಟ್ಟದ್ದೇ ವೇದವು. ಭರತಖಂಡದ ಧಾರ್ಮಿಕ ತಾತ್ತ್ವಿಕ ವಿಚಾರಗಳ ಇತಿಹಾಸವನ್ನು ಅರಿಯುವದು ವೇದಜ್ಞರಲ್ಲದವರಿಗೆ ಅಸಾಧ್ಯವು. ಜಗತ್ತನ್ನೆಲ್ಲ ಬೆರಗು ಮಾಡಿರುವ ವೇದಾಂತದರ್ಶನದ ಜೀವಾಳವನ್ನು ಕಂಡುಕೊಳ್ಳುವದು ವೇದಾಧ್ಯಯನವಿಲ್ಲದವರಿಗೆ ಕಡುಕಷ್ಟವು. ಆದ್ದರಿಂದ ತಾವು ನಿಜವಾಗಿ ಹಿಂದುಗಳೆನಿಸಿಕೊಂಡಿರಬೇಕೆಂಬ ಆಸೆಯಿದ್ದರೆ, ತಮ್ಮ ಸಂಸ್ಕೃತಿಯು ತಮ್ಮ ತಲೆಗೇ ನಿಲ್ಲದೆ ಮುಂದಿನ ತಲಾಂತರಕ್ಕೂ ಸಾಗಬೇಕೆಂಬ ಆಸೆಯಿದ್ದರೆ, ಹಿಂದುಗಳೆನಿಸಿರುವವರೆಲ್ಲರೂ ಈಗಲೇ ವೇದದ ಅಧ್ಯಯನಕ್ಕೂ ವಿಚಾರಕ್ಕೂ ಒತ್ತಾಸೆಕೊಡುವದಕ್ಕೆ ಪ್ರಾರಂಭಿಸಬೇಕು. ತಮ್ಮ ಆಲಸ್ಯವನ್ನೂ ಭೋಗಲೋಲುಪತೆಯನ್ನೂ ವಿಚಾರಾಗ್ನಿಯಲ್ಲಿ ಹೋಮಮಾಡಬೇಕು, ಈ ವಿರಜಾಹೋಮವನ್ನು ಮಾಡಿದ ಬಳಿಕ ಇನ್ನು ಮೇಲಾದರೂ ಶ್ರದ್ಧೆಯಿಂದ ವೇದವನ್ನು ಅಧ್ಯಯನಮಾಡುವೆವು, ನಮ್ಮ ಮಕ್ಕಳಿಗೂ ಇದಕ್ಕೆ ತಕ್ಕ ಕಾಲವನ್ನು ಕಲ್ಪಿಸುವೆವು ಎಂದು ದ್ವಿಜರೆಲ್ಲರೂ ಶಪಥವನ್ನು ಮಾಡಬೇಕು. ಆಗಲೇ ನಾವು ನಿಜವಾದ ಉಪಾಕರ್ಮವನ್ನು ಮಾಡಿದಂತಾಗುತ್ತದೆ.

# ವಾಮನ ಜಯಂತಿ

ಭಾದ್ರಪದ ಶುದ್ಧದ್ವಾದಶಿಯ ದಿನ ಅನೇಕರು ವಾಮನಜಯಂತಿಯನ್ನು ಒಂದು ವ್ರತವಾಗಿ ಆಚರಿಸುತ್ತಾರೆ. ಶ್ರೀಮಹಾವಿಷ್ಣುವು ಆ ದಿನ ವಾಮನನಾಗಿ ಅವತಾರವನ್ನು ಮಾಡಿ ಬ್ರಹ್ಮಚರ್ಯದಿಂದ ಮಹಾಬಲಿಚಕ್ರವರ್ತಿಯನ್ನು ಬೆರಗುಗೊಳಿಸಿ ಅವನಿಂದ ಮೂರು ಹೆಜ್ಜೆಯ ಭೂಮಿಯನ್ನು ಬೇಡಿದನೆಂದೂ ತ್ರಿವಿಕ್ರಮಾವತಾರದಿಂದ ಸ್ವರ್ಗಮರ್ತ್ಯಪಾತಾಳಗಳನ್ನೆಲ್ಲ ವ್ಯಾಪಿಸಿ ಬಲಿಯನ್ನು ತುಳಿದು ಪಾತಾಳಕ್ಕಟ್ಟಿದನೆಂದೂ ಹೇಳುವ ಪುರಾಣದ ಕಥೆಯು ನಮ್ಮಲ್ಲನೇಕರಿಗೆ ತಿಳಿದೇ ಇದೆ.

ಐತಿಹಾಸಿಕದೃಷ್ಟಿಯಿಂದ ಕಥೆಯಲ್ಲಿರುವ ಸ್ವಾರಸ್ಯಕ್ಕಿಂತಲೂ ಆಧ್ಯಾತ್ಮಿಕದೃಷ್ಟಿಯಿಂದಲೇ ಅದರಲ್ಲಿ ಹೆಚ್ಚು ಸವಿಯಿರುತ್ತದೆಯೆಂದು ಹೇಳಬೇಕಾಗಿದೆ. ಏಕೆಂದರೆ ನಾವೆಲ್ಲರೂ ಈಗ ವಾಮನರಾಗಿದ್ದರೂ ಒಂದಾನೊಂದು ಬಗೆಯಲ್ಲಿ ತ್ರಿವಿಕ್ರಮರೇ ಆಗಬಹುದಾಗಿರುತ್ತದೆ.

ಶರೀರವೇ ತಾನೆಂದು ತಿಳಿದಿರುವವರೆಗೂ ಮನುಷ್ಯನು ಎಷ್ಟೇ ಉದ್ದವಾಗಿ ಬೆಳೆದುಕೊಂಡಿರಲಿ, ಹೊರಗಿನ ವಿಶ್ವದ ದೃಷ್ಟಿಯಿಂದ ಇನ್ನೂ ವಾಮನನೇ ಆಗಿರುತ್ತಾನೆ. ಸಾಕ್ಷಾದ್ವಿಷ್ಣುವೇ ವಾಮನನಾಗಿ ಹುಟ್ಟಿದ್ದರೂ ಹೊರಗಿನ ದೇಹದ ದೃಷ್ಟಿಯಿಂದ ಅವನನ್ನು ಬಲಿಚಕ್ರವರ್ತಿಯೂ ಅವನ ಪರಿವಾರದವರೂ ಒಬ್ಬ ಸಾಮಾನ್ಯವಟುವೆಂದು ಭಾವಿಸಿದ್ದು ಆಶ್ಚರ್ಯವಲ್ಲ.

ಆದರೆ ಈ ದೃಷ್ಟಿಯನ್ನು ಮೀರಿದರೆ ನಾವೆಲ್ಲರೂ ತ್ರಿವಿಕ್ರಮರಾಗಬಹುದಾಗಿರುತ್ತದೆ. ಹೇಗೆಂದರೆ ಆಯಾ ಅವಸ್ಥೆಯ ಸಾಕ್ಷಿಯೇ ನಾವೆಂಬ ಅರಿವನ್ನು ತಂದುಕೊಂಡರೆ, ಒಂದೊಂದು ಅವಸ್ಥೆಯೂ ನಮ್ಮ ಒಂದೊಂದು ಪಾದದಲ್ಲಿ ಅಡಕವಾಗಿ ಬಿಡುತ್ತದೆ. ಎಚ್ಚರದವಸ್ಥೆಯಲ್ಲಿರುವ ಆತ್ಮನು ಸ್ಥೂಲಪ್ರಪಂಚದಲ್ಲಿರುವ ಸರ್ವರಿಗೂ ಆತ್ಮನಾಗಿರುವದರಿಂದಲೂ ಸರ್ವವೂ ಇವನ ಚೈತನ್ಯದ ಅಧೀನವಾಗಿರುವ ಇರವನ್ನುಳ್ಳದಾದ್ದರಿಂದಲೂ ವೈಶ್ವಾನರನೆನಿಸುವನೆಂದೂ ಸ್ವಪ್ನದಲ್ಲಿ ಮನಃಪ್ರಪಂಚವನ್ನೇ ಬೆಳಗುವದರಿಂದ ತೈಜಸನೆನಿಸುವನೆಂದೂ ಸುಷುಪ್ತಿಯಲ್ಲಿ ಪ್ರಜ್ಞಾನದ ಗಟ್ಟಿಯಾಗಿ ತಾನೇ ತಾನಾಗಿರುವದರಿಂದ ಪ್ರಾಜ್ಞನೆನಿಸುವನೆಂದೂ ಶ್ರುತಿಯು ಹೇಳುತ್ತದೆ. ಈ ಮೂರೂ ಪರಮಾತ್ಮನ ಒಂದೊಂದು 'ಪಾದ' ವೆಂತಲೂ ನಿಜವಾಗಿ ಪರಮಾತ್ಮನು ಈ ಮೂರನ್ನೂ ಮೀರಿದ ತುರೀಯವೆಂಬ ಮತ್ತೊಂದು ಪರಮಾರ್ಥಸ್ವರೂಪದಿಂದ ಅದ್ವಿತೀಯ

ನಾಗಿರುವನೆಂತಲೂ ಅದೇ ಶ್ರುತಿಯು ಸಾರುತ್ತಿದೆ. ಈ ಪ್ರತಿಪಾದನೆಯನ್ನು ಪುರಾಣದ ಕಥೆಗೆ ಹೊಂದಿಸಿದರೆ ಪ್ರತಿಯೊಬ್ಬನೂ ಈ ಅವಸ್ಥಾತ್ರಯಾತ್ಮರೂಪದಿಂದ ತ್ರಿವಿಕ್ರಮನಾಗಿರುವನೆಂದು ಹೇಳಬಹುದಲ್ಲವೆ?

ಈ ದೃಷ್ಟಿಯಿಂದ ನೋಡಿದರೆ ತ್ರಿವಿಕ್ರಮನ ಮೂರು ಪಾದದೊಳಗೆ ಸೇರದೆ ಇರುವದು ಯಾವದೊಂದು ಇರುವದೇ ಇಲ್ಲ, ಎಂಥ ಮಹಾಬಲಿಚಕ್ರವರ್ತಿಯಾಗಲಿ, ಈ ತ್ರಿವಿಕ್ರಮನ ಪಾದತಲದಲ್ಲಿಯೇ ಅಡಗಿ ಬದುಕಿಕೊಳ್ಳಬೇಕಾಗಿದೆ. ಈ ತ್ರಿವಿಕ್ರಮನು ಮಾತ್ರ ತನ್ನ ಪರಮಾರ್ಥಸ್ವರೂಪದಿಂದ ಸರ್ವವ್ಯಾಪಕನಾಗಿದ್ದರೂ ಅತ್ಯಂತ ಶುದ್ಧನಾಗಿರುವ ಮಹಾವಿಷ್ಣುವಾಗಿರುತ್ತಾನೆ!

ವಾಮನಜಯಂತಿಯ ದಿನ ಈ ದೃಷ್ಟಿಯನ್ನು ಯಾರು ಯಾರು ಮನಸ್ಸಿಗೆ ತಂದುಕೊಳ್ಳುವರೋ ಅವರ ಪಾಲಿಗೆ ವಾಮನನು ಮೂರ್ತಿಯಲ್ಲಿ ಚಿಕ್ಕವನಾದರೂ ಕೀರ್ತಿಯಲ್ಲಿ ದೊಡ್ಡವನಾಗುವನು. ತ್ರಿವಿಕ್ರಮನ ಕಥೆಯು ಪುರಾಣದಲ್ಲಿ ಮಾತ್ರವೇ ಇರುವದಲ್ಲದೆ ಋಗ್ವೇದದ ವಿಷ್ಣುಸೂಕ್ತದಲ್ಲಿ ಕೂಡ ಕಾಣಬರುವದರ ಮಹತ್ತ್ವವು ಅವರಿಗೆ ಮನದಟ್ಟಾಗುವದು.

# ಆಯುರ್ವೇದ

ಪ್ರಪಂಚದಲ್ಲಿರುವ ವೈದ್ಯಪದ್ಧತಿಗಳಲ್ಲೆಲ್ಲಾ ಆಯುರ್ವೇದಕ್ಕೆ ಒಂದು ಅಸಾಧಾರಣಸ್ಥಾನವಿರುವದು. ಈ ಶಾಸ್ತ್ರವು ಇತರ ಪದ್ಧತಿಗಳಂತೆ ಬರಿಯ ಶರೀರವನ್ನೇ ಲಕ್ಷ್ಯದಲ್ಲಿಟ್ಟು ಹೊರಟಿರುವದಾಗಿರದೆ ಜನರ ಆತ್ಮೋನ್ನತಿಯನ್ನೂ ಮನಸ್ಸಿನಲ್ಲಿಟ್ಟುಕೊಂಡು ಹೊರಟಿದ್ದಾಗಿರುವದು. ಆದ್ದರಿಂದಲೇ ಇದನ್ನು ಆಯುರ್ವೇದ ಎಂಬ ಗೌರವದ ಹೆಸರಿನಿಂದ ನಮ್ಮ ಪೂರ್ವಜರು ಕರೆದಿರುವರು. ವೇದವು ಆತ್ಮತತ್ತ್ವವನ್ನು ಬಿಚ್ಚಿ ತೋರಿಸುವದಕ್ಕೆ ಸಾಧನಗಳಾದ ಕರ್ಮ, ಉಪಾಸನೆ, ಜ್ಞಾನ ಇವನ್ನು ಪ್ರಕಾಶಪಡಿಸಿರುವಂತೆಯೇ ಆಯುರ್ವೇದವು ಧರ್ಮಕ್ಕೆ ಮೊಟ್ಟಮೊದಲನೆಯ ಸಾಧನವಾದ ದೇಹವನ್ನು ಹೇಗೆ ಇಟ್ಟುಕೊಳ್ಳಬೇಕೆಂಬುದನ್ನು ತಿಳಿಸುವುದು. ವೇದದ ಮಂತ್ರಗಳನ್ನು ಲೋಕಕ್ಕೆ ಕೊಟ್ಟ ಋಷಿಗಳು ಹೇಗೆ ಯಾವ ಸ್ವಾರ್ಥತೆಯೂ ಇಲ್ಲದೆ ಜನರ ಕಲ್ಯಾಣವನ್ನೇ ನಮ್ಮ ಧ್ಯೇಯವಾಗಿ ಇಟ್ಟುಕೊಂಡಿದ್ದರೋ, ಹಾಗೆಯೇ ಆಯುರ್ವೇದವನ್ನು

ಮೊದಲು ಬಯಲಿಗೆ ತಂದ ಋಷಿಗಳೂ ಜನರ ಪರಮ ಕಲ್ಯಾಣವನ್ನು ತಮ್ಮ ಎದುರಿನಲ್ಲಿ ಇಟ್ಟುಕೊಂಡೇ ಧರ್ಮಾನುಷ್ಠಾನದ ಸಿದ್ಧತೆಯನ್ನು ಏರ್ಪಡಿಸುವುದರಲ್ಲಿ ನಿರತರಾಗಿದ್ದರು. ಈ ಕಾರಣದಿಂದಲೂ ಆಯುರ್ವೇದವು ಒಂದು ಉಪವೇದವೆಂದು ಭಾವಿಸಲ್ಪಡುವುದಕ್ಕೆ ಅವಕಾಶವಾಯಿತು.

ಪ್ರಸಿದ್ಧವಾದ ಚರಕಸಂಹಿತೆಯಲ್ಲಿ ಹೇಳಿರುವ ವಾಕ್ಯಗಳೂ ಈ ಅರ್ಥವನ್ನೇ ಪೋಷಿಸುತ್ತವೆ :

**"ನಾತ್ಮಾರ್ಥಂ ನಾಪಿ ಕಾಮಾರ್ಥಂ ಅಥ ಭೂತದಯಾಂ ಪ್ರತಿ ।**
**ವರ್ತತೇ ಯಶ್ಚಿಕಿತ್ಸಾಯಾಂ ಸ ಸರ್ವಮತಿವರ್ತತೇ ॥೧॥**

**ಕುರ್ವತೇ ಯೇ ತು ವೃತ್ತ್ಯರ್ಥಂ ಚಿಕಿತ್ಸಾಪಣ್ಯವಿಕ್ರಯಮ್ ।**
**ತೇ ಹಿತ್ವಾ ಕಾಂಚನಂ ರಾಶಿಂ ಪಾಂಸುರಾಶಿಮುಪಾಸತೇ ॥೨॥"**

**ಭಾವಾರ್ಥ** - "ತನ್ನ ಯಾವ ಪ್ರಯೋಜನಕ್ಕಾಗಲಿ, ತನ್ನ ಯಾವುದೊಂದು ದುರಾಶೆಯನ್ನು ಪೂರ್ತಿಗೊಳಿಸಿಕೊಳ್ಳುವದಕ್ಕಾಗಲಿ ವೈದ್ಯ ವಿದ್ಯೆಯಲ್ಲಿ ಕೈ ಹಾಕದೇ ಕೇವಲ ಪ್ರಾಣಿಗಳ ಮೇಲಿನ ದಯೆಯಿಂದಲೇ ಪ್ರೇರಿತನಾಗಿ ಯಾವಾತನು ಪ್ರವರ್ತಿಸುವನೋ ಆತನೇ ಸರ್ವಶ್ರೇಷ್ಠನು. ಯಾರಾದರೆ ರೋಗನಿವಾರಣೆ ಮಾಡುವುದನ್ನು ವ್ಯಾಪಾರದ ವೃತ್ತಿಯನ್ನಾಗಿ ಇಟ್ಟುಕೊಳ್ಳುವರೋ ಅವರು ಚಿನ್ನದ ರಾಶಿಯನ್ನು ಕೈಬಿಟ್ಟು ಗೊಬ್ಬರದ ತಿಪ್ಪೆಗೆ ಕೈ ಹಾಕುವ ಮೂರ್ಖರಾಗಿರುವರು."

ಈ ವಚನವು ವೈದ್ಯಶಾಸ್ತ್ರದ ಮೊದಲಲ್ಲಿಯೇ ಬಂದಿರುತ್ತದೆ. ಧರ್ಮಶಾಸ್ತ್ರಕಾರರೂ ಕೇವಲ ವೈದ್ಯವೃತ್ತಿಯಿಂದಲೇ ಜೀವನಮಾಡುವವರನ್ನು ಹವ್ಯಕವ್ಯಗಳಿಂದ ದೂರಮಾಡಬೇಕೆಂದು ಹೇಳಿರುತ್ತಾರೆ. ಹೀಗಿದ್ದರೂ ಆಯುರ್ವೇದವು ನಮ್ಮ ದೇಶದಲ್ಲಿ ಎಷ್ಟೋ ಉನ್ನತಿಗೆ ಬಂದದ್ದನ್ನು ನೋಡಿದರೆ ಈ ಶಾಸ್ತ್ರವು ಧರ್ಮವನ್ನೇ ಎಷ್ಟರಮಟ್ಟಿಗೆ ಮಾಯಮಾಡಿಟ್ಟುಕೊಂಡಿರುತ್ತೆಂಬುದು ಮನದಟ್ಟಾಗುವದು.

ಆಯುರ್ವೇದಪದ್ಧತಿಯ ತಿಳಿವಳಿಕೆಯು ನಮ್ಮ ದೇಶದಲ್ಲಿ ಹೆಚ್ಚಿದರೆ ಅಧ್ಯಾತ್ಮ ವಿದ್ಯೆಗೆ ಎಷ್ಟು ಬಲ ಬರುವುದೆಂಬುದನ್ನೂ ವಾಚಕರು ಲೆಕ್ಕಕ್ಕೆ ತೆಗೆದುಕೊಳ್ಳು ವದು ಅಗತ್ಯವು. ಈ ಪದ್ಧತಿಯು ಸನಾತನಾರ್ಯಧರ್ಮದ ಸಂಸ್ಕಾರದ ಬೆಂಬಲ ದಿಂದಲೇ ಹುಟ್ಟಿದ್ದಾಗಿರುವದು. ಅದೇ ಸಂಸ್ಕಾರದಿಂದುಂಟಾದ ಬೇರೆ ಶಾಖೆಗಳಾದ ಮಂತ್ರ, ಕರ್ಮ - ಮುಂತಾದ ವಿಷಯಗಳನ್ನು ತಿಳಿಸುವ ಶಾಸ್ತ್ರಗಳಿಗೂ ಇದಕ್ಕೂ ನಿಕಟಸಂಬಂಧ

ವಿರುವದು. ನಮ್ಮ ವೈದ್ಯರು ಚಿಕಿತ್ಸೆಯನ್ನು ಪ್ರಾರಂಭಿಸುವದಕ್ಕೆ ಮುಂಚೆ ಶುಭದಿನ ಶುಭಮುಹೂರ್ತವನ್ನು ನೋಡಿಕೊಂಡು ಮೊದಲು ಮಾಡಿ, ದೇವತೆಗಳ ಮೇಲೆ ಭಾರಹಾಕಿಸಿ ಔಷಧಕ್ಕೆ ಕೈಹಾಕುವರು. ಮನಸ್ಸಿನ ಸ್ಥಿತಿಯನ್ನೂ ನಾಡಿಯಾಡುವ ಬಗೆಯನ್ನೂ ನೋಡಿ ರೋಗಿಯ ಜಾತಿ, ಕುಲ, ಆಚಾರ ಮುಂತಾದವುಗಳನ್ನೂ ಗಮನಿಸಿ, ಔಷಧವನ್ನೂ ಪಥ್ಯವನ್ನೂ ನಿಯಮಿಸುವರು. ಸಣ್ಣಪುಟ್ಟ ರೋಗಗಳಿಗೆ ಅನುಭವ ವೈದ್ಯವನ್ನು ಹೇಳಿ ಅವರವರ ಆಹಾರ ವಿಹಾರಗಳಿಂದಲೇ ಚಿಕಿತ್ಸೆಯ ಕ್ರಮವನ್ನು ಏರ್ಪಡಿಸಿಬಿಡುವರು. ದೇಹ, ಪ್ರಾಣ, ಮನಸ್ಸು ಇವು ಮೂರಕ್ಕೂ ಇರುವ ಹತ್ತಿರದ ಸಂಬಂಧವನ್ನು ಎಂದೆಂದಿಗೂ ಜ್ಞಾಪಕದಲ್ಲಿಟ್ಟಿರುವರೇ ಹೊರತು ಈಗ ಹೆಸರುಗೊಂಡಿರುವ ಪಾಶ್ಚಾತ್ಯಪದ್ಧತಿಯನ್ನನುಸರಿಸುವ ಆಸ್ಪತ್ರೆಗಳ ಕ್ರಮದಂತೆ ಮಕ್ಕಳಿಗೊಂದು ತೂಕ ಹಿರಿಯರಿಗೊಂದು ತೂಕ - ಎಂಬ ಕುರುಡು ಹೆಗ್ಗುರುತುಗಳ ಮೇಲೆ ಎಂದಿಗೂ ಭರವಸೆಯಿಡುವುದಿಲ್ಲ. ಜೀವನಿಗೆ ದೇಹ, ಪ್ರಾಣ, ಮನಸ್ಸು - ಇವುಗಳು ಆಯಾ ಕಾರ್ಯವನ್ನು ಜರುಗಿಸಿಕೊಡುವ ಸಾಧನಗಳೆಂದೂ, ಜನ್ಮಾಂತರಗಳಲ್ಲಿ ಆಯಾ ಜೀವರು ಮಾಡಿರುವ ಕರ್ಮಗಳಿಗನುಸಾರವಾಗಿ ದೇಹದ ಆರೋಗ್ಯಸ್ಥಿತಿಯೂ ರೋಗಗಳೂ ಬಂದೊದಗುತ್ತಿರುವುವೆಂದೂ ತೀರ್ಮಾನಿಸಿರುವ ಆರ್ಯಸಿದ್ಧಾಂತಕ್ಕೆ ಹೊಂದಿಸಿಕೊಂಡು ಔಷಧವನ್ನೇ ಅಲ್ಲದೆ ದಾನ, ಜಪ, ಹೋಮ, ದೇವತಾರ್ಚನೆ - ಮುಂತಾದ ಸತ್ಕರ್ಮಗಳನ್ನೂ ಸಹಾಯಕಸಾಮಗ್ರಿಗಳಾಗಿ ಉಪಯೋಗಿಸಿಕೊಂಡು ಚಿತ್ತಸ್ವಾಸ್ಥ್ಯದಿಂದಲೇ ದೇಹಕ್ಕೆ ಆರೋಗ್ಯವನ್ನು ತರುವುದಕ್ಕೆ ಪ್ರಯತ್ನಪಡುವರು. ಇದನ್ನು ನೋಡಿದರೆ ದೇಹವೇ ಆತ್ಮವೆಂದು ಇಟ್ಟುಕೊಂಡು, ಯಂತ್ರಗಳಿಗೆ ರಿಪೇರಿಮಾಡಿದ ಹಾಗೆ ದೇಹದಲ್ಲಿ ಆಗಿರುವ ಆಯಾ ಸಾಮಗ್ರಿಗಳ ಹೆಚ್ಚು ಕಡಿಮೆಗಳನ್ನು ಅಷ್ಟಷ್ಟಕ್ಕೇ ಸರಿಪಡಿಸುವದೇ ವೈದ್ಯ ಶಾಸ್ತ್ರದ ಮುಖ್ಯೋದ್ದೇಶವೆಂಬ ಭಾವನೆಯಿಂದ ಹುಟ್ಟಿರುವ ಇತರ ಪದ್ಧತಿಗಳಿಗೂ ಆಯುರ್ವೇದಕ್ಕೂ ಬಹಳ ತಾರತಮ್ಯವು ಕಂಡುಬರುತ್ತದೆ.

ಈಗಿನ ಕಾಲದಲ್ಲಿ ಅನೇಕ ಕಾರಣಗಳಿಂದ ಆಯುರ್ವೇದವು ಹಿಂದಕ್ಕೆ ಬೀಳುತ್ತಿರುವುದು. ಮನೆಮನೆಯಲ್ಲಿಯೂ ಅನುಭವವೈದ್ಯರಿಂದ ಸಣ್ಣಪುಟ್ಟ ರೋಗಗಳನ್ನು ವಾಸಿಮಾಡುತ್ತಿದ್ದ ವಯೋವೃದ್ಧರು ತೀರ ಕಡಿಮೆಯಾಗಿರುವರು. ಎಲ್ಲಿಯೋ ಒಬ್ಬಿಬ್ಬರು ಇದ್ದರೆ ಅವರ ಮಾತಿಗೆ ಬೆಲೆಯೇ ಇಲ್ಲದಾಗಿದೆ. ಈಗ ರೋಗಿಗಳು ಪಟ್ಟಣಗಳಲ್ಲಿದ್ದರೆ ಮಾತೆತ್ತಿದರೆ ಆಸ್ಪತ್ರೆಗಳನ್ನು ನೆನಸಿಕೊಳ್ಳುವರು. ಹಳ್ಳಿಯ ಕಡೆಯಲ್ಲಿದ್ದರೆ ಹಾದಿಯಲ್ಲಿ ಹೋಗುವವರ ಮೂಢವೈದ್ಯಕ್ಕೆಲ್ಲ ತುತ್ತಾಗುವರು. ಅಥವಾ ಆದ

ಗತಿಯಾಗಲೆಂದು ಸುಮ್ಮನಿರುವರು. ನಮ್ಮ ದೇಶದ ಪೂರ್ವದ ಸಂಸ್ಕೃತಿಯು ಹೊಳಪಿನಿಂದ ಮತ್ತೆ ಎದ್ದು ತೋರಬೇಕಾದರೆ ಇತರ ವಿದ್ಯೆಗಳಂತೆ ಆಯುರ್ವೇದ ವಿದ್ಯೆಯನ್ನೂ ಜನಗಳಿಗೆ ತಿಳಿಸುವುದು ಅತ್ಯವಶ್ಯವಾಗಿರುವದು. ಸಂಸ್ಕೃತದಲ್ಲಿರುವ ಮುಖ್ಯ ವೈದ್ಯಗ್ರಂಥಗಳನ್ನು ದೇಶ ಭಾಷೆಗಳಿಗೆ ಇಳಿಸುವದು, ಹತ್ತಿರಹತ್ತಿರದಲ್ಲಿ ಆಯುರ್ವೇದ ಶಾಲೆಗಳನ್ನು ಇಡಿಸುವುದಕ್ಕೆ ಏರ್ಪಾಡುಮಾಡುವುದು. ಸುಲಭವಾದ ಅನುಭವ ವೈದ್ಯಗಳನ್ನು ಎಲ್ಲರಿಗೂ ತಿಳಿಯುವಂತೆ ಪುಟ್ಟ ಗ್ರಂಥಗಳಲ್ಲಿಯೂ ಪತ್ರಿಕೆಗಳ ಮೂಲಕವಾಗಿಯೂ ತಿಳಿಯಪಡಿಸುವದು- ಇವೇ ಈ ಮಹಾಕಾರ್ಯಕ್ಕೆ ಮೂಲ ಸಾಧನಗಳೆಂದು ನನಗೆ ತೋರುತ್ತದೆ. ಈ ಅಭಿಪ್ರಾಯವು ಈ ಪತ್ರಿಕೆಯ ಚಾಲಕರಿಗೂ ವಾಚಕರಿಗೂ ಸಮ್ಮತವಾದರೆ ವೈದ್ಯಕ್ಕೆ ಸಂಬಂಧಪಟ್ಟ ಕೆಲವು ತಿಳಿವಳಿಕೆಗಳಿಗೂ ಈ ಪತ್ರಿಕೆಯಲ್ಲಿ ಆಗಿಂದಾಗ್ಗೆ ಎಡೆಯನ್ನು ಕಲ್ಪಿಸಬೇಕೆಂದು ಪ್ರಾರ್ಥಿಸುತ್ತೇನೆ.

# ಸಾವಿನ ಅಂಜಿಕೆಯನ್ನು ತೊಲಗಿಸುವ ವಿಜ್ಞಾನ

ವಿಜ್ಞಾನಶಾಸ್ತ್ರದಲ್ಲಿ ಹೊಸಹೊಸ ಶೋಧಗಳು ಆಗುತ್ತಲೇ ಇರುತ್ತವೆ. ಈಚೆಗೆ ಒಂದು ಶೋಧವನ್ನು ಮಾಡಿರುತ್ತಾರಂತೆ. ಮರಣವನ್ನು ಹೊಂದುತ್ತಿರುವಾಗ ಜೀವನಿಗೆ ನೋವಾಗಲಿ ವೇದನೆಯಾಗಲಿ ನಿಜವಾಗಿ ಆಗುವದೇ ಇಲ್ಲವಂತೆ! ಜೀವನು ಶರೀರವನ್ನು ಬಿಟ್ಟಾಗ ಅವನಿಗೆ ಒಂದು ಬಗೆಯ ಸುಖಾನುಭವವೇ ಆಗುತ್ತದೆಯಂತೆ! ಸಾವಿನ ಅಂಜಿಕೆಯೇ ಸಾವಿನ ಕಾಲದಲ್ಲಿ ನಡುಗುವದಕ್ಕೆ ಕಾರಣವಂತೆ. ಅನಾಗರಿಕರು ಕತ್ತಲೆಗೆ ಅಂಜುವಂತೆ, ಜನರು ಸಾವಿಗೆ ಅಂಜುತ್ತಿರುವರು; ಆದ್ದರಿಂದ ಮರಣಕ್ಕಾಗಿ ಅಥವಾ ಮರಣಾನಂತರದ ಸ್ಥಿತಿಗಾಗಿ ಯಾರೂ ಅಂಜಬೇಕಾಗಿಲ್ಲ, ಸಾವಿನ ಕಾಲದಲ್ಲಿ ನೋವಾಗುವದೆಂಬುದು ಬರಿಯ ಭ್ರಮೆ - ಎಂಬುದೇ ಈ ನವೀನಶೋಧದ ಸಾರ!

ನನ್ನ ಹೃದಯವನ್ನು ಬಿಚ್ಚಿ ಮಾತನಾಡಬೇಕಾದರೆ, ನನಗೆ ಈ ಶೋಧದ ಹಿಂದೆ ಒಂದು ತಡಿಕೆಯಿರುವಂತೆ ತೋರುತ್ತದೆ. ಪಾಶ್ಚಾತ್ಯದೇಶಗಳಲ್ಲಿ ಜನರು ಈಗ ದಿನ ದಿನಕ್ಕೂ ಹೆಚ್ಚುಹೆಚ್ಚಾಗಿ ಸಾಯುತ್ತಿದ್ದಾರೆ. ಅದರಲ್ಲಿಯೂ ಯುದ್ಧದ ಹಾವಳಿಯಿಂದ ಜನರು ಲೆಕ್ಕವಿಲ್ಲದಿಷ್ಟು ಸಂಖ್ಯೆಯಿಂದ ಸಾಯುತ್ತಿದ್ದಾರೆ. ಸಾವಿನ ಅಂಜಿಕೆಯಿದ್ದರೆ ಯುದ್ಧಕ್ಕೆ ಹೆಜ್ಜೆಯನ್ನು ಮುಂದಿಡುವವರಾದರೂ ಯಾರು? ಆದ್ದರಿಂದ ಸಾಯುವ

ಕಾಲದಲ್ಲಿ ಯಾವ ವ್ಯಥೆಯೂ ಆಗುವದಿಲ್ಲವೆಂಬ ಈ ಆಶಾವಾದವನ್ನು ಯಾರಾದರೂ ಹುಟ್ಟಿಹಾಕಿರಬಹುದೆ?

ಇದರ ನಿಜವು ಹೇಗಾದರೂ ಇರಲಿ. ಈ ಶೋಧವನ್ನು ಮಾಡಿದ ಮಹಾತ್ಮನು ಯಾವ ದಿವ್ಯದೃಷ್ಟಿಯಿಂದ ಇದನ್ನು ಕಂಡುಹಿಡಿದನೋ ನನಗೆ ತಿಳಿಯದಾಗಿದೆ. ಮರಣವನ್ನು ಹೊಂದುತ್ತಿರುವ ಜೀವಿಗೆ ನಿಜವಾಗಿ ನೋವಾಗುವದಿಲ್ಲವೆಂಬುದನ್ನು ಸಾವಿನ ಕಾಲದಲ್ಲಿಲ್ಲದ ವಿಜ್ಞಾನಶಾಸ್ತ್ರಿಯು ಕಂಡುಹಿಡಿದದ್ದು ಹೇಗೆ? ಶರೀರವನ್ನು ಬಿಟ್ಟಮೇಲೆ ಒಂದು ಬಗೆಯ ಸುಖವಾಗುವದೆಂಬುದನ್ನು ಅವರು ಹೇಗೆ ಕಂಡು ಹಿಡಿದಿರುವರೋ! ಹಾಗಾದರೆ ಒಬ್ಬ ಮನುಷ್ಯನನ್ನು ಕೊಲ್ಲುವದೂ ಅವನಿಗೆ ಒಂದು ಬಗೆಯ ಸುಖವನ್ನುಂಟುಮಾಡಿಕೊಡುವ ಪುಣ್ಯವೇ ಎಂದು ಹೇಳಬಹುದಷ್ಟೆ? ಭ್ರಾಂತಿ ಯಿಂದಾದ ಸಾವಿನ ಅಂಜಿಕೆಯೇ ಸಾವಿನ ಕಾಲದಲ್ಲಿ ಆಗುವ ನಡುಕಕ್ಕೆ ಕಾರಣವಂತೆ, ಹಾಗೆ ಅಂಜುವವರು ಅನಾಗರಿಕರನ್ನು ಹೋಲುವರಂತೆ! ಸರಿ, ಹಾಗಾದರೆ! ಸಾವಿನಂಜಿಕೆಯು ಜನರಿಗೆ ಬಾರದಂತೆ ನಾಗರಿಕರು ಒಂದು ಯಂತ್ರವನ್ನು ಮಾಡಿಸಿ ಜನರ ಹೃದಯದಲ್ಲೇಕೆ ಇಟ್ಟುಬಿಡಬಾರದು?

ವಾಚಕರೆ, ನಾನು ವಿಜ್ಞಾನಶಾಸ್ತ್ರದ ಜನೋಪಕಾರಕವಾದ ಶೋಧನಗಳಲ್ಲಿ ನಂಬಿಕೆಯಿಲ್ಲದವನೆಂದು ಭಾವಿಸಬೇಡಿರಿ. ವಿಜ್ಞಾನಶಾಸ್ತ್ರದ ಶೋಧನೆಗಳಿಗೆ ಹೆಚ್ಚಿನ ಬೆಲೆ ಯುಂಟೆಂಬುದು ಈಗ ಜನಸಾಮಾನ್ಯಕ್ಕೇ ಮನದಟ್ಟಾಗಿಬಿಟ್ಟಿರುತ್ತದೆ. ಆದರೆ ವಿಜ್ಞಾನ ಶಾಸ್ತ್ರದ ತೀರ್ಪುಗಳಿಗೂ ವಿಜ್ಞಾನಶಾಸ್ತ್ರದ ಕಲ್ಪನಾವಾದಗಳಿಗೂ ಬಹಳ ತಾರತಮ್ಯ ವಿದೆ. ಪ್ರಕೃತವಿಷಯವು ಕೇವಲ ಕಲ್ಪನಾವಾದವಾಗಿದೆ, ಏತಕ್ಕೆಂದರೆ ಸಾವೆಂಬುದು ವಿಜ್ಞಾನ ಶಾಸ್ತ್ರದ ಪರೀಕ್ಷೆಗಾಗಲಿ ನಿರೀಕ್ಷಣಕ್ಕಾಗಲಿ ವಿಷಯವಾಗುವದಲ್ಲ; ಅದು ಅವರವರ ಅನುಭವದ ವಿಷಯವಾಗಿರುತ್ತದೆ. ಸಾವಿನ ಅನುಭವವು ಸತ್ತವರಿಗೇ ಗೊತ್ತು. ಅದರ ವಿಷಯದಲ್ಲಿ ಮಾಡುವ ತರ್ಕವು ಕಲ್ಪನಾ ಪ್ರಪಂಚಕ್ಕೇ ಸೇರಿದ್ದೆಂದು ನಾವೆಲ್ಲರೂ ಒಪ್ಪಲೇಬೇಕಾಗಿರುತ್ತದೆ.

ಆದರೆ ಮತ್ತೊಂದು ದೃಷ್ಟಿಯಿಂದ ನೋಡಿದರೆ ಮೇಲೆ ಕಂಡು ವಾದದಲ್ಲಿ ಒಂದು ಹೆಚ್ಚಿನ ತತ್ತ್ವಾರ್ಥವು ಅಡಗಿರುತ್ತದೆ. ಅದೇನೆಂದರೆ ಮನುಷ್ಯನು ಈಗಿರುವ ರೀತಿಯಿಂದ ತನ್ನ ಶರೀರಕ್ಕೆ ಗಂಟುಬಿದ್ದಿರುತ್ತಾನಾದ್ದರಿಂದ ಅವನಿಗೆ ಶರೀರಕ್ಕಾಗುವ ಬೇಕುಬೇಡಗಳು ತಗಲಿಯೇ ತೀರ ಬೇಕಾಗುತ್ತದೆ. ಆದ್ದರಿಂದ ಮನುಷ್ಯನು ದೇಹದ

ಹುಟ್ಟಿನಿಂದ ಹುಟ್ಟಲೇಬೇಕಾಗಿದೆ. ಅದರ ಸಾವಿನಿಂದ ಸಾಯಲೂಬೇಕಾಗಿದೆ. ದೇಹ ವಿರಬೇಕು, ದೇಹದ ಸಾವುನೋವುಗಳು ಬೇಡ - ಎಂದರೆ ಆಗುವದೇ ಇಲ್ಲ. ಈ ದೇಹವಿರುವದೆಂಬುದು ವ್ಯವಹಾರದ ದೃಷ್ಟಿಯಿಂದ ನೋಡಿದರೆ ನಮಗೆ ಎಷ್ಟೇ ಗಟ್ಟಿ ಭದ್ರವಾಗಿರುವ ನಂಬಿಕೆಯಾಗಿದ್ದರೂ ಇದು ನಿಜವಾಗಿ ನಮ್ಮ ಸ್ವಭಾವವಲ್ಲವೆಂದು ಉಪನಿಷತ್ತುಗಳು ಸಾರುತ್ತಿರುವವು. ಬೇರೆಬೇರೆಯ ಕನಸಿನಲ್ಲಿ ನಮಗೆ ಬೇರೆಬೇರೆಯ ದೇಹಗಳು ಕಾಣಿಸಿಕೊಳ್ಳುತ್ತಿರುತ್ತವೆ; ಆಗ ಅವುಗಳಿಂದ ನಮಗೆ ಕನಸಿನ ಸಾವು ನೋವು ಗಳೂ ಆದಂತೆ ತೋರಿಬಂದಿರುತ್ತವೆ. ಆದರೇನು? ಅವುಗಳಿಂದ ನಮಗೆ ನಿಜವಾಗಿಯೂ ಆ ಸಾವುನೋವುಗಳು ಅಂಟಿಕೊಂಡವೆ? ಇಲ್ಲ. ಇದರಂತೆಯೇ ಈ ಎಚ್ಚರದ ದೇಹದ ಸಾವು ನೋವುಗಳನ್ನೂ ಅರಿಯಬಹುದು; ಏಕೆಂದರೆ ಇವೂ ನಮಗೆ ಈ ಎಚ್ಚರ ದಲ್ಲಿರುತ್ತವೆ, ಕನಸಿನಲ್ಲಿರುವದಿಲ್ಲ, ಗಾಢನಿದ್ರೆಯಲ್ಲಂತೂ ಯಾವ ದೇಹದ ಸೋಂಕೂ ನಮಗೆ ಒಂದಿಷ್ಟೂ ಇರುವದೇ ಇಲ್ಲ. ಆಗ ಒಂದು ಬಗೆಯ ವಿಲಕ್ಷಣವಾದ ಸುಖವೂ ನಮಗೆ ಆಗುತ್ತದೆ. ಆದ್ದರಿಂದ ನಾವು ಎಚ್ಚರದ ದೃಷ್ಟಿಯಿಂದ ನೋಡಿದರೆ ಮರ್ತ್ಯರೇ, ಸಾವುನೋವುಗಳುಳ್ಳವರೇ, ಆದರೂ ನಮ್ಮ ಮೂರುವಸ್ಥೆಗಳನ್ನೂ ನೋಡಿಕೊಂಡರೆ ನಮಗೆ ಈ ದೇಹದ ಗಂಟುಸ್ವಭಾವವಲ್ಲ. ಇದರ ಸಂಕಟಗಳು ನಿಜವಾಗಿಯೂ ನಮಗೆ ಸೋಂಕಿರುವದಿಲ್ಲ. ಆದ್ದರಿಂದ ಇಂಥ ಅರಿವಿನ ಕಣ್ಣಿನಿಂದ ನಮಗೆ ಸಾವು ನೋವಿನ ಅಂಜಿಕೆಯಿರುವದಿಲ್ಲ. ನಾವು ಅಮೃತಸ್ವರೂಪರೇ.

# ಸಾಧನದ ಅವಶ್ಯಕತೆ

ಮನುಷ್ಯನಿಗೆ ಮನಸ್ಸೇ ಬಂಧಮೋಕ್ಷಗಳಿಗೆ ಕಾರಣವಾದದ್ದು - ಎಂದು ಉಪನಿಷತ್ತಿನಲ್ಲಿ ಹೇಳಿರುತ್ತದೆ. ಇಲ್ಲಿ ಮನಸ್ಸೆಂದರೆ ಅಂತಃಕರಣವೆಂದರ್ಥ. ಅಂತಃ ಕರಣದ ಒಂದಾನೊಂದು ವೃತ್ತಿಯನ್ನೂ ಮನಸ್ಸೆಂದೇ ಕರೆಯುವದುಂಟು; ಆಗ ಬುದ್ಧಿ ಅಹಂಕಾರ, ಚಿತ್ತ - ಎಂಬ ಇನ್ನೂ ಮೂರು ವೃತ್ತಿಗಳನ್ನು ಲೆಕ್ಕಕ್ಕೆ ಹಿಡಿಯಬೇಕು.

ದರ್ಶನಗಳಲ್ಲಿ ಅಂತಃಕರಣದ ಒಂದೊಂದು ವೃತ್ತಿಗೆ ಒಬ್ಬೊಬ್ಬರು ಪ್ರಾಮುಖ್ಯ ವನ್ನು ಕೊಟ್ಟು ವಿಚಾರಮಾಡಿರುತ್ತಾರೆನ್ನಬಹುದು. ಹೇಗೆಂದರೆ, ತರ್ಕದಲ್ಲಿ ಎಂದರೆ ನ್ಯಾಯವೈಶೇಷಿಕದರ್ಶನಗಳಲ್ಲಿ ಮನಸ್ಸಿಗೇ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟಿರುತ್ತದೆ.

ನ್ಯಾಯಶಾಸ್ತ್ರದಲ್ಲಿ ಪ್ರಮಾಣವೂ ತರ್ಕವೂ ಎಲ್ಲಕ್ಕಿಂತಲೂ ಮೇಲಿನ ಮಟ್ಟದಲ್ಲಿರುತ್ತದೆ ಎಂಬುದು ನಿಮಗೆ ತಿಳಿದೇ ಇದೆ. ಇವು 'ಮನಸ್ಸು' ಎಂಬ ಅಂತಃಕರಣವೃತ್ತಿಗೆ ಸೇರಿದ್ದಾಗಿದೆ. ಸಾಂಖ್ಯರು ಬುದ್ಧಿ ಎಂಬ ವ್ಯಕ್ತಿಗೇ ಹಿರಿಮೆಯನ್ನು ತೋರಿಸುತ್ತಾರೆನ್ನಬಹುದು; ಏಕೆಂದರೆ ಅವರು ಆತ್ಮ ಅನಾತ್ಮ – ಇವುಗಳ ವಿವೇಕವನ್ನೇ ಮುಖ್ಯವೆಂದು ಎಣಿಸುತ್ತಾರೆ. ಇದರಂತೆ ಯೋಗಿಗಳು – 'ಚಿತ್ತ'ಕ್ಕೆ ಪ್ರಾಧಾನ್ಯವನ್ನು ಕೊಟ್ಟಿರುತ್ತಾರೆ. ಚಿತ್ತವೆಂದರೆ ವಿಚಾರಾತ್ಮಕವಾದ ಅಂತಃಕರಣವಲ್ಲ, ನಿಶ್ಚಯರೂಪವಾದದ್ದೂ ಅಲ್ಲ; ಹೊರಗಿನ ಸಾಮಾನ್ಯವಾದ ಅರಿವು ಏತರಿಂದ ಆಗುವದೋ ಅದೇ ಚಿತ್ತವು. ಈ ಚಿತ್ತವನ್ನು ಒಕ್ಕಡೆಗೆ ಇಡಬೇಕಾದಾಗ 'ಚಿತ್ತವಿಟ್ಟು ಲಾಲಿಸಿರಿ' ಎನ್ನುವದನ್ನು ನೀವು ಕೇಳಿರಬಹುದು. ಚಿತ್ತವು ಬಗೆಬಗೆಯ ಮಟ್ಟಗಳಲ್ಲಿರುತ್ತದೆ; ಚಿತ್ತವೃತ್ತಿಗಳನ್ನೆಲ್ಲ ತಡೆಗಟ್ಟಿ ಸಮಾಧಿಯನ್ನು ಪಡೆಯುವ ಕ್ರಮುವನ್ನೇ ಯೋಗದಲ್ಲಿ ವಿಸ್ತರಿಸುತ್ತದೆ. ಚಿತ್ತದಿಂದ ಗ್ರಹಿಸಿದ್ದನ್ನು ಮನಸ್ಸಿನಿಂದ ಮನನ ಮಾಡಿ ಬುದ್ಧಿಯಿಂದ ನಿಶ್ಚಯಿಸುತ್ತೇವೆ. ಹೀಗೆ ಇವು ಮೂರೂ ಒಂದಕ್ಕಿಂತ ಒಂದು ಒಳಗಿನ ವೃತ್ತಿಗಳು. ಇನ್ನು ಅಹಂಕಾರವೆಂಬ ವೃತ್ತಿಯನ್ನು ಎಲ್ಲಾ ದರ್ಶನಕಾರರೂ ಲೆಕ್ಕಕ್ಕೆ ತೆಗೆದುಕೊಂಡಿರುತ್ತಾರೆ. ತಾನಲ್ಲದ ದೇಹಾದಿಗಳಲ್ಲಿ ತಾನೆಂಬ ಹೆಮ್ಮೆಯನ್ನಿಟ್ಟುಕೊಂಡಿರುವದನ್ನೇ ಅಹಂಕಾರವೆಂದು ಕರೆಯುತ್ತಾರೆನ್ನಬಹುದು.

ವೇದಾಂತಿಗಳು ಈ ನಾಲ್ಕು ವೃತ್ತಿಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡು ಸಾಧನವನ್ನು ಉಪದೇಶಿಸಿರುತ್ತಾರೆ. ಒಂದು ರಾಜ್ಯದ ಮೇಲೆ ಶತ್ರುಗಳ ಧಾಳಿಯು ನಡೆಯುತ್ತಿರುವಾಗ ಅರಸನು ತನ್ನ ನಾಲ್ಕು ಮಂತ್ರಿಗಳ ಸಲಹೆಯನ್ನೂ ಕೇಳಿ ಅವರ ಅಭಿಮತವನ್ನು ಹೊಂದುಗಡೆಮಾಡಿ ಕಾರ್ಯಾಚರಣೆಯನ್ನು ಕೈಕೊಳ್ಳುವಂತೆ ಸಾಧಕನಾದವನು ನಾಲ್ಕು ವೃತ್ತಿಗಳ ವಿಷಯವನ್ನೂ ಮನದಂದುಕೊಂಡು ನಡೆಯಬೇಕಾಗಿರುತ್ತದೆ. ಮನಸ್ಸಿನಿಂದ ವಿಚಾರಮಾಡಿ ಸುಮ್ಮನಾದರೆ ಸಾಲದು. ಬುದ್ಧಿಯಿಂದ ಒಮ್ಮೆ ವಿವೇಕವನ್ನು ಮಾಡಿಕೊಂಡು ಗೆದ್ದೆನೆಂದು ಭಾವಿಸಲೂಬಾರದು. ಏಕೆಂದರೆ ವಿಚಾರದಿಂದ ಹೋದಂತೆ ಕಂಡ ಸಂಶಯಗಳು ಮತ್ತೆ ಕವಲುಕವಲಾಗಿ ಚಿಗುರುವವು; ವಿವೇಕದಿಂದ ಪ್ರಕೃತಿಯ ಅಧ್ಯಾಸವನ್ನು ಬಿಡಿಸಿಕೊಂಡು ನೋಡಿದ ಮೇಲೂ ಮತ್ತೆ ಅಧ್ಯಾಸವು ಬಗೆಬಗೆಯಿಂದ ತನ್ನ ಕೈಚಳಕವನ್ನು ತೋರಿಸುತ್ತಲೇ ಇರುವದು. ಚಿತ್ತವನ್ನು ಸ್ವಲ್ಪ ಹೊತ್ತು ನಿಲ್ಲಿಸಿಕೊಂಡರೆ ಸಾಲದು; ಅದು ಮತ್ತೆ ಹೇಗೋ ಚದರಿಬಿಡುತ್ತದೆ. ಒಂದು ಬಗೆಯ ಅಹಂಕಾರವನ್ನು ಗೆದ್ದುಕೊಂಡೆನೆಂದು ಹಿಗ್ಗಬಾರದು; ಅದು ಮತ್ತೆ ಹೇಗೋ

ಮತ್ತೊಂದು ಬಗೆಯ ಅಭಿಮಾನವಾಗಿ ತೋರಿಕೊಳ್ಳುತ್ತದೆ. ಅಂತಃಕರಣವು ಇರುವ ವರೆಗೂ ಅದು ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ - ಎಂಬ ರೂಪಗಳಿಂದ ಮತ್ತೆ ಮತ್ತೆ ತೋರಿಕೊಳ್ಳುತ್ತಲೇ ಇರುತ್ತದೆ. ಇದೇ ಅದರ ಸ್ವಭಾವವು.

ಆದ್ದರಿಂದ ನೀವು ಅಂತಃಕರಣದ ನಾಲ್ಕು ವೃತ್ತಿಗಳಿಗೂ ಸಮನಾಗಿ ಕೆಲಸವನ್ನು ಕೊಡುತ್ತಿರಬೇಕು. ಬರಿಯ ಒಣವಿಚಾರದಿಂದ ತೃಪ್ತರಾಗಬೇಡಿರಿ. ಒಣ ತರ್ಕವನ್ನು ನಂಬಬೇಡಿರಿ. ತರ್ಕಕ್ಕೆ ಆಕಾರಮಾತ್ರದಿಂದ ತೃಪ್ತಿಯಾಗುತ್ತದೆ. ಒಮ್ಮೆ ಬೆಂಗಳೂರಿಗೆ ಒಬ್ಬ ಲಕ್ಕೋಟೆ ಪ್ರಶ್ನೆಯನ್ನು ಹೇಳುವ ಚತುರನು ಬಂದಿದ್ದನಂತೆ. ಕೇಳುವವರು ಲಕ್ಕೋಟೆ ಯೊಳಗಡೆಯಲ್ಲಿ ಬರೆದಿಟ್ಟಿದ್ದ ಪ್ರಶ್ನೆಗೆ ಅವನು ಉತ್ತರವನ್ನು ಹೇಳುತ್ತಿದ್ದನಂತೆ. ಆಗ ಅವನು ಕೊಟ್ಟ ಉತ್ತರವು 'ಆರು ತಿಂಗಳಿಗೆ ಎಂದಾಗಿತ್ತು. ಒಬ್ಬ ವಿನೋದಗಾರನು ಹಾಕಿದ್ದ ಪ್ರಶ್ನೆಗೆ ಉತ್ತರವಿದು ಪ್ರಶ್ನೆಯೇನು ಬಲ್ಲಿರಾ? "ನಂದಿಬೆಟ್ಟವು ಬೆಂಗಳೂರು ಚೌಕಕ್ಕೆ ಯಾವಾಗ ಬರುತ್ತದೆ." ಎಂಬುದೇ! ಒಂದು ಮರದಲ್ಲಿರುವ ಹಕ್ಕಿಗಳಲ್ಲಿ ಒಂದನ್ನು ಒಂದು ಬಂದೂಕಿನಿಂದ ಹೊಡೆದು ಕೊಂದರೆ ನಾಲ್ಕು ಬಂದೂಕಿನಿಂದ ಎಷ್ಟು ಕೊಲ್ಲಬಹುದು? - ಎಂಬ ಪ್ರಶ್ನೆಗೆ 'ನಾಲ್ಕು ಹಕ್ಕಿಗಳನ್ನು ಕೊಲ್ಲಬಹುದು' ಎಂಬ ಉತ್ತರ ವಷ್ಟೇ, ಈ ಉತ್ತರವು ಸರಿಯಾದದ್ದು, ಉತ್ತರವು ಒಣತರ್ಕದ ಆಧಾರದ ಮೇಲೆ ನಿಂತಿದೆ. ತತ್ತ್ವವು ಒಣತರ್ಕಕ್ಕೆ ಎಂದಿಗೂ ನಿಲುಕಲಾರದು.

ಭಗವಂತನು ಗೀತೆಯಲ್ಲಿ ಏನು ಹೇಳಿರುತ್ತಾನೆಂಬುದನ್ನು ನೆನಪಿಡಿರಿ. **"ಮಚ್ಚಿತ್ತೋ ಯುಕ್ತ ಆಸೀತ"** (ನನ್ನಲ್ಲಿಯೇ ಚಿತ್ತವುಳ್ಳವನಾಗಿ, ನಾನೇ ಹೆಚ್ಚೆಂದು ತಿಳಿದ ಸಮಾಹಿತನಾಗಿರಬೇಕು) **"ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ ತರಿಷ್ಯಸಿ"** (ನನ್ನಲ್ಲಿಯೇ ಚಿತ್ತವನ್ನಿಟ್ಟುಕೊಂಡಿದ್ದರೆ ಎಲ್ಲಾ ಎಡರುಗಳನ್ನೂ ದಾಟುವೆ) ಎಂದು ಹೇಳಿ ರುವಂತೆ ಯಾವಾಗಲೂ ಪರಮೇಶ್ವರನಲ್ಲಿಯೇ ಚಿತ್ತವನ್ನಿಟ್ಟುಕೊಳ್ಳಿರಿ; **"ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ"** (ನನ್ನಲ್ಲಿಯೇ ಮನಸ್ಸನ್ನಿಟ್ಟು, ನನ್ನಲ್ಲಿಯೇ ಬುದ್ಧಿಯನ್ನು ತೂಗಿಸು) ಎಂದಿರುವಂತೆ ಭಗವಂತನಲ್ಲಿಯೇ ಮನನ ನಿಶ್ಚಯಾತ್ಮಕವಾದ ಅಂತಃಕರಣವೃತ್ತಿಗಳನ್ನು ಸೇರಿಸಿಕೊಳ್ಳುವದಕ್ಕೆ ಯತ್ನಿಸಿರಿ ; **"ಯದ ಹಂಕಾರಮಾಶ್ರಿತ್ಯ"** ,**"ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್ । ವಿಮುಚ್ಯನಿರ್ಮಮಃ ಶಾನ್ತೋ ಬ್ರಹ್ಮಭೂಯಾಯ ಕಲ್ಪತೇ"** - ಎಂದಿರುವಂತೆ ಅಹಂಕಾರಮಮಕಾರಗಳಿಂದ ಮಾಡುವ ಕೆಲಸವು ವ್ಯರ್ಥವೆಂದು ನಿಶ್ಚಯಿಸಿ ನಿರಭಿಮಾನದಿಂದ ಭಗವಂತನಲ್ಲಿಯೇ ಶಾಂತಿಯನ್ನು ಪಡೆಯುವದಕ್ಕೆ

ಹವಣಿಸಿರಿ. ಯಾವಾಗಲೋ ಒಂದು ಸಲ ಚಿತ್ತವನ್ನು ಭಗವಂತನ ಕಡೆಗೆ ತಿರುಗಿಸಿ ಒಂದು ಸಲ ಪರಮಾತ್ಮವಿಚಾರವನ್ನು ಮಾಡಿ, ಒಂದು ಸಲ ವಿವೇಕವನ್ನು ಅಭ್ಯಾಸ ಮಾಡಿ ಒಂದು ಸಲ ಅಹಂಕಾರವನ್ನು ಗೆಲ್ಲುವ ಪ್ರಯತ್ನವನ್ನು ಮಾಡಿದರೆ ಸಾಲದು; ಶನಿಶನಿವಾರ ದೇವಾಲಯಕ್ಕೆ ಹೋಗಿಬರುವಂತೆ ಇದೊಂದು ಪದ್ಧತಿಯಾಗಿದ್ದರೆ ಸಾಕೆಂದು ತಿಳಿಯಬೇಡಿರಿ. ನಮ್ಮ ಸರ್ವವ್ಯವಹಾರದಲ್ಲಿಯೂ ಪರಮೇಶ್ವರನೇ ನಮ್ಮ ಚಿತ್ತಮನಬುದ್ಧಿಗಳಿಗೆ ಆಶ್ರಯನಾಗಿರಬೇಕು, ಅಹಂಕಾರವನ್ನು ಯಾವಾಗಲೂ ಮೆಟ್ಟಿ ತುಳಿಯುತ್ತಲೇ ಇರಬೇಕು. ಹಾಗಾದರೆ ಮಾತ್ರ ನಮ್ಮ ಇಷ್ಟಾರ್ಥವು ನೆರವೇರೀತು.

ಚಿತ್ತಕ್ಕೆ ಧ್ಯಾನವನ್ನು ಕೊಡುತ್ತಲೇ ಇರಬೇಕು; ಅಂತಃಕರಣವು ಮನೋರೂಪ ವಾದರೆ ಕೂಡಲೆ ಅದನ್ನು ಸದ್ವಿಚಾರಕ್ಕೆ ಹತ್ತಿಸಬೇಕು; ಬುದ್ಧಿಯಿಂದ ನಿತ್ಯಾನಿತ್ಯ, ಸತ್ಯ ಮಿಥ್ಯ, ಮುಂತಾದವುಗಳ ವಿವೇಕವನ್ನು ಮಾಡುತ್ತಲೇ ಇರಬೇಕು; ಅಮಾನಿತ್ವ ಅದಂಭಿತ್ವ ಮುಂತಾದ ಗುಣಗಳಿಂದ ಅಹಂಕಾರವನ್ನು ಹಿಮ್ಮೆಟ್ಟಿಸುತ್ತಿರಬೇಕು. ಇದು ಹೇಗೆ ಸಾಧ್ಯವೆನ್ನುವಿರೊ? ನಮ್ಮ ಸಕಲ ಕರ್ಮಗಳೂ ಭಗವಂತನ ಅರ್ಚನೆಯಾಗ ಬೇಕು. ನಮ್ಮ ವಾಕ್ಕುಗಳೆಲ್ಲವೂ ಅವನ ನಾಮಜಪಪಾರಾಯಣವಾಗಬೇಕು, ಆಗ ಅಂತಃಕರಣವು ನಮ್ಮ ವಶಕ್ಕೆ ಬರುತ್ತದೆ; ಅದರ ವೃತ್ತಿಗಳನ್ನೂ ಪರಮೇಶ್ವರನಲ್ಲಿಡುವದಕ್ಕೆ ಸಾಧ್ಯವಾಗುತ್ತದೆ – ಹೀಗೆಂದು ಬಲ್ಲವರೆಲ್ಲರೂ ಹೇಳುತ್ತಿದ್ದಾರೆ.

ಸಾಧಕನಾದವನು ಯಾವಾಗಲೂ ಆತ್ಮಪರೀಕ್ಷೆಯನ್ನು ಮಾಡಿಕೊಳ್ಳುತ್ತಲೇ ಇರ ಬೇಕು. ನನ್ನ ಚಿತ್ತವು ಆತ್ಮಸ್ವರೂಪದ ಅನುಸಂಧಾನವನ್ನೇ ಮಾಡುತ್ತಿದೆಯೋ ಹೊರ ಮುಖವಾಗಿದೆಯೊ, ಮನಸ್ಸು ಭಗವದ್ವಿಚಾರವನ್ನೇ ಮಾಡುತ್ತಿದೆಯೊ ಅಸದ್ವಿಚಾರಕ್ಕೆ ಹಾತುವರಿಯುತ್ತಿದೆಯೊ, ಬುದ್ಧಿಯು ಆತ್ಮಾನಾತ್ಮವಿವೇಚನೆಮಾಡಿಕೊಳ್ಳುತ್ತಿದೆಯೋ, ಇಲ್ಲದೆ, ಅಧ್ಯಾಸಪೂರ್ವಕವಾದ ವ್ಯವಹಾರದಲ್ಲಿಯೇ ಅಭಿರುಚಿಯನ್ನು ತೋರಿಸುತ್ತಿರುವದೋ, ಅಹಂಕಾರವು ಕುಗ್ಗುತ್ತಾ ಪರಮಾತ್ಮನ ಪ್ರಕಾರವು ಹೊರಸೂಸುವದಕ್ಕೆ ಅವಕಾಶವನ್ನು ಕೊಡುತ್ತದೆಯೋ, ಇಲ್ಲವೆ ತಾನೇ ತಾನಾಗಿ ಹೊರಹೊಮ್ಮಿಕೊಂಡು ರಜಸ್ತಮೋಗುಣಗಳ ಹೆಬ್ಬುಗೆಯನ್ನು ಪ್ರೋತ್ಸಾಹಿಸುತ್ತಿದೆಯೊ? ಎಂದು ತನ್ನಲ್ಲಿ ತಾನು ವಿಚಾರಮಾಡಿ ಕೊಳ್ಳುತ್ತಿರಬೇಕು. ಇದೇ ಮುಮುಕ್ಷುವಿನ ಕರ್ತವ್ಯವು; ಹೀಗೆ ಪರಮಾತ್ಮನೇ ತನಗೆ ಬೇಕೆಂದು ಹವಣಿಸುವವರೇ ಆತನ ಅನುಗ್ರಹದಿಂದ ತತ್ತ್ವಜ್ಞಾನವನ್ನು ಪಡೆದು ಕೃತಕೃತ್ಯರಾಗುವರು.

ಖಖಖಖಖ

# ನಲಂದದ ವಿಶ್ವವಿದ್ಯಾನಿಲಯ

ಸಂಸ್ಕೃತದ ಹೆಗ್ಗಳಿಕೆಯನ್ನು ಹೇಗೆ ಜನರಿಗೆ ಮನೋರಂಜಕವಾಗುವಂತೆ ಮಾಡ ಬೇಕೆಂಬ ಆ ವಿಷಯವನ್ನು ಪ್ರಸ್ತಾಪಿಸುವ ಮೊದಲು ಐತಿಹಾಸಿಕ ಕಾಲದಲ್ಲಿ ಇದೇ ಭರತಖಂಡದಲ್ಲಿ ಪ್ರೌಢವಿದ್ಯಾಭ್ಯಾಸಕ್ಕೆ ಮಾಡಿದ್ದ ಏರ್ಪಾಡೊಂದನ್ನು ಕುರಿತು ಬರೆಯ ಬೇಕೆಂದು ಮನಸ್ಸಾಗಿದೆ. ಏಕೆಂದರೆ ಅದರ ಪರಿಶೀಲನೆಯಿಂದ ಸಂಸ್ಕೃತಪ್ರಚಾರಕ್ಕೆ ನಾವು ಕೈಕೊಳ್ಳಬಹುದಾದ ಸಾಧನಗಳಿಗೆ ಕೆಲವು ಸೂಚನೆಗಳು ನಮಗೆ ದೊರಕಬಹು ದಾಗಿದೆ. **ಆರ್ಯನ್ ಪಾತ್** ಎಂಬ ಇಂಗ್ಲಿಷ್ ಪತ್ರಿಕೆಯ ಹಳೆಯ ಸಂಚಿಕೆಯೊಂದರಲ್ಲಿ ಡಾ. ರಾಧಾಕುಮುದ ಮುಖರ್ಜಿಯವರು ಬರೆದಿದ್ದ ಲೇಖನದಿಂದ ಇಲ್ಲಿ ವಿಷಯ ಗಳನ್ನು ಸಂಗ್ರಹಿಸಲಾಗಿದೆ.

ನಲಂದ ವಿಶ್ವವಿದ್ಯಾನಿಲಯವು ಆಗಿನ ಕಾಲದಲ್ಲಿ ಪ್ರಾಚ್ಯದೇಶದಲ್ಲೆಲ್ಲ ದೊಡ್ಡ ದಾಗಿದ್ದ ವಿಶ್ವವಿದ್ಯಾನಿಲಯವೆನ್ನಬಹುದು. ಅದರ ವರ್ಣನೆಯನ್ನು ಹ್ಯೂ-ಎನ್-ತ್ಸಾಂಗ್ ಮತ್ತು ಇತ್ಸಿಂಗ್ ಎಂಬ ಇಬ್ಬರು ಚೀನಾದೇಶದ ಯಾತ್ರಿಕರು ಬರೆದಿಟ್ಟಿರುತ್ತಾರೆ. ಅವರಿಬ್ಬರೂ ಈ ವಿದ್ಯಾನಿಲಯದಲ್ಲಿ ಹಲವು ವರ್ಷಗಳಿದ್ದು ತಮ್ಮ ಸ್ವಂತ ಅನುಭವ ದಿಂದಲೇ ಈ ವರ್ಣನೆಯನ್ನು ಕೊಟ್ಟಿರುತ್ತಾರೆ. ವಿದ್ಯಾನಿಲಯದಲ್ಲಿ ಆಗ 8500 ವಿದ್ಯಾರ್ಥಿಗಳೂ 1510 ಜನ ಉಪಾಧ್ಯಾಯರೂ ಇದ್ದರೆಂದು ಹ್ಯೂ-ಎನ್-ತ್ಸಾಂಗನು ಹೇಳಿರುವದನ್ನೂ ಕೇಳಿದರೆ ಯಾರು ತಾನೆ ಆಶ್ಚರ್ಯದಿಂದ ಚಮಕಿತರಾಗದೆ ಇದ್ದಾರು!

ಹತ್ತು ಸಾವಿರ ಜನಸಂಖ್ಯೆಯ ನಗರಿಯಾಗಿದ್ದ ಈ ವಿಶ್ವವಿದ್ಯಾಲಯಕ್ಕೆ ಭರತ ಖಂಡದ ಎಲ್ಲಾ ಭಾಗಗಳಿಂದಲೂ ವಿದ್ಯಾರ್ಥಿಗಳು ಬರುತ್ತಿದ್ದರು. ಕಾಶಿಗೆ ಈಗಲೂ ಯಾತ್ರಿಕರು ತಂಡತಂಡವಾಗಿ ನುಗ್ಗಿಬರುತ್ತಿರುವಂತೆ ಈ ಸುಪ್ರಸಿದ್ಧ ವಿದ್ಯಾಪೀಠಕ್ಕೆ ಎಲ್ಲಾ ಕಡೆಯಿಂದಲೂ ವಿದ್ಯಾರ್ಜನೆಗಾಗಿ ಜನರು ಬರುತ್ತಿದ್ದದ್ದೇನೂ ಅಚ್ಚರಿಯಲ್ಲ. ಆದರೆ ಚೀನಾ, ಜಪಾನ್, ಕೊರಿಯಾ, ಮಂಗೋಲಿಯಾ, ತೊಖಾರ ಈ ಪ್ರಾಂತ್ಯಗಳಿಂದಲೂ ವಿದ್ಯಾರ್ಥಿಗಳು ಬರುತ್ತಿದ್ದರಂತೆ; ಅವರ ಹೆಸರು 'ನಂಚಿಯೋನ' ಅನುಕ್ರಮಣಿಕೆ ಎಂಬ ಚೀಣಾಗ್ರಂಥದಲ್ಲಿ ಕಾಣಬರುತ್ತದೆ.

ವಿದ್ಯಾಲಯದಲ್ಲಿ ಈಗಿನ ಕಾಲೇಜುಗಳಲ್ಲಿರುವಂತೆ 'ತರಗತಿ' ಗಳಿರಲಿಲ್ಲ, ವಿದ್ಯಾರ್ಥಿಗಳಲ್ಲಿ ಒಬ್ಬರೊಬ್ಬರಿಗಿರುವ ವೈಯಕ್ತಿಕಭೇದಗಳನ್ನು ಗಣಿಸದೆ ಗುಂಪುಗುಂಪಾಗಿ

ಕೂಡಿಸಿ ತಲೆಗೆಲ್ಲ ಒಂದೇ ಮಂತ್ರವೆಂದ ಅರೆಬರೆಶಾಸ್ತ್ರಿಯಂತೆ ಎಲ್ಲರಿಗೂ ಒಂದೇ ಬಗೆಯ ವಿದ್ಯೆಯನ್ನು ಹೇಳುವ ಪದ್ಧತಿ ಅಲ್ಲಿರಲಿಲ್ಲ. ಒಬ್ಬ ಉಪಾಧ್ಯಾಯನಿಗೆ ಎಷ್ಟು ಜನ ವಿದ್ಯಾರ್ಥಿಗಳು ಇದ್ದರೆಂಬುದನ್ನು ಮೇಲೆ ಕೊಟ್ಟಿರುವ ವಿದ್ಯಾರ್ಥಿ ಸಂಖ್ಯೆ ಯಿಂದಲೇ ಕಲ್ಪಿಸಬಹುದು. ಒಂದು ದಿನಕ್ಕೆ ನೂರು ಬೇರೆ ಬೇರೆ ವಿಷಯಗಳನ್ನು ಕುರಿತು ನೂರು ನೂರು ಪಾಠಗಳು ಆಗುತ್ತಿದ್ದವೆಂದು ಹ್ಯೂ-ಎನ್-ತ್ಸಾಂಗನು ಬರೆದಿರು ವದನ್ನು ಮನದಂದರೆ ಗುರು ಶಿಷ್ಯರಿಗೆ ಇದ್ದ ನಿಕಟಸಂಬಂಧವೂ ವಿದ್ಯಾಲಯದಲ್ಲಿ ಆಗುತ್ತಿದ್ದ ಕೆಲಸದ ಪರಿಮಾಣವೂ ವ್ಯಕ್ತವಾಗುತ್ತದೆ.

ನಲಂದ ವಿದ್ಯಾಲಯದಲ್ಲಿ ಮುಖ್ಯವಾಗಿ ವಿದ್ವಾಂಸರು ಪ್ರೌಢಪಾಠಕ್ಕೇ ಸೇರು ತ್ತಿದ್ದರು. ವಿದೇಶದ ವಿದ್ಯಾರ್ಥಿಗಳು ಇಲ್ಲಿಗೆ ಬಂದು ತಯಾರಾದ ಬಳಿಕ ಮಹಾ **ವಿದ್ವಾಂಸರೆನಿಸಿಕೊಂಡು** ತಮ್ಮ ದೇಶಕ್ಕೆ ತೆರಳುತ್ತಿದ್ದರು. ಈ ಕಾರಣದಿಂದ ಬಂದ ಬಂದವರಿಗೆಲ್ಲ ಇಲ್ಲಿ ಸ್ಥಲವು ದೊರಕುತ್ತಿರಲಿಲ್ಲ. ಬಂದ ವಿದ್ಯಾರ್ಥಿಯನ್ನು ವಿದ್ಯಾಲಯದ ದ್ವಾರಪಾಲಕರಂತಿದ್ದ ಘನವಿದ್ವಾಂಸರುಗಳು ಪರೀಕ್ಷೆ ಮಾಡಿಯೇ ಪ್ರವೇಶವನ್ನು ಕೊಡುತ್ತಿದ್ದರು. ವಿದ್ಯಾಭ್ಯಾಸಕ್ಕೆಂದು ಬಂದವರಲ್ಲಿ ನೂರಕ್ಕೆ ಇಪ್ಪತ್ತು ಜನರಿಗೆ ಮಾತ್ರ ಪ್ರವೇಶವು ಸಿಕ್ಕುತ್ತಿತ್ತು. ಆದ್ದರಿಂದ ಇಲ್ಲಿ ಅಭ್ಯಾಸಮಾಡಿದವರು ಆಯಾ ವಿದ್ಯೆಗಳಲ್ಲಿ ದಿಗ್ದಂತಿಗಳೆನಿಸಿಕೊಂಡೇ ಹೊರಡುತ್ತಿದ್ದರು. ನಲಂದ ವಿದ್ವಾಂಸರೆಂದರೆ ಎಲ್ಲೆಲ್ಲಿಯೂ ಗೌರವವಿರುತ್ತಿತ್ತು.

ಇಲ್ಲಿ ಮಾಡುತ್ತಿದ್ದ ಉಪದೇಶಕ್ರಮವೂ ಅಸಾಧಾರಣವಾಗಿರುತ್ತಿತ್ತು. ಬೇರೆ ಬೇರೆಯ ಸಿದ್ಧಾಂತಗಳ ಪ್ರತಿನಿಧಿಗಳಾದ ವಿದ್ವಾಂಸರುಗಳು ಮಾಡುವ ಚರ್ಚೆಯೇ ಇಲ್ಲಿ ನಡೆಯುತ್ತಿದ್ದ ಅಭ್ಯಾಸವು. ಅಧ್ಯಯನ, ಸಂವಾದ ಇವುಗಳಿಂದ ಹಗಲೂ ಇರುಳೂ ಕಾಲಕ್ಷೇಪಮಾಡುತ್ತಿದ್ದ ವಿದ್ವಾಂಸರ ಪರಿಷತ್ತೇ ಈ ವಿದ್ಯಾಲಯವು **"ತದ್ವಿದ್ಯೈಃ ಸಹ ಸಂವಾದಃ"** ಎಂಬಂತೆ ತತ್ತ್ವನಿರ್ಧಾರಣೆಗಾಗಿ, ವಿದ್ವಾಂಸರುಗಳೊಡನೆ ಚರ್ಚೆಮಾಡಿ ಇತ್ಯರ್ಥಮಾಡುವ ಪದ್ಧತಿಯೇ ಅತ್ಯುತ್ತಮವೆಂಬುದನ್ನು ಅವರು ಮನಗಂಡಿದ್ದರು. ಜನಕನ ಸಭೆಯಲ್ಲಿ ಗೋಸಹಸ್ರಕ್ಕಾಗಿ ಚರ್ಚೆಮಾಡಿದ ಕುರುಪಂಚಾಲರ ಪರಿಷತ್ತಿನಂತೆ ಆ ವಿದ್ಯಾಪೀಠವು ವಿವಿಧ ಸಿದ್ಧಾಂತಗಳ ಅನುಯಾಯಿಗಳ ಚರ್ಚಾಗೋಷ್ಠಿಯಾಗಿರು ತ್ತಿತ್ತು. ನಲಂದವು ಮುಖ್ಯವಾಗಿ ಬೌದ್ಧರ ವಿದ್ಯಾಪೀಠವಾಗಿತ್ತಾದರೂ ಅಲ್ಲಿ ವೇದಗಳು ದರ್ಶನಗಳು, ಆಯುರ್ವೇದ ಇವೆಲ್ಲವುಗಳ ಅಭ್ಯಾಸವೂ ಸಾಗುತ್ತಿತ್ತು. ಬೌದ್ಧರ

ಹದಿನೆಂಟು ಪ್ರಭೇದಗಳೂ ಅಲ್ಲಿ ಸೇರುತ್ತಿದ್ದವು. ಹೇತುವಿದ್ಯೆ, ಸಾಂಖ್ಯ, ಶಬ್ದವಿದ್ಯೆ, ಚಿಕಿತ್ಸಾವಿದ್ಯೆ, ಅಥರ್ವವೇದವೇ ಮುಂತಾದ ವೇದಗಳು, ಯೋಗ, ವ್ಯಾಕರಣ ಇವೆಲ್ಲವೂ ಅಲ್ಲಿ ಪ್ರಚಲಿತವಾಗಿದ್ದವು. ಆ ವಿದ್ಯಾಲಯದ ಕುಲಪತಿಯಾಗಿದ್ದ ಶೀಲ ಭದ್ರನು ಯೋಗದಲ್ಲಿ ನಿಷ್ಣಾತನಾಗಿದ್ದನು; ಆತನ ಶಿಷ್ಯನಾಗಿ ಯೋಗ ಶಾಸ್ತ್ರಾಭ್ಯಾಸ ವನ್ನು ಮಾಡುವದಕ್ಕಾಗಿಯೇ ಹ್ಯೂ -ಎನ್-ತ್ಸಾಂಗನು ಬಂದಿದ್ದನು. ಆಗಿನ ಚಕ್ರವರ್ತಿ ಯಾಗಿದ್ದ ಶ್ರೀಹರ್ಷನು ತ್ಸಾಂಗನು ಮಹಾಯಾನದಲ್ಲಿ ಅಪ್ರತಿಮ ವಿದ್ವಾಂಸನೆಂದು ಪರಿಗಣಿಸಿದ್ದನು. ಈ ರೀತಿಯಲ್ಲಿ ಪರಸ್ಪರವಾದ ಪ್ರತಿವಾದಿಗಳಿಂದ ಒಬ್ಬರನ್ನೊಬ್ಬರು ಖಂಡಿಸುತ್ತಿದ್ದ ಆಗಿನ ಸೈದ್ಧಾಂತಿಕರಿಗೆಲ್ಲ ನಲಂದವು ಒಂದು ಸಾಧಾರಣವಾದ ಸಮಾಗಮಸ್ಥಾನವಾಗಿತ್ತು. ಆದರೂ ಆ ಪ್ರಖ್ಯಾತಸ್ಥಾನದ ಗೌರವಕ್ಕಾಗಲಿ ಶಾಂತಿಗಾಗಲಿ ಈ ಚರ್ಚೆಗಳಿಂದ ಎಳ್ಳಷ್ಟೂ ಕುಂದಕವುಂಟಾಗಿರಲಿಲ್ಲ.

ನಲಂದದಲ್ಲಿದ್ದ ಕಟ್ಟಡಗಳು ಶತಮಾನಗಟ್ಟಲೆಯಾಗಿ ಬೆಳೆದುಕೊಂಡು ಬಂದಿದ್ದವು. ಕೆಲವರು ವರ್ತಕರು ಕ್ರಿ.ಪೂ. ಐದನೆಯ ಶತಮಾನದಲ್ಲಿ ಬುದ್ಧನಿಗೆಂದುಕೊಟ್ಟಿದ್ದ ದಾನವು ಆ ನಿವೇಶನವು. ಕ್ರಿ.ಶ. ಏಳನೆಯ ಶತಮಾನದಲ್ಲಿ ಹ್ಯೂ-ಎನ್-ತ್ಸಾಂಗನು ಕಂಡಾಗ ಅಲ್ಲಿ ಮುಗಿಲನ್ನು ಮುಟ್ಟುತ್ತಿದ್ದ ಹಲವು ಅಂತಸ್ತುಗಳ ವಿಶಾಲವಾದ ಭವನಗಳು ನಿರ್ಮಿತವಾಗಿದ್ದವು. ಅವುಗಳಲ್ಲಿ ಒಂದೊಂದನ್ನು ಒಬ್ಬೊಬ್ಬ ರಾಜನು ದಾನಮಾಡಿದ್ದನು. ಸುಮಾತ್ರ ದ್ವೀಪದ ರಾಜನು ಒಂದು ದೊಡ್ಡ ವಿದ್ಯಾಲಯದ ಕಟ್ಟಡ ವನ್ನು ಕಟ್ಟಿಸಿಕೊಟ್ಟಿದ್ದನು. ದೈನಂದಿನ ಖರ್ಚಿಗೆ ನೂರು ಗ್ರಾಮಗಳು ಆ ವಿಶ್ವ ವಿದ್ಯಾಲಯಕ್ಕೆ ಸೇರಿದ್ದವೆಂದು ಹ್ಯೂ-ಎನ್-ತ್ಸಾಂಗನು ಬರೆದಿರುತ್ತಾನೆ. ಆದರೂ ವಿದ್ಯಾಲಯದಲ್ಲಿದ್ದವರಿಗೆಲ್ಲ ಅಶನವಸನವಾಸಸ್ಥಾನಗಳನ್ನು ಧರ್ಮಾರ್ಥವಾಗಿ ಏರ್ಪಡಿ ಸುವದಕ್ಕೆ ಆಗುವ ಖರ್ಚುವೆಚ್ಚಗಳಿಗೆ ಇಷ್ಟು ಸಾಕಾಗುತ್ತಿರಲಿಲ್ಲ. ನೆರೆಹೊರೆಯ ಇನ್ನೂರು ಗೃಹಸ್ಥರು ಬೇಕಾದ ಸೌಕರ್ಯಗಳನ್ನು ಒದಗಿಸುತ್ತಿದ್ದರು. ಎಷ್ಟೇ ಕಡಿಮೆ ಎಂದರೂ ದಿನಕ್ಕೆ ಇನ್ನೂರು ಮಣ ಅಕ್ಕಿ, ಅಷ್ಟೇ ಹಾಲು, ಅಷ್ಟೇ ತುಪ್ಪ ಅದಕ್ಕೆ ತಕ್ಕ ಉಳಿದ ಲವಾಜಮೆಯೂ ಬೇಕಾಗುತ್ತಿತ್ತು!

ಈ ವಿದ್ಯಾಪೀಠದಲ್ಲಿ ಸಾವಿರದ ಐನೂರು ಉಪಾಧ್ಯಾಯರು ಇದ್ದರೆಂದು ಆಗಲೆ ಹೇಳಿದ್ದಾಗಿದೆ. ಅಲ್ಲಿದ್ದ ಪುಸ್ತಕಭಂಡಾರಕ್ಕೆ ಮೂರು ದೊಡ್ಡ ಕಟ್ಟಡಗಳಿದ್ದವು; ಅವುಗಳಲ್ಲಿ ಒಂದು ಒಂಬತ್ತು ಮಹಡಿಗಳ ಭವನವು. ಇತ್ಸಿಂಗನೊಬ್ಬನೇ ನಾಲ್ಕು ನೂರು ಹಸ್ತಲಿಖಿತ

ಗ್ರಂಥಗಳನ್ನು ನಕಲುಮಾಡಿಕೊಂಡನಂತೆ! ಅವುಗಳಲ್ಲಿ ಹಲವು ನೇಪಾಲದಲ್ಲಿಯೂ ತಿಬ್ಬೆತ್ತಿನಲ್ಲಿಯೂ ಈಗಲೂ ಇರುತ್ತವೆ.

ತತ್ತ್ವದಲ್ಲಿ ಬದ್ಧಾದರರಾದ ಹಲವು ವಿದ್ವಾಂಸರು ತಿಬ್ಬೆತ್ತು, ಚೀಣ ಮುಂತಾದ ದೇಶಗಳಿಗೆ ಹೋಗಿ ಅಲ್ಲಿಯ ಭಾಷೆಗಳಿಗೆ ಸಂಸ್ಕೃತ ಮೂಲಗ್ರಂಥಗಳನ್ನು ಅನುವಾದ ಮಾಡಿದರು. ಪ್ರಯಾಣ ಸೌಕರ್ಯವಿಲ್ಲದಿದ್ದ ಆ ಕಾಲದಲ್ಲಿ ಆ ಮಹಾಶಯರು ಪಟ್ಟ ಕಷ್ಟಗಳಿಂದಲೇ ಅವರಿಗೆ ವಿದ್ಯಾಪ್ರಚಾರದಲ್ಲಿ ಎಂಥ ಆದರವಿತ್ತೆಂಬುದನ್ನು ಸೂಚಿಸುತ್ತದೆ. ಚೀಣದೇಶಕ್ಕೆ ಹೋಗಬೇಕಾದರೆ ಮರುಭೂಮಿಗಳನ್ನು ದಾಟಬೇಕಾಗುತ್ತಿತ್ತು. ಗುಡ್ಡ ಬೆಟ್ಟಗಳನ್ನು ಹತ್ತಿ ಇಳಿಯಬೇಕಾಗುತ್ತಿತ್ತು. ಜನವಸತಿಯಿಲ್ಲದ ಪ್ರಾಣಕ್ಕೂ ಅಪಾಯವಿದ್ದ ಕಾಂತಾರಗಳನ್ನು ಹಾಯ್ದುಹೋಗಬೇಕಾಗಿತ್ತು. ಆಗಿನ ರಾಜಕೀಯ ಸ್ಥಿತಿಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಮನೆಮಠಗಳನ್ನೂ ಹೆಂಡಿರುಮಕ್ಕಳನ್ನೂ ಬಿಟ್ಟು ಕಾಣದಕೇಳದ ಇದ್ದ ನಡೆನುಡಿಗಳಲ್ಲಿ ತಮ್ಮ ದೇಶಕ್ಕಿಂತ ಅತ್ಯಂತ ಭಿನ್ನವಾಗಿದ್ದ ಈ ದೇಶಗಳಿಗೆ ಕೇವಲ ಜ್ಞಾನಪ್ರಸಾರಕ್ಕೆಂದೇ ಹೋದ ಆ ಮಹಾತ್ಮರ ಎದೆಯನ್ನೂ ಉತ್ಸಾಹವನ್ನೂ ತತ್ತ್ವಾದರವನ್ನೂ ಎಷ್ಟೆಂದು ಕೊಂಡಾಡೋಣ!

ಇಂಥ ಕಷ್ಟನಿಷ್ಠುರಗಳನ್ನೂ ಸಹಿಸಿಕೊಂಡು ತಲೆತಲಾಂತರದವರೆಗೂ ಒಂದೇ ಸ್ಥೈರ್ಯದಿಂದ ಮಾಡಿದ ಫಲವಾಗಿ ಭರತಖಂಡದ ಕೀರ್ತಿಯು ವಿದೇಶಗಳಲ್ಲೆಲ್ಲ ಹರಡಿತು. ರಾಜ್ಯದಾಹದಿಂದ ಸೇನೆಗಳನ್ನೂ ಘಾತುಕಾಸ್ತ್ರಗಳನ್ನೂ ತೆಗೆದುಕೊಂಡು ರಕ್ತಪಾತ ಪೂರ್ವಕವಾಗಿ ಚಕ್ರಾಧಿಪತ್ಯವನ್ನು ಕಟ್ಟಿದ ಶೂರರನ್ನು ಹಡೆದ ಕೀರ್ತಿಯು ಮಿಕ್ಕ ದೇಶಗಳಿಗೆ ಬರಬಹುದು. ಆದರೆ ಎಲ್ಲಾ ಬಗೆಯ ಸಂಕಟಗಳನ್ನೂ ತಾವೇ ಸಹಿಸಿಕೊಂಡು ತಮ್ಮ ಶಾಂತಿಸಂದೇಶದಿಂದ ಪರದೇಶಗಳ ವಿದ್ವಾಂಸರ ಬುದ್ಧಿಯನ್ನೆಲ್ಲ ಸೂರೆಗೈದ ಮಹನೀಯರನ್ನು ಹೊರಕ್ಕೆ ತಂದ ಧವಲಯಶಸ್ಸು ಭರತಖಂಡಕ್ಕೆ, ಅದರಲ್ಲಿಯೂ ನಲಂದ ವಿದ್ಯಾಪೀಠಕ್ಕೆ ಇಂದಿಗೂ ಮೀಸಲಾಗಿದೆ.

# ಹೊಸ ಮೈಸೂರಿಗೆ ಸ್ವಾಗತ

ಮೈಸೂರು ಹಿಗ್ಗಲಿದೆ - ಕನ್ನಡವನ್ನಾಡುವವರೆಲ್ಲರೂ ಹೊಸ ಮೈಸೂರಿನಲ್ಲಿ ಒಂದುಗೂಡಲಿರುತ್ತಾರೆ. ಹೊಸ ಮೈಸೂರಿಗೆ ಸ್ವಾಗತ! ಮೈಸೂರು ಮಹಿಷಾಸುರನ ಮದವನ್ನು ಮರ್ದಿಸಿದ ದೇವಿ ಚಾಮುಂಡಿಯ ನೆನಪವನ್ನು ಕೊಡುವ ಹೆಸರು. ಮಹಿಷಾಸುರನೆಂಬುದು ರಾಜಸತಾಮಸಗಳ ಬೆರಕೆಯ ಚಿತ್ತವನ್ನು ನೆನಪಿಗೆ ತರುವ ಹೆಸರು. ಮಹಿಷಾಸುರಮರ್ದಿನಿಯ ಅನುಗ್ರಹವು ಹೊಸ ಮೈಸೂರಿನವರಿಗೆಲ್ಲರಿಗೂ ಆಗಲಿ! ತಮೋಗುಣವನ್ನು ಚಟುವಟಿಕೆಯ ರಜೋಗುಣದಿಂದಲೂ ಕಾಮರಾಗ ಬಲಾನ್ವಿತವಾದ ರಜೋಗುಣದ ಹಾರಾಟವನ್ನು ನಿರ್ಮಲವಾದ ಅಂತಃಕರಣದ ಸತ್ತ್ವ ಗುಣದಿಂದಲೂ ಗೆದ್ದುಕೊಳ್ಳುವಂತೆ ನಮ್ಮೆಲ್ಲರಮೇಲೂ ಆ ದೇವಿಯ ಅನುಗ್ರಹದ ತಂಬೆಳಕು ಬೀಳಲಿ!

ಕನ್ನಡನಾಡಿನವರೆಲ್ಲರೂ ಒಂದಾಗುವ ಸುಸಮಯವು ಬಂದಿದೆ. ಕನ್ನಡದ ಕಸ್ತೂರಿಯ ಪರಿಮಳವು ನಾಡಿನಲ್ಲೆಲ್ಲ ಬೀರಲಿ, ಕನ್ನಡನಾಡಿನವರ ಬಗೆಗನ್ನಡಿಯು ಅತಿ ಸ್ವಚ್ಛವಾಗಿ ಅಧ್ಯಾತ್ಮತತ್ತ್ವದ ಬೆಳಕನ್ನು ಮಾರುಹೊಳೆಯುವಂತೆ ಮಾಡಲಿ ! ಕನ್ನಡ ನುಡಿಯಲ್ಲಿ ಸರ್ವರನ್ನೂ ಪ್ರೇಮದಿಂದ ಕಾಣುವ ಸಾತ್ತ್ವಿಕಭಾವನೆಗಳ ವಾಙ್ಮಯವು ದಿನ ದಿನಕ್ಕೂ ಬೆಳೆಯಲಿ ! ಧರ್ಮ, ಅರ್ಥ, ಕಾಮ, ಮೋಕ್ಷ - ಎಂಬ ನಾಲ್ಕು ಬಗೆಯ ಪುರುಷಾರ್ಥಗಳನ್ನು ಸಾಧಿಸಿಕೊಳ್ಳುವ ನಿರ್ಮಲವಾದ ಹೃದಯವು ಕನ್ನಡಿಗರಲ್ಲೆಲ್ಲ ಹುರಿದುಂಬಿಕೊಳ್ಳಲಿ!

ಶಂಕರ, ರಾಮಾನುಜ, ಮಧ್ವ, ಬಸವ, ಬುದ್ಧ, ಮಹಾವೀರ, ಮೊಹಮ್ಮದ ಪೈಗಂಬರ, ಯೇಸುಕ್ರಿಸ್ತ - ಈ ಎಲ್ಲರ ಬೋಧಾಮೃತಗಳನ್ನು ಚಿಮುಕಿಸುವ ಸೂಕ್ತಿಗಳು ಕನ್ನಡಗ್ರಂಥಗಳಲ್ಲಿ ಎದ್ದುಕೊಳ್ಳಲಿ ! ಜಾತಿದ್ವೇಷ, ಮತದ್ವೇಷ, ಪಂಗಡಗಳ ಪರಸ್ಪರದ್ವೇಷ - ಇವುಗಳ ಹುಟ್ಟಡಗಿಹೋಗಲಿ. ಎಲ್ಲರೂ ಒಬ್ಬ ಪರಮಾತ್ಮನ ಮಕ್ಕಳು, ಅಂಶಗಳು, ಪ್ರಕಾಶದ, ಕಿರಣಗಳು - ಎಂಬ ಭಾವನೆಯು ಕನ್ನಡಿಗರ ಚಿತ್ತದಲ್ಲಿ ಒಡಮೂಡಲಿ! ಕಾಮಕ್ರೋಧಲೋಭಮೋಹಮದಮಾತ್ಸರ್ಯಗಳು ಪ್ರತಿಪಕ್ಷಭಾವನೆಯಿಂದ ಹೇಳ ಹೆಸರಿಲ್ಲದಂತಾಗಲಿ! ಕನ್ನಡನಾಡಿನ ಮನೆಮನೆಯಲ್ಲಿಯೂ ಅಧ್ಯಾತ್ಮ ಪ್ರಕಾಶದ ಕಿರಣಗಳು ವ್ಯಾಪಿಸಿಕೊಳ್ಳಲಿ! ಅಜ್ಞಾನದ ಅಂಧಕಾರವು ಮರೆಯಾಗಲಿ! ಹೊಸ ಮೈಸೂರಿನ, ಸಂಯುಕ್ತಕರ್ಣಾಟಕದ, ಕಲೆತ ಕನ್ನಡ ನಾಡಿನಲ್ಲಿ ಇಹಪರಸುಖಗಳ ಸೂರೆಯಾಗಲಿ ! ಅಧ್ಯಾತ್ಮಪ್ರೇಮಿಗಳ ಸಂಖ್ಯೆಯು ದಿನದಿನಕ್ಕೂ ಹೆಚ್ಚಲಿ!

# ಕನ್ನಡದಲ್ಲಿ ಧಾರ್ಮಿಕ ಸಾಹಿತ್ಯ

ಕನ್ನಡನುಡಿಯಲ್ಲಿ ಧರ್ಮದ ಗ್ರಂಥಗಳು ಹೇರಳವಾಗಿರುವವೆಂದೂ ಸದ್ಯಕ್ಕೆ ಆ ವಿಷಯವನ್ನು ಬಿಟ್ಟು ವಿಜ್ಞಾನಾದಿವಿಷಯಗಳ ಗ್ರಂಥಗಳನ್ನು ಪ್ರಕಟಿಸುವದಕ್ಕೆ ಪ್ರಾರಂಭಿಸುವದು ಮೇಲೆಂದೂ ಈಗಿನ ಕಾಲದಲ್ಲಿ ಅಲ್ಲಲ್ಲಿ ಕೂಗು ಕೇಳಿಸುತ್ತಿರುತ್ತದೆ. ಆದರೆ ನಿಜವಾದ ಸ್ಥಿತಿಯೇನು? ಕನ್ನಡದಲ್ಲಿ ಧಾರ್ಮಿಕಸಾಹಿತ್ಯದ ಅರುಣೋದಯವಾಗಿದೆಯೆಂದು ಕೂಡ ಧೈರ್ಯದಿಂದ ಹೇಳುವಹಾಗಿಲ್ಲ. ಕನ್ನಡಕ್ಕೆ ವಿಜ್ಞಾನಾದಿವಿಷಯಗಳ ಗ್ರಂಥಗಳು ಅತ್ಯವಶ್ಯವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ; ಆದರೆ ಧಾರ್ಮಿಕ ಗ್ರಂಥಗಳ ನಿರ್ಮಾಣವು ಅತ್ಯಂತ ಅವಶ್ಯವಾಗಿರುತ್ತದೆ.

ಭರತಖಂಡದಲ್ಲಿ ಹಿಂದೂಗಳ ಧರ್ಮಕ್ಕೆಲ್ಲ ತವರುಮನೆಯಾಗಿರುವದು ಸಂಸ್ಕೃತಭಾಷೆ. ಅದರಲ್ಲಿ ವೇದ, ಸ್ಮೃತಿ, ಪುರಾಣ, ಇತಿಹಾಸ, ದರ್ಶನಗಳು, ಪುರಾಣಗಳು, ಸಂಪ್ರದಾಯಗ್ರಂಥಗಳು – ಎಂದು ಬಗೆಬಗೆಯಾಗಿ ಧರ್ಮಗ್ರಂಥಗಳಿವೆ. ಸದ್ಯಕ್ಕೆ ಸಂಸ್ಕೃತಭಾಷೆಯ ಪ್ರಚಾರವು ಬಹಳ ಕಡಿಮೆಯಾಗಿರುತ್ತದೆ, ಇನ್ನೂ ಕಡಿಮೆಯಾಗುವ ಸಂಭವವೂ ಇದೆ. ಹೀಗಿರುವಲ್ಲಿ ಕನ್ನಡದಲ್ಲಿ ಅವುಗಳ ವಿಷಯದ ಗ್ರಂಥಗಳು ನಿರ್ಮಾಣವಾಗದಿದ್ದರೆ ಭರತಖಂಡದ ಪ್ರಾಚೀನಸಂಸ್ಕೃತಿಯೆಂಬುದು ಕನ್ನಡನಾಡಿನಲ್ಲಿ ನಿರ್ನಾಮವಾಗುವ ಅಂಜಿಕೆಯಿಲ್ಲವೆ? ಮೇಲೆ ಹೇಳಿದ ವೇದಾದಿಗಳ ವಿಷಯದ ಗ್ರಂಥಗಳು, ಸಂಸ್ಕೃತದಲ್ಲಿರುವದರ ನೂರರಲ್ಲೊಂದು ಪಾಲಾದರೂ ಕನ್ನಡದಲ್ಲಿ ಸಿಕ್ಕುವದಿಲ್ಲ. ಹೀಗಿದ್ದರೂ ಕನ್ನಡದಲ್ಲಿ ಧರ್ಮಗ್ರಂಥಗಳು ಬೇಕಾದಷ್ಟು ಇರುವವೆಂದು ಹೇಳುವವರ ಮಾತಿಗೆ ಏನಭಿಪ್ರಾಯ?

ನಮ್ಮ ಕನ್ನಡನಾಡಿನಲ್ಲಿ ಹಿಂದಕ್ಕೆ ವೇದವನ್ನು ಅಧ್ಯಯನಮಾಡಿದವರ ಸಂಖ್ಯೆ ತಕ್ಕಮಟ್ಟಿಗೆ ಇತ್ತು. ಈಗ ವೇದವನ್ನು ಶುದ್ಧವಾಗಿ ಉಚ್ಚರಿಸುವವರು ಎಲ್ಲಿಯೋ ಒಂದೊಂದು ಕಡೆ ಕಣ್ಣಿಗೆ ಬೀಳುತ್ತಿದ್ದಾರೆ; ಪದಕ್ರಮಜಟಾಘನಗಳನ್ನು ಬಲ್ಲವರಂತೂ ಕಾಣುವದೇ ಅಪರೂಪವಾಗುತ್ತಿದೆ. ಎಷ್ಟೋ ಜನರಿಗೆ ಪದಕ್ರಮಾದಿಗಳೆಂದರೇನೆಂಬುದು ತಿಳಿಯುವದೂ ಕಷ್ಟವಾಗುತ್ತಾ ಬರುತ್ತಿದೆ. ಇನ್ನು ವೇದದ ಅರ್ಥವನ್ನು ಬಲ್ಲವರನ್ನೆಲ್ಲಿ ತರೋಣ? ಸ್ಮೃತಿಗಳು ಯಾವವೆಂಬುದನ್ನು ಬಲ್ಲವರು ಹಳಬರು ಯಾರಾದರೂ ಇರಬಹುದು, ಈಗಲಂತಲೂ ಅವುಗಳ ಸ್ಮೃತಿಯಿಡುವವರೇ ಕಂಡುಬರುವದಿಲ್ಲ. ಪುರಾಣಗಳು ಹದಿನೆಂಟು ಯಾವವೆಂಬುದರ ಕಲ್ಪನೆಯು ಅನೇಕರಿಗೆ ಇರುವದಿಲ್ಲ;

ಅವುಗಳಲ್ಲಿರುವ ವಿಷಯವನ್ನು ಬಲ್ಲ ಮಹಾತ್ಮರು ಎಲ್ಲಿರುವರೋ! ವೇದಗಳ ಆರಂಗಗಳನ್ನೂ ತಿಳಿದವರನ್ನು ಹುಡುಕಿದರೂ ಸಿಕ್ಕುವರೊ ಇಲ್ಲವೊ! ದರ್ಶನಗಳ ಗೂಢತತ್ತ್ವವನ್ನು ತಿಳಿದವರು ಬೇಗಬೇಗನೆ ಅದರ್ಶನವಾಗುತ್ತಿದ್ದಾರೆ. ಶಾಂಕರ, ರಾಮಾನುಜ, ಮಾಧ್ವ, ವಲ್ಲಭ ನಿಂಬಾರ್ಕಾದಿ ಸಂಪ್ರದಾಯಕ್ಕೆ ಹತ್ತು ಹನ್ನೆರಡು ಜನರು ಇದ್ದರೆ ಹೆಚ್ಚು!

ಈಗಿನ ಕಾಲಕ್ಕೆ ವೇದಾದಿಗಳ ಪ್ರಯೋಜನವೇನು? ಅವುಗಳ ಅಭಿಪ್ರಾಯ ವನ್ನು ತಿಳಿಸುವ ಗ್ರಂಥಗಳು ಕನ್ನಡದಲ್ಲಿಲ್ಲದಿದ್ದರೆ ಏನು ಹಾನಿ? ಎಂದು ಕೆಲವರು ಕೇಳಬಹುದು. ಇದಕ್ಕೆ ಮೊಟ್ಟಮೊದಲನೆಯ ಉತ್ತರವೇನೆಂದರೆ ಅವಿಲ್ಲದಿದ್ದರೆ ನಮ್ಮ ಸಂಸ್ಕೃತಿಯ ಹಾನಿಯಾಗುತ್ತದೆ. ಈಗಿನ ತರುವಾಯ ಪಶ್ಚಿಮದೇಶದ ನಾಗರಿಕತೆಗೆ ಮರುಳಾಗಿರುತ್ತಾರೆ. ಅವರು ದೇಹಸೌಂದರ್ಯದ ಕಡೆಗೇ ಹೆಚ್ಚು ಲಕ್ಷ್ಯವನ್ನು ಕೊಡುತ್ತಾರೆ; ಅವರು ಸಿನೆಮಾ, ನಾಟಕ – ಮುಂತಾದ ನೋಟಗಳಿಗೆ ಮನಸೋತು ವಿಲಾಸಿತೆಗೆ ಪಕ್ಕಾಗಿರುತ್ತಾರೆ. ಈ ಕಾರಣದಿಂದ ಅವರ ಆಹಾರ, ವಿಹಾರ, ಭಾಷಾ, ವೇಷ – ಮುಂತಾದವುಗಳೆಲ್ಲವೂ ನಮ್ಮ ಸಂಸ್ಕೃತಿಯ ಮತ್ತು ಧಾರ್ಮಿಕತನದ ವಿನಾಶಕ್ಕೆ ಸಂಚುಕಾರವಾಗಿ ಪರಿಣಮಿಸಿವೆ. ''ಇಂಗ್ಲಿಷು ವಿದ್ಯಾಭ್ಯಾಸದಿಂದ ಒಂದು ಬಗೆಯ ಜನರು ತಯಾರಾಗುವರು; ಬಣ್ಣದಲ್ಲಿ ಭರತಖಂಡದವರಾಗಿದ್ದರೂ ಅವರು ಮನೋಭಾವ, ವಿಚಾರ, ನಡತೆ, ಬುದ್ಧಿ – ಇವುಗಳಲ್ಲಿ ಇಂಗ್ಲಿಷರೇ ಆಗಿರುವರು'' ಎಂದು ಮಕಾಲೆ ಸಾಹೇಬನು ನುಡಿದ ಭವಿಷ್ಯವು ಸತ್ಯವಾಗಿಬಿಟ್ಟಿರುತ್ತದೆ. ನಮ್ಮ ತರುಣರಿಗೆ ಸಿಕ್ಕುತ್ತಿರುವ ವಿದ್ಯಾಭ್ಯಾಸದಲ್ಲಿ ಸನಾತನಸಂಸ್ಕೃತಿಯ ಇತಿಹಾಸವನ್ನು ತಿಳಿಯುವ ಅವಕಾಶವು ತೀರ ಕಡಿಮೆಯಾಗಿರುವದರಿಂದಲೂ ಧಾರ್ಮಿಕಗ್ರಂಥಗಳ ಸೋಂಕು ತೀರ ಕಡಿಮೆಯಾಗಿ – ಕಡಿಮೆ ಏಕೆ? – ಇಲ್ಲವೇ ಇಲ್ಲವಾಗಿ ಬಿಟ್ಟಿರುವದ ರಿಂದಲೂ ಅವರಿಗೆ ಧರ್ಮವಿರುದ್ಧಾಚಾರಗಳೇ ಚೆನ್ನಾಗಿ ಕಾಣುತ್ತಿರುವವು. ಗುರುಹಿರಿ ಯರಲ್ಲಿ ಗೌರವವು ಕಡಿಮೆಯಾಗುತ್ತಲೂ ಇರುವದು. ಈಗಿನ ಕಾಲದ ಉತ್ಸವಗಳು, ಟೀಪಾರ್ಟಿಗಳು, ಆಟ್ಹೋಮುಗಳು, ಪ್ರೀತಿಭೋಜನಗಳು – ಮುಂತಾದ ಕೂಟಗಳು ವರ್ಣಾಶ್ರಮಾದಿ ನಿಯಮಗಳನ್ನು ಮೀರಿನಡೆಯುವದಕ್ಕೇ ಪ್ರೋತ್ಸಾಹವನ್ನು ಕೊಡು ವಂಥವುಗಳಾಗಿರುವವು. ಸಿಕ್ಕಿದವರು ಸಿಕ್ಕ ಕಡೆಯಲ್ಲಿ ಭೋಜನಾದಿಗಳನ್ನು ಮಾಡುತ್ತಿರು ವದರಿಂದ ದೇಹಸ್ವಾಸ್ಥ್ಯಕ್ಕೂ ಅಂತಃಕರಣಸಂಸ್ಕೃತಿಗೂ ದೊಡ್ಡಹಾನಿಯುಂಟಾಗುತ್ತಿರು

ವದು. ಇದರ ಜೊತೆಗೆ ಧರ್ಮನಾಶಕವಾದ ಹೊಸ ಹೊಸ ಕಾನೂನುಗಳನ್ನು ಸಮಾಜ ಸುಧಾರಣೆಯ ನೆಪದಿಂದ ಕೆಲವರು ಆಚರಣೆಗೆ ಇಳಿಸುತ್ತಿರುವರು. ಇಷ್ಟನ್ನೆಲ್ಲ ಮನ ದಂದರೆ ಧಾರ್ಮಿಕ ಸಿದ್ಧಾಂತಗಳ ಪ್ರಚಾರಣೆಗೆ ಯತ್ನವಾಗಬೇಕೆಂಬುದು ಸ್ಪಷ್ಟವಾಗು ವದಿಲ್ಲವೆ?

ನಮ್ಮ ನಾಡಿನಲ್ಲಿ ಜನಸಾಮಾನ್ಯರಲ್ಲಿ ಧಾರ್ಮಿಕಶಾಸ್ತ್ರಗಳ ಪ್ರಚಾರವಾಗ ಬೇಕಾದರೆ ಕನ್ನಡದಲ್ಲಿ ಧಾರ್ಮಿಕ ಸಾಹಿತ್ಯವು ಹೆಚ್ಚಬೇಕಾಗಿದೆಯೆಂಬುದು ಸ್ಪಷ್ಟವಾಗಿ ರುತ್ತದೆ. ಸದ್ಯಕ್ಕೆ ಇಂಥ ಸಾಹಿತ್ಯವು ತೀರ ಕಡಿಮೆಯಾಗಿರುವದರಿಂದ ಇದನ್ನು ಬಲ್ಲವರು ಬೇಗನೆ ಪೂರ್ತಿಮಾಡಬೇಕು. ಇದರ ಜೊತೆಗೆ ಧಾರ್ಮಿಕ ವಿದ್ಯಾಭ್ಯಾಸಕ್ಕೂ ಏರ್ಪಾಡು ಮಾಡಬೇಕು. ಧರ್ಮೋಪದೇಶಕ್ಕಾಗಿ ಸ್ವಲ್ಪ ಕಾಲವನ್ನು ವಿದ್ಯಾಶಾಲೆಗಳಲ್ಲಿ ಮೀಸಲಿಡು ವದೂ ಆವಶ್ಯವು; ಇದಕ್ಕೆ ಅನುಕೂಲಿಸುವಂಥ ಸಣ್ಣಸಣ್ಣಪುಸ್ತಕಗಳನ್ನು ಬರೆದು ಪಠ್ಯ ಪುಸ್ತಕಗಳಿಗೆ ಉಪಯೋಗಿಸುವಂತೆ ಮಾಡಬೇಕು. ಸರಕಾರಿಯ ವಿದ್ಯಾಶಾಲೆಗಳೇ ಹೆಚ್ಚಾಗಿರುವದರಿಂದಲೂ ಅಲ್ಲಿ ನಾನಾ ಮತದ ವಿದ್ಯಾರ್ಥಿಗಳು ಸೇರುವದರಿಂದಲೂ ಧಾರ್ಮಿಕ ಶಿಕ್ಷಣವನ್ನು ಹೇಗೆ ಏರ್ಪಡಿಸಬೇಕೆಂಬ ಶಂಕಾಪಿಶಾಚಿಯನ್ನು ಮೊದಲು ಹೊಡೆದಟ್ಟಬೇಕು. ಆಚಾರಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಬಿಟ್ಟು ಪರಮೇಶ್ವರನ ಉಪಾಸನೆಗೆ ಸಂಬಂಧಪಟ್ಟ ವಿಷಯಗಳನ್ನೇ ಮನದಂದರೆ ಎಲ್ಲಾ ಮತಗಳ ಉಪದೇಶವೂ ಸ್ವಲ್ಪಹೆಚ್ಚು ಕಡಿಮೆ ಒಂದೇ ಆಗುವದು. ಇದೂ ಅಲ್ಲದೆ ಹಿಂದುಗಳು ಹೆಚ್ಚಾಗಿರುವ ಸ್ಕೂಲುಗಳಲ್ಲಿ ಹಿಂದೂ ಮತವನ್ನು ಬೋಧಿಸುವದು ಎಂದಿಗೂ ತಪ್ಪಾಗ ಲಾರದು; ಅದನ್ನು ಕೇಳಲು ಇಷ್ಟವಿಲ್ಲದ ಅಲ್ಪಸಂಖ್ಯಾಕರಾದ ಮತಾಂತರದವರಿಗೆ ತಂದೆತಾಯಿಗಳ ಇಷ್ಟದ ಪ್ರಕಾರ ಮತಬೋಧನೆಯ ಕಾಲದಲ್ಲಿ ವಿರಾಮವನ್ನು ಕೊಡ ಬಹುದು. ವಿಚಾರಶೀಲರಾದ ತಂದೆತಾಯಿಗಳು ಮಕ್ಕಳಿಗೆ ಎಲ್ಲಾ ಮತಗಳ ಸಾರವೂ ತಿಳಿದಿರುವದು ತಪ್ಪೆಂದು ಎಂದಿಗೂ ಭಾವಿಸಲಾರರೆಂದೇ ನನ್ನ ನಿಶ್ಚಯವು. ಧಾರ್ಮಿಕ ಶಿಕ್ಷಣದ ಪ್ರಸಾರಕ್ಕೆ ಒಂದೊಂದು ಊರಿನಲ್ಲೂ ಬೇರೆ ಗೊತ್ತಾದ ವ್ಯವಸ್ಥೆಯಾದರೆ ಮತ್ತೂ ಅನುಕೂಲವಾದೀತು. ಅಧ್ಯಾತ್ಮಪ್ರಕಾಶದಂಥ ಧಾರ್ಮಿಕ ವಿಚಾರದ ಪ್ರತಿಕೆಗಳಿಗೆ ವಾಚಕರನ್ನು ಜೊತೆಗೊಳಿಸುವದೂ ಈ ಕೆಲಸಕ್ಕೆ ಸಹಾಯ ವಾಗುತ್ತದೆ.

ಸದ್ಯಕ್ಕೆ ಈ ಕಾರ್ಯವು ಸಫಲವಾಗಬೇಕಾದರೆ ನಾವು ಕೈಕೊಳ್ಳಬಹುದಾದ ಉಪಾಯಗಳು ಯಾವವೆಂದರೆ –

1. ವೇದ, ಉಪನಿಷತ್ತುಗಳು, ದರ್ಶನಗಳು, ಸ್ಮೃತಿಗಳು, ಪುರಾಣಗಳು – ಮುಂತಾದ ಧಾರ್ಮಿಕ ಗ್ರಂಥಗಳಲ್ಲಿರುವ ತತ್ತ್ವಗಳನ್ನು ತಿಳಿಗನ್ನಡದಲ್ಲಿ ತಿಳಿಸುವ ಪುಸ್ತಕಗಳನ್ನು ಬರೆಯಿಸಿ ಪ್ರಕಾಶಗೊಳಿಸುವದು.

2. ಆದಷ್ಟು ಮಟ್ಟಿಗೂ ಹೊಸ ಮೂಲಗ್ರಂಥಗಳನ್ನೇ ಬರೆಯಿಸುವದು; ಸಂಸ್ಕೃತ ಮೂಲಗ್ರಂಥಗಳನ್ನು ಅವಶ್ಯವೆಂದು ತೋರಿದ ಕಡೆಯಲ್ಲೆಲ್ಲ ಕನ್ನಡಿಸುವದು.

3. ಉತ್ತಮ ಧರ್ಮೋಪದೇಶಕರ ಉಪನ್ಯಾಸಗಳನ್ನು ಸಂಗ್ರಹಿಸುವದು; ಅವು ಪರಭಾಷೆಯಲ್ಲಿದ್ದರೆ ಕನ್ನಡಿಸಿ ಪ್ರಕಟಿಸುವದು.

4. ನಿತ್ಯಕರ್ಮಗಳು, ಸಂಸ್ಕಾರಗಳು – ಇವುಗಳ ಸಂಬಂಧವಾಗಿ ಪುಸ್ತಕಗಳನ್ನು ಪ್ರಕಟಿಸುವದು.

5. ಶಾಲೆಗಳಲ್ಲಿ ಪಾಠಕ್ಕೆತಕ್ಕ ಚಿಕ್ಕ ಚಿಕ್ಕ ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸುವದು. ಇವುಗಳಲ್ಲಿ ಮತಾಂತರನಿಂದೆಯಿರದಂತೆಯೂ ಎಲ್ಲಾ ಮತಗಳಿಗೂ ಸಮಾನ ವಾದ ತತ್ತ್ವಗಳು ಹೆಚ್ಚಾಗಿರುವಂತೆಯೂ ನೋಡಿಕೊಳ್ಳುವದು.

6. ಇದುವರೆಗೆ ಬರೆದಿದ್ದರೂ ಪ್ರಕಟವಾಗದೆ ಇರುವ ಧಾರ್ಮಿಕವಿಚಾರದ ಕವಿತೆ ಗಳನ್ನು ಸಂಗ್ರಹಿಸಿ ಪ್ರಕಟಿಸುವದು.

7. ಶಾಂಕರಾಮಾನುಜಾದಿ ಸಂಪ್ರದಾಯಗಳ ಸಿದ್ಧಾಂತವನ್ನು ತಿಳಿಸುವ ಪುಸ್ತಕ ಗಳನ್ನು ಬರೆಯಿಸಿ ಪ್ರಕಟಗೊಳಿಸುವದು.

8. ಧಾರ್ಮಿಕತತ್ತ್ವಗಳನ್ನು ಪ್ರಚಾರಮಾಡುವ ಪತ್ರಿಕೆಗಳನ್ನು ಹೆಚ್ಚಾಗಿ ಪ್ರಕಟಿಸು ವದು. ಧಾರ್ಮಿಕತತ್ತ್ವಗಳನ್ನು ಕುರಿತ ಆಕ್ಷೇಪಗಳಿಗೆ ಸಮಾಧಾನವನ್ನು ತಿಳಿಸುವ ಗ್ರಂಥಗಳನ್ನು ನಿರ್ಮಿಸಿ ಬೆಳಕಿಗೆ ಹಿಡಿಯುವದು.

9. ಸಿನೆಮ, ನಾಟಕ – ಮುಂತಾದವುಗಳಲ್ಲಿ ಧರ್ಮವಿರುದ್ಧವಾದ ದೃಶ್ಯಗಳನ್ನು ಪ್ರದರ್ಶಿಸದಂತೆ ಮಾಡುವದಕ್ಕಾಗಿ ಧರ್ಮಕ್ಕೆ ಅನುಕೂಲವಾಗಿರುವ ದೃಶ್ಯ ಗಳನ್ನು ಏರ್ಪಡಿಸುವದು.

10. ಆಚಾರ, ಆಹಾರಶುದ್ಧಿ, ದ್ರವ್ಯಶುದ್ಧಿ – ಮುಂತಾದ ವ್ಯವಹಾರಗಳನ್ನು ಸಪ್ರಮಾಣವಾಗಿಯೂ ಸಯುಕ್ತಿಕವಾಗಿಯೂ ವಿವರಿಸುವ ಗ್ರಂಥಗಳನ್ನು ರಚಿಸಿ ಹೊರಕ್ಕೆ ತರುವದು.

ಮೇಲೆ ಕಾಣಿಸಿರುವ ಉಪಾಯಗಳಲ್ಲದೆ ಮತ್ತೂ ಕೆಲವು ಉಪಾಯಗಳು ಉತ್ಸಾಹಶೀಲರಾದ ವಾಚಕರಿಗೆ ತೋರಬಹುದು. ಅವುಗಳನ್ನೂ ಅವಶ್ಯವಾಗಿ ಕೈಕೊಳ್ಳ ಬೇಕು. ನಮ್ಮ ನಾಡಿನಲ್ಲಿ ಪ್ರಚಾರದಲ್ಲಿರುವ ಹಿಂದೂ ಮುಸಲ್ಮಾನ ಕ್ರಿಶ್ಚಿಯನ್ ಮುಂತಾದ ಮತಭೇದಗಳವರು ಪರಸ್ಪರ ಸೌಹಾರ್ದವನ್ನು ಸಂಪಾದಿಸಿಕೊಂಡು ಸುಖಶಾಂತಿಯಿಂದ ಬಾಳುವದಕ್ಕೆ ಮತಾಂತರದವರ ಅಭಿಪ್ರಾಯಗಳನ್ನು ತಿಳಿಯು ವದೂ ಒಂದು ಮುಖ್ಯಸಾಧನವಾಗಿರುತ್ತದೆ. ಈ ದೃಷ್ಟಿಯಿಂದ ಪ್ರಪಂಚದ ಧರ್ಮ ಪ್ರತಿಷ್ಠಾಪನಾಚಾರ್ಯರುಗಳ ಚರಿತ್ರೆಯನ್ನೂ ಮುಖ್ಯೋಪದೇಶಗಳನ್ನೂ ಪ್ರಪಂಚದ ಮುಖ್ಯಮತಗಳ ಧಾರ್ಮಿಕಗ್ರಂಥಗಳ ಸಂಗ್ರಹವನ್ನೂ ಒಳಕೊಂಡ ಪುಸ್ತಕಗಳನ್ನು ಪ್ರಕಟಿಸಿ ವಿದ್ಯಾಶಾಲೆಗಳಲ್ಲಿಯೂ ಸಾರ್ವಜನಿಕ ಪುಸ್ತಕಭಂಡಾರಗಳಲ್ಲಿಯೂ ಇಡಿಸು ವದೂ, ಮತಗಳ ಸರ್ವಸಾಮಾನ್ಯತತ್ತ್ವಗಳನ್ನು ಸಹಾನುಭೂತಿಯಿಂದ ಬೋಧಿಸಬಲ್ಲ ಉಪದೇಶಕರನ್ನು ಸಜ್ಜುಗೊಳಿಸುವದೂ ಧಾರ್ಮಿಕ ಶಿಕ್ಷಾಪ್ರಚಾರಕ್ಕೆ ಒಂದು ಮುಖ್ಯ ವಾದ ಅಂಗವಾಗುತ್ತದೆ.

ಕನ್ನಡನಾಡಿನ ಅಭ್ಯುದಯದಲ್ಲಿ ದೃಷ್ಟಿಯಿರುವ ಮಹಾನುಭಾವರೆಲ್ಲರೂ ಮೇಲೆ ಕಂಡ ಸೂಚನೆಗಳನ್ನು ಉದಾರಭಾವನೆಯಿಂದ ಆಲೋಚನೆಗೆ ತಂದುಕೊಂಡರೆ ಎಲ್ಲರಿಗೂ ಕಲ್ಯಾಣವಾದೀತು. ಭಗವಂತನು ಅಂಥ ಕಾಲವನ್ನು ಅನುಗ್ರಹಿಸಲಿ!

# ಕಾಂತಮಹಾಶಯನ ಸಿದ್ಧಾಂತ

ಅಧ್ಯಾತ್ಮವಿಚಾರವನ್ನು ಸ್ವತಂತ್ರವಾಗಿ ನಡೆಸಿರುವ ಪಾಶ್ಚಾತ್ಯ ವಿದ್ವಾಂಸರನೇಕರ ದರ್ಶನಗಳು ನಮ್ಮ ದೇಶದ ತತ್ತ್ವಜಿಜ್ಞಾಸುಗಳಿಗೆ ಗೊತ್ತಿಲ್ಲದೇ ಇರುವದರಿಂದ ಅವುಗಳು ಉಪನಿಷತ್ಸಿದ್ಧಾಂತದ ಮನನಕ್ಕೆ ಎಷ್ಟರಮಟ್ಟಿಗೆ ಸಹಾಯವಾಗುವವೆಂಬುದು ತಿಳಿಯದೆ ಇರುವದು. ನಿದರ್ಶನಕ್ಕಾಗಿ ಇಲ್ಲಿ ಹದಿನೆಂಟನೆಯ ಶತಮಾನವು ಪ್ರಸಿದ್ಧ ವಾಗಿದ್ದ ಜರ್ಮನಿ ದೇಶದ ಇಮಾನ್ಯುಯಲ್ ಕ್ಯಾಂಟ್ - ಎಂಬ ತತ್ತ್ವಚಿಂತಕನ ಸಿದ್ಧಾಂತವೊಂದನ್ನೂ ಅದರ ಮಹತ್ತ್ವವನ್ನೂ ನಮ್ಮ ವಾಚಕರ ಮುಂದೆ ಇಡುತ್ತೇನೆ.

ಪ್ರಪಂಚವನ್ನು ತಿಳಿಯಬೇಕಾದರೆ ಯಾವದರಿಂದಲೇ ಅದನ್ನು ತಿಳಿಯ ಬೇಕಾಗಿದೆಯೋ ಅಂಥ ಮನಸ್ಸಿನ ಶೋಧನೆಯು ಮೊದಲು ಅವಶ್ಯವೆಂಬುದನ್ನು ಈ

ಮಹಾಶಯನು ಗೊತ್ತುಪಡಿಸಿದನು. ಆ ಮನಸ್ಸನ್ನು ಬಿಚ್ಚಿ ನೋಡಲಾಗಿ ಆತನು ಕಂಡುಕೊಂಡ ಹೊಸ ವಿಷಯವೇನೆಂದರೆ, ದೇಶ, ಕಾಲ, ಕಾರ್ಯಕಾರಣಭಾವ- ಎಂಬ ಮೂರು ಕಟ್ಟೆಗೆ ಒಳಪಟ್ಟು ಪ್ರಪಂಚವು ಕಾಣುವದು ನಿಜವಾದರೂ ಈ ದೇಶಕಾಲ ನಿಮಿತ್ತಗಳೆಂಬುವು ಹೊರಗಣ ಪ್ರಪಂಚದ ಭಾಗಗಳಲ್ಲ ಇವು ಮನಸ್ಸಿನ ವೃತ್ತಿ ವಿಶೇಷ ಗಳಾಗಿವೆ. ಬಾಹ್ಯಪ್ರಪಂಚವನ್ನು ನಾವು ತಿಳಿಯುವಾಗಲೆಲ್ಲ ಮನಸ್ಸಿನ ಈ ಮೂರು ವೃತ್ತಿಗಳ ಅಥವಾ ಆಕಾರಗಳ ಒಲೆಯಲ್ಲಿ ಸಿಕ್ಕುಬಿದ್ದೇ ನಮಗೆ ಅದು ತೋರಿಕೊಳ್ಳಬೇಕೆ ಹೊರತು, ಬೇರೆ ವಿಧವಾಗಿ ನಮಗೆ ಬಾಹ್ಯ ವಿಷಯವನ್ನು ಅರಿಯುವುದಕ್ಕೆ ಆಗುವದೇ ಇಲ್ಲ.

ದೇಶ, ಕಾಲ ನಿಮಿತ್ತಗಳು ನಮ್ಮ ಮನೋವೃತ್ತಿಯೇ ಸರಿಯೆಂಬದಕ್ಕೆ ಈತನು ಕೊಟ್ಟಿರುವ ಯುಕ್ತಿಗಳನ್ನು ಮತ್ತೊಂದು ಸಲ ವಿವರಿಸುವದಕ್ಕೆ ಇಟ್ಟುಕೊಂಡು ಸದ್ಯಕ್ಕೆ ಈ ಸಿದ್ಧಾಂತದ ಮಹತ್ತ್ವವನ್ನು ಕುರಿತು ಕೆಲವು ಮಾತುಗಳನ್ನು ಇಲ್ಲಿ ತಿಳಿಸುತ್ತೇನೆ. ಬಾಹ್ಯ ಪ್ರಪಂಚವನ್ನು ಅರಿಯುವುದಕ್ಕೆ ನಮಗೆ ಮನಸ್ಸು ಹೊರತು ಬೇರೆ ಯಾವ ಸಾಧನವೂ ಇಲ್ಲದ್ದರಿಂದಲೂ, ಈ ಮನಸ್ಸಿನಿಂದ ಅರಿತ ವಸ್ತುವಿಗೆಲ್ಲ ಇದು ತನ್ನ ವೃತ್ತಿಗಳಾದ ದೇಶ ಕಾಲನಿಮಿತ್ತಗಳ ಕಲಾಯವನ್ನು ಬಳಿದೇ ನಮಗೆ ತೋರಿಸುವದರಿಂದಲೂ ಬಾಹ್ಯ ವಸ್ತುವಿನ ತತ್ತ್ವವನ್ನು ಇದ್ದಂತೆ ಅರಿಯುವುದೇ ಅಸಾಧ್ಯವೆಂದಾಯಿತು. ಯಾವ ಯಾವ ದರ್ಶನಕಾರರು ಪ್ರಪಂಚದ ತತ್ತ್ವವನ್ನು ನಿರ್ವಚನಮಾಡಿ, ಇದು ಹೀಗೆಯೇ ಸರಿಯೆಂದು ನಿರ್ಣಯಿಸಿದೆವೆಂಬ ಅಭಿಮಾನವನ್ನು ಧರಿಸುವರೋ ಅವರೆಲ್ಲರಿಗೂ ಈ ದೇವಕಾಲನಿಮಿತ್ತಗಳ ಕುಣಿಕೆಯನ್ನು ಕಳಚಿಕೊಳ್ಳುವದಾಗಲಾರದಾದ್ದರಿಂದ, ಅವರ ಸಿದ್ಧಾಂತವು ಪ್ರತಿ ಪಕ್ಷವಿಲ್ಲದ್ದೆಂದು ಹೇಳಲಾಗುವದಿಲ್ಲ. ಪ್ರಪಂಚವು ನಿಜವಾಗಿ ಪರಿಚ್ಛಿನ್ನವಾಗಿರುವರೆಂತಲಾಗಲಿ, ಅನಂತವಾಗಿರುವದೆಂತಾಗಲಿ, ಎಷ್ಟು ವಿಭಾಗಮಾಡಿ ದರೂ ಸಾವಯವಾದ್ದರಿಂದ ಇನ್ನೂ ವಿಭಾಗಕ್ಕೆ ಒಳಪಟ್ಟಿರುವದೆಂತಾಗಲಿ, ಅಥವಾ ವಿಭಾಗಮಾಡುತ್ತಾ ಹೋದರೆ ಇನ್ನೂ ವಿಭಾಗಿಸುವುದಕ್ಕೆ ಆಗದಂಥ ನಿರವಯವಾದ ಅಣುಗಳಲ್ಲಿ ಕೊನೆಗಾಣುವದೆಂತಾಗಲಿ ಹೇಗೂ ಗೊತ್ತುಪಡಿಸುವದಕ್ಕಾಗಲಾರದೆಂಬುದೇ ಈ ಮತದ ಸಾರವಾಗುವದು. ಆದ್ದರಿಂದ ಪ್ರಪಂಚವು ಅನಿರ್ವಚನೀಯವಾದ ದ್ದೆಂತಲೂ ಇದು ಚಿಂತೆಗೆ ಮೀರಿದ ತತ್ತ್ವವಾದ್ದರಿಂದ ಇದನ್ನು ತರ್ಕದಿಂದ ನಿರ್ಣಯಿ ಸಲಾಗದೆಂತಲೂ ಹೇಳುವ ವೇದಾಂತಸಿದ್ಧಾಂತಕ್ಕೆ ಇದು ಒಂದು ಉತ್ತಮ ಸಾಧನ ವಾಗುವದು.

ಈ ಸಿದ್ಧಾಂತದಿಂದ ಅಧ್ಯಾತ್ಮವಿಚಾರಕ್ಕೆ ಒದಗುವ ಮತ್ತೊಂದು ಸಹಾಯವನ್ನು ಇಲ್ಲಿ ಸೂಚಿಸುತ್ತೇನೆ. ಪರಮಪುರುಷಾರ್ಥವನ್ನು ಕೊಡುವದಕ್ಕಾಗಿ ಈ ಜಗತ್ತಿನಲ್ಲಿ ಉಪದೇಶವಾದ ಯಾವ ಯಾವ ಮತವಿದ್ದರೂ ಆ ಮತದಲ್ಲಿ ಮೂರು ಪ್ರಧಾನ ತತ್ತ್ವಗಳು ಇದ್ದುಕೊಂಡಿರುವವು. ಮೊದಲನೆಯದು ಸ್ವತಂತ್ರವಾಗಿ ಯಾವ ಕಟ್ಟು ಪಾಡಿಗೂ ಬೀಳದೆ ಇರುವ ಈಶ್ವರನೊಬ್ಬನಿದ್ದಾನೆಂಬುದು. ಈಶ್ವರನೊಬ್ಬನಿದ್ದರೇ ಅಲ್ಲವೇ ಅವನ ಪ್ರಸಾದದಿಂದ ಪುರುಷಾರ್ಥವು ದೊರೆಯುವದೆಂಬ ಸಿದ್ಧಾಂತವು ನಿಲ್ಲುವದು? ಆದ್ದರಿಂದ ದೇವರು ಇದ್ದಾನೆಂಬುದು ಒಂದನೆಯ ಅಂಗೀಕಾರವು. ಆತ್ಮವು ನಾಶರಹಿತ ವಾದದ್ದೆಂಬುದು ಎರಡನೆಯದು, ಏಕೆಂದರೆ ಸಾಧಕನಾದವನು, ಆ ಪುರುಷಾರ್ಥವನ್ನು ವನ್ನು ಹೊಂದುವವರೆಗೆ ಇರಬೇಕಾದ್ದು ಅವಶ್ಯವಾಗಿದೆ. ಆದ್ದರಿಂದ ಜೀವನಿತ್ಯತ್ವವು ಎರಡನೆಯ ಅಂಗೀಕಾರವು. ಇನ್ನು ಜೀವ ಸ್ವಾತಂತ್ರ್ಯವೆಂಬುದು ಮೂರನೆಯದಾಗಿದೆ. ಏಕೆಂದರೆ ಇಂಥ ಸ್ವಾತಂತ್ರ್ಯವೇ ಇಲ್ಲದೇ ಇದ್ದರೆ ಪಾಪ ಪುಣ್ಯಗಳಿಗೆ ಯಾರೂ ಹೊಣೆಗಾರರೇ ಇಲ್ಲವಾಗುವದು ಮತ್ತು ಇದರಿಂದ ಧರ್ಮಶಾಸ್ತ್ರಗಳ ವ್ಯವಸ್ಥೆಗೆ ಅವಕಾಶವೇ ಇಲ್ಲದೆ ಹೋಗುವದು. ಹೀಗೆ ಮತಸಾಮಾನ್ಯಕ್ಕೆ ಈ ಮೂರು ಅಭಿಪ್ರಾಯಗಳು ಇರಬೇಕಾಗಿದೆಯಷ್ಟೆ, ಆದರೆ ಪ್ರಪಂಚವು ಮಾಯಾ ಮಾತ್ರವೇ ಹೊರತು ನಿಜವಾಗಿರುವದಲ್ಲವೆಂಬ ಉಪನಿಷತ್ಸಿದ್ಧಾಂತವನ್ನು ಅಂಗೀಕರಿಸಿದ ಹೊರತು ಈಶ್ವರ, ಜೀವನಿತ್ಯತ್ವ, ಜೀವಸ್ವಾತಂತ್ರ್ಯ ಇವುಗಳಲ್ಲಿ ಒಂದೂ ಸಿದ್ಧಿಸದೇ ಹೋಗುವ ದೆಂಬ ಬಹುಮುಖ್ಯವಾದ ನಿರ್ಣಯವನ್ನು ಈಗ ಪ್ರಕೃತವಾಗಿರುವ ಕಾಂತ ಮಹಾಶಯನ ಸಿದ್ಧಾಂತದಿಂದ ವಿಚಾರಿಗಳಿಗೆ ಒಪ್ಪುವಂತೆ ಮನಗಾಣಿಸಿಕೊಡಬಹು ದಾಗಿರುತ್ತದೆ.

ಹೇಗೆಂದರೆ, ದೇಶವೆಂಬುದು ನಿಜವಾಗಿಯೂ ಬಾಹ್ಯಪ್ರಪಂಚದಲ್ಲಿದ್ದುಕೊಂಡಿ ರುವದೆಂಬ ಮತದಲ್ಲಿ, ಆಕಾಶವು ಅನಂತವಾಗಿರುವದ್ದರಿಂದ ಆಕಾಶಕ್ಕೆ ಮೀರಿ ಯಾವ ವಸ್ತುವೂ ಇರಲಾರದು ಮತ್ತು ಆಕಾಶದೊಳಗೆ ಸೇರಿರುವ ವಸ್ತುವೆಲ್ಲವೂ ಇಂತಿಷ್ಟು ದೇಶವನ್ನು ಆಕ್ರಮಿಸಿಕೊಳ್ಳುವದೆಂಬ ಮೂರ್ತವಸ್ತುವನ್ನು ಬಿಟ್ಟರೆ ಮತ್ತೆ ಯಾವ ಪದಾರ್ಥವೂ ಆಗಿರಲಾರದು. ಆದ್ದರಿಂದ ಸರ್ವವ್ಯಾಪಿಯಾದ ಸ್ವತಂತ್ರನಾಗಿರುವ ಸರ್ವೇಶ್ವರನೊಬ್ಬನು ಇರುವನೆಂಬುದು ಸಿದ್ಧವಾಗುವದಿಲ್ಲ. ಕಾಲವೆಂಬುದು ಬಾಹ್ಯ ಪ್ರಪಂಚದಲ್ಲಿ ನಿಜವಾಗಿದ್ದುಕೊಂಡಿರುವ ವಸ್ತುವಾದರೆ, ಯಾವ ವಸ್ತುವಿಗಾದರೂ ಕಾಲದ ಕಟ್ಟುಪಾಡು ಇದ್ದೇ ಇರಬೇಕಾಗುವದು. ಆಗ ನಮ್ಮ ಇರುವಿಕೆಗೂ ಗರ್ಭ

ಜನ್ಮಗಳೆಂಬ ಆದಿಯೂ ಮರಣವೆಂಬ ಅಂತವೂ ಇರುವದೆಂದಾಗುವದು. ಹುಟ್ಟೆಂಬುದು ನಿಜವಾಗಿಯೂ ಕಾಲದಲ್ಲಿ ಪ್ರಾರಂಭವಾದದ್ದರಿಂದ ನಾಶವೆಂಬುದೂ ಕಾಲದಲ್ಲಿ ನಿಜವಾಗಿಯೇ ಸಂಭವಿಸಿದ್ದಾಗುವದು. ಕಾಲವು ಆದ್ಯಂತವುಳ್ಳದ್ದೆಂಬ ಮಾತಿಗೆ ಅರ್ಥವೇ ಇಲ್ಲದೆ ಇರುವದರಿಂದ, ಕಾಲಕ್ಕೆ ಮೀರಿದ ಯಾವ ವಸ್ತುವನ್ನು ಭಾವಿಸುವದಕ್ಕೂ ಇಲ್ಲದೆ ಹೋಗುವದು. ಹೀಗೆ ಕಾಲವು ಸತ್ಯವಾದರೆ ಜೀವನಿತ್ಯತ್ವಕ್ಕೆ ಹಾನಿ ಬರುವದು. ಕಾರ್ಯಕಾರಣಭಾವವೆಂಬುದು ನಿಯತವಾಗಿರುವದೆಂಬುದು ಸರ್ವರ ಅನುಭವದಲ್ಲಿಯೂ ಇರುವದರಿಂದ ಜೀವಸ್ವಾತಂತ್ರ್ಯವೂ ಧರ್ಮಾಧರ್ಮವ್ಯವಸ್ಥೆಯೂ ಕನಸಿನ ಮಾತಾಗುವದು. ಏಕೆಂದರೆ ಒಂದೊಂದು ಕರ್ಮವೂ ತನ್ನ ಹಿಂದೆ ನಿಯತವಾಗಿರುವ ಕಾರಣದ ಫಲವಾಗಿರುವದರಿಂದ ನಾವು ಮಾಡುವ ಯಾವ ಕರ್ಮಕ್ಕೂ ನಾವು ಹೊಣೆಗಾರರಲ್ಲವೆಂಬುದೇ ಸರಿಯಾಗುವದು ಎಂದ ಮೇಲೆ ಜೀವನಿಗೆ ಸ್ವಾತಂತ್ರ್ಯವಿನ್ನೆಲ್ಲಿಯದು?

ಪ್ರಪಂಚವು ಮಾಯಾಮಯವೆಂಬ ಪಕ್ಷದಲ್ಲಿಯೋ ಎಂದರೆ ಈ ದೇಶ ಕಾಲ ನಿಮಿತ್ತಗಳ ಕಟ್ಟುಪಾಡಿಗೆ ಬೀಳದೆ ಇರುವ ತತ್ತ್ವವಿಶೇಷವೊಂದುಂಟೆಂದು ಸಿದ್ಧವಾಗುವದರಿಂದ ಅಂಥ ತತ್ತ್ವವನ್ನು ದೇಶಕಾಲನಿಮಿತ್ತಗಳ ಕಟ್ಟುಪಾಡಿಗೊಳಪಟ್ಟಿರುವ ನಮ್ಮ ಮನಸ್ಸಿನ ಸ್ವಭಾವದಿಂದ ನಾವು ಅರಿಯಲಾರೆವೆಂತಲೂ, ಹೀಗೆ ಮನಸ್ಸಿಗೆ ಗೋಚರವಲ್ಲದ ಅತೀಂದ್ರಿಯವಸ್ತುವೇ ಧರ್ಮಬೋಧನೆಗೆ ವಿಷಯವೆಂತಲೂ ಆತತ್ತ್ವದ ಸಾಕ್ಷಾತ್ಕಾರಕ್ಕಾಗಿಯೇ ಈಶ್ವರ, ಜೀವನಿತ್ಯತ್ವ, ಜೀವಸ್ವಾತಂತ್ರ್ಯಗಳು ಶಾಸ್ತ್ರದಲ್ಲಿ ಉಪದಿಷ್ಟವಾಗಿರುವವೆಂತೂ ಸಿದ್ಧವಾಗುವದು.

ಹೀಗೆ ಕಾಂತಮಹಾಶಯನ ಸಿದ್ಧಾಂತವು ತುಂಬ ಪ್ರಯೋಜನಕಾರಿಯಾಗಿರುವದು. ಸ್ವತಃ ಸಿದ್ಧವಾಗಿರುವ ಆತ್ಮತತ್ತ್ವವು ಯಾವ ಶಾಸ್ತ್ರದ ಅಥವಾ ಆಚಾರ್ಯರುಪದೇಶದ ಪ್ರಸಾದವನ್ನವಲಂಬಿಸಿರುವದಿಲ್ಲವೆಂಬುದು ನಿಜವಾದರೂ, ಜಿಜ್ಞಾಸುಗಳು ಶಾಸ್ತ್ರಾಚಾರ್ಯರ ಅನುಗ್ರಹದಿಂದಲೂ ತಮ್ಮ ತಮ್ಮ ಮನನದಿಂದಲೂ ವಸ್ತುತತ್ತ್ವವನ್ನು ಗೊತ್ತುಪಡಿಸಿಕೊಳ್ಳಬೇಕಾಗಿರುವದರಿಂದ ಮನನಮಾರ್ಗದಲ್ಲಿ ಈ ಯೂರೋಪಿಯನ್ ವಿದ್ವಾಂಸರ ಪ್ರಕ್ರಿಯೆಯೂ ಸಹಕಾರಿಯಾಗಿರುವದೆಂಬುದರಲ್ಲಿ ಯಾವ ಸಂದೇಹವೂ ಇರುವದಿಲ್ಲ. ಈ ಅಮೋಘಸಿದ್ಧಾಂತವನ್ನು ನಮ್ಮ ಕರ್ಣಾಟಕದಲ್ಲಿರುವ ಜಿಜ್ಞಾಸುಗಳೂ ಒಳಹೊಕ್ಕು ವಿಚಾರಮಾಡಿ ಅದರ ಪ್ರಯೋಜನ ಸುಖವನ್ನನುಭವಿಸಲೆಂಬುದೇ ಈ ಚಿಕ್ಕ ಲೇಖನದ ಉದ್ದೇಶವು.

# ಪ್ರದೋಷಮಹಿಮೆ

'ಪ್ರದೋಷ'ವೆಂದರೇನು? ಎಂಬುದು ಕೆಲವರ ಪ್ರಶ್ನೆ. ಪಂಚಾಂಗಗಳಲ್ಲಿ ಪ್ರತಿ ತಿಂಗಳ ಶುಕ್ಲಕೃಷ್ಣಪಕ್ಷಗಳಲ್ಲಿಯೂ ತ್ರಯೋದಶೀದಿನ ಪ್ರದೋಷವೆಂದು ಬರೆದಿರುತ್ತದೆ. ತ್ರಯೋದಶೀತಿಥಿಯು ಪರಮೇಶ್ವರನಿಗೆ ಪ್ರಿಯವಾದದ್ದು. ಅದು ಸಂಧ್ಯಾಕಾಲ ವ್ಯಾಪಿನಿಯಾದ ರಾತ್ರಿಗೆ '**ಪ್ರದೋಷ**'ವೆಂದು ಹೆಸರು. ದೋಷಾ ಎಂದರೆ ರಾತ್ರಿಯು. ಪ್ರ ಎಂದರೆ ಪ್ರಕೃಷ್ಟ- ಶ್ರೇಷ್ಠವಾದದ್ದು ಎಂದಭಿಪ್ರಾಯ. ಯಾವ ರಾತ್ರಿಯು ಪರಮೇಶ್ವರನಿಗೆ ಹೆಚ್ಚಿನ ಪ್ರಿಯವಾದದ್ದೋ ಅದನ್ನು ಪ್ರದೋಷವೆಂದು ಕರೆಯುತ್ತಾರೆ.

ಮತ್ತೊಂದು ಅರ್ಥದಲ್ಲಿ ಪ್ರತಿದಿನವೂ ಸಂಜೆ ಐದು ಘಂಟೆಯ ಅನಂತರದ ಕಾಲವನ್ನು 'ಪ್ರದೋಷಕಾಲ'ವೆಂದು ಕರೆಯುತ್ತಾರೆ. ಇದೂ ಸಹ ಈಶ್ವರನಿಗೆ ಪ್ರಿಯವಾದ ಕಾಲವೆಂದು ಬಲ್ಲವರ ಅಭಿಪ್ರಾಯ. ಹಗಲನ್ನು ಐದು ವಿಭಾಗಮಾಡಿ ಉಷಃಕಾಲ, ಪ್ರಾತಃಕಾಲ, ಸಂಗಮಕಾಲ, ಮಧ್ಯಾಹ್ನಕಾಲ, ಪ್ರದೋಷಕಾಲ - ಎಂಬ ಹೆಸರುಗಳಿಂದ ಕಾಲವಿದರು ಕರೆಯುತ್ತಾರೆ. ಭಾರತದೇಶದಲ್ಲಿ ಪ್ರಧಾನವಾದ ಶಿವದೇವಾಲಯಗಳಲ್ಲಿ ಈ ಐದು ಕಾಲಗಳಲ್ಲಿಯೂ ಪರಮೇಶ್ವರನಿಗೆ ಪೂಜಾದಿಗಳು ನಡೆಯುತ್ತವೆ.

ಪ್ರದೋಷಕಾಲದ ಮಹಿಮೆಯನ್ನು ವರ್ಣಿಸುವ '**ಪ್ರದೋಷಸ್ತೋತ್ರ**'ವೆಂಬ ಒಂದು ಸ್ತುತಿಯು ಸ್ಕಾಂದಮಹಾಪುರಾಣದಲ್ಲಿದೆ. ಇದನ್ನು ಶಿವಭಕ್ತರೆಲ್ಲರೂ ಸಾಮಾನ್ಯವಾಗಿ ಪಠಿಸುತ್ತಾರೆ. ಈ ಸ್ತೋತ್ರದ ಭಾವಾರ್ಥವನ್ನು ಆಧಾರವಾಗಿಟ್ಟುಕೊಂಡು ಈ ಲೇಖನವನ್ನು ಬರೆದಿರುತ್ತೇನೆ.

ಪುರಾಣಕರ್ತರಾದ ಭಗವಾನ್ ವೇದವ್ಯಾಸರು ಈ ಸ್ತೋತ್ರವನ್ನು ಆರಂಭಿಸುವಾಗ '**ಸತ್ಯಂ ಬ್ರವೀಮಿ ಪರಲೋಕಹಿತಂ ಬ್ರವೀಮಿ ಸಾರಂ ಬ್ರವೀಮಿ ಉಪನಿಷದ್ಧೃದಯಂ ಬ್ರವೀಮಿ**' ಎಂದು ಉಪಕ್ರಮಮಾಡಿದ್ದಾರೆ. 'ನಿಜವನ್ನು ಹೇಳುತ್ತಿದ್ದೇನೆ. ಪರಲೋಕಕ್ಕೆ ಹಿತವಾದ, ಧರ್ಮದ ಸಾರವಾದ, ಉಪನಿಷತ್ತುಗಳ ತಿರುಳಾದ ತತ್ತ್ವವನ್ನು ಹೇಳುವೆನು. ಕೇಳಿರಿ' ಎಂದು ಅದರ ಅರ್ಥ. ಅದು ಯಾವದು? ಎಂದರೆ '**ಈಶ್ವರಪದಾಂಬುರುಹಸ್ಯ ಸೇವಾ**' ಎಂದು ಉತ್ತರವನ್ನು ಕೊಟ್ಟಿರುತ್ತಾರೆ. ಅಸಾರವಾದ ಈ ಸಂಸಾರವನ್ನು ತನ್ನ ಕರ್ಮಗತಿಗಳ ನಿಮಿತ್ತವಾಗಿ ಪಡೆದುಕೊಂಡಿರುವ ಈ ಪ್ರಾಣಿ

ಗಳಿಗೆ ಸಾರವಾದದ್ದೆಂಬುದು ಒಂದೇ. ಅದೇ ಪರಮೇಶ್ವರನ ಸೇವೆ – ಎಂದು ಶ್ರೀ ವೇದವ್ಯಾಸರ ಅಭಿಪ್ರಾಯವಾಗಿದೆ.

ಮನುಷ್ಯರಲ್ಲಿ ದರಿದ್ರರೆಂದರೆ ಯಾರು? ಯಾರು ಮನೆಮಠ, ಹಣಕಾಸುಗಳಿಲ್ಲದೆ ಹೊಟ್ಟೆಗೆ ಅನ್ನವಿಲ್ಲದೆ ಮೈಗೆ ಬಟ್ಟೆಯಿಲ್ಲದೆ ಇರುವರೋ ಅವರು ಎಂದು ನಾವು ಭಾವಿಸಿದ್ದೇವೆ. ಇದು ಸರಿಯೆ. ಆದರೆ ಶ್ರೀವೇದವ್ಯಾಸರ ದೃಷ್ಟಿಯಲ್ಲಿ ಲೌಕಿಕ ಸಂಪತ್ತಿಗಿಂತಲೂ ಪರಮೇಶ್ವರನ ಭಕ್ತಿ, ಅವನ ಅಸ್ತಿತ್ವದಲ್ಲಿ ನಂಬಿಕೆ – ಇವು ಇಲ್ಲದವರೇ ದರಿದ್ರರೆಂದು ಕರೆಯಲ್ಪಡುವರು. ಏಕೆಂದರೆ ಈಗ ಒಂದು ವೇಳೆ ಲೌಕಿಕ ಸಂಪತ್ತಿಗಿಂತಲೂ ಪರಮೇಶ್ವರನ ಭಕ್ತಿ, ಅವನ ಅಸ್ತಿತ್ವದಲ್ಲಿ ನಂಬಿಕೆ – ಇವು ಇಲ್ಲದವರೇ ದರಿದ್ರರೆಂದು ಕರೆಯಲ್ಪಡುವರು. ಏಕೆಂದರೆ ಈಗ ಒಂದು ವೇಳೆ ಧನಕನಕ ಸಂಪನ್ನರಾಗಿದ್ದರೂ ಯಾರು ಪ್ರದೋಷಸಮಯದಲ್ಲಿ ಪರಮೇಶ್ವರನನ್ನು ಭಜಿಸುವದಿಲ್ಲವೋ, ಅಥವಾ ಪೂಜಿತನಾದ ಶಿವನನ್ನು ನಮಸ್ಕರಿಸುವದಿಲ್ಲವೋ ಶಿಕಥೆಯನ್ನು ಕೇಳುವದಿಲ್ಲವೋ ಅಂಥ ಮನುಷ್ಯರು ಮುಂದೆ ಜನ್ಮಜನ್ಮಗಳಲ್ಲಿಯೂ ದರಿದ್ರರಾಗಿಯೇ ಇರುತ್ತಾರೆ – ಎಂದು ತಿಳಿಸುತ್ತಾರೆ. ಇದಕ್ಕೆ ವಿಪರೀತವಾಗಿ ಯಾರು ಪ್ರದೋಷಕಾಲದಲ್ಲಿ ಅನನ್ಯಮನಸ್ಕರಾಗಿ ಶಿವನನ್ನು ಪೂಜಿಸುತ್ತಾರೋ ಅಂಥವರು ಎಂದೆಂದಿಗೂ ಧನಧಾನ್ಯಕಳತ್ರಪುತ್ರಸಮೃದ್ಧಿಯಿಂದ ಕೂಡಿರುತ್ತಾರೆ – ಇದು ಋಷಿಗಳ ಅಭಿಪ್ರಾಯ.

ಪರಮೇಶ್ವರನನ್ನು ಪ್ರದೋಷಕಾಲದಲ್ಲಿಯೇ ಏಕೆ ಪೂಜಿಸಬೇಕು? ಅದರ ಹೆಚ್ಚುಗಾರಿಕೆ ಏನು? ಎಂದರೆ ಪುರಾಣಗಳಲ್ಲಿ ವರ್ಣಿಸಿರುವಂತೆ ಪರಮೇಶ್ವರನು ತನ್ನ ವಾಸಸ್ಥಾನವಾದ ಕೈಲಾಸದಲ್ಲಿ ತ್ರೈಲೋಕ್ಯಮಾತೆಯಾದ ಗೌರಿಯನ್ನು ಉಚ್ಚಾಸನದಲ್ಲಿ ಕುಳ್ಳಿರಿಸಿ ತಾನು ನರ್ತನಮಾಡುವನು. ಆಗ ದೇವತೆಗಳೆಲ್ಲರೂ ಅವನನ್ನು ಸೇವಿಸುತ್ತಿರುವರು. ಇಂತ ಸಮಯದಲ್ಲಿ ಪೂಜಿಸಿದರೆ ಪರಮೇಶ್ವರನೊಡನೆ ಎಲ್ಲಾ ದೇವತೆಗಳನ್ನೂ ಪೂಜಿಸಿದ ಫಲವು ಬರುವದು.

ಪರಶಿವನು ನರ್ತನವನ್ನು ಏಕೆಮಾಡುವನು? ಎಂದರೆ ಅದು ಲೋಕಕಲ್ಯಾಣಕ್ಕಾಗಿಯೇ ಆಗಿರುತ್ತದೆ. ಜಗನ್ಮಾತೆಯನ್ನು ಎಲ್ಲರೂ ಗೌರವಿಸಬೇಕೆಂದು ಮೊದಲು ಪರಮೇಶ್ವರನು ತಾನೇ ಆಕೆಯನ್ನು ಕುಳ್ಳಿರಿಸಿ ಪೂಜಿಸಿದ್ದರ ಸೂಚನೆಯಾಗಿದೆ. ಇನ್ನು ನರ್ತನವೆಂಬುದು ಸಂತೋಷದ ದ್ಯೋತಕವು. ಆತ್ಮಾರಾಮನಾದ ಪರಶಿವನು ತನ್ನ ಆನಂದವನ್ನು ಪ್ರಕಟಿಸುವದಕ್ಕಾಗಿ ಹಾಗೆ ನರ್ತನಮಾಡುತ್ತಾನೆ. ಅದೇ ಸಮಯದಲ್ಲಿ

ಸನಕಾದಿ ಮಹರ್ಷಿಗಳಿಗೆ ತನ್ನ ಡಮರುಗ ಶಬ್ದದಿಂದ ಶಾಸ್ತ್ರೋಪದೇಶವನ್ನೂ ಮಾಡುತ್ತಾನೆ. ಇಂತ ಡಮರುಗನಾದವೇ 'ಮಾಹೇಶ್ವರಸೂತ್ರ' ಗಳೆಂದು ಪ್ರಸಿದ್ಧ ವಾಗಿದ್ದು ವ್ಯಾಕರಣಶಾಸ್ತ್ರದ ಮೂಲಾಧಾರಗಳಾಗಿವೆ. ಇನ್ನು ಪ್ರಲಯಕಾಲದಲ್ಲಿ ಭೂತ ಗಳನ್ನು ತನ್ನ ನರ್ತನದಿಂದ ಮೋಹನಗೊಳಿಸಿ ನಾಶಮಾಡುವದೂ ಸಂಹಾರಮಾಡು ವದೂ ಅವನ ಒಂದು ಲೀಲೆಯೇ ಆಗಿದೆ. ಹೀಗೆಯೇ ನರ್ತನಕ್ಕೆ ಇನ್ನೂ ಅನೇಕ ಪ್ರಯೋಜನಗಳನ್ನು ಕಲ್ಪಿಸಬಹುದಾಗಿದೆ. ಇಂಥ ಪರಮೇಶ್ವರನ ನೃತ್ಯದ ವಿವರವನ್ನು ಮುಂದಿನ ಲೇಖನ ದಲ್ಲಿ ತಿಳಿಸುವೆನು.

ಖಖಖಖಖ

# ಶಿವತಾಂಡವಲೀಲೆ

ಪ್ರದೋಷಕಾಲದಲ್ಲಿ ಪರಶಿವನು ನರ್ತನಮಾಡುವನೆಂಬ ವಿಚಾರವನ್ನು ನನ್ನ ಹಿಂದಿನ ಲೇಖನದಲ್ಲಿ ಪ್ರಸ್ತಾಪಿಸಿದ್ದೆನು. ಈಗ ಆ ನೃತ್ಯದ ವಿವರಣೆಯನ್ನು ಪ್ರದೋಷ ಸ್ತೋತ್ರದಲ್ಲಿ ವರ್ಣಿಸಿರುವ ರೀತಿಯಿಂದ ಇಲ್ಲಿ ತಿಳಿಸುವೆನು.

ನರ್ತನವೆಂಬುದು ಆನಂದಾತಿರೇಕದಿಂದ ಹೊರಬರುವ ಒಂದಾನೊಂದು ದೈಹಿಕವ್ಯಾಪಾರವು. ಚಿಕ್ಕಮಕ್ಕಳು ತಮಗೆ ಇಷ್ಟವಾದ ವಸ್ತುವು ದೊರೆತಕೂಡಲೆ ಕುಣಿದು ಕುಪ್ಪಳಿಸುತ್ತವೆ. ಹಾಗೆಯೇ ಬ್ರಹ್ಮಜ್ಞಾನಿಗಳೂ ತಮ್ಮ ಆನಂದಾನುಭವವನ್ನು ಪ್ರಕಟಿಸು ವದಕ್ಕಾಗಿ ಕುಣಿಯುತ್ತಾರೆ. ಯಾರೇ ಆಗಲಿ ಅತಿಯಾದ ಸಂತೋಷವುಂಟಾದರೆ ಕುಣಿಯುವದು ಸ್ವಾಭಾವಿಕ. ಹೀಗಿರುವಲ್ಲಿ ಪರಶಿವನು ಆತ್ಮಾರಾಮನೂ ಆತ್ಮಕ್ರೀಡನೂ ಆಗಿರುವದರಿಂದ ತನ್ನ ನರ್ತನನಿಂದ ಬ್ರಹ್ಮವಿದರಾದ ಋಷಿಮುನಿಗಳನ್ನೂ ದೇವತೆ ಗಳನ್ನೂ ಭಕ್ತವೃಂದವನ್ನೂ ಸಂತೋಷಗೊಳಿಸಲು ಹೀಗೆ ಕುಣಿಯುತ್ತಾನೆ. ಆದರೆ ಈ ನರ್ತನವು ಒಂದಾನೊಂದು ವ್ಯವಸ್ಥೆಯಿಂದ ಕೂಡಿದ್ದು ರಾಗತಾಳಲಯಬದ್ಧವಾಗಿ ಗೀತೆ ಗಳೊಡನೆ ಶಿಸ್ತಿನಿಂದ ಪ್ರದರ್ಶಿತವಾದಾಗ ನಾಟ್ಯಶಾಸ್ತ್ರವಾಗಿ ಪರಿಣಮಿಸುತ್ತದೆ. ನಟರಾಜನೇ ಆಗಿರುವ ಶಿವನ ನೃತ್ಯವಂತೂ ಇಡಿಯ ಭರತನಾಟ್ಯಶಾಸ್ತ್ರಕ್ಕೆಲ್ಲ ಮೂಲ ವಾಗಿದೆಯೆಂಬುದನ್ನು ಹೇಳಬೇಕಾದದ್ದೇನೂ ಇಲ್ಲ. ಕೈಲಾಸದಲ್ಲಿ ಪ್ರದೋಷಕಾಲದಲ್ಲಿ ನಡೆಯುವ ನಾಟ್ಯವನ್ನು ಶ್ರೀವೇದವ್ಯಾಸರು ಹೀಗೆ ವರ್ಣಿಸಿದ್ದಾರೆ:

"ವಾಗ್ದೇವೀ ಧೃತವಲ್ಲಕೀ ಶತಮಖೋ ವೇಣುಂ ದಧತ್ ।
ಪದ್ಮಜಃ ತಾಲೋಗ್ನಿದ್ರಿಕರೋ ರಮಾ ಭಗವತೀ ಗೇಯಪ್ರಯೋಗಾನ್ವಿತಾ ।
ವಿಷ್ಣುಃ ಸಾಂದ್ರ ಮೃದಂಗವಾದನಪಟುಃ ದೇವಾಃ ಸಮನ್ತಾತ್ ಸ್ಥಿತಾಃ ।
ಸೇವನ್ತೇ ತಮನಂ ಪ್ರದೋಷ ಸಮಯೇ ದೇವಂ ಮೃಡಾನೀಪತಿಮ್ ॥"

ಪ್ರದೋಷಸಮಯದಲ್ಲಿ ನಡೆಯುವ ಈ ನೃತ್ಯದ ಮುಖ್ಯನರ್ತಕನು ಪರಶಿವನು. 'ಬ್ರಹ್ಮವು ತಾನೊಂದೇ ಇದ್ದುಕೊಂಡು ಮಾಯೆಯಿಂದ ನಾನಾ ರೂಪಗಳನ್ನು ಧರಿಸಿ ನಟನಂತೆ ಎಲ್ಲಾ ವ್ಯವಹಾರಗಳಿಗೂ ಆಧಾರವಾಗಿದೆ' - ಎಂದು ಬ್ರಹ್ಮ ಸೂತ್ರ ಭಾಷ್ಯದಲ್ಲಿ ಶ್ರೀಶಂಕರಾಚಾರ್ಯರು ಬ್ರಹ್ಮವನ್ನೇ ನರ್ತಕನೆಂದು ಹೆಸರಿಸಿದ್ದಾರೆ. ಅದೇ ಬ್ರಹ್ಮವೇ ಇಲ್ಲಿ ಶಿವನೆಂದು ವರ್ಣಿಸಲ್ಪಟ್ಟಿದೆ. ಇನ್ನು ನರ್ತನಕ್ಕೆ ತಕ್ಕ ತಾಳಮೇಳಗಳು ಬೇಕಷ್ಟೆ! ಸಕಲ ವಿದ್ಯಾಧಿದೇವತೆಯಾದ ಸರಸ್ವತಿಯೇ ವೀಣೆಯನ್ನು ನುಡಿಸುವವಳು, ತ್ರೈಲೋಕ್ಯಾಧಿಪತಿಯಾದ ದೇವೇಂದ್ರನೇ ಕೊಳಲೂದುವವನು, ಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮನೇತಾಳವನ್ನು ಹಾಕುವವನು, ಜಗತ್‌ಸ್ಥಿತಿಕರ್ತನೂ ವೈಕುಂಠವಾಸಿಯೂ ಆದ ನಾರಾಯಣನ ಪ್ರಿಯಪತ್ನಿಯಾದ ಭಗವತೀ ಲಕ್ಷ್ಮೀದೇವಿಯೇ ಹಾಡುವವಳು, ಇನ್ನು ಲಯಕ್ಕೆ ಅನುಗುಣವಾಗಿ ನಯವಾಗಿ ಮೃದಂಗವನ್ನು ನುಡಿಸುವವನು ಯಾರೆಂದರೆ ಶ್ರೀಮಹಾವಿಷ್ಣುವೇ. ಇಂಥ ನೃತ್ಯವನ್ನು ನೋಡುವ ಪುಣ್ಯಶಾಲಿಗಳು ದೇವತೆಗಳು. ಹೀಗೆ ಕೈಲಾಸದಲ್ಲಿ ತಾಂಡವನೃತ್ಯ ಪ್ರದರ್ಶನವು ನಡೆದಿರುತ್ತದೆ. ಸಾಮಾನ್ಯರಿಗೆ ಇಂಥ ನರ್ತನವನ್ನು ನೋಡುವ ಅವಕಾಶವಿರಲಾರದು. ಪುಣ್ಯವಂತರಾದ ಋಷಿಮುನಿಗಳು, ದೇವತೆಗಳು ಮಾತ್ರ ನೋಡಬಲ್ಲರು - ಎಂದು ಇಲ್ಲಿ ತಿಳಿಸಿದಂತಾಗಿದೆ.

ಮಾನವನ ದೃಷ್ಟಿಯಿಂದ ಒಬ್ಬೊಬ್ಬ ದೇವತೆಯೇ ಸಾಕು, ಅತ್ಯುತ್ಕೃಷ್ಟವಾದ ಮಹಿಮೆಯುಳ್ಳದ್ದಾಗಿರುತ್ತದೆ. ಇಡಿಯ ಜೀವಮಾನವೆಲ್ಲ ಪ್ರಯತ್ನಪಟ್ಟರೂ ಒಬ್ಬ ದೇವತೆಯನ್ನು ಕೂಡ ಸಾಕ್ಷಾತ್ಕಾರಮಾಡಿಕೊಳ್ಳಲು ಈ ಹುಲುಮಾನವನಿಗೆ ಅಸಾಧ್ಯವಾಗಬಹುದು. ಗೀತೆಯಲ್ಲಿ ತಿಳಿಸಿರುವಂತೆ ಕೀರ್ತಿ, ಶ್ರೀ, ವಾಕ್, ಸ್ಮೃತಿ, ಮೇಧಾ - ಮುಂತಾದ ದೇವತೆಗಳು ಭಗವಂತನ ವಿಭೂತಿಗಳು. ಅಂಥ ದೇವತೆಗಳ ಆಭಾಸಮಾತ್ರದಿಂದಲೇ - ಎಂದರೆ ನಿಜವಾದ ಕೀರ್ತಿ ಬರದಿದ್ದರೂ ಕೀರ್ತಿಯ ಆಭಾಸದಿಂದಲೇ ತಾನು ಕೃತಕೃತ್ಯನಾದೆನೆಂತ ಮನುಷ್ಯನು ಜಂಭಕೊಚ್ಚಿಕೊಳ್ಳುವನು. ಹೀಗಿರು

ವಾಗ ನಿಜವಾದ ಕೀರ್ತಿದೇವಿಯ ಸಾಕ್ಷಾತ್ಕಾರವು ಎಲ್ಲಿ ದೊರೆಯಬೇಕು? ಅಂತೂ ಒಬ್ಬೊಬ್ಬ ದೇವತೆಯನ್ನು ಕಾಣುವದೇ ಪರಮದುರ್ಲಭವಾಗಿರುವಾಗ ಎಲ್ಲಾ ದೇವತೆಗಳನ್ನೂ ಒಟ್ಟಿಗೆ ಒಂದೇ ಜಾಗದಲ್ಲಿ ಕಾಣುವದು ಅಸಾಧ್ಯದ ಕೆಲಸವೇ ಸರಿ-ಎನಿಸುವದು. ಇಂಥ ಅಸಾಧ್ಯವಾದದ್ದು ಕೂಡ ಪರಮೇಶ್ವರನ ಸನ್ನಿಧಿಯಲ್ಲಿ ಸಾಧ್ಯವಾಗಿದೆ. ಏಕೆಂದರೆ ಎಲ್ಲಾ ದೇವತೆಗಳೂ ಆ ಪರಮೇಶ್ವರನ ಸನ್ನಿಧಿಯಲ್ಲಿ ಪ್ರದೋಷಕಾಲದಲ್ಲಿ ಒಟ್ಟಿಗೆ ಸೇರಿ ಆ ಮಹಾದೇವನನ್ನು ಸೇವಿಸುತ್ತಿರುವರು. ಆದ್ದರಿಂದ ಪ್ರದೋಷಕಾಲದಲ್ಲಿ ಶಿವನೊಬ್ಬನನ್ನೇ ಪೂಜಿಸಬೇಕು. ಅವನ ಪೂಜೆಯಿಂದಲೇ ಎಲ್ಲಾ ದೇವತೆಗಳ ಪೂಜೆಯೂ ನೆರವೇರಿದಂತಾಗಿ ಸಕಲ ಪುರುಷಾರ್ಥಗಳೂ ಒಟ್ಟಿಗೆ ಲಭಿಸುವವು.

ವಾಚಕರೆ, ಹೀಗೆ ದೇವದೇವನಾದ ಪರಮೇಶ್ವರನ ಆರಾಧನೆಯಿಂದ ಎಲ್ಲಾ ದೇವತೆಗಳ ಪ್ರಸಾದದಿಂದಲೂ ದೊರಕಬಹುದಾದ ಇಷ್ಟಕಾಮ್ಯಾರ್ಥಗಳೆಲ್ಲವೂ ದೊರೆಯುತ್ತವೆ. ಭುಕ್ತಿಮುಕ್ತಿಗಳು ಒಂದೇ ಬಾರಿಗೆ ದೊರೆಯುವಂಥ ಈ ಸನ್ನಿವೇಶವು ಅಮೋಘವಾದದ್ದು. ಆದ್ದರಿಂದ ನಾವು ಪ್ರದೋಷಕಾಲದಲ್ಲಿ ಪರಶಿವನನ್ನು ಮರೆಯದೆ ಪೂಜಿಸಿ ಆರಾಧಿಸಿ ನಮ್ಮ ದುಃಖದಾರಿದ್ರ್ಯಗಳನ್ನೆಲ್ಲ ಕಳೆದುಕೊಂಡು ಕೃತಾರ್ಥರಾಗಬೇಕೆಂದು ಶ್ರೀವೇದವ್ಯಾಸರು ಉಪದೇಶಿಸಿದ್ದಾರೆ. ಹಾಗೆ ಮಾಡೋಣ.

# ಗ್ರಂಥ ಪರಿಚಯ

**ಶ್ರೀಮತ್ಪೂಜ್ಯಶಂಕರಭಗವತ್ಪಾದರವರ ಅದ್ವೈತಸಿದ್ಧಾಂತ :** ಬರೆದವರು ಮತ್ತು ಪ್ರಕಾಶಕರು; ವೇದಾಂತ ಸುಬ್ಬಯ್ಯಶಾಸ್ತ್ರಿಗಳು, 103 ರತ್ನವಿಲಾಸ ಬೀದಿ, ಬೆಂಗಳೂರು - 4; ಪುಟಗಳು: ಕ್ರೌನ್ 1/8 ರ 31 ;

ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪ್ರಕಟವಾಗುವ ಗ್ರಂಥಪರಿಚಯದ ಲೇಖನಗಳು ಸಂಕ್ಷಿಪ್ತವಾಗಿರುತ್ತವೆ. ಆದರೆ ಪ್ರಕೃತಗ್ರಂಥವು ಪಂಡಿತರೆಲ್ಲರಮೇಲೆ ಒಂದು ಮಹಾಪರಾಧವನ್ನು ಹೊರಿಸಿ (1). ಮಾಯೆ ಜ್ಞಾನಬಾಧಿತವಲ್ಲ, (2). ಸರ್ವಜ್ಞತ್ವ ಸರ್ವಶಕ್ತಿತ್ವಾದಿಗಳು ಬ್ರಹ್ಮಸ್ವರೂಪವೇ, ಆದ್ದರಿಂದ ಜ್ಞಾನಬಾಧಿತವಲ್ಲ, ಸೃಷ್ಟ್ಯಾದಿಗಳು ಈಶ್ವರಾಧೀನವಾಗಿರುವದರಿಂದ ಜ್ಞಾನಬಾಧಿತವಲ್ಲ-ಎಂಬುದು ಶ್ರುತಿಭಾಷ್ಯಸಮ್ಮತ (ಪು.28.)

(3). 'ತತ್ತ್ವಮಸಿ' ಮಹಾವಾಕ್ಯದಲ್ಲಿ .......... ತ್ವಂಪದಲಕ್ಷ್ಯಾರ್ಥವಾದ ಕೇವಲ ಸಾಕ್ಷಿ ಚೈತನ್ಯವು ನಿರ್ವಿಕಾರವಾಗಿದ್ದರೂ ಅದೇ ಸರ್ವೇಶ್ವರ, ಸರ್ವಜ್ಞ, ಜಗತ್ಕಾರಣವಾದ ಬ್ರಹ್ಮಸ್ವರೂಪವೇ (ಪುಟ 28,29) ಎಂದು ಶ್ರುತಿಭಾಷ್ಯಾರ್ಥಗಳಿಂದ ಸಿದ್ಧ. ಇದನ್ನು ಒಪ್ಪದ ಪಂಡಿತರ ಮತವು ಶ್ರುತಿವಿರುದ್ಧ, ಭಾಷ್ಯವಿರುದ್ಧ, ಯುಕ್ತ್ಯನುಭವಗಳಿಗೆ ವಿರುದ್ಧ (ಪು.1) ಎಂದು ಸ್ಥಾಪಿಸುವದಕ್ಕೇ ಹೊರಟಿರುತ್ತದೆ. ಆದ್ದರಿಂದ ಗ್ರಂಥಕಾರರು ವೇದಾಂತಿಗಳ ಮೇಲೆಲ್ಲ ಹೊರಿಸಿರುವ ಈ ಅಪರಾಧವು ಕಲ್ಪನಾಮಾತ್ರವೆಂದೂ ಅವರು ಉದಾಹರಿಸಿರುವ ಭಾಷ್ಯಗಳೂ ಯುಕ್ತಿಗಳೂ ಅವರಿಗೆ ವಿರುದ್ಧವಾಗಿಯೇ ಇರುವವೆಂದೂ ತೋರಿಸುವದಕ್ಕೆ ಈ ವಿಮರ್ಶೆಯನ್ನು ಸ್ವಲ್ಪ ವಿಸ್ತಾರವಾಗಿಯೇ ಬರೆಯಬೇಕಾಗಿರುತ್ತದೆ. ಇದನ್ನು ಕೇವಲ ವಿಮರ್ಶೆ ಎಂದು ಭಾವಿಸದೆ ಒಂದು ಸ್ವತಂತ್ರ ಲೇಖನವೇ ಎಂದು ಇಟ್ಟುಕೊಂಡರೂ ಬಾಧಕವಾಗಲಾರದು.

ಗ್ರಂಥದಲ್ಲಿ ವಿಚಾರಕ್ಕೆ ತೆಗೆದುಕೊಂಡಿರುವ ವಿಷಯವು ಶ್ರೀಮಚ್ಛಂಕರ ಭಗವತ್ಪಾದರು ಅನುಗ್ರಹಿಸಿರುವ ಸೂತ್ರಭಾಷ್ಯದ ಅಭಿಪ್ರಾಯವನ್ನು ಗೊತ್ತುಪಡಿಸುವದಕ್ಕೂ ಅದ್ವೈತವೇದಾಂತಸಿದ್ಧಾಂತದ ನಿರ್ಣಯಕ್ಕೂ ಅತ್ಯಂತವಾಗಿ ಅವಶ್ಯವಾಗಿರುತ್ತದೆ. ಆಚಾರ್ಯರು ಬ್ರಹ್ಮಸೂತ್ರಗಳ ಜನ್ಮಾದ್ಯಧಿಕರಣದ ಭಾಷ್ಯದಲ್ಲಿ ಹೀಗೆಂದು ಬರೆದಿರುತ್ತಾರೆ :

"ಬ್ರಹ್ಮವನ್ನು ಜಿಜ್ಞಾಸೆಮಾಡಬೇಕು" ಎಂದು ಮೊದಲನೆಯ ಸೂತ್ರದಲ್ಲಿ ಹೇಳಿದೆ. ಆ ಬ್ರಹ್ಮದ ಲಕ್ಷಣವೇನು? ಎಂದರೆ ಅದಕ್ಕೆ ಭಗವಾನ್ ಸೂತ್ರಕಾರರು '**ಜನ್ಮಾದ್ಯಸ್ಯ ಯತಃ**' ಎಂದು ಬರೆದಿರುತ್ತಾರೆ.

ಈ ಭಾಷ್ಯವಾಕ್ಯದಲ್ಲಿ ಬ್ರಹ್ಮದ ಲಕ್ಷಣವನ್ನು ತಿಳಿಸುವದಕ್ಕೆಂದೇ ಸೂತ್ರವನ್ನು ಬರೆದಿದೆ ಎಂದು ಹೇಳಿದೆಯಷ್ಟೆ? ಇಲ್ಲಿ ಲಕ್ಷಣವೆಂದರೆ ತರ್ಕಶಾಸ್ತ್ರದವರು ಒಪ್ಪಿರುವಂತೆ ಸಾಧಾರಣಧರ್ಮವಲ್ಲ, ಅಸಾಧಾರಣ? ಬ್ರಹ್ಮದ ಸ್ವರೂಪವೆಂದೇ ಆಚಾರ್ಯರ ಮತ. ಆದ್ದರಿಂದ ಈ ವಾಕ್ಯದ ಅಭಿಪ್ರಾಯವನ್ನು ವೇದಾಂತಜಿಜ್ಞಾಸುಗಳೆಲ್ಲ ಅವಶ್ಯವಾಗಿ ತಿಳಿಯಬೇಕಾದದ್ದು - ಎಂದಾಯಿತು. ಇನ್ನು ಲಕ್ಷಣವಾಕ್ಯದತ್ತ ಚಿತ್ತವನ್ನು ಹೊರಳಿಸೋಣ:

"ನಾಮರೂಪಗಳಿಂದ ವ್ಯಾಕೃತವಾಗಿ, ಅನೇಕ ಕರ್ತೃಭೋಕ್ತೃಗಳಿಂದೊಡಗೂಡಿರುವ, ಗೊತ್ತಾದ ದೇಶಕಾಲನಿಮಿತ್ತಕ್ರಿಯಾಫಲಗಳಿಗೆ ಆಶ್ರಯವಾಗಿರುವ, ತನ್ನ

ರಚನೆಯು ಹೇಗಿರುವದೆಂಬುದನ್ನು ಮನಸ್ಸಿನಿಂದ ಯೋಚಿಸಿಕೊಳ್ಳುವದಕ್ಕೂ ಆಗು ವಂತಿಲ್ಲದ ಈ ಜಗತ್ತಿನ ಜನ್ಮಸ್ಥಿತಿಲಯಗಳು ಸರ್ವಜ್ಞವೂ ಸರ್ವಶಕ್ತಿಗಳುಳ್ಳದ್ದೂ ಆದ ಯಾವ ಕಾರಣದಿಂದಾಗಿರುವದೋ? 'ಅದು ಬ್ರಹ್ಮವು' ಎಂದು ವಾಕ್ಯವನ್ನು ಪೂರ್ತಿ ಮಾಡಿಕೊಳ್ಳಬೇಕು.''

ಇಲ್ಲಿ ಹೆಚ್ಚಿನ ಕಪ್ಪಕ್ಷರದಲ್ಲಿ ಅಚ್ಚುಮಾಡಿಸಿರುವ ಪದಗಳು ಪ್ರಕೃತವಿಮರ್ಶೆಗೆ ಬಹಳ ಮುಖ್ಯವಾಗಿವೆ. ಏಕೆಂದರೆ ಗ್ರಂಥಕರ್ತರು;

1. '**ನಾಮರೂಪಗಳು** ಕಾರ್ಯವಾದ್ದರಿಂದ ಮಿಥ್ಯೆ (ಪು.29) ಎಂದು ಒಪ್ಪಿರುತ್ತಾರೆ. ಆದರೆ '**ಮಾಯೆ**' (ನಾಮರೂಪಗಳಿಗೆ ಮತ್ತೊಂದು ಹೆಸರಿದು) ಜ್ಞಾನ ಬಾಧಿತವಲ್ಲ, 'ಜ್ಞಾನದಿಂದ ನಿವೃತ್ತಿಯಾಗಬೇಕಾಗಿರುವದು ಮತ್ತು ನಿವೃತ್ತಿ ಯಾಗುವದು ಅವಿದ್ಯೆ' (ಪು.28) ಎಂದು ಬರೆದಿರುತ್ತಾರೆ.

2. '**ಸರ್ವಜ್ಞತ್ವಸರ್ವಶಕ್ತಿತ್ವಾದಿಗಳು:** ಬ್ರಹ್ಮಸ್ವರೂಪವೇ. ಜ್ಞಾನಬಾಧಿತವಲ್ಲ'. **ಸೃಷ್ಟ್ಯಾದಿಗಳು** (ಜಗತ್ತಿನಜನ್ಮಸ್ಥಿತಿಲಯಗಳು) ಈಶ್ವರಾದೀನವಾಗಿರುವದರಿಂದ ಜ್ಞಾನಬಾಧಿತವಲ್ಲ' (ಪು.28) ಎಂದಿರುತ್ತಾರೆ.

3. ತ್ವಂಪದಲಕ್ಷ್ಯಾರ್ಥವಾದ ಕೇವಲ ಸಾಕ್ಷಿಚೈತನ್ಯವು ನಿರ್ವಿಕಾರವಾಗಿ ನಿರ್ವಿಶೇಷ ವಾಗಿದ್ದರೂ ಅದೇ **ಸರ್ವೇಶ್ವರನು, ಸರ್ವಜ್ಞನು, ಜಗತ್ಕಾರಣವಾದ ಬ್ರಹ್ಮ ಸ್ವರೂಪವೇ** (ಪು.29) ಎಂದಿರುತ್ತಾರೆ.

4. ಜಗತ್ತು ರಜ್ಜುಸರ್ಪದಂತೆ ಅವಿದ್ಯಾಕಲ್ಪಿತವೆಂದಾಗಲಿ ಜ್ಞಾನಬಾಧಿತವೆಂದಾಗಲಿ ಹೇಳುವದು ಭಾಷ್ಯಸಮ್ಮತವಲ್ಲ, (ಪು.27) ಎಂದಿರುತ್ತಾರೆ.

ಈ ಗ್ರಂಥದಲ್ಲಿ ಮಾಯೆ, ಸರ್ವಜ್ಞನೂ ಸರ್ವಶಕ್ತನೂ ಆದ ಈಶ್ವರ, ಜಗತ್ಕಾರಣ, ಮಹಾವಾಕ್ಯ - ಎಂಬ ನಾಲ್ಕು ವಿಷಯಗಳನ್ನು ನಿರೂಪಣೆಮಾಡಿದೆ. ಈ ವಿಷಯ ಗಳನ್ನು ಪ್ರತಿಪಾದನೆಮಾಡಿರುವ ರೀತಿಯನ್ನೂ ಗ್ರಂಥಕರ್ತರು ಆಧಾರವಾಗಿಟ್ಟು ಕೊಂಡಿರುವ ಭಾಷ್ಯವಾಕ್ಯಗಳು ಪ್ರತಿಪಾದನೆಗೆ ಎಷ್ಟರಮಟ್ಟಿಗೆ ಹೊಂದಿಕೆಯಾಗಿವೆ ಯೆಂಬುದನ್ನೂ ಪರೀಕ್ಷಿಸುವದಕ್ಕೆ ಇನ್ನು ಮುಂದೆ ಪ್ರಯತ್ನಿಸುವೆನು.

ಮೊದಲನೆಯದಾಗಿ '**ನಾಮರೂಪಗಳು ಮಿಥ್ಯ, ಆದರೆ ಮಾಯಾಬಾಧಿತ ವಲ್ಲ**' (!) ಎಂಬ ವಿಚಿತ್ರಾಭಿಪ್ರಾಯವನ್ನು ಕುರಿತು ಎರಡು ವಾಕ್ಯಗಳನ್ನು ಬರೆಯ

ಬೇಕಾಗಿದೆ. ಇದು 'ಅಗ್ನಿ ಸುಡುತ್ತದೆ ಎಂದರೆ ಒಪ್ಪಬಹುದು, ಆದರೆ ವಹ್ನಿಸುಡುವದೆಂಬುದು ಸರಿಯಲ್ಲ' ಎಂಬ ಅಭಿಪ್ರಾಯದಂತೆ ಇದೆ. ಏಕೆಂದರೆ ನಾಮರೂಪಗಳೆಂದರೇ ಮಾಯೆ. ಮಾಯೆ ಎಂದರೆ ನಾಮರೂಪಗಳೇ. ಗ್ರಂಥಕರ್ತರು 'ಈಶ್ವರನ ಪ್ರಕೃತಿ ಅಥವಾ ಮಾಯೆ ಜ್ಞಾನಬಾಧಿತವಲ್ಲವೆಂಬುದೇ ಸಿದ್ಧಾಂತವು; ಅದು ಅವನ ಸ್ವರೂಪ ಭೂತವಾದ್ದರಿಂದ ಅದ್ವೈತಹಾನಿಯೂ ಇಲ್ಲ' ಎಂದು (ಪುಟ. 5ರಲ್ಲಿ) ಬರೆದಿರುತ್ತಾರೆ. ಅದನ್ನು ಸಿದ್ಧಪಡಿಸುವದಕ್ಕೆಂದು ಅವರು ಉದಾಹರಿಸಿರುವ ಮೊಟ್ಟ ಮೊದಲನೆಯ ಭಾಷ್ಯ ವಾಕ್ಯವಿದು;

**''ಈಶ್ವರಸ್ಯ ಆತ್ಮಭೂತೇ ಇವ ಅವಿದ್ಯಾಕಲ್ಪಿತೇ, ನಾಮರೂಪೇ ತತ್ತ್ವಾನ್ಯತ್ವಾಭ್ಯಾಮ್ ಅನಿರ್ವಚನೀಯೇ ಸಂಸಾರಪ್ರಪಞ್ಚಬೀಜಭೂತೇ ಸರ್ವಜ್ಞಸ್ಯ ಈಶ್ವರಸ್ಯ ಮಾಯಾ'' ಶಕ್ತಿಃ, ಪ್ರಕೃತಿಃ ಇತಿ ಚ ಶ್ರುತಿಸ್ಮೃತ್ಯೋರಭಿಲಪ್ಯೇತೇ; ತಾಭ್ಯಾಮ್ ಅನ್ಯಃ ಸರ್ವಜ್ಞಃ ಈಶ್ವರಃ ॥''** **- ಸೂ.ಭಾ.೨-೧-೧೪**

ಈ ವಾಕ್ಯದಲ್ಲಿ ಪದಗಳನ್ನು ಬಿಡಿಬಿಡಿಸಿ ಅಕ್ಷರಸಂಯೋಜನೆಯಲ್ಲಿಯೂ ತಪ್ಪಾಗಿ ಬರೆದುಕೊಂಡಿರುವದರಿಂದಲೂ ತಮ್ಮ ಅಭಿಪ್ರಾಯಕ್ಕೇ ವಿರುದ್ಧವಾಗಿರುವ ವಾಕ್ಯವನ್ನು ಸಾಧಕವೆಂದು ಉದಾಹರಿಸಿಕೊಂಡಿರುವರಿಂದಲೂ ಗ್ರಂಥಕರ್ತರಿಗೆ ಸಂಸ್ಕೃತವು ಅಷ್ಟು ಸರಿಯಾಗಿ ಬರುವದಿಲ್ಲವೆಂದು ಇಟ್ಟುಕೊಳ್ಳಬೇಕಾಗಿದೆ. ಈ ವಾಕ್ಯದಲ್ಲಿ ಹೇಳಿರುವ ದಿಷ್ಟು;

1. ನಾಮರೂಪಗಳು ಈಶ್ವರನ ಸ್ವರೂಪವಲ್ಲ, ಅವನ ಸ್ವರೂಪವೇ ಎಂಬಂತೆ ಅವಿದ್ಯೆಯಿಂದ ಕಲ್ಪಿತವಾಗಿವೆ.
2. ನಾಮರೂಪಗಳನ್ನು 'ಮಾಯೆ', 'ಶಕ್ತಿ', 'ಪ್ರಕೃತಿ', ಎಂದು ಶ್ರುತಿಸ್ಮೃತಿಗಳಲ್ಲಿ ಕರೆದಿದೆ.
3. ಈಶ್ವರನು ಇವುಗಳಿಗಿಂತ ಅನ್ಯನು, ಎಂದರೆ ವಿಲಕ್ಷಣಸ್ವರೂಪನು.

ಈ ಮೂರು ಅಭಿಪ್ರಾಯಗಳಿಂದ ಗ್ರಂಥಕರ್ತರ ಸಿದ್ಧಾಂತವೆಲ್ಲ ಬುಡಮೇಲಾಗುವಂತಿದೆ. ಏಕೆಂದರೆ (1) ನಾಮರೂಪಗಳೇ ಮಾಯೆ ಎಂದು ಭಾಷ್ಯದಲ್ಲಿ ಹೇಳಿರುವದರಿಂದ 'ನಾಮರೂಪಗಳು ಮಿಥ್ಯೆ' (ಪ.29), 'ಮಾಯೆ ಜ್ಞಾನಬಾಧಿತವಲ್ಲ' (ಪು. 28) ಎಂಬ ಮಾತು ಅರ್ಥಹೀನವಾಯಿತು. ಮಿಥ್ಯೆ ಎಂದರೇ ಜ್ಞಾನಬಾಧ್ಯವೆಂದರ್ಥವಲ್ಲವೆ?

'ಮಾಯೆ ಜ್ಞಾನಬಾಧಿತವಲ್ಲ, ಜ್ಞಾನದಿಂದ ನಿವೃತ್ತಿಯಾಗುವದು ಅವಿದ್ಯೆ ಒಂದೇ' ಎಂದು ಬರೆದಿರುವದೂ ಈ ಭಾಷ್ಯವಾಕ್ಯದ ಅಭಿಪ್ರಾಯಕ್ಕೆ ವಿರುದ್ಧವೆಂಬುದು ಸ್ಪಷ್ಟ. ಏಕೆಂದರೆ 'ನಾಮರೂಪಗಳು ಅವಿದ್ಯಾಕಲ್ಪಿತವಾಗಿವೆ' ಎಂದು ಆಚಾರ್ಯರು ಬರೆದಿರುವದರಿಂದ 'ಮಾಯೆ'ಯು ಅವಿದ್ಯಾಕಲ್ಪಿತವೆಂದೇ ಹೇಳಿದಂತಾಯಿತು. ಅವಿದ್ಯೆಯು ಜ್ಞಾನಬಾಧಿತವಾದರೂ ಅವಿದ್ಯಾಕಲ್ಪಿತವಾದ 'ಮಾಯೆ ಜ್ಞಾನಬಾಧಿತವಲ್ಲ' ಎಂಬ ತರ್ಕವು 'ತನ್ನ ಹಣವನ್ನೆಲ್ಲ ಕಳೆದುಕೊಂಡರೂ ಅವನು ಸಾಹುಕಾರನೇ' ಎಂಬ ವಾದಕ್ಕೆ ಸಮನಾಗಿದೆ. ಅವಿದ್ಯಾಕಲ್ಪಿತವಾದದ್ದು ಬಾಧಿತವಲ್ಲದಿದ್ದರೆ ಇನ್ನು ಯಾವದು ಬಾಧಿತವಾದೀತು?

ಎರಡನೆಯದಾಗಿ '**ಈಶ್ವರನ ಈಶ್ವರತ್ವವೂ ಸರ್ವಜ್ಞತ್ವಾದಿಗಳೂ ಜ್ಞಾನಬಾಧಿತ ವಲ್ಲ!**' ಎಂದು ತೋರಿಸುವದಕ್ಕಾಗಿ ಉದಾಹರಿಸಿಕೊಂಡಿರುವ ವಾಕ್ಯವಿದು :

**'ನ ಪರಮಾರ್ಥತೋ ವಿದ್ಯಯಾ ಅಪಾಸ್ತಸರ್ವೋಪಾಧಿಸ್ವರೂಪೇ ಆತ್ಮನಿ ಈಶಿತ್ರೀಶಿತವ್ಯಸರ್ವಜ್ಞತ್ವಾದಿವ್ಯವಹಾರ ಉಪಪದ್ಯತೇ'' (ಪು. ೧೯)**

ಈ ವಾಕ್ಯವು ಪೂರ್ಣವಾಗಿ ಹೀಗಿದೆ : '**ತದೇವಂ ಅವಿದ್ಯಾತ್ಮಕೋಪಾಧಿ ಪರಿಚ್ಛೇದಾಪೇಕ್ಷಮೇವ ಈಶ್ವರಸ್ಯೇಶ್ವರತ್ವಮ್, ಸರ್ವಜ್ಞತ್ವಂ ಸರ್ವಶಕ್ತಿತ್ವಂ ಚ, ನ ಪರಮಾರ್ಥತೋ ವಿದ್ಯಯಾ, ಅಪಾಸ್ತಸರ್ವೋಪಾಧಿಸ್ವರೂಪೇ ಆತ್ಮನಿ ಈಶಿತ್ರೀಶಿತವ್ಯಸರ್ವಜ್ಞತ್ವಾದಿವ್ಯವಹಾರ ಉಪಪದ್ಯತೇ'' (ಸೂ.ಭಾ.2-1-14, ಪಾ.201).**

ಆ ವಾಕ್ಯದಲ್ಲಿ ಅಡಕವಾಗಿರುವ ಅಭಿಪ್ರಾಯಗಳಿಷ್ಟು:

1. ಈಶ್ವರನ ಈಶ್ವರತ್ವವೂ ಸರ್ವಜ್ಞತ್ವವೂ ಸರ್ವಶಕ್ತಿತ್ವವೂ ಅವಿದ್ಯಾಕಲ್ಪಿತವಾದ ಉಪಾಧಿಪರಿಚ್ಛೇದಾಪೇಕ್ಷೆಯಿಂದ ಆದದ್ದು.

2. ನಿಜವಾದ ಆತ್ಮನಲ್ಲಿ ಈ ಯಾವ ವ್ಯವಹಾರವೂ ಇಲ್ಲ.

ಈಶ್ವರತ್ವ, ಸರ್ವಜ್ಞತ್ವ, ಸರ್ವಶಕ್ತಿತ್ವ- ಇವು ಮೂರೂ ಅವಿದ್ಯಾತ್ಮಕವೆಂದು ಭಾಷ್ಯಕಾರರು ಸ್ಪಷ್ಟವಾಗಿ ಹೇಳಿದ್ದರೂ 'ಇವು ಜ್ಞಾನಬಾಧಿತವಲ್ಲ' ಎಂದು (ಪು.28ರಲ್ಲಿ) ಉಪಸಂಹಾರಮಾಡಿರುವ ಎದೆಗಾರಿಕೆಗೆ ಏನೆನ್ನಬೇಕು!

ವಾಚಕಮಹಾಶಯರೆ, ಸಂಸ್ಕೃತವನ್ನು ಅರಿಯದೆ, ಅನುಭವಾನುಸಾರಿಯಾದ

ಅದ್ವೈತವನ್ನು ತಮಗೆ ಮನಬಂದಂತೆ ವಾಕ್ಯಗಳನ್ನುದಾಹರಿಸಿ ಮನಬಂದಂತೆ ಅರ್ಥ ಮಾಡುವದರಿಂದ ವೇದಾಂತಸಿದ್ಧಾಂತಕ್ಕೆ ಎಷ್ಟು ಅಪಾಯವೆಂಬುದು ಈಗಲಾದರೂ ತಿಳಿಯತಷ್ಟೆ?

ಇಲ್ಲಿ (1) 'ಮಾಯೆ ಜ್ಞಾನಬಾಧಿತವೆನ್ನಬಹುದೆ? ಎಂಬ ಪ್ರಶ್ನೆಗೆ 'ಈಶ್ವರನ ಪ್ರಕೃತಿ ಅಥವಾ ಮಾಯೆ ಬಾಧಿತವಲ್ಲವೆಂಬುದೇ ಸಿದ್ಧಾಂತವು ಎಂಬ ಅಭಿಪ್ರಾಯವು ಭಾಷ್ಯ ವಿರುದ್ಧ; ಏಕೆಂದರೆ ನಾಮರೂಪಗಳೆಂದರೂ ಮಾಯೆಯೆಂದರೂ ಒಂದೇ; ಮಾಯೆಯು ಅವಿದ್ಯಾಕಲ್ಪಿತವಾದ್ದರಿಂದ ಅವಿದ್ಯೆ ಬಾಧಿತವಾದಾಗ ಮಾಯೆಯೂ ಬಾಧಿತವಾಗುತ್ತದೆ ಎಂದು ನಿರ್ಣಯವನ್ನು ಹೇಳಿರುತ್ತೇನೆ. (2) ಈಶ್ವರನೂ ಅವನ ಸರ್ವಜ್ಞತ್ವಾದಿಗಳೂ ಬಾಧಿತವೆ?' ಎಂಬ ಪ್ರಶ್ನೆಗೆ 'ಸರ್ವಜ್ಞತ್ವಾದಿಗಳು ಜ್ಞಾನಬಾಧಿತವಲ್ಲ' ಎಂಬ ಗ್ರಂಥಕರ್ತರ ಉತ್ತರವು ಭಾಷ್ಯವಿರುದ್ಧ; ಏಕೆಂದರೆ ಇವು ಅವಿದ್ಯಾತ್ಮಕವೆಂದು ಆಚಾರ್ಯರು ಹೇಳಿರುತ್ತಾರೆ ಎಂದು ನಿರ್ಣಯವನ್ನೂ ಹೇಳಿರುತ್ತೇನೆ.

ಇಲ್ಲಿ ಒಂದು ವಿಷಯವನ್ನು ನೆನಪಿನಲ್ಲಿಟ್ಟಿರತಕ್ಕದ್ದು ಅವಶ್ಯ; ಮಾಯೆ, ಸರ್ವಜ್ಞತ್ವ ಸೃಷ್ಟ್ಯಾದಿಗಳು ಬ್ರಹ್ಮರೂಪವೇ. ಆದ್ದರಿಂದ ಜ್ಞಾನಬಾಧಿತವಲ್ಲ- ಎಂಥ ಗ್ರಂಥಕಾರರು ಬರೆದಿರುತ್ತಾರೆ. ಅದು ಒಂದರ್ಥದಲ್ಲಿ ಸರಿ, ಇನ್ನೊಂದರ್ಥದಲ್ಲಿ ತಪ್ಪು ಏಕೆಂದರೆ, (1) **ಅಸದೇವ ತರ್ಹಿ ಸರ್ವಂ ಯದ್ ಗೃಹ್ಯತೇ, ರಜ್ಜುರಿವ ಸರ್ಪಾದ್ಯಾಕಾರೇಣ । ನ । ಸತ ಏವ ದ್ವೈತಭೇದೇನ ಅನ್ಯಥಾಗೃಹ್ಯಮಾಣತ್ವಾತ್ ನಾಸತ್ತ್ವಂ ಕಸ್ಯಚಿತ್ ಕ್ವಚಿತ್ ಇತಿ ಬ್ರೂಮಃ ॥**

'ಹಾಗಾದರೆ ಹಗ್ಗದಲ್ಲಿ ತೋರುವ ಹಾವಿನಂತೆ ಯಾವಯಾವದು ಕಾಣಬರುತ್ತದೆಯೋ ಅದೆಲ್ಲವೂ ಅಸತ್ತೇ ಎಂದಾಯಿತು! - ಎಂದರೆ ಹಾಗಲ್ಲ; ಸದ್ರೂಪವಾದ ಬ್ರಹ್ಮವೇ ದ್ವೈತರೂಪದಿಂದ ಕಾಣುತ್ತಿರುವದರಿಂದ ಯಾವದೂ ಎಂದಿಗೂ ಅಸತ್ತಲ್ಲ ಎನ್ನುತ್ತೇವೆ' ಎಂಬ ಛಾಂದೋಗ್ಯಭಾಷ್ಯದರ್ಥವನ್ನು ಮನದಂದರೆ ಜಗತ್ತೆಲ್ಲವೂ ಸಾರ ಗ್ರಹಣದೃಷ್ಟಿಯಿಂದ ನೋಡಿದಾಗ ಸತ್ಯವೇ ಆಗಿರುತ್ತದೆ.

'ಹಾಗಾದರೆ ಜಗತ್ತು ಮಿಥ್ಯೆ, ಜ್ಞಾನಬಾಧಿತ - ಎನ್ನುವದು ಹೇಗೆ?' - ಎಂದು ಯಾರಾದರೂ ಕೇಳಬಹುದು. ಇದಕ್ಕೂ ಉತ್ತರವು ಛಾಂದೋಗ್ಯಭಾಷ್ಯದಲ್ಲಿಯೇ ಇದೆ;

**''ಸರ್ವಂ ಚ ನಾಮರೂಪಾದಿ ಸದಾತ್ಮನೈವ ಸತ್ಯಂ ವಿಕಾರಜಾತಮ್, ಸ್ವತಸ್ತು ಅನೃತಮೇವ''** **ಛಾಂ.ಭಾ. 6-3-2.**

"ನಾಮರೂಪಗಳೇ ಮುಂತಾದ ಕಾರ್ಯವೆಲ್ಲವೂ ಸದ್ಬ್ರಹ್ಮರೂಪದಿಂದಲೇ ಸತ್ಯ, ತೋರುವ ತನ್ನ ರೂಪದಿಂದಲೋ ಅನೃತವೇ' ಈ ಗುಟ್ಟನ್ನರಿಯದೆ ಗ್ರಂಥಕರ್ತರು ಇಲ್ಲದ ಮನಃಕ್ಷೋಭೆಯನ್ನು ಮಾಡಿಕೊಂಡಿರುತ್ತಾರೆ; 'ಪಂಡಿತರು ಹೇಳುವ ಮಾಯಾದಿಗಳು ಜ್ಞಾನಬಾಧಿತವೆಂಬುದು ತಪ್ಪು' ಎಂದು ತಪ್ಪನ್ನು ಹೆರರಮೇಲೆ ಆರೋಪಿಸುವದಕ್ಕೂ ಹೊರಟಿರುತ್ತಾರೆ!

## ತತ್ತ್ವಮಸಿಮಹಾವಾಕ್ಯವಿಚಾರ

ಈ ಭಾಗದಲ್ಲಿಯೂ ಗ್ರಂಥಕರ್ತರು ಸತ್ಯಾನೃತಗಳನ್ನು ಕಲೆಬೆರಕೆಮಾಡಿಕೊಂಡು ಬರೆದಿರುತ್ತಾರೆ. (ಇಲ್ಲಿ **'ತತ್ವಮಸಿ'** ಎಂದು ತಕಾರಲೋಪವನ್ನು ಮಾಡಿರುವದು ಸಂಸ್ಕೃತಜ್ಞಾನವಿಲ್ಲದ್ದರಿಂದ)

'ಈಶ್ವರನಾಗಲಿ, ಅವನ ಜಗತ್ತಾಗಲಿ, ಸರ್ವಜ್ಞತ್ವವಾಗಲಿ, ಸರ್ವಶಕ್ತಿತ್ವವಾಗಲಿ, ಪ್ರತಿಬಂಧವಾಗಿರುವದೆಂದು, ಅದರಿಂದ ನಿವೃತ್ತಿಯಾಗಬೇಕೆಂದು ಎಲ್ಲಿಯೂ ಹೇಳಿರುವದಿಲ್ಲ' (ಪು. 13) ಎಂಬ ವಾಕ್ಯವು ಪ್ರತಿಜ್ಞಾಮಾತ್ರವಾಗಿದೆ. ಇದು ಭಾಷ್ಯವಿರುದ್ಧವೆಂಬುದನ್ನು ಆಗಲೆ ತೋರಿಸಿರುತ್ತೇನೆ. ಇಲ್ಲಿ ಒಂದು ಭಾಷ್ಯವಾಕ್ಯವನ್ನು ಬರೆದು ಈ ಭಾಗದ ವಿಚಾರವನ್ನು ಉಪಸಂಹಾರಮಾಡುವೆನು; **(2) "ಅಪಿ ಚ ಯದಾ 'ತತ್ತ್ವಮಸಿ' ಇತ್ಯೇವಞ್ಜಾತೀಯಕೇನ ಅಭೇದನಿರ್ದೇಶೇನ ಅಭೇದಃ ಪ್ರತಿಪಾದಿತೋ ಭವತಿ ಅಪಗತಂ ಭಶತಿ ತದಾ ಜೀವಸ್ಯ ಸಂಸಾರಿತ್ವಮ್ ಬ್ರಹ್ಮಣಃ ಸ್ರಷ್ಟೃತ್ವಂ"**

**ಸೂ.ಭಾ. 2-1-23.**

**'ತತ್ತ್ವಮಸಿ'** ಎಂಬೀ ಬಗೆಯ ಅಭೇದೋಪದೇಶದಿಂದ ಅಭೇದವನ್ನು ತಿಳಿಸಿಕೊಡಲಾಗಿ ಜೀವನ ಸಂಸಾರಿತ್ವವೂ ಬ್ರಹ್ಮದ ಸ್ರಷ್ಟೃತ್ವವೂ ತೊಲಗುವದು ಎಂಬೀ ಭಾಷ್ಯವಾಕ್ಯವನ್ನು ಮನಸ್ಸಿಗೆ ತಂದುಕೊಂಡವರಿಗೆ ಸ್ರಷ್ಟೃತ್ವವು ಬಾಧಿತವಲ್ಲ ಎಂಬ ಹುಚ್ಚು ಬಿಟ್ಟುಹೋಗುವದು.

ಬ್ರಹ್ಮವು ಜಗತ್ಕಾರಣವೆಂಬ ಮಾತಿಗೆ ಅಭಿಪ್ರಾಯವೇನೆಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕಾದರೆ ಬಿಸಿಲುಕುದುರೆಯೇ ಮುಂತಾದ ಕಾರ್ಯಗಳು ಚೌಳುನೆಲವೇ ಮುಂತಾದ ಕಾರಣಕ್ಕಿಂತ ಬೇರೆಯಲ್ಲ, **(ಮೃಗತೃಷ್ಣಿಕೋದಕಾದೀನಾಮ್ ಊಷರಾದಿ-ಭ್ಯೋಽನನ್ಯತ್ವಮ್)** ಎಂದು ಭಾಷ್ಯದಲ್ಲಿ **(ಸೂ.ಭಾ.2-1-14)** ಬರೆದಿರುವದನ್ನು

ಮನಸ್ಸಿನಲ್ಲಿ ಹೊರಳಾಡಿಸಬೇಕು. ಆಗ ಕಾರ್ಯವೆಂದರೆ ಅಧ್ಯಸ್ತವಾದದ್ದು ಕಾರಣವೆಂದರೆ ಅಧ್ಯಾರೋಪಿತವಾದದ್ದಕ್ಕೆ ಆಧಾರವಾಗಿರುವ ಸತ್ಯವಸ್ತು ಎಂಬ ತತ್ತ್ವವು ಮನದಲ್ಲಿ ಮಿಂಚುವದು.

ಹೀಗೆ ಗ್ರಂಥದಲ್ಲಿ ವಿಚಾರಕ್ಕೆ ತೆಗೆದುಕೊಂಡಿರುವ ವಿಷಯಗಳು ಭಾಷ್ಯವಾಕ್ಯಾರ್ಥವನ್ನು ಸರಿಯಾಗಿ ಮಾಡಿಕೊಳ್ಳದೆ ಇರುವ ದೋಷದಿಂದ ಆಗಿರುವ ತಪ್ಪು ದೃಷ್ಟಿಯಿಂದ ಕೂಡಿದ್ದು ಗ್ರಂಥಕರ್ತರಿಗೆ ಅನ್ಯಥಾಬುದ್ಧಿಗೆ ಕಾರಣವಾಗಿವೆ ಎಂದಾಯಿತು.

ಉಉಉಉಉ

## ಶ್ರೀ ಶ್ರೀ ಜ್ಞಾನಾನಂದೇಂದ್ರಸರಸ್ವತೀ ಸ್ವಾಮಿಗಳ ಸಂಕ್ಷಿಪ್ತ ಪರಿಚಯ
## (ಪೂರ್ವಾಶ್ರಮದಲ್ಲಿ ಶ್ರೀ ಎಸ್. ವಿಠ್ಠಲಶಾಸ್ತ್ರಿಗಳು)



ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರ ಸಹವರ್ತಿಗಳಾಗಿ ಶಾಂಕರಾದ್ವೈತ ವೇದಾಂತ ಪ್ರಚಾರಕ್ಕೆ ಅಸಾಧಾರಣ ಕೊಡುಗೆಯನ್ನು ನೀಡಿದ ಶ್ರೀ ಜ್ಞಾನಾನಂದೇಂದ್ರಸರಸ್ವತೀ ಸ್ವಾಮಿಗಳು (ಪೂರ್ವಾಶ್ರಮದಲ್ಲಿ ಎಸ್. ವಿಠ್ಠಲ ಶಾಸ್ತ್ರಿಗಳು) ಜೋಯಿಸ ಸುಬ್ಬಾಭಟ್ಟರ ಪುತ್ರರಾಗಿ 23-08-1891ರಲ್ಲಿ ಜನಿಸಿದರು. ಕೇವಲ ಎಂಟು ವರ್ಷದವರಾಗಿದ್ದಾಗ ಉಪನಯನವನ್ನು ಮಾಡಿ ಅವರ ತಂದೆಯವರು ಹೊಳಲ್ಕೆರೆಯಲ್ಲಿ ಉಪಾಧ್ಯಾಯರಾಗಿದ್ದ ಶ್ರೀ ವೈ. ಸುಬ್ಬಾರಾಯರ ಸಮೀಪ ಬಿಟ್ಟರು. ಶ್ರೀ ಸುಬ್ಬರಾಯರು ಶಾಸ್ತ್ರಿಗಳನ್ನು ಒಬ್ಬ ಆದರ್ಶ ವಿದ್ಯಾರ್ಥಿಯನ್ನಾಗಿ ಮಾಡಿದರು. ನಂತರ ಶಾಸ್ತ್ರೀಗಳು ವೇದ-ಸಂಸ್ಕೃತ- ವೇದಾಂತಗಳನ್ನು ಅಧ್ಯಯನ ಮಾಡಿ ಮದ್ರಾಸಿನ ಸಂಸ್ಕೃತ ಕಾಲೇಜಿನಲ್ಲಿ ''ವೇದಾಂತ ಶಿರೋಮಣಿ'' ಪರೀಕ್ಷೆಯಲ್ಲಿ ಉತ್ತೀರ್ಣರಾಗಿ 'ವೇದಾಂತ ವಿಶಾರದ' ಎಂಬ ಬಿರುದನ್ನು ಪಡೆದರು. 1915ರಲ್ಲಿ ಉಪಾಧ್ಯಾಯ ವೃತ್ತಿಯನ್ನು ಆರಂಭಿಸಿ 1945ರಲ್ಲಿ ವಿಶ್ರಾಂತರಾದರು.

ಶ್ರೀ ಶಾಸ್ತ್ರಿಗಳು ವೇದಾಂತಾಧ್ಯಯನವನ್ನು ಮಾಡಿದ ಸಮಯದಲ್ಲಿ ಶ್ರೀ ಶ್ರೀಗಳವರ ಮತ್ತು ಕೆ. ಎ. ಕೃಷ್ಣಸ್ವಾಮಯ್ಯರ್‌ರವರ ಸಾಂಗತ್ಯವನ್ನು ಪಡೆದು ತಾವು ಓದಿದ್ದ ಶಾಂಕರ ವೇದಾಂತವನ್ನು ವಿಮರ್ಶಾಪೂರ್ವಕವಾಗಿ ಪುನಃ ಅಭ್ಯಾಸಮಾಡಿ ಭಾಷ್ಯ- ವ್ಯಾಖ್ಯಾನಪ್ರಸ್ಥಾನಗಳ ವೈಲಕ್ಷಣ್ಯವನ್ನು ಕಂಡುಕೊಂಡು ನೇರಾಗಿ ಶ್ರೀ ಶ್ರೀಗಳವರ ಅನುಯಾಯಿಗಳಾದರು. ನಂತರ ಶ್ರೀ ಶ್ರೀಗಳವರು ಕಾರ್ಯಾಲಯದಲ್ಲಿ ನಡೆಸುತ್ತಿದ್ದ ಪ್ರತಿಯೊಂದು ಕಾರ್ಯದಲ್ಲಿಯೂ ಸಹಕಾರಿಯಾಗಿದ್ದರು.

ಶ್ರೀ ಶಾಸ್ತ್ರಿಗಳು ಮೈಸೂರು ಸಂಸ್ಥಾನದ ಮಹಾರಾಜರಾದ 'ಶ್ರೀ ಕೃಷ್ಣರಾಜೇಂದ್ರ ಒಡೆಯರ್' ರವರಿಗೆ ಅದ್ವೈತವೇದಾಂತದ ಅಧ್ಯಾಪಕರಾಗಿದ್ದರು. ಶ್ರೀ ಶಾಸ್ತ್ರಿಗಳ ವಿದ್ವತ್ತನ್ನು ಗುರುತಿಸಿದ ಮಹಾರಾಜರು 'ಆಸ್ಥಾನ ವಿದ್ವಾನ್' ಎಂಬ ಬಿರುದಿತ್ತು ಸನ್ಮಾನಿಸಿದರು. 1944ರಲ್ಲಿ ಶಂಕರ ವೇದಾಂತ ಭಾಷ್ಯ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಬೇಕೆಂದು ಮಹಾರಾಜರು ಆದೇಶಿಸಿದಾಗ ನನಗಿಂತ ನನ್ನ ಗುರುಗಳಾದ ಶ್ರೀ ವೈ. ಸುಬ್ಬರಾಯರೇ ಈ ಕೆಲಸಕ್ಕೆ ಅರ್ಹರೆಂದು ಸೂಚಿಸಿದರು. ಈ ಯೋಜನೆಯ ಸಂಪೂರ್ಣ ಪ್ರಯೋಜನವು ಕಾರ್ಯಾಲಯಕ್ಕೆ ದೊರೆಯುವಂತೆ ನಿಸ್ಪೃಹತೆಯಿಂದಲೂ ಔದಾರ್ಯತೆಯಿಂದಲೂ ಏರ್ಪಾಡು ಮಾಡಿಕೊಟ್ಟರು. ನಂತರ ಶ್ರೀ ಶ್ರೀಗಳವರು ಬರೆದ ಗ್ರಂಥಗಳನ್ನು ಹಸ್ತಪ್ರತಿಯಲ್ಲಿಯೇ ಓದಿ ಸೂಕ್ತ ಸಲಹೆಯನ್ನಿತ್ತು ಗ್ರಂಥಗಳು ಸರ್ವಾಂಗ ಸುಂದರವಾಗಿ ಹೊರಬರಲು ಸಹಾಯಕರಾದರು.

ಶ್ರೀ ಶಾಸ್ತ್ರಿಗಳು ಸಂಸ್ಕೃತದಲ್ಲಿ 'ಮೂಲಾವಿದ್ಯಾ ಭಾಷ್ಯ- ವಾರ್ತಿಕ ವಿರುದ್ಧಾ', ಶಂಕರ ಸಿದ್ಧಾಂತ, ಭಾಮತೀ ಸಮಾಲೋಚನಮ್, ಇಂಗ್ಲೀಷ್‌ನಲ್ಲಿ Sri Shankara's Advaita Sidhantha, ಕನ್ನಡದಲ್ಲಿ ಉಪದೇಶ ಮಾಲಿಕೆ ಗ್ರಂಥಗಳೂ ಹಾಗೂ 'ಅಧ್ಯಾತ್ಮ ಪ್ರಕಾಶ' ಮಾಸ ಪತ್ರಿಕೆಯಲ್ಲಿ ಬರೆದ ಲೇಖನಗಳು ಶುದ್ಧಶಾಂಕರಸಿದ್ಧಾಂತವನ್ನು ಸರಳವಾಗಿ ಪ್ರತಿಪಾದಿಸುವಲ್ಲಿ ಅತ್ಯಂತ ಯಶಸ್ವಿಯಾಗಿವೆ.

ಶ್ರೀ ಶಾಸ್ತ್ರಿಗಳು 1965ರಿಂದ ಕಾರ್ಯಾಲಯದ ವಿಶ್ವಸ್ತ ಸಮಿತಿಯ ಅಧ್ಯಕ್ಷರಾಗಿ 15 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಇವರು ಬೋಧಾಯನ ಸೂತ್ರಾನುಸಾರ ಪೌರೋಹಿತ್ಯವನ್ನು ಮಾಡುತ್ತಾ ಜನರನ್ನು ಧರ್ಮಮಾರ್ಗದಲ್ಲಿ ಪ್ರವರ್ತಿಸಿದರು. ಸ್ವಭಾವತಃ ಸರಳತೆ, ಪ್ರಾಮಾಣಿಕತೆ, ಆಚಾರಪ್ರಿಯತೆಯನ್ನು ಹೊಂದಿದ್ದ ಶ್ರೀ ಶಾಸ್ತ್ರಿಗಳು 1980ರಲ್ಲಿ ಸರ್ವಸಂಗಪರಿತ್ಯಾಗಿಗಳಾಗಿ 'ಶ್ರೀ ಜ್ಞಾನಾನಂದೇಂದ್ರಸರಸ್ವತೀ' ಎಂಬ ಅಭಿಧಾನವನ್ನು ಹೊಂದಿದರು. ನಂತರ ಕರ್ನಾಟಕಾಂಧ್ರ ರಾಜ್ಯಗಳಲ್ಲಿ ವೇದಾಂತ ಸಪ್ತಾಹಗಳನ್ನು ನಡೆಸಿ ಜಿಜ್ಞಾಸುಗಳನ್ನು ಅನುಗ್ರಹಿಸಿದರು. 1983ರಲ್ಲಿ ತಮ್ಮ 95ನೇ ವರ್ಷದಲ್ಲಿ ಆಂಧ್ರಪ್ರದೇಶದ ವಿಶಾಖಪಟ್ಟಣಂನಲ್ಲಿ ಬ್ರಹ್ಮೈಕ್ಯರಾದರು. ವಿಶಾಖಪಟ್ಟಣಂನ ಸಾಗರನಗರದ ಸಮುದ್ರತೀರದಲ್ಲಿ ಸಮಾಧಿ ನಿರ್ಮಿಸಲಾಗಿದೆ. ಸಮಾಧಿ ಸ್ಥಳದಲ್ಲಿ ನಿತ್ಯಾರ್ಚನೆ, ಆರಾಧನೆ ನಡೆಯುತ್ತಿವೆ.

ವೇದಾಂತವು ನಾಗರಿಕಪ್ರಪಂಚಕ್ಕೆಲ್ಲ ಅತ್ಯವಶ್ಯವಾಗಿ ಬೇಕಾಗಿರುವ ವಿಷಯವಾಗಿದೆ. ದುಃಖದ ಆಲಯವೂ ಅಶಾಶ್ವತವೂ ಆಗಿರುವ ಈ ಪ್ರಪಂಚಕ್ಕೆ ಕರ್ಮಫಲಕ್ಕನುಗುಣವಾಗಿ ಬಂದು, ನಮ್ಮ ಯೋಗ್ಯತೆಯನ್ನು ಉತ್ತಮಮಟ್ಟಕ್ಕೆ ಏರಿಸಿಕೊಂಡು, ಈ ಸಂಸಾರದಿಂದ ಬಿಡಿಸಿಕೊಂಡು, ಶಾಶ್ವತ ಸುಖದಲ್ಲಿ ನೆಲೆನಿಲ್ಲಲು ವೇದಾಂತವೊಂದೇ ಉತ್ತಮ ಮಾರ್ಗವಾಗಿದೆ. ಜನಸಾಮಾನ್ಯಕ್ಕೆ ತಿಳಿಯಬೇಕಾದ ಜೀವನರಹಸ್ಯವನ್ನು ಉಪದೇಶಿಸುವ ಏಕೈಕಮಾರ್ಗವು ಇದು. ಜೀವನವು ಸರಳವಾಗಿ, ಸುಖವಾಗಿ ಸಾಗುವದಕ್ಕೆ ಬೇಕಾದ ಮೂಲಸೂತ್ರಗಳು ಇಲ್ಲಿ ಉಪದೇಶಿಸಲ್ಪಟ್ಟಿವೆ. ಆ ಉಪದೇಶಗಳನ್ನು ನಾವು ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರಗಳು, ಇತಿಹಾಸಪುರಾಣಾದಿಗಳಿಂದ, ಅವುಗಳ ಮೇಲಿರುವ ಭಾಷ್ಯಾದಿಗಳಿಂದ ತಿಳಿದು, ಅಳವಡಿಸಿಕೊಳ್ಳಬೇಕಾಗಿದೆ.

ಈ ಉಪದೇಶಗಳೆಲ್ಲವೂ ಸಂಸ್ಕೃತಭಾಷೆಯಲ್ಲಿದ್ದು ಸಾಮನ್ಯರಿಗೆ ತಿಳಿಯದಾದಾಗ ಉಭಯಭಾಷೆಗಳನ್ನು ತಿಳಿದಂತಹ ಅನುಭವಿ ಪಂಡಿತರಿಂದ ನಾವು ತಿಳಿದುಕೊಳ್ಳಬೇಕು. ಆಗ ತತ್ತ್ವವಿಚಾರವು ಮನದಟ್ಟಾಗಲು ಸಾಧ್ಯ. ಈ ಉದ್ದೇಶದಿಂದಲೇ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯು ಜನ್ಮತಾಳಿದ್ದು. ಪತ್ರಿಕೆಯ ಉದ್ದೇಶವು ಸಾಕಾರಗೊಳ್ಳಲು ಸಮಾನಮನಸ್ಕರಾದ ಪಂಡಿತರುಗಳ, ವಿಚಾರವಂತರ ಸಹಕಾರ ಅಗತ್ಯ. ಪತ್ರಿಕೆಯ ಉದ್ದೇಶವನ್ನು ಸಾಕಾರಗೊಳಿಸಿ, ಮತತ್ರಯದವರ ಸಿದ್ಧಾಂತವನ್ನೂ, ಅದರಲ್ಲೀಯೂ ಶ್ರೀ ಶಂಕರಾಚಾರ್ಯರ ಉಪದೇಶಗಳನ್ನು ಸಾಧನ–ಸಿದ್ಧಾಂತಗಳ ಸಮನ್ವಯದೊಂದಿಗೆ ಜಿಜ್ಞಾಸುಗಳಿಗೆ ಮಾರ್ಗದರ್ಶಿಯಾಗುವ ಲೇಖನಗಳನ್ನು ಬರೆಯುತ್ತಿದ್ದವರಲ್ಲಿ ಆಸ್ಥಾನವಿದ್ವಾನ್, ವೇದಾಂತಶಿರೋಮಣಿ ಶ್ರೀಯುತ ಎಸ್. ವಿಠ್ಠಲಶಾಸ್ತ್ರಿಗಳೂ ಒಬ್ಬರು.

ಇಲ್ಲಿರುವ ಲೇಖನಗಳು ಸರಳಸುಂದರಭಾಷೆಯಲ್ಲಿ ತತ್ತ್ವಜಿಜ್ಞಾಸೆಯನ್ನು ನಡೆಸಿ ಅನುಭವದಲ್ಲಿ ಪರಿಸಮಾಪ್ತಿಯಾಗುವಂತೆ ಬೋಧಿಸಿರುವವಾಗಿವೆ. ಇದ್ದದ್ದನ್ನು ಇದ್ದಂತೆ ತಿಳಿಸಿ ಫಲರೂಪವಾದ ಅನುಭವದಲ್ಲಿ ಜಿಜ್ಞಾಸೆಯುನ್ನು ಪರಿಸಮಾಪ್ತಿಮಾಡಿ, ಪ್ರಮಾಣಪ್ರಮೇಯವ್ಯವಹಾರಗಳೆಲ್ಲ ಆವಿದ್ಯಕವೆಂದು ಅಂತ್ಯಪ್ರಮಾಣವಾದ ಶ್ರುತಿಯ ಮಾತಿನ ಮೂಲಕ ತೋರಿಸಿಕೊಡುತ್ತಾ, ಬರಿಯ ವಾಕ್ಯಪ್ರಮಾಣವನ್ನು ಶ್ರದ್ಧೆಯಿಂದ ನಂಬುವದಾಗಲಿ, ಕೇವಲ ತರ್ಕದಿಂದ ತತ್ತ್ವನಿರ್ಧಾರಣೆಯನ್ನು ಮಾಡಲು ಹೊರಡುವದಾಗಲಿ ಶ್ರೀ ಶಂಕರಾಚಾರ್ಯ ಸಂಮತವಾದ ವೇದಾಂತಮಾರ್ಗವಲ್ಲ ಎಂಬುದನ್ನು ಅನುಭವ, ಯುಕ್ತಿ ಮೊದಲಾದವುಗಳಿಂದ ಪ್ರತಿಪಾದಿಸಿ, ಶುದ್ಧಶಾಂಕರವೇದಾಂತ ಪ್ರಕ್ರಿಯೆಯನ್ನು ಸಾಮಾನ್ಯರಿಗೂ ತಿಳಿಯುವಂತೆ ರಚಿಸಿರುವ ಅಮೋಘ ಲೇಖನಗಳ ಸಂಗ್ರಹವೇ ಈ ಗ್ರಂಥವು.

2021 ₹ 200/-